“ಸೌಮ್ಯನೇ! ಕಂಸ! ಆಕಾಶವಾಣಿಯು ಹೇಳಿರುವಂತೆ ನಿನಗೆ ದೇವಕಿಯಿಂದ ಯಾವ ವಿಧವಾದ ಭಯವೂ ಇಲ್ಲ. ಭಯವಿರುವುದು ಅವಳ ಮಕ್ಕಳಿಂದ. ಇವಳಲ್ಲಿ ಹುಟ್ಟಿದ ಎಲ್ಲ ಮಕ್ಕಳನ್ನೂ ಹುಟ್ಟುತ್ತಲೇ ನಿನಗರ್ಪಿಸಿಬಿಡುತ್ತೇನೆ. ನನ್ನ ಈ ಆಣೆಯಿಂದಾದರೂ ನೀನು ನಿಶ್ಚಿಂತ ನಾಗಿರಬಹುದು.”

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತನೇ! ವಸುದೇವನು ಸುಳ್ಳುಹೇಳುತ್ತಿಲ್ಲವೆಂದೂ ಮತ್ತು ಅವನ ಮಾತು ಯುಕ್ತಿ-ಯುಕ್ತವಾಗಿರುವುದೆಂದೂ ಭಾವಿಸಿ ತಂಗಿಯಾದ ದೇವಕಿಯನ್ನು ಸಂಹರಿಸದಿರಲು ಕಂಸನು ನಿಶ್ಚಯಿಸಿದನು. ಈ ನಿರ್ಧಾರದಿಂದಾಗಿ ವಸುದೇವನಿಗೂ ಸಂತೋಷವೇ ಆಯಿತು. ಅವನು ಈ ಹಿಂದೆ ಭಾವಿಸಿದ್ದಂತೆ ಸನ್ನಿಹಿತವಾಗಿದ್ದ ಮರಣವು ದೂರ ಸರಿಯಿತು. ಇದಕ್ಕಾಗಿ ಕಂಸನನ್ನು ಪ್ರಶಂಸೆಮಾಡುತ್ತಾ ವಸುದೇವನು ಪತ್ನಿಯೊಡನೆ ತನ್ನ ಅರಮನೆಗೆ ತೆರಳಿದನು.

ಕಾಲವು ಕಳೆದಂತೆ ಸಾಧ್ವಿಯಾದ, ಶ್ರೀಹರಿಯನ್ನೇ ಸಮಸ್ತದೇವತೆ ಯೆಂದೂ ಭಾವಿಸಿದ್ದ ದೇವಕೀದೇವಿಯು ವರ್ಷಕ್ಕೊಂದರಂತೆ ಎಂಟು

ಗಂಡುಮಕ್ಕಳನ್ನೂ ಮತ್ತು ಒಂದು ಹೆಣ್ಣುಮಗುವನ್ನೂ ಹಡೆದಳು. ವಸುದೇವನ ಮೊದಲನೆಯ ಮಗನ ಹೆಸರು ಕೀರ್ತಿಮಂತ. ತಾನು ಮಾತುಕೊಟ್ಟಿದ್ದಂತೆ ವಸುದೇವನು ಕೀರ್ತಿಮಂತನನ್ನು ಹುಟ್ಟಿದೊಡನೆಯೇ ಬಹಳ ಕಷ್ಟದಿಂದ ಕಂಸನಿಗೊಪ್ಪಿಸಿದನು. ವಸುದೇವನಿಗೆ ಮಗುವನ್ನು ಒಪ್ಪಿಸುವುದಕ್ಕಿಂತಲೂ ಸುಳ್ಳನಾಗುವುದು ಅತಿಕಷ್ಟವಾಗಿದ್ದಿತು. ಅವನು ಸುಳ್ಳುಹೇಳಲು ಬಹಳವಾಗಿ ಭಯಪಡುತ್ತಿದ್ದನು. ಈ ಕಾರಣದಿಂದಲೇ ಸತ್ಯಸಂಧನಾದ ಆನಕದುಂದುಭಿಯು ಪ್ರಾಣಪ್ರಿಯನಾದ ಪುತ್ರನನ್ನು ಕಂಸನಿಗೊಪ್ಪಿಸಿಬಿಟ್ಟನು.

**ಕಿಂ ದುಃಸಹಂ ನು ಸಾಧೂನಾಂ ವಿದುಷಾಂ ಕಿಮಪೇಕ್ಷಿತಮ್ ।**
**ಕಿಮಕಾರ್ಯಂ ಕದರ್ಯಾಣಾಂ ದುಸ್ತ್ಯಜಂ ಕಿಂ ಧೃತಾತ್ಮನಾಮ್ ॥**

ಪರೀಕ್ಷಿತ! ಸತ್ಯಸಂಧರಾದ ಸತ್ಪುರುಷರಿಗೆ ಯಾವುದು ತಾನೇ ಸಹಿಸಲಸಾಧ್ಯ? ಸತ್ಯನಿಷ್ಠರಾಗಿ ಅವರು ಸಕಲವನ್ನೂ ತ್ಯಾಗಮಾಡಲು ಸಿದ್ಧರಾಗಿರುತ್ತಾರೆ. ವಿದ್ವಾಂಸರಿಗೆ, ಜ್ಞಾನಿಗಳಿಗೆ ಆತ್ಮಾನಂದದ ಹೊರತಾಗಿ ಬೇರೆ ಯಾವ ವಸ್ತುವಿನ ಮೇಲೆ ತಾನೇ ಅಪೇಕ್ಷೆಯಿರುತ್ತದೆ? ಕ್ಷುದ್ರ ಮನುಷ್ಯರಿಗೆ ಮಾಡಬಾರದ ಕಾರ್ಯವು ಯಾವುದಿದೆ? ಎಂತಹುದೇ ದುಷ್ಟವಾದ ಕಾರ್ಯವನ್ನು ಮಾಡಲು ಕೂಡ ಅವರು ಹೇಸುವುದಿಲ್ಲ. ಪರಮಾತ್ಮನನ್ನೇ ಯಾವಾಗಲೂ ಮನಸ್ಸಿನಲ್ಲಿ ಧರಿಸಿ ಚಿಂತಿಸುವವರಿಗೆ ತ್ಯಾಗಮಾಡಬಾರದ ವಸ್ತುವು ಯಾವುದು ತಾನೇ ಇರುತ್ತದೆ? ಜಿತೇಂದ್ರಿ ಯರು ಸರ್ವಸಂಗಪರಿತ್ಯಾಗಮಾಡಿ ಯಾವಾಗಲೂ ಪರಮಾತ್ಮನ ಧ್ಯಾನ ಯೋಗದಲ್ಲಿಯೇ ಆಸಕ್ತರಾಗಿರುತ್ತಾರೆ. ವಸುದೇವನಿಗೆ ಸುಖ-ದುಃಖಗಳೆರಡ ರಲ್ಲಿಯೂ ಸಮತ್ವವಿದ್ದಿತು. ಮಗುವು ಹುಟ್ಟಿದಾಗ ಸಂತೋಷಪಡಲಿಲ್ಲ ; ಮೃತ್ಯುವಿಗೆ ಒಪ್ಪಿಸಿದಾಗ ದುಃಖಿಸಲಿಲ್ಲ. ಅತ್ಯಂತ ಸತ್ಯನಿಷ್ಠನಾಗಿದ್ದನು ; ಶಾಂತನಾಗಿದ್ದನು. ಇದನ್ನು ನೋಡಿ ಕ್ರೂರಿಯಾದ ಕಂಸನಿಗೂ ಸಂತೋಷ ವಾಯಿತು. ಅವನು ಗಹ-ಗಹಿಸಿ ನಗುತ್ತಾ ಶೌರಿಗೆ ಹೇಳಿದನು :

**ಪ್ರತಿಯಾತು ಕುಮಾರೋಽಯಂ ನ ಹ್ಯಸ್ಮಾದಸ್ತಿ ಮೇ ಭಯಮ್ ।**
**ಅಷ್ಟಮಾದ್ಯುವಯೋರ್ಗರ್ಭಾನ್ಮೃತ್ಯುರ್ಮೇ ವಿಹಿತಃ ಕಿಲ ॥೬೦॥**

"ಭಾವ! ಈ ಶಿಶುವನ್ನು ನೀನು ಎತ್ತಿಕೊಂಡು ಹೋಗಬಹುದು. ಈ ಬಾಲಕನಿಂದ ನನಗೆ ಯಾವ ಭಯವೂ ಇಲ್ಲ. ನಿಮ್ಮ ಎಂಟನೆಯ ಗರ್ಭದಿಂದ ತಾನೇ ನನಗೆ ಮೃತ್ಯುಭಯವಿರುವುದು?"

ಕಂಸನ ಮಾತಿನಂತೆ ಶೌರಿಯೇನೋ ಶಿಶುವನ್ನು ಎತ್ತಿಕೊಂಡು ತನ್ನ ಅರಮನೆಗೆ ಹೋದನು. ಆದರೂ ಅವನಿಗೆ, ಮನಸ್ಸು ಹತೋಟಿಯಲ್ಲಿಲ್ಲದ ಅಸತ್ಪುರುಷನಾದ ಕಂಸನ ಮಾತಿನಿಂದ ಸಂತೋಷವೇನೂ ಆಗಲಿಲ್ಲ. ಮರುಕ್ಷಣದಲ್ಲಿಯೇ ಅವನ ಮನಸ್ಸು ಬದಲಾಗಬಹುದೆಂದೂ ಬಗೆದನು.

ಇತ್ತಲಾಗಿ ಒಮ್ಮೆ ನಾರದರು ಕಂಸನ ಅರಮನೆಗೆ ಬಂದರು. ಅರ್ಘ್ಯ-ಪಾದ್ಯಾದಿಗಳಿಂದ ಸತ್ಕೃತರಾದನಂತರ ಸುಖಾಸನದಲ್ಲಿ ಕುಳಿತಿದ್ದ ಆ ನಾರದರು ಕಂಸನಿಗೆ ಹೇಳಿದರು :

"ಕಂಸ! ವ್ರಜಭೂಮಿಯಲ್ಲಿ ವಾಸಿಸುತ್ತಿರುವ ನಂದನೇ ಮೊದಲಾದ ಗೋಪರೂ, ಅವನ ಪತ್ನಿಯರೂ, ವಸುದೇವನೇ ಮೊದಲಾದ ವೃಷ್ಣಿ ವಂಶೀಯಯಾದವರೂ, ದೇವಕಿಯೇ ಮೊದಲಾದ ಯದುವಂಶದ ಸ್ತ್ರೀಯರೂ, ನಂದ-ವಸುದೇವರ ಜ್ಞಾತಿಬಾಂಧವರೂ–ಇವರೆಲ್ಲರೂ ದೇವತೆಗಳ ಅಂಶಗಳಿಂದ ಹುಟ್ಟಿದವರೇ ಆಗಿದ್ದಾರೆ. ಈ ಸಮಯದಲ್ಲಿ ನಿನ್ನ ಸೇವೆಯಲ್ಲಿ ತೊಡಗಿರುವವರೆಲ್ಲರೂ ದೇವತೆಗಳೇ. (ದೇವಾಂಶಸಂಭೂತರೇ.) ದೈತ್ಯರ ಪ್ರಾಬಲ್ಯವು ಹೆಚ್ಚಾಗಿದ್ದು ಪೃಥ್ವಿಯ ಭಾರವು ಹೆಚ್ಚಾಗಿಬಿಟ್ಟಿದೆ. ಈ ಕಾರಣದಿಂದಾಗಿ ದೈತ್ಯರನ್ನು ವಧಿಸಲು ದೇವತೆಗಳೆಲ್ಲರೂ ಸೇರಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇರುವ ವಿಷಯವನ್ನು ತಿಳಿಸಿಬಿಟ್ಟಿದ್ದೇನೆ. ನೀನು ಜಾಗರೂಕನಾಗಿರುವುದು ಒಳ್ಳೆಯದು. ನಾರಾಯಣ! ನಾರಾಯಣ!"–ಎಂದೆನ್ನುತ್ತಾ ನಾರದರು ಸ್ವಸ್ಥಾನಕ್ಕೆ ತೆರಳಿದರು.

ನಾರದರು ಹೀಗೆ ಹೇಳಿದನಂತರ ಯದುವಂಶೀಯರೆಲ್ಲರೂ ದೇವತೆಗಳೆಂಬುದೂ ದೇವಕಿಯ ಎಂಟನೆಯ ಗರ್ಭದಲ್ಲಿ ಮಹಾವಿಷ್ಣುವೇ ತನ್ನ ಸಂಹಾರಕ್ಕಾಗಿ ಹುಟ್ಟುವನೆಂಬುದೂ ಕಂಸನಿಗೆ ನಿಶ್ಚಯವಾಯಿತು. ಒಡನೆಯೇ ಕಂಸನು ದೇವಕಿ-ವಸುದೇವರಿಬ್ಬರಿಗೂ ಸಂಕೋಲೆಯನ್ನು ಹಾಕಿಸಿ ಕಾರಾಗೃಹದಲ್ಲಿರಿಸಿ ಹುಟ್ಟಿದ ಎಲ್ಲ ಮಕ್ಕಳನ್ನೂ, ಇವನೇ ವಿಷ್ಣುವಿರ

ಬಹುದೆಂಬ ಸಂಶಯದಿಂದ ಕೊಲ್ಲುತ್ತಾ ಬಂದನು. ತಾತ್ಕಾಲಿಕವಾಗಿ ಬಿಡುಗಡೆಯನ್ನು ಹೊಂದಿದ್ದ ಕೀರ್ತಿಮಂತನೆಂಬ ಮೊದಲು ಹುಟ್ಟಿದ ಬಾಲಕನೂ ಮೃತ್ಯುವಶನಾದನೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. **ಅವ್ಯವಸ್ಥಿತಚಿತ್ತಾನಾಂ ಪ್ರಸಾದೋಽಪಿ ಭಯಙ್ಕರಃ ।**

(ಶ್ಲೋಕ 61-66)

ಶ್ರೀಶುಕರು ಹೇಳುತ್ತಾರೆ :

**ಮಾತರಂ ಪಿತರಂ ಭ್ರಾತೄನ್ಸರ್ವಾಂಶ್ಚ ಸುಹೃದಸ್ತಥಾ ।**
**ಘ್ನನ್ತಿಹ್ಯಸುತೃಪೋ ಲುಬ್ಧಾ ರಾಜಾನಃ ಪ್ರಾಯಶೋ ಭುವಿ ॥೬೭॥**

ಪರೀಕ್ಷಿತ! ಪ್ರಾಯಶಃ ಈ ಲೋಕದಲ್ಲಿ ಇತರರ ಪ್ರಾಣಗಳನ್ನು ಅಪಹರಿಸಿಯಾದರೂ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂಬ ಅಭಿಲಾಷೆಯಿಂದ ಕಡುಲೋಭಿಗಳಾದ, ಮಹಾದುಷ್ಟರಾದ ರಾಜರು ಸ್ವಾರ್ಥದ ಸಾಧನೆಗಾಗಿ ತಂದೆ-ತಾಯಿಗಳನ್ನೂ, ಅಣ್ಣ-ತಮ್ಮಂದಿರನ್ನೂ, ಬಂಧು-ಬಳಗದವರನ್ನೂ, ಸ್ನೇಹಿತರನ್ನೂ, ಹಿತೈಷಿಗಳನ್ನೂ ಕೊಲೆಮಾಡಲು ಅಥವಾ ಮಾಡಿಸಲು ಹೇಸುವುದಿಲ್ಲ.

ಕಂಸನಿಗೆ ಈ ಮಧ್ಯದಲ್ಲಿ ಹಿಂದಿನ ಜನ್ಮದ ಸ್ಮರಣೆಯೂ ಆಯಿತು. ತಾನು ಹಿಂದಿನ ಜನ್ಮದಲ್ಲಿ ಕಾಲನೇಮಿಯೆಂಬ ರಾಕ್ಷಸನಾಗಿದ್ದೆನೆಂಬುದನ್ನೂ ಮಹಾವಿಷ್ಣುವೇ ತನ್ನನ್ನು ಸಂಹರಿಸಿದನೆಂಬುದನ್ನೂ ಕಂಸನು ಸ್ಮರಿಸಿಕೊಂಡನು. ಇದರ ಪರಿಣಾಮವಾಗಿ ಕಂಸನು ಯಾದವರನ್ನು ಬಹಳವಾಗಿಯೇ ದ್ವೇಷಿಸತೊಡಗಿದನು. ಮಹಾಬಲನಾದ ಕಂಸನು ಯಾದವರಿಗೂ, ಭೋಜವಂಶೀಯರಿಗೂ, ಅಂಧಕವಂಶೀಯರಿಗೂ ನಾಯಕನಾಗಿದ್ದ ತನ್ನ ತಂದೆ ಉಗ್ರಸೇನನನ್ನೂ ದೇವತಾಂಶಸಂಭೂತನೆಂದೇ ಭಾವಿಸಿ ಅವನನ್ನೂ ಕಾರಾಗೃಹದಲ್ಲಿಟ್ಟು ಶೂರಸೇನರಾಜ್ಯದ ಆಡಳಿತವನ್ನು ತಾನೇ ನಡೆಸತೊಡಗಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧ನೆಯ ಅಧ್ಯಾಯವು ಮುಗಿಯಿತು.

---

## ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸಿದುದು : ದೇವತೆಗಳಿಂದ ಗರ್ಭಸ್ತುತಿ

ಶ್ರೀಶುಕರು ಹೇಳುತ್ತಾರೆ :

**ಪ್ರಲಮ್ಬಬಕಚಾಣೂರತೃಣಾವರ್ತಮಹಾಶನೈಃ ।**
**ಮುಷ್ಟಿಕಾರಿಷ್ಟದ್ವಿವಿದಪೂತನಾಕೇಶಿಧೇನುಕೈಃ ॥೧॥**

**ಅನ್ಯೈಶ್ಚಾಸುರಭೂಪಾಲೈರ್ಬಾಣಭೌಮಾದಿಭಿರ್ಯುತಃ ।**
**ಯದೂನಾಂ ಕದನಂ ಚಕ್ರೇ ಬಲೀ ಮಾಗಧಸಂಶ್ರಯಃ ॥೨॥**

ಮಗಧಾಧಿಪತಿಯಾದ ಜರಾಸಂಧನ ಆಶ್ರಯವನ್ನೂ ಪಡೆದುಕೊಂಡಿದ್ದ ಬಲಿಷ್ಠನಾಗಿದ್ದ ಕಂಸನು ಪ್ರಲಂಬಾಸುರ, ಬಕಾಸುರ, ಚಾಣೂರ, ತೃಣಾವರ್ತ, ಅಘಾಸುರ, ಮುಷ್ಟಿಕ, ಅರಿಷ್ಟಾಸುರ, ದ್ವಿವಿದ, ಪೂತನಾ, ಕೇಶೀ, ಧೇನುಕ, ಬಾಣಾಸುರ, ಭೌಮಾಸುರ—ಇವರೇ ಮೊದಲಾದ ಮಹಾಸುರರ ಸಹಾಯವನ್ನು ಪಡೆದು ಯದುವಂಶೀಯರನ್ನು ಪದೇ-ಪದೇ ಪೀಡಿಸತೊಡಗಿದನು. ಹಾಗೆ ಪೀಡಿಸಲ್ಪಡುತ್ತಿದ್ದ ಯಾದವರು ಭಯಭೀತರಾಗಿ ಕುರು, ಪಾಂಚಾಲ, ಕೇಕಯ, ಶಾಲ್ವ, ವಿದರ್ಭ, ನಿಷಧ, ವಿದೇಹ, ಕೋಸಲ—ಇವೇ ಮೊದಲಾದ ದೇಶಗಳಿಗೆ ವಲಸೆ ಹೋದರು. ಹಾಗೆ ವಲಸೆ ಹೋಗಲಾರದ ಕೆಲವರು ಬಹಿರಂಗದಲ್ಲಿ ಕಂಸನಿಗೆ ಭಕ್ತಿಯನ್ನು ತೋರಿಸುತ್ತಾ ಅವನ ಸೇವೆಯಲ್ಲಿ ನಿರತರಾಗಿದ್ದರು. ಯಾವುದೇ ಗರ್ಭದಲ್ಲಾದರೂ ತನ್ನನ್ನು ಸಂಹರಿಸಲು ಭಗವಂತನು ಅವತರಿಸಬಹುದೆಂಬ ಶಂಕೆಯಿಂದ ಕಂಸನು ಅನುಕ್ರಮವಾಗಿ ದೇವಕಿಯ ಆರು ಮಕ್ಕಳನ್ನೂ ಕೊಂದುಹಾಕಿದನು. ಏಳನೆಯ ಗರ್ಭವು ಮಹಾವಿಷ್ಣುವಿನ ಅಂಶನಾದ ಅನಂತಶೇಷನ ದಿವ್ಯಧಾಮವಾಗಿ ಪರಿಣಮಿಸಿತು. ಅನಂತಾತ್ಮಕವಾದ ಆ ಗರ್ಭವು ದೇವಕಿದೇವಿಗೆ ಅನಿರ್ವಾಚ್ಯವಾದ ಆನಂದವನ್ನುಂಟುಮಾಡಿತು. ಆ ಗರ್ಭವನ್ನು ಕಂಸನು ವಿನಾಶಗೊಳಿಸುವನೆಂಬ ಭಯವುಂಟಾಗಿ ಅದು ಅವಳ ದುಃಖಕ್ಕೂ ಕಾರಣವಾಯಿತು. ತನ್ನನ್ನೇ ನಾಥನನ್ನಾಗಿ ಭಾವಿಸಿರುವ ಯದುವಂಶೀಯರಿಗೆ ಕಂಸನು ಉಪಟಳವನ್ನು ಕೊಡುತ್ತಿರುವನೆಂಬುದನ್ನೂ ಅವರಿಗೆ ಭಯ

ದಾಯಕನಾಗಿರುವನೆಂಬುದನ್ನೂ ತಿಳಿದು ವಿಶ್ವಾತ್ಮನಾದ ಭಗವಂತನು ಯೋಗಮಾಯೆಗೆ ಹೀಗೆ ಆದೇಶಿಸಿದನು :

"ದೇವಿ! ಕಲ್ಯಾಣಿ! ನೀನೀಗಲೇ ವ್ರಜಭೂಮಿಗೆ ಹೋಗು. ಆ ವ್ರಜಭೂಮಿಯು ಗೋಪಾಲಕರಿಂದಲೂ ಗೋವುಗಳಿಂದಲೂ ಸುಶೋಭಿತ ವಾಗಿದೆ. ನಂದನ ಆ ಗೋಕುಲದಲ್ಲಿ ವಸುದೇವನ ಭಾರ್ಯೆಯಾದ ರೋಹಿಣಿಯಿದ್ದಾಳೆ. ಅವನ ಇತರ ಪತ್ನಿಯರೂ ಕಂಸನ ಭಯದಿಂದಾಗಿ ಗುಪ್ತಸ್ಥಳಗಳಲ್ಲಿ ಅಡಗಿಕೊಂಡಿದ್ದಾರೆ.

ಈ ಸಮಯದಲ್ಲಿ ನನ್ನ ಅಂಶವಾಗಿರುವ ಆದಿಶೇಷನು ದೇವಕಿಯ ಗರ್ಭದಲ್ಲಿದ್ದಾನೆ. ಶೇಷಾತ್ಮಕವಾಗಿರುವ ಆ ಗರ್ಭವನ್ನು ದೇವಕಿಯ ಗರ್ಭ ದಿಂದ ಸೆಳೆದುಕೊಂಡು ನಂದಗೋಕುಲದಲ್ಲಿರುವ ರೋಹಿಣಿಯ ಗರ್ಭ ದಲ್ಲಿರಿಸು. ಕಲ್ಯಾಣಿ! ನಾನಾದರೋ* ನನ್ನ ನಿಜಾಂಶಭಾಗದಿಂದ (ಪೂರ್ಣ ಸ್ವರೂಪದಿಂದ) ದೇವಕೀದೇವಿಯ ಹೊಟ್ಟೆಯಲ್ಲಿ ಹುಟ್ಟುತ್ತೇನೆ. ನೀನು ನಂದಗೋಪನ ಪತ್ನಿಯಾದ ಯಶೋದೆಯ ಗರ್ಭದಲ್ಲಿ ಹುಟ್ಟುವೆ. ಸಕಲ ಕಾಮನೆಗಳನ್ನೂ ಕೊಡುವವರಲ್ಲಿ ಶ್ರೇಷ್ಠಳಾದ, ಮಾನವರ ಸಕಲೇಷ್ಟಾರ್ಥ ಗಳನ್ನೂ ಪೂರೈಸಿಕೊಡುವ ನಿನ್ನನ್ನು ಮನುಷ್ಯರು ಧೂಪ-ದೀಪ-ಬಲಿಯೇ ಮುಂತಾದ ಉಪಚಾರಗಳಿಂದ ಪೂಜಿಸುತ್ತಾರೆ. ಭೂಲೋಕದಲ್ಲಿ ಜನರು ನಿನಗೆ ಅಲ್ಲಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಾರೆ. ದುರ್ಗಾ, ಭದ್ರಕಾಳೀ, ವಿಜಯಾ, ವೈಷ್ಣವೀ, ಕುಮುದಾ, ಚಂಡಿಕಾ, ಕೃಷ್ಣಾ, ಮಾಧವೀ, ಕನ್ಯಕಾ, ಮಾಯಾ, ನಾರಾಯಣೀ, ಈಶಾನೀ, ಶಾರದಾ, ಅಂಬಿಕಾ—ಇವೇ ಮುಂತಾದ ಶುಭನಾಮಗಳಿಂದ ನಿನ್ನನ್ನು ಕರೆಯುತ್ತಾರೆ. (ಶ್ಲೋಕ - )

---

* **ಅಥಾಹಮಂಶಭಾಗೇನ**—ಈ ವಾಕ್ಯದಿಂದಲೂ ತತ್ರಾಂಶೇನಾವತೀರ್ಣಸ್ಯ ಇತ್ಯಾದಿ ವಾಕ್ಯಗಳಿಂದಲೂ ಶ್ರೀಕೃಷ್ಣಾವತಾರವು ನಾರಾಯಣನ ಪೂರ್ಣಾಂಶವಲ್ಲವೆಂದೂ ರಾಮಕೃಷ್ಣರು ಸಿತಾಸಿತ ಕೇಶಾವತಾರಗಳೆಂದೂ ಬಗೆ-ಬಗೆಯಾಗಿ ಹೇಳುವರು. ಆದರೆ '**ಕೃಷ್ಣಸ್ತು ಭಗವಾನ್ ಸ್ವಯಮ್**'—ಎಂದು ಹೇಳಿರುವುದರಿಂದ ಮಿಕ್ಕ ಅವತಾರಗಳೆಲ್ಲವೂ ವಿಷ್ಣುವಿನ ಅಂಶಾವತಾರಗಳೆಂದೂ ಕೃಷ್ಣಾವತಾರವು ವಿಷ್ಣು ವಿನ ಪೂರ್ಣಾವತಾರವೆಂದೂ ಸಿದ್ಧವಾಗುತ್ತದೆ. ಅಂಶಭಾಗೇನ—ಎಂಬುದಕ್ಕೆ ಜ್ಞಾನಾದಿಗಳಿಂದ ಸರ್ವವನ್ನೂ ಆವರಿಸಿರುವುದೆಂದೂ ಅಥವಾ ಭಕ್ತರಿಗೆ ಜ್ಞಾನ-

**ಗರ್ಭಸಙ್ಕರ್ಷಣಾತ್ತಂ ವೈ ಪ್ರಾಹುಃ ಸಙ್ಕರ್ಷಣಂ ಭುವಿ ।**
**ರಾಮೇತಿ ಲೋಕರಮಣಾದ್ಬಲಂ ಬಲವದುಚ್ಛ್ರಯಾತ್ ॥೧೩॥**

ಅನಂತಶೇಷನನ್ನು ದೇವಕಿಯ ಗರ್ಭದಿಂದ ಸೆಳೆಯಲ್ಪಡುವನಾದುದರಿಂದ ಸಂಕರ್ಷಣನೆಂತಲೂ, ಲೋಕರಂಜಕನಾಗುವುದರಿಂದ ರಾಮನೆಂತಲೂ, ಬಲಿಷ್ಠರಲ್ಲಿ ಶ್ರೇಷ್ಠನಾಗುವುದರಿಂದ ಬಲಭದ್ರ ಅಥವಾ ಬಲರಾಮನೆಂತಲೂ ಜನರು ಕರೆಯುತ್ತಾರೆ.”

ಭಗವಂತನಿಂದ ಹೀಗೆ ಆಜ್ಞಪ್ತಳಾದ ಯೋಗಮಾಯೆಯು ‘ಓಂ’ ಕಾರದ ಮೂಲಕವಾಗಿ ತನ್ನ ಒಪ್ಪಿಗೆಯನ್ನಿತ್ತು, ಅವನ ಆಜ್ಞೆಯನ್ನು ಶಿರಸಾ ಧರಿಸಿ, ಭಗವಂತನಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಭೂಮಿಗಿಳಿದು ಬಂದು ಭಗವಂತನು ಹೇಳಿದ್ದಂತೆಯೇ ಎಲ್ಲವನ್ನೂ ಮಾಡಿದಳು.

ಯೋಗಮಾಯೆಯು ಭಗವಂತನ ಆಜ್ಞೆಯಂತೆ ದೇವಕಿಯಲ್ಲಿದ್ದ ಗರ್ಭವನ್ನು ಸೆಳೆದು ರೋಹಿಣಿಯಲ್ಲಿಡಲಾಗಿ ದೇವಕಿಯು ಗರ್ಭದಿಂದ ಹೀನಳಾಗಿರುವುದು ಪೌರರ ಗಮನಕ್ಕೆ ಬಂದಿತು. ಪುರವಾಸಿಗಳೆಲ್ಲರೂ ಬಹಳ ದುಃಖದಿಂದ ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಂಡರು :– ‘ಅಯ್ಯೋ! ದೀನಳಾದ ದೇವಕಿಗೆ ಗರ್ಭಸ್ರಾವವಾಗಿಬಿಟ್ಟಿದೆಯಲ್ಲವೇ!’– ಎಂದು ಹೇಳುತ್ತಾ ಗೋಳಾಡಿದರು.

ಭಕ್ತರಿಗೆ ಅಭಯಂಕರನಾದ ವಿಶ್ವಾತ್ಮನಾದ ಪರಮಾತ್ಮನು ತನ್ನ ಅಂಶ

---

ಬಲಾದಿಗಳನ್ನು ಉಂಟುಮಾಡುವುದೆಂದೂ ಅಥವಾ ಅಂಶವಾದ ಪುರುಷರೂಪದಿಂದ ಮಾಯಾಸಂಬಂಧವನ್ನು ಪಡೆದಿರುವುದೆಂದೂ ಅರ್ಥವಾಗುವುದರಿಂದ ಪರಿಪೂರ್ಣನೆಂಬ ತಾತ್ಪರ್ಯವು. (ಭಾವಾರ್ಥದೀಪಿಕೆ)

ಶ್ರೀಕೃಷ್ಣ-ಬಲರಾಮರು ಶ್ರೀಮನ್ನಾರಾಯಣನ ಬಿಳಿ ಮತ್ತು ಕಪ್ಪುಬಣ್ಣದ ಎರಡು ಕೂದಲುಗಳಿಂದ ಹುಟ್ಟಿದರು–ಎಂದು ಮಹಾಭಾರತದಲ್ಲಿ ಹೇಳಿದೆ. ಮುಂದೆ ಶ್ರೀಮದ್ಭಾಗವತದ ೧೦ನೆಯ ಸ್ಕಂಧದ ೮೯ನೆಯ ಅಧ್ಯಾಯದಲ್ಲಿಯೂ ಇದೇ ವಿಷಯವೇ ಬಂದಿದೆ. ೫೯ನೆಯ ಶ್ಲೋಕದಲ್ಲಿ ಕಲಾವತೀರ್ಣೌ ನನ್ನ ಅಂಶದಿಂದ ಹುಟ್ಟಿರುವ ಕೃಷ್ಣಾರ್ಜುನರೇ!–ಎಂದೇ ಶ್ರೀಮನ್ನಾರಾಯಣನು ಸಂಬೋಧಿಸುತ್ತಾನೆ. ಮನು-ಇಂದ್ರಾದಿಗಳೂ, ಋಷಿಗಳೂ ಭಗವಂತನ ಅವತಾರಗಳೇ. ಆದರೆ ಕಲಾವತಾರಗಳು ಎಂದು ಹೇಳುವ ಪ್ರಸಂಗದಲ್ಲಿ ‘ಕೃಷ್ಣಸ್ತು ಭಗವಾನ್ ಸ್ವಯಂ’ ಎಂದು ಹೇಳಿರುತ್ತದೆ. ದಶಾವತಾರಗಳ ವಿಷಯದಲ್ಲಲ್ಲ.

ಸ್ವರೂಪದಿಂದ ಆನಕದುಂದುಭಿಯ ಮನಸ್ಸನ್ನು ಪ್ರವೇಶಿಸಿದನು. ಮರುಕ್ಷಣ ದಲ್ಲಿಯೇ ವಸುದೇವನು ಪರಮಾತ್ಮನ ಸಂಬಂಧವಾದ ದಿವ್ಯತೇಜಸ್ಸನ್ನು ಧರಿಸಿ ಸೂರ್ಯನಂತೆ ದೇದೀಪ್ಯಮಾನನಾಗಿ ಕಂಗೊಳಿಸಿದನು. ಯಾವ ಪ್ರಾಣಿಗೂ, ಮಹಾತೇಜಸ್ವಿಯಾಗಿದ್ದ ವಸುದೇವನ ಬಳಿಗೂ ಹೋಗಲಾಗು ತ್ತಿರಲಿಲ್ಲ. ಅವನನ್ನು ಎದುರಿಸಲೂ ಸಾಧ್ಯವಾಗುತ್ತಿರಲಿಲ್ಲ. ಕಂಸಾದಿಗಳಿಗೆ ದುರಾಸದನೂ ದುರ್ಧರ್ಷನೂ ಆಗಿದ್ದನು. ಬಳಿಕ ವಸುದೇವನಿಂದ ಇಡ ಲ್ಪಟ್ಟ ಮಂಗಳಕರನಾದ, ಅಚ್ಯುತಾಂಶನಾದ, ಭಕ್ತಾನುಗ್ರಹಕ್ಕಾಗಿ ಮೂರ್ತೀ ಭವಿಸಿದ, ಸಕಲರಿಗೂ ಆತ್ಮಸ್ವರೂಪನಾದ ಚಿನ್ಮಯಮೂರ್ತಿಯನ್ನು ಮಹಾಪತಿವ್ರತೆಯಾದ ದೇವಕಿಯು–ಪೂರ್ವದಿಕ್ಕು ಆನಂದಕರನಾದ ಚಂದ್ರ ನನ್ನು ಪಡೆಯುವಂತೆ–ತನ್ನ ಗರ್ಭದಲ್ಲಿ ಪಡೆದುಕೊಂಡಳು. ವಸುದೇವನು ಭಗವದನುಗ್ರಹದಿಂದ ತಾನು ಪಡೆದುಕೊಂಡ ದಿವ್ಯಜ್ಯೋತಿಯನ್ನು ದೇವಕಿ ದೇವಿಯ ಗರ್ಭದಲ್ಲಿರಿಸಿದನು.* ಸಮಸ್ತವಾದ ಜಗತ್ತಿಗೂ ನಿವಾಸಭೂತ ನಾದ ಶ್ರೀಹರಿಗೇ ಸಾಧ್ವಿಯಾದ ದೇವಕಿಯು ನಿವಾಸಭೂತಳಾಗಿದ್ದರೂ ದಿವ್ಯ ಜ್ಯೋತಿಃಸ್ವರೂಪನಾದ ಪರಮಾತ್ಮನನ್ನೇ ಹೃದಯದಲ್ಲಿ ಅಡಗಿಸಿಕೊಂಡಿದ್ದರೂ ಆಕೆಯು ಶೋಭಿಸಲಿಲ್ಲ. ಗಡಿಗೆಯಲ್ಲಿಟ್ಟ ದೀಪದಬೆಳಕು ಹೊರಸೂಸು ವುದಿಲ್ಲ. ಜ್ಞಾನವಂಚಕನ ವಿದ್ಯೆಯು ಪ್ರಕಾಶಕ್ಕೆ ಬರುವುದಿಲ್ಲ. ಹಾಗೆಯೇ– ದುರುಳನಾದ ಕಂಸನ ಕಾರಾಗೃಹದಲ್ಲಿದ್ದ ದೇವಕಿಯು ತನ್ನೊಳಗೆ ಪರಂ

---

* ನಾಶರಹಿತವೂ ನಿತ್ಯವೂ ಆದ ಭಗವದ್ರೂಪವು ಹೊರಪಡುವುದನ್ನೇ ಮೂಢರು ಜನ್ಮವೆಂದು ತಿಳಿಯುವರು. ಜೀವರಂತೆ ಪರಮಾತ್ಮನಿಗೆ ಹುಟ್ಟು-ಸಾವುಗಳಿಲ್ಲ. ಆದುದ ರಿಂದ ಭಗವಂತನು ವಸುದೇವ-ದೇವಕಿಯರ ಮನಸ್ಸುಗಳಲ್ಲಿ ತನ್ನ ರೂಪವನ್ನು ಹೊರಪಡಿಸಿದನು.
(ಶ್ರೀಮಧ್ವಾಚಾರ್ಯಕೃತ ತಂತ್ರಭಾಗವತ)

ಭಗವಂತನು ಜನ್ಮಾದಿರಹಿತನಾದರೂ ಲೋಕವಿಡಂಬನೆಗಾಗಿ ಸ್ವರೂಪದಿಂದಲೇ ತಂದೆ-ತಾಯಿಗಳ ಮನಸ್ಸನ್ನು ಹೊಕ್ಕು ಆನಂದಮಯವಾದ ಶರೀರವನ್ನು ಪಡೆದು ಹುಟ್ಟಿದವನಂತೆ ಕಾಣಿಸಿಕೊಂಡನೇ ಹೊರತು ಸಾಧಾರಣಶಿಶುಗಳಂತೆ ಶುಕ್ಲ- ಶೋಣಿತಗಳಿಂದ ಶರೀರವನ್ನು ಪಡೆಯಲಿಲ್ಲ.

ಆವಿಶ್ಯ ಪಿತರಂ ವಿಷ್ಣುಃ ಸ್ವರೂಪೇಣೈವ ಮಾತರಮ್ ।
ವಿಡಮ್ಬನಾರ್ಥಂ ಲೋಕಸ್ಯ ನಿರ್ಜನಿಶ್ಚಾಪ್ಯಜಾಯತ ।
ಆನನ್ದಮಾತ್ರದೇಹೇನ ಜಾತವತ್ಸಮ್ಪ್ರದೃಶ್ಯತ ॥ (ವಿಜಯಧ್ವಜೀಯ)

ಜ್ಯೋತಿಯನ್ನು ಹೊಂದಿದ್ದರೂ ಪೂರ್ಣವಾಗಿ ಪ್ರಕಾಶಿಸಲಿಲ್ಲ. ಆದರೆ ಕಾರಾಗೃಹವಾಸದಿಂದ ಪೂರ್ಣರೂಪದಿಂದ ಪ್ರಕಾಶಿಸದಿದ್ದರೂ ಭಗವಂತನ ಆವಿರ್ಭಾವವಿದ್ದ ಅವಳ ದಿವ್ಯಕಾಂತಿಯನ್ನು ಯಾರೂ ಮುಚ್ಚಿಡಲು ಸಾಧ್ಯ ವಾಗುತ್ತಿರಲಿಲ್ಲ.

ಒಮ್ಮೆ ಕಂಸನೂ ಸೆರೆಮನೆಗೆ ಬಂದು, ಅಜಿತನನ್ನೇ ಗರ್ಭದಲ್ಲಿ ಧರಿಸಿದ್ದ, ಸೆರೆಮನೆಯನ್ನೇ ತನ್ನ ದಿವ್ಯಪ್ರಭೆಯಿಂದ ಪ್ರಕಾಶಗೊಳಿಸುತ್ತಿದ್ದ ಶುಚಿಸ್ಮಿತೆಯಾದ ತನ್ನ ತಂಗಿಯನ್ನು ನೋಡಿದನು. ಅವನು ಈ ಹಿಂದೆ ಅವಳಲ್ಲಿ ಅಂತಹ ದಿವ್ಯವಾದ ಕಾಂತಿಯನ್ನೇ ಕಂಡಿರಲಿಲ್ಲ. ಆತನಿಗೆ ತುಂಬಾ ಅಚ್ಚರಿಯಾಯಿತು. ಕಾರಣವೇನಿರಬಹುದೆಂದು ತರ್ಕಿಸಿದನು. ಕಾರಣವನ್ನು ತಿಳಿಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ. "ನನ್ನ ಪ್ರಾಣಹರನಾದ ಶ್ರೀಹರಿಯೇ ದೇವಕಿಯ ಗುಹಾರೂಪವಾದ ಗರ್ಭವನ್ನು ಪ್ರವೇಶಿಸಿರುವುದು ನಿಶ್ಚಯ. ಶತ್ರುವಿನ ನಿರಸನಕ್ಕಾಗಿ ನಾನು ಕೂಡಲೇ ಯಾವ ಕಾರ್ಯ ವನ್ನು ಕೈಗೊಳ್ಳಲಿ? ದೇವಕಿಯನ್ನು ಈಗಲೇ ಕೊಂದುಬಿಡಲೇ? ಛಿ! ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ವೀರಪುರುಷರು ಸ್ವಾರ್ಥಿಗಳಾಗಿದ್ದರೂ ತಮ್ಮ ಪರಾಕ್ರಮವನ್ನು ಕಳಂಕಿತವನ್ನಾಗಿ ಮಾಡುವುದಿಲ್ಲ. ಮೊದಲನೆಯದಾಗಿ ಇವಳೊಬ್ಬಳು ಹೆಣ್ಣು. ಎರಡನೆಯದಾಗಿ ಇವಳು ನನ್ನ ತಂಗಿ. ಮೂರನೆಯದಾಗಿ ಇವಳೀಗ ಗರ್ಭಿಣಿ. ಇಂತಹವಳನ್ನು ಕೊಲೆ ಮಾಡಿದರೆ ಯಶಸ್ಸು, ಐಶ್ವರ್ಯ, ಆಯುಸ್ಸು–ಎಲ್ಲವೂ ತತ್ಕಾಲದಲ್ಲಿಯೇ ನಾಶವಾಗಿಬಿಡುತ್ತವೆ. ಯಾವನು ಅತ್ಯಂತಕ್ರೂರಿಯಾಗಿರುವನೋ ಅಂತಹ ವನು ಬದುಕಿದ್ದರೂ ಸತ್ತವನಂತೆಯೇ ಸರಿ. ಅಂತಹವನ ಬಳಿಗೆ ಯಾರೂ ಹೋಗುವುದಿಲ್ಲ. ಮೃತ್ಯುವಿಗೆ ಭಯಪಡುವಂತೆಯೇ ಕ್ರೂರಿಯನ್ನು ಕಂಡರೆ ಜನರು ಭಯಪಡುತ್ತಾರೆ. ದೇಹಾಭಿಮಾನಿಯಾದ ಆ ಕ್ರೂರಿಯು ಸತ್ತ ನೆಂದರೆ ಜನಗಳೆಲ್ಲರೂ ಅವನ ದುರ್ಗುಣಗಳನ್ನು ಹೇಳಿಕೊಂಡು ಶಾಪವಿಡು ತ್ತಾರೆ ; ಬಯ್ಯುತ್ತಾರೆ. ಈ ಕಾರಣಗಳಿಂದ ಸತ್ತನಂತರ ಆ ಕ್ರೂರಿಯು ಘೋರವಾದ ನರಕಕ್ಕೆ ಹೋಗುವುದೂ ನಿಶ್ಚಯ." ಹೀಗೆ ಯೋಚಿಸಿದ ಕಂಸನು ದೇವಕಿಯನ್ನು ಕೊಂದೇಬಿಡಬೇಕೆನ್ನುವ ಭಾವನೆಯನ್ನು ದೂರೀ ಕರಿಸಿದನು. 'ಈ ಸಮಯದಲ್ಲಿ ಇವಳನ್ನು ಕೊಲ್ಲುವುದು ಸಾಧುವಲ್ಲ'–

ಎಂದು ಕ್ರೂರಿಯಾದ ಕಂಸನಿಗೂ ಅನಿಸಿತು. ಇದಕ್ಕೆ ಭಗವಂತನ ಸಂಕಲ್ಪವೇ ಕಾರಣವಿರಬಹುದು. ಕಂಸನು ದೇವಕಿಯ ಗರ್ಭದಲ್ಲಿ ಶಿಶುವು ಹುಟ್ಟುವುದನ್ನೇ ನಿರೀಕ್ಷಿಸುತ್ತಿದ್ದನು. (ಶ್ಲೋಕ 14-23)

**ಆಸೀನಃ ಸಂವಿಶಂಸ್ತಿಷ್ಠನ್ಭುಞ್ಜಾನಃ ಪರ್ಯಟನ್ಮಹೀಮ್ ।**
**ಚಿನ್ತಯಾನೋ ಹೃಷೀಕೇಶಮಪಶ್ಯತ್ತನ್ಮಯಂ ಜಗತ್ ॥೨೪॥**

ಕುಳಿತಾಗಲೂ ಅವನದೇ ಯೋಚನೆ ; ಮಲಗಿದಾಗಲೂ ಅವನದೇ ಯೋಚನೆ ; ನಿಂತಾಗಲೂ ಅವನದೇ ಯೋಚನೆ ; ಊಟ ಮಾಡುವಾಗಲೂ ಅವನ ಧ್ಯಾನವೇ ; ತಿರುಗಾಟದಲ್ಲೂ ಆ ಶತ್ರುವಿನ ಬಗ್ಗೆಯೇ ಚಿಂತನೆ. ಹೀಗಾಗಿ ಪ್ರಪಂಚವೇ ಹೃಷೀಕೇಶಮಯವಾಗಿರುವುದೋ ಎಂಬಂತೆ ಕಂಸ ನಿಗೆ ಭಾಸವಾಗುತ್ತಿತ್ತು. ಶ್ರೀಹರಿಯು ಬಂದಂತೆ ; ಅವನನ್ನು ಹಿಡಿದಂತೆ ; ಅವನೊಡನೆ ಕಾಳಗವಾಡಿದಂತೆ–ಇಂತಹ ಯೋಚನೆಗಳು ತರಂಗ-ತರಂಗವಾಗಿ ಕಂಸನ ಮನೋಭೂಮಿಕೆಯಲ್ಲಿ ಅನವರತವಾಗಿಸುಳಿದಾಡುತ್ತಿದ್ದುವು.

ಪರೀಕ್ಷಿತನೇ! ಆ ಸಮಯದಲ್ಲಿ ರುದ್ರದೇವರು ಮತ್ತು ಬ್ರಹ್ಮದೇವರು ತಮ್ಮ ಅನುಚರರೊಡನೆಯೂ ನಾರದರೇ ಮೊದಲಾದ ಋಷಿ-ಮುನಿಗಳೊಡನೆಯೂ ಕಂಸನ ಸೆರೆಮನೆಗೆ ಆಗಮಿಸಿ ಸುಮಧುರವಾದ ಮಾತುಗಳಿಂದ ಸಮಸ್ತಚರಾಚರಪ್ರಾಣಿಗಳಿಗೂ ಬೀಜಸ್ವರೂಪನಾದ ಭಗವಂತನನ್ನು ಸ್ತೋತ್ರಮಾಡಿದರು :

**ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ**
**ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।**
**ಸತ್ಯಸ್ಯ ಸತ್ಯಮೃತಸತ್ಯನೇತ್ರಂ**
**ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥೨೬॥**

"ಪ್ರಭುವೇ! ಮಾಡಿರುವ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದಕ್ಕಾಗಿ ದೇವಕಿಯ ಗರ್ಭವನ್ನು ಪ್ರವೇಶಿಸಿರುವ ನೀನು ನಿಶ್ಚಯವಾಗಿಯೂ ಸತ್ಯವ್ರತನಾಗಿರುವೆ. ಸತ್ಯನಿಷ್ಠೆಯೇ ನಿನ್ನ ಪ್ರಾಪ್ತಿಗೆ ಪರಮಶ್ರೇಷ್ಠವಾದ ಸಾಧನವಾಗಿದೆ. ಭೂತಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ನೀನಿರುವೆ. ಪ್ರತ್ಯಕ್ಷವಾಗಿ ಕಾಣುತ್ತಿರುವ ಪೃಥಿವೀ-ಅಪ್-

ತೇಜಸ್ಸು-ವಾಯು-ಆಕಾಶಗಳೆಂಬ ಪಂಚಭೂತಗಳಿಗೂ ನೀನು ಮೂಲ ಕಾರಣನಾಗಿರುವೆ ಮತ್ತು ಈ ಪಂಚಮಹಾಭೂತಗಳ ಅಂತರ್ಯಾಮಿಯಾಗಿದ್ದು ವಿರಾಜಿಸುವೆ. ಜಗತ್ತಿನ ಆದಿ-ಮಧ್ಯಾಂತರಗಳೆಂಬ ಮೂರು ಕಾಲಗಳಲ್ಲಿಯೂ ನೀನು ನೆಲೆಸಿರುವೆ. ಸತ್ಯವಚನಕ್ಕೂ, ಸಮದೃಷ್ಟಿಗೂ ನೀನೇ ಪ್ರೇರಕನು. ಹೀಗೆ ಸಮಸ್ತವಿಷಯಗಳಲ್ಲಿಯೂ ಸತ್ಯಸ್ವರೂಪನೇ ಆಗಿರುವ, ಸತ್ಯನೇ ಆಗಿರುವ ನಿನ್ನನ್ನು ಶರಣುಹೊಂದುತ್ತೇವೆ.*

**ಏಕಾಯನೋಽಸೌ ದ್ವಿಫಲಸ್ತ್ರಿಮೂಲ-**
**ಶ್ಚತೂರಸಃ ಪಞ್ಚವಿಧಃ ಷಡಾತ್ಮಾ ।**
**ಸಪ್ತತ್ವಗಷ್ಟವಿಟಪೋ ನವಾಕ್ಷೋ**
**ದಶಚ್ಛದೀ ದ್ವಿಖಗೋ ಹ್ಯಾದಿವೃಕ್ಷಃ ॥೨೭॥**

---

* ಸತ್ಯಪರಂ = ಸತ್ಯವಾದ ಚೇತನಾಚೇತನಪ್ರಪಂಚಕ್ಕಿಂತ ವಿಲಕ್ಷಣನಾಗಿಯೂ ತ್ರಿಸತ್ಯಂ = ಸತ್ಯಗಳಾದ ಪ್ರಕೃತಿ-ಪುರುಷ-ಕಾಲಗಳೆಂಬ ಮೂರು ಶರೀರವುಳ್ಳವನಾಗಿಯೂ, ಋತಸತ್ಯನೇತ್ರಂ = ಚಂದ್ರ-ಸೂರ್ಯರೆಂಬ ನೇತ್ರಗಳಿಂದ ಕೂಡಿದವನಾಗಿಯೂ ಇರುವ ನಿನ್ನನ್ನು ಮರೆಹೊಗುವೆವು. (ವೀರರಾಘವೀಯ)

**ಸತ್ಯವ್ರತಂ** = ಪೂರ್ಣಾನಂದಜ್ಞಾನಲಕ್ಷಣವಾದ ಸ್ವರೂಪವುಳ್ಳವನಾಗಿಯೂ, **ತ್ರಿಸತ್ಯಂ** = ತ್ರಿಮೂರ್ತಿಗಳಲ್ಲಿ ಮುಖ್ಯಾರ್ಥವುಳ್ಳವನಾಗಿಯೂ, **ಸತ್ಯಸ್ಯ ಸತ್ಯಂ** = ಸತ್ಯಪ್ರಪಂಚಕ್ಕೆ ಜ್ಞಾನಾನಂದಗಳನ್ನು ಕೊಡುವವನಾಗಿಯೂ, **ಸತ್ಯನೇತ್ರಂ** = ಸತ್ಯ ಪಾಲಕನಾಗಿಯೂ ಇರುವ ನಿನಗೆ ನಮಸ್ಕಾರವು. (ವಿಜಯಧ್ವಜೀಯ)

**ಸತ್ಯವ್ರತಂ** = 'ನಂಬಿದವರಿಗೆ ಅಭಯವನ್ನು ಕೊಡುವೆನು'–ಎಂಬ ಪ್ರತಿಜ್ಞೆಯುಳ್ಳವನಾದುದರಿಂದ ಪ್ರಪನ್ನಪಾರಿಜಾತನಾಗಿಯೂ, **ಸತ್ಯಪರಂ** = 'ಕೃಷ್ಣನಲ್ಲಿ ಸತ್ಯವೂ ಸತ್ಯದಲ್ಲಿ ಕೃಷ್ಣನೂ ನೆಲೆಸಿರುವನು'–ಎಂಬುದರಿಂದ ಸತ್ಯವೆಂದು ಹೆಸರುಗೊಂಡ ಪರಮೇಶ್ವರನಾಗಿಯೂ, **ತ್ರಿಸತ್ಯಂ** = ಸತ್ಯಗಳಾದ ಜ್ಞಾನ, ಬಲ, ಕ್ರಿಯಾಶಕ್ತಿಯುಳ್ಳವನಾಗಿಯೂ, **ಸತ್ಯಸ್ಯಯೋನಿಂ** = ಯಥಾರ್ಥಗಳಾದ ಮತ್ಸ್ಯ-ಕೂರ್ಮಾದ್ಯವತಾರಗಳಿಗೆ ಉತ್ಪತ್ತಿಸ್ಥಾನನಾಗಿಯೂ, **ಸತ್ಯೇ ವಿಹಿತಂ** = ಸತ್ಯಗಳಾದ ವೈಕುಂಠ ಮಥುರಾದಿ ಸ್ಥಾನಗಳಲ್ಲಿ ನೆಲೆಸಿರುವವನಾಗಿಯೂ, **ಸತ್ಯಸ್ಯಸತ್ಯಂ** = ಸಕಲಚಿದ್ವಸ್ತುಗಳಿಗೂ ಸಾರಭೂತನಾಗಿಯೂ **ಸತ್ಯಾತ್ಮಕಂ** = ಸತ್ಯವಾದ ಶರೀರವುಳ್ಳವನಾಗಿಯೂ ಇರುವ ನಿನಗೆ ನಮಸ್ಕಾರವು. (ಸಾರಾರ್ಥದರ್ಶಿನೀ)

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವದಾ ತಸ್ಮೈ ದದಾಮ್ಯೇತದ್ವ್ರತಂ ಮಮ ॥**

ಪ್ರಭುವೇ! ಸಂಸಾರವೆಂಬುದು ಸನಾತನವೃಕ್ಷವಾಗಿದೆ. ಈ ಸನಾತನ ವೃಕ್ಷಕ್ಕೆ ಮೂಲಪ್ರಕೃತಿಯೆಂಬುದೊಂದೇ ಆಶ್ರಯವು. ಸುಖ-ದುಃಖಗಳೇ ಇದರ ಎರಡು ಫಲಗಳು. ಸತ್ತ್ವ-ರಜಸ್ತಮಸ್ಸುಗಳೆಂಬುವೇ ಸಂಸಾರ ಮಹಾ ವೃಕ್ಷದ ಬೇರುಗಳು. ಈ ಸಂಸಾರವೃಕ್ಷದಿಂದ ಧರ್ಮ-ಅರ್ಥ-ಕಾಮ-ಮೋಕ್ಷ ಗಳೆಂಬ ನಾಲ್ಕು ವಿಧವಾದ ರಸವು ಸೋರುತ್ತಿರುತ್ತದೆ. ಕಿವಿ-ಚರ್ಮ-ಕಣ್ಣು-ನಾಲಿಗೆ-ಮೂಗು ಈ ಐದು ಇಂದ್ರಿಯಗಳೇ ಸಂಸಾರವೃಕ್ಷದ ಐದು ಬಿಳಿಲು ಗಳು. ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು ಮತ್ತು ಸಾವು ಈ ಆರು ತರಂಗಗಳೇ ಈ ವೃಕ್ಷದ ಸ್ವಭಾವಗುಣಗಳು. ತ್ವಕ್ಕು, ಚರ್ಮ, ಮಾಂಸ, ರಕ್ತ, ಕೊಬ್ಬು, ಮಜ್ಜೆ, ಮೂಳೆ—ಈ ಏಳೂ ಸಂಸಾರವೃಕ್ಷದ ಹೊದ್ದಿಕೆಗಳು. ಈ ಸಂಸಾರವೃಕ್ಷಕ್ಕೆ ಪಂಚಭೂತಗಳು, ಮನಸ್ಸು, ಬುದ್ಧಿ ಮತ್ತು ಅಹಂಕಾರಗಳೆಂಬ ಎಂಟು ರೆಂಬೆಗಳಿವೆ. ಈ ಸಂಸಾರವೃಕ್ಷದಲ್ಲಿ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ಬಾಯಿ, ಗುದ, ಲಿಂಗಗಳೆಂಬ ಒಂಬತ್ತು ಪೊಟರೆಗಳಿವೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯಗಳೆಂಬ ಹತ್ತು ಪ್ರಾಣಗಳೇ ಸಂಸಾರಮಹಾವೃಕ್ಷದ ಎಲೆಗಳು. ಜೀವೇಶ್ವರರು ಈ ಸಂಸಾರಮಹಾವೃಕ್ಷದ ಎರಡು ಹಕ್ಕಿಗಳಂತಿದ್ದಾರೆ.*

---

ಸತ್ಯೇ ಪ್ರತಿಷ್ಠಿತಃ ಕೃಷ್ಣಃ ಸತ್ಯಮತ್ರ ಪ್ರತಿಷ್ಠಿತಮ್ ।
ಸತ್ಯಾಸತ್ಯೋ ಹಿ ಗೋವಿಂದಸ್ತಸ್ಮಾತ್ಸತ್ಯೋ ಹಿ ನಾಮತಃ ॥

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ ।
ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥
ಋತಂ ಚ ಸೂನೃತಾ ವಾಣೀ ಸತ್ಯಂ ಚ ಸಮದರ್ಶನಮ್ ॥

ಸತ್ಯವ್ರತಂ = ಭಕ್ತರಿಂದ ಮಾಡಲ್ಪಡುವ ಭಜನೆಯೇ ಸತ್ಯವಾಗಿ ಉಳ್ಳವನೂ, ಸತ್ಯಪರಂ = ಭಕ್ತರಿಗೆ ಸತ್ಯವಾದ ಫಲವನ್ನು ಕೊಡುವವನೂ, ತ್ರಿಸತ್ಯಂ = ಭಕ್ತರು-ಭಜನೆ-ಫಲಗಳೆಂಬ ಮೂರನ್ನೂ ಸತ್ಯವೆನಿಸುವವನೂ, ಸತ್ಯಸ್ಯ ಸತ್ಯಂ = ಸತ್ಯಗಳಾದ ಪ್ರಕೃತಿ-ಪುರುಷ-ಕಾಲಾದಿಗಳಿಗೆ ಸತ್ತಾರೂಪನೂ ಆದ ನಿನಗೆ ನಮಸ್ಕಾರವು.

(ಸಿದ್ಧಾಂತದೀಪಿಕಾ)

* ಏಕಾಯನ = ಪರಮಾತ್ಮನೇ ಆಶ್ರಯವಾಗಿ ಉಳ್ಳದ್ದು, ಅಷ್ಟವಿಟಪಃ = ಎರಡು

**ತ್ವಮೇಕ ಏವಾಸ್ಯ ಸತಃ ಪ್ರಸೂತಿ-**
**ಸ್ತ್ವಂ ಸಂನಿಧಾನಂ ತ್ವಮನುಗ್ರಹಶ್ಚ ।**
**ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ**
**ಪಶ್ಯನ್ತಿ ನಾನಾ ನ ವಿಪಶ್ಚಿತೋ ಯೇ ॥೨೮॥**

**ಈ ಸಂಸಾರವೃಕ್ಷಕ್ಕೆ ಉತ್ಪತ್ತಿಸ್ಥಾನವೂ, ಲಯಸ್ಥಾನವೂ ಮತ್ತು ನಿಲಯಸ್ಥಾನವೂ (ಸೃಷ್ಟಿ-ಸ್ಥಿತಿ-ಲಯಕಾರನೂ) ನೀನೇ ಆಗಿರುವೆ. ನಿನ್ನ ಮಾಯೆಯಿಂದ ಆವರಿಸಲ್ಪಟ್ಟಿರುವ ಮೂಢರು ಸೃಷ್ಟಿ-ಸ್ಥಿತಿ-ಲಯಗಳಿಗೆ ಬೇರೆ-ಬೇರೆ ಬಗೆ-ಬಗೆಯ ಕಾರಣಗಳನ್ನು ಹೇಳುತ್ತಾರೆ. ಆದರೆ ವಿದ್ವಾಂಸ ರಾದವರು ನಿನ್ನನ್ನು ಬಿಟ್ಟು ಬೇರೆಯವರು ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವರೆಂದು ಹೇಳುವುದಿಲ್ಲ.***

---

ಕೈಗಳು, ಎರಡು ಕಾಲುಗಳು, ತಲೆ, ಕೊರಳು, ಎದೆ, ಹೊಟ್ಟೆ–ಇವೇ ಎಂಟು ಕೊಂಬೆಗಳು. ಆದಿವೃಕ್ಷಃ = ಪ್ರವಾಹರೂಪದಿಂದ ಅನಾದಿಯಾದ ಶರೀರವೆಂಬ ವೃಕ್ಷವು.

(ವೀರರಾಘವೀಯ)

ದ್ವಿಫಲಃ = ಪ್ರವೃತ್ತಿ-ನಿವೃತ್ತಿಗಳೆಂಬ ಎರಡು ಹಣ್ಣುಗಳಿಂದ ಕೂಡಿದ, ಷಡಾತ್ಮಾ = ಇರುವುದು, ಹುಟ್ಟುವುದು, ಬೆಳೆಯುವುದು, ಬದಲಾಯಿಸುವುದು, ತಗ್ಗುವುದು, ಅಳಿವುದು–ಎಂಬ ಆರು ವಿಕಾರಗಳುಳ್ಳ. ದ್ವಿಖಗಃ = ಪ್ರವೃತ್ತಿ-ನಿವೃತ್ತಿ ಮಾರ್ಗಗಳಲ್ಲಿದ್ದು, ಪಾಪ-ಪುಣ್ಯ ಫಲಗಳನ್ನು ಪಡೆದ ಎರಡು ಬಗೆ ಜೀವರೆಂಬ ಹಕ್ಕಿಗಳಿಂದ ಕೂಡಿದ. ಆದಿವೃಕ್ಷಃ = ಆದಿಸಾಧನವಾದ ಜ್ಞಾನದಿಂದ ಕತ್ತರಿಸಲ್ಪಟ್ಟ ಪ್ರಪಂಚವೆಂಬ ವೃಕ್ಷವು ಯಾವನಿಗೆ ಅಧೀನವಾಗಿರುವುದೋ ಅಂತಹ ನಿನ್ನನ್ನು ಮರೆಹೊಗುವೆವು. (ವಿಜಯಧ್ವಜೀಯ)

ಚತೂರಸಃ =ಕಾಲನಿಂದ ಕತ್ತರಿಸಲ್ಪಡುವ ಸಮಷ್ಟಿ-ವ್ಯಷ್ಟಿದೇಹರೂಪಕವಾದ ಈ ವೃಕ್ಷವು ವರ್ಣಾಶ್ರಮಧರ್ಮಗಳೆಂಬ ನಾಲ್ಕು ರಸಗಳಿಂದ ಕೂಡಿದುದು.

(ಸಾರಾರ್ಥದರ್ಶಿನೀ)

* ಮಾಯೆಗೊಳಗಾದ ಅಜ್ಞಾನಿಗಳು–'ನೀನು ಜೀವರೂಪದಿಂದ ನಾನಾವಿಧ ವಾಗಿರುವೆ'–ಎಂದು ತಿಳಿಯುವರೇ ಹೊರತು ಜ್ಞಾನಿಗಳು ತಿಳಿಯುವುದಿಲ್ಲ.

(ವೀರರಾಘವೀಯ)

ನಿನ್ನನ್ನು ಅನೇಕನೆಂದು ಅರಿಯುವವರು ಅಜ್ಞಾನಿಗಳೇ ಹೊರತು ಜ್ಞಾನಿಗಳಲ್ಲ. ಜಗಜ್ಜನ್ಮಾದಿ ಕಾರಣನೂ ನೀನಲ್ಲದೆ ಮತ್ತಾವನೂ ಅಲ್ಲ. (ವಿಜಯಧ್ವಜೀಯ)

**ಬಿಭರ್ಷಿ ರೂಪಾಣ್ಯವಬೋಧ ಆತ್ಮಾ**
**ಕ್ಷೇಮಾಯ ಲೋಕಸ್ಯ ಚರಾಚರಸ್ಯ ।**
**ಸತ್ತ್ವೋಪಪನ್ನಾನಿ ಸುಖಾವಹಾನಿ**
**ಸತಾಮಭದ್ರಾಣಿ ಮುಹುಃ ಖಲಾನಾಮ್ ॥೨೯॥**

ನೀನು ಜ್ಞಾನಸ್ವರೂಪನಾದ ಆತ್ಮನಾಗಿರುವೆ. ಚರಾಚರಜಗತ್ತಿಗೆ ಕಲ್ಯಾಣವನ್ನುಂಟುಮಾಡುವ ಸಲುವಾಗಿ ಅನೇಕವಾದ ರೂಪಗಳನ್ನು ಧರಿಸುವೆ. ನಿನ್ನ ರೂಪಗಳು ವಿಶುದ್ಧವೂ, ಅಪ್ರಾಕೃತವೂ, ಸತ್ತ್ವಮಯವೂ ಆಗಿವೆ. ನಿನ್ನ ರೂಪಗಳು ಸತ್ಪುರುಷರಿಗೆ ಸುಖಕರಗಳಾಗಿವೆ. ದುಷ್ಟರಿಗೆ ಬಾರಿ-ಬಾರಿಗೂ ಕೇಡನ್ನುಂಟುಮಾಡುತ್ತವೆ. ಅಂತಹ ದಿವ್ಯವಾದ ರೂಪಗಳನ್ನು ನೀನು ಧರಿಸಿರುವೆ.

**ತ್ವಯ್ಯಮ್ಬುಜಾಕ್ಷಾಖಿಲಸತ್ತ್ವಧಾಮ್ನಿ**
**ಸಮಾಧಿನಾವೇಶಿತಚೇತಸೈಕೇ ।**
**ತ್ವತ್ಪಾದಪೋತೇನ ಮಹತ್ಕೃತೇನ**
**ಕುರ್ವನ್ತಿ ಗೋವತ್ಸಪದಂ ಭವಾಬ್ಧಿಮ್ ॥೩೦॥**

ಕಮಲಾಕ್ಷನೇ! ಅನೇಕ ಮಹಾತ್ಮರು ಸತ್ತ್ವನಿಧಿಯಾದ ನಿನ್ನಲ್ಲಿ ಅನನ್ಯಭಾವದಿಂದ ಮನಸ್ಸನ್ನು ನೆಲೆಗೊಳಿಸಿ, ಪೂರ್ವಿಕರಾದ ಜ್ಞಾನಿಗಳು ಸಂಸಾರತಾರಕವೆಂದು ಕಂಡುಕೊಂಡಿರುವ ನಿನ್ನ ಪಾದಗಳೆಂಬ ನಾವೆಯನ್ನೇರಿ ಈ ಅಗಾಧವಾದ ಸಂಸಾರಸಾಗರವನ್ನು–ನೀರು ತುಂಬಿಕೊಂಡಿರುವ ಕರುವಿನ ಗೊರಸಿನ ಗುರುತಿನಿಂದುಂಟಾದ ಹಳ್ಳವನ್ನು ದಾಟುವಷ್ಟು ಸುಲಭವಾಗಿ ದಾಟಿಬಿಡುತ್ತಾರೆ.

**ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮ-**
**ನ್ಭವಾರ್ಣವಂ ಭೀಮಮದಭ್ರಸೌಹೃದಾಃ ।**
**ಭವತ್ಪದಾಮ್ಭೋರುಹನಾವಮತ್ರ ತೇ**
**ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥೩೧॥**

ಪರಮಪ್ರಕಾಶಸ್ವರೂಪನಾದ ಪರಮಾತ್ಮನೇ! ನಿನ್ನ ಭಕ್ತಜನರು ಸಮಸ್ತಜಗತ್ತಿಗೂ ನಿಷ್ಕಪಟಪ್ರೇಮಿಗಳಾಗಿರುತ್ತಾರೆ. ಒಳ್ಳೆಯ ಹಿತೈಷಿ

ಗಳಾಗಿರುತ್ತಾರೆ. ಈ ಕಾರಣದಿಂದಲೇ ಅವರು ಕಷ್ಟದಿಂದ ದಾಟಲು ಸಾಧ್ಯವಾದ ಸಂಸಾರವನ್ನು ದಾಟುತ್ತಾರೆ ಮತ್ತು ಇತರರು ಸುಲಭವಾಗಿ ದಾಟಲೆಂಬ ಆಶಯದಿಂದ ನಿನ್ನ ಚರಣಕಮಲಗಳ ಭಕ್ತಿಯೆಂಬ ನೌಕೆಯನ್ನು ಇಲ್ಲಿಯೇ ಸ್ಥಾಪಿಸಿ ಹೋಗುತ್ತಾರೆ. ಆ ಸತ್ಪುರುಷರು ನಿನ್ನ ಕೃಪೆಗೆ ಪಾತ್ರರಾಗಿರುತ್ತಾರೆ. ಈ ಕಾರಣದಿಂದಲೇ ಇಂತಹ ಭಕ್ತರಿಗೆ ನೀನು ಅನುಗ್ರಹಸ್ವರೂಪವಾಗಿರುವೆ.*

**ಯೋಽನ್ಯೇಽರವಿನ್ದಾಕ್ಷ ವಿಮುಕ್ತಮಾನಿನ-**
**ಸ್ತ್ವಯ್ಯಸ್ತಭಾವಾದವಿಶುದ್ಧಬುದ್ಧಯಃ ।**
**ಆರುಹ್ಯ ಕೃಚ್ಛ್ರೇಣ ಪರಂ ಪದಂ ತತಃ**
**ಪತನ್ತ್ಯಧೋಽನಾದೃತಯುಷ್ಮದಙ್ಘ್ರಯಃ ॥೩೨॥**

ಅರವಿಂದಾಕ್ಷನೇ! ಕರ್ಮಮಾರ್ಗ-ಜ್ಞಾನಮಾರ್ಗಗಳನ್ನು ಹಿಡಿದಿರುವ ಕೆಲವರು ತಾವು ಮುಕ್ತರೆಂದು ಭಾವಿಸಿಕೊಂಡುಬಿಡುತ್ತಾರೆ. ಅಂತಹವರಿಗೆ ನಿನ್ನಲ್ಲಿ ಅನನ್ಯಭಕ್ತಿಯಿಲ್ಲದ ಕಾರಣ ಅವರ ಬುದ್ಧಿಯು ಶುದ್ಧವಾಗಿರುವುದಿಲ್ಲ. ಅತಿಕಷ್ಟದ ಸಾಧನೆಯಿಂದ ಅಂತಹವರು ಪರಮಪದವನ್ನು ಸೇರಿದರೂ ನಿನ್ನ ಪಾದಾರವಿಂದಗಳಲ್ಲಿ ಅವರ ಬುದ್ಧಿಯು ಆಸಕ್ತವಾಗದೇ ಇರುವುದರಿಂದ ಸ್ವಲ್ಪ ಕಾಲದಲ್ಲಿಯೇ ಅವರು ಹುಟ್ಟು-ಸಾವುಗಳ ರೂಪವಾದ ಸಂಸಾರದಲ್ಲಿ ಬೀಳುತ್ತಾರೆ.[1]

---

* ಗುರು-ಶಿಷ್ಯರ ವಿಷಯವನ್ನು ಈ ಶ್ಲೋಕದಲ್ಲಿ ಹೇಳಿದೆಯೆಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಗುರುಗಳು ಬಹಳ ಕಷ್ಟದಿಂದ ಸಂಸಾರಸಾಗರವನ್ನು ದಾಟಲು ಪರಮಾತ್ಮನ ಪಾದಾರವಿಂದಗಳನ್ನು ಕಂಡುಕೊಳ್ಳುತ್ತಾರೆ. ಅದಕ್ಕಾಗಿ ಕಠೋರವಾದ ಸಾಧನೆಮಾಡುತ್ತಾರೆ. ಕಾಯಕ್ಲೇಶಗಳನ್ನು ಅನುಭವಿಸುತ್ತಾರೆ. ಆದರೆ ಶಿಷ್ಯರಿಗೆ ಕೃಪಾಸಾಗರರಾದ ಆ ಗುರುಗಳು ಕೇವಲ ಅನುಗ್ರಹದಿಂದ ಸಂಸಾರವನ್ನು ದಾಟಿಸುವ ಪರಮಾತ್ಮನ ದಿವ್ಯಪಾದಾರವಿಂದಗಳನ್ನು ತೋರಿಸಿಬಿಡುತ್ತಾರೆ. ಪರಮಾತ್ಮನು ಕೂಡ ಗುರುಗಳ ಅನುಗ್ರಹವು ಹುಸಿಯಾಗದಂತೆ ಶಿಷ್ಯಭಕ್ತರ ಮೇಲೆ ಅನುಗ್ರಹವನ್ನು ತೋರಿಸುತ್ತಾನೆ.

1 ಗೀತೆಯಲ್ಲಿ ಶ್ರೀಕೃಷ್ಣನೂ ಇದನ್ನೇ ಹೇಳುತ್ತಾನೆ :

**ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।**
**ಅಪ್ರಾಪ್ಯ ಮಾಂ ನಿವರ್ತನ್ತೇ ಮೃತ್ಯುಸಂಸಾರವರ್ತ್ಮನಿ ॥** (ಭ. ಗೀ. ೯-೩)

**ತಥಾ ನ ತೇ ಮಾಧವ ತಾವಕಾಃ ಕ್ವಚಿ-**
**ದ್ಭ್ರಶ್ಯನ್ತಿ ಮಾರ್ಗಾತ್ತ್ವಯಿ ಬದ್ಧಸೌಹೃದಾಃ ।**
**ತ್ವಯಾಭಿಗುಪ್ತಾ ವಿಚರನ್ತಿ ನಿರ್ಭಯಾ**
**ವಿನಾಯಕಾನೀಕಪಮೂರ್ಧಸು ಪ್ರಭೋ ॥೩೩॥**

ಮಾಧವನೇ! ಪ್ರಭುವೇ! ಆದರೆ ನಿನ್ನಲ್ಲಿಯೇ ಸುದೃಢವಾಗಿಡಲ್ಪಟ್ಟ ಸೌಹೃದವುಳ್ಳವರು, ನಿನ್ನಲ್ಲಿ ನಿರತಿಶಯವಾದ ಭಕ್ತಿಯುಳ್ಳವರು, ಎಂದಿಗೂ ನಿನ್ನ ಸಾನ್ನಿಧ್ಯದಿಂದ ಭ್ರಷ್ಟರಾಗಿ ಕೆಳಗೆ ಬೀಳುವುದಿಲ್ಲ.* ಹುಟ್ಟು-ಸಾವುಗಳ ಸಂಸಾರಮಾರ್ಗವನ್ನು ಹಿಡಿಯುವುದಿಲ್ಲ. ನಿನ್ನಿಂದ ರಕ್ಷಿಸಲ್ಪಟ್ಟವರಾಗಿ ನಿನ್ನ ಅನುಗ್ರಹದಿಂದ ವಿಘ್ನದೇವತೆಗಳ ತಲೆಯನ್ನು ಮೆಟ್ಟಿ ನಿರ್ಭಯವಾಗಿ ಸಂಚರಿಸುತ್ತಾರೆ.

**ಸತ್ತ್ವಂ ವಿಶುದ್ಧಂ ಶ್ರಯತೇ ಭವಾನ್ ಸ್ಥಿತೌ**
**ಶರೀರಿಣಾಂ ಶ್ರೇಯ ಉಪಾಯನಂ ವಪುಃ ।**
**ವೇದಕ್ರಿಯಾಯೋಗತಪಃಸಮಾಧಿಭಿ-**
**ಸ್ತವಾರ್ಹಣಂ ಯೇನ ಜನಃ ಸಮೀಹತೇ ॥೩೪॥**

ನೀನು ಪ್ರಪಂಚದ ಚಾಲನೆಗಾಗಿ ಸಮಸ್ತಪ್ರಾಣಿಗಳಿಗೂ ಪರಮ ಕಲ್ಯಾಣಪ್ರದವಾದ, ವಿಶುದ್ಧವೂ, ಸತ್ತ್ವಮಯವೂ, ಸಚ್ಚಿದಾನಂದ ಮಯವೂ ಆಗಿರುವ ದಿವ್ಯಮಂಗಳವಿಗ್ರಹನಾಗಿ ಪ್ರಕಟಗೊಳ್ಳುವೆ.

---

ಯಾರಿಗೆ ಅನನ್ಯಭಕ್ತಿಧರ್ಮದಲ್ಲಿ ಶ್ರದ್ಧೆಯಿರುವುದಿಲ್ಲವೋ ಅಂತಹವರು ನನ್ನನ್ನು ಸೇರದೆಯೇ ಹುಟ್ಟು-ಸಾವುಗಳ ಮಾರ್ಗಕ್ಕೆ ಹಿಂದಿರುಗುತ್ತಾರೆ. ಆದುದರಿಂದ ಕರ್ಮಠನೇ ಆಗಿರಲಿ ; ಯೋಗಿಯೇ ಆಗಿರಲಿ ; ಜ್ಞಾನಿಯೇ ಆಗಿರಲಿ ; ಪರಮಾತ್ಮನ ವಿಷಯದಲ್ಲಿ ಅನನ್ಯಭಕ್ತಿಯುಳ್ಳವನಾಗಿರಬೇಕು.

**ಜೀವನ್ಮುಕ್ತಾ ಅಪಿ ಪುನರ್ಬನ್ಧನಂ ಯಾನ್ತಿ ಕರ್ಮಭಿಃ । ಯದ್ಯಚಿನ್ತ್ಯ ಮಹಾ ಶಕ್ತೌ ಭಗವತ್ಯಪರಾಧಿನಃ । ಜೀವನ್ಮುಕ್ತಾಃ ಪ್ರಪದ್ಯನ್ತೇ ಪುನಃ ಸಂಸಾರವಾಸ ನಾಮ್ । ಯೋಗಿನೋ ನ ವಿಲಪ್ಯನ್ತೇ ಕರ್ಮಭಿರ್ಭಗವತ್ಪರಾಃ ॥ ಅಚಿಂತ್ಯ**

---

* ಕೌನ್ತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ । (೯-೩೧)

ಅರ್ಜುನ! ನನ್ನ ಭಕ್ತನೆಂದಿಗೂ ವಿನಾಶಹೊಂದುವುದಿಲ್ಲ—ಎಂದು ಗೀತೆಯಲ್ಲಿ ಶ್ರೀಕೃಷ್ಣನು ಉದ್ಘೋಷಿಸಿದ್ದಾನೆ.

ಬ್ರಹ್ಮಚಾರಿಗಳು ವೇದಾಧ್ಯಯನದಿಂದಲೂ, ಗೃಹಸ್ಥರು ಯಜ್ಞ-ಯಾಗಾದಿಗಳಿಂದಲೂ, ವಾನಪ್ರಸ್ಥರು ಕೃಚ್ಛ್ರ-ಚಾಂದ್ರಾಯಣಾದಿವ್ರತಗಳಿಂದಲೂ, ಸಂನ್ಯಾಸಿಗಳು ಧ್ಯಾನಯೋಗದಿಂದಲೂ ನಿನ್ನನ್ನು ಆರಾಧಿಸಲು ಬಯಸುತ್ತಾರೆ.*

**ಸತ್ತ್ವಂ ನ ಚೇದ್ಧಾತರಿದಂ ನಿಜಂ ಭವೇ-**
**ದ್ವಿಜ್ಞಾನಮಜ್ಞಾನಭಿದಾಪಮಾರ್ಜನಮ್ ।**
**ಗುಣಪ್ರಕಾಶೈರನುಮೀಯತೇ ಭವಾ-**
**ನ್ಪ್ರಕಾಶತೇ ಯಸ್ಯ ಚ ಯೇನ ವಾ ಗುಣಃ ॥೩೫॥**

ಜಗತ್ಕರ್ತನೇ! ಭಗವಂತ! ನೀನು ಶುದ್ಧಸತ್ತ್ವಮಯವಾದ ದಿವ್ಯ ದೇಹದಿಂದ ಅವತರಿಸದಿದ್ದರೆ ಲೋಕದಲ್ಲಿ ಪ್ರಾಣಿಗಳಿಗೆ ಅಜ್ಞಾನವನ್ನು ತೊಲಗಿಸುವ ವಿಶೇಷಜ್ಞಾನವು (ಅಪರೋಕ್ಷಜ್ಞಾನವು) ಉಂಟಾಗುತ್ತಲೇ ಇರಲಿಲ್ಲ. 'ಜಡಗಳಾದ ಬುದ್ಧಿ ಮೊದಲಾದುವುಗಳಿಗೆ ಯಾವುದರಿಂದ ಪ್ರಕಾಶವುಂಟಾಗುವುದೋ ಅದೇ ಬ್ರಹ್ಮವು—ಎಂಬ ಜ್ಞಾನವು ಹುಟ್ಟುತ್ತದೆ. ಭಕ್ತಿಯು ಏಕೆ ಬೇಕು?'—ಎಂದು ಕೆಲವರು ತರ್ಕಿಸುತ್ತಾರೆ. ಆದರೆ ಬುದ್ಧಿ-ಇಂದ್ರಿಯ ಮೊದಲಾದುವುಗಳಿಗೆ ಸಾಕ್ಷಿಯೆಂದೂ ಪರಿಪೂರ್ಣನೆಂದೂ ನಿನ್ನನ್ನು ಊಹಿಸುವರೇ ಹೊರತು ಸಾಕ್ಷಾತ್ಕರಿಸಿಕೊಳ್ಳಲಾರರು. (ಅವ್ಯಕ್ತ ರೂಪವು ಧ್ಯಾನಕ್ಕೆ ಸಿಕ್ಕುವುದಿಲ್ಲ.) ಶುದ್ಧಸತ್ತ್ವಮೂರ್ತಿಯಾದ ನಿನ್ನನ್ನು ಅನನ್ಯಭಕ್ತಿಯಿಂದ ಸೇವಿಸುವವರು (ನಿನ್ನ ದಿವ್ಯಮಂಗಳಮೂರ್ತಿಯನ್ನು ಭಕ್ತಿಯಿಂದ ಹೃತ್ಕಮಲದಲ್ಲಿ ಧ್ಯಾನಮಾಡುವವರು) ಮಾತ್ರ ನಿನ್ನ ಅನು

---

ಮಹಿಮನಾದ ಭಗವಂತನಲ್ಲಿ ಭಕ್ತಿಯಿಲ್ಲದವರು ಜೀವನ್ಮುಕ್ತರಾಗಿದ್ದರೂ ಮರಳಿ ಕರ್ಮಗಳಿಂದ ಸಂಸಾರಬಂಧನಕ್ಕೆ ಸಿಕ್ಕುವರು. ಭಗವದ್ಭಕ್ತರಾದ ಯೋಗಿಗಳು ಕರ್ಮಗಳಿಗೊಳಪಡದೆಯೇ ಮುಕ್ತರಾಗುವರು. (ವೀರರಾಘವೀಯ)

* ಗೀತೆಯಲ್ಲಿ ಭಗವಂತನು : ಯಜ್ಞದಾನತಪಃಕರ್ಮ ನ ತ್ಯಾಜ್ಯಂ (೧೮-೩)

ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ । (೧೮-೫)

ಯಜ್ಞ-ದಾನ-ತಪಸ್ಸುಗಳನ್ನು ಬಿಡಬಾರದು. ಯಜ್ಞ-ದಾನ-ತಪಸ್ಸುಗಳು ಮನೀಷಿಗಳಾದವರಿಗೂ ಅಧ್ಯಾತ್ಮಮಾರ್ಗದಲ್ಲಿ ಮುಂದುವರಿದವರಿಗೂ ಪಾವನಗಳಾಗಿರುತ್ತವೆ—ಎಂದು ಹೇಳಿದ್ದಾನೆ.

ಗ್ರಹದಿಂದ ಬ್ರಹ್ಮಭೂತವಾದ ಅಂತಃಕರಣವೃತ್ತಿಯುಳ್ಳವರಾಗಿ ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳುವರು. ಆದುದರಿಂದ ಆತ್ಮಸಾಕ್ಷಾತ್ಕಾರವೆಂಬುದು ನಿನ್ನ ಭಕ್ತರಿಗೆ ಮಾತ್ರವೇ ಲಭಿಸುತ್ತದೆ.

**ನ ನಾಮರೂಪೇ ಗುಣಜನ್ಮಕರ್ಮಭಿ-**
**ರ್ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ।**
**ಮನೋವಚೋಭ್ಯಾಮನುಮೇಯವರ್ತ್ಮನೋ**
**ದೇವ ಕ್ರಿಯಾಯಾಂ ಪ್ರತಿಯನ್ತ್ಯಥಾಪಿ ಹಿ ॥೩೬॥**

ಭಗವಂತನೇ! ಪ್ರಭುವೇ! ಮನಸ್ಸಿನಿಂದಲೂ ವೇದವಾಣಿಯಿಂದಲೂ ನಿನ್ನ ಇರುವಿಕೆಯನ್ನು ಅನುಮಾನಿಸಬಹುದು. ಆದರೆ ಅವುಗಳ ಮೂಲಕ ನಿನ್ನ ದಿವ್ಯಸ್ವರೂಪವನ್ನು ನೋಡಲಾಗುವುದಿಲ್ಲ. ನೀನು ಮನಸ್ಸಿಗೂ, ವೇದವಾಕ್ಯಗಳಿಗೂ ಸಾಕ್ಷೀಭೂತನಾಗಿರುವೆ. ನಿನ್ನ ಗುಣ- ಕರ್ಮ-ಜನ್ಮವೇ ಮೊದಲಾದುವುಗಳ ತಿಳಿವಳಿಕೆಯಿಂದಲೂ ನಿನ್ನ ನಾಮಸ್ವರೂಪಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೂ ನಿನ್ನ ಭಕ್ತರು ಉಪಾಸನೆಯೇ ಮೊದಲಾದ ಕ್ರಿಯಾಯೋಗಗಳ ಮೂಲಕ ವಾಗಿ ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.*

**ಶೃಣ್ವನ್ಗೃಣನ್ಸಂಸ್ಮರಯಂಶ್ಚ ಚಿನ್ತಯ-**
**ನ್ನಾಮಾನಿ ರೂಪಾಣಿ ಚ ಮಙ್ಗಲಾನಿ ತೇ ।**
**ಕ್ರಿಯಾಸು ಯಸ್ತ್ವಚ್ಚರಣಾರವಿನ್ದಯೋ-**
**ರಾವಿಷ್ಟಚೇತಾ ನ ಭವಾಯ ಕಲ್ಪತೇ ॥೩೭॥**

ಯಾವ ಪುರುಷನು ನಿನ್ನ ಮಂಗಳಮಯಶುಭನಾಮಗಳನ್ನೂ

---

* ಶ್ರೀಕೃಷ್ಣನು ಗೀತೆಯಲ್ಲಿ : **ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ತ್ವತಃ । ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥** (೧೮-೫೫)

ನಾನು ಯಾರು? ಎಂತಹ ಪ್ರಭಾವವುಳ್ಳವನು?–ಎಂಬುದನ್ನು ಯಥಾವತ್ತಾಗಿ ಭಕ್ತನಾದವನಿಗೆ ಅನನ್ಯವಾದ ಭಕ್ತಿಭಾವದಿಂದ ಮಾತ್ರವೇ ತಿಳಿಯಲು ಸಾಧ್ಯವಾಗುತ್ತದೆ. ಹೀಗೆ ನನ್ನನ್ನು ಭಕ್ತಿಭಾವದಿಂದ ಯಥಾವತ್ತಾಗಿ ತಿಳಿದನಂತರವೇ ಪರಂಧಾಮಕ್ಕೆ ಹೋಗುತ್ತಾನೆ–ಎಂದು ಹೇಳುತ್ತಾನೆ.

ಮತ್ತು ರೂಪಗಳನ್ನೂ ಯಾವಾಗಲೂ ಕೇಳುತ್ತಿರುವನೋ, ಕೀರ್ತನ ಮಾಡುವನೋ, ನಿನ್ನ ದಿವ್ಯರೂಪವನ್ನು ಸ್ಮರಿಸಿ ಹೃನ್ಮಂದಿರದಲ್ಲಿರಿಸಿ ಧ್ಯಾನ ಮಾಡುವನೋ, ನಿನ್ನ ಚರಣಕಮಲಗಳ ಸೇವೆಯಲ್ಲಿಯೇ ಸದಾಕಾಲ ದಲ್ಲಿಯೂ ಮನಸ್ಸನ್ನು ತೊಡಗಿಸಿರುವನೋ–ಅಂತಹವನು ಹುಟ್ಟು-ಸಾವು ಗಳಿಂದ ಕೂಡಿದ ಸಂಸಾರಚಕ್ರದಲ್ಲಿ ಪುನಃ ಸಿಕ್ಕಿಕೊಳ್ಳಬೇಕಾಗುವುದಿಲ್ಲ.*

**ದಿಷ್ಟ್ಯಾ ಹರೇಽಸ್ಯಾ ಭವತಃ ಪದೋ ಭುವೋ**
**ಭಾರೋಽಪನೀತಸ್ತವ ಜನ್ಮನೇಶಿತುಃ ।**
**ದಿಷ್ಟ್ಯಾಙ್ಕಿತಾಂ ತ್ವತ್ಪದಕೈಃ ಸುಶೋಭನೈ-**
**ರ್ದ್ರಕ್ಷ್ಯಾಮ ಗಾಂ ದ್ಯಾಂ ಚ ತವಾನುಕಮ್ಪಿತಾಮ್ ॥**

ದುಃಖಗಳೆಲ್ಲವನ್ನೂ ಸಂಪೂರ್ಣವಾಗಿ ಹೋಗಲಾಡಿಸುವ ದಯಾ ಮಯನಾದ ಭಗವಂತನೇ! ನೀನು ಸರ್ವೇಶ್ವರನು. ಈ ಭೂಮಂಡಲವು ನಿನ್ನ ಚರಣಕಮಲವೇ ಆಗಿದೆ. ನೀನು ಅವತರಿಸಿದ ಮಾತ್ರದಿಂದಲೇ ಇವಳ ಭಾರವು ಕಡಿಮೆಯಾಗಿದೆ. ನಿನ್ನ ಸುಂದರವಾದ, ವಜ್ರಾಂಕುಶಾದಿ ಚಿಹ್ನೆಗಳಿಂದ ಕೂಡಿರುವ ಚರಣಕಮಲಗಳಿಂದ ವಿಭೂಷಿತವಾಗಿರುವ ಈ ಭೂಮಿಯನ್ನು ನೋಡುವ ನಾವೇ ಭಾಗ್ಯಶಾಲಿಗಳು. ಸ್ವರ್ಗಲೋಕವೂ ಮತ್ತು ಸ್ವರ್ಗದಲ್ಲಿರುವ ದೇವತೆಗಳೂ ನಿನ್ನ ಕೃಪಾವಿಶೇಷದಿಂದ ಕೃತಾರ್ಥರಾಗಿರುವುದನ್ನು ಭಾಗ್ಯವಶದಿಂದ ನಾವು ಕಾಣುತ್ತಿದ್ದೇವೆ.

**ನ ತೇಽಭವಸ್ಯೇಶ ಭವಸ್ಯಕಾರಣಂ**
**ವಿನಾ ವಿನೋದಂ ಬತ ತರ್ಕಯಾಮಹೇ ।**
**ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ**
**ಕೃತಾ ಯತಸ್ತ್ವಯ್ಯಭಯಾಶ್ರಯಾತ್ಮನಿ ॥೩೯॥**

---

* ಭಗವಂತನು ಗೀತೆಯಲ್ಲಿ :

**ಸತತಂ ಕೀರ್ತಯನ್ತೋ ಮಾಂ ಯತನ್ತಶ್ಚ ದೃಢವ್ರತಾಃ ।**
**ನಮಸ್ಯನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥** (೯-೧೪)

ಯಾವಾಗಲೂ ನನ್ನ ವೈಭವವನ್ನೇ ಕೊಂಡಾಡುತ್ತಾ, ದೃಢವ್ರತರಾಗಿ ನನ್ನ ಒಲುಮೆಯನ್ನು ಪಡೆಯಲು ಪ್ರಯತ್ನಿಸುತ್ತಾ, ನನ್ನನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತಾ, ಮಹಾತ್ಮರಾದವರು ನನ್ನನ್ನು ಅನವರತವಾಗಿ ಉಪಾಸಿಸುತ್ತಾರೆ.

ಈಶನೇ! ನೀನು ಹುಟ್ಟು-ಸಾವುಗಳಿಲ್ಲದವನು. ಆದರೆ ಈಗ ಮನುಷ್ಯನಾಗಿ ಹುಟ್ಟುತ್ತಿರುವೆ. ಇದರ ಕಾರಣವನ್ನು ನಾವು ಊಹಿಸುವುದಾದರೆ ನೀನು ಭೂಮಿಯಲ್ಲಿ ಹುಟ್ಟುವುದು ಮತ್ತು ಬೆಳೆಯುವುದು ನಿನ್ನ ಲೀಲಾವಿನೋದವೆಂದೇ ಹೇಳಬೇಕಾಗಿದೆ. ಸೃಷ್ಟಿ-ಸ್ಥಿತಿ-ಲಯಗಳು ನಿನ್ನ ಮಾಯೆಯಿಂದಲೇ ನಡೆಯುತ್ತವೆ. ಭಯರಹಿತವಾದ ಆಶ್ರಯವನ್ನು ದಯಪಾಲಿಸುವವನೇ! ಸಂಸಾರಿಯಾದರೂ ಸಾಮಾನ್ಯಜೀವನಂತೆ ನೀನು ಬದ್ಧನಲ್ಲ.

**ಮತ್ಸ್ಯಾಶ್ವಕಚ್ಛಪನೃಸಿಂಹವರಾಹಹಂಸ-**
**ರಾಜನ್ಯವಿಪ್ರವಿಬುಧೇಷು ಕೃತಾವತಾರಃ ।**
**ತ್ವಂ ಪಾಸಿ ನಸ್ತ್ರಿಭುವನಂ ಚ ಯಥಾಧುನೇಶ**
**ಭಾರಂ ಭುವೋ ಹರ ಯದೂತ್ತಮ ವನ್ದನಂ ತೇ ॥೪೦॥**

ಯದುಕುಲತಿಲಕನಾಗಲಿರುವ ಶ್ರೀಹರಿಯೇ! ಈ ಹಿಂದೆ ನೀನು ಮತ್ಸ್ಯ, ಹಯಗ್ರೀವ, ಕೂರ್ಮ, ನೃಸಿಂಹ, ವರಾಹ, ಹಂಸ, ರಾಜ, (ಶ್ರೀರಾಮ), ಬ್ರಾಹ್ಮಣ (ಪರಶುರಾಮ), ದೇವತೆ (ವಾಮನ) ಇವರಾಗಿ ಅವತರಿಸಿ ನಮ್ಮನ್ನೂ ಮತ್ತು ಮೂರು ಲೋಕಗಳನ್ನೂ ಹೇಗೆ ರಕ್ಷಿಸಿದೆಯೋ ಹಾಗೆಯೇ ಈಗಲೂ ಯದುಕುಲತಿಲಕನಾಗಿ ಅವತರಿಸಿ ಭೂಭಾರವನ್ನು ಇಳಿಸು. ನಿನಗೆ ನಮ್ಮ ನಮಸ್ಕಾರಗಳಿರಲಿ."

ಅನಂತರ ದೇವಕೀದೇವಿಯನ್ನು ಸಂಬೋಧಿಸಿ ಬ್ರಹ್ಮಾದಿಗಳು ಹೇಳುತ್ತಾರೆ :

**ದಿಷ್ಟ್ಯಾಮ್ಬ ತೇ ಕುಕ್ಷಿಗತಃ ಪರಃ ಪುಮಾ-**
**ನಂಶೇನ ಸಾಕ್ಷಾದ್ಭಗವಾನ್ಭವಾಯ ನಃ ।**
**ಮಾ ಭೂದ್ಭಯಂ ಭೋಜಪತೇರ್ಮುಮೂರ್ಷೋ-**
**ರ್ಗೋಪ್ತಾ ಯದೂನಾಂ ಭವಿತಾ ತವಾತ್ಮಜಃ ॥೪೧॥**

"ತಾಯೇ! ಸೌಭಾಗ್ಯವಶದಿಂದ ನಮ್ಮೆಲ್ಲರಿಗೂ ಕಲ್ಯಾಣವುಂಟು ಮಾಡುವುದಕ್ಕಾಗಿ ಭಗವಾನ್ ಪುರುಷೋತ್ತಮನು ಜ್ಞಾನ-ಬಲವೇ ಮೊದಲಾದ ಅಂಶಗಳೊಡನೆ ( ಪೂರ್ಣಸ್ವರೂಪನಾಗಿ ) ನಿನ್ನ ಗರ್ಭದಲ್ಲಿ

ದ್ದಾನೆ. ಸಾಯಲೇ ಸಿದ್ಧನಾಗಿ ನಿಂತಿರುವ ಭೋಜಪತಿಯಾದ ಕಂಸನಿಂದ ನಿನಗೆ ಯಾವ ವಿಧವಾದ ಭಯವೂ ಇಲ್ಲ. ನಿನ್ನ ಪುತ್ರನು ಯದುವಂಶದ ರಕ್ಷಣೆಮಾಡುತ್ತಾನೆ."

ಯಾವನ ರೂಪವನ್ನು ಇಂತಹುದೇ–ಎಂದು ನಿಶ್ಚಯಮಾಡಲು ಸಾಧ್ಯವಿಲ್ಲವೋ ಅಂತಹ ಪರಮಪುರುಷನನ್ನು ಹೀಗೆ ಸ್ತೋತ್ರಮಾಡಿದ ನಂತರ ಬ್ರಹ್ಮೇಶಪ್ರಮುಖರಾದ ದೇವತೆಗಳು ಸ್ವರ್ಗಕ್ಕೆ ತೆರಳಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩ನೆಯ ಅಧ್ಯಾಯ

## ಶ್ರೀಕೃಷ್ಣನ ಜನ್ಮ

ಶ್ರೀಶುಕರು ಹೇಳುತ್ತಾರೆ :

**ಅಥ ಸರ್ವಗುಣೋಪೇತಃ ಕಾಲಃ ಪರಮಶೋಭನಃ ।**
**ಯರ್ಹ್ಯೇವಾಜನಜನ್ಮರ್ಕ್ಷಂ ಶಾನ್ತರ್ಕ್ಷಗ್ರಹತಾರಕಮ್ ॥೧॥**

ಪರೀಕ್ಷಿತನೇ! ಏಕಾಗ್ರಚಿತ್ತನಾಗಿ ಕೇಳು. ಅನಂತರ ಸಮಸ್ತ ಗುಣಗಳಿಂದಲೂ ಸಂಪನ್ನವಾದ ಅತ್ಯಂತಶೋಭಾಯಮಾನವಾದ ಶುಭ ಸಮಯವು ಸನ್ನಿಹಿತವಾಯಿತು. ಅಂದು ಬ್ರಹ್ಮದೇವತಾತ್ಮಕವಾದ ರೋಹಿಣೀನಕ್ಷತ್ರವಿದ್ದಿತು. ಆಕಾಶದಲ್ಲಿ ಸಮಸ್ತವಾದ ಗ್ರಹ-ನಕ್ಷತ್ರ-ತಾರೆಗಳೂ ಶಾಂತವಾಗಿದ್ದುವು.

ದಿಕ್ಕುಗಳು ಸ್ವಚ್ಛವಾಗಿದ್ದುವು. ಪ್ರಸನ್ನವಾಗಿದ್ದುವು. ನಿರ್ಮಲವಾದ ಆಕಾಶದಲ್ಲಿ ತಾರೆಗಳು ಜಗ-ಜಗಿಸುತ್ತಿದ್ದುವು. ಭೂಮಂಡಲದ ದೊಡ್ಡ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ, ದೊಡ್ಡಿಗಳಲ್ಲಿಯೂ ಮಂಗಳಕರ ವಾದ ವಾತಾವರಣವಿದ್ದಿತು. ನದಿಗಳು ತಿಳಿಯಾದ ನೀರಿನಿಂದ ಕೂಡಿ ವೇಗವಾಗಿ ಪ್ರವಹಿಸುತ್ತಿದ್ದುವು. ಸರೋವರಗಳು ವಿಕಸಿತವಾದ ಕಮಲ-ಕನ್ನೈದಿಲೆಗಳಿಂದ ಶೋಭಿಸುತ್ತಿದ್ದುವು. ಅರಣ್ಯದಲ್ಲಿ ವೃಕ್ಷಗಳ ಸಾಲುಗಳು

ಫಲ-ಪುಷ್ಪಗಳ ಗೊಂಚಲುಗಳಿಂದ ರಾರಾಜಿಸುತ್ತಿದ್ದುವು. ಪಕ್ಷಿಗಳು ಅವುಗಳ ಮೇಲೆ ಕುಳಿತು ಚಿಲಿಪಿಲಿಗುಟ್ಟುತ್ತಿದ್ದುವು. ದುಂಬಿಗಳು ಝೇಂಕರಿಸುತ್ತಿದ್ದುವು. ಆ ಸಮಯದಲ್ಲಿ ವಾಯುವು ಸುಖಕರವಾಗಿಯೂ ಮಂದ-ಮಂದ ವಾಗಿಯೂ ಬೀಸುತ್ತಿದ್ದಿತು. ಪರಮಪವಿತ್ರವಾಗಿದ್ದಿತು. ಸುವಾಸನೆಯಿಂದ ಕೂಡಿದ್ದಿತು. ಲೋಕಕ್ಕೇ ಆಹ್ಲಾದವನ್ನುಂಟುಮಾಡುತ್ತಿದ್ದಿತು. ಬ್ರಾಹ್ಮಣರ ಮನೆಗಳಲ್ಲಿದ್ದ ಅಗ್ನಿಹೋತ್ರಾಗ್ನಿಗಳು ಸೌಮ್ಯವಾಗಿ ಉರಿಯುತ್ತಿದ್ದು ಪ್ರದಕ್ಷಿಣಾಕಾರವಾದ ಜ್ವಾಲೆಗಳಿಂದ ಕೂಡಿದ್ದುವು. ದೈತ್ಯದ್ರೋಹಿಗಳಾದ ದೇವತೆಗಳ ಮತ್ತು ಸತ್ಪುರುಷರ ಮನಸ್ಸುಗಳು ಪ್ರಸನ್ನವಾಗಿದ್ದುವು. ಅಂತಹ ಮಂಗಳಮಯಶುಭಸನ್ನಿವೇಶದಲ್ಲಿ ಪರಮಾತ್ಮನು ಆವಿರ್ಭವಿಸಿದನು. ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದುವು. ಗಂಧರ್ವ-ಕಿನ್ನರರು ಮಧುರಸ್ವರದಿಂದ ಗಾನಮಾಡುತ್ತಿದ್ದರು. ಸಿದ್ಧ-ಚಾರಣರು ಪರಮಾತ್ಮನ ಮಂಗಳಮಯವಾದ ಗುಣಗಳನ್ನು ಹೊಗಳುತ್ತಿದ್ದರು. ವಿದ್ಯಾಧರಿಯರು ಅಪ್ಸರೆಯರೊಡನೆ ಸೇರಿಕೊಂಡು ನಾಟ್ಯವಾಡುತ್ತಿದ್ದರು. ನಾರದರೇ ಮೊದಲಾದ ಮುನಿಗಳೂ ಇಂದ್ರನೇ ಮೊದಲಾದ ದೇವತೆಗಳೂ ಹೂಮಳೆ ಗರೆದರು. ಮೋಡಗಳು ಕಡಲ ಬಳಿ ಗಂಭೀರವಾಗಿ ಗುಡುಗುತ್ತಿದ್ದುವು. ಹುಟ್ಟು-ಸಾವುಗಳೆಂಬ ಸಂಸಾರಚಕ್ರದಿಂದ ವಿಮುಕ್ತಗೊಳಿಸಲು ಸಮರ್ಥ ನಾದ ಜನಾರ್ದನನು ಹುಟ್ಟಿದ ಸಮಯವು ರಾತ್ರಿಯಾಗಿದ್ದಿತು. ಸುತ್ತಲೂ ಗಾಢವಾದ ಕತ್ತಲೆಯು ಕವಿದಿದ್ದಿತು. ಅಂತಹ ಸಮಯದಲ್ಲಿ ಎಲ್ಲ ಪ್ರಾಣಿಗಳ ಹೃದಯದಲ್ಲೂ ವಿರಾಜಿಸುವ ವಿಷ್ಣುಭಗವಂತನು ಪೂರ್ವದಿಕ್ಕಿನಲ್ಲಿ ಹದಿನಾರು ಕಲೆಗಳಿಂದಲೂ ಕೂಡಿದ ಪೂರ್ಣಚಂದ್ರನು ಉದಯಿಸುವಂತೆ ದೇವರೂಪಿಣಿಯಾದ ದೇವಕೀದೇವಿಯ ಗರ್ಭದಲ್ಲಿ ಪ್ರಾದುರ್ಭವಿಸಿದನು.

ತನ್ನ ಮುಂದೆ ಅದ್ಭುತರೂಪಿನ ಬಾಲಕನಿದ್ದುದನ್ನು ವಸುದೇವನು ಕಂಡನು. ಆ ಮಗುವಿನ ಕಣ್ಣುಗಳು ಕಮಲದಂತೆ ವಿಶಾಲವಾಗಿಯೂ ಸುಕೋಮಲವಾಗಿಯೂ ಇದ್ದುವು. ಆ ಬಾಲಕನು ಸುಂದರವಾದ ನಾಲ್ಕು ಕೈಗಳಲ್ಲಿ ಶಂಖ-ಚಕ್ರ-ಗದಾ-ಪದ್ಮಗಳನ್ನು ಹಿಡಿದಿದ್ದನು. ಅವನ ವಕ್ಷಃಸ್ಥಳದಲ್ಲಿ ಸುಂದರವೂ ಸುವರ್ಣಮಯವೂ ಆದ ಶ್ರೀವತ್ಸದ ಮಚ್ಚೆಯಿದ್ದಿತು. ಬಾಲಕನ ಕತ್ತಿನಲ್ಲಿ ಕೌಸ್ತುಭಮಣಿಯು ಝಗ-ಝಗಿಸುತ್ತಿದ್ದಿತು. ವರ್ಷಾ

ಕಾಲದ ಶ್ಯಾಮಲಮೇಘಕ್ಕೆ ಸಮಾನವಾಗಿ ಶ್ಯಾಮಲವರ್ಣದಿಂದ ಕಂಗೊಳಿ ಸುತ್ತಿದ್ದ ಆತನ ಸುಂದರಶರೀರವು ಪೀತಾಂಬರದಿಂದ ಸಮಲಂಕೃತವಾಗಿ ದ್ದಿತು. ಬಹುಮೂಲ್ಯವಾದ ವೈಡೂರ್ಯಮಣಿಖಚಿತವಾದ ಕಿರೀಟದ ಮತ್ತು ಕರ್ಣಕುಂಡಲಗಳ ಕಾಂತಿಯಿಂದ ಬೆಳಗುತ್ತಿದ್ದ ಅವನ ಗುಂಗುರು ಕೂದಲುಗಳು ಸೂರ್ಯನ ಕಿರಣಗಳಂತೆಯೇ ಪ್ರಕಾಶಿಸುತ್ತಿದ್ದುವು. ಬಾಲಕನ ನಡುವಿನಲ್ಲಿ ಒಡ್ಯಾಣವೂ, ಕೈಗಳಲ್ಲಿ ಸುವರ್ಣಮಯವಾದ ಕೇಯೂರದ ತೋಳ್ಬಳೆಗಳೂ, ಕಾಲಿನಲ್ಲಿ ಕಾಲ್ಬಳೆಗಳೂ ಶೋಭಿಸುತ್ತಿದ್ದು ಅಂತಹ ಜಗದಾನಂದಕಂದನನ್ನು ವಸುದೇವನು ನೋಡಿದನು. ತನ್ನ ಪುತ್ರನ ರೂಪದಲ್ಲಿ ಭಗವಂತನೇ ಆಗಮಿಸಿರುವುದನ್ನು ನೋಡಿ ಆನಕದುಂದುಭಿಗೆ ಅಚ್ಚರಿಯಾಯಿತು. ಅಮಿತವಾದ ಆನಂದದಿಂದಾಗಿ ಅವನ ಕಣ್ಣುಗಳು ಕಮಲದಂತೆ ವಿಕಸಿತವಾದುವು. ಶ್ರೀಕೃಷ್ಣಾವತಾರೋತ್ಸವದ ಸಂಭ್ರಮದಲ್ಲಿ ವಸುದೇವನು ಆನಂದಸಾಗರದಲ್ಲಿ ಮಿಂದು ಬ್ರಾಹ್ಮಣರಿಗೆ ಹತ್ತುಸಾವಿರ ಗೋವುಗಳನ್ನು ಮನಸ್ಸಿನಿಂದಲೇ ದಾನಮಾಡಿದನು.*

ಪರೀಕ್ಷಿತನೇ! ಪರಮಪುರುಷನಾದ ಭಗವಂತನು ತನ್ನ ದಿವ್ಯವಾದ ಅಂಗಕಾಂತಿಯಿಂದಲೇ ಸೂತಿಕಾಗೃಹವನ್ನು ಬೆಳಗುತ್ತಿದ್ದನು. ಪರಮಪುರುಷ ನಾದ ಪರಮಾತ್ಮನೇ ತನಗೆ ಮಗನಾಗಿ ಹುಟ್ಟಿರುವನೆಂಬುದು ನಿಶ್ಚಯವಾದ

---

* ವಿಶ್ವನಾಥ ಚಕ್ರವರ್ತಿ ಠಾಕೂರರು ವಸುದೇವನ ಆಗಿನ ಸ್ಥಿತಿಯನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ವಸುದೇವನು ಬಾಲಕನನ್ನು ನೋಡಿದೊಡನೆಯೇ ಅಚ್ಚರಿಯಿಂದ ನಡುಗುತ್ತಿದ್ದನು. ಭಗವಂತನು ಸಾಮಾನ್ಯಬಾಲಕನಾಗಿ ಹುಟ್ಟಿರಲಿಲ್ಲ. ಚತುರ್ಭುಜದೊಡನೆ ಸಾಕ್ಷಾತ್ ಭಗವಂತನಾಗಿಯೇ ಹುಟ್ಟಿದ್ದನು. ಕಂಸನ ಸೆರೆಮನೆಯಲ್ಲಿ ಸ್ವಲ್ಪವಾದರೂ ಭಯವಿಲ್ಲದೆ ತೋರಿಕೊಂಡುದು ವಸುದೇವನ ಮೊದಲನೆಯ ಸೋಜಿಗವಾಗಿದ್ದಿತು. ಸರ್ವವ್ಯಾಪಿಯಾದ ಭಗವಂತನು ದೇವಕೀದೇವಿಯ ಗರ್ಭದಲ್ಲಿ ಹುಟ್ಟಿದ್ದು ಎರಡನೆಯ ಅಚ್ಚರಿ. ಕಿರೀಟಾಂಗದಕೇಯೂರಗಳಿಂದಲೂ ಪೀತಾಂಬರ ದಿಂದಲೂ ಸಮಲಂಕೃತನಾಗಿ ಹುಟ್ಟಿದುದು ಮೂರನೆಯ ಸೋಜಿಗ. ತನ್ನ ಉಪಾಸ್ಯದೇವನಾದ ಶ್ರೀಹರಿಯೇ ಮಗನಾಗಿ ಹುಟ್ಟಿದುದು ನಾಲ್ಕನೆಯ ಅಚ್ಚರಿ. ಕ್ಷತ್ರಿಯನಾದುದರಿಂದ ಹುಟ್ಟಿದೊಡನೆಯೇ ಜಾತಕರ್ಮವನ್ನು ಮಾಡಿ ಬ್ರಾಹ್ಮಣರಿಗೆ ದಾನಮಾಡಬೇಕಾಗಿದ್ದಿತು. ಆ ಕರ್ಮವನ್ನು ವಸುದೇವನು ಮನಸ್ಸಿನಲ್ಲಿಯೇ ಮಾಡಿ ಪೂರ್ಣಗೊಳಿಸಿದನು.

ನಂತರ ಭಗವಂತನ ಪ್ರಭಾವವನ್ನು ಸಂಪೂರ್ಣವಾಗಿ ತಿಳಿದಿದ್ದ ವಸುದೇವನು ಕಂಸನಿಂದುಂಟಾಗಿದ್ದ ಭಯವನ್ನು ದೂರೀಕರಿಸಿದನು. ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ ಭಗವಂತನ ಪಾದಾರವಿಂದಗಳಲ್ಲಿ ತನ್ನ ತಲೆಯನ್ನಿಟ್ಟು ಕೈಮುಗಿದುಕೊಂಡು ಅವನ ಸ್ತೋತ್ರಮಾಡಿದನು :

**ವಿದಿತೋಽಸಿ ಭವಾನ್ಸಾಕ್ಷಾತ್ಪುರುಷಃ ಪ್ರಕೃತೇಃ ಪರಃ ।**
**ಕೇವಲಾನುಭವಾನನ್ದಸ್ವರೂಪಃ ಸರ್ವಬುದ್ಧಿದೃಕ್ ॥೧೩॥**

"ದಯಾಮಯನೇ! ಪರಮಾತ್ಮ! ನೀನು ಪ್ರಕೃತಿಗೆ ಅತೀತನಾದ ಪುರುಷೋತ್ತಮನೆಂಬುದನ್ನು ನಾನು ತಿಳಿದಿದ್ದೇನೆ. ನಿನ್ನ ಸ್ವರೂಪವು ಕೇವಲ ಅನುಭವೈಕವೇದ್ಯವಾದುದು ಮತ್ತು ಆನಂದಮಯವಾದುದು. ಸಮಸ್ತರ ಬುದ್ಧಿಗಳಿಗೂ ನೀನು ಸಾಕ್ಷಿಯಾಗಿರುವೆ.*

**ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾಗ್ರೇ ತ್ರಿಗುಣಾತ್ಮಕಮ್ ।**
**ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ ॥೧೪॥**

---

* ಸತ್ಯಂ ಜ್ಞಾನಮನನ್ತಂ ಬ್ರಹ್ಮ-ವಿಜ್ಞಾನಮಾನನ್ದಂ ಬ್ರಹ್ಮ-ಯತೋ ವಾ ಇಮಾನಿ ಭೂತಾನಿ–ಇತ್ಯಾದಿ ವೇದಾಂತವಾಕ್ಯಗಳಿಂದ ತಿಳಿಯಲ್ಪಡತಕ್ಕವನಾಗಿಯೂ ಸ್ವರೂಪ ದಿಂದಲೂ, ಸ್ವಭಾವದಿಂದಲೂ, ಪ್ರಕೃತಿ-ಪುರುಷವಿಲಕ್ಷಣನಾಗಿಯೂ ಇರುವ ಯಾವ ಬ್ರಹ್ಮವಸ್ತುವುಂಟೋ ಅದೇ ನೀನೆಂದು ತಿಳಿದನು. ಇಲ್ಲಿ ಪ್ರಕೃತಿ ಶಬ್ದಕ್ಕೆ ಪ್ರಕೃತಿ-ಪುರುಷರೆಂದರ್ಥ. (ವೀರರಾಘವೀಯ)

ಬ್ರಹ್ಮವಸ್ತುವೆಂದಿಗೂ ಇಂದ್ರಿಯಗಳಿಗೆ ಗೋಚರವಲ್ಲವಾದುದರಿಂದ **ವಿದಿತೋಽಸಿ ಭಗವಾನ್ ಸಾಕ್ಷಾತ್**–ನಿನ್ನನ್ನು ಪ್ರತ್ಯಕ್ಷವಾಗಿ ಕಂಡೆನು–ಎಂಬ ವಸುದೇವನ ಮಾತು ಸಂಗತವಲ್ಲ–ಎಂದು ಶಂಕಿಸಬಹುದು. ಆದರೆ ಷಾಡ್ಗುಣ್ಯಪೂರ್ಣನೂ ಅಚಿಂತ್ಯ ಮಹಿಮನೂ ಆದ ಭಗವಂತನಿಗೆ ಪ್ರತ್ಯಕ್ಷಾದಿ ವ್ಯವಹಾರಗಳು ಅಸಂಭವಗಳಲ್ಲ. (ಸುಬೋಧಿನೀ)

'ದುರಾತ್ಮನಾದ ಕಂಸನು ಮೊದಲಿನಂತೆಯೇ ಈ ಮಗುವನ್ನು ಕೊಲ್ಲುವ ನಲ್ಲಾ?'–ಎಂದು ಹೆದರುತ್ತಿರುವ ನನಗೆ ಧೈರ್ಯವನ್ನುಂಟುಮಾಡುವುದಕ್ಕಾಗಿ ನೀನು ನನಗೆ ನಿಜರೂಪದಿಂದ ದರ್ಶನವಿತ್ತೆಯೇ ಹೊರತು ಬೇರೆಯಲ್ಲ. (ಸಾರಾರ್ಥದರ್ಶಿನೀ)

ಜ್ಞಾನಿಯಾದ ಭಕ್ತನು ಭಗವಂತನಿಗೆ ಅತಿಪ್ರಿಯನಾದುದರಿಂದ ಭಗವತ್‌ಸ್ವರೂಪ ವರ್ಣನದಲ್ಲಿ ವಸುದೇವನಿಗೆ ಅಧಿಕಾರವುಂಟೆಂದು ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ.
(ಸಿದ್ಧಾಂತದೀಪಿಕಾ)

ದೇವದೇವ! ಜ್ಞಾನಾನಂದಮಯನಾದ ನೀನು ಸೃಷ್ಟಿಯ ಆದಿಯಲ್ಲಿ ಪ್ರಕೃತಿಯಿಂದ ತ್ರಿಗುಣಮಯವಾದ ಈ ಜಗತ್ತನ್ನು ಸೃಷ್ಟಿಸಿದೆ. ತ್ರಿಗುಣಾತ್ಮಕವಾದ ಪ್ರಪಂಚದಲ್ಲಿ ಪ್ರವೇಶಿಸಿರದಿದ್ದರೂ ಪ್ರವೇಶಿಸಿರುವಂತೆ ಭಾವಿಸಲ್ಪಡುವೆ.* (ಸೂರ್ಯಬಿಂಬವು ನೀರಿನಲ್ಲಿ ಪ್ರವೇಶಿಸದಿದ್ದರೂ ಪ್ರತಿಫಲಿಸಿದ ಮಾತ್ರದಿಂದಲೇ ನೀರಿನಲ್ಲಿ ಪ್ರವೇಶಿಸಿರುವಂತೆ ಕಾಣುತ್ತದೆ. ನೀರಿನಲ್ಲುಂಟಾಗುವ ಚಲನಾದಿ ವಿಕಾರಗಳಿಗೆ ಒಳಪಟ್ಟಿರುವಂತೆ ಕಾಣುತ್ತದೆ. ಆದರೆ ವಾಸ್ತವವಾಗಿ ಸೂರ್ಯಬಿಂಬವು ನೀರಿನಲ್ಲಿ ಪ್ರವೇಶಿಸಿರುವುದಿಲ್ಲ. ಹಾಗೆಯೇ ಪರಮಾತ್ಮನು ತಾನು ಸೃಷ್ಟಿಸಿದ ತ್ರಿಗುಣಾತ್ಮಕವಾದ ಜಗತ್ತಿನಲ್ಲಿ ಪ್ರವೇಶಿಸಿರುವಂತೆ ಭಾವಿಸಲ್ಪಡುತ್ತಾನೆ. ಆದರೆ ಅವನು ಪ್ರವೇಶಿಸಿರುವುದಿಲ್ಲ.)

**ಯಥೇಮೇಽವಿಕೃತಾ ಭಾವಾಸ್ತಥಾ ತೇ ವಿಕೃತೈಃ ಸಹಃ ।**
**ನಾನಾವೀರ್ಯಾಃ ಪೃಥಗ್ಭೂತಾ ವಿರಾಜಂ ಜನಯನ್ತಿ ಹಿ ॥೧೫॥**

**ಸನ್ನಿಪತ್ಯ ಸಮುತ್ಪಾದ್ಯ ದೃಶ್ಯನ್ತೇಽನುಗತಾ ಇವ ।**
**ಪ್ರಾಗೇವ ವಿದ್ಯಮಾನತ್ವಾನ್ನ ತೇಷಾಮಿಹ ಸಮ್ಭವಃ ॥೧೬॥**

ನಿರ್ವಿಕಾರಗಳೆನಿಸಿದ ಮಹತ್ತು, ಅಹಂಕಾರ, ಪಂಚತನ್ಮಾತ್ರೆ–ಎಂಬ ಈ ಏಳು ತತ್ತ್ವಗಳು ಪ್ರತ್ಯೇಕವಾಗಿರುವಾಗ ಹಲವು ಬಗೆಯಾದ ಸಾಮರ್ಥ್ಯವನ್ನು ಹೊಂದಿರುತ್ತವೆ. ಆದರೆ ಇವುಗಳಿಂದ ವಿಶೇಷವಾದ ಕಾರ್ಯಗಳು ಸಾಧ್ಯವಾಗುವುದಿಲ್ಲ. ಇವುಗಳು ಏಕೀಭವಿಸಿದಾಗ ಏಕಾದಶೇಂದ್ರಿಯ ಪಂಚ ಮಹಾಭೂತಗಳೆಂಬ ಷೋಡಶವಿಕಾರಗಳೊಡನೆ ವಿರಾಡ್‌ದೇಹವೆನಿಸಿದ

---

* ಎಲೈ ಸ್ವಾಮಿಯೇ! ಮಾಯಾತೀತನಾಗಿ ಜಗತ್ಕಾರಣನೆನಿಸಿರುವ ಆ ನೀನೇ ತರುವಾಯ ನಿನ್ನ ಶರೀರಭೂತವಾದ ಪ್ರಕೃತಿಯಿಂದ ಈ ಸ್ಥೂಲ ಚಿದಚಿತ್ಪ್ರಪಂಚವನ್ನು ಸೃಜಿಸಿ ಸಂಕಲ್ಪರೂಪದಿಂದ ಅದನ್ನು ಒಳಹೊಕ್ಕಿದ್ದರೂ ಈ ಜಗತ್ತಿನ ವಿಕಾರಕ್ಕೆ ಒಳಗಾಗದವನಂತೆ ಕಾಣುವೆ. (ವೀರರಾಘವೀಯ)

ಪರಮಾತ್ಮನು ಸಾಕ್ಷಿರೂಪದಿಂದಿದ್ದರೂ ಉದಾಸೀನನಲ್ಲ. ಆತನೇ ಜಗತ್ಕರ್ತನು. ಜಗತ್ತಿನ ಹೊರಗೂ ಒಳಗೂ ಸಹ ಇರುವುದರಿಂದ ಒಳಹೊಕ್ಕಿರುವವನೆಂದೂ ಇಲ್ಲವೆಂದೂ ಸಹ ಹೇಳಬಹುದು. ಬಹಿಶ್ಚ ವಿದ್ಯಮಾನತ್ವಾದಪ್ರವಿಷ್ಟೋ ಜಗತ್ಪತಿಃ । **ಪ್ರವಿಷ್ಟವಚ್ಚ ತತ್ರೈವ ಪೂರ್ಣರೂಪತ್ವತೋ ವಿಭುಃ ॥** (ವಿಜಯಧ್ವಜೀಯ)

ಭಗವಂತನೇ! ನಿನ್ನ ಮಾಯೆಯಿಂದ ಸೃಜಿಸಲ್ಪಟ್ಟ ಈ ಜಗತ್ತಿನ ಒಳಗೂ ಹೊರಗೂ

ಬ್ರಹ್ಮಾಂಡವನ್ನೇ ಸೃಷ್ಟಿಸುವುವು. ವಿರಾಡ್ದೇಹದಲ್ಲಿ ತಾವೂ ಇರುವಂತೆ ತೋರುವುವು. ಆದರೆ ದಿಟವಾಗಿ ಯೋಚಿಸಿದಲ್ಲಿ ಬ್ರಹ್ಮಾಂಡವು ಹುಟ್ಟುವುದಕ್ಕೂ ಮೊದಲೇ ಕಾರಣರೂಪವಾಗಿ ಮಹದಾದಿಗಳು ಇದ್ದುವು. ಹಾಗೆಯೇ ಸೃಷ್ಟಿಗೆ ಮೊದಲೂ ಎಲ್ಲ ವಸ್ತುಗಳಲ್ಲಿಯೂ ಪರಮಾತ್ಮನಿದ್ದನು. ಸೃಷ್ಟಿಯಾದನಂತರ ಅನುಪ್ರವಿಷ್ಟನಾಗಿರುವಂತೆ ಕಾಣುತ್ತಾನೆಯೇ ಹೊರತು, ಅವನಲ್ಲಿ ಹೊಸದಾಗಿ ಬಂದು ಸೇರಿದನೆಂಬ ಅಭಿಪ್ರಾಯವಿಲ್ಲ.*

ಏವಂ ಭವಾನ್ಬುದ್ಧ್ಯನುಮೇಯಲಕ್ಷಣೈ-
ರ್ಗ್ರಾಹ್ಯೈರ್ಗುಣೈಃ ಸನ್ನಪಿ ತದ್ಗುಣಾಗ್ರಹಃ ।
ಅನಾವೃತತ್ವಾದ್ಬಹಿರನ್ತರಂ ನ ತೇ
ಸರ್ವಸ್ಯ ಸರ್ವಾತ್ಮನ ಆತ್ಮವಸ್ತುನಃ ॥೧೭॥

ನೀನು ಬುದ್ಧಿವೃತ್ತಿಗಳಿಂದ ಊಹಿಸಲ್ಪಡಬಹುದಾದ, ಇಂದ್ರಿಯಗಳಿಂದ ಗ್ರಹಿಸಲ್ಪಡುವ ರೂಪಾದಿಗಳೊಡನೆಯೇ ನೆಲೆಸಿದ್ದರೂ ಆ ಇಂದ್ರಿಯಗಳಿಗೆ ರೂಪಾದಿಗಳು ಗೋಚರಿಸುವಂತೆ ನೀನು ಗೋಚರಿಸುವುದಿಲ್ಲ. ಸರ್ವಾಂತರ್ಯಾಮಿಯೂ, ಸರ್ವಸ್ವರೂಪನೂ, ಸರ್ವವ್ಯಾಪಕನೂ, ಮಾಯಾತೀತನೂ ಆದ ನಿನಗೆ ಒಳಗೆ-ಹೊರಗೆಂಬ ಭೇದವೂ ಇಲ್ಲ .ಹೀಗಿರು

---

ನೀನೇ ನೆಲೆಸಿರುವುದರಿಂದ ಒಳಹೊಕ್ಕಂತೆಯೂ ಇಲ್ಲದಂತೆಯೂ ಸಹ ತೋರುವೆ. ಇಂತು ಸರ್ವಗತನಾದ ನೀನು ನನ್ನ ಮನೆಯಲ್ಲಿ ಹುಟ್ಟಿದೆಯೆಂಬುದೂ ನಿತ್ಯ ಸಿದ್ಧನಾದ ನೀನು ಜನಿಸಿದೆಯೆಂಬುದೂ ವಿಡಂಬನವೇ ಸರಿ. (ಸಾರಾರ್ಥದರ್ಶಿನೀ)

ಸಚ್ಚಿದಾನಂದರೂಪನಾದ ನೀನು ನಿನ್ನ ಶಕ್ತಿಯಿಂದ ಕಲ್ಪಿತವಾದ ಜಗತ್ತಿನಲ್ಲಿ ಪ್ರವೇಶಿಸಿರುವುದೇ ದಿಟ. ಆದರೂ ಸರ್ವಕಾರಣನಾದ ನೀನು ಎಲ್ಲೆಲ್ಲಿಯೂ ಇರುವುದರಿಂದ ಪ್ರವೇಶಿಸಿದವನಂತೆ ಕಾಣುವೆ. (ಸಿದ್ಧಾಂತದೀಪಿಕಾ)

* ಮಣ್ಣಿನ ಗಡಿಗೆಯನ್ನು ಮಾಡಿದನಂತರ ಅಲ್ಲಿ ಮಣ್ಣು ಪ್ರವೇಶಿಸಿತೆಂದು ಯಾರಾದರೂ ಹೇಳುವರೇ? ಮಣ್ಣಿಲ್ಲದಿದ್ದರೆ ಗಡಿಗೆಯನ್ನು ಮಾಡಲು ಸಾಧ್ಯವೇ ಇಲ್ಲ. ಆದುದರಿಂದ ಮಣ್ಣು ಮೊದಲಿನಿಂದಲೂ ಇದೆ. ಮಣ್ಣಿನ ಪರಿಚಯವಿರದ ಬಾಲಕನು ಮಡಕೆಯನ್ನು ನೋಡಿ ಮಣ್ಣಲ್ಲವೆಂದು ಹೇಳಬಹುದು. ಆದರೆ ವಿಷಯವನ್ನು ತಿಳಿದಿರುವವನಿಗೆ ಮಡಕೆಯೂ ಮಣ್ಣೇ. ಆದುದರಿಂದ ಬ್ರಹ್ಮಾಂಡದ ಸೃಷ್ಟಿಗೆ ಮೊದಲೂ ಮಹದಾದಿ ಕಾರಣತತ್ತ್ವಗಳಿದ್ದೇ ಇದ್ದುವು.

ವಾಗ ನೀನು ಪ್ರವೇಶಿಸುವುದೆಲ್ಲಿಗೆ? ಪ್ರವೇಶಿಸುವೆಯೆಂಬ ಪ್ರಶ್ನೆಯೇ ಇಲ್ಲ. ಆದರೂ ಪ್ರವೇಶಮಾಡಿರುವಂತೆ ಭಾಸವಾಗುತ್ತದೆ.*

**ಯ ಆತ್ಮನೋ ದೃಶ್ಯಗುಣೇಷು ಸನ್ನಿತಿ**
**ವ್ಯವಸ್ಯತೇ ಸ್ವವ್ಯತಿರೇಕತೋಽಬುಧಃ ।**
**ವಿನಾನುವಾದಂ ನ ಚ ತನ್ಮನೀಷಿತಂ**
**ಸಮ್ಯಗ್ಯತಸ್ತ್ಯಕ್ತಮುಪಾದದತ್ಪುಮಾನ್ ॥೧೮॥**

ಯಾವನು ತನ್ನ ಕಣ್ಣಿಗೆ ಕಾಣುವ ಪದಾರ್ಥಗಳನ್ನು (ಮನೆ-ಮಠ-ಭೂಮಿ-ಕಾಣಿ-ಐಶ್ವರ್ಯ-ನೆಂಟರಿಷ್ಟರು ಮುಂತಾದುವು) ಸತ್ಯವಸ್ತುಗಳೆಂದು ಭಾವಿಸುವನೋ ಅವನು ಮೂಢನೇ ಸರಿ. ಭೋಗಸಾಮಗ್ರಿಗಳೆಲ್ಲವೂ ಬರಿಯ ಮಾತೇ ಹೊರತು ಪರಮಾರ್ಥವಲ್ಲವೆಂದು ನಿಶ್ಚಯಿಸಲ್ಪಟ್ಟಿರುವುದರಿಂದ ಅವುಗಳನ್ನು ಸತ್ಯವೆಂದು ನಂಬುವವನು ವಿವೇಕಿಯಲ್ಲ.[1]

**ತ್ವತ್ತೋಽಸ್ಯ ಜನ್ಮಸ್ಥಿತಿ ಸಂಯಮಾನ್ವಿಭೋ**
**ವದನ್ತ್ಯನೀಹಾದಗುಣಾದವಿಕ್ರಿಯಾತ್ ।**
**ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ**
**ತ್ವದಾಶ್ರಯತ್ವಾದುಪಚರ್ಯತೇ ಗುಣೈಃ ॥೧೯॥**

---

* ಶ್ರೀಕೃಷ್ಣನು ಗೀತೆಯಲ್ಲಿ :

**ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।**
**ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥** (೯-೪)

ಅವ್ಯಕ್ತರೂಪನಾದ ನನ್ನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ಇಲ್ಲಿರುವ ಸಮಸ್ತ ಜೀವರಾಶಿಗಳೂ ನನ್ನಲ್ಲಿವೆ. ಆದರೆ ನಾನು ಅವುಗಳಲ್ಲಿಲ್ಲ–ಎಂದು ಹೇಳುತ್ತಾನೆ.

1 ಎಲೈ ಭಗವಂತನೇ! ನೀನು ನಿರಂತರವೂ ನಿನ್ನ ಯಾಥಾತ್ಮ್ಯವನ್ನು ಬಲ್ಲವ ನಾದುದರಿಂದ ಸಕಲಭುವನಗಳಲ್ಲಿಯೂ ಅಂತರಾತ್ಮನಾಗಿ ನೆಲೆಸಿದ್ದರೂ, ಆ ದೋಷಗಳಿಗೆ ಒಳಪಡದವನೆಂದೂ, ಜ್ಞಾನಾನಂದಸ್ವರೂಪನೆಂದೂ, ನಿರ್ವಿಕಾರನೆಂದೂ ತಿಳಿದಿರುವೆಯಾದ ಕಾರಣ ಸರ್ವಜ್ಞನೆಂದರೆ ನೀನೇ ಸರಿ. ದೇಹಾತ್ಮಭ್ರಾಂತಿಯಿಂದ 'ನಾನು ಹುಡುಗನು, ನಾನು ಮುದುಕನು'–ಎಂದು ತಿಳಿಯುವ ಜೀವನ ನಿಶ್ಚಯವು ಅನುವಾದ ಮಾತ್ರವೇ ಹೊರತು ಸರಿಯಲ್ಲ. (ವೀರರಾಘವೀಯ)

ಪರಮಾತ್ಮನೇ! ನೀನು ದೃಶ್ಯಗಳಾದ ಶರೀರಾದಿಗಳಲ್ಲಿ ಸನ್ನಿಹಿತವಾಗಿರುವುದರಿಂದ

**ಪ್ರಭುವೇ! ನಿನ್ನನ್ನು ನಿರ್ಗುಣನೆಂದೂ ನಿರ್ವಿಕಾರನೆಂದೂ ನಿಷ್ಕ್ರಿಯನೆಂದೂ ಹೇಳುತ್ತಾರೆ. ಆದರೆ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳು ನಿನ್ನಿಂದಲೇ ನಡೆಯುತ್ತವೆ. ನಿರಪೇಕ್ಷನಾದ ನಿನಗೆ ಕರ್ತೃತ್ವವಿರಬಾರದು. ಕರ್ತೃತ್ವವಿದ್ದರೆ ನಿರಾಕಾರನಾಗಲಾರೆ. ಆದರೆ ಈ ಎರಡೂ ನಿನ್ನಲ್ಲಿವೆ. ನೀನು ಪರಬ್ರಹ್ಮಸ್ವರೂಪದಿಂದ ಕರ್ತೃತ್ವಾದಿಗಳು ಇಲ್ಲದವನಾಗುವೆ. ಈಶ್ವರಸ್ವರೂಪ ದಿಂದ ಕರ್ತೃತ್ವಾದಿಗಳನ್ನು ಪಡೆಯುವೆ. ನೀನು ನಿರ್ಗುಣನೂ ಹೌದು. ಸಗುಣನೂ ಹೌದು. ನಿರ್ವಿಕಾರನೂ ಹೌದು. ಸಾಕಾರನೂ ಹೌದು. ಅಕರ್ತೃತ್ವಾದಿಗಳು ನಾಯಕನಾದ ರಾಜನಲ್ಲಿ ಆರೋಪಿತವಾಗುವಂತೆ– ಸತ್ತ್ವಾದಿಗುಣಗಳಿಂದ ಮಾಡಲ್ಪಡುವ ಸೃಷ್ಟ್ಯಾದಿ ಕಾರ್ಯಗಳೂ ಆ ಗುಣಗಳಿಗೆ ಆಶ್ರಯನಾದ ನಿನ್ನಲ್ಲಿ ಆರೋಪಿಸಲ್ಪಡುವುವು.**

---

ಅಜ್ಞಾನಿಗಳು 'ಜೀವನೇ ಪರಮಾತ್ಮನು'–ಎಂದು ಅಭೇದವಾಗಿ ನಿನ್ನನ್ನು ತಿಳಿಯುವರು. ಇದು ವೇದವಿರುದ್ಧವು. ವೇದಮಂತ್ರಾರ್ಥವು ಹೀಗಿದೆ: ಈ ಜಗತ್ತೆಲ್ಲಾ ಒಂದಾಗಿ ಬರಲಿ ; ಅಥವಾ ಎರಡಾಗಿ ಎದುರಾಗಲೀ ; ನಾನು ಗೆಲ್ಲುವೆನು. ಮೂವರಾದರೂ ಬರಲಿ ; ಕಣದಲ್ಲಿ ಧಾನ್ಯಗಳನ್ನು ತುಳಿಸುವಂತೆ ತುಳಿಸಿಹಾಕುವೆನು. ಅವರೊಂದು ವೇಳೆ ಗೆಲ್ಲುವುದಕ್ಕೆ ಕೈಲಾಗದೆ ಜೀವನಿಗೂ ನನಗೂ ಭೇದವಿಲ್ಲವೆಂದು ದೂರಬಹುದು. ಆದರೇನು? ಅಭೇದವೆಂದು ದೂರುವವರಿಗೆ ಅಂಧತಮಸ್ಸೆಂಬ ನರಕವೂ ಭೇದದಿಂದ ತಿಳಿಯುವವರಿಗೆ ಸ್ವಪ್ರಕಾಶವಾದ ಪರಮಪದವೂ ವಿಹಿತವಾಗಿಯೇ ಇರುವುದು. **ಪ್ರವಿಷ್ಟತ್ವಾಚ್ಛರೀರೇಷು ಜೀವ ಏವೇತಿ ದುರ್ಧಿಯಃ। ಮನ್ಯನ್ತೇ ಪರಮಾತ್ಮಾನಂ ನ ತನ್ಮತಮನುವ್ರಜೇತ್ ॥** ಶರೀರಾದಿಗಳಲ್ಲಿ ಪ್ರವೇಶಿಸಿರುವುದರಿಂದ ಜೀವನೆಂದೇ ಪರಮಾತ್ಮನನ್ನು ದುರ್ಬುದ್ಧಿಗಳು ತಿಳಿಯುವರು. ಅವರ ಮತವನ್ನು ಅನುಸರಿಸಬಾರದು. (ವಿಜಯಧ್ವಜೀಯ)

ಈ ಜಗತ್ತೆಂಬುದು ದ್ರಷ್ಟೃವಾದ ಜೀವಾತ್ಮನಿಗಿಂತಲೂ ಬೇರೆಯಾಗಿ ಕಾಣಲ್ಪಡು ವುದಿಲ್ಲವೆನ್ನುವಾಗ ಸರ್ವಪ್ರಕಾಶನಾದ ಪರಮಾತ್ಮನಿಗಿಂತಲೂ ಬೇರೆಯಲ್ಲವೆಂದು ಹೇಳುವುದೇಕೆ? (ಕ್ರಮಸಂದರ್ಭ)

ಯಾವನು ತನಗಿಂತಲೂ ಬೇರೆಯಾದ ಸ್ರಕ್ಚಂದನಾದಿ ಭೋಗವಸ್ತುಗಳಲ್ಲಿ ಪರಮಾರ್ಥಬುದ್ಧಿಯನ್ನಿಡುವನೋ ಅವನು ಮೂರ್ಖನೇ ಸರಿ. ಭೋಗ್ಯವಸ್ತುಗಳೇ ಪರಮಾರ್ಥವೆಂದು ನಂಬಿ ತಾನೇ ಪಂಡಿತನೆಂದು ಹೆಮ್ಮೆಗೊಳ್ಳುವ ಮೀಮಾಂಸಕನ ಹೇಳಿಕೆಯು ಕೂಡ ಪ್ರಸಾರ ಮಾತ್ರವೇ ಹೊರತು ಯುಕ್ತವಲ್ಲ. (ಸಾರಾರ್ಥದರ್ಶಿನೀ)

ಸ ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ
ಬಿಭರ್ಷಿ ಶುಕ್ಲಂ ಖಲು ವರ್ಣಮಾತ್ಮನಃ ।
ಸರ್ಗಾಯ ರಕ್ತಂ ರಜಸೋಪಬೃಂಹಿತಂ
ಕೃಷ್ಣಂ ಚ ವರ್ಣಂ ತಮಸಾ ಜನಾತ್ಯಯೇ ॥೨೦॥

ಭಗವಂತ! ಪರಬ್ರಹ್ಮಸ್ವರೂಪನಾದ ನೀನೇ ನಿನ್ನ ಮಾಯೆಯಿಂದ ಮೂರು ಲೋಕಗಳನ್ನೂ ರಕ್ಷಿಸುವುದಕ್ಕಾಗಿ ಬಿಳಿಯದಾದ ಸತ್ತ್ವಗುಣವನ್ನೂ, ಸೃಷ್ಟಿಗಾಗಿ ಕೆಂಪಾದ ರಜೋಗುಣವನ್ನೂ, ಸಂಹಾರಕ್ಕಾಗಿ ಕಪ್ಪಾದ ತಮೋಗುಣವನ್ನೂ ಧರಿಸಿ ವಿಷ್ಣು-ಬ್ರಹ್ಮ-ರುದ್ರರೆಂಬ ಅಭಿಧಾನವನ್ನು ಪಡೆಯುವೆ.




ತ್ವಮಸ್ಯ ಲೋಕಸ್ಯ ವಿಭೋ ರಿರಕ್ಷಿಷು-
ರ್ಗೃಹೇಽವತೀರ್ಣೋಽಸಿ ಮಮಾಖಿಲೇಶ್ವರ ।
ರಾಜನ್ಯಸಂಜ್ಞಾಸುರಕೋಟಿಯೂಥಪೈ-
ರ್ನಿರ್ವ್ಯೂಹ್ಯಮಾನಾ ನಿಹನಿಷ್ಯಸೇ ಚಮೂಃ ॥೨೧॥

ಪ್ರಭುವೇ! ನೀನು ಸರ್ವಶಕ್ತಿಮಂತನು. ಸರ್ವರಿಗೂ ಸ್ವಾಮಿಯು. ಈ ಪ್ರಪಂಚವನ್ನು ರಕ್ಷಿಸುವ ಸಲುವಾಗಿಯೇ ನೀನು ನನ್ನ ಮನೆಯಲ್ಲಿ ಅವತರಿಸಿರುವೆ. ಇಂದಿನ ದಿನಗಳಲ್ಲಿ ಕೋಟಿ-ಕೋಟಿ ಸಂಖ್ಯಾತರಾದ ಅಸುರ ಸೇನಾಪತಿಗಳು ತಾವೇ ರಾಜರೆಂದು ಹೇಳಿಕೊಂಡು ತಮ್ಮ ಅಧೀನದಲ್ಲಿ

ದೊಡ್ಡ-ದೊಡ್ಡ ಸೈನ್ಯವನ್ನೇ ಶೇಖರಿಸಿ ಇಟ್ಟುಕೊಂಡಿರುತ್ತಾರೆ. ದುಷ್ಟರ ದಮನಕ್ಕಾಗಿಯೇ ಅವತರಿಸಿರುವ ನೀನು ಅವರೆಲ್ಲರನ್ನೂ ಸಂಹರಿಸುವೆ.

**ಅಯಂ ತ್ವಸಭ್ಯಸ್ತವ ಜನ್ಮ ನೌ ಗೃಹೇ**
**ಶ್ರುತ್ವಾಗ್ರಜಾಂಸ್ತೇ ನ್ಯವಧೀತ್ಸುರೇಶ್ವರ ।**
**ಸ ತೇವತಾರಂ ಪುರುಷೈಃ ಸಮರ್ಪಿತಂ**
**ಶ್ರುತ್ವಾಧುನೈವಾಭಿಸರತ್ಯುದಾಯುಧಃ ॥೨೨॥**

ದೇವತೆಗಳಿಗೂ ಆರಾಧ್ಯದೇವನಾದ ಪ್ರಭುವೇ! ಅಸಭ್ಯನಾದ, ದುಷ್ಟನಾದ ಈ ಕಂಸನಾದರೋ ನನ್ನ ಪತ್ನಿಯಲ್ಲಿ–ಅವನಿಗೆ ಮೃತ್ಯುಪ್ರಾಯನಾದ ನೀನು ಅವತರಿಸುವೆಯೆಂಬ ವಿಷಯವನ್ನು ಆಕಾಶವಾಣಿಯಿಂದ ಕೇಳುತ್ತಲೇ ನಿನ್ನ ಆರು ಮಂದಿ ಅಣ್ಣಂದಿರನ್ನೂ ಅವರು ಹುಟ್ಟುತ್ತಿದ್ದಂತೆಯೇ ಕೊಂದು ಹಾಕಿದನು. ಈಗಲೂ ನೀನು ನನ್ನ ಮನೆಯಲ್ಲಿ ಅವತರಿಸಿದೆಯೆಂಬ ಸಮಾಚಾರವನ್ನು ಕೇಳಿದ ಕೂಡಲೇ ಕತ್ತಿಯನ್ನೆತ್ತಿಕೊಂಡು ಇಲ್ಲಿಗೆ ಓಡಿಬರುವನು.”

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತನೇ! ದೇವಕೀದೇವಿಯು ಮಹಾಪುರುಷನ ಲಕ್ಷಣಗಳಿಂದ ಕೂಡಿದ್ದ ತನ್ನ ಮಗನನ್ನು ನೋಡಿದಳು. ಮೊದಲು ಅವಳಿಗೆ ಕಂಸನನ್ನು ನೆನೆದು ಭಯವೇ ಆಯಿತು. ಮರುಕ್ಷಣದಲ್ಲಿಯೇ ಅಲ್ಲಿ ಮಹಾಪುರುಷನ ಸಾನ್ನಿಧ್ಯವಿದ್ದುದರಿಂದ ಭಯವನ್ನು ತೊರೆದು ಮುಗುಳ್ನಗೆಯನ್ನು ಬೀರುತ್ತಾ ಮಗುವಿನ ಬಳಿಗೆ ಸಾರಿ ಹೇಳಲಾರಂಭಿಸಿದಳು :

**ರೂಪಂ ಯತ್ತತ್ಪ್ರಾಹುರವ್ಯಕ್ತಮಾದ್ಯಂ**
**ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।**
**ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ**
**ಸ ತ್ವಂ ಸಾಕ್ಷಾದ್ವಿಷ್ಣುರಧ್ಯಾತ್ಮದೀಪಃ ॥೨೪॥**

“ಪ್ರಭುವೇ! ಯಾವ ನಿನ್ನ ದಿವ್ಯರೂಪವನ್ನು ಯೋಗಿಗಳು ಅವ್ಯಕ್ತವೆಂದೂ, ಆದಿಕಾರಣವೆಂದೂ, ಬ್ರಹ್ಮವಸ್ತುವೆಂದೂ, ಜ್ಯೋತಿಯೆಂದೂ ನಿರ್ಗುಣ-ನಿರ್ವಿಕಾರವೆಂದೂ, ಸತ್ತಾಮಾತ್ರವೆಂದೂ, ನಿರ್ವಿಶೇಷವೆಂದೂ,

ಈಹಾರರಹಿತವೆಂದೂ ಹೊಗಳುವರೋ ಅಂತಹ ನೀನು ಅಧ್ಯಾತ್ಮಕ್ಕೆ ದೀಪಪ್ರಾಯನಾದ ಸಾಕ್ಷಾತ್ ವಿಷ್ಣುವೇ ಆಗಿರುವೆ.

**ನಷ್ಟೇ ಲೋಕೇ ದ್ವಿಪರಾರ್ಧಾವಸಾನೇ**
**ಮಹಾಭೂತೇಷ್ವಾದಿಭೂತಂ ಗತೇಷು ।**
**ವ್ಯಕ್ತೇಽವ್ಯಕ್ತಂ ಕಾಲವೇಗೇನ ಯಾತೇ**
**ಭವಾನೇಕಃ ಶಿಷ್ಯತೇ ಶೇಷಸಂಜ್ಞಃ ॥೨೫॥**

ಬ್ರಹ್ಮನ ಆಯುಷ್ಯದ ಎರಡು ಪರಾರ್ಧಗಳ ಕಡೆಯಲ್ಲಿ ಕಾಲಶಕ್ತಿಯ ಪ್ರಭಾವದಿಂದ ಸಮಸ್ತಲೋಕಗಳೂ ವಿನಾಶವಾಗಿಹೋಗುತ್ತವೆ. ಪಂಚ ಭೂತಗಳು ಅಹಂಕಾರದಲ್ಲಿಯೂ, ಅಹಂಕಾರವು ಮಹತ್ತತ್ತ್ವದಲ್ಲಿಯೂ, ಮಹತ್ತತ್ತ್ವವು ಪ್ರಕೃತಿಯಲ್ಲಿಯೂ, ಪ್ರಕೃತಿಯು ನಿನ್ನಲ್ಲಿಯೂ ಲೀನವಾಗಿ ಹೋದನಂತರ ಶೇಷವಾಗಿ ನೀನು ಮಾತ್ರ ಉಳಿಯುವೆ. ಆದುದರಿಂದಲೇ ನಿನ್ನನ್ನು 'ಶೇಷ'–ಎಂಬ ಹೆಸರಿನಿಂದಲೂ ಕರೆಯುತ್ತಾರೆ.

**ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬನ್ಧೋ**
**ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್ ।**
**ನಿಮೇಷಾದಿರ್ವತ್ಸರಾನ್ತೋ ಮಹೀಯಾಂ–**
**ಸ್ತಂ ತ್ವೇಶಾನಂ ಕ್ಷೇಮಧಾಮ ಪ್ರಪದ್ಯೇ ॥೨೬॥**

ಅವ್ಯಕ್ತವಾದ ಪ್ರಕೃತಿಗೆ ಬಂಧುವಾಗಿರತಕ್ಕವನೇ! ಪ್ರಭುವೇ! ಯಾವುದು ನಿಮೇಷದಿಂದ ಹಿಡಿದು ಸಂವತ್ಸರಪರ್ಯಂತವಾಗಿ ಅಥವಾ ಪರಾರ್ಧಪರ್ಯಂತವಾಗಿ ಹಲವಾರು ವಿಭಾಗಗಳಿಂದ ಕೂಡಿರುವುದೋ ಮತ್ತು ಯಾವುದರ ಪ್ರಭಾವದಿಂದ ಈ ಜಗತ್ತು ಮುಂದುವರಿಯುತ್ತಿರು ವುದೋ, ಯಾವುದಕ್ಕೆ ಎಲ್ಲೆಯೆಂಬುದೇ ಇಲ್ಲವೋ ಅಂತಹ ಕಾಲವು ನಿನ್ನ ಲೀಲಾಮಾತ್ರವಾಗಿದೆ. ಅದು ನಿನ್ನ ಅಧೀನದಲ್ಲಿದೆ. ನೀನು ಸರ್ವೇಶ್ವರನೂ ಅಭ್ಯುದಯಕ್ಕೆ ಪರಮಾಶ್ರಯನೂ ಆಗಿರುವೆ. ಅಂತಹ ನಿನಗೆ ಶರಣಾಗತಳಾಗಿದ್ದೇನೆ.

**ಮರ್ತ್ಯೋ ಮೃತ್ಯುವ್ಯಾಲಭೀತಃ ಪಲಾಯನ್**
**ಲೋಕಾನ್ಸರ್ವಾನ್ನಿರ್ಭಯಂ ನಾಧ್ಯಗಚ್ಛತ್ ।**

ತ್ವತ್ಪಾದಾಬ್ಜಂ ಪ್ರಾಪ್ಯ ಯದೃಚ್ಛಯಾದ್ಯ
ಸ್ವಸ್ಥಃ ಶೇತೇ ಮೃತ್ಯುರಸ್ಮಾದಪೈತಿ ॥೨೭॥

ಪ್ರಭುವೇ! ಮನುಷ್ಯನು ಕಾಲಕ್ಕೆ (ಸಾವಿಗೆ) ತುತ್ತಾಗುವುದು ಅನಿವಾರ್ಯ. ಈ ಕಾಲವೆಂಬ ಸರ್ಪಕ್ಕೆ ಹೆದರಿ ಆತನು ಎಲ್ಲ ಲೋಕಗಳಲ್ಲೂ ಕಂಡ ಕಂಡಲ್ಲಿ ಓಡಿಹೋಗುತ್ತಾನೆ. ಆದರೆ ಅವನು ಎಲ್ಲಿಗೇ ಹೋದರೂ ಮೃತ್ಯುವಿನಿಂದ ತಪ್ಪಿಸಿಕೊಂಡು ನಿರ್ಭಯನಾಗಿ ಇರಲು ಸಾಧ್ಯವಾಗುವುದಿಲ್ಲ. ಆದರೆ ಅವನಿಗೆ ಸೌಭಾಗ್ಯವಶದಿಂದ ನಿನ್ನ ಚರಣಕಮಲಗಳು ಸಿಕ್ಕಿಬಿಟ್ಟಿವೆ. ಈಗ ಆ ಜೀವನು ಸ್ವಸ್ಥನಾಗಿ ಮಲಗಿದ್ದಾನೆ. ಮೃತ್ಯುವೂ ಅವನಿಂದ ದೂರಸರಿಯುತ್ತಿದೆ.

ಸ ತ್ವಂ ಘೋರಾದುಗ್ರಸೇನಾತ್ಮಜಾನ್ನ-
ಸ್ತ್ರಾಹಿ ತ್ರಸ್ತಾನ್ಭೃತ್ಯವಿತ್ರಾಸಹಾಸಿ ।
ರೂಪಂ ಚೇದಂ ಪೌರುಷಂ ಧ್ಯಾನಧಿಷ್ಣ್ಯಂ
ಮಾ ಪ್ರತ್ಯಕ್ಷಂ ಮಾಂಸದೃಶಾಂ ಕೃಷೀಷ್ಠಾಃ ॥೨೮॥

ಪ್ರಭುವೇ! ನೀನು ಭಕ್ತಭಯಾಪಹಾರಿಯು. ನಾವಾದರೋ ದುಷ್ಟನಾದ ಈ ಕಂಸನಿಗೆ ಬಹಳವಾಗಿ ಹೆದರಿದ್ದೇವೆ. ಅವನಿಂದ ನಮ್ಮನ್ನು ನೀನು ರಕ್ಷಿಸು. ನಾಲ್ಕು ಕೈಗಳಿಂದ ಕೂಡಿರುವ ನಿನ್ನ ಈ ದಿವ್ಯರೂಪವು ಯೋಗಿಗಳು ಹೃನ್ಮಂದಿರದಲ್ಲಿಟ್ಟುಕೊಂಡು ಧ್ಯಾನಮಾಡಲು ಯೋಗ್ಯವಾಗಿದೆ. ಇಂತಹ ದಿವ್ಯಸ್ವರೂಪವನ್ನು ಮಾಂಸ-ಮಜ್ಜೆಗಳಿಂದ ಕೂಡಿರುವ ಶರೀರಧಾರಿಗಳಾದ ಮನುಷ್ಯರ ಮುಂದೆ ಪ್ರಕಟಿಸಬೇಡ.

ಜನ್ಮ ತೇ ಮಯ್ಯಸೌ ಪಾಪೋ ಮಾ ವಿದ್ಯಾನ್ಮಧುಸೂದನ ।
ಸಮುದ್ವಿಜೇ ಭವದ್ಧೇತೋಃ ಕಂಸಾದಹಮಧೀರಧೀಃ ॥೨೯॥

ಮಧುಸೂದನನೇ! ನೀನು ನನ್ನ ಗರ್ಭದಲ್ಲಿ ಹುಟ್ಟಿರುವೆಯೆಂಬುದು ಈ ಕಂಸನಿಗೆ ತಿಳಿಯದಂತೆ ಮಾಡು. ಸ್ವಾಮಿ! ನನ್ನ ಧೈರ್ಯವು ಹಾಳಾಗಿಬಿಟ್ಟಿದೆ. ನಿನ್ನ ಸಲುವಾಗಿ ಕಂಸನಿಗೆ ನಾನು ಬಹಳ ಹೆದರುತ್ತಿದ್ದೇನೆ.

ಉಪಸಂಹರ ವಿಶ್ವಾತ್ಮನ್ನದೋ ರೂಪಮಲೌಕಿಕಮ್ ।
ಶಙ್ಖಚಕ್ರಗದಾಪದ್ಮಶ್ರಿಯಾ ಜುಷ್ಟಂ ಚತುರ್ಭುಜಮ್ ॥೩೦॥

ವಿಶ್ವಾತ್ಮನೇ! ಈ ನಿನ್ನ ದಿವ್ಯರೂಪವು ಅಲೌಕಿಕವಾಗಿದೆ. ಶಂಖ-ಚಕ್ರ-ಗದಾ-ಪದ್ಮಗಳ ಶೋಭೆಯಿಂದ ಬೆಳಗುತ್ತಿರುವ ದಿವ್ಯವಾದ ಈ ನಿನ್ನ ರೂಪವನ್ನು ಉಪಸಂಹರಿಸು.

**ವಿಶ್ವಂ ಯದೇತತ್ಸ್ವತನೌ ನಿಶಾನ್ತೇ**
**ಯಥಾವಕಾಶಂ ಪುರುಷಃ ಪರೋ ಭವಾನ್ ।**
**ಬಿಭರ್ತಿ ಸೋಽಯಂ ಮಮ ಗರ್ಭಗೋಽಭೂ-**
**ದಹೋ ನೃಲೋಕಸ್ಯ ವಿಡಮ್ಬನಂ ಹಿ ತತ್ ॥೩೧॥**

ಪರಮಪುರುಷನಾದ ನೀನು ಪ್ರಳಯಕಾಲದಲ್ಲಿ ಅಖಂಡಬ್ರಹ್ಮಾಂಡವನ್ನೂ ಯಥಾವಕಾಶವಾಗಿ ನಿನ್ನ ಹೊಟ್ಟೆಯಲ್ಲಿ ಧರಿಸಿಕೊಳ್ಳುವೆ. ಅಂತಹ ಅಪ್ರಮೇಯಸ್ವರೂಪನಾದ ನೀನು ನನ್ನ ಗರ್ಭದಲ್ಲಿ ಹುಟ್ಟಿದೆಯೆಂದರೆ ಇದು ಮನುಷ್ಯಲೋಕದಲ್ಲಿ ಒಂದು ಪರಿಹಾಸ್ಯವೇ ಸರಿ."

ತಾಯಿಯಾದ ದೇವಕೀದೇವಿಯ ಈ ಮಾತನ್ನು ಕೇಳಿ ದಯಾಮಯನಾದ ಭಗವಂತನು ಹೇಳುತ್ತಾನೆ :

"ದೇವಿ! ಸ್ವಾಯಂಭುವಮನ್ವಂತರದಲ್ಲಿ ನೀನು ಹುಟ್ಟಿದಾಗ ನಿನಗೆ ಪೃಶ್ನಿ-ಎಂದು ಹೆಸರಿದ್ದಿತು. ಈಗ ನಿನ್ನ ಪತಿಯಾಗಿರುವ ವಸುದೇವನು ಆಗ ಸುತಪಾ ಎಂಬ ಹೆಸರಿನ ಪ್ರಜಾಪತಿಯಾಗಿದ್ದನು.

ನಿಮ್ಮಿಬ್ಬರ ಮನಸ್ಸೂ ಶುದ್ಧವಾಗಿದ್ದಿತು. ಬ್ರಹ್ಮದೇವನು ನಿಮ್ಮಿಬ್ಬರಿಗೂ ಸಂತಾನವನ್ನು ಪಡೆದುಕೊಳ್ಳುವಂತೆ ನಿರ್ದೇಶಿಸಿದನು. ಆಗ ನೀವಿಬ್ಬರೂ ಇಂದ್ರಿಯಗಳನ್ನು ನಿಯಮನಮಾಡಿ ಹತೋಟಿಯಲ್ಲಿಟ್ಟುಕೊಂಡು ಶ್ರೇಷ್ಠವಾದ ತಪಸ್ಸನ್ನು ಮಾಡಿದಿರಿ. ಆ ಸಮಯದಲ್ಲಿ ನೀವು ಕಾಲಾನುಗುಣವಾಗಿ ಉಂಟಾಗುತ್ತಿದ್ದ ಮಳೆ-ಗಾಳಿ-ಬಿಸಿಲು-ಹಿಮ-ಸೆಕೆ-ಇತ್ಯಾದಿಗಳೆಲ್ಲವನ್ನೂ ಸಹಿಸಿಕೊಂಡು ಪ್ರಾಣಾಯಾಮದ ಮೂಲಕವಾಗಿ ಮನಸ್ಸಿನಲ್ಲಿದ್ದ ಕಲ್ಮಷಗಳೆಲ್ಲವನ್ನೂ ಕಳೆದುಕೊಂಡಿರಿ. ನೀವಿಬ್ಬರೂ ಕೆಲವು ವೇಳೆ ತರಗೆಲೆಗಳನ್ನು ತಿನ್ನುತ್ತಾ ಕೆಲವು ವೇಳೆ ಕೇವಲ ಗಾಳಿಯನ್ನು ಆಹಾರವಾಗಿ ಸೇವಿಸುತ್ತಾ ತಪಸ್ಸು ಮಾಡುತ್ತಿದ್ದಿರಿ. ನಿಮ್ಮ ಮನಸ್ಸು ಶಾಂತವಾಗಿದ್ದಿತು. ಹೀಗೆ ನೀವಿಬ್ಬರೂ ಅಭೀಷ್ಟವಾದ ವಸ್ತುವನ್ನು ನನ್ನಿಂದ

ಪಡೆಯುವ ಸಲುವಾಗಿ ನನ್ನ ಆರಾಧನೆಯನ್ನು ಮಾಡುತ್ತಿದ್ದಿರಿ. ಹೀಗೆ ನನ್ನಲ್ಲಿಯೇ ಚಿತ್ತವನ್ನು ಲೀನಗೊಳಿಸಿ ಘೋರವಾದ ಮತ್ತು ಅತಿ ದುಷ್ಕರ ವಾದ ತಪಸ್ಸನ್ನು ಮಾಡುತ್ತಾ ದೇವಮಾನದ ಹನ್ನೆರಡು ಸಾವಿರ ವರ್ಷಗಳನ್ನು ಕಳೆದಿರಿ. ಪುಣ್ಯಮಯಿಯಾದ ದೇವಿಯೇ! ಆ ಸಮಯದಲ್ಲಿ ನಾನು ನಿಮ್ಮಿಬ್ಬರ ವಿಷಯದಲ್ಲಿಯೂ ಪ್ರಸನ್ನನಾದೆನು. ನೀವಿಬ್ಬರೂ ತಪಸ್ಸಿನಿಂದಲೂ, ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ನನ್ನನ್ನೇ ಯಾವಾ ಗಲೂ ಹೃದಯದಲ್ಲಿ ಭಾವಿಸಿಕೊಳ್ಳುತ್ತಿದ್ದಿರಿ. ಆ ಸಮಯದಲ್ಲಿ ನಿಮ್ಮಿಬ್ಬರ ಅಭಿಲಾಷೆಗಳನ್ನು ಪೂರ್ಣಗೊಳಿಸುವ ಸಲುವಾಗಿ ವರದರಾಜನಾದ ನಾನು ಇದೇ ರೂಪದಿಂದ ನಿಮಗೆ ಪ್ರತ್ಯಕ್ಷನಾದೆನು. ಬೇಕಾದ ವರವನ್ನು ಕೇಳಿಕೊಳ್ಳಿರೆಂದು ನಾನು ನಿಮಗೆ ಹೇಳಲು ನೀವಿಬ್ಬರೂ ನನ್ನಂತಹ ಪುತ್ರನು ಬೇಕೆಂದು ಕೇಳಿಕೊಂಡಿರಿ. ಅಲ್ಲಿಯವರೆಗೂ ನಿಮಗೆ ವಿಷಯೋಪಭೋಗಗಳ ಸಂಬಂಧವೇ ಇರಲಿಲ್ಲ. ಸಂತಾನವೂ ಇರಲಿಲ್ಲ. ನನ್ನ ಮಾಯೆಯಿಂದಲೇ ಮೋಹಿತರಾದ ನೀವಿಬ್ಬರೂ ನನ್ನಿಂದ ಮೋಕ್ಷವನ್ನು ಕೇಳಿಕೊಳ್ಳಲಿಲ್ಲ. 'ನನ್ನಂತಹ ಪುತ್ರನು ನಿಮಗೆ ದೊರೆಯಲಿ'–ಎಂದು ಅಮೋಘವಾದ ವರವನ್ನು ನಿಮಗಿತ್ತು ನಾನು ಅದೃಶ್ಯನಾದೆನು. ಸಫಲಮನೋರಥರಾದ ನೀವಿಬ್ಬರೂ ಪುತ್ರಪ್ರಾಪ್ತಿಗಾಗಿ ವಿಷಯೋಪಭೋಗಗಳನ್ನು ಅನುಭವಿಸಲು ಪ್ರಾರಂಭಿಸಿದಿರಿ. ನಾನು ಈ ಲೋಕದಲ್ಲಿ ಶೀಲ-ಸ್ವಭಾವ-ಔದಾರ್ಯ ಇವೇ ಮುಂತಾದ ಗುಣಗಳಲ್ಲಿ ನನಗೆ ಸಮಾನನಾದ ಬೇರೊಬ್ಬನನ್ನು ಕಾಣದೆ ನಾನಿತ್ತಿದ್ದ ವರವನ್ನು ನಿಜಗೊಳಿಸುವ ಸಲುವಾಗಿ ನಾನೇ ನಿಮಗೆ ಮಗನಾಗಿ ಹುಟ್ಟಿದೆನು. ಆ ಸಮಯದಲ್ಲಿ ನಾನು 'ಪೃಶ್ನಿಗರ್ಭ'–ಎಂಬ ಹೆಸರಿನಿಂದಲೇ ವಿಖ್ಯಾತನಾದೆನು.

ತಾಯೇ! ಅದರ ಮುಂದಿನ ಜನ್ಮದಲ್ಲಿ ನೀನು ಅದಿತಿಯಾಗಿ ಹುಟ್ಟಿದೆ. ವಸುದೇವನು ಕಶ್ಯಪನಾಗಿ ಹುಟ್ಟಿದನು. ಆಗಲೂ ನಾನು ನಿಮಗೆ ಪುತ್ರನಾಗಿ ಹುಟ್ಟಿದೆನು. ನನ್ನನ್ನು ಉಪೇಂದ್ರನೆಂದೂ ಕುಳ್ಳನಾ ಗಿದ್ದುದರಿಂದ ವಾಮನನೆಂದೂ ಕರೆಯುತ್ತಿದ್ದರು. ದೇವಕೀದೇವಿ! ನಿಮ್ಮ ಈ ಮೂರನೆಯ ಜನ್ಮದಲ್ಲಿಯೂ ಇದೇ ರೂಪದಿಂದ ನಿಮಗೆ ಪುತ್ರನಾಗಿ

ಹುಟ್ಟಿದ್ದೇನೆ. ಸತ್ಯವಾದ ಮಾತನ್ನು ನಿಮಗೆ ಹೇಳಿದ್ದೇನೆ. ನಿಮಗೆ ಹಿಂದಿನ ಅವತಾರದ ಸ್ಮರಣೆಯುಂಟಾಗಲೆಂದು ನಿಮಗೆ ನನ್ನ ನಿಜಸ್ವರೂಪವನ್ನು ತೋರಿಸಿದ್ದೇನೆ. ನಾನು ಹೀಗೆ ಮಾಡದಿದ್ದರೆ ಕೇವಲ ಮನುಷ್ಯ ಶರೀರ ದಿಂದಲೇ ನನ್ನ ಅವತಾರದ ಪರಿಚಯವಾಗುತ್ತಿರಲಿಲ್ಲ.

**ಯುವಾಂ ಮಾಂ ಪುತ್ರಭಾವೇನ ಬ್ರಹ್ಮಭಾವೇನ ಚಾಸಕೃತ್ ।**
**ಚಿನ್ತಯನ್ತೌ ಕೃತಸ್ನೇಹೌ ಯಾಸ್ಯೇಥೇ ಮದ್ಗತಿಂ ಪರಾಮ್ ॥**

ನೀವಿಬ್ಬರೂ ನನ್ನ ವಿಷಯದಲ್ಲಿ ನಿರಂತರವಾಗಿ ಪುತ್ರಭಾವದಿಂದಲೂ ಮತ್ತು ಬ್ರಹ್ಮವೆಂಬ ಭಾವನೆಯಿಂದಲೂ ಪರಮಪ್ರೀತಿಯಿಂದ ಅಡಿಗಡಿಗೆ ಚಿಂತಿಸುತ್ತಾ ಪರಮಶ್ರೇಷ್ಠವಾದ ನನ್ನ ಪದವಿಯನ್ನು ಸೇರುವಿರಿ.

**(ಯದಿ ಕಂಸಾದ್ಬಿಭೇಷಿ ತ್ವಂ ತರ್ಹಿ ಮಾಂ ಗೋಕುಲಂ ನಯ ।**
**ಯಶೋದಾಯಾಶ್ಚ ತಾಂ ಕನ್ಯಾಂ ಮನ್ಮಾಯಾಮಾನಯದ್ರುತಮ್ ।**
**ಸ್ವಯಂ ಸ್ಯುರ್ವಿವೃತಾದ್ವಾರೋ ಯಮುನಾ ಚ ಸುದುಸ್ತರಾ ॥**

ವಸುದೇವ! ನಿಮಗೇನಾದರೂ ಕಂಸನ ಭಯವಿದ್ದರೆ ನನ್ನನ್ನು ಈಗಲೇ ಗೋಕುಲಕ್ಕೆ ಕರೆದುಕೊಂಡು ಹೋಗು. ಅಲ್ಲಿ ಯಶೋದಾ ದೇವಿಯ ಗರ್ಭದಲ್ಲಿ ಪುತ್ರೀರೂಪದಿಂದ ಹುಟ್ಟಿರುವ ನನ್ನ ಮಾಯೆಯನ್ನು ಬೇಗನೆ ಇಲ್ಲಿಗೆ ಕರೆದುಕೊಂಡು ಬಾ. ಬಾಗಿಲುಗಳೆಲ್ಲವೂ ತಮಗೆ ತಾವೇ ತೆರೆಯುವುವು. ದಾಟುವುದಕ್ಕಾಗದ ಯಮುನಾನದಿಯೂ ಕೂಡ ದಾಟಲು ಸುಲಭಸಾಧ್ಯವಾಗುವಂತೆ ಹಾದಿಯನ್ನು ಮಾಡಿಕೊಡುವುದು.")

ಶ್ರೀಶುಕರು ಹೇಳುತ್ತಾರೆ :

ಪರೀಕ್ಷಿತನೇ! ಭಗವಂತನು ದೇವಕೀ-ವಸುದೇವರಿಗೆ ಹೀಗೆ ಹೇಳಿ ಸುಮ್ಮನಾದನು. ಅನಂತರ ಅವನು ತನ್ನ ಯೋಗಮಾಯೆಯಿಂದ ತಂದೆ-ತಾಯಿಗಳು ನೋಡುತ್ತಿದ್ದಂತೆಯೇ ಒಂದು ಸಾಧಾರಣಶಿಶುವಾಗಿ ಪರಿಣಮಿಸಿದನು. ಆಗ ವಸುದೇವನು ಭಗವಂತನ ಪ್ರೇರಣೆಯಂತೆ ಆ ಶಿಶುವನ್ನು ಹೆರಿಗೆಮನೆಯಿಂದ ಹೊರಕ್ಕೆ ಕೊಂಡೊಯ್ಯಲು ಇಚ್ಛಿಸಿದನು. ಅದೇ ಸಮಯಕ್ಕೆ ಸರಿಯಾಗಿ ನಂದಪತ್ನಿಯಾದ ಯಶೋದೆಯ ಗರ್ಭದಲ್ಲಿ ಯೋಗಮಾಯೆಯು ಜನ್ಮತಾಳಿದಳು. ಅವಳು ಭಗವಂತನ ಶಕ್ತಿಯೇ

ಆಗಿದ್ದುದರಿಂದ ಭಗವಂತನಂತೆಯೇ ಅವಳೂ ಹುಟ್ಟು-ಸಾವುಗಳಿಂದ ರಹಿತಳಾಗಿದ್ದಳು. ಆ ಯೋಗಮಾಯೆಯೇ ಎಲ್ಲ ದ್ವಾರಪಾಲಕರ ಮತ್ತು ನಗರವಾಸಿಗಳ ಇಂದ್ರಿಯವೃತ್ತಿಗಳನ್ನೂ ಅಪಹರಿಸಿಬಿಟ್ಟಳು. ಇದರಿಂದಾಗಿ ಎಲ್ಲರೂ ನಿಶ್ಚೇತನರಾಗಿ ಮಲಗಿಬಿಟ್ಟರು. ಕಬ್ಬಿಣದ ಲಾಳಮುಂಡಿಗೆಗಳುಳ್ಳ ದೊಡ್ಡ ಕದಗಳಿಂದ ಕೂಡಿ ಎಂತಹವರಿಗೂ ತೆಗೆಯಲು ಸಾಧ್ಯವಾಗದಂತೆ ಬಿಗಿಯಾಗಿ ಮುಚ್ಚಲ್ಪಟ್ಟಿದ್ದ ಹೆಬ್ಬಾಗಿಲುಗಳು ಕೂಡ ಸೂರ್ಯನಿಗೆದುರಾದ ಕತ್ತಲೆಯಂತೆ ತಮ್ಮಷ್ಟಕ್ಕೆ ತಾವೇ ತೆರೆದುಕೊಂಡುವು.

ಜನಸಂಚಾರಕ್ಕೆ ಅವಕಾಶವಾಗದಂತೆ ಮೋಡಗಳು ಮೆಲ್ಲ-ಮೆಲ್ಲನೆ ಗುಡುಗುತ್ತಾ ಮಳೆಗರೆಯುತ್ತಿದ್ದುವು. ಆದಿಶೇಷನು ತನ್ನ ಸಾವಿರ ಹೆಡೆಗಳಿಂದ




ಭಗವಂತನ ಮೇಲೆ ನೀರುಬೀಳದಂತೆ ಮರೆಮಾಡಿಕೊಂಡು ವಸುದೇವನನ್ನೇ ಹಿಂಬಾಲಿಸಿದನು. ಸತತವಾಗಿ ಮಳೆಯು ಬೀಳುತ್ತಿದ್ದುದರಿಂದ ಯಮುನಾನದಿಯು ತುಂಬಿ ಹರಿಯುತ್ತಿದ್ದಿತು. ಆಳವಾದ ನೀರಿನ ಪ್ರವಾಹ ವೇಗದಿಂದ ಅಲೆಗಳೆದ್ದು ನದಿಯಲ್ಲಿ ಅಗಾಧವಾದ ನೊರೆಯುಂಟಾಯಿತು. ಆ ಸಮಯದಲ್ಲಿ ಯಮುನಾನದಿಯು ಭಯಂಕರವಾದ ನೂರಾರು ಸುಳಿಗಳಿಂದ ತುಂಬಿದ್ದಿತು. ಹೀಗೆ ತುಂಬುಪ್ರವಾಹದಿಂದಲೂ ಸುಳಿಗಳಿಂದಲೂ ಕೂಡಿ ಹರಿಯುತ್ತಿದ್ದಾಗ ಯಮುನೆಯು–ಹಿಂದೆ ಸಮುದ್ರರಾಜನು ಶ್ರೀರಾಮಚಂದ್ರನಿಗೆ ಲಂಕೆಗೆ ಹೋಗಲು ಹಾದಿಯನ್ನು ಕಲ್ಪಿಸಿಕೊಟ್ಟಿದ್ದಂತೆ–ಶ್ರೀಕೃಷ್ಣ

ನನ್ನೆತ್ತಿಕೊಂಡು ಬಂದ ವಸುದೇವನಿಗೆ ಸುಖವಾಗಿ ಪ್ರಯಾಣಮಾಡಲು ತನ್ನಲ್ಲಿಯೇ ಹಾದಿಯನ್ನು ಮಾಡಿಕೊಟ್ಟಿತು. ಹೀಗೆ ವಸುದೇವನು ಸ್ವಲ್ಪವೂ ಕಷ್ಟವಿಲ್ಲದೆ ಯಮುನೆಯನ್ನು ದಾಟಿ ನಂದಗೋಕುಲಕ್ಕೆ ಹೋದನು. ಆ ಸಮಯದಲ್ಲಿ ಎಲ್ಲ ಗೋಪರೂ ಮಲಗಿ ನಿದ್ರೆಮಾಡುತ್ತಿದ್ದರು. ಪರಮಾತ್ಮನ ಪ್ರೇರಣೆಯಂತೆ ವಸುದೇವನು ತಾನು ಎತ್ತಿಕೊಂಡು ಹೋಗಿದ್ದ ಗಂಡು ಶಿಶುವನ್ನು ಯಶೋದಾದೇವಿಯ ಪಕ್ಕದಲ್ಲಿ ಮಲಗಿಸಿದನು. ಆಗತಾನೇ ಹುಟ್ಟಿದ್ದ ಯಶೋದಾದೇವಿಯ ಹೆಣ್ಣುಶಿಶುವನ್ನೆತ್ತಿಕೊಂಡು ಮಥುರಾ ಪಟ್ಟಣದಲ್ಲಿದ್ದ ಸೆರೆಮನೆಗೆ ಹಿಂದಿರುಗಿದನು. ಸೆರೆಮನೆಯನ್ನು ಪ್ರವೇಶಿಸಿದ ನಂತರ ವಸುದೇವನು ನಂದಗೋಪನ ಮನೆಯಿಂದ ತಂದಿದ್ದ ಹೆಣ್ಣು




ಶಿಶುವನ್ನು ( ಯೋಗಮಾಯೆಯನ್ನು ) ದೇವಕಿಯ ಪಕ್ಕದಲ್ಲಿ ಮಲಗಿಸಿದನು. ಹಿಂದೆ ತೊಟ್ಟಿದ್ದ ಬೇಡಿಯನ್ನೇ ವಸುದೇವನು ಪುನಃ ತೊಟ್ಟುಕೊಂಡು ಕಂಸನ ಬಂದಿಯಾಗಿ ಸೆರೆಮನೆಯಲ್ಲಿದ್ದನು.

ಅತ್ತಲಾಗಿ ನಂದನ ಪತ್ನಿಯಾದ ಯಶೋದೆಗೆ ತನಗೊಂದು ಮಗುವಾದ ಅರಿವುಂಟಾಗಿತ್ತು. ಆದರೆ ಹುಟ್ಟಿದ್ದ ಮಗುವು ಗಂಡೋ-ಹೆಣ್ಣೋ ಎಂಬುದು ತಿಳಿದಿರಲಿಲ್ಲ. ಇದಕ್ಕೆ ಕಾರಣ ಅವಳ ಪ್ರಸವದ ಪರಿಶ್ರಮ ; ಎರಡನೆಯದಾಗಿ ಯೋಗಮಾಯೆಯು ತನ್ನ ಪ್ರಭಾವದಿಂದ ಯಶೋದೆ

ಯನ್ನು ನಿದ್ರೆಯಿಂದ ಆವಿಷ್ಟಳನ್ನಾಗಿ ಮಾಡಿದ್ದು. ಈ ಎರಡು ಕಾರಣಗಳಿಂದ ತನಗೆ ಹುಟ್ಟಿದ ಶಿಶುವು ಯಾವುದೆಂಬುದು ಅವಳಿಗೆ ತಿಳಿದಿರಲಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೪ನೆಯ ಅಧ್ಯಾಯ

## ಕಂಸನ ಕೈಯಿಂದ ತಪ್ಪಿಸಿಕೊಂಡ ಯೋಗಮಾಯೆಯು ಆಕಾಶಕ್ಕೆ ಹಾರಿ ಭವಿಷ್ಯವನ್ನು ನುಡಿದುದು

ಶ್ರೀಶುಕದೇವರು ಹೇಳುತ್ತಾರೆ :

**ಬಹಿರನ್ತಃಪುರದ್ವಾರಃ ಸರ್ವಾಃ ಪೂರ್ವವದಾವೃತಾಃ ।**
**ತತೋ ಬಾಲಧ್ವನಿಂ ಶ್ರುತ್ವಾ ಗೃಹಪಾಲಾಃ ಸಮುತ್ಥಿತಾಃ ॥೧॥**

ಪರೀಕ್ಷಿತನೇ! ವಸುದೇವನು ಸೆರೆಮನೆಗೆ ಹಿಂದಿರುಗಿದೊಡನೆಯೇ ಎಲ್ಲ ಹೊರಗಿನ ಮತ್ತು ಒಳಗಿನ ಬಾಗಿಲುಗಳೂ ಹಿಂದಿನಂತೆಯೇ ಮುಚ್ಚಿ ಕೊಂಡುಬಿಟ್ಟುವು. ದೇವಕಿಯ ಪಕ್ಕದಲ್ಲಿದ್ದ ನವಜಾತಶಿಶುವು ಅಳತೊಡ ಗಿತು. ಶಿಶುವಿನ ಧ್ವನಿಯನ್ನು ಕೇಳುತ್ತಲೇ ದ್ವಾರಪಾಲಕರು ಎಚ್ಚೆತ್ತರು. ಅವರು ಒಡನೆಯೇ ಕಂಸನ ಬಳಿಗೆ ಹೋಗಿ ದೇವಕಿಗೆ ಎಂಟನೆಯ ಶಿಶುವು ಹುಟ್ಟಿರುವ ಸಮಾಚಾರವನ್ನು ತಿಳಿಸಿದರು. ಕಂಸನಾದರೋ ಆಕುಲತೆ ಯಿಂದಲೂ, ಗಾಬರಿಯಿಂದಲೂ ಈ ಸಮಾಚಾರವನ್ನೇ ಪ್ರತೀಕ್ಷಿಸುತ್ತಿದ್ದನು. ದ್ವಾರಪಾಲಕರ ಮಾತನ್ನು ಕೇಳುತ್ತಲೆ ಕಂಸನು ಹಂಸತೂಲಿಕಾತಲ್ಪದಿಂದ ಜಗ್ಗನೆ ಮೇಲೆದ್ದು ಶೀಘ್ರಾತಿಶೀಘ್ರವಾಗಿ ಸೂತಿಕಾಗೃಹದ ಕಡೆಗೆ ಧಾವಿಸಿ ದನು. ಕಂಸನು ಬರುವಾಗ ತನ್ನ ಮೃತ್ಯುವಿನ ಉದಯವಾಗಿರುವುದೆಂದೇ ಭಾವಿಸಿ ಅತ್ಯಂತ ಕಳವಳಗೊಂಡಿದ್ದನು. ಗಾಬರಿಯಿಂದಾಗಿ ತತ್ತರಿಸು ತ್ತಿದ್ದನು. ತಲೆಗೂದಲು ಬಿಚ್ಚಿಕೊಂಡುದೂ ಅವನ ಗಮನಕ್ಕೆ ಬರಲೇ ಇಲ್ಲ. ಕೆದರಿದ ತಲೆಗೂದಲಿನಿಂದ ಕೂಡಿ ಭಯಂಕರಾಕಾರನಾಗಿ ಹೆರಿಗೆ ಮನೆಯನ್ನು ಪ್ರವೇಶಿಸಿದನು. ಅವನು ಆ ಮನೆಯನ್ನು ಪ್ರವೇಶಿಸುತ್ತಲೇ

ಬಹಳ ದುಃಖದಿಂದಲೂ, ಕರುಣೆಯಿಂದಲೂ ದೇವಕೀದೇವಿಯು ತನ್ನ ಅಣ್ಣನಿಗೆ ಹೇಳಿಕೊಂಡಳು :

**ಸ್ನುಷೇಯಂ ತವ ಕಲ್ಯಾಣ ಸ್ತ್ರಿಯಂ ಮಾ ಹನ್ತುಮರ್ಹಸಿ ॥೪॥**

"ಕಲ್ಯಾಣವನ್ನು ಉಂಟುಮಾಡುವವನೇ! ಈಗ ಹುಟ್ಟಿರುವವಳು ನಿನ್ನ ಸೋದರಸೊಸೆ ; ಸೋದರಳಿಯನಲ್ಲ. ಹೆಣ್ಣುಶಿಶುವು ಹುಟ್ಟಿದೆ. ಆದುದರಿಂದ ಸ್ತ್ರೀಯನ್ನು ಕೊಲ್ಲುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ.

**ಬಹವೋ ಹಿಂಸಿತಾ ಭ್ರಾತಃ ಶಿಶವಃ ಪಾವಕೋಪಮಾಃ ।**
**ತ್ವಯಾ ದೈವನಿಸೃಷ್ಟೇನ ಪುತ್ರಿಕೈಕಾ ಪ್ರದೀಯತಾಮ್ ॥೫॥**

ಅಣ್ಣ! ನೀನು, ದೈವವಶಾತ್ ಅಗ್ನಿಯಂತೆ ತೇಜಸ್ವಿಗಳಾಗಿ ಹುಟ್ಟಿದ್ದ ನನ್ನ ಹಲವಾರು ಮಕ್ಕಳನ್ನು ಹುಟ್ಟಿದ ಕ್ಷಣದಲ್ಲಿಯೇ ಕೊಂದುಹಾಕಿದೆ. ಕಡೆಯದಾಗಿ ಹೆಣ್ಣುಶಿಶುವೊಂದು ಹುಟ್ಟಿದೆ. ಇದನ್ನಾದರೂ ನೀನು ಕೊಲ್ಲದೇ ನನಗೆ ಕೊಟ್ಟುಬಿಡು.

**ನನ್ವಹಂ ತೇ ಹ್ಯವರಜಾ ದೀನಾ ಹತಸುತಾ ಪ್ರಭೋ ।**
**ದಾತುಮರ್ಹಸಿ ಮನ್ದಾಯಾ ಅಙ್ಗೇಮಾಂ ಚರಮಾಂ ಪ್ರಜಾಮ್ ॥**

ಅಣ್ಣ! ನಾನು ನಿನ್ನ ತಂಗಿಯಲ್ಲವೇ? ಹಲವಾರು ಮಕ್ಕಳನ್ನು ಕಳೆದುಕೊಂಡು ದುಃಖದ ಮಡಿಲಿನಲ್ಲಿ ಮುಳುಗಿರುವೆನಲ್ಲವೇ? ದೈನ್ಯದಿಂದ ಬೇಡಿಕೊಳ್ಳುವೆನು. ಮಂದಭಾಗ್ಯಳಾದ ನನಗೆ ಈ ಕಡೆಯ ಹೆಣ್ಣು ಶಿಶುವನ್ನಾದರೂ ದಯಪಾಲಿಸು."

ಶ್ರೀಶುಕದೇವರು ಹೇಳುತ್ತಾರೆ :

ಪರೀಕ್ಷಿತ! ಹೀಗೆ ದೇವಕೀದೇವಿಯು ಹೊಸದಾಗಿ ಹುಟ್ಟಿದ್ದ ಶಿಶುವನ್ನು ತೊಡೆಯಲ್ಲಿಟ್ಟು ಮುಚ್ಚಿಕೊಂಡು ಬಿಕ್ಕಿ-ಬಿಕ್ಕಿ ಅಳುತ್ತಾ ಅತ್ಯಂತ ದೈನ್ಯದಿಂದ ಅಣ್ಣನನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದಳು. ಆದರೆ ಕಂಸನು ಮಹಾದುಷ್ಟ. ತನ್ನ ತಂಗಿಯು ಅಂಗಲಾಚಿ ಬೇಡಿಕೊಳ್ಳುತ್ತಿದ್ದರೂ ಮರುಗದೆ ದೇವಕಿಯನ್ನು ಗದರಿಸುತ್ತಾ ಭದ್ರವಾಗಿ ಅಪ್ಪಿಕೊಂಡಿದ್ದ ಆ ಹೆಣ್ಣು ಶಿಶುವನ್ನು ಅವಳ ಕೈಯಿಂದ ಕಿತ್ತುಕೊಂಡನು.

ಪರೀಕ್ಷಿತ! ಕಂಸನು ಮಹಾಸ್ವಾರ್ಥಿಯಾಗಿದ್ದನು. ಅವನ ಮನಸ್ಸಿನಲ್ಲಿ ಸೌಹಾರ್ದವೆಂಬುದು ಲೇಶಮಾತ್ರವೂ ಇರಲಿಲ್ಲ. ಹೆಣ್ಣಾಗಲೀ ಗಂಡಾಗಲೀ ; ದೇವಕಿಯ ಸಂತಾನವನ್ನು ವಿನಾಶಗೊಳಿಸುವುದೇ ಅವನ ಪರಮ ಧ್ಯೇಯವಾಗಿತ್ತು. ಮರಣವೆಂಬುದನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗದೆಂದು ಅವನು ಒಮ್ಮೆಯಾದರೂ ಚಿಂತಿಸಲಿಲ್ಲ. ಆಗ ತಾನೇ ಹುಟ್ಟಿದ, ತಂಗಿಯ ಎಳೆಯ ಕಂದನ ಕಾಲುಗಳನ್ನು ಹಿಡಿದು ಬಂಡೆಯ ಮೇಲೆ ಅಪ್ಪಳಿಸಿದನು. ಆದರೆ ಕಂಸನು ನಿರೀಕ್ಷಿಸಿದ್ದಂತೆ ಶಿಶುವು ಬಂಡೆಯ ಮೇಲೆ ಅಪ್ಪಳಿಸಲ್ಪಟ್ಟು ಛಿದ್ರ-ಛಿದ್ರವಾಗಿ ರಕ್ತದ ಕೋಡಿಯು ಹರಿಯಲಿಲ್ಲ. ಬಂಡೆಯ ಮೇಲೆ ಬೀಳುವುದರಲ್ಲಿಯೇ ಆ ಶಿಶುವು ಕಂಸನ ಕೈಯಿಂದ ತಪ್ಪಿಸಿಕೊಂಡು ಆಕಾಶಕ್ಕೆ ಹಾರಿ ಅಷ್ಟಭುಜೆಯಾಗಿ ಎಂಟು ಕೈಗಳಿಂದಲೂ ಎಂಟು ಆಯುಧಗಳನ್ನು ಧರಿಸಿ ಆಕಾಶದಲ್ಲಿ ನಿಂತುಕೊಂಡಿತು. ಅದು ವಿಷ್ಣುಮಾಯೆಯಾಗಿತ್ತು. ವಿಷ್ಣುವಿನ ತಂಗಿಯೇ ಆಗಿದ್ದಿತು. ದೇವತಾರೂಪವನ್ನು ಧರಿಸಿದ್ದ ಆ ವಿಷ್ಣುಮಾಯೆಯು ದಿವ್ಯವಾದ ಮಾಲೆಗಳಿಂದಲೂ, ವಸ್ತ್ರಗಳಿಂದಲೂ, ಚಂದನಗಳಿಂದಲೂ, ಮಣಿಮಯವಾದ ಆಭರಣಗಳಿಂದಲೂ ಸಮಲಂಕೃತ ವಾಗಿದ್ದಿತು. ಆ ದೇವಿಯ ಎಂಟು ಕೈಗಳಲ್ಲಿಯೂ ಧನುಸ್ಸು-ತ್ರಿಶೂಲ-ಬಾಣ-ಗುರಾಣಿ-ಕತ್ತಿ-ಶಂಖ-ಚಕ್ರ-ಗದೆ ಈ ಎಂಟು ಆಯುಧಗಳಿದ್ದುವು. ಸಿದ್ಧ-ಚಾರಣರೂ, ಗಂಧರ್ವಾಪ್ಸರೆಯರೂ, ಕಿನ್ನರ-ನಾಗರೂ ಆ ದೇವಿಗೆ ಹಲವಾರು ಉಪಾಯನಗಳನ್ನರ್ಪಿಸಿ ಸ್ತೋತ್ರಮಾಡುತ್ತಿದ್ದರು.

ಆ ಸಮಯದಲ್ಲಿ ವಿಷ್ಣುಮಾಯಾದೇವಿಯು ಕಂಸನಿಗೆ ಹೇಳಿದಳು :

**ಕಿಂ ಮಯಾ ಹತಯಾ ಮನ್ದ ಜಾತಃ ಖಲು ತವಾನ್ತಕೃತ್ ।**
**ಯತ್ರ ಕ್ವ ವಾ ಪೂರ್ವಶತ್ರುರ್ಮಾ ಹಿಂಸೀಃ ಕೃಪಣಾನ್ವೃಥಾ ॥೧೨॥**

"ಮೂರ್ಖನೇ! ನನ್ನನ್ನು ಕೊಲ್ಲುವುದರಿಂದ ನಿನಗೇನು ಸಿಕ್ಕುತ್ತದೆ? ಅಮರನಾಗಿಬಿಡುವೆಯಾ? ಹಾಗೆಂದಿಗೂ ಭಾವಿಸಬೇಡ. ನಿನ್ನ ಪೂರ್ವ ಜನ್ಮದ ಶತ್ರುವು ನಿನ್ನನ್ನು ಸಂಹರಿಸುವ ಸಲುವಾಗಿಯೇ ಎಲ್ಲಿಯೋ ಒಂದು ಕಡೆ ಹುಟ್ಟಿ ಬೆಳೆಯುತ್ತಿದ್ದಾನೆ. ವ್ಯರ್ಥವಾಗಿ ನಿರ್ದೋಷಿಗಳಾದ ಹಸುಳೆ ಗಳನ್ನು ಕೊಲ್ಲಬೇಡ."

ಪರೀಕ್ಷಿತ! ಕಂಸನಿಗೆ ಹೀಗೆಂದು ಹೇಳಿ ಭಗವತೀಯೋಗಮಾಯಾ ದೇವಿಯು ಮಾಯವಾದಳು. ಮುಂದೆ ಅವಳು ಭೂಮಂಡಲದಲ್ಲಿ ಹಲವಾರು ಶುಭನಾಮಗಳಿಂದ ಪ್ರತಿಷ್ಠಿತಳಾಗಿ ಪ್ರಸಿದ್ಧಳಾದಳು. ಯೋಗ ಮಾಯಾದೇವಿಯ ಈ ಮಾತನ್ನು ಕೇಳಿ ಕಂಸನಿಗೆ ಮಹಾಶ್ಚರ್ಯವಾಯಿತು. ಆ ಸಮಯದಲ್ಲಿ ಅವನು ದೇವಕಿ-ವಸುದೇವರಿಬ್ಬರನ್ನೂ ಸೆರೆಮನೆಯಿಂದ ಬಿಡುಗಡೆಮಾಡಿ ವಿನಯಪೂರ್ವಕವಾಗಿ ಹೇಳಿದನು :

**ಅಹೋ ಭಗಿನ್ಯಹೋ ಭಾಮ ಮಯಾ ವಾಂ ಬತ ಪಾಪ್ಮನಾ ।**
**ಪುರುಷಾದ ಇವಾಪತ್ಯಂ ಬಹವೋ ಹಿಂಸಿತಾಃ ಸುತಾಃ ॥೧೫॥**

“ಪ್ರೀತಿಯ ತಂಗಿಯೇ! ಗೌರವಕ್ಕೆ ಪಾತ್ರನಾಗಬೇಕಾದ ಭಾವನೇ! ನಾನು ಮಹಾಪಾಪಿಷ್ಠನಾಗಿದ್ದೇನೆ. ನರಭಕ್ಷಕನು ಮಕ್ಕಳನ್ನು ಕೊಂದು ತಿಂದುಹಾಕುವಂತೆ ನಾನು ನಿಮ್ಮೆಲ್ಲ ಮಕ್ಕಳನ್ನೂ ಕೊಂದುಹಾಕಿದೆನು. ಇದರಿಂದ ನನಗೆ ಬಹಳ ದುಃಖವಾಗಿದೆ. ಕರುಣೆಯೆಂಬುದಕ್ಕೆ ನನ್ನ ಹೃದಯದಲ್ಲಿ ಸ್ಥಾನವೇ ಇಲ್ಲದಾಗಿತ್ತು. ಈ ಕಾರಣದಿಂದಾಗಿಯೇ ನಾನು ಜ್ಞಾತಿಗಳನ್ನೂ ಗೆಳೆಯರನ್ನೂ ತೊರೆದೆನು. ನಿಶ್ಚಯವಾಗಿಯೂ ನಾನೊಬ್ಬ ನೀಚನು. ನಾನು ಮಾಡಿರುವ ಈ ದುಷ್ಕರ್ಮಕ್ಕೆ ಎಂತಹ ನರಕಲೋಕಗಳು ನನಗಾಗಿ ಕಾದಿವೆಯೋ ತಿಳಿಯದು. ಬ್ರಹ್ಮಹತ್ಯೆಮಾಡಿದವನಂತೆ ಜೀವಂತ ನಾಗಿದ್ದರೂ ಮೃತಪ್ರಾಯನಾಗಿದ್ದೇನೆ.

**ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವ ಕೇವಲಮ್ ।**
**ಯದ್ವಿಶ್ರಮ್ಭಾದಹಂ ಪಾಪಃ ಸ್ವಸುರ್ನಿಹತವಾನ್ ಶಿಶೂನ್ ॥೧೭॥**

ಮನುಷ್ಯರು ಮಾತ್ರವೇ ಸುಳ್ಳು ಹೇಳುವರೆಂಬುದು ನನ್ನ ಭಾವನೆ ಯಾಗಿತ್ತು. ಈಗ ನೋಡಿದರೆ ದೈವವೂ ಸುಳ್ಳುಹೇಳುವುದೆಂಬುದು ಸ್ಪಷ್ಟ ವಾಗಿದೆ. ಆಕಾಶವಾಣಿಯು ಹೇಳಿದ್ದೇ ಸತ್ಯವೆಂದು ನಂಬಿ ಪಾಪಿಷ್ಠನಾದ ನಾನು ನನ್ನ ತಂಗಿಯ ಮಕ್ಕಳೆಲ್ಲರನ್ನೂ ಕೊಂದುಬಿಟ್ಟೆನು.

**ಮಾ ಶೋಚತಂ ಮಹಾಭಾಗಾವಾತ್ಮಜಾನ್ಸ್ವಕೃತಮ್ಭುಜಃ ।**
**ಜನ್ತವೋ ನ ಸದೈಕತ್ರ ದೈವಾಧೀನಾಸ್ತದಾಸತೇ ॥೧೮॥**

ಮಹಾಭಾಗ್ಯಶಾಲಿಗಳಾದ ತಂಗಿ-ಭಾವಂದಿರೇ! ನಿಮ್ಮ ಮಕ್ಕಳಿಗಾಗಿ

ನೀವು ದುಃಖಪಡಬೇಡಿರಿ. ಅವರೆಲ್ಲರಿಗೂ ಅವರವರ ಕರ್ಮಗಳಿಗೆ ತಕ್ಕುದಾದ ಫಲವು ಸಿಕ್ಕಿರುತ್ತದೆ. ಎಲ್ಲ ಪ್ರಾಣಿಗಳೂ ತಾವು ಮಾಡಿದ ಕರ್ಮಕ್ಕೆ ಅಧೀನವಾಗಿರುತ್ತವೆ. ಆದುದರಿಂದ ಹುಟ್ಟಿದ ಪ್ರಾಣಿಗಳೆಲ್ಲವೂ ಸದಾ-ಸರ್ವದಾ ಒಂದೆಡೆಯಲ್ಲಿಯೇ ಇರಲು ಸಾಧ್ಯವಾಗುವುದಿಲ್ಲ.

**ಭುವಿ ಭೌಮಾನಿ ಭೂತಾನಿ ಯಥಾ ಯಾನ್ತ್ಯಪಯಾನ್ತಿ ಚ ।**
**ನಾಯಮಾತ್ಮಾ ತಥೈತೇಷು ವಿಪರ್ಯೇತಿ ಯಥೈವ ಭೂಃ ॥೧೯॥**

ಭೂಮಿಗೆ ಸಂಬಂಧಿಸಿದಂತೆ ಸಕಲ ಚೇತನಾಚೇತನಪದಾರ್ಥಗಳೂ ಭೂಮಿಯಲ್ಲೇ ಹುಟ್ಟಿ ನಾಶಹೊಂದುತ್ತಿರುತ್ತವೆ. ಇದರಿಂದ ಭೂಮಿಯು ಯಾವ ವ್ಯತ್ಯಾಸವನ್ನೂ ಹೊಂದುವುದಿಲ್ಲ. ಮಣ್ಣಿನಿಂದ ಹಲವಾರು ಬಗೆಯ ಗಡಿಗೆಯೇ ಮೊದಲಾದ ಪದಾರ್ಥಗಳು ಆಗುತ್ತವೆ ಮತ್ತು ನಾಶವನ್ನೂ ಹೊಂದುತ್ತಿರುತ್ತವೆ. ಆದರೆ ಮಣ್ಣಿನಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಅಂತೆಯೇ ಮನುಷ್ಯನ ಶರೀರವು ಹುಟ್ಟುತ್ತದೆ ; ಬೆಳೆಯುತ್ತದೆ ; ನಾಶವನ್ನು ಹೊಂದುತ್ತಿರುತ್ತದೆ. ಆದರೆ ಶರೀರದಲ್ಲಿರುವ ಆತ್ಮನ ಮೇಲೆ ಇದರ ಪ್ರಭಾವವೇನೂ ಆಗುವುದಿಲ್ಲ. ಆತ್ಮವು ಯಾವ ವಿಧವಾದ ವ್ಯತ್ಯಾಸವನ್ನೂ ಹೊಂದುವುದಿಲ್ಲ.

**ಯಥಾನೇವಂವಿದೋ ಭೇದೋ ಯತ ಆತ್ಮವಿಪರ್ಯಯಃ ।**
**ದೇಹಯೋಗವಿಯೋಗೌ ಚ ಸಂಸೃತಿರ್ನ ನಿವರ್ತತೇ ॥೨೦॥**

ಯಾರು ಈ ತತ್ತ್ವವನ್ನು ತಿಳಿದಿಲ್ಲವೋ ಅಂತಹವರು ಅನಾತ್ಮವಾದ ಶರೀರವನ್ನೇ ಆತ್ಮವೆಂದು ಭಾವಿಸಿಕೊಂಡಿರುತ್ತಾರೆ. ಇದಕ್ಕೇ ವಿಪರೀತಬುದ್ಧಿ ಎನ್ನುವುದು. ದೇಹಾತ್ಮಬುದ್ಧಿಯಿರುವುದರಿಂದ ಅಂತಹವನಿಗೆ ಹುಟ್ಟು-ಸಾವು ಗಳು ಆಗುತ್ತಲೇ ಇರುತ್ತವೆ. ಸಂಸಾರಬಂಧನದಿಂದ ಬಿಡುಗಡೆಯೇ ಆಗುವು ದಿಲ್ಲ. ಎಂದಿನವರೆಗೆ ದೇಹವೇ ಆತ್ಮವೆಂಬ ಅಜ್ಞಾನವು ತೊಲಗಿಹೋಗುವು ದಿಲ್ಲವೋ ಅಂದಿನವರೆಗೂ ಮನುಷ್ಯನು ದುಃಖರೂಪವಾದ ಸಂಸಾರಸಾಗರ ದಿಂದ ಪಾರಾಗುವುದಿಲ್ಲ.

ಆದುದರಿಂದ, ಅಕ್ಕರೆಯ ತಂಗಿಯೇ! ನಾನೇ ನಿನ್ನ ಎಲ್ಲ ಮಕ್ಕಳನ್ನೂ ಕೊಂದಿದ್ದೇನೆ. ಇದು ನಿಜ. ಆದರೂ ನೀನು ತತ್ತ್ವದ ಹಿನ್ನೆಲೆಯಲ್ಲಿ

ಇದನ್ನು ವಿವೇಚಿಸಿ ದುಃಖವನ್ನು ತೊರೆದುಬಿಡು. ಏಕೆಂದರೆ : **ಸರ್ವಃ ಸ್ವಕೃತಂ ವಿನ್ದತೇऽವಶಃ ।** ಯಾವ ಪ್ರಾಣಿಯೂ ಸ್ವತಂತ್ರವಲ್ಲ. ಅದು ಮಾಡಿದ ಕರ್ಮಫಲವನ್ನು ಅನುಭವಿಸಿಯೇ ತೀರುತ್ತದೆ.

**ಯಾವದ್ಧತೋऽಸ್ಮಿ ಹನ್ತಾಸ್ಮೀತ್ಯಾತ್ಮಾನಂ ಮನ್ಯತೇऽಸ್ವದೃಕ್ ।**
**ತಾವತ್ತದಭಿಮಾನ್ಯಜ್ಞೋ ಬಾಧ್ಯಬಾಧಕತಾಮಿಯಾತ್ ॥೨೨॥**

ತನ್ನ ಸ್ವಸ್ವರೂಪವನ್ನು ತಿಳಿಯದೆ ಎಲ್ಲಿಯವರೆಗೆ ಕೊಂದೆನೆಂದಾಗಲೀ ಕೊಲ್ಲಲ್ಪಟ್ಟವನೆಂದಾಗಲೀ ತಿಳಿಯುವನೋ ಅಲ್ಲಿಯವರೆಗೂ ಶರೀರದ ಹುಟ್ಟು-ಸಾವುಗಳ ಮೇಲೆ ಅಭಿಮಾನವನ್ನು ಇಟ್ಟಿರುವ ಆ ಅಜ್ಞಾನಿಯು ಬಾಧ್ಯ-ಬಾಧಕಭಾವವನ್ನು (ಕೊಂದುದಕ್ಕೆ ಮತ್ತು ಕೊಲ್ಲಲ್ಪಟ್ಟುದಕ್ಕೆ ಪಾಪವನ್ನು) ಹೊಂದುತ್ತಾನೆ. ಆತ್ಮನಿಗೆ ಸಾವಿಲ್ಲವೆಂಬ ತತ್ತ್ವವು ತಿಳಿಯುವವರೆಗೂ, ಶರೀರವೇ ಆತ್ಮನಲ್ಲ–ಎಂಬ ನಿಶ್ಚಯಬುದ್ಧಿಯು ಉಂಟಾಗುವವರೆಗೂ ಪಾಪ-ಪುಣ್ಯಗಳ ಸಂಬಂಧವಿದ್ದೇ ಇರುತ್ತದೆ."

ಕಂಸನು ಹೀಗೆ ಹೇಳಿ ಕೈಜೋಡಿಸಿಕೊಂಡು ದೇವಕೀ-ವಸುದೇವರ ಮುಂದೆ ನಿಂತು ಪುನಃ ಹೇಳಿದನು :

"ನೀವು ಸತ್ಪುರುಷರೂ ದೀನವತ್ಸಲರೂ ಆಗಿರುವಿರಿ. ನೀವಿಬ್ಬರೂ ನನ್ನ ದುಷ್ಟತನವನ್ನು ಕ್ಷಮಿಸಿಬಿಡಿರಿ." ಹೀಗೆ ಹೇಳುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಕಂಸನು ದೇವಕೀ-ವಸುದೇವರ ಕಾಲುಗಳನ್ನು ಭದ್ರವಾಗಿ ಹಿಡಿದುಕೊಂಡನು.

ಯೋಗಮಾಯಾದೇವಿಯ ಮಾತುಗಳಲ್ಲಿ ವಿಶ್ವಾಸವನ್ನಿಟ್ಟು ಕಂಸನು ತಂಗಿಗೂ-ಭಾವನಿಗೂ ತೊಡಿಸಿದ್ದ ಸಂಕೋಲೆಯನ್ನು ಬಿಚ್ಚಿದನು. ಅವರಿಬ್ಬರ ವಿಷಯದಲ್ಲಿಯೂ ತನಗಿರುವ ಅಪಾರವಾದ ಪ್ರೀತಿಯನ್ನು ಮಾತುಗಳಿಂದಲೂ, ಕಾರ್ಯದಿಂದಲೂ ವ್ಯಕ್ತಪಡಿಸಿದನು.

ದೇವಕೀದೇವಿಯು, ಅಣ್ಣನಾದ ಕಂಸನಿಗೆ ಪಶ್ಚಾತ್ತಾಪವುಂಟಾಗಿರುವುದೆಂದು ಭಾವಿಸಿ ಅವನನ್ನು ಕ್ಷಮಿಸಿಬಿಟ್ಟಳು. ಅವನು ಈ ಹಿಂದೆ ಮಾಡಿದ್ದ ಅಪರಾಧಗಳೆಲ್ಲವನ್ನೂ ಮರೆತೇಬಿಟ್ಟಳು. ವಸುದೇವನೂ ಕೂಡ ನಸು-ನಗುತ್ತಾ ಕಂಸನಿಗೆ ಹೇಳಿದನು :

“ಮಹಾಭಾಗನೇ! ಕಂಸರಾಜಕುಮಾರ! ನೀನು ಹೇಳಿದಂತೆಯೇ ಸರಿ. ಅಜ್ಞಾನದ ಕಾರಣದಿಂದ ಶರೀರ-ಮನೆ-ಭೂಮಿ-ಕಾಣೆ-ಐಶ್ವರ್ಯಾದಿಗಳಲ್ಲಿ ‘ನಾನು ನನ್ನದು’ ಎಂಬ ಭಾವನೆಯುಂಟಾಗುತ್ತದೆ. ಇದರಿಂದಲೇ ‘ಇದು ನನ್ನದು. ಇದು ಬೇರೆಯವರದ್ದು’–ಎಂಬ ಭೇದಭಾವವೂ ಉಂಟಾಗುತ್ತದೆ. ಈ ಭೇದಬುದ್ಧಿಯಿಂದ ಪಾಪಕಾರ್ಯಗಳು ನಡೆಯುವುವು. ಆದುದರಿಂದ ಎಲ್ಲಕ್ಕೂ ದೇಹಾತ್ಮಬುದ್ಧಿಮೂಲವಾದ ಅಜ್ಞಾನವೇ ಮೂಲ ಕಾರಣವು. ಭೇದಬುದ್ಧಿಯು ಮನಸ್ಸಿನಲ್ಲಿ ನಾಟಿದೊಡನೆಯೇ ಶೋಕ-ಹರ್ಷ-ಭಯ-ದ್ವೇಷ-ಲೋಭ-ಮೋಹ-ಮದಗಳು ಮನುಷ್ಯನಲ್ಲಿ ಮನೆಮಾಡಿಕೊಳ್ಳುತ್ತವೆ. ಮದ-ಮಾತ್ಸರ್ಯಾದಿಗಳಿಂದ ಜನರು ಕುರುಡ ರಾಗಿ ಬಿಡುತ್ತಾರೆ. ಇತರರನ್ನು ಕೊಲ್ಲುತ್ತಾರೆ ; ತಾವೂ ಕೊಲ್ಲಲ್ಪಡುತ್ತಾರೆ. ಆದರೆ ಪ್ರೇರಕನಾದ ಪರಮೇಶ್ವರನೇ ಪರಸ್ಪರವಾಗಿ ಭೇದನಿಮಿತ್ತಗಳಾದ ಖಡ್ಗಾದಿ ಭಾವಪದಾರ್ಥ ಗಳಿಂದ ಭಿನ್ನದೇಹಾದಿ ಭಾವಪದಾರ್ಥಗಳನ್ನು ನಾಶಗೊಳಿಸುವನೆಂಬುದನ್ನು ಅವರು ಅರಿಯರು.”

ಶ್ರೀಶುಕದೇವರು ಹೇಳುತ್ತಾರೆ :

ಪರೀಕ್ಷಿತನೇ! ದೇವಕಿ-ವಸುದೇವರೂ ಮತ್ತು ಕಂಸನೂ ಹೀಗೆ ನಿಷ್ಕಾಪಟ್ಯದಿಂದ ಮತ್ತು ಶುದ್ಧಭಾವದಿಂದ ಪ್ರೇಮಪುರಸ್ಸರವಾಗಿ ಪರಸ್ಪರ ಮಾತನಾಡಿಕೊಂಡರು. ಬಳಿಕ ಕಂಸನು ತಂಗಿ ಮತ್ತು ಭಾವನ ಅನುಮತಿ ಯನ್ನು ಪಡೆದು ತನ್ನ ಅರಮನೆಗೆ ತೆರಳಿದನು. ರಾತ್ರಿಯು ಕಳೆದು ಬೆಳಗಾಗುತ್ತಲೇ ಕಂಸನು ತನ್ನ ಮಂತ್ರಿಗಳನ್ನು ಸಮಾಲೋಚನೆಗಾಗಿ ಕರೆಸಿದನು. ಮಂತ್ರಿಮಹೋದಯರೆಲ್ಲರೂ ಸುಖಾಸನಗಳಲ್ಲಿ ಕುಳಿತನಂತರ ಕಂಸನು ಅವರಿಗೆ ಯೋಗಮಾಯಾದೇವಿಯು ಹೇಳಿದ ಮಾತುಗಳನ್ನು ವಿವರಿಸಿ ಹೇಳಿದನು. ಕಂಸನ ಮಂತ್ರಿಗಳು ನೀತಿಶಾಸ್ತ್ರದಲ್ಲಿ ನಿಪುಣರಾಗಿರ ಲಿಲ್ಲ. ಮೇಲಾಗಿ ಅವರು ದೈತ್ಯರಾಗಿದ್ದುದರಿಂದ ಸ್ವಾಭಾವಿಕವಾಗಿಯೇ ಅವರು ದೇವತೆಗಳ ವಿಷಯದಲ್ಲಿ ಶತ್ರುತ್ವವನ್ನು ತಾಳಿದ್ದರು. ತಮ್ಮ ಸ್ವಾಮಿಯಾದ ಕಂಸನ ಮಾತನ್ನು ಕೇಳುತ್ತಲೇ ಅವರಿಗೆ ದೇವತೆಗಳ ವಿಷಯದಲ್ಲಿ ಇನ್ನೂ ಹೆಚ್ಚಿನ ಅಸಹನೆಯುಂಟಾಯಿತು. ಕಂಸನಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೇಳಿದರು :

“ಭೋಜರಾಜ! ನಿನ್ನ ಶತ್ರುವು ಈಗಾಗಲೇ ಎಲ್ಲಿಯೋ ಹುಟ್ಟಿ ಬೆಳೆಯುತ್ತಿರುವನೆಂಬ ವಿಷಯವನ್ನು ಯೋಗಮಾಯಾದೇವಿಯು ಹೇಳಿದ್ದರೆ ಈಗಲೇ ನಾವು ಅದರ ವಿನಾಶಕ್ಕೆ ತಕ್ಕುದಾದ ಕಾರ್ಯಕ್ರಮವನ್ನು ಕೈಗೊಳ್ಳಲೇಬೇಕು. ನಗರಗಳಲ್ಲಿಯೂ, ಊರುಗಳಲ್ಲಿಯೂ, ಹಳ್ಳಿಗಳಲ್ಲಿಯೂ, ಗೊಲ್ಲರದೊಡ್ಡಿಗಳಲ್ಲಿಯೂ ಇರುವ ಹಲ್ಲುಹುಟ್ಟಿರುವ ಅಥವಾ ಹಲ್ಲುಹುಟ್ಟದೇ ಇರುವ ಎಲ್ಲ ಮಕ್ಕಳನ್ನೂ ಕೊಂದುಹಾಕೋಣ. ಅವರಲ್ಲಿ ನಿನ್ನ ಶತ್ರುವಾದವನೂ ಸೇರಿಯೇ ಇರುತ್ತಾನೆ. ಸಮರಭೀರುಗಳಾದ ದೇವತೆಗಳು ತಾನೇ ನಮ್ಮನ್ನು ಏನುಮಾಡಿಯಾರು? ಯುದ್ಧೋದ್ಯಮವನ್ನು ಕೈಗೊಳ್ಳುವರೇ? ಎಂದಿಗೂ ಸಾಧ್ಯವಿಲ್ಲ. ನೀನು ಮಾಡುವ ಧನುಷ್ಟೇಂಕಾರವನ್ನು ಕೇಳಿದೊಡನೆಯೇ ಅವರೆಲ್ಲರೂ ಗಾಬರಿಗೊಂಡು ಉದ್ವಿಗ್ನರಾಗುತ್ತಾರೆ. ನೀನು ಸತತವಾಗಿ ಬಿಡುವ ಬಾಣಗಳ ಸಮೂಹಗಳಿಂದ ಸರ್ವತ್ರ ವಧಿಸಲ್ಪಡುವ ಆ ದೇವತೆಗಳು ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಸಮರಾಂಗಣವನ್ನು ಬಿಟ್ಟು ಓಡಿಹೋಗುತ್ತಾರೆ. ಮತ್ತೆ ಕೆಲವರು ದೇವತೆಗಳು ಗಾಬರಿಯಿಂದ ಓಡಿಹೋಗಲೂ ಸಾಧ್ಯವಾಗದೆ ಶಸ್ತ್ರಾಸ್ತ್ರಗಳನ್ನು ಪರಿತ್ಯಜಿಸಿ ಕೈಜೋಡಿಸಿಕೊಂಡು ದೀನರಾಗಿ ಪ್ರಾಣಭಿಕ್ಷೆಯನ್ನು ಬೇಡುತ್ತಾರೆ. ಮತ್ತೆ ಕೆಲವು ದೇವತೆಗಳ ತಲೆಗೂದಲು ಬಿಚ್ಚಿಹೋಗಿರುತ್ತದೆ. ಬಟ್ಟೆಯೇ ಭದ್ರವಾಗಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ‘ಅಯ್ಯೋ! ಭಯವಾಗುತ್ತಿದೆ. ನಮ್ಮನ್ನು ಕಾಪಾಡಿರಿ’–ಎಂದೂ ಕೂಗಿಕೊಳ್ಳುತ್ತಿರುತ್ತಾರೆ.

ಆದರೆ ಧರ್ಮಭೀರುವಾದ ನೀನು, ಯದ್ಯಪಿ ಅವರು ನಿನ್ನ ಶತ್ರುಗಳೇ ಆಗಿದ್ದರೂ, ಆಯುಧಗಳನ್ನು ಪರಿತ್ಯಾಗಮಾಡಿದ್ದರೆ, ಭಯಗೊಂಡಿದ್ದರೆ, ಧನುಸ್ಸುಗಳು ಮುರಿದುಹೋಗಿದ್ದರೆ, ಯುದ್ಧದಿಂದ ವಿಮುಖರಾಗಿದ್ದರೆ ಅವರನ್ನು ಸಂಹರಿಸುವುದಿಲ್ಲ.

ಎಲ್ಲವೂ ಕ್ಷೇಮವಾಗಿರುವಾಗ ಯುದ್ಧವಿಲ್ಲದೇ ಶಾಂತವಾಗಿರುವಾಗ ನಾವೇ ಧೀರರೆಂದೂ, ವೀರರೆಂದೂ, ಶೂರರೆಂದೂ ಕೊಚ್ಚಿಕೊಳ್ಳುವ ದೇವತೆಗಳಿಂದ ಏನಾದೀತು? ಯಾವಾಗಲೂ ಬಚ್ಚಿಟ್ಟುಕೊಂಡೇ ಕೆಲಸಮಾಡುವ

ಹರಿಯಿಂದೇನಾದೀತು? ಮಂದರಪರ್ವತದ ವನಗಳಲ್ಲಿಯೇ ಯಾವಾಗಲೂ ಅಲೆದಾಡುವ ಶಿವನಿಂದೇನಾದೀತು? ಯಾವಾಗಲೂ ಮೂಗು ಮುಚ್ಚಿಕೊಂಡು ತಪಸ್ಸಿನಲ್ಲಿ ಕುಳಿತಿರುವ ಬ್ರಹ್ಮನಿಗಾದರೂ ನಮ್ಮನ್ನು ಎದುರಿಸಲು ಸಾಧ್ಯವೇ? ಅಲ್ಪವೀರ್ಯನಾದ, ಹೇಡಿಯಾದ ಇಂದ್ರನಿಂದೇನಾಗುತ್ತದೆ? ಅವನಾದರೂ ಅಜೇಯರಾದ ನಮ್ಮನ್ನು ಎದುರಿಸಬಲ್ಲನೇ? ನಿಜವಾಗಿ ಹೇಳುವುದಾದರೆ ದೇವತೆಗಳು ನಮ್ಮನ್ನು ಎದುರಿಸಿ ಯುದ್ಧ ಮಾಡಲು ಖಂಡಿತವಾಗಿಯೂ ಸಮರ್ಥರಲ್ಲ. ಆದರೂ ನಮಗೆ ದಾಯಾದರಾಗಿ, ಶತ್ರುಗಳಾಗಿರುವ ಈ ದೇವತೆಗಳನ್ನು ನಾವು ಖಂಡಿತವಾಗಿಯೂ ಉಪೇಕ್ಷಿಸಬಾರದು. ಇದು ನಮ್ಮ ಅಭಿಪ್ರಾಯವಾಗಿದೆ. ಅಂತಹ ದೇವತೆಗಳನ್ನು ನಿರ್ಮೂಲಗೊಳಿಸುವ ಸಲುವಾಗಿ ನಿನ್ನ ಅನುಯಾಯಿಗಳಾಗಿರುವ ನಮಗೆ ಅನುಮತಿಯನ್ನು ನೀಡು.

**ಯಥಾಮಯೋಽಙ್ಗೇ ಸಮುಪೇಕ್ಷಿತೋ ನೃಭಿ-**
**ರ್ನ ಶಕ್ಯತೇ ರೂಢಪದಶ್ಚಿಕಿತ್ಸಿತುಮ್ ।**
**ಯಥೇನ್ದ್ರಿಯಗ್ರಾಮ ಉಪೇಕ್ಷಿತಸ್ತಥಾ**
**ರಿಪುರ್ಮಹಾನ್ಬದ್ಧಬಲೋ ನ ಚಾಲ್ಯತೇ ॥೩೮॥**

ಮನುಷ್ಯನಿಗೆ ರೋಗಬರುವುದು ಸ್ವಾಭಾವಿಕ. ರೋಗವು ಕಂಡೊಡನೆಯೇ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕು. ಉದಾಸೀನಮಾಡಿಬಿಟ್ಟರೆ ರೋಗವು ಉಲ್ಬಣವಾಗಿ ಎಂತಹ ಚಿಕಿತ್ಸೆಗೂ ಬಗ್ಗುವುದೇ ಇಲ್ಲ. ಅದೇ ರೀತಿಯಲ್ಲಿ ಶತ್ರುವು ಪ್ರಬಲನಾಗುವುದಕ್ಕೆ ಮೊದಲೇ ಅವನನ್ನು ನಾನಾ ವಿಧವಾದ ಉಪಾಯಗಳಿಂದ ನಿರ್ಮೂಲನಮಾಡಬೇಕು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಮೊದಲಿನಿಂದಲೂ ಅಭ್ಯಾಸಮಾಡಬೇಕು. ಹತೋಟಿ ಮೀರಿದ ಇಂದ್ರಿಯಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಅದರಂತೆ ಶತ್ರುಗಳನ್ನು ನಾವು ಈಗಲೇ ಬಗ್ಗುಬಡಿಯಬೇಕು. ಉದಾಸೀನಮಾಡಿದರೆ ಅವರು ಬಲವನ್ನು ಸಂಗ್ರಹಿಸಿ ನಮ್ಮ ವಿನಾಶಕ್ಕೆ ಪ್ರಯತ್ನಿಸುವರು. ಶತ್ರುವು ಬಲಿಷ್ಠನಾದನಂತರ ಅವನನ್ನು ಬಗ್ಗಿಸಲು ಸಾಧ್ಯವಾಗುವುದೇ ಇಲ್ಲ.

**ಮೂಲಂ ಹಿ ವಿಷ್ಣುರ್ದೇವಾನಾಂ ಯತ್ರ ಧರ್ಮಃ ಸನಾತನಃ ।**
**ತಸ್ಯ ಚ ಬ್ರಹ್ಮ ಗೋವಿಪ್ರಾಸ್ತಪೋ ಯಜ್ಞಾಃ ಸದಕ್ಷಿಣಾಃ ॥೩೯॥**
**ತಸ್ಮಾತ್ಸರ್ವಾತ್ಮನಾ ರಾಜನ್ಬ್ರಾಹ್ಮಣಾನ್ಬ್ರಹ್ಮವಾದಿನಃ ।**
**ತಪಸ್ವಿನೋ ಯಜ್ಞಶೀಲಾನ್ಗಾಶ್ಚ ಹನ್ಮೋ ಹವಿರ್ದುಘಾಃ ॥೪೦॥**

ಕಂಸರಾಜಕುಮಾರ! ನಿನಗೂ ತಿಳಿದಿರುವಂತೆ ದೇವತೆಗಳಿಗೆಲ್ಲರಿಗೂ ಮೂಲನಾದವನು ವಿಷ್ಣುವು. ಸನಾತನಧರ್ಮವಿರುವೆಡೆಯಲ್ಲಿ ಅವನಿರುತ್ತಾನೆ. ಸನಾತನಧರ್ಮಕ್ಕೆ ಮೂಲಸ್ರೋತಗಳೆಂದರೆ ವೇದ, ಗೋವುಗಳು, ಬ್ರಾಹ್ಮಣರು, ತಪಸ್ಸು ಮತ್ತು ಬಹುದಕ್ಷಿಣೆಗಳುಳ್ಳ ಯಜ್ಞಗಳು. ಆದುದ ರಿಂದ ನಾವೀಗಲೇ ನಿನ್ನ ಅನುಮತಿಯನ್ನು ಪಡೆದು ವೇದವಾದಿಗಳಾದ ಬ್ರಾಹ್ಮಣರನ್ನೂ, ತಪಸ್ವಿಗಳನ್ನೂ, ಯಾಜ್ಞಿಕರನ್ನೂ, ಯಜ್ಞದ ಸಲುವಾಗಿ ಸಂಗ್ರಹಿಸಿದ ತುಪ್ಪವೇ ಮೊದಲಾದುವುಗಳನ್ನೂ, ಈಯುವ ಗೋವು ಗಳನ್ನೂ ಧ್ವಂಸಮಾಡಿಬಿಡುತ್ತೇವೆ.

**ವಿಪ್ರಾಗಾವಶ್ಚ ವೇದಾಶ್ಚ ತಪಃ ಸತ್ಯಂ ದಮಃ ಶಮಃ ।**
**ಶ್ರದ್ಧಾ ದಯಾ ತಿತಿಕ್ಷಾ ಚ ಕ್ರತವಶ್ಚ ಹರೇಸ್ತನೂಃ ॥೪೧॥**

ಬ್ರಾಹ್ಮಣರು, ಗೋವುಗಳು, ವೇದಗಳು, ತಪಸ್ಸು, ಸತ್ಯ, ಇಂದ್ರಿಯ ನಿಗ್ರಹ, ಮನೋನಿಗ್ರಹ, ಶ್ರದ್ಧೆ, ದಯೆ, ಸೈರಣೆ, ಯಜ್ಞಗಳು–ಇವುಗಳೇ ಶ್ರೀಹರಿಯ ಶರೀರವಾಗಿವೆ.

**ಸ ಹಿ ಸರ್ವಸುರಾಧ್ಯಕ್ಷೋ ಹ್ಯಸುರದ್ವಿಡ್ಗುಹಾಶಯಃ ।**
**ತನ್ಮೂಲಾ ದೇವತಾಃ ಸರ್ವಾಃ ಸೇಶ್ವರಾಃ ಸಚತುರ್ಮುಖಾಃ ।**
**ಅಯಂ ವೈ ತದ್ವಧೋಪಾಯೋ ಯದೃಷೀಣಾಂ ವಿಹಿಂಸನಮ್ ॥**

ಆ ಶ್ರೀಹರಿಯೇ ಸಮಸ್ತದೇವತೆಗಳಿಗೂ ಅಧ್ಯಕ್ಷನಾಗಿದ್ದಾನೆ. ಸಮಸ್ತದಾನವರಿಗೂ ಶತ್ರುವಾಗಿದ್ದಾನೆ. ಆದರೆ ಅವನು ಯಾವಾಗಲೂ ಹೃದಯಗುಹೆಯಲ್ಲೇ ಮಲಗಿರುತ್ತಾನೆ. ಮಹಾದೇವನಿಗೂ, ಬ್ರಹ್ಮನಿಗೂ, ಇಂದ್ರಪ್ರಮುಖರಾದ ಸಮಸ್ತದೇವತೆಗಳಿಗೂ ಅವನೇ ಮೂಲಪುರುಷನು. ಋಷಿಗಳನ್ನು ಸಂಹರಿಸುವುದೇ ಅವನನ್ನು ಸಂಹರಿಸಲಿರುವ ಒಂದು ಮುಖ್ಯವಾದ ಉಪಾಯವಾಗಿದೆ. ಆದುದರಿಂದ ಇವರೆಲ್ಲರ ವಿಧ್ವಂಸನಕ್ಕಾಗಿ ಶೀಘ್ರವಾಗಿ ನಮಗೆ ಅನುಮತಿಯನ್ನು ದಯಪಾಲಿಸು.”

ಪರೀಕ್ಷಿತಮಹಾರಾಜ! ಸ್ವಭಾವತಃ ಕೆಟ್ಟಬುದ್ಧಿಯವನೇ ಆದ ಕಂಸನು ಅವನಿಗಿಂತಲೂ ಹೆಚ್ಚು ದುಷ್ಟಬುದ್ಧಿಯಿಂದ ಕೂಡಿದ್ದ ದುರ್ಮಂತ್ರಿಗಳೊಡನೆ ಸಮಾಲೋಚಿಸಿ ವಿಷ್ಣುವಿಗೆ ಶರೀರಪ್ರಾಯರಾದ ಬ್ರಾಹ್ಮಣರನ್ನು ಹಿಂಸಿಸುವುದೇ ತನಗೆ ಹಿತವೆಂದು ಭಾವಿಸಿದನು. ಇದಕ್ಕೆ ಕಾರಣ : ಅವನು ಕಾಲಪಾಶದಿಂದ ಕಟ್ಟಲ್ಪಟ್ಟಿದ್ದನು. ಕಾಲಪಾಶವು ಅವನ ಕೊರಳಿಗೆ ಸುತ್ತಿ ಹಾಕಿಕೊಂಡಿದ್ದಿತು. ಅದಕ್ಕೆ ಅನುಸಾರವಾಗಿಯೇ ಅವನ ಬುದ್ಧಿಯೂ ಓಡುತ್ತಿದ್ದಿತು. ಹೀಗೆ ಕಂಸನು, ಇತರರನ್ನು ಹಿಂಸಿಸುವುದರಲ್ಲಿಯೇ ವಿಶೇಷ ವಾದ ಆಸಕ್ತಿಯುಳ್ಳ, ಬೇಕು-ಬೇಕಾದ ರೂಪಗಳನ್ನು ಧರಿಸಲು ಸಮರ್ಥ ರಾದ ದಾನವರನ್ನು, ಸತ್ಪುರುಷರನ್ನು ಹಿಂಸಿಸುವ ಕಾರ್ಯದಲ್ಲಿ ನಿಯೋಜಿಸಿ ಅವರನ್ನು ಎಲ್ಲ ದಿಕ್ಕುಗಳಿಗೂ ಕಳುಹಿಸಿಕೊಟ್ಟು ಕೃತಕೃತ್ಯನಾದೆನೆಂಬ ಭಾವನೆ ಯಿಂದ ಅರಮನೆಗೆ ಹಿಂದಿರುಗಿದನು. ಆ ದಾನವರೆಲ್ಲರೂ ಸಾಮಾನ್ಯವಾಗಿ ರಜೋಗುಣಪ್ರಧಾನರು. ಸತ್ಪುರುಷರನ್ನು ಕೊಲೆಮಾಡುವ ಕಾರ್ಯವನ್ನು ವಹಿಸಿಕೊಂಡ ಅವರು ಅತ್ಯಂತ ತಮೋಗುಣಿಗಳಾಗಿದ್ದುದರಿಂದ ಉಚಿತ ವಾದ ಕಾರ್ಯ ಯಾವುದು? ಅನುಚಿತವಾದ ಕಾರ್ಯ ಯಾವುದು?–ಎಂಬ ವಿವೇಚನೆಯೇ ಅವರಿಗೆ ಹೊರಟುಹೋಯಿತು. ಮೃತ್ಯುಮುಖರಾಗಿದ್ದ ಅವರು ಸತ್ಪುರುಷರನ್ನು ಬಹಳವಾಗಿ ದ್ವೇಷಿಸತೊಡಗಿದರು.

ಪರೀಕ್ಷಿತನೇ! ಸತ್ಪುರುಷರನ್ನು ಯಾವುದೇ ಕಾರಣದಿಂದಲೂ ದ್ವೇಷಿಸಬಾರದು. ಅವರನ್ನು ದ್ವೇಷಿಸುವುದರಿಂದ ಸರ್ವನಾಶವಾಗುತ್ತದೆ.

**ಆಯುಃ ಶ್ರಿಯಂ ಯಶೋ ಧರ್ಮಂ ಲೋಕಾನಾಶಿಷ ಏವ ಚ ।**
**ಹನ್ತಿ ಶ್ರೇಯಾಂಸಿ ಸರ್ವಾಣಿ ಪುಂಸೋ ಮಹದತಿಕ್ರಮಃ ॥೪೬॥**

ಸತ್ಪುರುಷರನ್ನು ಮೀರಿ ನಡೆಯುವುದರಿಂದ, ಅವರನ್ನು ಅನಾದರಣೆ ಮಾಡುವುದರಿಂದ ಮತ್ತು ನಿಷ್ಕಾರಣವಾಗಿ ಹಿಂಸಿಸುವುದರಿಂದ ಆಯುಸ್ಸು, ಕೀರ್ತಿ, ಧರ್ಮ, ಲೋಕ-ಪರಲೋಕಗಳೂ, ವಿಷಯಸುಖ-ಭೋಗಗಳೂ, ಸಮಸ್ತವಾದ ಕಲ್ಯಾಣಸಾಧನೆಗಳೂ ನಿಷ್ಫಲವಾಗಿ ಹೋಗುತ್ತವೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪ನೆಯ ಅಧ್ಯಾಯವು ಮುಗಿಯಿತು.

## ಗೋಕುಲದಲ್ಲಿ ಭಗವಂತನ ಜನ್ಮೋತ್ಸವ

ಶ್ರೀಶುಕರು ಹೇಳುತ್ತಾರೆ :

**ನನ್ದಸ್ತ್ವಾತ್ಮಜ ಉತ್ಪನ್ನೇ ಜಾತಾಹ್ಲಾದೋ ಮಹಾಮನಾಃ ।**
**ಆಹೂಯ ವಿಪ್ರಾನ್ವೇದಜ್ಞಾನ್ ಸ್ನಾತಃ ಶುಚಿರಲಂಕೃತಃ ॥೧॥**
**ವಾಚಯಿತ್ವಾ ಸ್ವಸ್ತ್ಯಯನಂ ಜಾತಕರ್ಮಾತ್ಮಜಸ್ಯ ವೈ ।**
**ಕಾರಯಾಮಾಸ ವಿಧಿವತ್ಪಿತೃದೇವಾರ್ಚನಂ ತಥಾ ॥೨॥**

ಪರೀಕ್ಷಿತಮಹಾರಾಜ! ಮಹಾತ್ಮನಾದ, ಉದಾರನಾದ, ನಂದ ಗೋಪನು ಮಗನು ಹುಟ್ಟುತ್ತಲೇ ಆನಂದಸಾಗರದಲ್ಲಿ ಮುಳುಗಿಹೋದನು. ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಸ್ನಾನಮಾಡಿ ಪವಿತ್ರನಾಗಿ ಸುಂದರ ವಾದ ವಸ್ತ್ರಾಭರಣಗಳನ್ನು ತೊಟ್ಟುಕೊಂಡನು. ವೇದಜ್ಞರಾದ ಬ್ರಾಹ್ಮಣರನ್ನು ಕರೆಯಿಸಿ ಆಗತಾನೇ ಹುಟ್ಟಿದ ಶಿಶುವಿಗೆ ಸ್ವಸ್ತಿವಾಚನವನ್ನೂ ಜಾತ ಕರ್ಮಸಂಸ್ಕಾರವನ್ನೂ ಮಾಡಿಸಿದನು. ದೇವ-ಪಿತೃಗಳಿಗೂ ವಿಧಿಪೂರ್ವಕ ವಾಗಿ ಅರ್ಚನೆಯನ್ನು ಸಲ್ಲಿಸಿದನು.

ಶ್ರೀಕೃಷ್ಣಜನ್ಮೋತ್ಸವದ ಸಮಯದಲ್ಲಿ ನಂದಗೋಪನು ಬ್ರಾಹ್ಮಣರಿಗೆ ವಸ್ತ್ರಗಳಿಂದಲೂ, ಆಭರಣಗಳಿಂದಲೂ ಸಮಲಂಕೃತವಾದ ಎರಡು ಲಕ್ಷ ಗೋವುಗಳನ್ನು ದಾನವಾಗಿ ಕೊಟ್ಟನು. ರತ್ನಗಳಿಂದಲೂ, ಸುವರ್ಣ ನಾಣ್ಯಗಳಿಂದಲೂ, ವಸ್ತ್ರಗಳಿಂದಲೂ ಸಮಲಂಕೃತವಾದ ಏಳು ಎಳ್ಳಿನ ಪರ್ವತಗಳನ್ನೂ ಬ್ರಾಹ್ಮಣರಿಗೆ ದಾನಮಾಡಿದನು.

**ಕಾಲೇನ ಸ್ನಾನಶೌಚಾಭ್ಯಾಂ ಸಂಸ್ಕಾರೈಸ್ತಪಸೇಜ್ಯಯಾ ।**
**ಶುಧ್ಯನ್ತಿ ದಾನೈಃ ಸನ್ತುಷ್ಟ್ಯಾ ದ್ರವ್ಯಾಣ್ಯಾತ್ಮಾತ್ಮವಿದ್ಯಯಾ ॥೪॥**

ಹೊಸ ನೀರು ಮತ್ತು ನೆಲ ಮುಂತಾದ ದ್ರವ್ಯಗಳು ಅಶುದ್ಧವಾಗಿ ದ್ದರೂ ಕೊಂಚಕಾಲಾನಂತರ ಶುದ್ಧಿಹೊಂದುತ್ತವೆ. ಕಾಲವು ಅವುಗಳನ್ನು ಶುದ್ಧಿಪಡಿಸುತ್ತದೆ. ದೇಹವೇ ಮುಂತಾದ ದ್ರವ್ಯಗಳು ಸ್ನಾನದಿಂದಲೂ ಪಾತ್ರೆ, ಬಟ್ಟೆಯೇ ಮುಂತಾದ ದ್ರವ್ಯಗಳು ತೊಳೆಯುವಿಕೆಯಿಂದಲೂ ಶುದ್ಧಿ

ಗೊಳ್ಳುತ್ತವೆ. ಜಾತಕರ್ಮವೇ ಮುಂತಾದ ಶಾಸ್ತ್ರೀಯಸಂಸ್ಕಾರಗಳಿಂದ ಗರ್ಭವೂ, ತಪಸ್ಸಿನಿಂದ ಇಂದ್ರಿಯ ಮುಂತಾದುವುಗಳೂ, ಯಜ್ಞದ ಆಚರಣೆಯಿಂದ ಮತ್ತು ದಾನದಿಂದ ಧನ-ಧಾನ್ಯಾದಿಗಳೂ ಶುದ್ಧಿಹೊಂದುತ್ತವೆ. ಸಂತೋಷದಿಂದ ಮನಸ್ಸೇ ಮುಂತಾದ ಅಂತಃಕರಣ ದ್ರವ್ಯಗಳು ಶುದ್ಧಿಗೊಳ್ಳುತ್ತವೆ. ಆದರೆ ಆತ್ಮವು ಆತ್ಮಜ್ಞಾನದಿಂದಲೇ ಶುದ್ಧಿಹೊಂದುತ್ತದೆ. ಆದುದರಿಂದ ನಂದನು ಸರ್ವಶುದ್ಧಿಗೋಸ್ಕರ ದಾನ, ಧರ್ಮ, ಪೂಜೆ ಮತ್ತು ಪುತ್ರನಿಗೆ ಜಾತಕರ್ಮಸಂಸ್ಕಾರವನ್ನು ಮಾಡಿದನು.

ಶ್ರೀಕೃಷ್ಣನು ಹುಟ್ಟಿದ ಆ ಶುಭಮುಹೂರ್ತದಲ್ಲಿ ಬ್ರಾಹ್ಮಣರು ಮಂಗಳಾಶಾಸನವನ್ನು ಮಾಡಿದರು. ಪೌರಾಣಿಕರು ಪುರಾಣಾರ್ಥಗಳನ್ನು ಹೇಳಿದರು. ವಂದಿ-ಮಾಗಧರು ವಂಶಾವಳಿಗಳನ್ನು ಹಾಡಿದರು. ಭೇರೀ-ದುಂದುಭಿಗಳು ಮೊಳಗಿದುವು.* ವ್ರಜಮಂಡಲವಾಸಿಗಳೆಲ್ಲರೂ ತಮ್ಮ- ತಮ್ಮ ಮನೆಗಳ ಬಾಗಿಲುಗಳನ್ನೂ, ಅಂಗಳಗಳನ್ನೂ, ಜಗುಲಿಗಳನ್ನೂ ಗುಡಿಸಿ ಸುಗಂಧಮಯವಾದ ನೀರಿನಿಂದ ಸಾರಿಸಿ ರಂಗೋಲಿಯನ್ನಿಟ್ಟು, ಚಿತ್ರ-ವಿಚಿತ್ರವಾದ ಧ್ವಜಪತಾಕೆಗಳಿಂದಲೂ, ಹೂವಿನ ಮಾಲಿಕೆಗಳಿಂದಲೂ, ವಸ್ತ್ರಗಳಿಂದ ಕೂಡಿದ ತೋರಣಗಳಿಂದಲೂ, ಚಿಗುರೆಲೆಗಳ ತೋರಣಗಳಿಂದಲೂ, ನಯನಾನಂದಕರವಾಗಿ ತಮ್ಮ-ತಮ್ಮ ಮನೆಗಳನ್ನು ಸಿಂಗರಿಸಿದರು. ಮನೆಯನ್ನು ಸಿಂಗರಿಸಿದಂತೆಯೇ ವ್ರಜವಾಸಿಗಳು ಗೋವುಗಳನ್ನೂ, ಎತ್ತುಗಳನ್ನೂ, ಕರುಗಳನ್ನೂ ಸಿಂಗರಿಸಿದರು. ಅವುಗಳಿಗೂ ಎಣ್ಣೆಯಿಂದ ಅಭ್ಯಂಜನಸ್ನಾನವನ್ನು ಮಾಡಿಸಿ, ಹಣೆಗೆ ಅರಿಶಿನ-ಕುಂಕುಮಗಳನ್ನಿಟ್ಟು, ತಲೆಯಮೇಲೆ ನವಿಲುಗರಿಯನ್ನು ಕಟ್ಟಿ ಅಮೂಲ್ಯವಾದ ವಸ್ತ್ರಗಳನ್ನು ಹೊದ್ದಿಸಿ ಸುವರ್ಣಮಯವಾದ ಮಾಲೆಗಳನ್ನೂ ಪುಷ್ಪಮಾಲಿಕೆಗಳನ್ನೂ ಕೊರಳಿಗೆ ಹಾಕಿ

---

* **ಸೂತಾಃ ಪೌರಾಣಿಕಾಃ ಪ್ರೋಕ್ತಾ ಮಾಗಧಾ ವಂಶಶಂಸಕಾಃ ।**
**ವನ್ದಿನಸ್ತ್ವಮಲಪ್ರಜ್ಞಾಃ ಪ್ರಸ್ತಾವಸದೃಶೋಕ್ತಯಃ ॥**

ಪುರಾಣಗಳನ್ನು ಹೇಳುವವರಿಗೆ ಸೂತರೆಂದೂ ವಂಶಾವಳಿಗಳನ್ನು ಹೊಗಳುವವರಿಗೆ ಮಾಗಧರೆಂದೂ ತತ್ಕಾಲೋಚಿತವಾಗಿ ಮಾತನಾಡುವವರಿಗೆ ವಂದಿಗಳೆಂದೂ ಹೆಸರು.

ನಯನಮನೋಹರವಾಗಿ ಸಿಂಗರಿಸಿದರು. ಮಣಿಶಿಲೆ, ಸಿಂಧೂರ ಇವೇ ಮೊದಲಾದ ಚಿತ್ರವಿಚಿತ್ರವಾದ ಧಾತುಗಳಿಂದಲೂ ಹಸುಗಳ ಕೋಡುಗಳನ್ನು ಗೊಲ್ಲರು ಅಲಂಕರಿಸಿದರು. ಬಳಿಕ ಸಮಸ್ತಗೋಪಾಲರೂ ಬಹುಮೂಲ್ಯ ವಾದ ವಸ್ತ್ರಗಳನ್ನುಟ್ಟು, ಆಭರಣಗಳನ್ನು ತೊಟ್ಟು, ಅಂಗವಸ್ತ್ರವನ್ನು ಹೊದೆದು ಕೊಂಡು, ಉಷ್ಣೀಷವನ್ನು ಸುತ್ತಿಕೊಂಡು ನಾನಾವಿಧವಾದ ಪಾರಿತೋಷಿಕ ಗಳೊಡನೆ ನಂದಗೋಪನ ಮನೆಗೆ ಆಗಮಿಸಿದರು. ಯಶೋದಾಮಾತೆಗೆ ಗಂಡುಮಗುವಾಗಿರುವುದೆಂಬುದನ್ನು ಕೇಳಿ ಗೋಪಿಕಾಸ್ತ್ರೀಯರಿಗೂ ಅಮಿತಾ ನಂದವಾಯಿತು. ಅವರು ಕೂಡ ಸುಂದರವಾದ ವಸ್ತ್ರಗಳಿಂದಲೂ, ಆಭರಣ ಗಳಿಂದಲೂ, ಕಾಡಿಗೆಗಳಿಂದಲೂ, ಅಂಗರಾಗಗಳಿಂದಲೂ ತಮ್ಮನ್ನು ಅಲಂಕರಿಸಿಕೊಂಡರು. ಆ ಸಮಯದಲ್ಲಿ ಗೋಪಿಯರ ಮುಖಕಮಲವು ಬಹಳ ಸುಂದರವಾಗಿ ಕಾಣುತ್ತಿದ್ದಿತು. ಅವರ ಹಣೆಯಲ್ಲಿದ್ದ ಕುಂಕುಮವು ಕಮಲದ ಎಸಳಿನಂತೆ ಕಾಣುತ್ತಿದ್ದಿತು. ದಪ್ಪವಾದ ನಿತಂಬಗಳನ್ನು ಹೊಂದಿದ್ದ ಅವರು ಯಶೋದೆಗೂ ಯಶೋದೆಯ ಮಗುವಿಗೂ ಪಾರಿತೋಷಿಕ ಸಾಮಗ್ರಿಗಳನ್ನು ಸಂಭ್ರಮದಿಂದ ತೆಗೆದುಕೊಂಡು ಅವಸರದಿಂದ ಹೋಗು ತ್ತಿದ್ದಾಗ ಅವರ ಕುಚಗಳೂ ನಲಿದಾಡುತ್ತಿದ್ದುವು. ಗೋಪಿಯರ ಕಿವಿಗಳಲ್ಲಿ ಘಳ-ಘಳಿಸುವ ಮಣಿಕುಂಡಲಗಳಿದ್ದುವು. ಸುವರ್ಣಮಯವಾದ ಸರಗಳನ್ನು ಕುತ್ತಿಗೆಯಲ್ಲಿ ಧರಿಸಿದ್ದರು. ಚಿತ್ರ-ವಿಚಿತ್ರವಾದ ಸೀರೆಗಳನ್ನುಟ್ಟಿದ್ದರು. ಅವಸರ ದಿಂದ ನಂದಗೋಪನ ಮನೆಗೆ ಹೋಗುತ್ತಿದ್ದಾಗ ಅವರ ಮುಡಿಯಲ್ಲಿದ್ದ ಹೂವಿನಮಾಲೆಗಳು ಕೆಳಕ್ಕೆ ಬಿದ್ದು ಶ್ರೀಕೃಷ್ಣನ ಜನ್ಮೋತ್ಸವದ ಸಂದರ್ಭದಲ್ಲಿ ಪುಷ್ಪವೃಷ್ಟಿಯಾಗುತ್ತಿರುವುದೋ—ಎಂಬಂತೆ ಕಾಣುತ್ತಿದ್ದಿತು. ಕೈಕಡಗಗಳನ್ನು ಧರಿಸಿದ್ದ ಅವರು ನಂದಗೋಪನ ಮನೆಗೆ ಅವಸರದಿಂದಲೂ, ಸಂಭ್ರಮ ದಿಂದಲೂ ಹೋಗುತ್ತಿದ್ದಾಗ ಅವರ ಕಿವಿಗಳಲ್ಲಿದ್ದ ಕುಂಡಲಗಳೂ, ಸ್ತನ ಗಳೂ, ವಕ್ಷಃಸ್ಥಳದಲ್ಲಿದ್ದ ಹಾರಗಳೂ ಕುಣಿದಾಡುತ್ತಿದ್ದು ಆ ಗೋಪಿಯರು ಬಹಳವಾಗಿ ಪ್ರಕಾಶಿಸಿದರು. ನಂದಗೋಪನ ಮನೆಗೆ ಹೋದನಂತರ ಗೋಪಿಯರು ನವಜಾತಶಿಶುವನ್ನು ಆಶೀರ್ವದಿಸುತ್ತಾ ಹೇಳಿದರು. 'ಮಗುವು ಚಿರಂಜೀವಿಯಾಗಲಿ. ಭಗವಂತನು ಈ ಶಿಶುವನ್ನು ರಕ್ಷಿಸಲಿ.' ಬಳಿಕ ಗೋಪಿಯರು ಕುಲಾಚಾರದಂತೆ ಹರಿದ್ರಾ-ಕುಂಕುಮವನ್ನು ಶಿಶುವಿನ

ಹಣೆಗಿಟ್ಟು ಎಣ್ಣೆಯ ಬೊಟ್ಟನ್ನು ತಲೆಗಿಟ್ಟು ನೀರನ್ನು ಮಗುವಿಗೆ ಚುಮುಕಿಸಿ ಲಾಲಿ-ಶೋಬಾನೆ–ಮುಂತಾದ ಮಂಗಳಗಾನಗಳನ್ನು ಗಟ್ಟಿಯಾಗಿ ಹಾಡಿದರು.

ಸಮಸ್ತಜಗತ್ತಿಗೂ ಏಕಮಾತ್ರಸ್ವಾಮಿಯಾದ, ಆದಿ-ಮಧ್ಯಾಂತಗಳಿಲ್ಲದ, ಅನಂತನಾದ ಶ್ರೀಕೃಷ್ಣನು ನಂದಗೋಕುಲದಲ್ಲಿ ಪ್ರಕಟಗೊಳ್ಳಲಾಗಿ ಆತನ ಜನ್ಮಮಹೋತ್ಸವದ ಸಂದರ್ಭದಲ್ಲಿ ಚಿತ್ರವಿಚಿತ್ರವಾದ ವಾದ್ಯಗಳು ಮೊಳಗಿದುವು. ಗೋಪಾಲಕರೂ ನಂದಗೋಪನ ನವಜಾತಶಿಶುವನ್ನು ನೋಡಿ ಆನಂದಭರಿತರಾಗಿ ಹಾಲು-ಮೊಸರು-ನೀರುಗಳನ್ನು ಒಬ್ಬರ ಮೇಲೊಬ್ಬರು ಎರಚುತ್ತಾ ಬೆಣ್ಣೆ-ತುಪ್ಪಗಳನ್ನು ಒಬ್ಬರ ಮೈಯಿಗೆ ಮತ್ತೊಬ್ಬರು ಲೇಪಿಸುತ್ತಾ, ಕುಣಿ-ಕುಣಿದು ಹಾಡಿಕೊಂಡು ಆಟವಾಡುತ್ತಿದ್ದರು. ನಂದಗೋಪನು ಸಾಧುವೂ ಉದಾರಿಯೂ ಆಗಿದ್ದನು. ಶ್ರೀಕೃಷ್ಣಜನ್ಮೋತ್ಸವದ ಸಂದರ್ಭದಲ್ಲಿ ಅವನು ಗೋಪಾಲಕರೆಲ್ಲರಿಗೂ ವಸ್ತ್ರಗಳನ್ನೂ, ಆಭರಣಗಳನ್ನೂ, ಗೋವುಗಳನ್ನೂ ನೆನಪಿನ ಕಾಣಿಕೆಯಾಗಿ ಕೊಟ್ಟನು. ಸೂತ-ಮಾಗಧ-ವಂದಿಗಳಿಗೂ, ನೃತ್ಯ-ವಾದ್ಯಗಳೇ ಮುಂತಾದ ಕುಶಲಕಲೆಗಳಿಂದ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದವರಿಗೂ ವಿದ್ವಾಂಸರಿಗೂ ಅವರವರ ಅಪೇಕ್ಷೆಯಂತೆ ಬಹುಮಾನಗಳನ್ನು ಕೊಟ್ಟು ಅವರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿದನು. "ತನ್ನ ಈ ಸತ್ಕಾರದಿಂದ ಮಹಾವಿಷ್ಣುವು ಪ್ರಸನ್ನನಾಗಬೇಕು ; ನವಜಾತಶಿಶುವಿನ ಅಭ್ಯುದಯವಾಗಬೇಕು."–ಎಂಬುದೇ ನಂದಗೋಪನ ಮುಖ್ಯವಾದ ಆಶಯವಾಗಿದ್ದಿತು. ಶ್ರೀಕೃಷ್ಣಜನ್ಮೋತ್ಸವದ ಸಂದರ್ಭದಲ್ಲಿ ನಂದಗೋಪನಿಂದ ಅಭಿನಂದಿಸಲ್ಪಟ್ಟ ಪರಮಸೌಭಾಗ್ಯವತಿಯಾದ ರೋಹಿಣೀದೇವಿಯು ಕೂಡ ದಿವ್ಯವಾದ ವಸ್ತ್ರದಿಂದಲೂ, ದಿವ್ಯವಾದ ಮಾಲೆಯಿಂದಲೂ, ಕಂಠಾಭರಣದಿಂದಲೂ ಸಮಲಂಕೃತಳಾಗಿ ಆಗಮಿಸಿದ ಗೋಪಿಕಾಸ್ತ್ರೀಯರನ್ನು ಆದರದಿಂದ ಸತ್ಕರಿಸುತ್ತಾ ಓಡಾಡುತ್ತಿದ್ದಳು.

ಪರೀಕ್ಷಿತನೇ! ಶ್ರೀಕೃಷ್ಣನ ಜನ್ಮೋತ್ಸವದ ದಿನದಿಂದಲೇ ವ್ರಜಭೂಮಿಯು ಸಮಸ್ತವಾದ ಸಂಪತ್ತುಗಳಿಂದಲೂ ಸಮೃದ್ಧವಾಯಿತು. ಅದು ವಿಷ್ಣುವಿನ ನಿವಾಸವಾಗಿದ್ದುದರಿಂದಲೂ ಉದಾರವಾದ ಆತ್ಮಗುಣಗಳಿಂದ ಪೂರ್ಣವಾಗಿದ್ದುದರಿಂದಲೂ ಅಲ್ಲಿ ಮಹಾಲಕ್ಷ್ಮಿಯು ಆಟವಾಡುತ್ತಿದ್ದಳು.

ಪರೀಕ್ಷಿತನೇ! ಕೆಲವು ದಿವಸಗಳನಂತರ ನಂದಗೋಪನು ಗೋಕುಲದ ರಕ್ಷಣೆಯ ಭಾರವನ್ನು ಇತರ ಗೋಪಾಲಕರಿಗೆ ವಹಿಸಿಕೊಟ್ಟು ಕಂಸನಿಗೆ ವಾರ್ಷಿಕವಾದ ಕಪ್ಪ-ಕಾಣಿಕೆಗಳನ್ನು ಸಮರ್ಪಿಸುವ ಸಲುವಾಗಿ ಮಥುರಾಪಟ್ಟಣಕ್ಕೆ ಪ್ರಯಾಣಮಾಡಿದನು. ಮಥುರಾಪಟ್ಟಣದಲ್ಲಿಯೇ ಇದ್ದ ವಸುದೇವನಿಗೆ, ತನ್ನ ಪ್ರಿಯಮಿತ್ರನಾಗಿ ಸೋದರನಿಗೆ ಎಣೆಯಾಗಿದ್ದ ನಂದನು ಮಥುರೆಗೆ ಬಂದಿರುವ ಸಮಾಚಾರವೂ ಮತ್ತು ಅವನು ಕಂಸನಿಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸಿದ ಸಮಾಚಾರವೂ ತಿಳಿಯಿತು. ಒಡನೆಯೇ ವಸುದೇವನು ನಂದಗೋಪನು ತಂಗಿದ್ದ ಬಿಡಾರಕ್ಕೆ ಹೋದನು. ವಸುದೇವ ನನ್ನು ಕಂಡೊಡನೆಯೇ ನಂದಗೋಪನು–ಸತ್ತುಹೋಗಿದ್ದವನು ಬದುಕಿ ಮೇಲೆದ್ದು ನಿಲ್ಲುವಂತೆ–ಎದ್ದುನಿಂತನು.

ನಂದಗೋಪನು ಅತ್ಯಂತಪ್ರೀತಿಯಿಂದ ಎರಡು ತೋಳುಗಳನ್ನೂ ಮುಂದಕ್ಕೆ ಚಾಚಿ ವಸುದೇವನನ್ನು ಗಾಢವಾಗಿ ಆಲಿಂಗನೆಮಾಡಿಕೊಂಡನು. ಆ ಸಮಯದಲ್ಲಿ ನಂದಗೋಪನು ಪ್ರೇಮದಿಂದ ಕರಗಿದ ಮನಸ್ಸುಳ್ಳವನಾಗಿ ದ್ದನು. ನಂದಗೋಪನು ವಸುದೇವನನ್ನು ಪರಮಪ್ರೀತಿಯಿಂದ ಆದರಿಸಿ ಸತ್ಕರಿಸಿದನು. ವಸುದೇವನು ಸುಖಾಸನದಲ್ಲಿ ಕುಳಿತು ಕುಶಲಪ್ರಶ್ನೆಗಳನ್ನು ಕೇಳಿದನು. ಆ ಸಮಯದಲ್ಲಿ ವಸುದೇವನ ಮನಸ್ಸು ತನ್ನ ಇಬ್ಬರು ಮಕ್ಕಳ ವಿಷಯದಲ್ಲಿ ಆಸಕ್ತವಾಗಿದ್ದಿತು. ಅಂತೆಯೇ ನಂದಗೋಪನಿಗೆ ಹೇಳಿದನು : "ಸಹೋದರ! ನಿನಗೆ ಇದುವರೆಗೆ ಯಾವ ಸಂತಾನವೂ ಇರಲಿಲ್ಲ. ವೃದ್ಧನಾಗಿದ್ದುದರಿಂದ ಸಂತಾನವಾಗುವುದೆಂಬ ಆಸೆಯೂ ಇರಲಿಲ್ಲ. ಸೌಭಾಗ್ಯದ ಕಾರಣದಿಂದ ಈಗ ನಿನಗೆ ಸಂತಾನವಾಗಿದೆ. ಇದರಿಂದ ನಮ್ಮೆಲ್ಲರಿಗೂ ಅತಿಯಾದ ಆನಂದವಾಗಿದೆ. ಇಂದು ನಿನ್ನ ದರ್ಶನವಾದದ್ದೂ ಒಂದು ಆನಂದದ ವಿಷಯವೇ. ಪ್ರಿಯರಾದವರನ್ನು ಸಂದರ್ಶಿಸುವುದೂ ಈಗಿನ ಕಾಲದಲ್ಲಿ ದುರ್ಲಭವೇ ಆಗಿದೆ. ಈ ಸಂಸಾರಚಕ್ರವೇ ಈ ರೀತಿಯಲ್ಲಿ ತಿರುಗುತ್ತಿದೆ. ಇಂದು ನಿನ್ನನ್ನು ಸಂದರ್ಶಿಸಿದ್ದು ಪುನರ್ಜನ್ಮವನ್ನು ಪಡೆದಂತೆಯೇ ಆಗಿದೆ.

**ನೈಕತ್ರ ಪ್ರಿಯಸಂವಾಸಃ ಸುಹೃದಾಂ ಚಿತ್ರಕರ್ಮಣಾಮ್ ।**
**ಓಘೇನ ವ್ಯೂಹ್ಯಮಾನಾನಾಂ ಪ್ಲವಾನಾಂ ಸ್ರೋತಸೋ ಯಥಾ ॥**

ಪ್ರವಾಹಕ್ಕೆ ಸಿಕ್ಕಿದ ತೃಣ-ಕಾಷ್ಠಾದಿಗಳು ಯಾವಾಗಲೋ ಒಮ್ಮೆ ಜೊತೆಗೂಡಿದರೂ ಮರುಕ್ಷಣದಲ್ಲಿಯೇ ಚೆದುರಿಹೋಗುತ್ತವೆ. ಹಾಗೆಯೇ ಚಿತ್ರ-ವಿಚಿತ್ರವಾದ ಕರ್ಮಗಳಿಂದ ಕೂಡಿರುವ ಸುಹೃದರಿಗೂ ಒಂದೆಡೆಯಲ್ಲಿ ಸೇರುವಿಕೆಯು ನಿಯತವಲ್ಲ. ಬಂಧು-ಮಿತ್ರರೂ ಕೂಡಿಬಾಳಲು ಅಸಾಧ್ಯ ವಾಗಿದೆ. ಈಗ ನೀನು ನಿನ್ನ ಬಂಧುಗಳೊಡನೆಯೂ ಸುಹೃದರೊಡನೆಯೂ ವಾಸಮಾಡುತ್ತಿರುವ ಮಹಾವನದಲ್ಲಿ ಗಿಡ-ಮರ-ಬಳ್ಳಿಗಳೂ, ನೀರು, ಹುಲ್ಲು–ಇತ್ಯಾದಿ ನಿತ್ಯೋಪಯೋಗೀವಸ್ತುಗಳೂ ಸಮೃದ್ಧವಾಗಿರುವುವೇ? ಹಸುಗಳನ್ನು ಸಾಕಲು ಅನುಕೂಲವಿದೆಯೇ? ಆ ಪ್ರದೇಶವು ರೋಗ-ರುಜಿನಾದಿಗಳಿಂದ ರಹಿತವಾಗಿರುವುದೇ?

ನನ್ನ ಮಗ ಬಲರಾಮನು ತಾಯಿಯಾದ ರೋಹಿಣಿಯೊಡನೆ ಗೋಕುಲದಲ್ಲಿಯೇ ಇದ್ದಾನೆ. ಅವನ ಲಾಲನೆ-ಪಾಲನೆಗಳನ್ನು ನೀನು ಮತ್ತು ಯಶೋದೆ ಮಾಡುತ್ತಿರುವಿರಿ. ಇದರಿಂದಾಗಿ ಅವನು ನಿಮ್ಮನ್ನೇ ತಂದೆ-ತಾಯಿಗಳೆಂದು ಭಾವಿಸಿಕೊಂಡಿರಬಹುದಲ್ಲವೇ?

**ಪುಂಸಸ್ತ್ರಿವರ್ಗೋ ವಿಹಿತಃ ಸುಹೃದೋ ಹ್ಯನುಭಾವಿತಃ ।**
**ನ ತೇಷು ಕ್ಲಿಶ್ಯಮಾನೇಷು ತ್ರಿವರ್ಗೋಽರ್ಥಾಯ ಕಲ್ಪತೇ ॥೨೮॥**

ಯಾವನ ಧರ್ಮಾರ್ಥ-ಕಾಮಗಳು ತನಗೂ ತನ್ನ ಬಂಧು-ಮಿತ್ರರಿಗೂ ಸುಖವನ್ನು ಉಂಟುಮಾಡುವುವೋ ಅವು ಶಾಸ್ತ್ರವಿಹಿತವಾದುವು ಗಳೆಂದು ಪರಿಗಣಿಸಲ್ಪಡುತ್ತವೆ. ಈ ತ್ರಿವರ್ಗಗಳು ತನ್ನ ಸುಖಕ್ಕಾಗಿ ಮಾತ್ರವೇ ಆಗಿದ್ದು ಬಂಧುಗಳಿಗೆ ಕ್ಲೇಶದಾಯಕವಾಗಿದ್ದರೆ ಅದನ್ನು ಶಾಸ್ತ್ರವಿಹಿತವಾದ ಧರ್ಮ-ಕಾಮಾರ್ಥಗಳೆಂದು ಹೇಳಲು ಸಾಧ್ಯವಾಗುವುದಿಲ್ಲ."

ನಂದಗೋಪನು ಹೇಳುತ್ತಾನೆ :

"ಅಣ್ಣ! ವಸುದೇವ! ನಿನ್ನ ಮನಸ್ಸಿನ ಸಂಕಟವನ್ನು ನಾನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ದೇವಕಿಯ ಗರ್ಭದಲ್ಲಿ ಹುಟ್ಟಿದ ಆರು ಮಕ್ಕಳನ್ನೂ ಕಂಸನು ಕೊಂದುಹಾಕಿದನು. ಏಳನೆಯದಾದ ಮತ್ತು ಕಡೆಯ ದಾದ ಹೆಣ್ಣು ಶಿಶುವೂ ಸ್ವರ್ಗಕ್ಕೆ ಹೊರಟುಹೋಯಿತು.

**ನೂನಂ ಹ್ಯದೃಷ್ಟನಿಷ್ಠೋಽಯಮದೃಷ್ಟಪರಮೋ ಜನಃ ।**
**ಅದೃಷ್ಟಮಾತ್ಮನಸ್ತತ್ತ್ವಂ ಯೋ ವೇದ ನ ಸ ಮುಹ್ಯತಿ ॥೩೦॥**

ಅಣ್ಣ! ಪ್ರಾಣಿಗಳ ಸುಖ-ದುಃಖಗಳು ಅದೃಷ್ಟವನ್ನೇ ಅವಲಂಬಿಸಿವೆ. ಇದರಲ್ಲಿ ಸಂಶಯವೇ ಇಲ್ಲ. ಅದೃಷ್ಟವೆಂಬುದು ಪ್ರಾಣಿಗಳ ಏಕಮಾತ್ರ ಆಶ್ರಯವಾಗಿದೆ. ಜೀವನದ ಸುಖ-ದುಃಖಗಳಿಗೆ ಅದೃಷ್ಟವೇ ಕಾರಣವೆಂದು ಯಾವನು ತಿಳಿದಿರುವನೋ ಅಂತಹವನು ಅದೃಷ್ಟವಶಾತ್ ಸುಖವು ಒದಗಿಬಂದರೂ ಕಷ್ಟವು ಒದಗಿಬಂದರೂ ವಿಮೋಹಿತನಾಗುವುದಿಲ್ಲ."

"ನಂದ! ವಾರ್ಷಿಕವಾಗಿ ಕೊಡಬೇಕಾಗಿದ್ದ ಕಪ್ಪ-ಕಾಣಿಕೆಗಳನ್ನು ನೀನು ಕಂಸನಿಗೆ ಕೊಟ್ಟಾಯಿತು. ಅದೃಷ್ಟವಶದಿಂದ ನಾವಿಬ್ಬರೂ ಕಲೆತು ಕುಶಲಪ್ರಶ್ನೆಗಳನ್ನು ವಿನಿಮಯಮಾಡಿಕೊಂಡೆವು. ಇಲ್ಲೇ ನೀನು ಹೆಚ್ಚು ದಿನಗಳು ಉಳಿಯುವುದು ಉಚಿತವಾಗಿ ಕಾಣುತ್ತಿಲ್ಲ. ಏಕೆಂದರೆ ಗೋಕುಲ ದಲ್ಲಿ ಹಲವಾರು ದೊಡ್ಡ-ದೊಡ್ಡ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ."

ಪರೀಕ್ಷಿತನೇ! ವಸುದೇವನು ನಂದಗೋಪನಿಗೆ ಹೀಗೆ ಹೇಳಲು ಮರುಕ್ಷಣದಲ್ಲಿಯೇ ನಂದಗೋಪನೇ ಮೊದಲಾದ ಗೋಪಾಲಕರು ವಸುದೇವನ ಅನುಮತಿಯನ್ನು ಪಡೆದು ಎತ್ತುಗಳನ್ನು ಹೂಡಿದ್ದ ಗಾಡಿಗಳಲ್ಲಿ ಕುಳಿತು ನಂದಗೋಕುಲಕ್ಕೆ ಪ್ರಯಾಣಮಾಡಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೫ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬ನೆಯ ಅಧ್ಯಾಯ

## ಪೂತನೆಯ ಉದ್ಧಾರ

ಶ್ರೀಶುಕದೇವರು ಹೇಳುತ್ತಾರೆ :

**ನನ್ದಃ ಪಥಿ ವಚಃ ಶೌರೇರ್ನ ಮೃಷೇತಿ ವಿಚಿನ್ತಯನ್ ।**
**ಹರಿಂ ಜಗಾಮ ಶರಣಮುತ್ಪಾತಾಗಮಶಙ್ಕಿತಃ ॥೧॥**

ಪರೀಕ್ಷಿತನೇ! ನಂದಗೋಪನು ಪ್ರಯಾಣಮಾಡುತ್ತಿದ್ದಾಗ ಹಾದಿ

ಯಲ್ಲಿ ವಸುದೇವನು ಹೇಳಿದುದನ್ನು ಪುನಃ ಪುನಃ ಸ್ಮರಿಸಿಕೊಂಡನು. ಅವನು ಹೇಳಿದ ಮಾತು ಖಂಡಿತವಾಗಿಯೂ ಸುಳ್ಳಾಗುವುದಿಲ್ಲ–ಎಂದು ಭಾವಿಸಿ ಆತನು ಉತ್ಪಾತಗಳ ನಿವಾರಣೆಗಾಗಿ ಶ್ರೀಹರಿಯನ್ನೇ ಏಕಾಗ್ರವಾದ ಮನಸ್ಸಿನಿಂದ ಶರಣುಹೊಂದಿದನು.

ವರ್ಷದೊಳಗೆ ಹುಟ್ಟಿದ ಬಾಲಕರೆಲ್ಲರನ್ನೂ ಕೊಂದು ಹಾಕಬೇಕೆಂದು ಕಂಸನಿಂದ ಕಳುಹಿಸಿಕೊಟ್ಟಲ್ಪಟ್ಟವರಲ್ಲಿ 'ಪೂತನಾ'–ಎಂಬ ಹೆಸರಿನ ರಾಕ್ಷಸಿಯೂ ಒಬ್ಬಳಾಗಿದ್ದಳು. ಘೋರರೂಪಿಣಿಯಾಗಿದ್ದ, ಬಾಲಹಂತಕ ಳಾದ ಆ ಪೂತನೆಯು ಪುರ-ಗ್ರಾಮ-ಹಳ್ಳಿಗಳಲ್ಲಿ ಸಿಕ್ಕಿದ ಬಾಲಕರೆಲ್ಲರನ್ನೂ ಹಿಡಿದು ಸಾಯಿಸುತ್ತಾ ಸಂಚರಿಸುತ್ತಿದ್ದಳು.

ಯಾರು ನಿತ್ಯಕರ್ಮಗಳಲ್ಲಿ ರಾಕ್ಷೋಘ್ನಮಂತ್ರಗಳನ್ನು ಜಪಿಸು ತ್ತಿರಲಿಲ್ಲವೋ ಮತ್ತು ಯಾದವರ ಪತಿಯಾದ ಶ್ರೀಕೃಷ್ಣನ ಲೀಲೆಗಳನ್ನು ಕೇಳುತ್ತಿರಲಿಲ್ಲವೋ, ಕೀರ್ತನಮಾಡುತ್ತಿರಲಿಲ್ಲವೋ, ಅವನನ್ನು ಅನನ್ಯ ಮನಸ್ಕರಾಗಿ ಸ್ಮರಿಸುತ್ತಿರಲಿಲ್ಲವೋ–ಅಂತಹವರಿರುವೆಡೆಗಳಲ್ಲಿ ಆ ಪೂತನಾ ರಾಕ್ಷಸಿಯ ಪ್ರಭಾವವು ಹೆಚ್ಚಾಗಿರುತ್ತಿದ್ದಿತು. ಆ ರಾಕ್ಷಸಿಯು ಆಕಾಶದಲ್ಲಿ ಸಂಚರಿಸುವ ಮತ್ತು ಬೇಕು-ಬೇಕಾದ ರೂಪಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಳು. ಒಂದು ದಿನ ಕಂಸನಿಂದ ಪ್ರೇಷಿತಳಾಗಿದ್ದ ಪೂತನೆಯು ನಂದಗೋಕುಲಕ್ಕೂ ಬಂದಳು. ತನ್ನ ಮಾಯೆಯಿಂದ ಸುಂದರ ಸ್ತ್ರೀಯ ರೂಪವನ್ನು ಧರಿಸಿದ್ದಳು. ಘಮ-ಘಮಿಸುವ ಮಲ್ಲಿಗೆದಂಡೆಯಿಂದ ತಲೆಯ ತುರುಬನ್ನು ಸಿಂಗರಿಸಿಕೊಂಡಿದ್ದಳು. ದೊಡ್ಡದಾದ ನಿತಂಬ ಗಳಿಂದಲೂ ಕುಚಕಲಶಗಳಿಂದಲೂ ಕೂಡಿದ್ದಳು. ಅವಳ ಸೊಂಟವು ಕಿರಿದಾಗಿದ್ದಿತು. ಅವಳು ಸುಂದರವಾದ ಸೀರೆಯನ್ನುಟ್ಟಿದ್ದಳು. ಅವಳ ಕರ್ಣ ಕುಂಡಲಗಳು ಫಳ-ಫಳಿಸುತ್ತಾ ಅಲುಗಾಡುತ್ತಿದ್ದುವು. ಮುಂಗುರುಳಿನಿಂದ ಕಡುಚೆಲುವಾಗಿ ಕಾಣುತ್ತಿದ್ದ ಆ ಚಂದ್ರಮುಖಿಯು ಹುಸಿನಗೆಯನ್ನು ಬೀರುತ್ತಿದ್ದಳು. ಅವಳು ತನ್ನ ಮಧುರವಾದ ಕಿರುನಗೆಯಿಂದಲೂ ಕಡೆಗಣ್ಣಿನ ನೋಟದಿಂದಲೂ ವ್ರಜಸ್ತ್ರೀಯರ ಮನಸ್ಸನ್ನೇ ಅಪಹರಿಸಿಬಿಟ್ಟಳು. ಪೂತ ನೆಯು ಕಾಮಿನಿಯರಿಗೂ ಕಾಮಿನಿಯಾಗಿದ್ದಳು. ಕಡುಚೆಲುವೆಯಾಗಿ ಕಾಣು ತ್ತಿದ್ದ ಆ ಪೂತನೆಯು ಕೈಯಲ್ಲಿ ವಿಕಸಿತವಾದ ಕಮಲವನ್ನು ಹಿಡಿದಿದ್ದಳು.

ಅಂತಹ ಚೆಲುವಿನ ರಾಣಿಯನ್ನು ಕಂಡ ಗೋಪಿಕಾಸ್ತ್ರೀಯರು–ಪತಿಯಾದ ವಿಷ್ಣುವನ್ನು ಹುಡುಕಿಕೊಂಡು ಬಂದಿರುವ ಲಕ್ಷ್ಮೀದೇವಿಯೇ ಅವಳೆಂದು ಭಾವಿಸಿದರು. ಪೂತನೆಯು ಬಾಲಕರಿಗೆ ಬಾಲಕರನ್ನು ಕೊಲ್ಲುವ ಬಾಲಗ್ರಹ ದಂತಿದ್ದಳು. ಅವಳು ಅಲ್ಲಲ್ಲಿ ಬಾಲಕರನ್ನು ಹುಡುಕುತ್ತಾ ಅನಾಯಾಸವಾಗಿ ನಂದಗೋಪನ ಮನೆಗೂ ಬಂದಳು. ಅಲ್ಲವಳು ಅಸತ್ಪುರುಷರಿಗೆ ಯಮಪ್ರಾಯನಾದ ಶ್ರೀಕೃಷ್ಣನು ಹಸುಳೆಯಾಗಿ ಮಂಚದ ಮೇಲೆ ಮಲ ಗಿರುವುದನ್ನು ನೋಡಿದಳು. ಮಹಾತೇಜಸ್ವಿಯಾದ ಆ ದಿವ್ಯಶಿಶುವು ಬೂದಿ ಮುಚ್ಚಿದ ಕೆಂಡದಂತೆ ತನ್ನ ತೇಜಸ್ಸನ್ನು ಮರೆಮಾಚಿಕೊಂಡಿದ್ದಿತು. ಅಂತಹ ದಿವ್ಯಶಿಶುವನ್ನು ಆ ದುಷ್ಟೆಯು ನೋಡಿದಳು. ಸ್ಥಾವರ-ಜಂಗಮಗಳೆರ ಡರಲ್ಲಿಯೂ ಆತ್ಮಸ್ವರೂಪನಾಗಿರುವ ಶ್ರೀಕೃಷ್ಣನು ತನ್ನ ಸಮೀಪಕ್ಕೆ ಬಂದಿರು ವವಳು ಬಾಲಘಾತಿನಿಯೆಂಬುದನ್ನು ಕ್ಷಣಮಾತ್ರದಲ್ಲಿ ತಿಳಿದುಕೊಂಡು ಕಣ್ಣುಮುಚ್ಚಿದನು. ಮೂರ್ಖನೊಬ್ಬನು ಮಲಗಿರುವ ಹಾವನ್ನು ಹಗ್ಗವೆಂದು ಭಾವಿಸಿ ಎತ್ತಿಕೊಳ್ಳುವಂತೆ ತನಗೆ ಅಂತಕಪ್ರಾಯನಾದ ಅನಂತಸ್ವಾಮಿಯನ್ನು ಪೂತನೆಯು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು. ಒರೆಯಲ್ಲಿರುವ ತೀಕ್ಷ್ಣವಾದ ಅಲುಗುಳ್ಳ ಕತ್ತಿಯಂತೆ ಪೂತನೆಯ ಹೃದಯವು ಅತ್ಯಂತ ಕಠೋರವಾಗಿತ್ತು ಮತ್ತು ಕುಟಿಲವಾಗಿತ್ತು. ಬಹಿರಂಗದಲ್ಲಿ ಮಾತ್ರ ಅವಳು ಮಧುರವೂ ಸುಂದರವೂ ಆದ ವ್ಯವಹಾರವನ್ನು ಮಾಡುತ್ತಿದ್ದಳು. ನೋಡಲು ಅವಳೊಬ್ಬ ಸತೀ-ಸಾಧ್ವಿಯಂತೆಯೇ ಕಾಣುತ್ತಿದ್ದಳು. ಈ ಕಾರಣದಿಂದಲೇ ಅಪರಿಚಿತಳಾದ ಸ್ತ್ರೀಯು ಮನೆಯೊಳಕ್ಕೆ ಬಂದರೂ ರೋಹಿಣೀ-ಯಶೋದೆಯರು ಅವಳ ಅನುಪಮವಾದ ಸೌಂದರ್ಯಕ್ಕೆ ಮನಸೋತು ಹತಪ್ರಭರಾಗಿ, ಪೂತನೆಯು ಏನೇ ಮಾಡಿದರೂ ಅವಳನ್ನು ತಡೆಯದೆ ಅವಳ ಕಾರ್ಯವೆಲ್ಲವನ್ನೂ ಸುಮ್ಮನೆ ನೋಡುತ್ತಾ ನಿಂತಿದ್ದರು. ಅತ್ಯಂತಭಯಂಕರಳಾದ ಪೂತನಾರಾಕ್ಷಸಿಯು ಯಾರೊಬ್ಬರ ವಿರೋಧವೂ ಇಲ್ಲದೆ, ಮಂಚದ ಮೇಲೆ ಮಲಗಿದ್ದ ಶಿಶುವನ್ನು ತೊಡೆಯ ಮೇಲೆ ಮಲಗಿಸಿಕೊಂಡು, ಸಹಿಸಲಶಕ್ಯವಾದ ಮತ್ತು ಅತ್ಯಂತಕ್ರೂರವಾದ ವಿಷದಿಂದ ತುಂಬಿದ್ದ ಸ್ತನವನ್ನು ಮಗುವಿಗೆ ಕುಡಿಯಲು ಕೊಟ್ಟಳು. ಅವಳ ದುಷ್ಟತನವನ್ನು ನೋಡಿ ಅತ್ಯಂತರುಷ್ಟನಾದ ಶ್ರೀಕೃಷ್ಣನು ಅವಳ ಸ್ತನ

ಗಳನ್ನು ಎರಡು ಕೈಗಳಿಂದಲೂ ಬಿಗಿಯಾಗಿ ಹಿಡಿದು ಅವಳ ಪ್ರಾಣಗಳೊಡನೆಯೇ ಸ್ತನ್ಯವನ್ನು ಪಾನಮಾಡಿದನು. ಆಕೆಯ ಸ್ತನ್ಯದ ಜೊತೆಯಲ್ಲಿಯೇ ಪ್ರಾಣಗಳನ್ನೂ ಹೀರುತ್ತಿದ್ದಂತೆ ರಾಕ್ಷಸಿಯ ಮರ್ಮಸ್ಥಳಗಳೆಲ್ಲವೂ ಶಿಥಿಲಗೊಂಡುವು. 'ಅಯ್ಯೋ! ಬಿಡು ; ಬಿಟ್ಟುಬಿಡು. ನನ್ನ ಪ್ರಾಣಪಕ್ಷಿಯೇ ಹಾರಿಹೋಗುತ್ತಿದೆ'–ಎಂದು ರಾಕ್ಷಸಿಯು ಗಟ್ಟಿಯಾಗಿ ಅರಚುತ್ತಿದ್ದಳು. ಕಣ್ಣುಗಳನ್ನು ಅಗಲವಾಗಿ ಬಿಟ್ಟುಕೊಂಡು ಬೆವರಿನಿಂದಲೇ ತೋಯ್ದು ಹೋಗಿ ಕೈ-ಕಾಲುಗಳನ್ನು ಬಡಿಯುತ್ತಾ ಗಟ್ಟಿಯಾಗಿ ರೋದನ ಮಾಡುತ್ತಿದ್ದಳು. ಆಕೆಯ ಅತಿಭಯಂಕರವಾದ ಮತ್ತು ರಭಸದಿಂದ ಕೂಡಿದ ಕಿರುಚಾಟಕ್ಕೆ ಪರ್ವತಗಳಿಂದ ಕೂಡಿದ ಭೂಮಿಯೂ ಗ್ರಹಗಳಿಂದ ಕೂಡಿದ ಅಂತರಿಕ್ಷವೂ ಕಂಪಿಸಿದುವು. ಅವಳ ಘೋರವಾದ ಕೂಗಾಟವು ಹತ್ತು ದಿಕ್ಕುಗಳಲ್ಲಿಯೂ ಏಳು ಪಾತಾಳಲೋಕಗಳಲ್ಲಿಯೂ ಪ್ರತಿಧ್ವನಿತವಾಯಿತು. ಗೋಕುಲದಲ್ಲಿ ಹಲವಾರು ಜನರು ಸಿಡಿಲುಬಿದ್ದಿತೆಂಬ ಭಯದಿಂದ ಕೆಳಗುರುಳಿದರು. ಶ್ರೀಕೃಷ್ಣನು ಜಗ್ಗಿ ಹಿಡಿದು ಪ್ರಾಣಸಹಿತವಾಗಿ ಪಾನಮಾಡುತ್ತಿದ್ದ ಸ್ತನಗಳಲ್ಲಿ ಪೂತನೆಗೆ ಪ್ರಾಣಗಳನ್ನು ಬಿಡುವಷ್ಟು ನೋವುಂಟಾಯಿತು. ಪ್ರಾಣವನ್ನೇ ತೊರೆದುಬಿಟ್ಟಳು. ಪ್ರಾಣಪ್ರಯಾಣ ಸಮಯದಲ್ಲಿ ತನ್ನ ಸಹಜವಾದ ರಾಕ್ಷಸೀರೂಪವನ್ನು ತಳೆದ ಪೂತನೆಯು ತಲೆಗೂದಲನ್ನು ಕೆದರಿಕೊಂಡು ಕೈ-ಕಾಲುಗಳನ್ನು ಚಾಚಿಕೊಂಡು ವಜ್ರಾಹತನಾದ ವೃತ್ರಾಸುರನಂತೆ ಗೊಲ್ಲರಹಳ್ಳಿಯಲ್ಲಿ ಬಿದ್ದಿದ್ದಳು. ಪೂತನೆಯು ರಾಕ್ಷಸಿಯ ಶರೀರವನ್ನು ಹೊಂದಿ ಕೆಳಕ್ಕೆ ಬಿದ್ದಾಗ ಅವಳ ದೇಹದ ಕೆಳಗೆ ಸಿಕ್ಕಿಹಾಕಿಕೊಂಡ ಆರು ಹರಿದಾರಿಗಳಷ್ಟು ದೂರದಲ್ಲಿದ್ದ ಮರ-ಗಿಡ-ಬಳ್ಳಿಗಳೆಲ್ಲವೂ ನಾಶಹೊಂದಿದುವು. ಇದು ಪರಮಾದ್ಭುತವಾಗಿ ಕಂಡಿತು. ಪೂತನೆಯ ಶರೀರವು ಅತಿಭಯಂಕರವಾಗಿದ್ದಿತು. ಅವಳ ಮುಖವು ನೇಗಿಲಿನಂತಿದ್ದ ತೀಕ್ಷ್ಣವಾದ ಕೋರೆದಾಡೆಗಳನ್ನು ಹೊಂದಿದ್ದಿತು. ಅವಳ ಮೂಗು ಪರ್ವತದ ಗುಹೆಯಂತೆ ಗಹನವಾಗಿದ್ದಿತು. ಅವಳ ಸ್ತನಗಳು ಪರ್ವತದಿಂದ ಉರುಳಿ ಕೆಳಕ್ಕೆ ಬಿದ್ದ ಬಂಡೆಗಳಂತೆ ಸ್ಥೂಲವಾಗಿದ್ದುವು. ಅವಳ ಕೆಂಪಾದ ತಲೆಗೂದಲುಗಳು ಕೆದರಿಕೊಂಡಿದ್ದುವು. ಅವಳ ಕಣ್ಣುಗಳು ಹಾಳುಬಾವಿಯಂತೆ ಗುಳಿಬಿದ್ದಿದ್ದುವು. ಅವಳ ನಿತಂಬಗಳು ನದಿ

ಯಲ್ಲಿನ ಮರಳು ದಿಣ್ಣೆಗಳಂತೆ ಎತ್ತರವಾಗಿಯೂ, ಭಯಂಕರವಾಗಿಯೂ ಇದ್ದುವು. ತೋಳು, ತೊಡೆಗಳು ಮತ್ತು ಕಾಲುಗಳು ನದಿಗೆ ಕಟ್ಟಿದ ಸೇತುವೆಗಳಂತಿದ್ದುವು. ಹೊಟ್ಟೆಯು ನೀರಿಲ್ಲದ ಹಾಳುಬಿದ್ದ ಸರೋವರ




ದಂತಿದ್ದಿತು. ಪೂತನೆಯ ಆ ಭಯಂಕರವಾದ ಶರೀರವನ್ನು ನೋಡಿ ವ್ರಜದಲ್ಲಿದ್ದ ಗೋಪ-ಗೋಪಿಯರೆಲ್ಲರೂ ಭಯಗೊಂಡರು. ಈ ಮೊದಲೇ ಅವಳ ಕಿರುಚಾಟದಿಂದ ಗೋಪ-ಗೋಪಿಯರ ಎದೆ-ಕಿವಿ-ತಲೆಗಳು ಒಡೆದೇ ಹೋಗಿದ್ದುವು. ಅಂತಹ ಬೃಹದಾಕಾರದ, ಭಯಂಕರವಾದ ಪೂತನೆಯ ವಕ್ಷಃಸ್ಥಳದಲ್ಲಿ ಪುಟ್ಟ ಶ್ರೀಕೃಷ್ಣನು ಚಿನ್ನಾಟವಾಡುತ್ತಿದ್ದುದನ್ನು ನೋಡಿದ ಗೋಪಿಯರು ಗಾಬರಿಗೊಂಡು ಒಡನೆಯೇ ಅವಸರದಿಂದ ಮಗುವನ್ನೆತ್ತಿಕೊಂಡರು.* ಮಗುವು ಬಹಳವಾಗಿ ಹೆದರಿಬಿಟ್ಟಿರುವುದೆಂದು ಭಾವಿಸಿ ರೋಹಿಣೀ-ಯಶೋದಾಪ್ರಮುಖರಾದ ಗೋಪಿಯರು ಮಗುವಿನ ರಕ್ಷಣೆಗಾಗಿ ಒಡನೆಯೇ ಹಸುವಿನ ಬಾಲದ ಕೂದಲಿನಿಂದ ಶ್ರೀಕೃಷ್ಣನಿಗೆ ಇಳಿ

ಪೂತನೆಯ ಹಿಂದಿನ ಚರಿತ್ರೆ : ಬಲಿಚಕ್ರವರ್ತಿಗೆ ರತ್ನಮಾಲಾ ಎಂಬ ಕನ್ಯೆಯಿದ್ದಳು. ಯಜ್ಞಮಂಟಪದಲ್ಲಿದ್ದ ವಾಮನನನ್ನು ನೋಡಿ ಅವಳಿಗೆ ಅವನಲ್ಲಿ ಪುತ್ರ ಭಾವನೆಯುಂಟಾಯಿತು. 'ನನಗೆ ಇಂತಹ ಬಾಲಕನು ಹುಟ್ಟಿ ನನ್ನ ಸ್ತನ್ಯವನ್ನು ಪಾನಮಾಡಬೇಕು. ಇದರಿಂದ ನನಗೆ ಆನಂದವಾಗುವುದು'–ಎಂದು ಅವಳು ಭಾವಿಸಿಕೊಂಡಳು. ಸರ್ವಪ್ರಾಣಿಗಳ ಅಂತರ್ಯಾಮಿಯಾದ ವಾಮನಮೂರ್ತಿಗೂ ಅವಳ ಆಶಯವು ತಿಳಿದು ಭಕ್ತನಾದ ಬಲಿಯ ಪುತ್ರಿಯ ಮನೋರಥವನ್ನು ಅನುಮೋದಿಸಿ

ತೆಗೆದರು. ಗೋಪುಚ್ಛದಿಂದ ನಿವಾಳಿಸಿದನಂತರ ಗೋಪಿಯರು ಮುದ್ದು ಕೃಷ್ಣನನ್ನು ಗೋಮೂತ್ರದಿಂದ ಸ್ನಾನಮಾಡಿಸಿದರು. ಬಳಿಕ ಮಗುವಿನ ಎಲ್ಲ ಅಂಗಗಳಿಗೂ ಗೋಧೂಳಿಯನ್ನು ಹಚ್ಚಿದರು. ಪುನಃ ಗೋಮಯದಿಂದ ಮಗುವಿನ ಹನ್ನೆರಡು ಅಂಗಗಳಿಗೂ ಕೇಶವನೇ ಮೊದಲಾದ ಹನ್ನೆರಡು ನಾಮಗಳಿಂದ ಅಭಿಮಂತ್ರಿಸಿ ರಕ್ಷೆಯನ್ನಿಟ್ಟರು.

ಇದಾದ ಬಳಿಕ ಗೋಪಿಯರು ಆಚಮನಮಾಡಿ 'ಅಜ' ಮೊದಲಾದ ಹನ್ನೆರಡು ಬೀಜಮಂತ್ರಗಳಿಂದ ತಮ್ಮ ಶರೀರದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಅಂಗನ್ಯಾಸ-ಕರನ್ಯಾಸಗಳನ್ನು ಮಾಡಿಕೊಂಡು ಮಗುವಿನ ಅಂಗಗಳಲ್ಲಿಯೂ ಬೀಜಮಂತ್ರವನ್ನು ನ್ಯಾಸಮಾಡಿದರು.*

**ಅವ್ಯಾದಜೋಙ್ಘ್ರಿ ಮಣಿಮಾಂಸ್ತವ ಜಾನ್ವಥೋರೂ**
**ಯಜ್ಞೋಽಚ್ಯುತಃ ಕಟಿತಟಂ ಜಠರಂ ಹಯಾಸ್ಯಃ ।**
**ಹೃತ್ಕೇಶವಸ್ತ್ವದುರ ಈಶ ಇನಸ್ತು ಕಣ್ಠಂ**
**ವಿಷ್ಣುರ್ಭುಜಂ ಮುಖಮುರುಕ್ರಮ ಈಶ್ವರಃ ಕಮ್ ॥**

"ಭಗವಾನ್ ಅಜನು ನಿನ್ನ ಕಾಲುಗಳನ್ನು ರಕ್ಷಿಸಲಿ. ಮಣಿಮಂತನು

---

ದನು. ಅವಳೇ ದ್ವಾಪರಯುಗದಲ್ಲಿ ಪೂತನೆಯಾಗಿ ಹುಟ್ಟಿ ತನ್ನ ಆಶಯವನ್ನು ಪೂರ್ಣಮಾಡಿಕೊಂಡಳು. (ಬ್ರಹ್ಮವೈವರ್ತ)

* ಕೇಶವಾದಿ ಹನ್ನೆರಡು ನಾಮಗಳ ನ್ಯಾಸವು ಹೀಗಿದೆ :

**ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಮಥೋದರೇ ।**
**ವಕ್ಷಸ್ಥಲೇ ಮಾಧವಂ ತು ಗೋವಿನ್ದಂ ಕಣ್ಠಕೂಬರೇ ॥**
**ವಿಷ್ಣುಂ ಚ ದಕ್ಷಿಣೇ ಕುಕ್ಷೌ ಬಾಹೌ ಚ ಮಧುಸೂದನಮ್ ।**
**ತ್ರಿವಿಕ್ರಮಂ ಕನ್ಧರೇ ತು ವಾಮನಂ ವಾಮಪಾರ್ಶ್ವಕೇ ॥**
**ಶ್ರೀಧರಂ ವಾಮಬಾಹೌ ತು ಹೃಷೀಕೇಶಂ ತು ಕನ್ಧರೇ ।**
**ಪೃಷ್ಠೇ ತು ಪದ್ಮನಾಭಂ ಚ ಕಟ್ಯಾಂ ದಾಮೋದರಂ ನ್ಯಸೇತ್ ॥**

ವಿಷ್ಣುಭಕ್ತರು ಪ್ರತಿದಿನವೂ ತಮ್ಮ ಹಣೆ-ಹೊಟ್ಟೆ-ಎದೆ-ಕಂಠದ ಮುಂಭಾಗ-ಬಲ ಹೊಟ್ಟೆ-ಬಲತೋಳು-ಬಲಹೆಗಲು-ಎಡಪಕ್ಕ-ಎಡತೋಳು-ಎಡಹೆಗಲು-ಕತ್ತಿನ ಹಿಂಭಾಗ-ನಡು-ಈ ಅಂಗಗಳಲ್ಲಿ ಅನುಕ್ರಮವಾಗಿ ಕೇಶವ-ನಾರಾಯಣ-ಮಾಧವ-ಗೋವಿಂದ-ವಿಷ್ಣು-ಮಧುಸೂದನ-ತ್ರಿವಿಕ್ರಮ-ವಾಮನ-ಶ್ರೀಧರ-ಹೃಷೀಕೇಶ-ಪದ್ಮನಾಭ-ದಾಮೋದರ–ಎಂಬ ನಾಮಗಳಿಂದ ನ್ಯಾಸಮಾಡಬೇಕು.

ನಿನ್ನ ಮೊಣಕಾಲುಗಳನ್ನು ರಕ್ಷಿಸಲಿ. ಯಜ್ಞಪುರುಷನು ತೊಡೆಗಳನ್ನು ರಕ್ಷಿಸಲಿ. ಅಚ್ಯುತನು ಕಟಿಪ್ರದೇಶವನ್ನು ರಕ್ಷಿಸಲಿ. ಹಯಗ್ರೀವನು ಹೊಟ್ಟೆಯನ್ನು ರಕ್ಷಿಸಲಿ. ಕೇಶವನು ಹೃದಯವನ್ನು ರಕ್ಷಿಸಲಿ. ಈಶನು ವಕ್ಷಃಸ್ಥಳವನ್ನು ರಕ್ಷಿಸಲಿ. ಸೂರ್ಯನು ಕಂಠವನ್ನು ರಕ್ಷಿಸಲಿ. ವಿಷ್ಣುವು ಬಾಹುಗಳನ್ನು ರಕ್ಷಿಸಲಿ. ತ್ರಿವಿಕ್ರಮನು ಮುಖವನ್ನು ರಕ್ಷಿಸಲಿ. ಈಶ್ವರನು ಶಿರಸ್ಸನ್ನು ರಕ್ಷಿಸಲಿ.

**ಚಕ್ರ್ಯಗ್ರತಃ ಸಹಗದೋ ಹರಿರಸ್ತು ಪಶ್ಚಾ-**
**ತ್ತತ್ಪಾರ್ಶ್ವಯೋರ್ಧನುರಸೀ ಮಧುಹಾಜನಶ್ಚ ।**
**ಕೋಣೇಷು ಶಙ್ಖ ಉರುಗಾಯ ಉಪರ್ಯುಪೇನ್ದ್ರ-**
**ಸ್ತಾರ್ಕ್ಷ್ಯಃ ಕ್ಷಿತೌ ಹಲಧರಃ ಪುರುಷಃ ಸಮನ್ತಾತ್ ॥೨೩॥**

ಚಕ್ರಿಯು ನಿನ್ನ ಮುಂಭಾಗವನ್ನು ರಕ್ಷಿಸಲಿ. ಗದಾಧರನು ನಿನ್ನ ಹಿಂಭಾಗವನ್ನು ರಕ್ಷಿಸಲಿ. ಧನುಸ್ಸನ್ನೂ ಖಡ್ಗವನ್ನೂ ಹಿಡಿದಿರುವ ಭಗವಾನ್ ಮಧುಸೂದನನೂ ಅಜನೂ ಪಾರ್ಶ್ವಭಾಗಗಳನ್ನು ರಕ್ಷಿಸಲಿ. ಶಂಖಧರ ನಾದ ಉರುಗಾಯನು ನಾಲ್ಕು ಕೋಣಗಳನ್ನು ರಕ್ಷಿಸಲಿ. ಉಪೇಂದ್ರನು ಮೇಲ್ಭಾಗವನ್ನು ರಕ್ಷಿಸಲಿ. ತಾರ್ಕ್ಷ್ಯಗರುತ್ಮಂತನು ಭೂಮಿಯಲ್ಲಿ ನಿನಗೆ ಕಾವಲಾಗಿರಲಿ. ಹಲಧರನಾದ ಪರಮಪುರುಷನು (ಸಂಕರ್ಷಣನು) ನಿನ್ನನ್ನು ಎಲ್ಲ ಕಡೆಗಳಿಂದಲೂ ರಕ್ಷಿಸಲಿ.

**ಇನ್ದ್ರಿಯಾಣಿ ಹೃಷೀಕೇಶಃ ಪ್ರಾಣಾನ್ನಾರಾಯಣೋಽವತು ।**
**ಶ್ವೇತದ್ವೀಪಪತಿಶ್ಚಿತ್ತಂ ಮನೋ ಯೋಗೇಶ್ವರೋಽವತು ॥೨೪॥**

ಹೃಷೀಕೇಶನು ನಿನ್ನ ಇಂದ್ರಿಯಗಳನ್ನು ರಕ್ಷಿಸಲಿ. ಪ್ರಾಣಗಳನ್ನು ನಾರಾಯಣನು ರಕ್ಷಿಸಲಿ. ಚಿತ್ತವನ್ನು ಶ್ವೇತದ್ವೀಪದ ಒಡೆಯನು ರಕ್ಷಿಸಲಿ. ಯೋಗೇಶ್ವರನು ಮನಸ್ಸನ್ನು ರಕ್ಷಿಸಲಿ.

**ಪೃಶ್ನಿಗರ್ಭಸ್ತು ತೇ ಬುದ್ಧಿಮಾತ್ಮಾನಂ ಭಗವಾನ್ಪರಃ ।**
**ಕ್ರೀಡನ್ತಂ ಪಾತು ಗೋವಿನ್ದಃ ಶಯಾನಂ ಪಾತು ಮಾಧವಃ ॥೨೫॥**

ನಿನ್ನ ಬುದ್ಧಿಯನ್ನು ಪೃಶ್ನಿಗರ್ಭನು ರಕ್ಷಿಸಲಿ. ನಿನ್ನ ಅಹಂಕಾರವನ್ನು ಭಗವಂತನಾದ ಪರಮಾತ್ಮನು ರಕ್ಷಿಸಲಿ. ನೀನು ಆಟವಾಡುತ್ತಿರುವಾಗ ಗೋವಿಂದನು ನಿನ್ನನ್ನು ರಕ್ಷಿಸಲಿ. ಮಲಗಿರುವಾಗ ಮಾಧವನು ರಕ್ಷಿಸಲಿ.

**ವ್ರಜನ್ತಮವ್ಯಾದ್ವೈಕುಣ್ಠ ಆಸೀನಂ ತ್ವಾಂ ಶ್ರಿಯಃ ಪತಿಃ ।**
**ಭುಞ್ಜಾನಂ ಯಜ್ಞಭುಕ್ಪಾತು ಸರ್ವಗ್ರಹಭಯಙ್ಕರಃ ॥೨೬॥**

ನೀನು ಓಡಾಡುತ್ತಿರುವಾಗ ವೈಕುಂಠನು ನಿನ್ನನ್ನು ರಕ್ಷಿಸಲಿ. ಕುಳಿತಿರುವಾಗ ಶ್ರೀಪತಿಯು ನಿನ್ನನ್ನು ರಕ್ಷಿಸಲಿ. ಸಮಸ್ತದುಷ್ಟಗ್ರಹಗಳಿಗೂ ಭಯವನ್ನುಂಟುಮಾಡುವ ಯಜ್ಞಭುಜನು ಊಟಮಾಡುವಾಗ ನಿನ್ನನ್ನು ರಕ್ಷಿಸಲಿ.

**ಡಾಕಿನ್ಯೋ ಯಾತುಧಾನ್ಯಶ್ಚ ಕೂಷ್ಮಾಣ್ಡಾ ಯೇಽರ್ಭಕಗ್ರಹಾಃ ।**
**ಭೂತಪ್ರೇತಪಿಶಾಚಾಶ್ಚ ಯಕ್ಷರಕ್ಷೋವಿನಾಯಕಾಃ ॥೨೭॥**

**ಕೋಟರಾ ರೇವತೀ ಜ್ಯೇಷ್ಠಾ ಪೂತನಾ ಮಾತೃಕಾದಯಃ ।**
**ಉನ್ಮಾದಾ ಯೇ ಹ್ಯಪಸ್ಮಾರಾ ದೇಹಪ್ರಾಣೇನ್ದ್ರಿಯದ್ರುಹಃ ॥೨೮॥**

**ಸ್ವಪ್ನದೃಷ್ಟಾ ಮಹೋತ್ಪಾತಾ ವೃದ್ಧಬಾಲಗ್ರಹಾಶ್ಚ ಯೇ ।**
**ಸರ್ವೇ ನಶ್ಯನ್ತು ತೇ ವಿಷ್ಣೋರ್ನಾಮಗ್ರಹಣಭೀರವಃ ॥೨೯॥**

ಡಾಕಿನೀ, ಯಾತುಧಾನಾ, ಕೂಷ್ಮಾಂಡಾ ಇವೇ ಮೊದಲಾದ ಮಕ್ಕಳನ್ನು ಕಾಡುವ ದುಷ್ಟಗ್ರಹಗಳೂ, ಭೂತ, ಪ್ರೇತ, ಪಿಶಾಚ, ಯಕ್ಷ, ರಾಕ್ಷಸ, ವಿನಾಯಕ, ಕೋಟರಾ, ರೇವತೀ, ಜ್ಯೇಷ್ಠಾ, ಪೂತನಾ, ಮಾತೃಕಾ–ಇವೇ ಮೊದಲಾದ ಪ್ರಾಣೇಂದ್ರಿಯಗಳನ್ನು ನಾಶಗೊಳಿಸುವ ಉನ್ಮಾದಾಪಸ್ಮಾರ ರೋಗಾಧಿದೇವತೆಗಳೂ, ಸ್ವಪ್ನದಲ್ಲಿ ಕಾಣಿಸಿಕೊಳ್ಳುವ ಉತ್ಪಾತಗಳೂ, ವೃದ್ಧಗ್ರಹ-ಬಾಲಗ್ರಹಗಳೂ ಇತರ ಸಮಸ್ತಅನಿಷ್ಟಗಳೂ ವಿನಾಶಹೊಂದಲಿ. ಇವೆಲ್ಲವೂ ವಿಷ್ಣುವಿನ ನಾಮೋಚ್ಚಾರಣೆಯಿಂದಲೇ ಭಯಗೊಂಡು ಓಡಿಹೋಗುತ್ತವೆ."

ಶ್ರೀಶುಕದೇವರು ಹೇಳುತ್ತಾರೆ :

ಪರೀಕ್ಷಿತನೇ! ಈ ಪ್ರಕಾರವಾಗಿ ಗೋಪಿಯರು ಪ್ರೇಮಪಾಶಕ್ಕೆ ಕಟ್ಟುಬಿದ್ದವರಾಗಿ ಸರ್ವರಕ್ಷಕನಾದ ಭಗವಂತ ಶ್ರೀಕೃಷ್ಣನಿಗೆ ರಕ್ಷೆಯನ್ನಿಟ್ಟರು. ತಾಯಿಯಾದ ಯಶೋದೆಯೂ ಮಗುವಿಗೆ ಹಾಲುಣಿಸಿ ಹಂಸ ತೂಲಿಕಾತಲ್ಪದಲ್ಲಿ ಮಲಗಿಸಿದಳು.

ಆ ಸಮಯಕ್ಕೆ ಸರಿಯಾಗಿ ನಂದಗೋಪನೂ ಅವನ ಸಂಗಡಿಗರೂ

ಮಥುರೆಯಿಂದ ಗೋಕುಲಕ್ಕೆ ಆಗಮಿಸಿದರು. ಪೂತನೆಯ ಭಯಂಕರವಾದ ಶರೀರವನ್ನು ಕಂಡೊಡನೆಯೇ ಆಶ್ಚರ್ಯಚಕಿತರಾಗಿ ಅವರು ಹೇಳಿದರು :

"ಇದು ನಿಶ್ಚಯವಾಗಿಯೂ ಅಚ್ಚರಿಯ ಸಂಗತಿಯಾಗಿದೆ. ಇಲ್ಲಿ ನಡೆದುದನ್ನು ವಸುದೇವನು ಮಥುರೆಯಲ್ಲಿಯೇ ಹೇಳಿಬಿಟ್ಟನು. ಆತನು ಭೂತ-ಭವಿಷ್ಯದ್ವರ್ತಮಾನಗಳನ್ನೂ ತಿಳಿದ ಯೋಗಿಯಾಗಿಬಿಟ್ಟಿರಬೇಕು. ಅಥವಾ ಹಿಂದಿನ ಜನ್ಮದಲ್ಲಿ ಯೋಗಿಯಾಗಿದ್ದಿರಬೇಕು. ಹಾಗಿಲ್ಲದಿದ್ದರೆ ಆತನಿಗೆ ಇಷ್ಟು ಖಚಿತವಾಗಿ ಈ ಉತ್ಪಾತದ ವಿಷಯವನ್ನು ಹೇಳುವುದಕ್ಕೆ ಆಗುತ್ತಿರಲಿಲ್ಲ."

ಆ ವೇಳೆಗೆ ವ್ರಜವಾಸಿಗಳೆಲ್ಲರೂ ಸೇರಿ ಪೂತನೆಯ ಶರೀರವನ್ನು ಗಂಡುಗೊಡಲಿಯಿಂದ ತುಂಡುಗಳನ್ನಾಗಿ ಮಾಡಿ ಗೋಕುಲದಿಂದ ಬಹಳ ದೂರದಲ್ಲಿ ಸಿದ್ಧಗೊಳಿಸಿದ್ದ ಚಿತೆಯಮೇಲಿರಿಸಿ ಬೆಂಕಿಯನ್ನು ಹಚ್ಚಿದರು. ದಹಿಸಲ್ಪಡುತ್ತಿದ್ದ ಆ ದೇಹದಿಂದ ಅಗುರುವಿನ ಸುವಾಸನೆಯನ್ನು ಹೊಂದಿದ್ದ ಹೊಗೆಯು ಹೊರಹೊಮ್ಮಿತು. ಇದರಲ್ಲಿ ಅಚ್ಚರಿಯೇನಿದೆ? ಭಗವಂತನೇ ಅವಳ ಸ್ತನ್ಯವನ್ನು ಕುಡಿದ ಕಾರಣ ಅವಳಲ್ಲಿದ್ದ ಪಾಪಗಳೆಲ್ಲವೂ ಕ್ಷಣಮಾತ್ರ ದಲ್ಲಿ ನಿರಸನವಾಗಿ ಅವಳು ನಿಷ್ಪಾಪಳಾಗಿದ್ದಳು. ಅದನ್ನೇ ಸೂಚಿಸುತ್ತಾ ಅವಳ ಶರೀರದಿಂದ ಹೊರಹೊಮ್ಮಿದ ಧೂಮವು ಸುಗಂಧಮಯವಾಗಿದ್ದಿತು.

**ಪೂತನಾ ಲೋಕಬಾಲಘ್ನೀ ರಾಕ್ಷಸೀ ರುಧಿರಾಶನಾ ।**
**ಜಿಘಾಂಸಯಾಪಿ ಹರಯೇ ಸ್ತನಂ ದತ್ತ್ವಾಪ ಸದ್ಗತಿಮ್ ॥೩೫॥**

ಪೂತನೆಯು ಒಬ್ಬ ಕ್ಷುದ್ರರಾಕ್ಷಸಿಯಾಗಿದ್ದಳು. ಕಂಸನ ಆಣತಿಯಂತೆ ಮಕ್ಕಳನ್ನು ಹಿಡಿಯುವುದು ; ಹಿಡಿದ ಮಕ್ಕಳನ್ನು ಸಾಯಿಸುವುದು ; ಅವುಗಳ ರಕ್ತವನ್ನು ಕುಡಿಯುವುದು–ಇದೇ ಅವಳ ಕಾರ್ಯವಾಗಿತ್ತು. ಮುದ್ದುಕೃಷ್ಣ ನನ್ನು ಕೂಡ ಅವಳು ಕೊಲ್ಲುವ ಆಶಯದಿಂದಲೇ ಎತ್ತಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ವಿಷದ ಹಾಲನ್ನುಣಿಸಿದಳು. ಆದರೂ ಕೂಡ ಪರಮಾತ್ಮನ ದಿವ್ಯಸ್ಪರ್ಶದ ಫಲವಾಗಿ ಅವಳಿಗೆ ಸತ್ಪುರುಷರಿಗೆ ಸಿಕ್ಕುವ ಸದ್ಗತಿಯೇ ಲಭ್ಯವಾಯಿತು. ಹೀಗಿರುವಾಗ–

**ಕಿಂ ಪುನಃ ಶ್ರದ್ಧಯಾ ಭಕ್ತ್ಯಾ ಕೃಷ್ಣಾಯ ಪರಮಾತ್ಮನೇ ।**
**ಯಚ್ಛನ್ಪ್ರಿಯತಮಂ ಕಿಂ ನು ರಕ್ತಾಸ್ತನ್ಮಾತರೋ ಯಥಾ ॥೩೬॥**

ಪರಬ್ರಹ್ಮಪರಮಾತ್ಮನಾದ ಆ ಶ್ರೀಕೃಷ್ಣನಿಗೆ ಶ್ರದ್ಧಾಭಕ್ತಿಯಿಂದ ತಾಯಿಯರಂತೆ ಅನುರಾಗಪೂರ್ವಕವಾಗಿ, ತನಗೆ ಅತ್ಯಂತಪ್ರಿಯವಾದ ವಸ್ತುವನ್ನೋ ಅಥವಾ ಅವನಿಗೆ ಅತಿಪ್ರಿಯವಾದ ವಸ್ತುವನ್ನೋ ಅರ್ಪಿಸುವವರಿಗೆ ಸಿಕ್ಕುವ ಭವ್ಯಲೋಕಗಳ ವಿಷಯವಾಗಿ ಹೇಳಬೇಕಾಗಿಯೇ ಇಲ್ಲ. ಪರಮಾತ್ಮನ ಚರಣಕಮಲಗಳು ಭಕ್ತರ ಹೃದಯಗಳಲ್ಲಿ ನಲಿದಾಡುತ್ತವೆ. ಅಂತಹ ದಿವ್ಯಚರಣಾರವಿಂದಗಳನ್ನು ಬ್ರಹ್ಮ-ರುದ್ರ–ಇವರೇ ಮೊದಲಾದ ದೇವತೆಗಳೂ ವಂದಿಸುತ್ತಿರುತ್ತಾರೆ. ಸಕಲರಿಂದಲೂ ವಂದಿಸಲ್ಪಡುವ ಆ ದಿವ್ಯಚರಣಕಮಲಗಳು ಪೂತನೆಯ ಮೇಲೆ ನಲಿದಾಡಿದುವು. ತ್ರಿಭುವನಗಳನ್ನೂ ಪರಿಪಾಲಿಸುವ ಪರಮಾತ್ಮನೇ ಅವಳ ಸ್ತನ್ಯವನ್ನು ಪಾನಮಾಡಿದನು. ನಿಶ್ಚಯವಾಗಿಯೂ ಆ ರಕ್ಕಸಿಯ ಸೌಭಾಗ್ಯವೆಷ್ಟೆಂದು ಹೇಳೋಣ! ಆತನ ದಿವ್ಯಪಾದಗಳ ಸ್ಪರ್ಶದಿಂದಲೂ ಆತನಿಗೆ ಸ್ತನ್ಯವನ್ನು ಕೊಟ್ಟುದರಿಂದಲೂ ರಾಕ್ಷಸಿಯು* ಆತನ ತಾಯಿಗೆ ಸಿಕ್ಕುವ ಸದ್ಗತಿಯನ್ನೇ ಪಡೆದಳು. ಹೀಗಿರುವಾಗ ಪರಮಪ್ರೀತಿಯಿಂದ ಹಾಲುಣಿಸಿದ ಯಶೋದೆಯೇ ಮೊದಲಾದ ತಾಯಂದಿರ ವಿಷಯವಾಗಿಯೂ ಮತ್ತು ಹಸುಗಳ ವಿಷಯ ವಾಗಿಯೂ ಹೇಳುವುದೇನಿದೆ? ಭಕ್ತರ ಕೈವಲ್ಯವೇ ಮುಂತಾದ ಸಕಲಾ ಭೀಷ್ಟಗಳನ್ನೂ ದಯಪಾಲಿಸುವ ದೇವಕೀಪುತ್ರನಾದ ಭಗವಾನ್ ಮುದ್ದುಕೃಷ್ಣನು ಪುತ್ರವಾತ್ಸಲ್ಯದ ಕಾರಣದಿಂದ ತಾನಾಗಿಯೇ ಹೊರಹೊಮ್ಮಿ ಬರುತ್ತಿದ್ದ ವ್ರಜಗೋಪಿಯರ ಹಾಲನ್ನು ಯಥೇಚ್ಛವಾಗಿ ಕುಡಿಯುತ್ತಿದ್ದನು.

ಪರೀಕ್ಷಿತಮಹಾರಾಜ! ಯಾವ ಗೋಪಿಯರು ನಿತ್ಯನಿರಂತರವಾಗಿ ಮುದ್ದುಕೃಷ್ಣನನ್ನು ತಮ್ಮ ಮಗನೆಂದೇ ಭಾವಿಸಿ ಅವನ ಲಾಲನೆ-ಪಾಲನೆಗಳಲ್ಲಿಯೇ ಆಸಕ್ತರಾಗಿರುತ್ತಿದ್ದರೋ ಅಂತಹ ಪುಣ್ಯವತಿಯರಾದ

---

* ಇಲ್ಲಿರುವ ಜನನೀಗತಿಂ ಎಂಬ ಪದಕ್ಕೆ ವಿಜಯಧ್ವಜೀಯವ್ಯಾಖ್ಯೆಯು ಹೀಗಿದೆ :

ಜನನೀಗತಿ–ಜನರಲ್ಲಿ ಅತಿನೀಚರಿಂದ ಹೊಂದಲ್ಪಡುವ ಗತಿ–ಎಂದರೆ ನರಕ. ಅಪಿಸ್ವರ್ಗಂ = ಅತಿನಿಂದಿತವಾದ ಸ್ವರ್ಗಂ ಎಂದರೆ ನರಕವೆಂದರ್ಥ. ಪೂತನೆಯಲ್ಲಿ ಆವೇಶಗೊಂಡಿದ್ದ ಊರ್ವಶಿಗೆ ಸದ್ಗತಿಯೂ ಪೂತನೆಗೆ ದುರ್ಗತಿಯೂ ಪ್ರಾಪ್ತವಾಯಿತೆಂದು ಅದರ ಭಾವವು.

ಗೋಪಿಯರಿಗೆ ಅಜ್ಞಾನದಿಂದುಂಟಾಗುವ ಜನ್ಮಮೃತ್ಯುರೂಪವಾದ ಸಂಸಾರ ಬಂಧನವಿರುವುದಿಲ್ಲ.

ನಂದಗೋಪನ ಜೊತೆಯಲ್ಲಿ ಮಥುರೆಯಿಂದ ಆಗಮಿಸಿದ ವ್ರಜವಾಸಿಗಳು ಚಿತೆಯಿಂದ ಹೊರಬರುತ್ತಿದ್ದ ಸುಗಂಧಮಯವಾದ ಹೊಗೆಯನ್ನು ಆಘ್ರಾಣಿಸುತ್ತಲೇ–'ಇದೇನಿದು? ಈ ಸುವಾಸನೆಯು ಎಲ್ಲಿಂದ ಬರುತ್ತಿದೆ?'–ಎಂದು ತಮ್ಮ-ತಮ್ಮಲ್ಲಿಯೇ ಜಿಜ್ಞಾಸೆಮಾಡುತ್ತಾ ಹಳ್ಳಿಯನ್ನು ಪ್ರವೇಶಿಸಿದರು. ಊರನ್ನು ಸೇರಿದನಂತರ ನಂದನನ್ನು ಸಂಧಿಸಿದ ಗೋಪಾಲಕರು–ಪೂತನೆಯು ಕಡುಚೆಲುವೆಯ ರೂಪವನ್ನು ಧರಿಸಿ ನಂದಗೋಪನ ಮನೆಗೆ ಹೋದುದು, ಮುದ್ದುಕೃಷ್ಣನನ್ನು ತೊಡೆಯ ಮೇಲೆತ್ತಿಕೊಂಡು ವಿಷಪೂರಿತವಾದ ಹಾಲುಣಿಸಿದುದು, ಆತನು ಹಾಲಿನಸಹಿತವಾಗಿ ಅವಳ ಪ್ರಾಣಗಳನ್ನು ಅಪಹರಿಸಿದುದು–ಈ ಎಲ್ಲ ವಿಷಯಗಳನ್ನೂ ನಂದಗೋಪನಿಗೆ ವಿವರಿಸಿ ಹೇಳಿದರು. ಪೂತನೆಯು ಸತ್ತುದನ್ನೂ ಮುದ್ದುಕೃಷ್ಣನು ಕುಶಲಪೂರ್ವಕವಾಗಿ ಅವಳಿಂದ ಬಿಡುಗಡೆಹೊಂದಿದುದನ್ನೂ ಕೇಳಿ ನಂದಾದಿಗಳಿಗೆ ಮಹಾಶ್ಚರ್ಯವಾಯಿತು. ಪರೀಕ್ಷಿತನೇ! ಉದಾರಶಿರೋಮಣಿಯಾದ ನಂದಗೋಪನು ಮೃತ್ಯುಮುಖದಿಂದ ಬಿಡುಗಡೆಹೊಂದಿದ ತನ್ನ ಮುದ್ದಿನ ಶ್ರೀಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮುದ್ದಾಡುತ್ತಾ, ಮಗುವಿನ ನೆತ್ತಿಯನ್ನು ಪುನಃ ಪುನಃ ಆಘ್ರಾಣಿಸುತ್ತಾ, ಆ ಮುದ್ದುಮುಖಕ್ಕೆ ನೂರಾರು ಮುತ್ತುಗಳನ್ನು ಕೊಡುತ್ತಾ ಆನಂದಸಾಗರದಲ್ಲಿ ಮುಳುಗಿಹೋದನು.

**ಯ ಏತತ್ಪೂತನಾಮೋಕ್ಷಂ ಕೃಷ್ಣಸ್ಯಾರ್ಭಕಮದ್ಭುತಮ್ ।**
**ಶೃಣುಯಾಚ್ಛ್ರದ್ಧಯಾ ಮರ್ತ್ಯೋ ಗೋವಿನ್ದೇ ಲಭತೇ ರತಿಮ್ ॥**

ಮಹಾರಾಜ! ಯಾವನು ಶ್ರೀಮುದ್ದುಕೃಷ್ಣನ ಬಾಲಲೀಲೆಗಳಲ್ಲೊಂದಾದ ಈ ಪೂತನಾಮೋಕ್ಷಪ್ರಕರಣವನ್ನು ಶ್ರದ್ಧೆಯಿಂದ ಕೇಳುವನೋ ಅವನಿಗೆ ನಿಶ್ಚಯವಾಗಿಯೂ ಶ್ರೀಕೃಷ್ಣನಲ್ಲಿ ಅನುರಾಗವುಂಟಾಗುವುದು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೬ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೭ನೆಯ ಅಧ್ಯಾಯ

## ಶಕಟಾಸುರಭಂಜನ ಮತ್ತು ತೃಣಾವರ್ತನ ಉದ್ಧಾರ

ಪರೀಕ್ಷಿತರಾಜನು ಪ್ರಶ್ನಿಸುತ್ತಾನೆ :

**ಯೇನ ಯೇನಾವತಾರೇಣ ಭಗವಾನ್ಹರಿರೀಶ್ವರಃ ।**
**ಕರೋತಿ ಕರ್ಣರಮ್ಯಾಣಿ ಮನೋಜ್ಞಾನಿ ಚ ನಃ ಪ್ರಭೋ ॥೧॥**


"ಪ್ರಭುವೇ! ಸರ್ವಶಕ್ತಿಮಂತನಾದ ಭಗವಾನ್ ಶ್ರೀಹರಿಯು ಅನೇಕವಾದ ಅವತಾರಗಳನ್ನೆತ್ತಿ ಅತ್ಯಂತಸುಂದರವಾದ ಮತ್ತು ಕರ್ಣಾನಂದ ಕರವಾದ ಲೀಲಾ-ವಿನೋದಗಳನ್ನು ಮಾಡಿದ್ದಾನೆ. ಆ ಎಲ್ಲ ಲೀಲಾಪ್ರಸಂಗ ಗಳೂ ನನ್ನ ಮನಸ್ಸಿಗೆ ಬಹಳ ಆಪ್ಯಾಯಮಾನವನ್ನುಂಟುಮಾಡಿವೆ.

ಭಗವಂತನ ಲೀಲಾವಿನೋದಗಳ ಶ್ರವಣಮಾತ್ರದಿಂದಲೇ ಭಗವತ್ಸಂಬಂಧವಾದ ಕಥೆಯನ್ನು ಕೇಳುವುದರಲ್ಲಿನ ಅರುಚಿಯು ಹೋಗಿ ಬಿಡುತ್ತದೆ. ಭಗವತ್ಕಥೆಗಳನ್ನು ಕೇಳಲು ವಿಶೇಷವಾದ ಆಸಕ್ತಿಯೇ ಉಂಟಾಗುತ್ತದೆ. ವಿವಿಧವಿಷಯಗಳಲ್ಲಿರುವ ತೃಷ್ಣೆಯೂ ಹೋಗಿಬಿಡುತ್ತದೆ. ಭಗವತ್ಕಥಾಶ್ರವಣವು ಹೊರತಾಗಿ ಬೇರೆ ಯಾವುದೂ ಬೇಕಾಗುವುದೇ ಇಲ್ಲ. ಅನ್ನ-ಪಾನಾದಿಗಳಲ್ಲಿಯೂ ಆಸಕ್ತಿಯು ಹೋಗಿಬಿಡುತ್ತದೆ. ಭಗವಂತನ ಲೀಲಾವಿನೋದಗಳನ್ನು ಕೇಳುವುದರಿಂದ ಬಹಳ ಶೀಘ್ರ ವಾಗಿಯೇ ಅಂತಃಕರಣವು ಶುದ್ಧವಾಗುತ್ತದೆ. ಭಗವಂತನ ಚರಣಾರವಿಂದ ಗಳಲ್ಲಿ ಭಕ್ತಿಯೂ ಭಗವಂತನ ಭಕ್ತರಲ್ಲಿ ಪ್ರೇಮವೂ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ಇಂತಹ ಪರಮಾದ್ಭುತವಾದ ಭಗವಂತನ ಲೀಲಾವಿನೋದ ಪ್ರಸಂಗಗಳನ್ನು ಶ್ರವಣಮಾಡಲು ನನಗೆ ಅರ್ಹತೆ ಇರುವುದೆಂದು ತಾವು ಭಾವಿಸುವುದಾದರೆ ದಯಮಾಡಿ ನನಗೆ ಭಗವಂತನ ಮನೋಹರವಾದ ಲೀಲಾಪ್ರಸಂಗಗಳನ್ನು ವರ್ಣನೆಮಾಡಿ ಹೇಳಿರಿ. ಮನುಷ್ಯಲೋಕದಲ್ಲಿ ಅವತರಿಸಿ ಮನುಷ್ಯರ ಸ್ವಭಾವಗುಣಗಳನ್ನೇ ಅನುಕರಿಸುತ್ತಿದ್ದ ಶ್ರೀಕೃಷ್ಣನ ಇತರ ಪರಮಾದ್ಭುತವಾದ ಬಾಲಲೀಲೆಗಳನ್ನೂ ಹೇಳುವ ಕೃಪೆಮಾಡಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

“ಮುದ್ದುಕೃಷ್ಣನು ಮೂರು ತಿಂಗಳಿಗೆ ಸರಿಯಾಗಿ ಬೋರಲು ಬಿದ್ದನು. ಅಂದಿಗೆ ಸರಿಯಾಗಿ ಅವನ ಜನ್ಮನಕ್ಷತ್ರವಾದ ರೋಹಿಣೀ ನಕ್ಷತ್ರದ ಯೋಗವೂ ಇದ್ದಿತು. ಮಗುವಿಗೆ ನೀರೆರೆದು ಹಬ್ಬವನ್ನಾಚರಿಸುವ ಸಂಭ್ರಮ. ಹಲವಾರು ಗೋಪಿಯರು ನಂದಗೋಪನ ಮನೆಗೆ ಬಂದರು. ಕೆಲವರು ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಮಂಗಳವಾದ್ಯಗಳು ಮೊಳಗುತ್ತಿದ್ದುವು. ಗೋಪಿಯರ ಮಧ್ಯದಲ್ಲಿ ಯಶೋದಾದೇವಿಯು ಮುದ್ದುಕೃಷ್ಣನಿಗೆ ನೀರೆರೆದಳು. ಬ್ರಾಹ್ಮಣರು ಮಂತ್ರಗಳನ್ನು ಹೇಳುತ್ತಾ ಮಗುವಿಗೆ ಆಶೀರ್ವಾದಮಾಡುತ್ತಿದ್ದರು. ನಂದಪತ್ನಿಯಾದ ಯಶೋದಾ ದೇವಿಯು ಬ್ರಾಹ್ಮಣರನ್ನು ಅನ್ನ-ಪಾನಾದಿಗಳಿಂದಲೂ, ವಸ್ತ್ರ-ಮಾಲೆ ಗಳಿಂದಲೂ, ಗೋದಾನದಿಂದಲೂ, ಅಭೀಷ್ಟವಾದ ವಸ್ತುಗಳ ಪ್ರದಾನ ದಿಂದಲೂ ಸತ್ಕರಿಸಿ ಸಮಾದರಿಸುತ್ತಿದ್ದಳು. ಅವರಿಂದ ಮುದ್ದುಕೃಷ್ಣನಿಗೆ ಸ್ವಸ್ತಿವಾಚನವನ್ನು ಮಾಡಿಸಿದಳು. ಆ ವೇಳೆಗೆ ನೀರೆರೆಸಿಕೊಂಡ ಆಯಾಸ ದಿಂದ ಮಗುವು ತೂಕಡಿಸುತ್ತಿದ್ದಿತು. ಇದನ್ನು ಗಮನಿಸಿದ ಯಶೋದೆಯು ಮೆಲ್ಲಗೆ ಮಗುವನ್ನು ಎತ್ತಿಕೊಂಡು ಹೋಗಿ ಹಂಸತೂಲಿಕಾತಲ್ಪದಲ್ಲಿ ಮಲಗಿಸಿದಳು. ಬಳಿಕ ಸಮಾರಂಭಕ್ಕಾಗಿ ಆಗಮಿಸಿದ ಗೋಪಿಯರನ್ನು ಸತ್ಕರಿಸುವುದರಲ್ಲಿ ನಿರತಳಾದಳು. ಸ್ವಲ್ಪಹೊತ್ತಿನಲ್ಲಿಯೇ ಮುದ್ದು ಗೋಪಾಲನು ಎಚ್ಚರಗೊಂಡನು. ಹಸಿವಿನಿಂದಾಗಿ ಹಾಲುಕುಡಿಯಲು ಅಳತೊಡಗಿದನು. ಆ ಸಮಯದಲ್ಲಿ ಮನಸ್ವಿನಿಯಾದ ಯಶೋದಾ ದೇವಿಯು ಉತ್ಸವಕ್ಕೆ ಆಗಮಿಸಿದ್ದ ವ್ರಜವಾಸಿಗಳನ್ನು ಸ್ವಾಗತಿಸಿ ಸತ್ಕರಿಸು ವುದರಲ್ಲಿ ನಿರತಳಾಗಿದ್ದಳು. ಶ್ಯಾಮಸುಂದರನ ಅಳುವು ಅವಳಿಗೆ ಕೇಳಿಸಲೇ ಇಲ್ಲ. ಆತನು ಅಳುತ್ತಳುತ್ತಾ ತನ್ನ ಕಾಲುಗಳನ್ನು ಬಡಿಯತೊಡಗಿದನು. ಆತನು ಅಳುತ್ತಳುತ್ತಾ ಈಜಿಕೊಂಡು ಅಲ್ಲಿದ್ದ ಒಂದು ತುಂಬುಗಾಡಿಯ ಕೆಳಕ್ಕೆ ಹೋಗಿ ಅಲ್ಲಿಯೂ ಮಲಗಿದ್ದಂತೆಯೇ ಅಳುತ್ತಾ ಕಾಲುಗಳನ್ನು ಬಡಿಯುತ್ತಾ ಇದ್ದನು. ಎಳೆಚಿಗುರಿನಂತೆ ಮೃದುವಾಗಿಯೂ ಮನೋಹರ ವಾಗಿಯೂ ಇದ್ದ ಪುಟ್ಟಕಾಲುಗಳ ಪ್ರಹಾರವು ಗಾಡಿಗೆ ಬಿದ್ದೊಡನೆಯೇ ಸಂಭಾರಗಳಿಂದ ತುಂಬಿದ್ದ ಆ ಗಾಡಿಯು ತಲೆಕೆಳಗಾಯಿತು. ಹಾಲು-

ಮೊಸರು-ತುಪ್ಪ–ಇವೇ ಮೊದಲಾದ ನಾನಾರಸಗಳಿಂದ ತುಂಬಿದ್ದ ಕಂಚಿನ ಮತ್ತು ತಾಮ್ರದ ಪಾತ್ರೆಗಳು ನುಚ್ಚುನೂರಾದುವು. ಗಾಡಿಯ ಗಾಲಿಗಳು-ಅಚ್ಚುಮರ-ನೊಗ–ಇತ್ಯಾದಿಗಳೆಲ್ಲವೂ ಮುರಿದುಬಿದ್ದುವು. ಮುದ್ದುಕೃಷ್ಣನು ಬೋರಲು ಬಿದ್ದ ಆ ಉತ್ಸವದಲ್ಲಿ ಭಾಗವಹಿಸಲು ಬಂದಿದ್ದ ಗೋಪಿಯರೂ, ಯಶೋದಾ-ರೋಹಿಣೀ-ನಂದಗೋಪರೂ ಇಂತಹ ವಿಚಿತ್ರವಾದ ಘಟನೆಯನ್ನು ನೋಡಿ ವ್ಯಾಕುಲಗೊಂಡರು. 'ಇದೇನಾಗಿಬಿಟ್ಟಿತು? ಗಾಡಿಯು ತಾನೇತಾನಾಗಿ ಹೇಗೆ ಮಗುಚಿಕೊಂಡಿತು?'–ಮುಂತಾಗಿ ತಮ್ಮಲ್ಲಿ–ತಾವೇ




ತರ್ಕಿಸತೊಡಗಿದರು. 'ಹೇಗೆ ಗಾಡಿಯು ಮಗುಚಿ ಕೊಂಡಿತು?'–ಎಂಬ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಬರಲು ಅವರಿಗೆ ಸಾಧ್ಯವಾಗಲೇ ಇಲ್ಲ. ಅಲ್ಲಿಯೇ ಇದ್ದ ಕೆಲವರು ಬಾಲಕರು–'ಮುದ್ದು ಕೃಷ್ಣನು ಕಾಲುಗಳಲ್ಲಿ ಚಿಮ್ಮಿದ್ದರಿಂದಲೇ ಗಾಡಿಯು ತಲೆ-ಕೆಳಗಾಯಿತು. ಇದನ್ನು ನಾವು ಪ್ರತ್ಯಕ್ಷವಾಗಿ ನೋಡಿದೆವು'–ಎಂದು ಗೋಪಿ-ಗೋಪಾಲಕರಿಗೆ ಹೇಳಿದರೂ ಅವರ ಮಾತುಗಳಲ್ಲಿ ಯಾರಿಗೂ ವಿಶ್ವಾಸವುಂಟಾಗಲಿಲ್ಲ. ಅದು ಮಕ್ಕಳ ಮಾತೆಂದು ತಿರಸ್ಕರಿಸಿಬಿಟ್ಟರು. ಆ ಅದ್ಭುತಬಾಲಕನ ಅಪ್ರಮೇಯವಾದ ಬಲವು ಅವರಿಗೆ ತಿಳಿದಿರಲಿಲ್ಲ.*

---

* ಶಕಟಾಸುರನ ಪೂರ್ವ ಕಥೆ : ಉತ್ಕಚನೆಂಬುವವನು ಹಿರಣ್ಯಾಕ್ಷನ ಮಗನು. ಅವನು ಮಹಾಬಲಿಷ್ಠನೂ ಸ್ಥೂಲಕಾಯನೂ ಆಗಿದ್ದನು. ಅವನು ಪ್ರಪಂಚ

ಯಶೋದೆಯು ಈ ಘಟನೆಯನ್ನು ಯಾವುದೋ ಗ್ರಹಚೇಷ್ಟೆಯಿರಬಹುದೆಂದೇ ಭಾವಿಸಿದಳು. ಅಳುತ್ತಲೇ ಇದ್ದ ಮುದ್ದುಕೃಷ್ಣನನ್ನು ಎತ್ತಿ ಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ಸಮಾಧಾನಗೊಳಿಸುತ್ತಾ ಬ್ರಾಹ್ಮಣರಿಂದ ಮಂತ್ರಪುರಸ್ಸರವಾಗಿ ಸ್ವಸ್ತಿವಾಚನಮಾಡಿಸಿ ಹಾಲುಣಿಸಿದಳು. ಅನಂತರ ಬಲಿಷ್ಠರಾಗಿದ್ದ ಗೋಪಾಲಕರು ಮಗುಚಿ ಬಿದ್ದಿದ್ದ ಗಾಡಿಯನ್ನು ಸರಿಯಾಗಿ ನಿಲ್ಲಿಸಿದರು. ಹಿಂದಿನಂತೆಯೇ ಸಾಮಗ್ರಿಗಳನ್ನು ಗಾಡಿಗೆ ತುಂಬಿದರು. ಬ್ರಾಹ್ಮಣರು ಅನಿಷ್ಟನಿವಾರಕಗಳಾದ ಹೋಮಗಳನ್ನು ಮಾಡಿ ಭಗವಂತನನ್ನು ಮತ್ತು ಆ ಗಾಡಿಯನ್ನು ಮೊಸರು-ಅಕ್ಷತೆ-ದರ್ಭೆ-ನೀರು ಇತ್ಯಾದಿಗಳಿಂದ ಪೂಜಿಸಿದರು.

**ಯೇಽಸೂಯಾನೃತದಮ್ಭೇರ್ಷ್ಯಾಹಿಂಸಾಮಾನವಿವರ್ಜಿತಾಃ ।**
**ನ ತೇಷಾಂ ಸತ್ಯಶೀಲಾನಾಮಾಶಿಷೋ ವಿಫಲಾಃ ಕೃತಾಃ ॥೧೩॥**

ಪರೀಕ್ಷಿತ! 'ಯಾರು ಇತರರಲ್ಲಿ ದೋಷಗಳನ್ನು ಹುಡುಕುವುದಿಲ್ಲವೋ, ಸುಳ್ಳುಹೇಳುವುದಿಲ್ಲವೋ, ದಾಂಭಿಕರಾಗಿರುವುದಿಲ್ಲವೋ, ಇತರರ ಅಭ್ಯುದಯವನ್ನು ಕಂಡು ಹೊಟ್ಟೇಕಿಚ್ಚುಪಡುವುದಿಲ್ಲವೋ, ಯಾರೊಬ್ಬರನ್ನೂ ಹಿಂಸಿಸುವುದಿಲ್ಲವೋ, ದುರಭಿಮಾನಶೂನ್ಯರಾಗಿರುವರೋ–ಅಂತಹ ಸತ್ಯಶೀಲರಾದ ಬ್ರಾಹ್ಮಣರು ಮಾಡುವ ಆಶೀರ್ವಾದವೆಂದಿಗೂ ವ್ಯರ್ಥವಾಗುವುದಿಲ್ಲ.'

---

ಪರ್ಯಟನಮಾಡುತ್ತಿದ್ದಾಗ ಒಮ್ಮೆ ಲೋಮಶಮಹರ್ಷಿಗಳ ಆಶ್ರಮಕ್ಕೂ ಬಂದನು. ಋಷಿ-ಮುನಿಗಳ ವಿಷಯದಲ್ಲಿ ಅವನಿಗೆ ತಿರಸ್ಕಾರಬುದ್ಧಿಯಿದ್ದಿತು. ರಾಕ್ಷಸಸಹಜವಾದ ಬುದ್ಧಿಯಿಂದ ಅವನು ಆಶ್ರಮದ ಪರಿಸರದಲ್ಲಿದ್ದ ವೃಕ್ಷಗಳೆಲ್ಲವನ್ನೂ ಕೀಳತೊಡಗಿದನು. ಲೋಮಶರು ಕುಪಿತರಾಗಿ ಶಪಿಸಿದರು : 'ದುಷ್ಟನೇ! ನೀನು ದೇಹರಹಿತನಾಗು.' ಮರುಕ್ಷಣದಲ್ಲಿಯೇ ಉತ್ಕಚನು ಹಾವಿನ ಪೊರೆಯಂತೆ ಆಗಿಬಿಟ್ಟನು. ಭಯಗ್ರಸ್ತನಾದ ರಾಕ್ಷಸನು ಒಡನೆಯೇ ಲೋಮಶರ ಕಾಲುಗಳಿಗೆ ಬಿದ್ದು ಶಾಪದ ನಿರಸನಕ್ಕಾಗಿ ಬೇಡಿಕೊಂಡನು. ಲೋಮಶರು ಪ್ರಸನ್ನರಾದರು. ಮಹಾತ್ಮರ ಶಾಪವೂ ಕೆಲವು ವೇಳೆ ವರವಾಗಿ ಪರಿಣಮಿಸುತ್ತದೆ. ಪ್ರಸನ್ನರಾದ ಲೋಮಶರು ಹೇಳಿದರು : 'ವೈವಸ್ವತ ಮನ್ವಂತರದಲ್ಲಿ ಶ್ರೀಕೃಷ್ಣನ ಪಾದಸ್ಪರ್ಶದಿಂದ ನೀನು ಮುಕ್ತನಾಗುವೆ.' ಅವನೇ ಶಕಟಾಸುರನಾಗಿ ಬಂದು ಮುದ್ದುಕೃಷ್ಣನ ಪಾದಸ್ಪರ್ಶದಿಂದ ಮುಕ್ತನಾದನು.

ಹೀಗೆ ಯೋಚಿಸಿದ ನಂದಗೋಪನು ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಋಗ್ಯಜುಸ್ಸಾಮಾಥರ್ವಣಮಂತ್ರಗಳಿಂದ ಅಭಿಮಂತ್ರಿತವಾದ ಮತ್ತು ಓಷಧಿಗಳಿಂದ ಯುಕ್ತವಾಗಿದ್ದ ಪರಮಪವಿತ್ರವಾದ ಶುದ್ಧೋದಕದಿಂದ ಮಗುವಿಗೆ ಸ್ನಾನಮಾಡಿಸಿದನು. ಏಕಾಗ್ರಚಿತ್ತನಾದ ನಂದಗೋಪನು ಮಗುವಿಗೆ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಅವರ ನಿರ್ದೇಶನದಂತೆ ಅಗ್ನಿಯಲ್ಲಿ ಹೋಮಮಾಡಿದನು. ಬಳಿಕ ಷಡ್ರಸೋಪೇತವಾದ ಭಕ್ಷ್ಯ-ಭೋಜ್ಯಾದಿಗಳಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಿದನು. ಅನಂತರ ನಂದಗೋಪನು ಪುತ್ರನ ಅಭ್ಯುದಯಾರ್ಥವಾಗಿ ವಸ್ತ್ರಗಳಿಂದಲೂ ಪುಷ್ಪಮಾಲಿಕೆಗಳಿಂದಲೂ ಚಿನ್ನದಹಾರಗಳಿಂದಲೂ ಸಮಲಂಕೃತವಾದ, ಒಳ್ಳೆಯ ಗುಣಗಳಿಂದ ಕೂಡಿದ್ದ ಬಹುಸಂಖ್ಯಾತವಾದ ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಬ್ರಾಹ್ಮಣರೆಲ್ಲರೂ ತುಂಬುಮನಸ್ಸಿನಿಂದ ಮುದ್ದುಕೃಷ್ಣನಿಗೂ ನಂದಗೋಪನಿಗೂ ಪರಿವಾರದವರಿಗೂ ಆಶೀರ್ವಾದಮಾಡಿದರು.

**ವಿಪ್ರಾ ಮನ್ತ್ರವಿದೋ ಯುಕ್ತಾಸ್ತೈರ್ಯಾಃ ಪ್ರೋಕ್ತಾಸ್ತಥಾಶಿಷಃ ।**
**ತಾ ನಿಷ್ಫಲಾ ಭವಿಷ್ಯನ್ತಿ ನ ಕದಾಚಿದಪಿ ಸ್ಫುಟಮ್ ॥೧೭॥**

ಸದಾಚಾರವುಳ್ಳ ವೇದವಿದರು ಮಾಡಿದ ಆಶೀರ್ವಾದಗಳು ಯಾವಾಗಲೂ ನಿಷ್ಫಲವಾಗದೆಂಬುದು ಬಹಳ ಸ್ಪಷ್ಟವಾಗಿಯೇ ಇದೆ.

ಮುಂದೆ ಒಂದು ದಿನ ಯಶೋದೆಯು ಮುದ್ದುಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಆಡಿಸುತ್ತಿದ್ದಳು. ಇದ್ದಕ್ಕಿದ್ದಂತೆಯೇ ಮುದ್ದು ಕೃಷ್ಣನು ಪರ್ವತಶಿಖರದಂತೆ ಬಹಳ ಭಾರವಾಗಿಬಿಟ್ಟನು. ಯಶೋದೆಗೆ ಪುಟ್ಟಕಂದನನ್ನು ತೊಡೆಯಮೇಲೆ ಕುಳ್ಳಿರಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಶಿಶುವಿನ ಭಾರದಿಂದ ಪೀಡಿತಳಾಗಿದ್ದ ಅವಳು ಅಚ್ಚರಿಗೊಳ್ಳುತ್ತಾ ಕಂದನನ್ನು ನೆಲದ ಮೇಲೆ ಮಲಗಿಸಿಬಿಟ್ಟಳು.

ಬಳಿಕ ಯಶೋದೆಯು ಕಂದನಿಗೆ ಯಾವ ಉಪದ್ರವವೂ ಆಗದಿರಲೆಂದು ಭಗವಂತನನ್ನು ಧ್ಯಾನಿಸಿ ಗೃಹಕೃತ್ಯದಲ್ಲಿ ತೊಡಗಿದಳು.

ತೃಣಾವರ್ತನೆಂಬ ದೈತ್ಯನು ಕಂಸನ ಸೇವಕನಾಗಿದ್ದನು. ಹುಟ್ಟಿದ

ಮಕ್ಕಳನ್ನು ಕೊಂದುಹಾಕಲು ಅವನನ್ನೂ ಕಂಸನು ಕಳುಹಿಸಿದ್ದನು. ಪ್ರಭುವಿನ ಆಜ್ಞೆಯಂತೆ ಸುಂಟರಗಾಳಿಯ ರೂಪವನ್ನು ಧರಿಸಿ ಬಂದ ಆ ತೃಣಾವರ್ತನು ಮುದ್ದುಕೃಷ್ಣನನ್ನು ಹಾರಿಸಿಕೊಂಡು ಆಕಾಶಕ್ಕೆ ಹೋಗಿ ಬಿಟ್ಟನು. ಹಾಗೆಯೇ ಗೋಕುಲದಾದ್ಯಂತವಾಗಿ ಧೂಳನ್ನು ಎಬ್ಬಿಸಿ ಎಲ್ಲರ ಕಣ್ಣುಗಳನ್ನೂ ಮುಚ್ಚಿಸಿಬಿಟ್ಟನು. ಸುಂಟರಗಾಳಿಯ ಅತಿಘೋರವಾದ ಕರ್ಕಶಶಬ್ದವು ಹತ್ತು ದಿಕ್ಕುಗಳಲ್ಲಿಯೂ ತುಂಬಿಕೊಂಡಿತು. ಮುಹೂರ್ತಕಾಲ ಗೋಕುಲವು ಧೂಳಿನಿಂದಲೂ ಕತ್ತಲೆಯಿಂದಲೂ ಮುಚ್ಚಿಹೋಗಿದ್ದಿತು. ಯಶೋದೆಯು ಬಿಟ್ಟುಹೋಗಿದ್ದ ಸ್ಥಳದಲ್ಲಿ ಮುದ್ದು ಕೃಷ್ಣನಿರಲಿಲ್ಲ. ಬಿರುಗಾಳಿಯ ರೂಪದಲ್ಲಿದ್ದ ತೃಣಾವರ್ತನಿಂದೆರಚಲ್ಪಟ್ಟ ಮರಳಿನ ಕಣಗಳಿಂದ ತುಂಬಿಹೋಗಿದ್ದ ಆ ಗೋಕುಲದಲ್ಲಿ ಒಬ್ಬರು ಮತ್ತೊಬ್ಬರನ್ನು ನೋಡಲಾಗುತ್ತಿರಲಿಲ್ಲ. ಗೋಪಾಲಕರೆಲ್ಲರೂ ವಿಮೋಹಿತರಾಗಿ ಕಳವಳಗೊಂಡರು. ಹೀಗೆ ಘೋರವಾದ ಸುಂಟರಗಾಳಿಯು ಬೀಸುತ್ತಿದ್ದಾಗ ಬಿರುಗಾಳಿಯ ಪ್ರಭಾವದಿಂದ ಧೂಳಿನ ಮಳೆಗರೆಯುತ್ತಿರ ಲಾಗಿ ಯಶೋದೆಯು ತಾನು ಮಲಗಿಸಿದ್ದ ಸ್ಥಳದಲ್ಲಿ ಕಂದನನ್ನು ಕಾಣದೆ ಶೋಕಾತುರಳಾದಳು. ತನ್ನ ಮುದ್ದುಕೃಷ್ಣನನ್ನು ಸ್ಮರಿಸುತ್ತಾ ಕರುಣಾ ಜನಕವಾದ ರೀತಿಯಲ್ಲಿ ರೋದಿಸತೊಡಗಿದಳು. ಯಶೋದಾಮಾತೆಯ ಸ್ಥಿತಿಯು ಕರುವನ್ನು ಕಳೆದುಕೊಂಡ ಹಸುವಿನಂತಾಗಿದ್ದಿತು. ಅತಿದುಃಖ ದಿಂದವಳು ಮೂರ್ಛಿತಳಾಗಿ ಕೆಳಗೆ ಬಿದ್ದಳು. ಸ್ವಲ್ಪಹೊತ್ತು ಕಳೆದನಂತರ ಬಿರುಗಾಳಿಯು ಶಾಂತವಾದಂತೆ ಧೂಳಿನ ಮಳೆಯು ನಿಂತಿತು. ಬಿರುಗಾಳಿಯ ಶಬ್ದವು ನಿಂತನಂತರ ಯಶೋದಾದೇವಿಯ ಗೋಳಿನ ಶಬ್ದವು ಎಲ್ಲ ಕಡೆಗಳಲ್ಲಿಯೂ ಪ್ರತಿಧ್ವನಿಸಿತು. ಯಶೋದೆಯ ಅಳುವಿನ ಶಬ್ದವನ್ನು ಕೇಳಿ ಗೋಪಿಯರೆಲ್ಲರೂ ಅಲ್ಲಿಗೆ ಧಾವಿಸಿಬಂದರು. ಯಶೋದೆಯ ಬಳಿ ಯಲ್ಲಿ ಮುದ್ದುಕಂದನನ್ನು ಕಾಣದೆ ಅವರೆಲ್ಲರೂ ಪರಿತಪಿಸತೊಡಗಿದರು. ಅವರ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯತೊಡಗಿತು. ಅವರು ಬಿಕ್ಕಿ-ಬಿಕ್ಕಿ ಅಳುತ್ತಿದ್ದರು.

ತೃಣಾವರ್ತನೇನೋ ಮುದ್ದುಕೃಷ್ಣನನ್ನು ಪುಟ್ಟಮಗುವೆಂದು ಭಾವಿಸಿ ಬಿರುಗಾಳಿಯಾಗಿ ಅಂತರಿಕ್ಷಕ್ಕೆ ಹಾರಿಸಿಕೊಂಡು ಹೋದನು. ಆದರೆ ಮೇಲೆ

ಹೋಗುತ್ತಿದ್ದಂತೆ ಗೋಪಾಲಬಾಲನು ಮಿತಿಮೀರಿ ಭಾರವಾದನು. ತೃಣಾವರ್ತನಿಗೆ ಆ ಶಿಶುವನ್ನು ಮೇಲೆತ್ತಿಕೊಂಡು ಹೋಗಲು ಸಾಧ್ಯವೇ ಆಗಲಿಲ್ಲ. ಅವನ ವೇಗವು ಕುಸಿಯಿತು. ಶಿಶುವು ತನಗಿಂತಲೂ ಭಾರವಾಗಿದ್ದುದರಿಂದ ಅದೊಂದು ದೊಡ್ಡ ಗುಂಡುಕಲ್ಲೇ ಇರಬಹುದೆಂದು ರಾಕ್ಷಸನು ಭಾವಿಸಿದನು. ಅವನಿಗೆ ಆ ಶಿಶುವನ್ನು ಕೆಳಕ್ಕೆ ಹಾಕುವುದಕ್ಕೂ ಸಾಧ್ಯವಾಗಲಿಲ್ಲ. ಮುದ್ದುಕೃಷ್ಣನು ಅವನ ಕುತ್ತಿಗೆಯನ್ನು ಅಷ್ಟುಬಲವಾಗಿ ಹಿಡಿದುಬಿಟ್ಟಿದ್ದನು. ಶ್ರೀಕೃಷ್ಣನ ತೋಳುಗಳ ಬಿಗಿತದಿಂದಾಗಿ ತೃಣಾಸುರನು ನಿಶ್ಚೇಷ್ಟನಾಗಿಬಿಟ್ಟನು. ಅವನ ಕಣ್ಣುಗಳ ಗುಡ್ಡೆಗಳು ಹೊರಚಾಚಿಕೊಂಡುವು. ಅಬ್ಬರವು




ಉಡುಗಿಹೋಯಿತು. ಆತನ ಪ್ರಾಣಪಕ್ಷಿಯೂ ಹಾರಿಹೋಯಿತು. ಬಾಲಗೋಪಾಲನೊಡನೆಯೇ ಅವನ ಶರೀರವು ಗೋಕುಲದಲ್ಲಿ ಬಿದ್ದಿತು.*

---

* ತೃಣಾವರ್ತನ ಪೂರ್ವ ಕಥೆ : ಪಾಂಡ್ಯದೇಶದಲ್ಲಿ ಸಹಸ್ರಾಕ್ಷನೆಂಬ ಹೆಸರಿನ ರಾಜನಿದ್ದನು. ಅವನು ನರ್ಮದಾನದಿಯ ತೀರದಲ್ಲಿ ತನ್ನ ರಾಣಿಯರೊಡನೆ ಜಲಕ್ರೀಡೆಯಾಡುತ್ತಿದ್ದನು. ಅಲ್ಲಿಗೆ ದುರ್ವಾಸಋಷಿಗಳು ಬಂದರು. ಮಹರ್ಷಿಗಳು ಆಗಮಿಸಿದರೂ ರಾಜನು ಅವರಿಗೆ ನಮಸ್ಕರಿಸಲಿಲ್ಲ. ದುರ್ವಾಸರು ಕೋಪಗೊಂಡು ರಾಕ್ಷಸನಾಗೆಂದು ಶಾಪಕೊಟ್ಟರು. ರಾಜನು ಮಹರ್ಷಿಗಳ ಕಾಲಿಗೆ ಬಿದ್ದು ಶಾಪವಿಮೋಚನೆಗೆ ಪ್ರಾರ್ಥಿಸಲಾಗಿ ದಯಾಮಯರಾದ ದುರ್ವಾಸರು ಹೇಳಿದರು : 'ಭಗವಾನ್ ಶ್ರೀಕೃಷ್ಣಮೂರ್ತಿಯ ಶ್ರೀವಿಗ್ರಹದ ಸ್ಪರ್ಶವಾದೊಡನೆಯೇ ನೀನು ಶಾಪದಿಂದ

ಮುದ್ದುಕೃಷ್ಣನನ್ನು ಕಾಣದೆ ರೋದನಮಾಡುತ್ತಿದ್ದ ಗೋಪಿಯರೆಲ್ಲರೂ ರಾಕ್ಷಸನೊಬ್ಬನು ಆಕಾಶದಿಂದ ಬಿದ್ದುದನ್ನು ಕಂಡರು. ಅವನು ಆಕಾಶದಿಂದ ಒಂದು ದೊಡ್ಡ ಬಂಡೆಯ ಮೇಲೆ ಬಿದ್ದನು. ಕರಾಳಸ್ವರೂಪನಾಗಿದ್ದ ಆ ದೈತ್ಯನು ಬಂಡೆಯ ಮೇಲೆ ಬಿದ್ದೊಡನೆಯೇ–ಶಂಕರನ ಬಾಣಗಳ ಪ್ರಹಾರ ದಿಂದ ತ್ರಿಪುರಗಳು ಛಿನ್ನ-ಭಿನ್ನವಾಗಿ ಹೋದಂತೆ–ಅವನ ಅಂಗಾಂಗ ಗಳೆಲ್ಲವೂ ಛಿನ್ನ-ಭಿನ್ನವಾಗಿ ಹೋದುವು. ಛಿನ್ನ-ಭಿನ್ನವಾಗಿದ್ದ ಆ ಶರೀರದ ಮಧ್ಯದಲ್ಲಿ ಮುದ್ದುಕೃಷ್ಣನು ನಲಿದಾಡುತ್ತಿದ್ದುದನ್ನು ಅವನಿಗಾಗಿ ಹಂಬಲಿಸಿ ಅಳುತ್ತಿದ್ದ ಗೋಪಿಯರು ನೋಡಿದರು. ಅವರು ಅವರ ಕಣ್ಣುಗಳನ್ನೇ ನಂಬದಾದರು. ನಿಶ್ಚಯವಾಗಿಯೂ ಮುದ್ದುಕೃಷ್ಣನು ರಾಕ್ಷಸನ ಮೇಲೆಯೇ ಇದ್ದನು. ಇದನ್ನು ಕಂಡು ಅವರು ಅಚ್ಚರಿಗೊಂಡರು. ಬೇಗಹೋಗಿ ಅವನನ್ನೆತ್ತಿಕೊಂಡುಬಂದು ರೋದನಮಾಡುತ್ತಿದ್ದ ತಾಯಿಗೊಪ್ಪಿಸಿದರು. ರಾಕ್ಷಸನೇ ಒಯ್ದಿದ್ದರೂ ಮುದ್ದುಕೃಷ್ಣನು ಸ್ವಸ್ತಿಮಂತನಾಗಿ, ಕ್ಷೇಮವಾಗಿ, ಯಾವವಿಧವಾದ ಗಾಯಗಳೂ ಇಲ್ಲದೆ ಹಿಂದಿರುಗಿಬಂದನು. ಆತನು ಮೃತ್ಯುವಿನ ದವಡೆಯಿಂದ ಬಿಡಿಸಿಕೊಂಡು ಬಂದನೆಂದೇ ಎಲ್ಲರೂ ಭಾವಿಸಿದರು. ಅಂತಹ ಜಗದಾನಂದಕಂದನನ್ನು ಪುನಃ ಪಡೆದುಕೊಂಡ ಯಶೋದೆಯೇ ಮೊದಲಾದ ಗೋಪಿಯರೂ ನಂದನೇ ಮೊದಲಾದ ಗೋಪರೂ ಆನಂದಸಾಗರದಲ್ಲಿ ಮುಳುಗಿಹೋದರು. ಪರಮಾದ್ಭುತನಾದ ಮುದ್ದುಕೃಷ್ಣನ ಲೀಲೆಯನ್ನು ಕಂಡು ಗೋಪ-ಗೋಪಿಯರು ತಮ್ಮ- ತಮ್ಮಲ್ಲಿಯೇ ಮಾತನಾಡಿಕೊಂಡರು : "ವಯಸ್ಯರೇ! ಇದೊಂದು ಅದ್ಭುತ ವಾದ ಘಟನೆಯಾಗಿದೆ. ಈ ನಮ್ಮ ಕಂದನು ರಾಕ್ಷಸನಿಗೆ ಸಿಕ್ಕಿ ಮೃತ್ಯುವಶ ನಾದನೆಂದೇ ಭಾವಿಸಲ್ಪಟ್ಟಿದ್ದನು. ಆದರೆ ಸೌಭಾಗ್ಯವಶದಿಂದ ನಮ್ಮ ಕಂದನು ಬದುಕಿಬಂದನು. ರಾಕ್ಷಸನಾದರೋ ತನ್ನ ಪಾಪಕ್ಕೆ ಬಲಿಯಾದನು. **ಸಾಧುಃ ಸಮತ್ವೇನ ಭಯಾದ್ವಿಮುಚ್ಯತೇ ॥** ಸಾಧುಪುರುಷನು ಸಮತ್ವಬುದ್ಧಿ ಯುಳ್ಳವನಾಗಿರುವುದರಿಂದ ಭಯದಿಂದ ಬಿಡುಗಡೆಹೊಂದುತ್ತಾನೆ." ಮುದ್ದುಕೃಷ್ಣನ ವಿಷಯವಾಗಿ ಗೋಪರಿಗೆ ಹೆಚ್ಚು ತಿಳಿದಿದ್ದರೂ ಆತನು

---

ವಿಮುಕ್ತನಾಗುವೆ.' ಅಂತೆಯೇ ತೃಣಾವರ್ತನೆಂಬ ರಾಕ್ಷಸನಾಗಿ ಹುಟ್ಟಿದ್ದ ರಾಜನು ಶ್ರೀಕೃಷ್ಣನ ಸ್ಪರ್ಶವಾದೊಡನೆಯೇ ಮುಕ್ತಿಯನ್ನು ಹೊಂದಿದನು.

ಸಮತ್ವಬುದ್ಧಿಯುಳ್ಳ ಸತ್ಪುರುಷನೆಂದು ಅವರು ನಿಶ್ಚಯಿಸಿಬಿಟ್ಟರು. ಅವರ ಮಾತನ್ನು ಪುಷ್ಟೀಕರಿಸುತ್ತಾ ಮತ್ತೆ ಕೆಲವರು ಹೇಳಿದರು :

"ನಾವು ಹಿಂದಿನ ಜನ್ಮದಲ್ಲಿ ಭಗವದಾರಾಧನೆಯನ್ನು ಚೆನ್ನಾಗಿ ಮಾಡಿದ್ದಿರಬೇಕು. ಬಾವಿ, ಕೊಳ, ಅನ್ನಸತ್ರ, ಗುಡಿ ಇತ್ಯಾದಿಗಳನ್ನಾದರೂ ಕಟ್ಟಿಸಿದ್ದಿರಬೇಕು. ಯಜ್ಞಗಳನ್ನು ಮಾಡಿ ಯಥೇಚ್ಛವಾಗಿ ದಕ್ಷಿಣೆಗಳನ್ನು ಕೊಟ್ಟಿರಬೇಕು. ಪ್ರಾಣಿಗಳ ವಿಷಯದಲ್ಲಿ ಅನುಕಂಪವನ್ನು ತೋರಿಸಿರಬೇಕು–ಇವೇ ಮೊದಲಾದ ಸತ್ಕರ್ಮಗಳ ಫಲದಿಂದಲೇ ರಾಕ್ಷಸನ ವಶನಾಗಿ ಸತ್ತೇಹೋಗಿದ್ದ ನಮ್ಮ ಕಂದನು ಬಂಧುಜನರಿಗೆ ಸಂತೋಷವನ್ನುಂಟು ಮಾಡುವ ಸಲುವಾಗಿ ಹಿಂದಿರುಗಿ ಬಂದಿರುತ್ತಾನೆ. ನಿಶ್ಚಯವಾಗಿಯೂ ಇದು ಪರಮಸೌಭಾಗ್ಯದ ವಿಷಯವಾಗಿದೆ."

ನಂದಗೋಪನು ಆ ದೊಡ್ಡವನದಲ್ಲಿ ಪದೇ ಪದೇ ನಡೆಯುತ್ತಿರುವ ಅದ್ಭುತವಾದ ಘಟನೆಗಳನ್ನು ಸ್ಮರಿಸಿ ಆಶ್ಚರ್ಯಚಕಿತನಾಗಿ ವಸುದೇವನು ಹೇಳಿದ್ದ ಮಾತುಗಳನ್ನು ಮೆಚ್ಚಿಕೊಂಡನು.

ಒಮ್ಮೆ ಯಶೋದೆಯು ಮುದ್ದುಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ವಾತ್ಸಲ್ಯಾತಿಶಯದ ಕಾರಣದಿಂದಾಗಿ ತಾನೇ ತಾನಾಗಿ ಸ್ರವಿಸುತ್ತಿದ್ದ ಹಾಲನ್ನು ಕಂದನಿಗೆ ಕುಡಿಸುತ್ತಿದ್ದಳು. ಬಳಿಕ ಮೊಲೆಯುಂಡು ಕಿಲಕಿಲನೆ ನಗುತ್ತಿದ್ದ ಕಂದನ ಮುಖಕ್ಕೆ ಮುದ್ದಿಟ್ಟಳು. ಹಾಗೆಯೇ ಎರಡು ಕೆನ್ನೆಗಳಿಗೂ ಮುದ್ದಿಡುತ್ತಿದ್ದಾಗ ಆಕಳಿಸಿದ ಕಂದನ ಬಾಯಲ್ಲಿ ಯಶೋದೆಯು ಜಗತ್ತನ್ನೇ ಕಂಡಳು.



ಖಂ ರೋದಸೀ ಜ್ಯೋತಿರನೀಕಮಾಶಾಃ
ಸೂರ್ಯೇನ್ದುವಹ್ನಿಶ್ವಸನಾಮ್ಬುಧೀಂಶ್ಚ ।
ದ್ವೀಪಾನ್ನಗಾಂಸ್ತದ್ದುಹಿತ್ರೀರ್ವನಾನಿ
ಭೂತಾನಿ ಯಾನಿ ಸ್ಥಿರಜಙ್ಗಮಾನಿ ॥೩೬॥

ಆ ಪುಟ್ಟಬಾಯಲ್ಲಿ ಯಶೋದೆಯು ಆಕಾಶ, ಅಂತರಿಕ್ಷ, ಜ್ಯೋತಿರ್ಮಂಡಲ, ದಿಕ್ಕುಗಳು, ಸೂರ್ಯ, ಚಂದ್ರ, ಅಗ್ನಿ, ವಾಯು, ಸಮುದ್ರಗಳು, ದ್ವೀಪಗಳು, ಪರ್ವತಗಳು, ನದಿಗಳು, ವನಗಳು, ಮತ್ತು ಸಮಸ್ತ ಚರಾಚರಪ್ರಾಣಿಗಳು–ಇವೆಲ್ಲವನ್ನೂ ನೋಡಿದಳು.

ಪರೀಕ್ಷಿತನೇ! ತನ್ನ ಕಂದನ ಮುಖದಲ್ಲಿ ಅಷ್ಟು ಬೇಗ ಸಮಸ್ತ ಜಗತ್ತನ್ನೂ ನೋಡಿದ ಹರಿಣಾಕ್ಷಿಯಾದ ಯಶೋದೆಯು ನಡುಗಿದವಳಾಗಿ ತನ್ನ ವಿಶಾಲವಾದ ಕಣ್ಣುಗಳನ್ನು ಒಡನೆಯೇ ಮುಚ್ಚಿಕೊಂಡುಬಿಟ್ಟಳು. ಪುನಃ ಕಣ್ಣುಗಳನ್ನು ಬಿಟ್ಟಾಗ ಕಂದನ ಬಾಯಲ್ಲಿ ಜಗತ್ತು ಕಾಣಿಸಲಿಲ್ಲ. ಈ ಹಿಂದೆ ನೋಡಿದುದನ್ನು ಸ್ಮರಿಸಿಕೊಂಡು ಆಕೆಯು ಅತ್ಯಂತ ವಿಸ್ಮಿತಳಾದಳು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೭ನೆಯ ಅಧ್ಯಾಯವು ಮುಗಿಯಿತು.

–––

* ಒಬ್ಬ ಭಾವುಕರು ಈ ಪ್ರಕರಣವನ್ನು ಹೀಗೆ ವರ್ಣಿಸಿದ್ದಾರೆ : ವಾತ್ಸಲ್ಯಮಯಿ ಯಾದ ಯಶೋದೆಯು ತನ್ನ ಕಂದನ ಬಾಯಲ್ಲಿ ಜಗತ್ತನ್ನು ಕಂಡು ಭಯಗೊಂಡಳು. ಆದರೆ ವಾತ್ಸಲ್ಯ ಮತ್ತು ಪ್ರೇಮರಸದಿಂದ ತುಂಬಿದ ಹೃದಯವಿದ್ದುದರಿಂದ ಯಶೋದೆಗೆ ಅದನ್ನು ನಂಬಲು ಸಾಧ್ಯವಾಗಲೇ ಇಲ್ಲ. ಆದರೆ ಕಂದನ ಬಾಯಲ್ಲಿ ಜಗತ್ತು ಹೇಗೆ ಕಾಣಿಸಿಕೊಂಡಿತೆಂದು ವಿಚಾರಮಾಡಿದಳು. ತನ್ನ ಕಣ್ಣಿನ ದೋಷ ದಿಂದಲೇ ಹಾಗೆ ಕಂಡಿರಬಹುದೆಂದು ಭಾವಿಸಿ ತನ್ನೆರಡು ಕಣ್ಣುಗಳನ್ನೂ ಮುಚ್ಚಿ ಕೊಂಡುಬಿಟ್ಟಳು.

ದಶಮಸ್ಕಂಧ ೮ನೆಯ ಅಧ್ಯಾಯ

## ನಾಮಕರಣಸಂಸ್ಕಾರ-ಬಾಲಲೀಲೆಗಳು

ಶ್ರೀಶುಕಮುನಿಗಳು ಹೇಳುತ್ತಾರೆ :

**ಗರ್ಗಃ ಪುರೋಹಿತೋ ರಾಜನ್ಯದೂನಾಂ ಸುಮಹಾತಪಾಃ ।**
**ವ್ರಜಂ ಜಗಾಮ ನನ್ದಸ್ಯ ವಸುದೇವಪ್ರಚೋದಿತಃ ॥೧॥**

ಪರೀಕ್ಷಿತಮಹಾರಾಜ! ಗರ್ಗರೆಂಬುವವರು ಯದುವಂಶಕ್ಕೆ ಕುಲ ಪುರೋಹಿತರಾಗಿದ್ದರು. ಅವರು ಮಹಾತಪಸ್ವಿಗಳು. ವಸುದೇವನ ಪ್ರೇರಣೆ ಯಿಂದ ಅವರೊಮ್ಮೆ ನಂದಗೋಕುಲಕ್ಕೆ ಆಗಮಿಸಿದರು.

ಗರ್ಗರನ್ನು ನೋಡಿದೊಡನೆಯೇ ನಂದಗೋಪನಿಗೆ ಮಹಾನಂದ ವಾಯಿತು. ಆತನು ಕೈಜೋಡಿಸಿಕೊಂಡು ಮೇಲೆದ್ದು ನಿಂತನು. ಅವರ ಚರಣಾರವಿಂದಗಳಿಗೆ ನಮಸ್ಕರಿಸಿದನು. ಗರ್ಗರು ಸಾಕ್ಷಾತ್ ಭಗವತ್ಸ್ವ ರೂಪರೇ ಎಂದು ಭಾವಿಸಿ ಅವರನ್ನು ಅರ್ಘ್ಯ-ಪಾದ್ಯಾದಿಗಳಿಂದ ಯಥೋಚಿತವಾಗಿ ಸತ್ಕರಿಸಿದನು. ಸತ್ಕಾರಗಳೆಲ್ಲವೂ ಮುಗಿದನಂತರ ಗರ್ಗರು ಸುಖಾಸೀನರಾದರು. ಆಗ ನಂದಗೋಪನು ಕೈಮುಗಿದುಕೊಂಡು ಮಧುರವಾದ ವಾಣಿಯಿಂದ ಗರ್ಗರಲ್ಲಿ ಬಿನ್ನವಿಸಿಕೊಂಡನು :

"ಬ್ರಾಹ್ಮಣೋತ್ತಮರೇ! ನೀವು ಪೂರ್ಣಕಾಮರಾಗಿರುವಿರಿ. ತಮಗೆ ಅಪೇಕ್ಷಿತವಾದುದು ಯಾವುದೂ ಇರುವುದಿಲ್ಲ. ಆದರೂ ತಮಗೆ ಯಾವ ವಿಧವಾದ ಸೇವೆ ಮಾಡಬೇಕೆಂಬುದನ್ನು ತಿಳಿಯಬಯಸುತ್ತೇನೆ.

**ಮಹದ್ವಿಚಲನಂ ನೃಣಾಂ ಗೃಹಿಣಾಂ ದೀನಚೇತಸಾಮ್ ।**
**ನಿಃಶ್ರೇಯಸಾಯ ಭಗವನ್ಕಲ್ಪತೇ ನಾನ್ಯಥಾ ಕ್ವಚಿತ್ ॥೪॥**

ಮಹಾತ್ಮರ ಆಗಮನವು ದೀನಮನಸ್ಕರಾದ, ಗೃಹಸ್ಥರಾದ ಮನುಷ್ಯರ ಶ್ರೇಯಸ್ಸಿಗೋಸ್ಕರವೇ ಆಗಿದೆ. ಬೇರೆ ಯಾವ ಕಾರಣದಿಂದಲೂ ಮಹಾತ್ಮರಾದವರು ಆಗಮಿಸುವುದಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಅವರು ಗೃಹಸ್ಥರ ಮನೆಗೆ ಬರುವುದಿಲ್ಲ. ಗೃಹಸ್ಥರನ್ನು ಅನುಗ್ರಹಿಸುವುದ ಕ್ಕಾಗಿಯೇ ಬರುತ್ತಾರೆ. ಯಾವುದು ಇಂದ್ರಿಯಗಳಿಗೆ ಅಗೋಚರವಾದ

ವಿಷಯವನ್ನು ತಿಳಿಸುವುದೋ, ಯಾವುದರಿಂದ ಮನುಷ್ಯನು ತನ್ನ ಹಿಂದಿನ ಮತ್ತು ಮುಂದಿನ ಜನ್ಮಗಳಲ್ಲಿ ಏನಾಗಿತ್ತೆಂಬುದನ್ನೂ ಮತ್ತು ಏನಾಗುವುದೆಂಬುದನ್ನೂ ತಿಳಿಯುವನೋ ಅಂತಹ ಜ್ಯೋತಿಃಶಾಸ್ತ್ರವನ್ನು ತಾವು ರಚಿಸಿರುವಿರಿ.*

ಮಹಾನುಭಾವರೇ! ನೀವು ಬ್ರಹ್ಮಜ್ಞರಲ್ಲಿ ಶ್ರೇಷ್ಠರಾಗಿರುವಿರಿ. ಆದ್ದರಿಂದ ನನ್ನ ಇಬ್ಬರು ಬಾಲಕರಿಗೂ ನೀವೇ ನಾಮಕರಣಾದಿಸಂಸ್ಕಾರಗಳನ್ನು ಮಾಡಿರಿ. **ನೃಣಾಂ ಜನ್ಮನಾ ಬ್ರಾಹ್ಮಣೋ ಗುರುಃ ।** ಮನುಷ್ಯಮಾತ್ರದವರಿಗೆ ಬ್ರಾಹ್ಮಣನು ಹುಟ್ಟಿನಿಂದಲೇ ಗುರುವಾಗಿರುತ್ತಾನೆ."

ಗರ್ಗರು ಹೇಳುತ್ತಾರೆ :

"ನಂದಗೋಪ! ಯದುವಂಶೀಯರಿಗೆ ಆಚಾರ್ಯನೆಂದು ನಾನು ಈ ಜಗತ್ತಿನಲ್ಲಿ ಪ್ರಸಿದ್ಧನಾಗಿದ್ದೇನೆ. ನೀನು ಹೇಳಿದಂತೆ ನಾನೇನಾದರೂ ನಿನ್ನ ಮಗುವಿಗೆ ನಾಮಕರಣಾದಿಸಂಸ್ಕಾರಗಳನ್ನು ಮಾಡಿದರೆ ಜನಗಳು ನಿನ್ನ ಮಗನನ್ನು ದೇವಕೀಪುತ್ರನೆಂದೇ ಭಾವಿಸುತ್ತಾರೆ. ಕೆಟ್ಟಬುದ್ಧಿಯವನಾದ ಕಂಸನು ನಿನಗೂ ಮತ್ತು ವಸುದೇವನಿಗೂ ಗಾಢವಾದ ಸ್ನೇಹವಿರುವುದನ್ನು ತಿಳಿದಿರುತ್ತಾನೆ. ದೇವಕಿಯ ಮಗಳೆನಿಸಿದ್ದ ದೇವಿಯಿಂದ–'ನಿನ್ನನ್ನು ಸಂಹರಿಸುವವನು ಬೇರೊಂದೆಡೆಯಲ್ಲಿ ಬೆಳೆಯುತ್ತಿದ್ದಾನೆ'–ಎಂಬ ಸಮಾಚಾರವನ್ನು ಯಾವಾಗ ಕೇಳಿದನೋ ಅಂದಿನಿಂದಲೂ ಕಂಸನು ದೇವಕಿಯ ಎಂಟನೆಯ ಗರ್ಭದಲ್ಲಿ ಹೆಣ್ಣುಶಿಶುವು ಹುಟ್ಟಿರಲಾರದೆಂದೇ ತರ್ಕಿಸುತ್ತಿದ್ದಾನೆ. ಯದುವಂಶಿಗಳಿಗೆ ಪುರೋಹಿತನಾದ ನಾನೇನಾದರೂ ಈ ಸಂದರ್ಭದಲ್ಲಿ ನಿನ್ನ ಮಗನಿಗೆ ನಾಮಕರಣಸಂಸ್ಕಾರಾದಿಗಳನ್ನು ಮಾಡಿದರೆ ಕಂಸನು ನಿನ್ನ ಮಗನನ್ನು ವಸುದೇವನ ಮಗನೆಂದೇ ನಿರ್ಧರಿಸಿ ಕೊಲ್ಲಲೂಬಹುದು. ಆಗ ಬಹಳ ಅನ್ಯಾಯವಾಗಿ ಬಿಡುತ್ತದೆ."

---

* **ಯದುಪಚಿತಮನ್ಯಜನ್ಮನಿ ಶುಭಾಶುಭಂ ತಸ್ಯ ಕರ್ಮಣಃ ಪ್ರಾಪ್ತಿಮ್ ।**
**ವ್ಯಞ್ಜಯತಿ ಶಾಸ್ತ್ರಮೇತತ್ತಮಸಿ ದ್ರವ್ಯಾಣಿ ದೀಪ ಇವ ॥**


ಈ ಜ್ಯೋತಿಃಶಾಸ್ತ್ರವು ಕತ್ತಲೆಯಲ್ಲಿರುವ ವಸ್ತುಗಳನ್ನು ಬೆಳಗಿಸುವ ದೀಪದಂತೆ ಪ್ರಾಣಿಗಳ ಜನ್ಮಾಂತರದ ಶುಭಾಶುಭಕರ್ಮಗಳನ್ನೂ ಅವುಗಳ ಫಲವನ್ನೂ ವ್ಯಕ್ತಪಡಿಸುತ್ತದೆ.
(ಭಾವಾರ್ಥದೀಪಿಕಾ)

ನಂದಗೋಪನು ಹೇಳುತ್ತಾನೆ :

“ಆಚಾರ್ಯರೇ! ನೀವು ಏಕಾಂತದಲ್ಲಿ ಗೋಶಾಲೆಯಲ್ಲಿ ಸ್ವಸ್ತಿ ವಾಚನವನ್ನು ಮಾಡಿ ಆ ಬಾಲಕನಿಗೆ ದ್ವಿಜಾತಿಗೆ ಉಚಿತವಾದ ನಾಮಕರಣಾದಿಸಂಸ್ಕಾರಗಳನ್ನು ಮಾಡಿರಿ. ಸಮಾಚಾರವು ಬೇರೆಯವರಿಗೆ ತಿಳಿಯುವುದಂತಿರಲಿ ; ನನ್ನ ಜ್ಞಾತಿಬಂಧುಗಳಿಗೂ ತಿಳಿಯದಂತೆ ನಾನು ವ್ಯವಸ್ಥೆಮಾಡುತ್ತೇನೆ.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಗರ್ಗಮುನಿಗಳಿಗೂ ಬಾಲಕರಿಗೆ ದ್ವಿಜೋಚಿತ ವಾದ ನಾಮಕರಣಾದಿಸಂಸ್ಕಾರಗಳನ್ನು ಮಾಡುವ ಆಶಯವೇ ಇದ್ದಿತು. ನಂದಗೋಪನೂ ಒತ್ತಾಯಿಸಿ ಪ್ರಾರ್ಥಿಸಿದನಂತರ ಏಕಾಂತದಲ್ಲಿ ಅತಿರಹಸ್ಯ ವಾಗಿ ಇಬ್ಬರು ಮಕ್ಕಳಿಗೂ ಅವರು ನಾಮಕರಣಾದಿಸಂಸ್ಕಾರಗಳನ್ನು ಮಾಡಿ ನಂದನಿಗೂ ಹೇಳುತ್ತಾರೆ :




ಅಯಂ ಹಿ ರೋಹಿಣೀಪುತ್ರೋ ರಮಯನ್ಸುಹೃದೋ ಗುಣೈಃ ।
ಆಖ್ಯಾಸ್ಯತೇ ರಾಮ ಇತಿ ಬಲಾಧಿಕ್ಯಾದ್ಬಲಂ ವಿದುಃ ।
ಯದೂನಾಮಪೃಥಗ್ಭಾವಾತ್ಸಂಕರ್ಷಣಮುಶನ್ತ್ಯುತ ॥೧೨॥

“ನಂದಗೋಪ! ಇವನು ರೋಹಿಣಿಯ ಮಗನು. ಆದುದರಿಂದ ಇವನ ಹೆಸರು ರೌಹಿಣೇಯ. ಇವನು ಬಂಧುಗಳಿಗೂ ಮತ್ತು ಸುಹೃದರಿಗೂ

ತನ್ನ ಒಳ್ಳೆಯ ಗುಣಗಳಿಂದ ಆನಂದವನ್ನುಂಟುಮಾಡುತ್ತಾನೆ. ಆದುದರಿಂದ ರಾಮನೆಂದೂ ಹೆಸರು. ಇವನಲ್ಲಿ ಅತ್ಯಧಿಕವಾದ ಬಲವಿರುವುದರಿಂದ ಬಲಪೂರ್ವವಾದ ರಾಮನಾಗುತ್ತಾನೆ. ಬಲರಾಮನೆಂದು ಕರೆಯಲ್ಪಡುತ್ತಾನೆ. ಯಾದವರಿಗೂ ಮತ್ತು ನಿಮಗೂ ಯಾವ ವಿಧವಾದ ಭೇದಭಾವವನ್ನೂ ಕಲ್ಪಿಸದೇ ಇರುವುದರಿಂದಲೂ ಜಗಳಗಂಟಕರಾದ ಇಬ್ಬರನ್ನೂ ಒಟ್ಟಾಗಿ ಸೇರಿಸಿ ಶಾಂತಿಯನ್ನುಂಟುಮಾಡುವುದರಿಂದ ಇವನನ್ನು ಸಂಕರ್ಷಣನೆಂದೂ ಕರೆಯುತ್ತಾರೆ.

**ಆಸನ್ವರ್ಣಾಸ್ತ್ರಯೋ ಹ್ಯಸ್ಯ ಗೃಹ್ಣತೋಽನುಯುಗಂ ತನೂಃ ।**
**ಶುಕ್ಲೋ ರಕ್ತಸ್ತಥಾ ಪೀತಃ ಇದಾನೀಂ ಕೃಷ್ಣತಾಂ ಗತಃ ॥೧೩॥**

ಶ್ಯಾಮಲವರ್ಣನಾಗಿರುವ ನಿನ್ನ ಈ ಬಾಲಕನು ಒಂದೊಂದು ಯುಗದಲ್ಲಿಯೂ ಒಂದೊಂದು ಬಣ್ಣದಿಂದ ಹುಟ್ಟುತ್ತಾನೆ. ಕೃತಯುಗದಲ್ಲಿ ಶ್ವೇತವರ್ಣದವನಾಗಿಯೂ, ತ್ರೇತಾಯುಗದಲ್ಲಿ ರಕ್ತವರ್ಣದವನಾಗಿಯೂ, ದ್ವಾಪರಯುಗದಲ್ಲಿ ಪೀತವರ್ಣದವನಾಗಿಯೂ, ಈಗ ದ್ವಾಪರಯುಗದ ಕಡೆಯಲ್ಲಿ ಕೃಷ್ಣವರ್ಣದವನಾಗಿಯೂ ಹುಟ್ಟಿದ್ದಾನೆ. ಆದುದರಿಂದ ಶ್ಯಾಮಲವರ್ಣದವನಾದ ಈ ಬಾಲಕನಿಗೆ ಕೃಷ್ಣನೆಂದೇ ಹೆಸರು.

**ಪ್ರಾಗಯಂ ವಸುದೇವಸ್ಯ ಕ್ವಚಿಜ್ಜಾತಸ್ತವಾತ್ಮಜಃ ।**
**ವಾಸುದೇವ ಇತಿ ಶ್ರೀಮಾನಭಿಜ್ಞಾಃ ಸಮ್ಪ್ರಚಕ್ಷತೇ ॥೧೪॥**

ನಂದಗೋಪ! ಈ ನಿನ್ನ ಮಗನು ಹಿಂದೆ ವಸುದೇವನ ಮಗ ನಾಗಿಯೂ ಹುಟ್ಟಿದ್ದನು. ಆದುದರಿಂದಲೇ ಈ ರಹಸ್ಯವನ್ನು ತಿಳಿದಿರುವ ಜನರು ಈ ನಿನ್ನ ಮಗನನ್ನು–'ಶ್ರೀಮಾನ್ ವಾಸುದೇವ'–ಎಂದೂ ಕರೆಯುತ್ತಾರೆ.

**ಬಹೂನಿ ಸನ್ತಿ ನಾಮಾನಿ ರೂಪಾಣಿ ಚ ಸುತಸ್ಯ ತೇ ।**
**ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ ॥೧೫॥**

ನಿನ್ನ ಮಗನಿಗೆ ಹಲವಾರು ಇತರ ನಾಮಧೇಯಗಳೂ ಇವೆ. ಇವನ ಕರ್ಮಗಳಿಗೆ ಅನುಸಾರವಾಗಿ ಹಲವಾರು ನಾಮಗಳಿಂದ ಇವನನ್ನು

ಕರೆಯಬಹುದು. ಆ ಎಲ್ಲ ನಾಮಧೇಯಗಳನ್ನೂ ನಾನು ತಿಳಿದಿರುತ್ತೇನೆ. ಪ್ರಪಂಚದ ಸಾಮಾನ್ಯ ಜನರಿಗೆ ಆ ಹೆಸರುಗಳು ತಿಳಿಯವು.

**ಏಷ ವಃ ಶ್ರೇಯ ಆಧಾಸ್ಯದ್ಗೋಪಗೋಕುಲನನ್ದನಃ ।**
**ಅನೇನ ಸರ್ವದುರ್ಗಾಣಿ ಯೂಯಮಞ್ಜಸ್ತರಿಷ್ಯಥ ॥೧೬॥**

ಸಮಸ್ತಗೋಪಾಲಕರಿಗೂ, ಗೋವುಗಳಿಗೂ ಆನಂದವನ್ನುಂಟು ಮಾಡುವ ಈ ನಿನ್ನ ಮಗನು ನಿಮಗೆ ಪರಮಕಲ್ಯಾಣಕರನಾಗುತ್ತಾನೆ. ಇವನ ಸಹಾಯದಿಂದ ನೀವು ದೊಡ್ಡ-ದೊಡ್ಡ ವಿಪತ್ತುಗಳಿಂದಲೂ ಬಹಳ ಸುಲಭವಾಗಿ ಪಾರಾಗುವಿರಿ.

ವ್ರಜರಾಜನೇ! ಹಿಂದೊಮ್ಮೆ ಭೂಮಂಡಲವು ಅರಾಜಕವಾಗಿತ್ತು. ದರೋಡೆಕೋರರ ಉಪಟಳವು ಹೆಚ್ಚಾಗಿದ್ದಿತು. ದರೋಡೆಕೋರರು ಸತ್ಪುರುಷರನ್ನು ಬಹಳವಾಗಿ ಪೀಡಿಸುತ್ತಿದ್ದರು. ಆ ಸಮಯದಲ್ಲಿ ಸಜ್ಜನರು ನಿನ್ನ ಈ ಮಗನ ಸಹಾಯವನ್ನು ಪಡೆದು ದರೋಡೆಕೋರರನ್ನು ಹೇಳ-ಹೆಸರಿಲ್ಲದಂತೆ ಧ್ವಂಸಮಾಡಿಬಿಟ್ಟರು.

**ಯ ಏತಸ್ಮಿನ್ಮಹಾಭಾಗಾಃ ಪ್ರೀತಿಂ ಕುರ್ವನ್ತಿ ಮಾನವಾಃ ।**
**ನಾರಯೋಽಭಿಭವನ್ತ್ಯೇತಾನ್ವಿಷ್ಣುಪಕ್ಷಾನಿವಾಸುರಾಃ ॥೧೮॥**

ಯಾವ ಮಹಾಭಾಗ್ಯಶಾಲಿಗಳಾದ ಮನುಷ್ಯರು ಈ ಮುದ್ದುಕೃಷ್ಣನನ್ನು ಪ್ರೀತಿಸುವರೋ ಅಂತಹವರನ್ನು ಶತ್ರುಗಳೆಂದಿಗೂ ಜಯಿಸಲಾರರು.

ವಿಷ್ಣುವಿನ ಪಕ್ಷದಲ್ಲಿರುವವರನ್ನು ಅಸುರರು ಬಾಧೆಪಡಿಸಲಾಗದಂತೆ ಶ್ರೀಕೃಷ್ಣನ ಆಶ್ರಯವನ್ನು ಪಡೆದವರನ್ನು ಎಂತಹ ಶತ್ರುಗಳೂ ಬಾಧೆಪಡಿಸಲಾರರು.

**ತಸ್ಮಾನ್ನನ್ದಾತ್ಮಜೋಽಯಂ ತೇ ನಾರಾಯಣಸಮೋ ಗುಣೈಃ ।**
**ಶ್ರಿಯಾ ಕೀರ್ತ್ಯಾನುಭಾವೇನ ಗೋಪಾಯಸ್ವ ಸಮಾಹಿತಃ ॥೧೯॥**

ನಂದಗೋಪ! ಈ ನಿನ್ನ ಮಗನು, ಗುಣ, ಸಂಪತ್ತು, ಸೌಂದರ್ಯ, ಕೀರ್ತಿ, ಪ್ರಭಾವ–ಈ ಎಲ್ಲ ದೃಷ್ಟಿಗಳಿಂದಲೂ ಪರಾತ್ಪರನಾದ ಶ್ರೀಮನ್ನಾರಾಯಣನಿಗೆ ಅನುರೂಪನಾಗಿರುತ್ತಾನೆ. ನೀನು ಅತ್ಯಂತ ಜಾಗರೂಕನಾಗಿದ್ದುಕೊಂಡು ಇವನನ್ನು ರಕ್ಷಿಸು."

ಪರೀಕ್ಷಿತನೇ! ಹೀಗೆ ಗರ್ಗರು–'ಇವನೇ ಭಗವಂತ'–ಎಂದು ಮಾತ್ರ ಹೇಳದೆ ಉಳಿದೆಲ್ಲ ವಿಷಯಗಳನ್ನೂ ಹೇಳಿ ನಂದನ ಅನುಮತಿಯನ್ನು ಪಡೆದು ತಮ್ಮ ಆಶ್ರಮಕ್ಕೆ ತೆರಳಿದರು. ಗರ್ಗರ ಮಾತನ್ನು ಕೇಳಿ ನಂದಗೋಪನು ಆನಂದಭರಿತನಾದನು. ತನ್ನ ಆಸೆಗಳೆಲ್ಲವೂ ತೀರಿದು ವೆಂದೂ ಕೃತಕೃತ್ಯನಾದೆನೆಂದೂ ಆತನು ಭಾವಿಸಿಕೊಂಡನು.

ಮಹಾರಾಜ! ಕೆಲವು ದಿವಸಗಳಲ್ಲಿಯೇ ರಾಮ ಮತ್ತು ಶ್ಯಾಮರು ಅಂಬೆಗಾಲಿಟ್ಟುಕೊಂಡು ಗೋಕುಲದಲ್ಲೆಲ್ಲಾ ಆಟವಾಡಲು ತೊಡಗಿದರು. ರಾಮ-ಶ್ಯಾಮರಿಗೆ ಅವರ ತಾಯಿಯರು ಕಾಲ್ಬಳೆಗಳನ್ನೂ, ಗೆಜ್ಜೆಗಳನ್ನೂ ತೊಡಿಸಿ ಅಲಂಕರಿಸಿದರು. ಗೋಕುಲದ ಧೂಳಿನ ಬೀದಿಯಲ್ಲಿ ಮಕ್ಕಳಿಬ್ಬರೂ ಅಂಬೆಗಾಲಿಟ್ಟುಕೊಂಡು ಹೋಗುತ್ತಿದ್ದಾಗ ಝಣ-ಝಣ ಶಬ್ದವು ಕೇಳಿಬರುತ್ತಿದ್ದಿತು. ಇದನ್ನು ಕೇಳಿದೊಡನೆ ಬಾಲಕರಿಬ್ಬರೂ ಕಿಲ-ಕಿಲನೆ ನಗುವರು. ಗೆಜ್ಜೆಯ ಶಬ್ದವನ್ನು ಇನ್ನೂ ಕೇಳಲು ಬೇಗ-ಬೇಗ ಮುನ್ನಡೆಯುತ್ತಿದ್ದರು. ಆ ಗೆಜ್ಜೆಯ ಶಬ್ದವು ಮಕ್ಕಳಿಗೆ ಆನಂದವನ್ನುಂಟು ಮಾಡುತ್ತಿದ್ದುದಲ್ಲದೆ ಗೋಪಾಲರಿಗೆ ಅದನ್ನು ಕೇಳಿ ಆನಂದವಾಗುತ್ತಿದ್ದಿತು. ಗೋಪಾಲ




ರನ್ನೇ ಅನುಸರಿಸಿ ಮಕ್ಕಳು ಅಂಬೆಗಾಲುಗಳನ್ನಿಡುತ್ತ ಸ್ವಲ್ಪ ದೂರದವರೆಗೆ ಹೋಗುತ್ತಿದ್ದರು. ಮರುಕ್ಷಣದಲ್ಲಿಯೇ ಭಯಗೊಂಡವರಂತೆ ರೋಹಿಣೀ-ಯಶೋದೆಯರ ಬಳಿಗೆ ಅಂಬೆಗಾಲಿಟ್ಟುಕೊಂಡು ಬರುವರು. ಹಾಗೆ ಬಂದ

ಮಕ್ಕಳನ್ನು ನೋಡಿದೊಡನೆಯೇ ಪ್ರೇಮಾಧಿಕ್ಯದಿಂದಾಗಿ ಯಶೋದಾ-ರೋಹಿಣಿಯರ ಸ್ತನಗಳಿಂದ ಹಾಲು ತಾನೇ ತಾನಾಗಿ ಒಸರುತ್ತಿದ್ದಿತು. ಧೂಳಿನಿಂದಲೂ, ಅಂಗರಾಗಗಳಿಂದಲೂ ಸಮಲಂಕೃತರಾದ ಮಕ್ಕಳನ್ನು ಬಾಚಿ ತಬ್ಬಿಕೊಂಡು ಮುದ್ದಿಡುತ್ತಾ ಕಂದಗಳಿಗೆ ತಾಯಂದಿರು ಮೊಲೆ ಹಾಲನ್ನು ಕುಡಿಸುತ್ತಿದ್ದರು. ಹಾಗೆ ಹಾಲುಕುಡಿಯುತ್ತಿದ್ದಾಗಲೇ ಮಧ್ಯ-ಮಧ್ಯದಲ್ಲಿ ಆ ಕಂದಗಳು ಹಾಲುಕುಡಿಯುವುದನ್ನು ಬಿಟ್ಟು ಕಿಲ-ಕಿಲನೆ ನಗುತ್ತಿದ್ದುವು. ಪುಟ್ಟ-ಪುಟ್ಟ ಹಲ್ಲುಗಳ ಪ್ರಕಾಶದಿಂದ ಕೂಡಿದ ಆ ಕಿರು ನಗೆಯನ್ನು ಎಷ್ಟು ನೋಡಿದರೂ ತಾಯಂದಿರಿಗೆ ತೃಪ್ತಿಯೇ ಇಲ್ಲ. ಯಶೋದಾ-ರೋಹಿಣಿಯರೂ ಮುದ್ದುಕಂದಗಳನ್ನು ಬಾರಿ-ಬಾರಿಗೂ ನಗಿಸುತ್ತಾ ಆನಂದಸಾಗರದಲ್ಲಿ ಮುಳುಗಿಹೋಗುತ್ತಿದ್ದರು. ಗೋಕುಲದ ಗೊಲ್ಲತಿಯರೆಲ್ಲರಿಗೂ ಅವರ ಚೇಷ್ಟೆಗಳು ಆನಂದವನ್ನುಂಟುಮಾಡು ತ್ತಿದ್ದುವು. ಕೆಲವು ವೇಳೆ ರಾಮ-ಕೃಷ್ಣರು ಅಂಬೆಗಾಲನ್ನಿಡುತ್ತಲೇ ಹೋಗಿ ಮಲಗಿದ್ದ ಕರುಗಳ ಬಾಲಗಳನ್ನು ಹಿಡಿದು ಜಗ್ಗುವರು. ಅವುಗಳು ಭಯ ದಿಂದ ಓಡಿದರೆ ನಗುವರು. ಕೆಲವೊಮ್ಮೆ ಬಾಲವನ್ನು ಹಿಡಿದುಕೊಂಡು ಅಂಬೆಗಾಲಿಕ್ಕುತ್ತಲೇ ಕರುಗಳನ್ನು ದರದರನೆ ಸೆಳೆದು ತರುತ್ತಿದ್ದರು. ಹೀಗೆ ಮಾಡುವಾಗ ಕೆಲವೊಮ್ಮೆ ಬಿದ್ದು-ಏಳುತ್ತಿದ್ದರು. ಇಂತಹ ನಾನಾವಿಧವಾದ ರಾಮ-ಕೃಷ್ಣರ ಆಟಗಳನ್ನು ನೋಡುತ್ತಾ ಗೋಪಿಯರು ಮುಗ್ಧರಾಗಿ ನಿಂತು ಬಿಡುತ್ತಿದ್ದರು. ಅವರಿಗೆ ಮನೆಕೆಲಸಮಾಡಬೇಕೆಂಬ ಪರಿವೆಯೇ ಇರುತ್ತಿರ ಲಿಲ್ಲ. ಮಕ್ಕಳು ದೊಡ್ಡವರಾದಂತೆ ಅವರ ಚೇಷ್ಟೆಗಳೂ ಹೆಚ್ಚಾಗತೊಡ ಗಿದುವು. ಆ ಚೇಷ್ಟೆಗಳನ್ನು ತಡೆಯಲು ಯಶೋದಾ-ರೋಹಿಣಿಯರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ಸ್ನೇಹಃ ಪಾಪಶಙ್ಕೀ ಎಂಬಂತೆ ತಮ್ಮ ಮಕ್ಕಳು ಎಲ್ಲಿ ಬೀಳುವರೋ ಮಂಡಿಯು ಮುರಿದುಹೋಗುವುದೋ?—ಇದೇ ಮುಂತಾಗಿ ಹೆದರುತ್ತಿದ್ದರು. ಅವರು ಆಟವಾಡುತ್ತಿದ್ದರೆ ಅವರ ಜೊತೆ ಯಲ್ಲಿಯೇ ತಾಯಿಯರೂ ನಿಂತಿರಬೇಕಾಗಿದ್ದಿತು. ಆಟವಾಡುವುದನ್ನು ಬಿಡಿಸಿ ಕರೆದುಕೊಂಡು ಬರಲು ಸಾಧ್ಯವಾಗುತ್ತಿರಲಿಲ್ಲ. ಆಟವಾಡುತ್ತಿದ್ದರೆ ಅಪಾಯ ವೆಲ್ಲಿ ಸಂಭವಿಸುವುದೋ ಎಂಬ ಭಯ. ಹೀಗಾಗಿ ಗೋಪಿಯರು ಯಾವ

ಮನೆಗೆಲಸಗಳನ್ನೂ ಮಾಡದೆ ಸರ್ವದಾ ಮಕ್ಕಳ ಆಟ-ಪಾಟಗಳನ್ನೇ ನೋಡುತ್ತಾ ನಿಂತುಬಿಡುತ್ತಿದ್ದರು. ರಾಮ-ಕೃಷ್ಣರ ಆಟವೂ ಸಾಮಾನ್ಯ ರೀತಿಯದಲ್ಲ. ಅಂಬೆಗಾಲಿಕ್ಕಿಕೊಂಡು ಹಸುವಿನ ಕೊಟ್ಟಿಗೆಗೆ ಹೋಗುವರು. ಒಲೆಗೆ ಹಾಕಿದ್ದ ಕಟ್ಟಿಗೆಯನ್ನು ಎಳೆದುಬಿಡುವರು. ಹುತ್ತದೊಳಗೆ ನುಸುಳುವ ಹಾವುಗಳನ್ನು ಹಿಡಿದೆಳೆಯುವರು. ನೀರನ್ನು ತೊಳೆಚಾಡುವರು. ಗುಬ್ಬಚ್ಚಿ-ಗಿಣಿ ಇವೇ ಮುಂತಾದ ಹಕ್ಕಿಗಳನ್ನು ಹಿಡಿಯಲು ಹೋಗುವರು. ಹಾಗೆ ಹೋಗುವಾಗ ಅವರಿಗೆ ಹಾದಿಯಲ್ಲಿ ಕಲ್ಲು-ಮುಳ್ಳುಗಳು ಇವೆಯೆಂಬ ಪರಿವೆಯೇ ಇರುತ್ತಿರಲಿಲ್ಲ. ಆಟಗಳನ್ನು ನೋಡುತ್ತಿದ್ದ ತಾಯಂದಿರಿಗೆ ಭಯವಾಗುತ್ತಿತ್ತು. ಅವರನ್ನು ತಡೆಯಲೂ ಸಾಧ್ಯವಾಗುತ್ತಿರಲಿಲ್ಲ. ಮನೆಗೆಲಸಗಳನ್ನು ಬಿಟ್ಟು ಸದಾ ಅವರ ಹಿಂದೆಯೇ ಇರುತ್ತಿದ್ದರು. ಆದರೆ ಅವರ ಆಟಗಳನ್ನು ನೋಡುವುದರಿಂದ ಅವರಿಗೆ ಆನಂದವೂ ಆಗುತ್ತಿತ್ತು. ಸಮಯಗಳಲ್ಲಿ ಕಿಲ-ಕಿಲನೆ ನಗುತ್ತಾ ಅವರೆಲ್ಲರೂ ಮಕ್ಕಳ ಆನಂದದಲ್ಲಿ ಪಾಲ್ಗೊಳ್ಳುತ್ತಿದ್ದರು. ಕಾಲಕ್ರಮದಲ್ಲಿ ಅಂಬೆಗಾಲಿಕ್ಕುವುದು ನಿಂತು ಹೋಯಿತು. ಅವರು ಬೀಳುತ್ತೇಳುತ್ತಾ ಪುಟ್ಟ-ಪುಟ್ಟ ಹೆಜ್ಜೆಗಳನ್ನಿಡ ತೊಡಗಿದರು. ಭಗವತ್ಸ್ವರೂಪವೇ ಆಗಿದ್ದ ಶ್ರೀಕೃಷ್ಣನು ಬಲರಾಮನೊಡನೆಯೂ ತನ್ನ ಸಮವಯಸ್ಕರಾದ ಸ್ನೇಹಿತರೊಡನೆಯೂ ಗೋಪಿಕಾ ಸ್ತ್ರೀಯರಿಗೆ ಸಂತೋಷವನ್ನುಂಟುಮಾಡುತ್ತಾ ಆಟವಾಡುತ್ತಿದ್ದನು.

ಶ್ರೀಕೃಷ್ಣನ ಕೌಮಾರ್ಯದ ಚಂಚಲತೆಯಿಂದ ಕೂಡಿದ ಆಟ-ಪಾಟ ಗಳು ಅತ್ಯಂತ ಮನೋಹರವಾಗಿರುತ್ತಿದ್ದುವು. ಗೋಪಿಯರು ಅಂತಹ ಸುಮಧುರವಾದ ಆಟಗಳನ್ನು ನೋಡಿ ಅವುಗಳಲ್ಲಿಯೇ ಪಾಲ್ಗೊಂಡು ಅವುಗಳ ಸವಿಯನ್ನೂ–ಸೊಗಡನ್ನೂ ಅನುಭವಿಸುತ್ತಿದ್ದರು. ಆದರೂ ಕೆಲವರು ಅವರ ತುಂಟತನವನ್ನು ತಡೆಯಲಾರದೆ ಅದರ ಬಗೆಗೆ ಯಶೋದಾಮಾತೆಗೆ ದೂರುಕೊಡುವ ಸಲುವಾಗಿ ಎಲ್ಲರೂ ಸಂಘಟಿತರಾಗಿ ಆಕೆಯ ಬಳಿಗೆ ಹೋಗಿ ಹೇಳತೊಡಗಿದರು :

"ಅಮ್ಮ! ಯಶೋದೆ! ನಿನ್ನ ಮಗನು ಕೊಡುತ್ತಿರುವ ಉಪಟಳವನ್ನು ಎಷ್ಟೆಂದು ವರ್ಣಿಸೋಣ! ನಿನ್ನ ಮಗನು ನಿಶ್ಚಯವಾಗಿಯೂ ಬಹಳ ತುಂಟನಾಗಿಬಿಟ್ಟಿದ್ದಾನೆ. ಸಮಯವಲ್ಲದ ಸಮಯಗಳಲ್ಲಿ ಕರುಗಳನ್ನು ಬಿಚ್ಚಿ

ಬಿಡುತ್ತಾನೆ. ನಾವೇನಾದರೂ ಕೂಗಿಕೊಂಡರೆ ಪಕ-ಪಕನೆ ನಗುತ್ತಾನೆ. ನಾವು ಹಾಲು-ಮೊಸರು-ಬೆಣ್ಣೆಗಳನ್ನು ಎಲ್ಲಿಯೇ ಬಚ್ಚಿಟ್ಟಿದ್ದರೂ ಉಪಾಯಾಂತರಗಳಿಂದ ಅವು ಎಲ್ಲಿವೆಯೆಂಬುದನ್ನು ತಿಳಿದು ಕದ್ದುತಿನ್ನುತ್ತಾನೆ. ಹೋಗಲೀ ; ತಾನಾದರೂ ತನಗೆ ಬೇಕಾದಷ್ಟು ತಿಂದು ಹೋಗುವನೇ! ಎಂದರೆ ಹಾಗೂ ಇಲ್ಲ. ತಾನೂ ತಿನ್ನುವುದಲ್ಲದೆ ಮಂಗಗಳಿಗೂ ಈ ಸುರುಚಿಕರವಾದ ಹಾಲು-ಮೊಸರು-ಬೆಣ್ಣೆಗಳನ್ನೂ ತಿನ್ನಿಸುತ್ತಾನೆ. ಹೊಟ್ಟೆ ಭರ್ತಿಯಾಗಿ ಅವುಗಳೂ ತಿನ್ನದೇ ಹೋದರೆ ಹಾಲು-ಮೊಸರು-ಬೆಣ್ಣೆಗಳಿರುವ ಮಡಕೆಗಳನ್ನೇ ಒಡೆದುಹಾಕುತ್ತಾನೆ. ತನಗೆ ಬೇಕಾದ ವಸ್ತುವೇನಾದರೂ ಮನೆಯಲ್ಲಿ ಸಿಕ್ಕದಿದ್ದರೆ ಮನೆಯವರ ಮೇಲೆ ರೇಗುತ್ತಾನೆ ಮತ್ತು ಮನೆಯ ಮಕ್ಕಳನ್ನು ಕೀಟಲೆಮಾಡಿ ಅಳಿಸುತ್ತಾನೆ. ಗೋಪಿಯರೆಲ್ಲರೂ (ನಾವೆಲ್ಲರೂ) ಮನೆಗೆಲಸಗಳಲ್ಲಿ ನಿರತರಾಗಿರುವಾಗ ಈ ಪೋರನು ಬಂದು ಕಳ್ಳತನಕ್ಕೆ ಪ್ರಾರಂಭಿಸುತ್ತಾನೆ. ಹಾಲು-ಮೊಸರು-ಬೆಣ್ಣೆಗಳ ಮಡಕೆಗಳು ಎತ್ತರದಲ್ಲಿದ್ದರೆ ಕಾಲುಮಣೆಗಳನ್ನೂ ಒರಳನ್ನೂ ಇಟ್ಟುಕೊಂಡು ಆ ಮಡಕೆಗಳನ್ನು ಎಟುಕಿಸಿಕೊಳ್ಳುತ್ತಾನೆ. ನೆಲುವಿನಲ್ಲಿದ್ದರೆ ಅದರಲ್ಲಿ ಏನಿರುವುದೆಂಬುದನ್ನು ತಿಳಿದು ನಿಂತ ಜಾಗದಿಂದಲೇ ಕಲ್ಲುಹೊಡೆದು ಅಥವಾ ಅಲ್ಲಿರುವ



ಕೋಲಿನಿಂದ ಬಡಿದು ತೂತುಮಾಡಿ ಬಾಯೊಡ್ಡುತ್ತಾನೆ. ನಾವೇನಾದರೂ ಭಾಂಡಗಳನ್ನು ಕತ್ತಲೆಯ ಕೋಣೆಯಲ್ಲಿಟ್ಟಿದ್ದರೆ ತಾನು ಧರಿಸಿರುವ ದಿವ್ಯ

ವಾದ ಮಣಿಗಳ ಸರವನ್ನೇ ಬೆಳಕು ಚೆಲ್ಲುವ ದೀಪದಂತೆ ಮಾಡಿಕೊಂಡು ಅಲ್ಲಿರುವುದನ್ನು ಕದಿಯುತ್ತಾನೆ. ಮನೆಯವರೇನಾದರೂ ಕಂಡು 'ಕಳ್ಳ ಸಿಕ್ಕಿಬಿದ್ದ'–ಎಂದರೆ 'ನೀವೇ ಕಳ್ಳರು ; ನಾನು ಕಳ್ಳನಲ್ಲ'–ಎಂದು ದಬಾಯಿಸಿ ಬಿಡುತ್ತಾನೆ. ಸಾರಿಸಿ-ಗುಡಿಸಿ ಚೊಕ್ಕಟಮಾಡಿದ ನಮ್ಮಗಳ ಮನೆಯನ್ನು ಮೂತ್ರ-ಪುರೀಷೋತ್ಸರ್ಜನಗಳಿಂದ ಕೆಡಿಸಿಬಿಡುತ್ತಾನೆ. ಮನೆ-ಮನೆ ಯಲ್ಲಿಯೂ ಹೀಗೆ ತುಂಟತನಮಾಡುವ ಈ ಪೋರನು ನಿನ್ನ ಬಳಿಯಲ್ಲಿ ಏನೂ ಅರಿಯದವನಂತೆ ಭೀತ-ಭೀತನಾಗಿ ನಿಂತಿದ್ದಾನೆ."

ಭಯಗೊಂಡವನಂತೆ ನಟಿಸುತ್ತಿದ್ದ ಮುದ್ದುಕೃಷ್ಣನ ಮುದ್ದುಮುಖವನ್ನು ಯಶೋದೆಯು ನೋಡಿದಳು. ಗೋಪಿಯರ ಮಾತುಗಳನ್ನೆಲ್ಲಾ ಕೇಳಿ ನಕ್ಕುಬಿಟ್ಟಳು.*

ಬಲರಾಮನೇ ಮೊದಲಾದ ಗೋಪಾಲಕರು ಶ್ರೀಕೃಷ್ಣನೊಡನೆ ಆಟ ವಾಡುತ್ತಿದ್ದರು. ಆಗ ಒಮ್ಮೆ ಶ್ರೀಕೃಷ್ಣನು ಆಟವಾಡುತ್ತಿದ್ದಾಗಲೇ ಮಣ್ಣು ತಿಂದನು. ಇದನ್ನು ನೋಡಿದ ಗೋಪಾಲಕರು ಯಶೋದೆಗೆ ದೂರಿತ್ತರು.

"ಅಮ್ಮ! ನಿನ್ನ ಮುದ್ದುಮಗ ಮಣ್ಣು ತಿಂದ."

ಮಗನ ಹಿತೈಷಿಣಿಯಾದ ಯಶೋದೆಯು ಒಡನೆಯೇ ಮಗುವಿನ

---

* ಕೆಲವು ಪುಸ್ತಕಗಳಲ್ಲಿ ಇಲ್ಲೊಂದು ಅಧಿಕಪಾಠವಿದೆ :

**ಗೋಪ್ಯಃ ಕದಾಚನ ಪೃಥಕ್ಪೃಥಗೂಹ್ಯ ಕೃಷ್ಣ**
**ಮೇತ್ಯೇಕದೈವ ಗದಿತುಂ ಪ್ರಸೃತಾಸ್ತದಾಗಃ ।**
**ದೃಷ್ಟ್ವಾ ತದನ್ಯಥ ತಮೇವ ನಿಜಾ ನ ದೃಷ್ಟ್ವಾ**
**ಸರ್ವಾಶ್ಚ ತಾ ನಿವವೃತುಃ ಸ್ವಗೃಹಾನ್ಸಲಜ್ಜಾಃ ॥**

ಮುದ್ದುಕೃಷ್ಣನ ಉಪಟಳವು ದಿನದಿನಕ್ಕೂ ಹೆಚ್ಚುತ್ತಲೇ ಇದ್ದಿತು. ಅವನು ಮತ್ತೊಮ್ಮೆ ಬಂದಾಗ ಅವನನ್ನು ಎತ್ತಿಕೊಂಡು ಹೋಗಿ ಮತ್ತೊಮ್ಮೆ ಯಶೋದಾರಾಣಿಗೆ ದೂರುಕೊಡಬೇಕೆಂದು ಗೋಪಿಯರು ನಿಶ್ಚಯಿಸಿಕೊಂಡರು. ಅಂತೆಯೇ ಎಲ್ಲರೂ ತಮ್ಮ ಕಂಕುಳಿನಲ್ಲಿ ಒಬ್ಬೊಬ್ಬ ಕೃಷ್ಣನನ್ನು ಇರಿಸಿಕೊಂಡು ಯಶೋದೆಯ ಬಳಿಗೆ ಬಂದರು. ಯಶೋದೆಯ ಬಳಿಯೂ ಒಬ್ಬ ಕೃಷ್ಣನಿರುವುದನ್ನು ಕಂಡು ಗೋಪಿಯರು ತಮ್ಮ ಕಂಕುಳನ್ನು ನೋಡಿಕೊಂಡರು. ಕಂಕುಳಿನ ಕೃಷ್ಣನು ಮಾಯವಾಗಿಬಿಟ್ಟಿದ್ದನು. ನಾಚಿಕೆಯಿಂದಾಗಿ ಏನನ್ನೂ ಹೇಳದೆ ಗೋಪಿಯರು ತಮ್ಮ ತಮ್ಮ ಮನೆಗಳಿಗೆ ತೆರಳಿದರು.


ಕೈಹಿಡಿದುಕೊಂಡಳು. ಆ ಸಮಯದಲ್ಲಿ ಶ್ರೀಕೃಷ್ಣನು ಹೆದರಿರುವವನಂತೆ ನಟಿಸುತ್ತಿದ್ದು ಅವನ ಕಣ್ಣುಗಳು ಕೆಳಮುಖವಾಗಿದ್ದುವು. ಯಶೋದೆಯು ಗದರಿಸಿಕೊಳ್ಳುತ್ತಾ ಹೇಳಿದಳು :

"ಪೋರ! ನೀನು ಬಹಳವಾಗಿ ಹೆಚ್ಚಿಕೊಂಡುಬಿಟ್ಟಿರುವೆ. ನಿನ್ನ ತುಂಟತನವು ಅತಿಯಾಗಿಬಿಟ್ಟಿದೆ. ನೀನು ಗುಟ್ಟಿನಲ್ಲಿ ಮಣ್ಣನ್ನೇಕೆ ತಿಂದೆ? ಹಾಗೆ ತಿಂದೆಯೆಂದು ನಿನ್ನ ಗೆಳೆಯರೂ ಹೇಳುತ್ತಿದ್ದಾರೆ ; ನಿಮ್ಮಣ್ಣನೂ ಹೇಳುತ್ತಿದ್ದಾನೆ."

ಶ್ರೀಕೃಷ್ಣನು ಹೇಳುತ್ತಾನೆ :

**ನಾಹಂ ಭಕ್ಷಿತವಾನಮ್ಬ ಸರ್ವೇ ಮಿಥ್ಯಾಭಿಶಂಸಿನಃ ।**
**ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್ ॥೩೫॥**

"ಅಮ್ಮ! ನಾನು ನಿಶ್ಚಯವಾಗಿಯೂ ಮಣ್ಣುತಿನ್ನಲಿಲ್ಲವಮ್ಮಾ. ಇವರೆಲ್ಲರೂ ಸುಳ್ಳರು. ಇಲ್ಲದ್ದನ್ನೇ ನನ್ನ ಮೇಲೆ ಹೇಳುತ್ತಿದ್ದಾರೆ. ಬೇಕಾದರೆ ನೀನೇ ಪ್ರತ್ಯಕ್ಷವಾಗಿ ನನ್ನ ಬಾಯನ್ನು ನೋಡು. ನಾನು ಮಣ್ಣುತಿಂದಿರುವೆನೇ? ಇಲ್ಲವೇ?–ಎಂಬುದು ನಿನಗೇ ತಿಳಿಯುತ್ತದೆ."




ತಾಯಿ ಹೇಳಿದಳು : "ಕಂದ! ಹಾಗಾದರೆ ಬಾಯ್ತೆರೆ. ನಾನೇ ನೋಡುತ್ತೇನೆ." ಮುದ್ದುಕೃಷ್ಣನು ಬಾಯ್ತೆರೆದನು.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಅನಂತೈಶ್ವರ್ಯನು. ಕೇವಲ ಲೀಲೆಗಾಗಿ ಮನುಷ್ಯಬಾಲಕನಾಗಿ ಅವತರಿಸಿದ್ದನು. ಕಂದನ ಬಾಯಲ್ಲಿ ಮಣ್ಣಿರುವುದೇ?–ಎಂಬುದನ್ನು ತಿಳಿಯಲು ಯಶೋದೆಯು ಬಗ್ಗಿ ನೋಡಿದಳು. ಆದರೆ ಅವಳಲ್ಲಿ ಕಂಡದ್ದೇನು? ಚರಾಚರಜಗತ್ತು ಅಲ್ಲಿ ಅಡಕವಾಗಿದ್ದುದನ್ನು ಆಕೆಯು ನೋಡಿದಳು. ಆಕಾಶ, ದಿಕ್ಕುಗಳು, ಪರ್ವತಗಳು, ದ್ವೀಪಗಳು, ಸಮುದ್ರಸಹಿತವಾದ ಭೂಮಂಡಲ, ವಾಯು, ವಿದ್ಯುತ್, ಅಗ್ನಿ, ಚಂದ್ರ-ತಾರೆಗಳು, ಸಂಪೂರ್ಣವಾದ ಜ್ಯೋತಿರ್ಮಂಡಲ, ಜಲ, ತೇಜಸ್ಸು, ಪವನ, ಆಕಾಶ, ರಸಾತಲವೇ ಮುಂತಾದ ಅಧೋಲೋಕಗಳು, ಅಧಿಷ್ಠಾನ ದೇವತೆಗಳಿಂದ ಕೂಡಿದ ಇಂದ್ರಿಯಗಳು, ಮನಸ್ಸು, ಪಂಚತನ್ಮಾತ್ರೆಗಳು, ಸತ್ತ್ವ-ರಜಸ್ತಮೋಗುಣಗಳು ಇವೆಲ್ಲವನ್ನೂ ಯಶೋದೆಯು ಶ್ರೀಕೃಷ್ಣನ ಬಾಯೊಳಗೆ ಕಂಡಳು. ಜೀವಾತ್ಮರು, ಕಾಲ, ಸ್ವಭಾವ, ಜನ್ಮಕ್ಕೆ ಕಾರಣವಾದ ಪಾಪ-ಪುಣ್ಯಗಳು, ಕರ್ಮವಾಸನೆಗಳು, ಜೀವಾದಿಗಳಿಂದ ಭಿನ್ನ-ಭಿನ್ನವಾಗಿ ತೋರುತ್ತಿರುವ ಚರಾಚರಶರೀರಗಳು–ಇವುಗಳಿಂದ ಕೂಡಿದ ವಿಚಿತ್ರವಾದ ಜಗತ್ತು ಮತ್ತು ಅದರಲ್ಲಿಯೇ ಗೋಕುಲ ; ಆ ಗೋಕುಲದಲ್ಲಿಯೇ ತಾನೂ ಇರುವುದನ್ನು ಯಶೋದೆಯು ಶ್ರೀಕೃಷ್ಣನ ಬಾಯಲ್ಲಿ ನೋಡಿದಳು. ಯಶೋದೆಗೆ ಸಂಶಯವುಂಟಾಯಿತು. “ನಾನೀಗ ಎಲ್ಲಿದ್ದೇನೆ? ಏನನ್ನು ನೋಡುತ್ತಿದ್ದೇನೆ? ಇದೇನು ಸ್ವಪ್ನವೇ? ಭಗವಂತನ ಮಾಯೆಯೇ? ನನ್ನ ಬುದ್ಧಿಗೆ ಏನಾದರೂ ಭ್ರಮಣೆಯಾಗಿರುವುದೇ? ಅಥವಾ ನನ್ನ ಮಗನಿಗೆ ಹುಟ್ಟಿದಾಗಲೇ ಯಾವುದೋ ಯೋಗಸಿದ್ಧಿಯಾಗಿರಬೇಕು. ಆ ಯೋಗ ಮಾಯೆಯನ್ನೇ ಇವನು ನನಗೆ ತೋರಿಸುತ್ತಿರಬಹುದು.

**ಅಥೋ ಯಥಾವನ್ನ ವಿತರ್ಕಗೋಚರಂ**
**ಚೇತೋಮನಃಕರ್ಮವಚೋಭಿರಞ್ಜಸಾ ।**
**ಯದಾಶ್ರಯಂ ಯೇನ ಯತಃ ಪ್ರತೀಯತೇ**
**ಸುದುರ್ವಿಭಾವ್ಯಂ ಪ್ರಣತಾಸ್ಮಿ ತತ್ಪದಮ್ ॥೪೧॥**

ಯಾವುದು ತರ್ಕಕ್ಕೆ ಗೋಚರವಾಗುವುದಿಲ್ಲವೋ, ಯಾವುದು ಬುದ್ಧಿ-ಮನಸ್ಸು, ಕರ್ಮ ಮತ್ತು ವಾಕ್ಕುಗಳಿಗೆ ಸಿಲುಕದೋ, ಈ ಜಗತ್ತು

ಯಾವುದನ್ನು ಆಶ್ರಯಿಸಿರುವುದೋ, ಯಾವುದರಿಂದ ಈ ಜಗತ್ತು ವ್ಯಾವಹಾರಿಕವಾಗಿರುವಂತೆ ತೋರುವುದೋ, ಅಂತಹ ಅತ್ಯಂತಕಷ್ಟದಿಂದ ಭಾವಿಸಲ್ಪಡುವ ಪರಮಪದಕ್ಕೆ ನಮಸ್ಕಾರವು.

**ಅಹಂ ಮಮಾಸೌ ಪತಿರೇಷ ಮೇ ಸುತೋ**
**ವ್ರಜೇಶ್ವರಸ್ಯಾಖಿಲವಿತ್ತಪಾ ಸತೀ ।**
**ಗೋಪ್ಯಶ್ಚ ಗೋಪಾಃ ಸಹಗೋಧನಾಶ್ಚ ಮೇ**
**ಯನ್ಮಾಯಯೇತ್ಥಂ ಕುಮತಿಃ ಸ ಮೇ ಗತಿಃ ॥೪೨॥**

ಪರಮಾತ್ಮನ ಮಾಯೆಯಿಂದ ಬುದ್ಧಿಗೆಟ್ಟವಳಾಗಿ 'ನಾನು, ನನ್ನದು' ಎಂಬ ಅಹಂಕಾರದಿಂದ ತುಂಬಿಹೋಗಿದ್ದೇನೆ. 'ಇವನು ನನ್ನ ಪತಿ, ಇವನು ನನ್ನ ಮಗ, ವ್ರಜೇಶ್ವರನಾದ ನಂದಗೋಪನ ಸಕಲೈಶ್ವರ್ಯಕ್ಕೂ ನಾನೇ ಯಜಮಾನಿ, ನಾನು ಮಹಾಪತಿವ್ರತೆ, ಈ ಗೋಪೀ-ಗೋಪಾಲರೆಲ್ಲರೂ ನನ್ನ ಸೇವಕರು. ಈ ಗೋಧನವೆಲ್ಲವೂ ನನ್ನದೇ'–ಮುಂತಾಗಿ ಅಹಂಕಾರ ಪಡುತ್ತಿದ್ದೇನೆ. ಇದಕ್ಕೆ ಭಗವಂತನ ಮಾಯೆಯೇ ಕಾರಣ. ಹೀಗೆ ಮಾಯೆಯ ಆವರಣವನ್ನು ಹೊದ್ದಿಸಿ ನನ್ನನ್ನು ಕುಮತಿಯನ್ನಾಗಿ ಮಾಡಿಬಿಟ್ಟಿರುವ ಪರಮಾತ್ಮನೇ ನನಗೆ ಅನನ್ಯಶರಣ್ಯನು."

ಪರೀಕ್ಷಿತನೇ! ಶ್ರೀಕೃಷ್ಣನ ತತ್ತ್ವವನ್ನು ತಿಳಿದ ಯಶೋದಾಮಾತೆಯು ಹೀಗೆ ಪ್ರಾರ್ಥಿಸುತ್ತಿರಲಾಗಿ ಸರ್ವವ್ಯಾಪಿಯಾದ, ಪ್ರಭುವಾದ ಭಗವಂತನು ಪುನಃ ಪುತ್ರಸ್ನೇಹಮಯವಾದ ವೈಷ್ಣವೀಮಾಯೆಯನ್ನು ಅವಳ ಹೃದಯದಲ್ಲಿ ಪ್ರಕಾಶನಗೊಳಿಸಿದನು. ಅದರಿಂದ ಆವೃತಳಾದೊಡನೆಯೇ ಯಶೋದಾಮಾತೆಗೆ ತನ್ನ ಮಗನ ಬಾಯಲ್ಲಿ ಅಖಂಡಬ್ರಹ್ಮಾಂಡವನ್ನೂ ಕಂಡಿದ್ದು, ಅವನು ಯೋಗೇಶ್ವರನಿರಬಹುದೆಂದು ತರ್ಕಿಸಿದ್ದು ಮತ್ತು ಅವನೇ ಪರಮಾತ್ಮನೆಂದು ಭಾವಿಸಿ ಸ್ತೋತ್ರಮಾಡಿದ್ದು ಎಲ್ಲವೂ ಮರೆತೇ ಹೋಯಿತು. ಮುದ್ದುಕೃಷ್ಣನನ್ನು ಒಡನೆಯೇ ತೊಡೆಯ ಮೇಲೆ ಮಲಗಿಸಿಕೊಂಡು ಮುದ್ದಿಸಿದಳು. ಹಿಂದಿನಂತೆಯೇ ಅವಳ ಹೃದಯದಲ್ಲಿ ಪ್ರೇಮದ ಸಮುದ್ರವು ಉಕ್ಕಿಬರಲು ಪ್ರಾರಂಭವಾಯಿತು. ಸಮಸ್ತ ವೇದಗಳೂ, ಉಪನಿಷತ್ತುಗಳೂ, ಸಾಂಖ್ಯಶಾಸ್ತ್ರ-ಯೋಗಶಾಸ್ತ್ರಗಳೂ, ಭಕ್ತ

ಜನರೂ ಯಾವ ಪರಮಪುರುಷನ ಮಾಹಾತ್ಮ್ಯೆಯನ್ನು ನಿರಂತರವಾಗಿ ಹೊಗಳಿಹಾಡುವರೋ ಅಂತಹ ಅಪ್ರಮೇಯನಾದ, ಅನಂತನಾದ, ಅಪಾರ ನಾದ ಶ್ರೀಹರಿಯನ್ನು ಯಶೋದೆಯು ತನ್ನ ಮಗನೆಂದೇ ಭಾವಿಸಿದಳು."

ರಾಜನು ಪ್ರಶ್ನಿಸುತ್ತಾನೆ :

"ಪೂಜ್ಯರೇ! ಭಗವಂತನನ್ನು ಪುತ್ರನನ್ನಾಗಿ ಪಡೆಯಲು ಮತ್ತು ಮುದ್ದುಕೃಷ್ಣನ ಲೀಲಾವಿನೋದಗಳನ್ನು ನೋಡಲು ನಂದಗೋಪನು ಎಂತಹ ಅದ್ಭುತವಾದ ಮಂಗಳಮಯವಾದ ಸಾಧನೆಯನ್ನು ಮಾಡಿದ್ದನು? ಯಾರ ಸ್ತನ್ಯವನ್ನು ಭಗವಂತನು ಅಕ್ಕರೆಯಿಂದ ಚಪ್ಪರಿಸಿಕೊಂಡು ಕುಡಿ ಯುತ್ತಿದ್ದನೋ, ಅಂತಹ ಯಶೋದೆಯಾದರೂ ಎಂತಹ ಮಹತ್ತಾದ ತಪಸ್ಸನ್ನು ಮಾಡಿದ್ದಳು? ಸಕಲಪಾಪಗಳನ್ನು ಹೋಗಲಾಡಿಸುವ ಭಗವಂತನ ಬಾಲಲೀಲೆಗಳನ್ನು ಮಹಾಕವಿಗಳು ಇಂದಿಗೂ ಬಣ್ಣಿಸಿ ಹೇಳುವರು. ಆ ಅದ್ಭುತ ಬಾಲಲೀಲೆಗಳನ್ನು ನೋಡಿ ಆನಂದಿಸಲು ಹೆತ್ತ ತಾಯಿ-ತಂದೆಗಳಾದ ದೇವಕೀ-ವಸುದೇವರಿಗೆ ಲಭ್ಯವಿರಲಿಲ್ಲ. ಅವುಗಳನ್ನು ನೋಡಿ ಆನಂದಿಸಲು ಯಶೋದಾ-ನಂದಗೋಪರಿಗೆ ಹೇಗೆ ಸಾಧ್ಯ ವಾಯಿತು? ಇದನ್ನು ದಯಮಾಡಿ ಹೇಳಿರಿ."

ಶ್ರೀಶುಕದೇವರು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ನಂದಗೋಪನು ಹಿಂದಿನ ಜನ್ಮದಲ್ಲಿ ಒಬ್ಬ ಶ್ರೇಷ್ಠನಾದ ವಸುವಾಗಿದ್ದನು. ಅವನ ಹೆಸರು 'ದ್ರೋಣ' ಎಂದಾಗಿತ್ತು. ಅವನ ಪತ್ನಿಯ ಹೆಸರು ಧರಾ. ಭೂಮಿಯಲ್ಲಿ ಗೋಪ-ಗೋಪಿಯರಾಗಿ ಹುಟ್ಟಬೇಕೆಂಬ ಬ್ರಹ್ಮನ ಆದೇಶವನ್ನು ಪರಿಪಾಲಿಸುವ ಇಚ್ಛೆಯಿಂದಿದ್ದ ದ್ರೋಣನು ಪತ್ನಿಯೊಡನೆ ಬ್ರಹ್ಮದೇವರಲ್ಲಿ ವಿಜ್ಞಾಪಿಸಿದನು :

**ಜಾತಯೋನೌ ಮಹಾದೇವೇ ಭುವಿ ವಿಶ್ವೇಶ್ವರೇ ಹರೌ ।**
**ಭಕ್ತಿಃ ಸ್ಯಾತ್ಪರಮಾ ಲೋಕೇ ಯಯಾಞ್ಜೋ ದುರ್ಗತಿಂ ತರೇತ್ ॥**

"ಚತುರ್ಮುಖನೇ! ನಿನ್ನ ಆಜ್ಞೆಯಂತೆ ನಾವು ಭೂಮಿಯಲ್ಲಿ ಹುಟ್ಟಿ ದಾಗ–ಯಾವ ಅನನ್ಯವಾದ, ಪ್ರೇಮಮಯಭಕ್ತಿಯಿಂದ ಪ್ರಪಂಚದ ಜನರು ಅನಾಯಾಸವಾಗಿ ದುರ್ಗತಿಯನ್ನು ಹೋಗಲಾಡಿಸಿಕೊಳ್ಳುವರೋ ಅಂತಹ

ಅನನ್ಯವಾದ, ಪ್ರೇಮಮಯವಾದ, ಗಾಢವಾದ ಭಕ್ತಿಯು, ಜಗದೀಶ್ವರ ನಾದ, ಮಹಾದೇವನಾದ ಹರಿಯಲ್ಲಿ ಸ್ಥಿರವಾಗಿ ನಮ್ಮಲ್ಲಿ ನೆಲೆಸುವಂತೆ ನಮ್ಮನ್ನು ಅನುಗ್ರಹಿಸು."

ಪರೀಕ್ಷಿತಮಹಾರಾಜ! ಇದಕ್ಕೆ ಉತ್ತರವಾಗಿ ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಅವರಿಬ್ಬರಿಗೂ, ದಯಾಮಯನಾದ ಭಗವಂತನಲ್ಲಿ ಅಚಲವಾದ ಭಕ್ತಿಯು ನೆಲೆಸುವಂತೆ ಅನುಗ್ರಹಿಸಿದನು. ಬಳಿಕ ಬ್ರಹ್ಮನ ಆದೇಶದಂತೆ ದ್ರೋಣನೆಂಬ ವಸುವು ವ್ರಜಸ್ಥಾನದಲ್ಲಿ ನಂದಗೋಪನಾಗಿ ಹುಟ್ಟಿದನು. ಅವನ ಪತ್ನಿಯಾದ ಧರೆಯು ಗೋಕುಲದಲ್ಲಿಯೇ ಹುಟ್ಟಿ 'ಯಶೋದಾ'–ಎಂಬ ಹೆಸರಿನಿಂದ ವಿಖ್ಯಾತಳಾದಳು. ಜನಾರ್ದನನು ಅವರಿಗೆ ಮಗನಾಗಿ ಹುಟ್ಟಲು ಜನಾರ್ದನನಲ್ಲಿ ಅನನ್ಯಪ್ರೇಮವಿರಬೇಕೆಂಬ ವರವನ್ನು ಪಡೆದಿದ್ದ ಅವರಿಗೆ ಬ್ರಹ್ಮನ ಅನುಗ್ರಹದಿಂದ ಆ ದಿವ್ಯಶಿಶುವಿನ ಮೇಲೆ ನಿರತಿಶಯವಾದ ಪ್ರೀತಿಯುಂಟಾಯಿತು. ಪ್ರಾಣಗಳಿಗಿಂತಲೂ ಹೆಚ್ಚಾಗಿ ಮುದ್ದುಕೃಷ್ಣನನ್ನು ನಂದದಂಪತಿಗಳು ಪ್ರೀತಿಸುತ್ತಿದ್ದರು. ಗೋಕುಲದಲ್ಲಿದ್ದ ಗೋಪ-ಗೋಪಿಯರೂ ಹಾಗೆಯೇ ಶ್ರೀಕೃಷ್ಣನನ್ನು ಪ್ರೀತಿಸುತ್ತಿದ್ದರು.

ಬ್ರಹ್ಮದೇವರ ಮಾತನ್ನು ನಿಜವಾಗಿಸುವುದಕ್ಕಾಗಿ ಶ್ರೀಕೃಷ್ಣನು ಬಲರಾಮನೊಡನೆ ವ್ರಜಸ್ಥಾನದಲ್ಲಿರುತ್ತಾ ವ್ರಜವಾಸಿಗಳಾದ ಗೋಪ-ಗೋಪಿಯರನ್ನೂ ನಂದ-ಯಶೋದೆ-ರೋಹಿಣಿಯರನ್ನೂ ತನ್ನ ಬಾಲ ಲೀಲೆಗಳಿಂದ ಆನಂದತುಂದಿಲರನ್ನಾಗಿ ಮಾಡುತ್ತಿದ್ದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೮ನೆಯ ಅಧ್ಯಾಯವು ಮುಗಿಯಿತು.

---

## ಶ್ರೀಕೃಷ್ಣನನ್ನು ಒರಳುಕಲ್ಲಿಗೆ ಕಟ್ಟಿಹಾಕಿದ ಪ್ರಸಂಗ

ಶ್ರೀಶುಕಮುನಿಗಳು ಹೇಳುತ್ತಾರೆ :

**ಏಕದಾ ಗೃಹದಾಸೀಷು ಯಶೋದಾ ನನ್ದಗೇಹಿನೀ ।**
**ಕರ್ಮಾನ್ತರನಿಯುಕ್ತಾಸು ನಿರ್ಮಮನ್ಥ ಸ್ವಯಂ ದಧಿ ॥೧॥**

ಪರೀಕ್ಷಿತಮಹಾರಾಜ! ಒಮ್ಮೆ ನಂದನ ಪತ್ನಿಯಾದ ಯಶೋದೆಯು ಮನೆಗೆಲಸದ ದಾಸಿಯರನ್ನು ಇತರ ಗೃಹಕೃತ್ಯಗಳಿಗೆ ನಿಯೋಜಿಸಿದ್ದಳು. ಮಗನಿಗೆ ಬೆಣ್ಣೆಯನ್ನು ತಿನ್ನಿಸುವ ಸಲುವಾಗಿ ಅಂದು ತಾನೇ ಮೊಸರು ಕಡೆಯಲು ಪ್ರಾರಂಭಿಸಿದಳು.

ಮಹಾರಾಜ! ನಾನು ಇದುವರೆಗೆ ಯಾವ ಮುದ್ದುಕೃಷ್ಣನ ಸುಮನೋಹರವಾದ ಬಾಲಲೀಲೆಗಳನ್ನು ವರ್ಣಿಸಿ ನಿನಗೆ ಹೇಳಿರುವೆನೋ ಆ ಎಲ್ಲ ಬಾಲಲೀಲೆಯ ಗೀತೆಗಳನ್ನೂ ಒಂದೊಂದನ್ನಾಗಿ ಸ್ಮರಿಸಿಕೊಳ್ಳುತ್ತಾ ಹಾಗೆಯೇ ಹೃದಯಂಗಮವಾಗಿ ಹಾಡುತ್ತಾ ಯಶೋದೆಯು ಮೊಸರನ್ನು ಕಡೆಯುತ್ತಿದ್ದಳು. ಮೊಸರು ಕಡೆಯುತ್ತಿರುವ ಸಮಯದಲ್ಲಿ ಯಶೋದೆಯು ದಿವ್ಯವಾದ ಪೀತಾಂಬರವನ್ನುಟ್ಟಿದ್ದಳು. ಆಕೆಯ ನಡುವಿನಲ್ಲಿ ಕಿರುಗೆಜ್ಜೆಗಳಿಂದ ಕೂಡಿದ ಸುವರ್ಣಮಯವಾದ ಸೊಂಟಪಟ್ಟಿಯಿದ್ದಿತು. ಪುತ್ರಸ್ನೇಹದ ಆಧಿಕ್ಯದಿಂದಾಗಿ ಅವಳ ಸ್ತನಗಳಿಂದ ಹಾಲು ಒಸರುತ್ತಿದ್ದಿತು. ಎರಡು ಕೈಗಳಿಂದಲೂ ಕಡೆಗೋಲಿನ ಹಗ್ಗವನ್ನು ಎಳೆಯುತ್ತಿದ್ದಾಗ ಕೈಗಳಲ್ಲಿದ್ದ ಕಡಗಗಳು ಝಣ-ಝಣಿಸುತ್ತಿದ್ದುವು. ಕಿವಿಯಲ್ಲಿದ್ದ ಕುಂಡಲಗಳು ಮುಖಮಂಡಲದ ಮೇಲೆ ತಮ್ಮ ಕಾಂತಿಯನ್ನು ಎರಚುತ್ತಾ ಅಲುಗಾಡುತ್ತಿದ್ದುವು. ಮುಖವು ಬೆವರುತ್ತಿದ್ದಿತು. ತಲೆಯ ತುರುಬಿನಿಂದ ಮಾಲತೀ ಪುಷ್ಪಗಳು ಕೆಳಗೆ ಜಾರುತ್ತಿದ್ದುವು. ಸುಂದರವಾದ ಹುಬ್ಬುಗಳಿಂದ ಕಂಗೊಳಿಸುತ್ತಿದ್ದ ಯಶೋದೆಯು ಶ್ರೀಕೃಷ್ಣನ ಬಾಲಲೀಲೆಗಳ ಗೀತೆಗಳನ್ನು ಹೇಳುತ್ತಾ ಮೊಸರನ್ನು ಕಡೆಯುತ್ತಿದ್ದಳು. ಆ ವೇಳೆಗೆ ಮುದ್ದುಕೃಷ್ಣನು ಸ್ತನ್ಯಪಾನ ಮಾಡುವ ಸಲುವಾಗಿ ತಾಯಿಯ ಬಳಿಗೆ ಬಂದನು. ಅವನು ತನ್ನ ತಾಯಿಯ

ಹೃದಯದಲ್ಲಿ ಪ್ರೇಮವನ್ನುಕ್ಕಿಸಲು ಮತ್ತು ಅವಳ ಆನಂದವನ್ನು ಹೆಚ್ಚಿಸಲು ಪುಟ್ಟಪುಟ್ಟ ಹೆಜ್ಜೆಗಳನ್ನಿಡುತ್ತಾ ಬಂದು ಕಡೆಗೋಲನ್ನು ಭದ್ರವಾಗಿ ಹಿಡಿದು ಯಶೋದೆಯು ಮೊಸರು ಕಡೆಯಲು ಸಾಧ್ಯವಾಗದಂತೆ ತಡೆದುಬಿಟ್ಟನು. ಕೃಷ್ಣನ ಚಿನ್ನಾಟಕ್ಕೆ ನಗುತ್ತಾ ಯಶೋದೆಯು ಮಗನನ್ನು ತೊಡೆಯ ಮೇಲೆ ಮಲಗಿಸಿಕೊಂಡಳು. ಪ್ರೇಮದ ಆಧಿಕ್ಯದಿಂದಾಗಿ ಅವಳ ಸ್ತನಗಳಿಂದ ಹಾಲು ತಾನಾಗಿಯೇ ಒಸರುತ್ತಿದ್ದಿತು. ಮಗನಿಗೆ ಹಾಲುಣಿಸಲು ಪ್ರಾರಂಭಿಸಿದಳು. ಶ್ರೀಕೃಷ್ಣನು ಕ್ಷಣಕ್ಕೊಮ್ಮೆ ಕುಡಿಯುವುದನ್ನು ನಿಲ್ಲಿಸಿ ಮುಸುಮುಸನೆ ನಗುತ್ತಾ ತಾಯಿಯ ಮುಖವನ್ನು ನೋಡುತ್ತಿದ್ದನು. ಅಂತಹ ನಗುಮೊಗವನ್ನು ಎಷ್ಟು ನೋಡಿದರೂ ತಾಯಿಗೆ ತೃಪ್ತಿಯೇ ಇಲ್ಲ. ಎರಡು ಕೆನ್ನೆಗಳಿಗೂ ಮುತ್ತಿಟ್ಟು ಪುನಃ ಹಾಲುಣಿಸಲು ಪ್ರಾರಂಭಿಸಿದಳು. ಮುದ್ದುಕೃಷ್ಣನಿಗೆ ಹಾಲುಕುಡಿದು ಇನ್ನೂ ತೃಪ್ತಿಯಾಗಿರಲಿಲ್ಲ. ಅಷ್ಟರೊಳಗೆ ಒಲೆಯ ಮೇಲೆ ಕಾಯಿಸಲಿಟ್ಟಿದ್ದ ಹಾಲುಕ್ಕಿ ವಾಸನೆಯು ಬಂದಿತು. ಒಡನೆಯೇ ಅತೃಪ್ತನಾಗಿದ್ದ ಕೃಷ್ಣನನ್ನು ಎತ್ತಿ ಪಕ್ಕಕ್ಕೆ ಕುಳ್ಳಿರಿಸಿ ಆಕೆಯು ಒಲೆಯ ಮೇಲಿದ್ದ ಹಾಲಿನ ಪಾತ್ರೆಯನ್ನು ಕೆಳಗಿಡಲು ಹೊರಟುಹೋದಳು. ಇದರಿಂದ ಕೃಷ್ಣನಿಗೆ ಒಡನೆಯೇ ಕೋಪಬಂದಿತು. ಕಂದನ ಕೆಂದುಟಿಗಳು ಅದುರತೊಡಗಿದುವು. ಹತ್ತಿರದಲ್ಲಿಯೇ ಇದ್ದ ಮೊಸರಿನ ಮಡಕೆಯನ್ನು




ಹಲ್ಲಿನಿಂದ ಕಚ್ಚಿ ಗುಂಡುಕಲ್ಲಿನಿಂದ ಒಡೆದು ಪುಡಿಪುಡಿಮಾಡಿದನು. ಮುದ್ದು ಕೃಷ್ಣನಿಗೆ ಕೋಪವು ಬಂದಿತಲ್ಲದೆ ಕಳ್ಳ ಅಳುವೂ ಬಂದಿತು. ಅವನು ಕಣ್ಣು

ಗಳನ್ನುಜ್ಜಿಕೊಂಡು ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ಸ್ವಲ್ಪಹೊತ್ತು ತಾಯಿಯು ಬಾರದಿರುವುದನ್ನು ನೋಡಿ ಮೆಲ್ಲಗೆ ಒಳಮನೆಗೆ ಹೋಗಿ ಅಲ್ಲಿಟ್ಟಿದ್ದ ಬೆಣ್ಣೆಯನ್ನು ಕದ್ದುತಿನ್ನಲು ಪ್ರಾರಂಭಿಸಿದನು. ಆ ವೇಳೆಗೆ ಅವನಿಗೆ ಕೋಪವೂ ಇರಲಿಲ್ಲ. ಅಳುವನ್ನೂ ನಿಲ್ಲಿಸಿದ್ದನು. ಯಶೋದೆಯು ಒಲೆಯ ಮೇಲಿನಿಂದ ಹಾಲನ್ನು ತೆಗೆದಿರಿಸಿ ಪುನಃ ಮೊಸರು ಕಡೆಯುವ ಕೋಣೆಗೆ ಪ್ರವೇಶಿಸಿದಳು. ಅಲ್ಲಿ ನೋಡಿದಳು. ಮುದ್ದುಕಂದನಿರಲಿಲ್ಲ. ಮೊಸರಿನ ಮಡಕೆಯು ಚೂರು-ಚೂರಾಗಿ ಹೋಗಿದ್ದಿತು. ಸುತ್ತಲೂ ಮೊಸರು ಚೆಲ್ಲಿದ್ದಿತು. ಈ ಕೃತ್ಯವು ಶ್ರೀಕೃಷ್ಣನದೇ ಎಂದು ತಿಳಿಯಲು ಅವಳಿಗೇನೂ ಕಷ್ಟವಾಗಲಿಲ್ಲ. ಇದರಿಂದ ಅವಳೇನೂ ಕೋಪಿಸಿಕೊಳ್ಳಲಿಲ್ಲ. ಮುದ್ದುಕೃಷ್ಣನ ಲೀಲೆಯನ್ನು ನೋಡಿ ಗಟ್ಟಿಯಾಗಿ ನಕ್ಕಳು. ಆದರೆ ಯಶೋದೆಯು ಅಲ್ಲಿ ತನ್ನ ಕಂದ ನನ್ನು ಕಾಣಲಿಲ್ಲ. 'ಕೃಷ್ಣ! ಕಂದ!' ಎಂದು ಕೂಗುತ್ತಾ ಹುಡುಕಾಡ ತೊಡಗಿದಳು. ಮತ್ತೊಂದು ಕೊಠಡಿಯಲ್ಲಿ ಕೃಷ್ಣನು ಮೌನವಾಗಿ ತನ್ನ ಕೆಲಸದಲ್ಲಿ ನಿರತನಾಗಿದ್ದನು. ಒರಳುಕಲ್ಲನ್ನು ಬೋರಲು ಹಾಕಿ ಅದರ ಮೇಲೆ ಹತ್ತಿ ಬೆಣ್ಣೆಯ ನಿಲುವನ್ನು ಎಟುಕಿಸಿಕೊಂಡು ಅದರಲ್ಲಿದ್ದ ಬೆಣ್ಣೆ




ಯನ್ನು ತೆಗೆದುಕೊಂಡು ಸುತ್ತಲೂ ನಿಂತಿದ್ದ ಕೋತಿಗಳಿಗೆ ಯಥೇಚ್ಛವಾಗಿ ತಿನ್ನಿಸುತ್ತಿದ್ದನು. ತನ್ನ ಕಳ್ಳತನವು ಎಲ್ಲಿ ಬಹಿರಂಗವಾಗಿಬಿಡುವುದೋ ಎಂಬ ಭಯವನ್ನು ಸೂಚಿಸುವ ಕಣ್ಣುಗಳಿಂದ ನಾಲ್ಕು ದಿಕ್ಕುಗಳನ್ನೂ

ಕ್ಷಣ-ಕ್ಷಣಕ್ಕೂ ನೋಡುತ್ತಿದ್ದನು. ಬೆಣ್ಣೆಯಿರುವ ಆ ಕೊಠಡಿಯಲ್ಲಿ ತನ್ನ ಕಂದನಿರುವನೆಂಬ ಸುಳಿವನ್ನು ಅರಿತು ಯಶೋದೆಯು ಮೆಲ್ಲ-ಮೆಲ್ಲನೆ ಹಿಂದಿನಿಂದ ಕೃಷ್ಣನ ಬಳಿಗೆ ಬಂದಳು. 'ಪೋರ! ಸಿಕ್ಕಿದೆಯಲ್ಲವೇ!'—ಎಂದು ಅವಳು ಮಗನನ್ನು ಶಿಕ್ಷಿಸುವುದಕ್ಕಾಗಿ ಕೈಯಲ್ಲಿ ಕೋಲನ್ನು ಹಿಡಿದಿದ್ದಳು. ಕೋಲನ್ನು ಹಿಡಿದು ತನ್ನ ತಾಯಿಯು ಬಂದುದನ್ನು ಕಂಡೊಡನೆಯೇ ಹೆದರಿದವನಂತೆ ನಟಿಸುತ್ತಾ ಒರಳುಕಲ್ಲಿನ ಮೇಲಿಂದ ಕೆಳಕ್ಕೆ ಧುಮುಕಿ ಕೃಷ್ಣನು ಓಡಿಬಿಟ್ಟನು.

ಪರೀಕ್ಷಿತನೇ! ಮಹಾಮಹಾಯೋಗಿಗಳು ತಮ್ಮ ಕಠೋರವಾದ ತಪಸ್ಸಿನ ಮೂಲಕವಾಗಿ ಮನಸ್ಸನ್ನು ಏಕಾಗ್ರವಾಗಿ ಮತ್ತು ಶುದ್ಧವಾಗಿ ಮಾಡಿಕೊಂಡರೂ ಯಾವನಲ್ಲಿ ಮನಸ್ಸಿನಿಂದಲೂ ಪ್ರವೇಶಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಪರಂಧಾಮನಾದ ಪರಮಾತ್ಮನನ್ನು ಹಿಡಿಯುವ ಸಲುವಾಗಿ ಯಶೋದೆಯು ಅಟ್ಟಿಸಿಕೊಂಡು ಹೋದಳು. ಎಂತಹ ಆಶ್ಚರ್ಯವಿದು? ಸುಂದರವಾದ ನಡುವನ್ನು ಹೊಂದಿದ್ದ ಯಶೋದೆಯು ಮಗನ ಹಿಂದೆಯೇ ಓಡುತ್ತಿದ್ದಳು. ಆದರೆ ಸ್ಥೂಲವಾದ ನಿತಂಬಗಳ ಭಾರದಿಂದಲೂ ಮತ್ತು ಅವುಗಳ ಕಂಪನದಿಂದಲೂ ಅಷ್ಟುಬೇಗ ಅವಳಿಗೆ ಓಡಲು ಆಗುತ್ತಿರಲಿಲ್ಲ. ಓಡುತ್ತಿದ್ದುದರಿಂದ ಅವಳ ತಲೆಯಲ್ಲಿದ್ದ ಹೆರಳು ಬೇರೆ ಬಿಚ್ಚಿಹೋಯಿತು. ಅದರಲ್ಲಿದ್ದ ಪುಷ್ಪಗಳು ದಾರಿಯುದ್ದಕ್ಕೂ ಎರಚಿದಂತೆ ಬೀಳುತ್ತಿದ್ದುವು. ಯಾವುದನ್ನೂ ಲೆಕ್ಕಿಸದೆ ಯಶೋದೆಯು ಓಡಿಯೋಡಿ ಹೋಗಿ ತನ್ನ ಮಗನನ್ನು ಹಿಡಿದೇ ಬಿಟ್ಟಳು ಅಥವಾ ತನ್ನ ತಾಯಿಯ ಕಷ್ಟವನ್ನು ನೋಡಿ ಸಹಿಸಲಾರದೆ ಕರುಣಾಳು ಕೃಷ್ಣನೇ ತನ್ನ ವೇಗವನ್ನು ಕಡಿಮೆಮಾಡಿ ತಾಯಿಯ ಕೈಗೆ ಸಿಕ್ಕಿಬಿದ್ದನು. ಎಡಗೈಯಲ್ಲಿ ಮುದ್ದುಕೃಷ್ಣನ ತೋಳನ್ನು ಹಿಡಿದಿದ್ದಳು ಯಶೋದೆ. ಬಲಗೈಯಲ್ಲಿ ಕೋಲಿದ್ದಿತು. 'ಪೋರ! ಈಗ ನಿನ್ನನ್ನೇನು ಮಾಡುವೆನು ಗೊತ್ತೇ?'—ಎಂದವಳು ಗದರಿಸಿದಳು. ಅಪರಾಧಿಯಾದ ಕೃಷ್ಣನು ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ತಾಯಿ ಎಲ್ಲಿ ಹೊಡೆದುಬಿಡುವಳೋ—ಎಂಬ ಭಯವನ್ನು ಕಣ್ಣುಗಳಿಂದಲೂ, ಮುಖದಿಂದಲೂ ಸೂಚಿಸುತ್ತಿದ್ದನು. ಬಿಕ್ಕಿ-ಬಿಕ್ಕಿ ಅಳುತ್ತಾ ಕೈಗಳಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತಿದ್ದನು. ಕಣ್ಣಿಗೆ ಹಚ್ಚಿದ ಕಾಡಿಗೆಯೆಲ್ಲವೂ

ಕೈಗಳಿಗೆ ಅಂಟಿಕೊಂಡಿತು. ತನ್ನ ಕೈಯ್ಯಲ್ಲಿರುವ ಕೋಲನ್ನು ನೋಡಿ ತನ್ನ ಮಗನು ಬಹಳ ಭಯಪಟ್ಟಿರುವನೆಂದು ವಾತ್ಸಲ್ಯಮಯಿಯಾದ ತಾಯಿಯು ಭಾವಿಸಿದಳು. ಕೈಯಲ್ಲಿದ್ದ ಕೋಲನ್ನು ಬಿಸಾಡಿದಳು. ಕೃಷ್ಣನು ಪಕ-ಪಕನೆ ನಕ್ಕುಬಿಟ್ಟನು. ಯಶೋದೆಯೂ ಮಗನೊಡನೆ ನಕ್ಕರೂ ಓಡಿಹೋಗುವ ಪೋರನನ್ನು ತಡೆಹಿಡಿಯಲು ಏನಾದರೂ ಮಾಡಬೇಕೆಂದು ಯೋಚಿಸಿ ದಳು. ಅವನನ್ನು ಹಗ್ಗದಿಂದ ಕಟ್ಟಿಹಾಕಬೇಕೆಂದು ನಿಶ್ಚಯಿಸಿದಳು. ಪುತ್ರ ವತ್ಸಲೆಯಾಗಿದ್ದ ಅವಳಿಗೆ ತನ್ನ ಮಗನ ಪರಾಕ್ರಮವೆಷ್ಟೆಂಬ ಅರಿವಿರಲಿಲ್ಲ.

**ನ ಚಾನ್ತರ್ನ ಬಹಿರ್ಯಸ್ಯ ನ ಪೂರ್ವಂ ನಾಪಿ ಚಾಪರಮ್ ।**
**ಪೂರ್ವಾಪರಂ ಬಹಿಶ್ಚಾನ್ತರ್ಜಗತೋ ಯೋ ಜಗಚ್ಚ ಯಃ ॥೧೩॥**

**ತಂ ಮತ್ವಾತ್ಮಜಮವ್ಯಕ್ತಂ ಮರ್ತ್ಯಲಿಙ್ಗಮಧೋಕ್ಷಜಮ್ ।**
**ಗೋಪಿಕೋಲೂಖಲೇ ದಾಮ್ನಾ ಬಬನ್ಧ ಪ್ರಾಕೃತಂ ಯಥಾ ॥೧೪॥**

ಸರ್ವಾತ್ಮಕನಾದ ಯಾವನಿಗೆ ಒಳಗೆ-ಹೊರಗೆಂಬುದಾಗಲೀ, ಹಿಂದೆ-ಮುಂದೆಂಬುದಾಗಲೀ, ಆದಿ-ಅಂತ್ಯವೆಂಬುದಾಗಲೀ ಇಲ್ಲವೋ, ಯಾವನು ಜಗತ್ಸೃಷ್ಟಿಗೆ ಮೊದಲೂ ಇದ್ದನೋ, ಜಗತ್ಪ್ರಳಯವಾದ ಮೇಲೂ ಇರುವನೋ, ಯಾವನು ಜಗತ್ತಿನ ಒಳಗೂ ಮತ್ತು ಹೊರಗೂ ಇರುವನೋ, ಜಗತ್ತಿನ ರೂಪವೇ ಆಗಿರುವನೋ, ಯಾವನು ಇಂದ್ರಿಯಗಳಿಗೆ ಅಗೋಚರನೋ, ಅವ್ಯಕ್ತನೋ ಅಂತಹ ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ಮನುಷ್ಯನ ರೂಪವನ್ನು ಧಾರಣೆಮಾಡಿ ಅವತರಿಸಿರುವ ಕಾರಣ ಯಶೋದಾದೇವಿಯು ಅವನನ್ನು ತನ್ನ ಮುದ್ದಿನ ಮಗನೆಂದೇ ಭಾವಿಸಿ ಅವನ ತುಂಟತನವನ್ನು ತಡೆಯಲು ಅವನನ್ನು ಹಗ್ಗದಿಂದ ಒರಳಿಗೆ ಕಟ್ಟಿಹಾಕಿಬಿಟ್ಟಳು. ಅಪರಾಧಿಯಾಗಿದ್ದ ತನ್ನ ಮಗನನ್ನು ಕಟ್ಟಿಹಾಕುವಾಗ ಒಂದು ಹಗ್ಗವನ್ನು ಮುದ್ದುಕೃಷ್ಣನ ಸೊಂಟದ ಸುತ್ತಲೂ ಸುತ್ತಿದ್ದಳು. ಎರಡು ಕಡೆಗಳನ್ನು ಸೇರಿಸಿ ಗಂಟುಹಾಕಲು ಸಾಧ್ಯವಾಗಲಿಲ್ಲ. ಹಗ್ಗವು ಎರಡು ಅಂಗುಲಗಳಷ್ಟು ಕಡಿಮೆಯಿದ್ದಿತು. ಪಕ್ಕದಲ್ಲಿಯೇ ಇದ್ದ ಮತ್ತೊಂದು ಹಗ್ಗವನ್ನು ಮೊದಲಿನ ಹಗ್ಗಕ್ಕೆ ಗಂಟುಹಾಕಿ ಪುನಃ ಸೊಂಟಕ್ಕೆ ಸುತ್ತಲು ಹೋದಳು. ಆಗಲೂ ಆ ಹಗ್ಗವು ಎರಡು ಅಂಗುಲಗಳಷ್ಟು ಸಾಲದಾಗಿ

ಬಂತು. ಪುನಃ ಮತ್ತೊಂದು ಹಗ್ಗವನ್ನು ಕೂಡಿಸಿದಳು. ಆಗಲೂ ಮುದ್ದು ಕೃಷ್ಣನ ಸೊಂಟದ ಸುತ್ತಲೂ ಅದನ್ನು ಸುತ್ತಿ ಗಂಟುಹಾಕಲು ಸಾಧ್ಯವಾಗಲೇ ಇಲ್ಲ. ಮನೆಯಲ್ಲಿದ್ದ ಹಗ್ಗಗಳನ್ನೆಲ್ಲಾ ಜೋಡಿಸಿ ಪ್ರಯತ್ನಿಸಿದಳು. ಆಗಲೂ ಸಾಧ್ಯವಾಗದೇ ಹೋಯಿತು. ಇದನ್ನು ನೋಡುತ್ತಿದ್ದ ಗೋಪಿಯರು ಪಕ-ಪಕನೆ ನಗತೊಡಗಿದರು. ಯಶೋದೆಯೂ ನಕ್ಕಳು. ಪುಟ್ಟ ಸೊಂಟಕ್ಕೆ ಹಗ್ಗವನ್ನು ಬಿಗಿಯಲು ಸಾಧ್ಯವಾಗದೇ ಇದ್ದುದಕ್ಕಾಗಿ ಯಶೋದೆಯು ಆಶ್ಚರ್ಯಚಕಿತಳಾದಳು. ಭಗವಾನ್ ಶ್ರೀಕೃಷ್ಣನೂ ನಸು-ನಗುತ್ತಾ ನೋಡಿದನು. ತನ್ನ ತಾಯಿಯು ಬೆವರಿಹೋಗಿದ್ದಳು. ಬಹಳವಾಗಿ ಆಯಾಸಗೊಂಡಿದ್ದಳು. ಆಕೆಯ ಮುಡಿಯು ಬಿಚ್ಚಿ ಮುಡಿದಿದ್ದ ಹೂವಿನ ಮಾಲೆಯೆಲ್ಲವೂ ಕೆಳಕ್ಕೆ ಬೀಳುತ್ತಿದ್ದಿತು. 'ಅಯ್ಯೋ ಪಾಪ'–ಎನ್ನಿಸಿತು ದೇವನಿಗೆ. ಕರುಣಾಸಮುದ್ರನಾದ ಆ ಭಗವಂತನು ಒಡನೆಯೇ ಆಕೆಯ ಬಂಧನಕ್ಕೊಳಗಾದನು. ಯಶೋದೆಯು ಹಗ್ಗದಿಂದ ಮುದ್ದುಕೃಷ್ಣನನ್ನು ಬಿಗಿದು ಒರಳುಕಲ್ಲಿಗೆ ಕಟ್ಟಿಯೇ ಬಿಟ್ಟಳು.

**ಏವಂ ಸಂದರ್ಶಿತಾ ಹ್ಯಙ್ಗ ಹರಿಣಾ ಭೃತ್ಯವಶ್ಯತಾ ।**
**ಸ್ವವಶೇನಾಪಿ ಕೃಷ್ಣೇನ ಯಸ್ಯೇದಂ ಸೇಶ್ವರಂ ವಶೇ ॥೧೯॥**

ಪರೀಕ್ಷಿತಮಹಾರಾಜ! ಭಗವಂತನು ಸರ್ವಸ್ವತಂತ್ರನು. ಬ್ರಹ್ಮನೇ ಮೊದಲಾದವರಿಂದ ಕೂಡಿದ ಸಂಪೂರ್ಣಜಗತ್ತೂ ಅವನ ವಶದಲ್ಲಿಯೇ ಇದೆ. ಆದರೂ ವಾತ್ಸಲ್ಯಮಯಿಯಾದ ಯಶೋದಾದೇವಿಯಿಂದ ಬಂಧಿಸಲ್ಪಟ್ಟವನಾಗಿ ತಾನು ತನ್ನ ಪ್ರೀತಿಯ ಭೃತ್ಯರ ವಶನಾಗಿರುವೆನೆಂಬುದನ್ನು ಜಗತ್ತಿಗೇ ಸಾರಿದ್ದಾನೆ.

**ನೇಮಂ ವಿರಿಞ್ಚೋ ನ ಭವೋ ನ ಶ್ರೀರಪ್ಯಙ್ಗಸಂಶ್ರಯಾ ।**
**ಪ್ರಸಾದಂ ಲೇಭಿರೇ ಗೋಪೀ ಯತ್ತತ್ಪ್ರಾಪ ವಿಮುಕ್ತಿದಾತ್ ॥೨೦॥**

ಗೊಲ್ಲತಿಯಾದ ಯಶೋದೆಯು ಮುಕ್ತಿಪ್ರದನಾದ ಮುಕುಂದನಿಂದ ಯಾವ ಅನಿರ್ವಚನೀಯವಾದ ಕೃಪಾಪ್ರಸಾದವನ್ನು ಪಡೆದುಕೊಂಡಳೋ ಅಂತಹ ಅನರ್ಘವಾದ ಕೃಪಾಪ್ರಸಾದವನ್ನು ಬ್ರಹ್ಮದೇವರೇ ಆಗಲೀ, ದೇವ

ದೇವನಾದ ಶಂಕರನಾಗಲೀ, ವಕ್ಷಃಸ್ಥಳದಲ್ಲಿಯೇ ಕುಳಿತಿರುವ ಅರ್ಧಾಂಗಿಯಾದ ಲಕ್ಷ್ಮಿಯೇ ಆಗಲೀ ಪಡೆದುಕೊಳ್ಳಲು ಸಮರ್ಥರಾಗಲಿಲ್ಲ.

**ನಾಯಂ ಸುಖಾಪೋ ಭಗವಾನ್ದೇಹಿನಾಂ ಗೋಪಿಕಾಸುತಃ ।**
**ಜ್ಞಾನಿನಾಂ ಚಾತ್ಮಭೂತಾನಾಂ ಯಥಾ ಭಕ್ತಿಮತಾಮಿಹ ॥೨೧॥**

ಗೋಪಿಕಾನಂದನನಾದ ಶ್ರೀಕೃಷ್ಣಭಗವಂತನು ಅನನ್ಯಪ್ರೇಮಿಗಳಾದ ಭಕ್ತಜನಕ್ಕೆ ಸುಲಭನಾಗಿರುವಂತೆ ದೇಹಾಭಿಮಾನಿಗಳಾದ ಕರ್ಮಕಾಂಡಿಗಳಿಗಾಗಲೀ, ತಪಸ್ವಿಗಳಿಗಾಗಲೀ, ತನ್ನ ಸ್ವರೂಪಭೂತರೇ ಆದ ಜ್ಞಾನಿಗಳಿಗಾಗಲೀ ಸುಲಭನಲ್ಲ.

ಒರಳುಕಲ್ಲಿಗೆ ಕಟ್ಟಿದನಂತರ ಕಂದನ ಉಪಟಳವಿರದೆಂದು ಭಾವಿಸಿದ ಯಶೋದೆಯು ತನ್ನ ಗೃಹಕೃತ್ಯದಲ್ಲಿ ನಿರತಳಾದಳು.

ತಾಯಿಗೆ ತನ್ನ ಕಡೆ ಗಮನವಿಲ್ಲದಿರುವುದನ್ನು ಗಮನಿಸಿದ ಪ್ರಭುವು– ಹಿಂದೆ ಯಕ್ಷರಾಜನಾದ ಕುಬೇರನ ಪುತ್ರರಾಗಿದ್ದು ಶಾಪದಿಂದ ಒಂದು ಜೋಡಿ ಮತ್ತಿಯ ಮರಗಳಾಗಿ ವ್ರಜಭೂಮಿಯಲ್ಲಿಯೇ ಹುಟ್ಟಿ ಬೆಳೆದಿದ್ದ ದೇವಕುಮಾರರಿಗೆ ಶಾಪವಿಮೋಚನೆಯನ್ನು ಮಾಡಬೇಕೆಂದು ನಿಶ್ಚಯಿಸಿದನು.

ಪರೀಕ್ಷಿತಮಹಾರಾಜ! ಕುಬೇರನ ಆ ಇಬ್ಬರು ಮಕ್ಕಳು ಅನುಕ್ರಮವಾಗಿ ನಲಕೂಬರ ಮತ್ತು ಮಣಿಗ್ರೀವ ಎಂಬ ಹೆಸರುಗಳಿಂದ ವಿಖ್ಯಾತರಾಗಿದ್ದರು. ಅವರಲ್ಲಿ ಅಪಾರವಾದ ಐಶ್ವರ್ಯವಿದ್ದಿತು. ಸೌಂದರ್ಯವಿದ್ದಿತು. ಅದರ ಜೊತೆಗೆ ಅಹಂಕಾರವೂ ಇದ್ದುದರಿಂದ ಮಹರ್ಷಿಗಳಾದ ನಾರದರ ಶಾಪಕ್ಕೆ ಗುರಿಯಾಗಿ ಅವರು ಒಂದು ಜೋಡಿ ಮತ್ತಿಯ ಮರಗಳಾಗಿ ಜನ್ಮತಾಳಿದ್ದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೯ನೆಯ ಅಧ್ಯಾಯವು ಮುಗಿಯಿತು.

–––

ದಶಮಸ್ಕಂಧ ೧೦ನೆಯ ಅಧ್ಯಾಯ

## ಶ್ರೀಕೃಷ್ಣನು ಮತ್ತಿಮರಗಳನ್ನು ಉರುಳಿಸಿದುದು

ಪರೀಕ್ಷಿದ್ರಾಜನು ಕೇಳುತ್ತಾನೆ :

**ಕಥ್ಯತಾಂ ಭಗವನ್ನೇತತ್ತಯೋಃ ಶಾಪಸ್ಯ ಕಾರಣಮ್ ।**
**ಯತ್ತದ್ವಿಗರ್ಹಿತಂ ಕರ್ಮ ಯೇನ ವಾ ದೇವರ್ಷೇಸ್ತಮಃ ॥೧॥**

"ಪೂಜ್ಯರೇ! ಕುಬೇರನ ಮಕ್ಕಳಾದ ನಲಕೂಬರ-ಮಣಿಗ್ರೀವರಿಗೆ ಶಾಪಬಂದುದರ ಕಾರಣವನ್ನು ದಯಮಾಡಿ ಹೇಳಿರಿ. ಕ್ಷಾಂತರಾದ ನಾರದರಿಗೂ ಕೋಪಬರುವಂತಹ ಅತಿಕುತ್ಸಿತವಾದ ಯಾವ ಕಾರ್ಯವನ್ನು ಅವರು ಮಾಡಿದರು? ಈ ವಿಷಯವನ್ನು ತಿಳಿಯಬೇಕೆಂದಿರುತ್ತೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಮಹಾರಾಜ! ನಲಕೂಬರ ಮತ್ತು ಮಣಿಗ್ರೀವರು ಕುಬೇರನ ಮಕ್ಕಳಾಗಿದ್ದರಲ್ಲದೇ ಈಶ್ವರನ ಅನುಚರರೂ ಆಗಿದ್ದರು. ಇದರಿಂದ ಅವರು ಅತ್ಯಂತ ದರ್ಪಿಷ್ಠರಾಗಿದ್ದರು. ಹೀಗೆಯೇ ಇರುತ್ತಿರಲಾಗಿ ಅವರಿಬ್ಬರೂ ಒಂದು ದಿನ ಮಂದಾಕಿನೀನದಿಯ ತೀರದಲ್ಲಿದ್ದ ಕೈಲಾಸದ ರಮಣೀಯವಾದ ಉಪವನದಲ್ಲಿ ವಾರುಣೀ ಎಂಬ ಮದಿರೆಯನ್ನು ಕುಡಿದು ಮದೋನ್ಮತ್ತರಾಗಿ ಸಂಚರಿಸುತ್ತಿದ್ದರು. ಮದಿರೆಯ ಪಾನಮಾಡಿ ಅಮಲಿನಲ್ಲಿದ್ದ ಅವರ ಕಣ್ಣುಗಳು ತಿರುಗುತ್ತಿದ್ದುವು. ತಮ್ಮನ್ನು ನಾನಾಪ್ರಕಾರವಾಗಿ ಸ್ತೋತ್ರಮಾಡುತ್ತಿದ್ದ ಸ್ತ್ರೀಯರಿಂದೊಡಗೂಡಿ, ಪುಷ್ಪಭರಿತವಾಗಿದ್ದ ಆ ವನದಲ್ಲಿ ಕುಬೇರನ ಮಕ್ಕಳು ವಿಹರಿಸುತ್ತಿದ್ದರು. ಬಳಿಕ ಅವರು ಕೆಂದಾವರೆಗಳಿಂದ ಮಂಡಿತವಾಗಿದ್ದ ಗಂಗಾನದಿಯ ನೀರಿನಲ್ಲಿಳಿದು ಸ್ತ್ರೀಯರೊಡನೆ–ಗಂಡಾನೆಗಳು ಹೆಣ್ಣಾನೆಗಳೊಡನೆ ರಮಿಸುವಂತೆ–ಜಲಕ್ರೀಡೆಯಾಡುತ್ತಿದ್ದರು.

ಮಹಾರಾಜ! ಕಾಲಕರ್ಮಸಂಯೋಗದಿಂದ ಅದೇ ಸಮಯದಲ್ಲಿ ಅದೇ ಮಾರ್ಗವಾಗಿ ಮಹರ್ಷಿಗಳಾದ ನಾರದರು ಆಗಮಿಸಿದರು. ಸ್ತ್ರೀಯರೊಡನೆ ಜಲಕ್ರೀಡೆಯಾಡುತ್ತಿದ್ದ ಆ ಯುವಕರನ್ನು ನೋಡಿ, ಅವರು

ಮದೋನ್ಮತ್ತರಾಗಿರುವರೆಂಬುದನ್ನು ನಾರದರು ತಿಳಿದುಕೊಂಡರು. ನಾರದ ಮಹರ್ಷಿಗಳನ್ನು ಕಂಡೊಡನೆಯೇ ನಗ್ನರಾಗಿದ್ದ ಅಪ್ಸರೆಯರು ನಾಚಿಕೆ ಗೊಂಡು ಮಹರ್ಷಿಗಳು ಶಾಪಕೊಟ್ಟಾರೆಂಬ ಭಯದಿಂದ ಬೇಗ-ಬೇಗನೆ ತಮ್ಮ-ತಮ್ಮ ಸೀರೆಗಳನ್ನುಟ್ಟುಕೊಂಡರು. ಆದರೆ ನಲಕೂಬರ-ಮಣಿ ಗ್ರೀವರು ಮಾತ್ರ ನಾರದರನ್ನು ನೋಡಿದರೂ ವಿಚಲಿತರಾಗಲಿಲ್ಲ. ನಗ್ನ ರಾಗಿಯೇ ಇದ್ದುಬಿಟ್ಟರು.

ಮದಿರೆಯನ್ನು ಮಿತಿಮೀರಿ ಕುಡಿದು ಉನ್ಮತ್ತರಾಗಿದ್ದ, ಸಂಪತ್ಸಮೃದ್ಧಿಯ ಮದದಿಂದ ಕುರುಡರಂತಾಗಿದ್ದ ಕುಬೇರನ ಮಕ್ಕಳಾದ ನಲಕೂಬರ-ಮಣಿಗ್ರೀವರನ್ನು ನೋಡಿ ಅವರನ್ನು ಅನುಗ್ರಹಿಸಬೇಕೆಂಬ ಕಾರಣದಿಂದಲೇ ನಾರದರು ಶಾಪಕೊಡುತ್ತಾ ಹೇಳಿದರು :

**ನ ಹ್ಯನ್ಯೋ ಜುಷತೋ ಜೋಷ್ಯಾನ್ಬುದ್ಧಿಭ್ರಂಶೋ ರಜೋಗುಣಃ ।**
**ಶ್ರೀಮದಾದಾಭಿಜಾತ್ಯಾದಿರ್ಯತ್ರ ಸ್ತ್ರೀ ದ್ಯೂತಮಾಸವಃ ॥೮॥**

“ಇಂದ್ರಿಯಗಳಿಗೆ ಪ್ರಿಯವಾದ ವಿಷಯಗಳಲ್ಲಿ ಆಸಕ್ತನಾಗಿರುವ ಮನುಷ್ಯನಿಗೆ ಬುದ್ಧಿಯನ್ನು ಸಂಪೂರ್ಣವಾಗಿ ಹಾಳುಮಾಡುವುದೆಂದರೆ ವಿಶೇಷವಾಗಿ ಧನಮದವೇ ಆಗಿದೆ. ರಜೋಗುಣಕ್ಕೆ ಸಂಬಂಧಿಸಿದ ಹಿಂಸೆಯೇ ಮುಂತಾದ ಕಾರ್ಯಗಳಿಂದಾಗಲೀ, ವಿದ್ಯಾಮದದಿಂದಾಗಲೀ, ಕುಲಮದ ದಿಂದಾಗಲೀ, ರೂಪಿನ ಮದದಿಂದಾಗಲೀ ಅಷ್ಟುಮಟ್ಟಿಗೆ ಬುದ್ಧಿಯು ಹಾಳಾಗುವುದಿಲ್ಲ. ಧನಮದದ ಜೊತೆಯಲ್ಲೇ ಸೇರಿಬರುವ ದುರ್ವ್ಯಸನ ಗಳೆಂದರೆ ಜೂಜಾಟ, ಮದ್ಯಪಾನ, ಸ್ತ್ರೀಸಂಗಗಳು. ಆದುದರಿಂದ ಧನ ಮದವೇ ಎಲ್ಲ ಮದಗಳಿಗಿಂತಲೂ ಹೆಚ್ಚಾಗಿ ಬುದ್ಧಿಯನ್ನು ಹಾಳು ಮಾಡುತ್ತದೆ.*

---

* ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ ।
ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಮ್ ॥

ಎಂಬಂತೆ ಈ ಕುಬೇರನ ಪುತ್ರರಲ್ಲಿ ಯೌವನ, ಧನಸಂಪತ್ತು, ಅಧಿಕಾರ ಮತ್ತು ಮದಿರಾಪಾನದಿಂದುಂಟಾದ ಅವಿವೇಕ–ಎಂಬ ಅನರ್ಥಕಾರಣಗಳೆಲ್ಲವೂ ಇದ್ದುವು. ಅವುಗಳಲ್ಲಿಯೂ ಅತಿಮುಖ್ಯವಾಗಿದ್ದುದು ಧನಸಂಪತ್ತು. ಕಾಲಾನುಕ್ರಮವಾಗಿ ಯೌವನಮದ ಅಧಿಕಾರಮದಗಳು ಹೋಗಿಬಿಡಬಹುದು. ಧನಮದವು ಹೋಗುವುದಿಲ್ಲ.

**ಹನ್ಯನ್ತೇ ಪಶವೋ ಯತ್ರ ನಿರ್ದಯೈರಜಿತಾತ್ಮಭಿಃ ।**
**ಮನ್ಯಮಾನೈರಿಮಂ ದೇಹಮಜರಾಮೃತ್ಯು ನಶ್ವರಮ್ ॥೯॥**

ಧನಮದದಿಂದ ಕೊಬ್ಬಿರತಕ್ಕವರು ನಶ್ವರವಾದ ಈ ದೇಹವನ್ನೇ ಅಜರವಾದುದೆಂದೂ ಅಮರವಾದುದೆಂದೂ (ಮುಪ್ಪು-ಸಾವುಗಳಿಲ್ಲದ್ದೆಂದೂ) ಭಾವಿಸಿಕೊಂಡಿರುತ್ತಾರೆ. ಮನೋನಿಗ್ರಹವೆಂದರೇನೆಂಬುದೇ ಇವರಿಗೆ ತಿಳಿದಿರುವುದಿಲ್ಲ. ಇಂದ್ರಿಯಗಳು ಕುಣಿಸಿದಂತೆ ಕುಣಿಯುತ್ತಿರುತ್ತಾರೆ. ಅಭಕ್ಷ್ಯಭೋಜನವನ್ನು ಮಾಡುತ್ತಾರೆ. ಮಾಂಸವನ್ನೂ ಯಥೇಚ್ಛವಾಗಿ ತಿನ್ನುತ್ತಾರೆ. ಇವರ ಜಿಹ್ವಾಚಾಪಲ್ಯದ ತೃಪ್ತಿಗಾಗಿ ನಿರ್ದಯರಾದ ಕ್ರೂರಿಗಳಾದ ಇವರಿಂದ ಅಥವಾ ಇವರ ಸಲುವಾಗಿ ಹಲವಾರು ಪ್ರಾಣಿಗಳು ಕೊಲ್ಲಲ್ಪಡುತ್ತವೆ.

**ದೇವಸಂಜ್ಞಿತಮಪ್ಯನ್ತೇ ಕೃಮಿವಿಡ್ಭಸ್ಮಸಂಜ್ಞಿತಮ್ ।**
**ಭೂತಧ್ರುಕ್ತತ್ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ ॥೧೦॥**

ಅಯ್ಯೋ! ಯಾವ ಶರೀರವನ್ನು 'ಭೂದೇವ' 'ನರದೇವ' 'ರಾಜ' 'ಮಹಾರಾಜ'–ಮುಂತಾಗಿ ಕೊಂಡಾಡುವರೋ ಅಂತಹ ಶರೀರಕ್ಕೆ ಯಾವ ಅವಸ್ಥೆಯುಂಟಾಗುತ್ತದೆ? ಪ್ರಾಣಪಕ್ಷಿಯು ಹಾರಿಹೋದೊಡನೆಯೇ ಶರೀರದಲ್ಲಿ ಹುಳುಬೀಳುತ್ತದೆ. ಶರೀರವು ಹುಳುಗಳ ಮಯವೇ ಆಗಿಬಿಡುತ್ತದೆ. ಶರೀರವು ಆ ಹುಳುಗಳ ವಿಷ್ಠೆಯಾಗಿ ಪರಿಣಮಿಸುತ್ತದೆ. ಅಥವಾ ಸುಟ್ಟುಹಾಕುವುದರಿಂದ ಭಸ್ಮವಾಗಿಬಿಡುತ್ತದೆ. ಅಂತಹ ದುರವಸ್ಥೆಯನ್ನು ಹೊಂದುವ ಶರೀರದ ವೈಭವಕ್ಕಾಗಿ ಪ್ರಾಣಿಗಳಿಗೆ ದ್ರೋಹವೆಸಗುವವನು ಎಂತಹ ಸ್ವಾರ್ಥವನ್ನು ಸಾಧಿಸಬಲ್ಲನು? ಪ್ರಾಣಿಗಳಿಗೆ ದ್ರೋಹವೆಸಗುವುದರಿಂದ, ಜಿಹ್ವಾಚಾಪಲ್ಯಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವುದರಿಂದ ನರಕಕ್ಕೆ ಹೋಗುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ.

**ದೇಹಃ ಕಿಮನ್ನದಾತುಃ ಸ್ವಂ ನಿಷೇಕ್ತುರ್ಮಾತುರೇವ ಚ ।**
**ಮಾತುಃ ಪಿತುರ್ವಾ ಬಲಿನಃ ಕ್ರೇತುರಗ್ನೇಃ ಶುನೋಽಪಿ ವಾ ॥೧೧॥**

ನಶ್ವರವಾದ ಈ ಶರೀರವು ಯಾರದೆಂಬುದನ್ನಾದರೂ ನಿರ್ಧರಿಸಲು ಸಾಧ್ಯವಿರುವುದೇ? ಅನ್ನವಿಟ್ಟು ಪೋಷಿಸಿದವರದ್ದೇ ಈ ಶರೀರ?

ಗರ್ಭಾಧಾನಮಾಡಿದ ತಂದೆಗೆ ಸೇರಿದ್ದೇ ಅಥವಾ ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಯದೇ? ತಾಯಿಯ ಜನ್ಮಕ್ಕೆ ಕಾರಣನಾದ ತಾತನದೇ? ಬಲಾತ್ಕಾರವಾಗಿ ಜೀತಮಾಡಿಸಿಕೊಳ್ಳುವ ಯಜಮಾನನದೇ? ಗುಲಾಮನಂತೆ ಮನುಷ್ಯನನ್ನು ಕ್ರಯಕ್ಕೆ ಕೊಂಡುಕೊಂಡವನದೇ? ಅಥವಾ ಅಂತಿಮವಾಗಿ ಆಶ್ರಯವನ್ನು ನೀಡುವ ಚಿತಾಗ್ನಿಯದೇ? ಇಂತಹ ಮೃತಶರೀರಗಳನ್ನೇ ತಿನ್ನಲು ಕಾದುಕುಳಿತಿರುವ ನಾಯಿ-ನರಿಗಳದ್ದೇ? ತಾನು ಯಾರಿಗೆ ಸೇರಿದವನೆಂದೇ ನಿರ್ಧರಿಸಿಕೊಳ್ಳಲಾಗದ ಮನುಷ್ಯನು ತನ್ನ ಶರೀರದ ಪೋಷಣೆಗಾಗಿ ಅನ್ಯಪ್ರಾಣಿಯನ್ನು ಕೊಂದು ಅದರ ಮಾಂಸವನ್ನು ಭಕ್ಷಿಸುತ್ತಾನಲ್ಲಾ! ಎಂತಹ ಕ್ರೌರ್ಯವಿದು!

**ಏವಂ ಸಾಧಾರಣಂ ದೇಹಮವ್ಯಕ್ತಪ್ರಭವಾಪ್ಯಯಮ್ ।**
**ಕೋ ವಿದ್ವಾನಾತ್ಮಸಾತ್ಕೃತ್ವಾ ಹನ್ತಿ ಜನ್ತೂನೃತೇಽಸತಃ ॥೧೨॥**

ನಿಶ್ಚಯವಾಗಿ ಹೇಳುವುದಾದರೆ ಈ ದೇಹವು ಸಾಧಾರಣವಾದ ಒಂದು ವಸ್ತುವಾಗಿದೆ. ಅವ್ಯಕ್ತಪ್ರಕೃತಿಯಿಂದಲೇ ಹುಟ್ಟಿ ಅವ್ಯಕ್ತದಲ್ಲೇ ಸೇರಿ ಕೊಳ್ಳುತ್ತದೆ. ಯಾವ ವಿದ್ವಾಂಸನು ತಾನೇ ಇಂತಹ ನಶ್ವರವಾದ ದೇಹವನ್ನು ತನ್ನದೆಂಬುದಾಗಿ ಭಾವಿಸಿಕೊಂಡು ಅದರ ಪೋಷಣೆಗಾಗಿ ತನ್ನಂತೆಯೇ ಇರುವ ಇತರ ಪ್ರಾಣಿಗಳನ್ನು ವಧಿಸುತ್ತಾನೆ? ಅಸತ್ಪುರುಷರಲ್ಲದೆ ಬೇರಾರೂ ಹೀಗೆ ಮಾಡುವುದಿಲ್ಲ.

**ಅಸತಃ ಶ್ರೀಮದಾನ್ಧಸ್ಯ ದಾರಿದ್ರ್ಯಂ ಪರಮಞ್ಜನಮ್ ।**
**ಆತ್ಮೌಪಮ್ಯೇನ ಭೂತಾನಿ ದರಿದ್ರಃ ಪರಮೀಕ್ಷತೇ ॥೧೩॥**

ಧನಮದದಿಂದ ಪರಮದುಷ್ಟನಾಗಿರುವವನ ಕಣ್ಣುತೆರೆಸಲು ದಾರಿದ್ರ್ಯವೆಂಬುದೇ ಶ್ರೇಷ್ಠವಾದ ಅಂಜನವಾಗಿದೆ. ಏಕೆಂದರೆ ದರಿದ್ರನಾದ ವನು ಇತರ ಪ್ರಾಣಿಗಳನ್ನು ತನ್ನಂತೆಯೇ ಇರುತ್ತವೆಯೆಂದು ಭಾವಿಸಿ ಕೊಂಡಿರುತ್ತಾನೆ. ಆದುದರಿಂದ ಅವುಗಳನ್ನು ಹಿಂಸಿಸಹೋಗುವುದಿಲ್ಲ.

**ಯಥಾ ಕಣ್ಟಕವಿದ್ಧಾಙ್ಗೋ ಜನ್ತೋರ್ನೇಚ್ಛತಿ ತಾಂ ವ್ಯಥಾಮ್ ।**
**ಜೀವಸಾಮ್ಯಂ ಗತೋ ಲಿಙ್ಗೈರ್ನ ತಥಾವಿದ್ಧಕಣ್ಟಕಃ ॥೧೪॥**

ಯಾವನ ಕಾಲಿಗೆ ಒಮ್ಮೆ ಮುಳ್ಳುಚುಚ್ಚಿದ್ದಿತೋ ಮತ್ತು ಅದರ

ಯಾತನೆಯನ್ನು ಸಂಪೂರ್ಣವಾಗಿ ಅನುಭವಿಸಿದ್ದನೋ ಅಂತಹವನು ಇತರರ ಕಾಲಿಗೂ ಮುಳ್ಳುಚುಚ್ಚಬಾರದೆಂದು ಅಪೇಕ್ಷಿಸುತ್ತಾನೆ. ಏಕೆಂದರೆ ಮುಳ್ಳು ಚುಚ್ಚುವುದರಿಂದಾಗುವ ನೋವು-ಕಷ್ಟಗಳನ್ನು ಅವನು ಅನುಭವಿಸಿದ್ದಾನೆ. ಆದರೆ ಮುಳ್ಳುಚುಚ್ಚದೇ ಇರುವವನಿಗೆ, ಅದರ ಯಾತನೆಯನ್ನು ಅನುಭವಿಸದೇ ಇರುವವನಿಗೆ ಹಾಗೆ ಅನಿಸುವುದಿಲ್ಲ.

**ದರಿದ್ರೋ ನಿರಹಂಸ್ತಮ್ಭೋ ಮುಕ್ತಃ ಸರ್ವಮದೈರಿಹ ।**
**ಕೃಚ್ಛ್ರಂ ಯದೃಚ್ಛಯಾಪ್ನೋತಿ ತದ್ಧಿ ತಸ್ಯ ಪರಂ ತಪಃ ॥೧೫॥**

ದರಿದ್ರನಲ್ಲಿ ಯಾವುದೇ ಅಹಂಕಾರವಾಗಲೀ ಮದವಾಗಲೀ ಇರುವುದಿಲ್ಲ. ಅವನು ಎಲ್ಲ ವಿಧವಾದ ಮದಗಳಿಂದಲೂ ಮುಕ್ತನಾಗಿರುತ್ತಾನೆ. ದೈವವಶಾತ್ ಅವನಿಗೆ ಕಷ್ಟಗಳೂ ಒದಗಿಬರುತ್ತಲೇ ಇರುತ್ತವೆ. ಅವೆಲ್ಲವನ್ನೂ ಅವನು ಅನುಭವಿಸುತ್ತಲೇ ಇರುತ್ತಾನೆ. ಅದೇ ಅವನಿಗೆ ಒಂದು ತಪಸ್ಸಾಗಿರುತ್ತದೆ.*

**ನಿತ್ಯಂ ಕ್ಷುತ್ಕ್ಷಾಮದೇಹಸ್ಯ ದರಿದ್ರಸ್ಯಾನ್ನಕಾಂಕ್ಷಿಣಃ ।**
**ಇನ್ದ್ರಿಯಾಣ್ಯನುಶುಷ್ಯನ್ತಿ ಹಿಂಸಾಪಿ ವಿನಿವರ್ತತೇ ॥೧೬॥**

ದರಿದ್ರನಾದವನು ಹೊಟ್ಟೆಪಾಡಿಗಾಗಿಯೇ ಒದ್ದಾಡುತ್ತಿರುತ್ತಾನೆ. ಹಸಿವಿನಿಂದಲೇ ಅವನ ಶರೀರವು ಕೃಶವಾಗಿಹೋಗಿರುತ್ತದೆ. ಕೃಶಹೊಂದಿದ ಅವನ ಇಂದ್ರಿಯಗಳೂ ವಿಷಯಸುಖಗಳನ್ನು ಬಯಸುವುದಿಲ್ಲ. ದರಿದ್ರನಾದವನು ನಾಲಿಗೆಯ ಚಾಪಲ್ಯಕ್ಕಾಗಿ ಇತರಪ್ರಾಣಿಗಳನ್ನು ಹಿಂಸಿಸಹೋಗುವುದಿಲ್ಲ. ಅವನಿಗೆ ಮಾಂಸವನ್ನು ತಿನ್ನಬೇಕೆನ್ನುವ ಅಭಿಲಾಷೆಯೇ ಉಂಟಾಗುವುದಿಲ್ಲ.

**ದರಿದ್ರಸ್ಯೈವ ಯುಜ್ಯನ್ತೇ ಸಾಧವಃ ಸಮದರ್ಶಿನಃ ।**
**ಸದ್ಭಿಃ ಕ್ಷಿಣೋತಿ ತಂ ತರ್ಷಂ ತತ ಆರಾದಿಶುದ್ಧ್ಯತಿ ॥೧೭॥**

ಸಾಧುಗಳು ಯದ್ಯಪಿ ಸಮದರ್ಶಿಗಳಾಗಿದ್ದರೂ ಬಡವರು-ಬಲ್ಲಿದರೆಂಬ

---

* ಜೀವನದಲ್ಲಿ ಬರುವ ಕಷ್ಟಗಳನ್ನು ತಪಸ್ಸೆಂಬ ಭಾವನೆಯಿಂದ ಅನುಭವಿಸಿದರೆ ಕಾಯಕ್ಲೇಶಾದಿಗಳಿಂದ ಅರಣ್ಯದಲ್ಲಿ ತಪಸ್ಸುಮಾಡಿದ ಫಲವೇ ಬರುತ್ತದೆ. ಇದು ಮೀಮಾಂಸಕರ ಮತ.

ಭೇದವು ಅವರಿಗಿಲ್ಲದಿದ್ದರೂ ದರಿದ್ರರಾದವರಿಗೆ ಸಾಧುಸಮಾಗಮವು ಬಹಳ ಸುಲಭವಾಗಿ ಆಗುತ್ತದೆ. ಏಕೆಂದರೆ ದರಿದ್ರರಾದವರಿಗೆ ಭೋಗಾದಿಗಳು ಇರುವುದೇ ಇಲ್ಲ. ಆಸೆಯೆಂಬುದೊಂದಿರುತ್ತದೆ. ಸಾಧುಸಮಾಗಮದಿಂದ ಆ ತೃಷ್ಣೆಯೂ ಹೋಗಿ ಅವರ ಮನಸ್ಸು ಬಹಳ ಬೇಗ ಶುದ್ಧವಾಗುತ್ತದೆ.*

**ಸಾಧೂನಾಂ ಸಮಚಿತ್ತಾನಾಂ ಮುಕುನ್ದಚರಣೈಷಿಣಾಮ್ ।**
**ಉಪೇಕ್ಷ್ಯೈಃ ಕಿಂ ಧನಸ್ತಮ್ಭೈರಸದ್ಭಿರಸದಾಶ್ರಯೈಃ ॥೧೮॥**

ಯಾವ ಸತ್ಪುರುಷರ ಬುದ್ಧಿಯು ಸರ್ವರಲ್ಲಿಯೂ ಸಮತ್ವದಿಂದಿರುವುದೋ, ಶ್ರೀಮುಕುಂದನ ಪಾದಾರವಿಂದಗಳನ್ನೇ ಯಾರು ಶರಣುಹೊಂದಿರುವರೋ-ಅಂತಹವರಿಗೆ, ಉಪೇಕ್ಷೆಗೆ ಯೋಗ್ಯರಾದ ದುಷ್ಟರಿಗೇ ಯಾವಾಗಲೂ ಆಶ್ರಯವನ್ನೀಯುವ, ಧನಮದದಿಂದಾಗಿ ಅತ್ಯಂತದುಷ್ಟರಾಗಿರತಕ್ಕವರಿಂದ ಆಗಬೇಕಾದ್ದೇನಿದೆ?

ಈ ಇಬ್ಬರು ದೇವಕುಮಾರರಿಗೂ ವಾರುಣೀಮದ್ಯವನ್ನು ಕುಡಿದು ಅಮಲೇರಿದೆ. ಧನಮದದಿಂದಲೂ ಇವರು ಕುರುಡರಾಗಿಬಿಟ್ಟಿದ್ದಾರೆ. ಇವರು ತಮ್ಮ ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಂಡಿಲ್ಲ. ಇಂದ್ರಿಯಗಳಿಗೇ ದಾಸರಾಗಿ ಸ್ತ್ರೀಲಂಪಟರಾಗಿದ್ದಾರೆ. ಇವರ ಅಜ್ಞಾನಜನಿತವಾದ ಮದವನ್ನು ವಿನಾಶಗೊಳಿಸುತ್ತೇನೆ. ಇವರು ಲೋಕಪಾಲನಾದ ಕುಬೇರನ ಮಕ್ಕಳೇ ಆಗಿದ್ದರೂ ತಮೋಗುಣಿಗಳಾಗಿ ಮದೋನ್ಮತ್ತರಾಗಿ ಬುದ್ಧಿಗೆಟ್ಟಿರುತ್ತಾರೆ. ತಾವು ಮತ್ತೊಬ್ಬನ ಸಮಕ್ಷದಲ್ಲಿ ನಗ್ನರಾಗಿರುವೆವೆಂಬ ಅರಿವೂ ಇವರಿಗಿಲ್ಲವಾಗಿದೆ. ಆದುದರಿಂದ ಇವರಿಬ್ಬರೂ ಈಗ ವೃಕ್ಷಯೋನಿಯನ್ನು ಹೊಂದಲು ಯೋಗ್ಯರಾಗಿರುತ್ತಾರೆ. ವೃಕ್ಷಗಳಾಗಿ ಹುಟ್ಟುವುದರಿಂದ ಇಂತಹ ದುರಭಿಮಾನವು ಇವರಲ್ಲಿರಲು ಸಾಧ್ಯವಾಗುವುದಿಲ್ಲ. ವೃಕ್ಷಯೋನಿಯಲ್ಲಿ

---

* ಧನಿಕರಾದವರಿಗೆ ಧನಮದ, ಧನದ ಮೇಲಿನ ಅಭಿಮಾನ ಮತ್ತು ಇನ್ನೂ ಧನಗಳಿಸಬೇಕೆನ್ನುವ ಆಸೆ-ಈ ಮೂರು ದೋಷಗಳೂ ಇರುತ್ತವೆ. ದರಿದ್ರರಿಗೆ ಧನಮದವಾಗಲೀ, ಧನದ ಮೇಲಿನ ಅಭಿಮಾನವಾಗಲೀ ಇರುವುದಿಲ್ಲ. ಇರಲೂ ಸಾಧ್ಯವಿಲ್ಲ. ಧನತೃಷ್ಣೆಯೊಂದಿರುತ್ತದೆ. ಈ ದೋಷವೂ ಸತ್ಪುರುಷರ ಸಹವಾಸದಿಂದ ಹೋಗಿಬಿಡುತ್ತದೆ.

ದ್ದರೂ ಇವರಿಗೆ ನನ್ನ ಅನುಗ್ರಹದಿಂದಾಗಿ ಭಗವಂತನ ಸ್ಮರಣೆಯಿರುತ್ತದೆ. ಪುನಃ ನನ್ನ ಅನುಗ್ರಹದಿಂದಲೇ ಇವರಿಗೆ ದೇವಮಾನದಲ್ಲಿ ನೂರು ವರ್ಷಗಳು ಕಳೆದನಂತರ ಭಗವಾನ್ ಶ್ರೀಕೃಷ್ಣನ ಸಾನ್ನಿಧ್ಯವು ಪ್ರಾಪ್ತವಾಗಿ ಶಾಪದಿಂದ ಮುಕ್ತರಾಗುತ್ತಾರೆ. ಪರಮಾತ್ಮನ ಪಾದಾರವಿಂದಗಳಲ್ಲಿ ಪರಮಭಕ್ತಿ ಯುಳ್ಳವರಾಗಿ ಈ ಇಬ್ಬರೂ ಪುನಃ ಸ್ವರ್ಗಲೋಕಕ್ಕೆ ಹೊರಟುಹೋಗು ತ್ತಾರೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ನಾರದಮಹರ್ಷಿಗಳು ಹೀಗೆ ಹೇಳಿ ಬದರಿಕಾ ವನದಲ್ಲಿದ್ದ ನರ-ನಾರಾಯಣರ ಆಶ್ರಮಕ್ಕೆ ಹೊರಟುಹೋದರು. ನಾರದರು ಹೇಳಿದಂತೆ ನಲಕೂಬರ-ಮಣಿಗ್ರೀವರಿಬ್ಬರೂ ಒಡನೆಯೇ ಮತ್ತಿಮರಗಳಾಗಿ ಹುಟ್ಟಿ ಯಮಲಾರ್ಜುನವೃಕ್ಷಗಳೆಂಬ ಹೆಸರಿನಿಂದ ಪ್ರಸಿದ್ಧರಾದರು.

ಭಾಗವತೋತ್ತಮರಾದ ನಾರದಮುನಿಗಳ ಮಾತನ್ನು ನಿಜವಾಗಿಸುವು ದಕ್ಕಾಗಿ ಭಕ್ತಪ್ರೇಮಿಯಾದ ಶ್ರೀಕೃಷ್ಣನು ಒರಳುಕಲ್ಲನ್ನು ಎಳೆದುಕೊಂಡೇ ಮೆಲ್ಲ-ಮೆಲ್ಲನೆ ಅರ್ಜುನವೃಕ್ಷಗಳ ಬಳಿಗೆ ಸಾರಿದನು.




**ದೇವರ್ಷಿರ್ಮೇ ಪ್ರಿಯತಮೋ ಯದಿಮೌ ಧನದಾತ್ಮಜೌ ।**
**ತತ್ತಥಾ ಸಾಧಯಿಷ್ಯಾಮಿ ಯದ್ಗೀತಂ ತನ್ಮಹಾತ್ಮನಾ ॥೨೫॥**

ಶ್ರೀಭಗವಂತನು ಹೀಗೆ ಯೋಚಿಸಿದನು :

"ದೇವರ್ಷಿಗಳಾದ ನಾರದರು ನನಗೆ ಅತ್ಯಂತಪ್ರಿಯರು. ಇವರಾದರೋ ನನ್ನ ಭಕ್ತನಾದ ಕುಬೇರನ ಮಕ್ಕಳಾಗಿದ್ದಾರೆ. ಆದುದರಿಂದ ಮಹಾತ್ಮರಾದ ನಾರದರು ಹೇಳಿರುವಂತೆಯೇ ಈ ಇಬ್ಬರನ್ನೂ ನಾನು ಉದ್ಧರಿಸುತ್ತೇನೆ."*

ಹೀಗೆ ಯೋಚಿಸಿದ ಶ್ರೀಕೃಷ್ಣನು ಆ ಮತ್ತಿಮರಗಳ ಮಧ್ಯದಲ್ಲಿ ನುಸುಳಿದನು. ಆದರೆ ಅವನು ಸೆಳೆದು ತರುತ್ತಿದ್ದ ಒರಳುಕಲ್ಲು ಅಡ್ಡಲಾಗಿ ಸಿಕ್ಕಿಹಾಕಿಕೊಂಡಿತು. ವೃಕ್ಷಗಳ ಮಧ್ಯದಲ್ಲಿ ನುಸುಳಿ ಹೊರಬಂದಿದ್ದ ಮುದ್ದುಕೃಷ್ಣನು ತಾನು ಸೊಂಟಕ್ಕೆ ಬಿಗಿದಿದ್ದ ಹಗ್ಗದ ಮೂಲಕವಾಗಿ ಸೆಳೆದು ತರುತ್ತಿದ್ದ ಒರಳುಕಲ್ಲು ವೃಕ್ಷಗಳ ಮಧ್ಯಭಾಗದಲ್ಲಿ ತೂರಿ ಬರಲು ಸಾಧ್ಯವಾಗದುದನ್ನು ಕಂಡು ಶ್ರೀಕೃಷ್ಣನು ಬಲಪೂರ್ವಕವಾಗಿ ಹಗ್ಗವನ್ನು ಸೆಳೆಯಲು, ವೃಕ್ಷಗಳಲ್ಲಿದ್ದ ದೊಡ್ಡ ದೊಡ್ಡ ರೆಂಬೆಗಳು, ಚಿಕ್ಕರೆಂಬೆಗಳು, ಎಲೆಗಳು, ಚಿಗುರುಗಳು ಎಲ್ಲವೂ ಕಂಪಿಸಿದುವು. ಮರುಕ್ಷಣದಲ್ಲಿಯೇ ಎರಡು ಮಹಾವೃಕ್ಷಗಳೂ ಬುಡಸಮೇತವಾಗಿ ಸಿಡಿಲಿನಂತೆ ಶಬ್ದಮಾಡುತ್ತಾ ಕೆಳಕ್ಕೆ ಬಿದ್ದುವು. ಕೆಳಕ್ಕೆ ಬಿದ್ದ ಆ ಎರಡು ಅರ್ಜುನವೃಕ್ಷಗಳಿಂದಲೂ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಇಬ್ಬರು ಪುರುಷರು ಹೊರಬಂದರು. ಅವರ ದಿವ್ಯಪ್ರಭೆಯಿಂದಾಗಿ ದಿಕ್ಕುಗಳೂ ಬೆಳಗುತ್ತಿದ್ದುವು. ಅವರಿಬ್ಬರೂ ಅಖಿಲಲೋಕನಾಥನಾದ ಪರಾತ್ಪರನಾದ ಶ್ರೀಕೃಷ್ಣಸ್ವಾಮಿಯ ಬಳಿಗೆ ಬಂದು ಅವನ ಪಾದಾರವಿಂದಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿ ಕೈಜೋಡಿಸಿಕೊಂಡು ಶುದ್ಧಹೃದಯರಾಗಿ ಬಾಲಕೃಷ್ಣನನ್ನು ಪ್ರಾರ್ಥಿಸಿದರು.

---

* ಒಬ್ಬ ಭಾವುಕರು ಶ್ರೀಕೃಷ್ಣನು ಅರ್ಜುನವೃಕ್ಷಗಳ ಬಳಿಗೆ ಬಂದುದಕ್ಕೆ ಕಾರಣವನ್ನು ಹೀಗೆ ನಿರೂಪಿಸಿದ್ದಾರೆ : ಅಪ್ರಮೇಯನಾದ ಶ್ರೀಕೃಷ್ಣನಿಗೆ ತನ್ನ ಕೃಪಾದೃಷ್ಟಿಯಿಂದಲೇ ಯಕ್ಷರಾಜಕುಮಾರರನ್ನು ಉದ್ಧರಿಸಲು ಸಾಧ್ಯವಾಗುತ್ತಿತ್ತು. ಆದರೆ ನಾರದರು 'ವಾಸುದೇವಸ್ಯ ಸಾನ್ನಿಧ್ಯಂ ಲಬ್ಧ್ವಾ' 'ವಾಸುದೇವನ ಸಾನ್ನಿಧ್ಯವನ್ನು ಪಡೆದು ಶಾಪದಿಂದ ಮುಕ್ತರಾಗುವಿರಿ'–ಎಂದು ಹೇಳಿರುವುದರಿಂದ ಶ್ರೀಕೃಷ್ಣನು ವೃಕ್ಷಗಳ ಸಮೀಪಕ್ಕೇ ಬಂದನು.

**ಕೃಷ್ಣ ಕೃಷ್ಣ ಮಹಾಯೋಗಿಂಸ್ತ್ವಮಾದ್ಯಃ ಪುರುಷಃ ಪರಃ ।**
**ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ ॥೨೯॥**



"ಸಮಸ್ತರನ್ನೂ ಆಕರ್ಷಿಸುವ ಯೋಗೇಶ್ವರನಾದ ಕೃಷ್ಣನೇ! ನೀನು ಆದಿಪುರುಷನಾಗಿರುವೆ. ಪ್ರಕೃತಿಗೆ ಅತೀತನಾಗಿ ಸ್ವಯಂ ಪುರುಷೋತ್ತಮನಾಗಿರುವೆ. ವ್ಯಕ್ತವಾದ ಮತ್ತು ಅವ್ಯಕ್ತವಾದ ಸಂಪೂರ್ಣ ಜಗತ್ತೂ ನಿನ್ನ ಸ್ವರೂಪವೆಂದು ವೇದವಿದರಾದ ಬ್ರಾಹ್ಮಣರು ಹೇಳುತ್ತಾರೆ.

**ತ್ವಮೇಕಃ ಸರ್ವಭೂತಾನಾಂ ದೇಹಾಸ್ವಾತ್ಮೇನ್ದ್ರಿಯೇಶ್ವರಃ ।**
**ತ್ವಮೇವ ಕಾಲೋ ಭಗವಾನ್ವಿಷ್ಣುರವ್ಯಯ ಈಶ್ವರಃ ॥೩೦॥**

ನೀನೇ ಸಮಸ್ತಪ್ರಾಣಿಗಳ ಶರೀರವೂ ಆಗಿರುವೆ. ಪ್ರಾಣಗಳೂ ಆಗಿರುವೆ. ಅಂತಃಕರಣವೂ ಆಗಿರುವೆ. ಪ್ರಾಣಿಗಳ ಸರ್ವೇಂದ್ರಿಯಗಳ ಸ್ವಾಮಿಯೂ ಆಗಿರುವೆ. ನೀನೇ ಕಾಲಸ್ವರೂಪನೂ, ಸರ್ವವ್ಯಾಪಕನೂ, ಅವಿನಾಶಿಯೂ ಆಗಿರುವೆ.

**ತ್ವಂ ಮಹಾನ್ಪ್ರಕೃತಿಃ ಸೂಕ್ಷ್ಮಾ ರಜಃಸತ್ತ್ವತಮೋಮಯೀ ।**
**ತ್ವಮೇವ ಪುರುಷೋಽಧ್ಯಕ್ಷಃ ಸರ್ವಕ್ಷೇತ್ರವಿಕಾರವಿತ್ ॥೩೧॥**

ನೀನು ಮಹತ್ತತ್ತ್ವವು. ಸತ್ತ್ವ-ರಜಸ್ತಮೋಗುಣಮಯವಾದ ಸೂಕ್ಷ್ಮಪ್ರಕೃತಿಯೂ ನೀನೇ ಆಗಿರುವೆ. ಸಕಲಕ್ಷೇತ್ರಗಳನ್ನೂ ಅವುಗಳ

ವಿಕಾರವನ್ನೂ ಅರಿತು ಅವುಗಳಿಗೆ ಸಾಕ್ಷೀಭೂತನಾದ ಪರಮಾತ್ಮನೂ ನೀನೇ ಆಗಿರುವೆ.

**ಗೃಹ್ಯಮಾಣೈಸ್ತ್ವಮಗ್ರಾಹ್ಯೋ ವಿಕಾರೈಃ ಪ್ರಾಕೃತೈರ್ಗುಣೈಃ ।**
**ಕೋ ನ್ವಿಹಾರ್ಹತಿ ವಿಜ್ಞಾತುಂ ಪ್ರಾಕ್ಸಿದ್ಧಂ ಗುಣಸಂವೃತಃ ॥೩೨॥**

ಪ್ರಕೃತಿಯ ವಿಕಾರಗಳಾದ, ದೃಶ್ಯಗಳಾದ ಬುದ್ಧೀಂದ್ರಿಯಾದಿಗಳಿಂದ ನೀನು ಗ್ರಹಿಸಲ್ಪಡತಕ್ಕವನಲ್ಲ. ಮನುಷ್ಯನ ಬುದ್ಧೀಂದ್ರಿಯಗಳಿಗೆ ನೀನು ಅಗೋಚರನು. ಸ್ಥೂಲ-ಸೂಕ್ಷ್ಮದೇಹಗಳಿಂದ ಸಮಾವೃತನಾಗಿರುವ ಯಾವನು ತಾನೇ ತನಗಿಂತ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವ ನಿನ್ನನ್ನು ನೋಡಬಲ್ಲನು?*

**ತಸ್ಮೈ ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।**
**ಆತ್ಮದ್ಯೋತಗುಣೈಶ್ಛನ್ನ ಮಹಿಮ್ನೇ ಬ್ರಹ್ಮಣೇ ನಮಃ ॥೩೩॥**

ಸಮಸ್ತಪ್ರಪಂಚದ ಸೃಷ್ಟಿಕರ್ತೃವಾದ ಷಾಡ್ಗುಣ್ಯಪರಿಪೂರ್ಣನಾದ ವಸುದೇವನ ಮಗನಾದ ನಿನಗೆ ನಮಸ್ಕಾರಮಾಡುತ್ತೇವೆ. ಸೂರ್ಯನು ತಾನುಂಟುಮಾಡಿದ ಮೋಡಗಳಿಂದಲೇ ಮುಚ್ಚಲ್ಪಡುವಂತೆ ಪ್ರಕೃತಿಗುಣ ಗಳಿಂದ (ಬುದ್ಧೀಂದ್ರಿಯಾದಿಗಳಿಂದ) ಮುಚ್ಚಲ್ಪಟ್ಟ ಮಹಿಮೆಯುಳ್ಳ ಪರಬ್ರಹ್ಮಸ್ವರೂಪನಾದ ನಿನಗೆ ನಮಸ್ಕರಿಸುತ್ತೇವೆ.

**ಯಸ್ಯಾವತಾರಾ ಜ್ಞಾಯನ್ತೇ ಶರೀರೇಷ್ವಶರೀರಿಣಃ ।**
**ತೈಸ್ತೈರತುಲ್ಯಾತಿಶಯೈರ್ವೀರ್ಯೈರ್ದೇಹಿಷ್ವಸಂಗತೈಃ ॥೩೪॥**

ದೇವ! ನೀನು ಪ್ರಾಕೃತಶರೀರದಿಂದ ವಿಹೀನನಾಗಿರುವೆ. ಆದರೂ ಸಾಧಾರಣಮನುಷ್ಯರಿಂದ ತೋರಿಸಲು ಅಶಕ್ಯವಾದ ಪರಾಕ್ರಮವನ್ನೂ

---

* ಪ್ರಾಕ್ಸಿದ್ಧಂ = ಜೀವಾದಿಗಳೂ ಹುಟ್ಟುವ ಮೊದಲು : ಎಂಬುದರ ತಾತ್ಪರ್ಯ ವೇನೆಂದರೆ ವೇದಾಂತಶಾಸ್ತ್ರದಲ್ಲಿ ಮಾಯಾಪ್ರತಿಫಲಿತಚೈತನ್ಯಕ್ಕೆ ಈಶ್ವರನೆಂದೂ, ಅವಿದ್ಯಾಪ್ರತಿಬಿಂಬಿತ ಚೈತನ್ಯಕ್ಕೆ ಜೀವನೆಂದೂ, ಮಾಯೆಗೆ ಕಾರಣೋಪಾಧಿಯೆಂದೂ, ಅದರ ಗುಣಗಳಾದ ಅಂತಃಕರಣಾದಿಗಳಿಗೆ ಕಾರ್ಯೋಪಾಧಿಯೆಂದೂ ಹೆಸರು. ಕಾರಣೋಪಾಧಿಯಾದ ಮಾಯೆಯು ಅನಾದಿಯಾದರೂ ಕಾರ್ಯೋಪಾಧಿಯಾದ ಅಂತಃಕರಣವು ಅನಾದಿಯಲ್ಲವಾದುದರಿಂದ ಆ ಅಂತಃಕರಣದಲ್ಲಿ ಪ್ರತಿಫಲಿಸಿದ

ಅಥವಾ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸಿದಾಗ ಮತ್ತು ಅಂತಹ ಅದ್ಭುತಕಾರ್ಯಗಳನ್ನು ಯಾರಿಂದಲೂ ಮಾಡಲು ಸಾಧ್ಯವಾಗದೇ ಇದ್ದಾಗ ನಿನ್ನ ಅವತಾರಗಳು ಜನರಿಂದ ತಿಳಿಯಲ್ಪಡುತ್ತವೆ.

**ಸ ಭವಾನ್ಸರ್ವಲೋಕಸ್ಯ ಭವಾಯ ವಿಭವಾಯ ಚ ।**
**ಅವತೀರ್ಣೋಽಂಶಭಾಗೇನ ಸಾಮ್ಪ್ರತಂ ಪತಿರಾಶಿಷಾಮ್ ॥೩೫॥**

ಪ್ರಭುವೇ! ಸಮಸ್ತ ಶ್ರೇಯಸ್ಸುಗಳಿಗೂ ಪಾಲಕನಾದ ನೀನು ಸಮಸ್ತಲೋಕಗಳಿಗೂ ಅಭ್ಯುದಯವನ್ನೂ ನಿಃಶ್ರೇಯಸ್ಸನ್ನೂ ದಯಪಾಲಿಸುವುದಕ್ಕಾಗಿ ಅಂಶರೂಪದಿಂದ ಶ್ರೀಕೃಷ್ಣನಾಗಿ ಅವತರಿಸಿರುವೆ.

**ನಮಃ ಪರಮಕಲ್ಯಾಣ ನಮಃ ಪರಮಮಙ್ಗಲ ।**
**ವಾಸುದೇವಾಯ ಶಾನ್ತಾಯ ಯದೂನಾಂ ಪತಯೇ ನಮಃ ॥೩೬॥**

ಪರಮಕಲ್ಯಾಣಸ್ವರೂಪನೇ! ದಿವ್ಯಮಂಗಳವಿಗ್ರಹನೇ! ಮಂಗಳ ಸ್ವರೂಪನೇ! ನಿನಗೆ ನಮಸ್ಕರಿಸುತ್ತೇವೆ. ಶಾಂತಾತ್ಮನೇ! ಯದುಪತಿಯೇ! ವಾಸುದೇವನೇ! ನಿನಗೆ ನಮಸ್ಕರಿಸುತ್ತೇವೆ.

**ಅನುಜಾನೀಹಿ ನೌ ಭೂಮಂಸ್ತವಾನುಚರಕಿಂಕರೌ ।**
**ದರ್ಶನಂ ನೌ ಭಗವತ ಋಷೇರಾಸೀದನುಗ್ರಹಾತ್ ॥೩೭॥**

ಅನಂತನೇ! ಸರ್ವವ್ಯಾಪಕನೇ! ನಾವು ನಿನ್ನ ದಾಸಾನುದಾಸರಾಗಿದ್ದೇವೆ. ನಮ್ಮನ್ನು ನಿನ್ನ ಅನುಚರರಾಗಿಯೂ, ದಾಸರಾಗಿಯೂ ಇರುವಂತೆ ಅನುಮತಿಸು. ಮಹರ್ಷಿಗಳಾದ ನಾರದಮುನಿಗಳ ಪರಮಾನುಗ್ರಹದಿಂದಾಗಿ ಅಪರಾಧಿಗಳಾಗಿದ್ದ ನಮಗೆ ನಿನ್ನ ದಿವ್ಯದರ್ಶನವಾಯಿತು.

**ವಾಣೀ ಗುಣಾನುಕಥನೇ ಶ್ರವಣೌ ಕಥಾಯಾಂ**
**ಹಸ್ತೌ ಚ ಕರ್ಮಸು ಮನಸ್ತವ ಪಾದಯೋರ್ನಃ ।**

---

ಚೈತನ್ಯವೇ ಚಿದಾಭಾಸವೆನಿಸಿ ಜೀವನೆಂದು ಕರೆಯಲ್ಪಡುವ ಕಾರಣ ಜೀವನಿಗೆ ಉಪಾಧಿಯಾದ ಅಂತಃಕರಣದ ಉತ್ಪತ್ತಿಯೇ ಔಪಚಾರಿಕವಾಗಿ ಜೀವನಲ್ಲಿ ಆರೋಪಿಸಲ್ಪಡುವುದೇ ಹೊರತು ದಿಟವಾಗಿ ಜೀವರಿಗೆ ಉತ್ಪತ್ತಿಯಿಲ್ಲವೆಂದು ತಿಳಿಯಬೇಕು. (ಭಾವಾರ್ಥದೀಪಿಕ)

**ಸ್ಮೃತ್ಯಾಂ ಶಿರಸ್ತವ ನಿವಾಸಜಗತ್ಪ್ರಣಾಮೇ**
**ದೃಷ್ಟಿಃ ಸತಾಂ ದರ್ಶನೇಽಸ್ತು ಭವತ್ತನೂನಾಮ್ ॥**

ಪ್ರಭುವೇ! ನಮ್ಮ ನಾಲಿಗೆಯಿಂದ ಹೊರಡುವ ಮಾತು ಯಾವಾಗಲೂ ಮಂಗಳಮಯವಾದ ನಿನ್ನ ಗುಣಗಳನ್ನೇ ವರ್ಣಿಸುತ್ತಿರಲಿ. ನಮ್ಮ ಕಿವಿಗಳು ಯಾವಾಗಲೂ ರಸವತ್ತಾದ, ಪರಮಾದ್ಭುತವಾದ, ಪಾಪಹಾರಕವಾದ ನಿನ್ನ ಕಥೆಗಳನ್ನೇ ಕೇಳುತ್ತಿರಲಿ. ನಮ್ಮ ಕೈಗಳು ಯಾವಾಗಲೂ ನಿನ್ನ ಪೂಜೆಯಲ್ಲೇ ತೊಡಗಿರಲಿ. ನಮ್ಮ ಮನಸ್ಸು ಯಾವಾಗಲೂ ನಿನ್ನ ದಿವ್ಯಚರಣಕಮಲಗಳನ್ನೇ ಸ್ಮರಿಸುತ್ತಿರಲಿ. ನಮ್ಮ ತಲೆಯು ಯಾವಾಗಲೂ ನಿನಗೆ ನಿವಾಸಭೂತವಾದ ಜಗತ್ತನ್ನು ನಮಿಸುತ್ತಿರಲಿ. ನಮ್ಮ ದೃಷ್ಟಿಯು ಯಾವಾಗಲೂ ನಿನ್ನ ಶರೀರಸ್ವರೂಪರಾದ ಸತ್ಪುರುಷರ ದರ್ಶನದಲ್ಲಿಯೇ ಆಸಕ್ತವಾಗಲಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕುಬೇರನ ಪುತ್ರರಾದ ನಲಕೂಬರ-ಮಣಿಗ್ರೀವರು ಹೀಗೆ ಸ್ತೋತ್ರಮಾಡಲು ಸೌಂದರ್ಯನಿಧಿಯೂ, ಮಾಧುರ್ಯನಿಧಿಯೂ, ಗೋಕುಲೇಶ್ವರನೂ ಆದ, ಹಗ್ಗದಿಂದ ಒರಳು ಕಲ್ಲಿಗೆ ಕಟ್ಟಿಹಾಕಲ್ಪಟ್ಟಿದ್ದ ಶ್ರೀಕೃಷ್ಣನು ನಸುನಗುತ್ತಾ ಹೇಳಿದನು.*

"ಗುಹ್ಯಕರೇ! ನೀವು ಧನಮದದಿಂದ ಕುರುಡರಾಗಿಬಿಟ್ಟಿದ್ದಿರಿ. ಪರಮಕಾರುಣಿಕರಾದ ನಾರದಮಹರ್ಷಿಗಳು ನಿಮಗೆ ಶಾಪವನ್ನು ಕೊಟ್ಟು ನಿಮ್ಮ ಐಶ್ವರ್ಯವನ್ನು ವಿನಾಶಗೊಳಿಸಿದರು. ಆದರೂ ಕೃಪಾವಿಷ್ಟರಾಗಿ ನನ್ನ ಸಾನ್ನಿಧ್ಯವು ಸಿಕ್ಕಿ ಶಾಪದಿಂದ ಮುಕ್ತರಾಗುವಂತೆ ಅನುಗ್ರಹವನ್ನೂ ಮಾಡಿದರು. ನನಗೆ ಈ ಹಿಂದೆಯೇ ಈ ವಿಷಯವು ತಿಳಿದಿದ್ದಿತು.

---

* ಯಾಕಪ್ಪ ಕೃಷ್ಣ ನಕ್ಕ?—ಎಂಬುದಕ್ಕೆ ಭಾವುಕರೊಬ್ಬರು ಹೀಗೆ ಸಮಾಧಾನ ಹೇಳಿ ದ್ದಾರೆ. 'ನಾನು ಯಾವಾಗಲೂ ಮುಕ್ತನು. ನನ್ನ ಮಾಯಾಪಾಶದಿಂದ ಬಂಧಿಸಲ್ಪಟ್ಟಿರುವ ಜೀವಿಗಳು ಯಾವಾಗಲೂ ನನ್ನ ಸ್ತೋತ್ರಮಾಡುತ್ತಾರೆ. ಆದರೆ ಈಗ ಅದಕ್ಕೆ ವಿಪರೀತವಾಗಿದೆ. ನಾನು ಕಟ್ಟಿಹಾಕಲ್ಪಟ್ಟಿದ್ದೇನೆ. ಗುಹ್ಯಕರು ಮುಕ್ತರಾಗಿ ನನ್ನ ಸ್ತೋತ್ರಮಾಡುತ್ತಿದ್ದಾರೆ.' ಹೀಗೆ ಭಾವಿಸಿ ಕೃಷ್ಣನು ನಕ್ಕನಂತೆ.

**ಸಾಧೂನಾಂ ಸಮಚಿತ್ತಾನಾಂ ಸುತರಾಂ ಮತ್ಕೃತಾತ್ಮನಾಮ್ ।**
**ದರ್ಶನಾನ್ಮೇ ಭವೇದ್ಬನ್ಧಃ ಪುಂಸೋಽಕ್ಷ್ಣೋಃ ಸವಿತುರ್ಯಥಾ ॥**

ಯಾರಿಗೆ ಸರ್ವತ್ರ ಸಮಬುದ್ಧಿಯಿರುತ್ತದೆಯೋ ಯಾರು ನನ್ನಲ್ಲಿಯೇ ಲೀನವಾದ ಮನಸ್ಸುಳ್ಳವರಾಗಿರುವರೋ ಅಂತಹ ಸತ್ಪುರುಷರ ದರ್ಶನ ಮಾತ್ರದಿಂದಲೇ ಸಮಸ್ತವಾದ ಬಂಧನಗಳೂ–ಸೂರ್ಯನುದಯಿಸಿದೊಡನೆಯೇ ಮನುಷ್ಯರ ಕಣ್ಣುಗಳಿಂದ ಕತ್ತಲೆಯು ದೂರವಾಗಿ ಬಿಡುವಂತೆ–ದೂರವಾಗಿ ಬಿಡುತ್ತವೆ. ನಲಕೂಬರ-ಮಣಿಗ್ರೀವರೇ! ನಿಮ್ಮ ಆಶಯದಂತೆ ಸಂಸಾರಬಂಧನದಿಂದ ಮುಕ್ತಗೊಳಿಸುವ ಪರಮಪ್ರೇಮಯುಕ್ತವಾದ, ಅನನ್ಯವಾದ ಭಕ್ತಿಭಾವವು ನಿಮ್ಮಲ್ಲುಂಟಾಗಿದೆ. ನೀವು ನನ್ನನ್ನೇ ಪರಮಾಶ್ರಯನನ್ನಾಗಿ ಭಾವಿಸಿಕೊಂಡು ನಿಮ್ಮ ಲೋಕಗಳಿಗೆ ಪ್ರಯಾಣಮಾಡಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಮಹಾರಾಜ! ಭಗವಂತನು ಹೀಗೆ ಹೇಳುತ್ತಲೇ ಗುಹ್ಯಕಸಹೋದರರು ಭಗವಂತನ ಪ್ರದಕ್ಷಿಣೆಯನ್ನು ಮಾಡಿ ಪುನಃ ಪುನಃ ದೀರ್ಘದಂಡ ನಮಸ್ಕಾರ ಮಾಡುತ್ತಾ ಶ್ರೀಕೃಷ್ಣನ ಅಪ್ಪಣೆಯನ್ನು ಪಡೆದು ಉತ್ತರದಿಕ್ಕಿಗೆ ಪ್ರಯಾಣಮಾಡಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೦ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೧೧ನೆಯ ಅಧ್ಯಾಯ

## ಗೋಪಾಲರು ಗೋಕುಲದಿಂದ ವೃಂದಾವನಕ್ಕೆ ಪ್ರಯಾಣ ಮಾಡಿದುದು : ವತ್ಸಾಸುರ ಮತ್ತು ಬಕಾಸುರರ ಸಂಹಾರ : ಉದ್ಧಾರ

ಶ್ರೀಶುಕಮುನಿಗಳು ಹೇಳುತ್ತಾರೆ :

**ಗೋಪಾ ನನ್ದಾದಯಃ ಶ್ರುತ್ವಾ ದ್ರುಮಯೋಃ ಪತತೋ ರವಮ್ ।**
**ತತ್ರಾಜಗ್ಮುಃ ಕುರುಶ್ರೇಷ್ಠ ನಿರ್ಘಾತಭಯಶಙ್ಕಿತಾಃ ॥೧॥**

ಕುರುಶ್ರೇಷ್ಠನೇ! ಮಹಾರಾಜ! ಜೋಡಿ ಮತ್ತೀಮರಗಳು ಬಿದ್ದಾಗ ಆದ ಘೋರಶಬ್ದವನ್ನು ಗೋಕುಲದಲ್ಲಿದ್ದ ನಂದನೇ ಮೊದಲಾದ ಗೋಪಾಲಕರೂ ಕೇಳಿಸಿಕೊಂಡರು. ಸಿಡಿಲೇನಾದರೂ ಬಡಿಯಿತೋ ಎಂಬ ಸಂದೇಹದಿಂದ ಅವರೆಲ್ಲರೂ ಆ ವೃಕ್ಷಗಳ ಬಳಿಗೆ ಬಂದರು.


ಅಲ್ಲವರು ಜೋಡಿ ಮತ್ತಿಮರಗಳು ಬುಡಮೇಲಾಗಿ ಬಿದ್ದಿರುವು ದನ್ನು ಕಂಡರು. ಆ ವೃಕ್ಷಗಳ ಮಧ್ಯಭಾಗದಿಂದ ಸೊಂಟಕ್ಕೆ ಕಟ್ಟಿದ್ದ ಒರಳು ಕಲ್ಲನ್ನು ಕೃಷ್ಣನು ಎಳೆದುಕೊಂಡು ಹೋಗುತ್ತಿರುವುದನ್ನು ಅವರು ನೋಡಿದರು. ಆದರೆ ವೃಕ್ಷಗಳು ಬೀಳಲು ಶ್ರೀಕೃಷ್ಣನೇ ಕಾರಣನೆಂಬುದನ್ನು ಅವರು ನಿಶ್ಚಯಿಸಲಾರದೇ ಹೋದರು. ಅವರಿಗೆ ಅದನ್ನು ಊಹಿಸಲು ಕೂಡ ಸಾಧ್ಯವಾಗಲಿಲ್ಲ. "ದೊಡ್ಡದಾಗಿದ್ದ ಈ ವೃಕ್ಷಗಳನ್ನು ಉರುಳಿಸಿದವರು ಯಾರು? ಯಾವ ಕಾರಣದಿಂದ ಉರುಳಿಸಿದರು? ಹೇಗೆ ಉರುಳಿಸಿದರು? ಅತ್ಯಾಶ್ಚರ್ಯಕರವಾದ ಈ ದುರ್ಘಟನೆಯು ಹೇಗೆ ನಡೆಯಿತು?" ಹೀಗೆ ಯೋಚಿಸುತ್ತಾ ನಂದಾದಿಗಳು ಬಹಳ ಗಾಬರಿಗೊಂಡರು. ಅವರ ಬುದ್ಧಿಯು ಭ್ರಮಿಸಿತು. ಅಲ್ಲಿಯೇ ಆಡುತ್ತಿದ್ದ ಕೆಲವು ಗೋಪಬಾಲಕರು ನಂದಾದಿಗಳಿಗೆ ಹೇಳಿದರು :

"ಇಲ್ಲಿಗೆ ಬೇರೆ ಯಾರೂ ಬಂದಿಲ್ಲ. ಇದು ಮುದ್ದುಕೃಷ್ಣನ ಕಾರ್ಯವೇ ಆಗಿದೆ. ನಾವೇ ಇದನ್ನು ಕಂಡೆವು. ಈ ಕೃಷ್ಣನು ತನ್ನ ಸೊಂಟಕ್ಕೆ ಕಟ್ಟಿದ್ದ ಹಗ್ಗದ ಮೂಲಕವಾಗಿ ಕಟ್ಟಿದ ಒರಳುಕಲ್ಲನ್ನು ಎಳೆಯುತ್ತಾ ಈ ಎರಡು ವೃಕ್ಷಗಳ ಮಧ್ಯದಲ್ಲಿ ನುಗ್ಗಿದನು. ಶ್ರೀಕೃಷ್ಣನು ಹೊರಬಂದರೂ ಒರಳುಕಲ್ಲು ಅಡ್ಡವಾಗಿ ಸಿಕ್ಕಿಹಾಕಿಕೊಂಡುದರಿಂದ ಅಲ್ಲಿಯೇ ನಿಂತುಬಿಟ್ಟಿತು. ಕೃಷ್ಣನು ಜೋರಾಗಿ ಅದನ್ನು ಸೆಳೆದನು. ಒರಳುಕಲ್ಲು ವೃಕ್ಷಗಳನ್ನೂ ಬೀಳಿಸಿಕೊಂಡು ಮುಂದಕ್ಕೆ ಬಂದಿತು. ಆ ವೃಕ್ಷಗಳಿಂದ ಇಬ್ಬರು ಸುಂದರಪುರುಷರೂ ಹೊರಬಂದರು. ಅವರನ್ನೂ ನಾವು ನೋಡಿದೆವು"– ಹೀಗೆ ನಡೆದಿದ್ದುದನ್ನು ಯಥಾವತ್ತಾಗಿಯೇ ಹೇಳಿದರೂ ನಂದಾದಿಗಳಿಗೆ ಬಾಲಕರ ಮಾತಿನಲ್ಲಿ ವಿಶ್ವಾಸವುಂಟಾಗಲಿಲ್ಲ. 'ಶ್ರೀಕೃಷ್ಣನಂತಹ ಪುಟ್ಟ ಹುಡುಗನು ಇಂತಹ ಅದ್ಭುತವೃಕ್ಷವನ್ನು ಬೀಳಿಸಿಯಾನೇ!–ಎಂದಿಗೂ ಸಾಧ್ಯವಿಲ್ಲ'–ಎಂದೇ ಅವರು ನಿಶ್ಚಯಿಸಿದರು. ಅವನ ಹಿಂದಿನ ಅದ್ಭುತ

ಕಾರ್ಯಗಳನ್ನು ಸ್ಮರಿಸಿಕೊಂಡ ಕೆಲವು ಗೋಪಾಲಕರು–'ಇದೂ ಇವನಿಂದಲೇ ಏಕಾಗಿರಬಾರದು?'–ಎಂದೂ ಸಂದೇಹಿಸಿದರು. ಏನೂ ತಿಳಿಯದವನಂತೆ ಒರಳುಕಲ್ಲನ್ನು ಅತ್ತಿಂದಿತ್ತ-ಇತ್ತಿಂದತ್ತ ಸೆಳೆದಾಡುತ್ತಿರುವ ತನ್ನ ಪ್ರಾಣಪ್ರಿಯನಾದ ಮುದ್ದುಬಾಲಕನನ್ನು ನಂದಗೋಪನು ನೋಡಿ ಪಕ-ಪಕನೆ ನಕ್ಕನು. ಬೇಗನೆ ಹೋಗಿ ಕಂದನ ಸೊಂಟದಲ್ಲಿದ್ದ ಹಗ್ಗವನ್ನು ಬಿಚ್ಚಿದನು. ಶ್ರೀಕೃಷ್ಣನು ಅಘಟಿತಘಟನಾಸಾಮರ್ಥ್ಯವುಳ್ಳವನಾಗಿದ್ದರೂ, ಇದನ್ನು ನಂದಾದಿಗಳು ಅನೇಕ ಬಾರಿ ನೋಡಿದ್ದರೂ ಅವನೇ ಪರಮಾತ್ಮನೆಂದು ಭಾವಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ : ಅವನು ಉಳಿದ ಸಮಯಗಳಲ್ಲಿ ಸಾಮಾನ್ಯಬಾಲಕನಂತೆಯೇ ನಟನೆಮಾಡುತ್ತಿದ್ದನು. ಗೋಪಿಯರು ಪುಸಲಾಯಿಸಿದರೆ ಅವರ ಚಪ್ಪಾಳೆಯ ತಾಳಕ್ಕೆ ಸರಿಯಾಗಿ ಕುಣಿಯುತ್ತಿದ್ದನು. ಮರದ ಗೊಂಬೆಯಂತೆ ಗೋಪಿಯರ ವಶನಾಗಿದ್ದು ಅವರು ಹೇಳಿದಂತೆ ಕೆಲವು ವೇಳೆಯಲ್ಲಿ ಗಟ್ಟಿಯಾಗಿ ಹಾಡುವನು. ಅವರ ಆಜ್ಞೆಯನ್ನು ಶಿರಸಾವಹಿಸಿರುವವನಂತೆ ಕೆಲವು ವೇಳೆ ಮಣೆಗಳನ್ನೂ ಪಾತ್ರೆಗಳನ್ನೂ ಪಾದುಕೆಗಳನ್ನೂ ಹೊತ್ತುತರುವನು. ತನ್ನನ್ನು ಪ್ರೀತಿಸುತ್ತಿದ್ದ ಗೋಪಿಯರಿಗೆ ಸಂತೋಷವನ್ನುಂಟುಮಾಡುವುದಕ್ಕಾಗಿ ಕೆಲವು ವೇಳೆ ಪೈಲ್ವಾನರಂತೆ ಭುಜಗಳನ್ನು ಮೇಲೆತ್ತಿ ತಟ್ಟಿಕೊಳ್ಳುವನು. ಹೀಗೆ ಸರ್ವಶಕ್ತಿಮಂತನಾದ ಭಗವಂತನು ತನ್ನ ಬಾಲಲೀಲೆಗಳಿಂದ ವ್ರಜವಾಸಿ ಗಳಿಗೆ ಆನಂದವನ್ನುಂಟುಮಾಡುತ್ತಾ ಭಗವಂತನೆಂಬ ರಹಸ್ಯವನ್ನು ತಿಳಿದ ವರಿಗೆ ತಾನು ಭಕ್ತಪರಾಧೀನನೆಂಬುದನ್ನು ಈ ಮೂಲಕವಾಗಿ ಪ್ರಕಟಪಡಿಸುತ್ತಿದ್ದನು.

ಹೀಗೆಯೇ ಇರುತ್ತಿರಲಾಗಿ ಒಂದು ದಿನ ಹಣ್ಣುಮಾರುವವಳು–'ಹಣ್ಣಮ್ಮಾ! ಹಣ್ಣು. ಮಧುರವಾದ ಹಣ್ಣು. ಬೇಕೇನಮ್ಮಾ? ಹಣ್ಣು'–ಎಂದು ಕೂಗಿಕೊಳ್ಳುತ್ತಾ ಹೋಗುತ್ತಿದ್ದಳು. ಇದನ್ನು ಕೇಳಿಸಿಕೊಂಡ ಸರ್ವಕರ್ಮಫಲಪ್ರದನಾದ ವಿಶ್ವಾತ್ಮನು ಹಣ್ಣಿನ ವಿನಿಮಯಕ್ಕಾಗಿ ಧಾನ್ಯ ವನ್ನು ಹಣ್ಣಿನಾಕೆಗೆ ಕೊಡಲು ಪುಟ್ಟ ಮುಷ್ಟಿಯಲ್ಲಿ ಧಾನ್ಯವನ್ನು ಹಿಡಿದುಕೊಂಡು ಬೀದಿಗೆ ಓಡಿಹೋದನು. ಕಂದನ ಮುಷ್ಟಿಯಲ್ಲಿದ್ದ ಧಾನ್ಯವು ಬೀದಿಯಲ್ಲಿ ಬಿದ್ದೇಹೋಯಿತು. ಆದರೂ ಹಣ್ಣುಮಾರುವಾಕೆಯು

ಅತ್ಯಂತಸಂಭ್ರಮದಿಂದ ಶ್ರೀಕೃಷ್ಣನ ಪುಟ್ಟಬೊಗಸೆಯನ್ನು ಹಣ್ಣಿನಿಂದ ತುಂಬಿಬಿಟ್ಟಳು. ಒಡನೆಯೇ ಕೃಷ್ಣನು ಹಣ್ಣಿನವಳ ಹಣ್ಣಿನ ಮಂಕರಿಯು ನವರತ್ನಗಳಿಂದ ತುಂಬುವಂತೆ ಅನುಗ್ರಹಿಸಿದನು.




ಒಂದು ದಿನ ಶ್ರೀಕೃಷ್ಣನೂ ಮತ್ತು ಬಲರಾಮನೂ ಗೋಪಾಲಬಾಲಕ ರೊಡನೆ ಆಟವಾಡುತ್ತಾ ಯಮುನಾನದಿಯ ತೀರಕ್ಕೆ ಹೋದರು. ಆ ಸಮಯಕ್ಕೆ ಸರಿಯಾಗಿ ರೋಹಿಣೀದೇವಿಯು ಕೃಷ್ಣ-ಬಲರಾಮರಿಬ್ಬರನ್ನೂ ಕೂಗಿದಳು. ರೋಹಿಣಿಯು ಹಲವಾರುಬಾರಿ ಕೂಗಿಕೊಂಡರೂ ಆಟದಲ್ಲಿಯೇ ತಲ್ಲೀನರಾಗಿದ್ದುದರಿಂದ ಕೃಷ್ಣ-ಬಲರಾಮರು ಹೋಗಲೇ ಇಲ್ಲ. ಅವರಿಬ್ಬರೂ ಎಷ್ಟು ಕೂಗಿದರೂ ಬಾರದಿರಲು ರೋಹಿಣೀದೇವಿಯು ಪುತ್ರ ವತ್ಸಲೆಯಾದ ಯಶೋದಾದೇವಿಯನ್ನು, ಮಕ್ಕಳಿಬ್ಬರನ್ನೂ ಕರೆದುಕೊಂಡು ಬರುವಂತೆ ಹೇಳಿಕಳುಹಿಸಿದಳು. ಕೃಷ್ಣ-ಬಲರಾಮರು ಗೋಪಾಲಬಾಲಕ ರೊಡನೆ ಬಹಳ ಹೊತ್ತಿನವರೆಗೆ ಆಡುತ್ತಲೇ ಇದ್ದರು. ರೋಹಿಣೀದೇವಿಯ ಮಾತಿನಂತೆ ಯಶೋದೆಯೇ ಮಕ್ಕಳನ್ನು ಕರೆತರಲು ಯಮುನಾನದಿಯ ತೀರಕ್ಕೆ ಹೋದಳು. ಅವಳಿಗೆ ಪುತ್ರನಲ್ಲಿದ್ದ ಅತಿಶಯವಾದ ಪ್ರೀತಿಯ ಕಾರಣ ದಿಂದಾಗಿ ಅವಳ ಸ್ತನಗಳಿಂದ ಹಾಲು ಒಸರುತ್ತಿದ್ದಿತು. ಯಶೋದೆಯು ಕೃಷ್ಣನನ್ನು ಗಟ್ಟಿಯಾಗಿ ಕೂಗತೊಡಗಿದಳು : "ಕೃಷ್ಣ! ಕೃಷ್ಣ! ಮುದ್ದುಕೃಷ್ಣ! ಮೋಹನಕೃಷ್ಣ! ಅರವಿಂದಾಕ್ಷ! ಮಗು! ಚಿನ್ನ! ಬೇಗ ಬಾ. ಸ್ತನ್ಯಪಾನ

ಮಾಡು. ಇನ್ನಾದರೂ ನಿನ್ನ ಆಟಗಳನ್ನು ಸಾಕುಮಾಡು. ಹಸಿವಿನಿಂದ ಬಹಳವಾಗಿ ಬಳಲಿರುವೆ. ಆಟವಾಡಿ ಸೋತಿರುವೆ. ಬೇಗ ಬಂದುಬಿಡು. ರಾಮ! ನೀನೂ ಬೇಗ ಬಾ. ಯಾದವರ ಕುಲಕ್ಕೆ ಆನಂದವನ್ನುಂಟು ಮಾಡತಕ್ಕವನೇ! ತಮ್ಮನನ್ನು ಕರೆದುಕೊಂಡು ಬಂದುಬಿಡಪ್ಪಾ! ನೀನು ಬೆಳಗಾಗ ಊಟಮಾಡಿದ್ದೆ. ನಿನಗೂ ತುಂಬಾ ಹಸಿವಾಗಿದೆ. ಊಟಮಾಡಲು ಇದು ಸಕಾಲವಾಗಿದೆ. ಬೇಗನೆ ಮುದ್ದುಕೃಷ್ಣನೊಡನೆ ಬಂದು ಬಿಡು. ದಾಶಾರ್ಹಕುಲತಿಲಕನೇ! ವ್ರಜಾಧಿಪನಾದ ನಂದಗೋಪನು ಊಟ ಮಾಡಲು ನಿನಗಾಗಿ ಕಾಯುತ್ತಿದ್ದಾನೆ. ಬೇಗ ಬಂದು ನಮ್ಮಿಬ್ಬರಿಗೂ ಸಂತೋಷವನ್ನುಂಟುಮಾಡು. ಗೋಪಬಾಲಕರೇ! ಆಟವಾಡಿದ್ದು ಸಾಕು. ನೀವೂ ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ.

ಮಗು! ಬಲರಾಮ! ನಿನ್ನನ್ನು ನೋಡಲಾಗುವುದಿಲ್ಲ. ನಿನ್ನ ಶರೀರದ ಅಂಗಾಂಗಗಳೆಲ್ಲವೂ ಧೂಳಿನಿಂದ ಮುಚ್ಚಿಹೋಗಿದೆ. ಸ್ನಾನಮಾಡುವೆಯಂತೆ. ಬೇಗ ಬಾ. ಇಂದು ನಿನ್ನ ಜನ್ಮನಕ್ಷತ್ರವಾಗಿದೆ. ಶುಚೀಭೂತನಾಗಿ ಬ್ರಾಹ್ಮಣರಿಗೆ ಗೋದಾನವನ್ನು ಮಾಡು. ಅದೋ ನಿನ್ನ ಜೊತೆಗಾರರನ್ನಾದರೂ ನೋಡು. ತಾಯಂದಿರ ಕೈಲಿ ಸ್ನಾನಮಾಡಿಸಿಕೊಂಡು ಒಳ್ಳೆಯ ಉಡುಪನ್ನು ತೊಡಿಸಿಕೊಂಡು ತಲೆಬಾಚಿಸಿಕೊಂಡು ಎಷ್ಟು ಸುಂದರವಾಗಿ ಕಾಣುತ್ತಿದ್ದಾರೆ! ಹಾಗೆಯೇ ನೀನೂ ಸ್ನಾನಮಾಡಿಸಿಕೋ. ಊಟಮಾಡು. ತಲೆಬಾಚಿಸಿಕೊಂಡು ಹಣೆಗೆ ತಿಲಕವನ್ನಿಡಿಸಿಕೊಂಡು ಒಳ್ಳೆಯ ಬಟ್ಟೆಯನ್ನು ತೊಟ್ಟುಕೊಂಡನಂತರ ಬೇಕಾದರೆ ಆಟಕ್ಕೂ ಹೋಗುವೆಯಂತೆ."

ಪರೀಕ್ಷಿತ! ಯಶೋದೆಯ ಬುದ್ಧಿಯು ಪುತ್ರಪ್ರೇಮದಿಂದ ಬಂಧಿಸಲ್ಪಟ್ಟಿದ್ದಿತು. ಸರ್ವೇಶ್ವರೇಶ್ವರನನ್ನು ತನ್ನ ಮಗನೆಂದೇ ಅವಳು ಭಾವಿಸಿದ್ದಳು. ಒಂದು ಕೈಲಿ ರಾಮನನ್ನೂ ಮತ್ತೊಂದು ಕೈಲಿ ಕೃಷ್ಣನನ್ನೂ ಹಿಡಿದುಕೊಂಡು ಮನೆಗೆ ಹೋಗಿ ಯಶೋದೆಯು ಇಬ್ಬರಿಗೂ ಸ್ನಾನಮಾಡಿಸಿ ಜನ್ಮೋತ್ಸವಕ್ಕೆ ಸಂಬಂಧಿಸಿದಂತೆ ಮಂಗಳಕಾರ್ಯಗಳನ್ನು ಅತ್ಯಂತ ಪ್ರೀತಿಯಿಂದ ಸಂಪನ್ನಗೊಳಿಸಿದಳು.



ವಸುದೇವನು ಸೂಚನೆಯಿತ್ತಿದ್ದಂತೆ ಮಹೋತ್ಪಾತಗಳು ಒಂದಾದ ಮೇಲೆ ಒಂದರಂತೆ ಒದಗಿಬರುತ್ತಿರುವುದನ್ನು ನಂದಗೋಪನೇ ಮುಂತಾದ ಗೋಪವೃದ್ಧರು ಗಮನಿಸಿದರು. ಎಲ್ಲರೂ ಒಟ್ಟಾಗಿ ಸೇರಿ ಇದರ ಪರಿಹಾರದ ಬಗೆಗೆ ಸಮಾಲೋಚಿಸಿದರು. ಅಲ್ಲಿ ಸೇರಿದ್ದವರಲ್ಲಿ ಉಪನಂದನೆಂಬ ಹೆಸರಿನ ಗೋಪಾಲಕನೂ ಇದ್ದನು. ಅವನು ಜ್ಞಾನವೃದ್ಧನೂ ಆಗಿದ್ದನು. ಯಾವ ಸಮಯದಲ್ಲಿ, ಯಾವ ಸ್ಥಳದಲ್ಲಿ, ಯಾರೊಡನೆ ಹೇಗೆ ವ್ಯವಹರಿಸಬೇಕೆಂಬ ತತ್ತ್ವವನ್ನೂ ತಿಳಿದವನಾಗಿದ್ದನು. ಮೇಲಾಗಿ ರಾಮ-ಕೃಷ್ಣರ ಹಿತೈಷಿಯಾಗಿದ್ದನು. ಅವನು ಗೋಪಾಲಕರ ಆ ಸಭೆಯಲ್ಲಿ ಹೇಳಿದನು :

**ಉತ್ಥಾತವ್ಯಮಿತೋಽಸ್ಮಾಭಿರ್ಗೋಕುಲಸ್ಯ ಹಿತೈಷಿಭಿಃ ।**
**ಆಯಾನ್ತ್ಯತ್ರ ಮಹೋತ್ಪಾತಾ ಬಾಲಾನಾಂ ನಾಶಹೇತವಃ ॥೨೩॥**


"ಬಂಧುಗಳೇ! ನಿಮಗೆ ತಿಳಿದಿರುವಂತೆ ಬಾಲಕರ ವಿನಾಶಕ್ಕೆ ಕಾರಣ ವಾದ ಉತ್ಪಾತಗಳು ಇಲ್ಲಿ ಆಗಿಂದಾಗ್ಗೆ ನಡೆಯುತ್ತಲೇ ಇವೆ. ಆದುದರಿಂದ ಗೋಕುಲಕ್ಕೂ ಗೋಪಾಲಕರಿಗೂ ಹಿತಬಯಸುವ ನಾವೆಲ್ಲರೂ ಈ ಗೋಕುಲವನ್ನೇ ಬಿಟ್ಟು ಹೋಗುವುದು ಯುಕ್ತವಾಗಿ ಕಾಣುತ್ತದೆ. ಈ ನಮ್ಮ ನಂದಗೋಪನ ಮಗನಾದ ಶ್ರೀಕೃಷ್ಣನು ಬಾಲಹಂತಕಳಾದ ಪೂತನೆಯಿಂದ ದೈವವಶಾತ್ ತಪ್ಪಿಸಿಕೊಂಡನು. ಹರಿಯ ಅನುಗ್ರಹದಿಂದಲೇ ಸಾಮಗ್ರಿ ಗಳಿಂದ ತುಂಬಿದ್ದ ಗಾಡಿಯು ತಲೆಕೆಳಗಾಗಿ ಬಿದ್ದರೂ ಈ ಬಾಲಕೃಷ್ಣನ

ಮೇಲೆ ಬೀಳಲಿಲ್ಲ. ಮುಂದೆ ತೃಣಾವರ್ತನೆಂಬ ದೈತ್ಯನು ಸುಂಟರಗಾಳಿಯ ರೂಪವನ್ನು ತಾಳಿ ಈ ಮುದ್ದುಕಂದನನ್ನು ಅಂತರಿಕ್ಷಕ್ಕೆ ಹಾರಿಸಿಕೊಂಡು ಹೋಗಿಬಿಟ್ಟನು. ಮಗುವು ಬದುಕುವುದೆಂಬ ಆಸೆಯು ಯಾರಿಗೂ ಇರಲೇ ಇಲ್ಲ. ರಾಕ್ಷಸನೊಡನೆ ಬಂಡೆಯ ಮೇಲೆ ಬಿದ್ದನು. ಆದರೂ ಸುರೇಶ್ವರನ ಪರಮಾನುಗ್ರಹದಿಂದಾಗಿ ಸ್ವಲ್ಪವೂ ಗಾಯಗೊಳ್ಳದೆ ಬದುಕಿ ಉಳಿದು ಕೊಂಡನು. ಮತ್ತಿಮರಗಳು ಕೆಳಕ್ಕೆ ಬೀಳುವಾಗ ಅವುಗಳ ಮಧ್ಯದಲ್ಲಿಯೇ ಇದ್ದರೂ ಇವನು ಸಾಯಲಿಲ್ಲ. ಯಾವುದೇ ಗಾಯಗಳೂ ಆಗಲಿಲ್ಲ. ಸಮೀಪ ದಲ್ಲೇ ಇದ್ದ ಇತರ ಬಾಲಕರಿಗೂ ಯಾವ ತೊಂದರೆಯೂ ಆಗಲಿಲ್ಲ. ಆ ಸಮಯದಲ್ಲೂ ಅಚ್ಯುತನೇ ನಮ್ಮ ಬಾಲಕನನ್ನು ರಕ್ಷಿಸಿದನೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇದನ್ನೆಲ್ಲಾ ನೋಡಿದರೆ ಮುಂದೆಯೂ ಇದಕ್ಕಿಂತಲೂ ಮಿಗಿಲಾದ ಸರ್ವನಾಶಕರವಾದ ಉತ್ಪಾತಗಳು ಇಲ್ಲಿ ಸಂಭವಿ ಸುವ ಸಾಧ್ಯತೆಯಿದೆ. ಆದುದರಿಂದ ಅಂತಹ ಉತ್ಪಾತಗಳು ಒದಗಿಬರುವ ಮೊದಲೇ ನಾವೆಲ್ಲರೂ ನಮ್ಮ ನಮ್ಮ ಮಕ್ಕಳನ್ನು ಕರೆದುಕೊಂಡು ಅನುಯಾಯಿಗಳ ಸಮೇತರಾಗಿ ಈ ಗೋಕುಲದಿಂದ ಹೊರಟು ಹೋಗೋಣ. ನನಗೆ ತಿಳಿದಿರುವಂತೆ ಇಲ್ಲಿಗೆ ಸ್ವಲ್ಪ ದೂರದಲ್ಲಿ ವೃಂದಾವನ ವೆಂಬ ಹಚ್ಚಹಸಿರಾದ ಹುಲ್ಲಿನಿಂದಲೂ ಚಿಗುರೊಡೆದ ವೃಕ್ಷಗಳಿಂದಲೂ ಕೂಡಿದ ನವ-ನೂತನವಾದ ಕಾಡಿರುವುದು. ಅಲ್ಲೊಂದು ಪವಿತ್ರವಾದ ಮತ್ತು ದೊಡ್ಡದಾದ ಪರ್ವತವೂ ಇರುವುದು. ಚಿಗುರುಹುಲ್ಲಿನಿಂದಲೂ, ಬಳ್ಳಿಗಳಿಂದಲೂ ಕೂಡಿರುವ ಆ ವೃಂದಾವನವು ನಮ್ಮ ಹಸುಗಳಿಗೂ ಮತ್ತು ಗೋಪ-ಗೋಪಿಯರಿಗೂ ಸೇವಿಸಲು ಯೋಗ್ಯವಾಗಿರುವುದು. ನಾನು ಹೇಳಿರುವ ಮಾತುಗಳು ನಿಮ್ಮೆಲ್ಲರಿಗೂ ಸರಿಯಾಗಿರುವುದೆಂದು ಕಂಡು ಬಂದರೆ ಈಗಲೇ ಇಲ್ಲಿಂದ ಹೊರಟುಬಿಡೋಣ. ಎಲ್ಲರೂ ಬಂಡಿಗಳನ್ನು ಕಟ್ಟಿರಿ. ಗೋವುಗಳೆಲ್ಲವೂ ಮುಂದಾಗಿ ಹೋಗಲಿ."

ಪರೀಕ್ಷಿತಮಹಾರಾಜ! ಉಪನಂದನ ಈ ಮಾತನ್ನು ಕೇಳುತ್ತಲೇ ಗೋಪಾಲಕರೆಲ್ಲ ರೂ ಒಂದೇ ಮನಸ್ಸಿನಿಂದ 'ಸಾಧು-ಸಾಧು. ನೀನುಹೇಳಿದ್ದು ಸರಿಯಾಗಿದೆ. ನೀನು ಹೇಳಿದಂತೆ ಈಗಲೇ ಎಲ್ಲರೂ ಇಲ್ಲಿಂದ ಹೊರಟೇ ಬಿಡೋಣ'–ಎಂದು ಏಕಕಂಠದಿಂದ ಹೇಳಿದರು.

ಮರುದಿವಸವೇ ನಂದಗೋಪನ ಆಜ್ಞೆಯಂತೆ ಗೋಪಾಲರೆಲ್ಲರೂ ತಮ್ಮ-ತಮ್ಮ ಹಸುಗಳ ಗುಂಪನ್ನು ಮುಂದೆ ಬಿಟ್ಟುಕೊಂಡು ಗೃಹಸಾಮಗ್ರಿಗಳನ್ನು ಬಂಡಿಗಳಲ್ಲಿ ತುಂಬಿಕೊಂಡು ವೃಂದಾವನಕ್ಕೆ ಪ್ರಯಾಣಹೊರಟರು.*

ಮಹಾರಾಜ! ಗೋಪಾಲಕರು, ಮುದುಕರನ್ನೂ, ಮಕ್ಕಳನ್ನೂ, ಹೆಂಗಸರನ್ನೂ ಗಾಡಿಗಳ ಮೇಲೆ ಕುಳ್ಳಿರಿಸಿಕೊಂಡು ಹಲವಾರು ಬಂಡಿಗಳಲ್ಲಿ ಸಾಮಗ್ರಿಗಳನ್ನು ತುಂಬಿಕೊಂಡು ಧನುರ್ಬಾಣಗಳನ್ನು ಹಿಡಿದು ಆ ಗಾಡಿಗಳ ಹಿಂದೆಯೇ ಜಾಗರೂಕತೆಯಿಂದ ಹೋಗುತ್ತಿದ್ದರು. ಹಸುಗಳನ್ನೂ, ಕರುಗಳನ್ನೂ ಮುಂದೆ ಬಿಟ್ಟುಕೊಂಡು ಬಾರಿ-ಬಾರಿಗೂ ಕೊಂಬುಗಳನ್ನೂದುತ್ತಾ, ತಮಟೆಗಳನ್ನು ಬಾರಿಸುತ್ತಾ ಪುರೋಹಿತರೊಡನೆ ಗೋಪಾಲರು ಪ್ರಯಾಣ



ಮಾಡುತ್ತಿದ್ದರು. ರಥದಲ್ಲಿ ಕುಳಿತಿದ್ದ ಗೊಲ್ಲತಿಯರು ಸುಂದರವಾದ ಸೀರೆ

---

* 1) ಪದ್ಮಪುರಾಣದಲ್ಲಿ ಹೇಳಿರುವಂತೆ ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯಳಾದ ವೃಂದೆ ಎಂಬುವವಳ ವನವಾದುದರಿಂದ ಇದಕ್ಕೆ ವೃಂದಾವನವೆಂದು ಹೆಸರಾಯಿತು. ಈ ವೃಂದೆಯು ಮಧುವಿನ ಮಗಳು. ಭಗವಂತನು ಜಾಲಂಧರನ ಸಂಹಾರಾರ್ಥವಾಗಿ ಅವಳನ್ನು ಪರಿಗ್ರಹಿಸಿದನು. ಇಲ್ಲಿ ದೈತ್ಯರ ಹಾವಳಿಗಾಗಲೀ, ಉತ್ಪಾತಗಳಿಗಾಗಲೀ ಅವಕಾಶವಿಲ್ಲದುದರಿಂದ ನಂದಾದಿಗಳು ಆ ವನದಲ್ಲಿ ವಾಸಮಾಡಲು ಒಪ್ಪಿದರು.

2) ವೃಂದೆಯು ಪರಮಭಾಗವತನಾದ ಕೇದಾರರಾಜನ ಮಗಳು. ಇವಳು ಲಕ್ಷ್ಮಿಯ ಅಂಶದಿಂದ ಜನಿಸಿ ದುರ್ವಾಸಮಹರ್ಷಿಯಿಂದ ವಿಷ್ಣುಮಂತ್ರವನ್ನು

ಗಳನ್ನು ಉಟ್ಟಿದ್ದರು. ಸುವರ್ಣಮಯವಾದ ಹಾರಗಳನ್ನು ಧರಿಸಿದ್ದರು. ಕುಚಗಳಲ್ಲಿ ಲೇಪಿಸಿಕೊಂಡಿದ್ದ ಕಸ್ತೂರೀ-ಕುಂಕುಮದ ಕಾಂತಿಯಿಂದ ಕಂಗೊಳಿಸುತ್ತಿದ್ದರು. ಅತ್ಯುಲ್ಲಾಸದಿಂದ ಪ್ರಯಾಣಮಾಡುತ್ತಿದ್ದ ಅವರು ಶ್ರೀಕೃಷ್ಣನ ಬಾಲಲೀಲೆಗಳ ಗೀತೆಗಳನ್ನು ಕರ್ಣಾನಂದಕರವಾಗಿ ಹಾಡುತ್ತಿದ್ದರು. ರೋಹಿಣೀ-ಯಶೋದೆಯರು ಬಲರಾಮ-ಕೃಷ್ಣರನ್ನೆತ್ತಿಕೊಂಡು ಅತ್ಯಂತ ಶೋಭಾಯಮಾನರಾಗಿ ಕಾಣುತ್ತಾ ಒಂದೇ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದರು. ಗೊಲ್ಲತಿಯರು ಹಾಡುತ್ತಿದ್ದ ಶ್ರೀಕೃಷ್ಣನ ಪರವಾದ ಗೀತೆಗಳನ್ನು ಕೇಳುವುದರಲ್ಲಿ ಅವರಿಗೂ ವಿಶೇಷವಾದ ಔತ್ಸುಕ್ಯವಿದ್ದಿತು.

ಅವರು ಎಲ್ಲ ಋತುಗಳಲ್ಲಿಯೂ ವಾಸಿಸಲು ಅತ್ಯಂತಸುಖಾವಹವಾಗಿದ್ದ ವೃಂದಾವನವನ್ನು ಪ್ರವೇಶಿಸಿ ತಮ್ಮ ಗಾಡಿಗಳನ್ನು ಅರ್ಧಚಂದ್ರಾಕಾರದ ರೀತಿಯಲ್ಲಿ ನಿಲ್ಲಿಸಿ ಅದನ್ನೇ ವಾಸಸ್ಥಳವನ್ನಾಗಿ ಮಾಡಿಕೊಂಡರು. ಅಂತೆಯೇ ಹಸು-ಕರುಗಳಿಗೂ ಕೊಟ್ಟಿಗೆಗಳನ್ನು ಕಲ್ಪಿಸಿದರು. ನಯನ ಮನೋಹರವಾಗಿದ್ದ ವೃಂದಾವನವನ್ನೂ, ಅಲ್ಲಿಯೇ ಇದ್ದ ಗೋವರ್ಧನ ಪರ್ವತವನ್ನೂ ಮತ್ತು ಯಮುನಾನದಿಯ ತೀರಪ್ರದೇಶದಲ್ಲಿದ್ದ ಮರಳಿನ ದಿಣ್ಣೆಗಳನ್ನೂ ನೋಡುತ್ತಿದ್ದಂತೆಯೇ ರಾಮ-ಕೃಷ್ಣರು ಆನಂದದಿಂದ ಉಬ್ಬಿಹೋದರು. ರಾಮ-ಕೃಷ್ಣರು ತಮ್ಮ ತೊದಲುಮಾತುಗಳಿಂದಲೂ, ಬಾಲಚೇಷ್ಟೆಗಳಿಂದಲೂ ಗೊಲ್ಲರಿಗೂ-ಗೊಲ್ಲತಿಯರಿಗೂ ಆನಂದವನ್ನುಂಟು ಮಾಡುತ್ತಿದ್ದರು. ಅಲ್ಲಿಯೇ ಸ್ವಲ್ಪ ದೊಡ್ಡವರಾಗುತ್ತಲೇ ಕರುಗಳನ್ನು ಕಾಯಲು ಪ್ರಾರಂಭಿಸಿದರು. ಹಲವಾರು ಬಗೆಯ ಆಟದ ಸಾಮಾನುಗಳನ್ನು ಹೊಂದಿದ್ದ ರಾಮ-ಕೃಷ್ಣರು ಇತರ ಗೋಪಾಲಕರೊಡನೆ ಗೊಲ್ಲಹಳ್ಳಿಯ ಸಮೀಪದಲ್ಲಿಯೇ ಕರುಗಳನ್ನು ಮೇಯಿಸುತ್ತಾ ಆಟಗಳನ್ನು ಆಡುತ್ತಿದ್ದರು. ಕೆಲವು ವೇಳೆ ರಾಮ-ಕೃಷ್ಣರು ಕೊಳಲನ್ನು ನುಡಿಸುತ್ತಿದ್ದರು. ಕೆಲವು

---

ಪಡೆದು ಬಹಳ ವಿರಕ್ತಳಾಗಿ ಅರಣ್ಯಕ್ಕೆ ಹೋಗಿ ಅರುವತ್ತು ಸಹಸ್ರ ವರ್ಷಗಳ ಕಾಲ ತಪಸ್ಸನ್ನಾಚರಿಸಿದನಂತರ ಪ್ರಸನ್ನನಾದ ಶ್ರೀಕೃಷ್ಣನನ್ನೇ ತನಗೆ ಪತಿಯಾಗಬೇಕೆಂಬ ವರವನ್ನು ಕೇಳಿದಳು. ಶ್ರೀಕೃಷ್ಣನು ಅವಳ ಅಪೇಕ್ಷೆಯಂತೆ ಬಹಳ ಕಾಲ ಅರಣ್ಯದಲ್ಲಿ ಅವಳೊಡನೆ ಸುಖವಾಗಿದ್ದನು. ಅವಳಿದ್ದ ವನಕ್ಕೆ ವೃಂದಾವನ–ಎಂದು ಹೆಸರಾಯಿತು.

ವೇಳೆ ಕವಣೆಗಳಿಂದ ಕಲ್ಲುಬೀರಿ ವೃಕ್ಷಗಳಲ್ಲಿದ್ದ ಹಣ್ಣುಗಳನ್ನು ಬೀಳಿಸುತ್ತಿದ್ದರು. ಕೆಲವು ವೇಳೆ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಕುಣಿಯುತ್ತಿದ್ದರು. ಕೆಲವು ವೇಳೆ ಕಂಬಳಿಗಳನ್ನು ಹೊದ್ದುಕೊಂಡು ಅಂಬೆಗಾಲನ್ನಿಕ್ಕುತ್ತಾ ಹಸು-ಕರುಗಳ ಆಟವಾಡುತ್ತಿದ್ದರು. ಕೆಲವೊಮ್ಮೆ ಹೋರಿಗಳಂತೆ ಗುಟುರುಹಾಕುತ್ತಾ ಪರಸ್ಪರವಾಗಿ ಕಾದಾಡುತ್ತಿದ್ದರು. ಕೆಲವೊಮ್ಮೆ ರಾಮ-ಕೃಷ್ಣರು ನವಿಲು- ಕೋಗಿಲೆ-ನಾಯಿ-ನರಿ-ಇವೇ ಮುಂತಾದ ಪಶು-ಪಕ್ಷಿಗಳ ಧ್ವನಿಯನ್ನು ಅನುಕರಿಸಿ ಕೂಗುತ್ತಾ ಸಾಧಾರಣಬಾಲಕರಂತೆ ಆಟವಾಡುತ್ತಿದ್ದರು.




ಹೀಗೆಯೇ ಇರುತ್ತಿರಲಾಗಿ ಒಂದು ದಿನ ರಾಮ-ಕೃಷ್ಣರು ತಮ್ಮ ಪ್ರೀತಿಯ ಗೆಳೆಯರೊಡನೆ ಸೇರಿಕೊಂಡು ಕರುಗಳನ್ನು ಮೇಯಿಸುತ್ತಿದ್ದಾಗ ಇವರನ್ನು ಸಂಹರಿಸುವ ದುರುದ್ದೇಶದಿಂದ ದೈತ್ಯನೊಬ್ಬನು ಅಲ್ಲಿಗೆ ಆಗಮಿಸಿದನು. ಅವನು ಕರುವಿನ ವೇಷವನ್ನು ಧರಿಸಿದ್ದು ಕರುಗಳ ಗುಂಪಿನಲ್ಲಿಯೇ ಸೇರಿಕೊಂಡಿದ್ದನು. ಶ್ರೀಕೃಷ್ಣನು ಇದನ್ನು ಗಮನಿಸಿ ಬಲರಾಮನಿಗೂ ಈ ವಿಷಯವನ್ನು ಮೆಲ್ಲಗೆ ತಿಳಿಸಿ ಏನೂ ತಿಳಿಯದವನಂತೆ ಮೆಲ್ಲ-ಮೆಲ್ಲನೆ ಆ ವತ್ಸಾಸುರನ ಬಳಿಗೆ ಹೋದನು. ಮರುಕ್ಷಣದಲ್ಲಿಯೇ ಶ್ರೀಕೃಷ್ಣನು ಕರುವಿನ ರೂಪದಲ್ಲಿದ್ದ ಆ ಅಸುರನ ಬಾಲವನ್ನೂ ಹಿಂಗಾಲುಗಳನ್ನೂ ಹಿಡಿದು ಗರ-ಗರನೆ ಹತ್ತಾರು ಬಾರಿ ತಿರುಗಿಸಿ ರಭಸದಿಂದ ಆಕಾಶಕ್ಕೆಸೆದನು. ಹಾಗೆ ಎಸೆಯುತ್ತಲೇ ಮರಣಹೊಂದಿದ ಮಹಾಕಾಯನಾದ ಆ ವತ್ಸಾಸುರನು

ತನ್ನ ನಿಜರೂಪದಿಂದ ಬೇಲದ ಮರದ ಮೇಲೆ ಬಿದ್ದು ಆ ವೃಕ್ಷದಲ್ಲಿದ್ದ ನೂರಾರು ಬೇಲದ ಕಾಯಿಗಳೊಡನೆ ಭೂಮಿಯ ಮೇಲೆ ಬಿದ್ದನು. ಇದನ್ನು ನೋಡಿದ ಗೋಪಾಲಕರು ಅಚ್ಚರಿಗೊಂಡು 'ಭಲೇ ಕೃಷ್ಣ! ಭಲೇ'–




ಎಂಬುದಾಗಿ ಹೇಳುತ್ತಾ ಮುಕುಂದನನ್ನು ಹೊಗಳಿದರು. ದೇವಶತ್ರುವಾದ ವತ್ಸಾಸುರನ ವಿನಾಶದಿಂದ ಸಂತುಷ್ಟರಾದ ದೇವತೆಗಳು ಪುಷ್ಪವೃಷ್ಟಿ ಗರೆದರು. ಸಮಸ್ತಲೋಕಗಳಿಗೂ ಏಕಮಾತ್ರರಕ್ಷಕರಾದ ರಾಮ-ಕೃಷ್ಣರು ದನಗಳನ್ನು ಕಾಯುವ ಗೊಲ್ಲರಾಗಿ ಬುತ್ತಿಯೊಡನೆ ಕರುಗಳನ್ನು ಮೇಯಿಸುತ್ತಾ ಒಂದು ವನದಿಂದ ಮತ್ತೊಂದು ವನಕ್ಕೆ ಕರುಗಳ ಸಮೂಹದೊಡನೆ ಹೋಗುತ್ತಿದ್ದರು. ಒಬ್ಬೊಬ್ಬ ಗೋಪಾಲಕರೂ ಕರುಗಳ ಒಂದೊಂದು ಗುಂಪನ್ನು ಮೇಯಿಸುತ್ತಿದ್ದರು.

ಒಂದು ದಿನ ಗೋಪಾಲಕರು ತಮ-ತಮಗೆ ಸೇರಿದ ಕರುಗಳ ಗುಂಪು ಗಳನ್ನು ಹೊಡೆದುಕೊಂಡು ಯಮುನಾನದಿಯ ತೀರಕ್ಕೆ ನೀರುಕುಡಿಯಲು ಹೋದರು. ಮೊದಲು ಕರುಗಳಿಗೆ ನೀರುಕುಡಿಸಿ ಅನಂತರ ತಾವೂ ಯಥೇಚ್ಛವಾಗಿ ನೀರು ಕುಡಿದರು. ಬಳಿಕ ಆ ಗೋಪಾಲಕರು ಅಲ್ಲೊಂದು ಮಹಾಪ್ರಾಣಿಯನ್ನು ಕಂಡರು. ಆ ಪ್ರಾಣಿಯು ಇಂದ್ರನ ವಜ್ರಾಯುಧ ಪ್ರಹಾರದಿಂದ ರೆಕ್ಕೆಗಳನ್ನು ಕಳೆದುಕೊಂಡು ಬಿದ್ದಿದ್ದ ಪರ್ವತದಂತೆಯೇ ಕಾಣುತ್ತಿದ್ದಿತು. ಗೋಪಾಲಕರಿಗೆ ಆ ಮಹಾಪ್ರಾಣಿಯನ್ನು ನೋಡಿ ಬಹಳ

ಭಯವಾಯಿತು. ಆ ಮಹಾಪ್ರಾಣಿಯು ಬಕನೆಂಬ ಹೆಸರಿನ ಮಹಾಸುರನೇ ಆಗಿದ್ದು ಬಕಪಕ್ಷಿಯ ರೂಪವನ್ನು ಧರಿಸಿದ್ದಿತು. ಅದಕ್ಕೆ ಅತಿತೀಕ್ಷ್ಣವಾದ ಕೊಕ್ಕಿದ್ದಿತು. ಶ್ರೀಕೃಷ್ಣನನ್ನು ಕಾಣುತ್ತಲೇ ಬಲಿಷ್ಠವಾಗಿದ್ದ ಆ ಬಕಪಕ್ಷಿಯು ತನ್ನ ಚೂಪಾದ ಕೊಕ್ಕುಗಳಿಂದ ಅವನನ್ನು ಹಿಡಿದು ನುಂಗಿಯೇ ಬಿಟ್ಟಿತು. ಬಕಾಸುರನು ಶ್ರೀಕೃಷ್ಣನನ್ನು ನುಂಗಿದುದನ್ನು ನೋಡಿ ಬಲರಾಮನೇ ಮೊದಲಾದ ಗೋಪಬಾಲಕರು–ಪ್ರಾಣವು ಹೋದನಂತರ ಇಂದ್ರಿಯಗಳು ನಿಶ್ಚೇಷ್ಟವಾಗುವಂತೆ ನಿಶ್ಚೇಷ್ಟರಾಗಿಬಿಟ್ಟರು.

ಪರೀಕ್ಷಿತನೇ! ಶ್ರೀಕೃಷ್ಣನು ಲೋಕಪಿತಾಮಹನಾದ ಬ್ರಹ್ಮನಿಗೂ ತಂದೆಯು. ಅಂತಹ ಮಹಾನುಭಾವನನ್ನು ಅಷ್ಟು ಸುಲಭವಾಗಿ ನುಂಗಿ ಹಾಕಲು ಸಾಧ್ಯವೇ? ಶ್ರೀಕೃಷ್ಣನು ಬಕಾಸುರನ ದವಡೆಯನ್ನು ಸೇರಿ ದೊಡನೆಯೇ ಆತನನ್ನು ಒಳಗಿನಿಂದಲೇ ಸುಡಲಾರಂಭಿಸಿದನು. ಅದರ ವೇದನೆಯನ್ನು ತಾಳಲಾರದೆ ಬಕಾಸುರನು ಶ್ರೀಕೃಷ್ಣನನ್ನು ಉಗುಳಬೇಕಾ ಯಿತು. ತಾನು ನುಂಗಿಹಾಕಿದ್ದರೂ ಸ್ವಲ್ಪವಾದರೂ ಗಾಯಗೊಳ್ಳದೆ ಕೃಷ್ಣ ಮೂರ್ತಿಯು ಹೊರಬಂದುದನ್ನು ನೋಡಿ ಬಕಾಸುರನು ಅತ್ಯಂತಕುಪಿತ




ನಾದನು. "ಇವನನ್ನು ನನ್ನ ಕೊಕ್ಕಿನಿಂದಲೇ ಸಾಯಿಸಿಬಿಡುತ್ತೇನೆ. ಏನಾ ದರೂ ಬಿಡುವುದಿಲ್ಲ"–ಎಂದೆನ್ನುತ್ತಾ ಪುನಃ ಶ್ರೀಕೃಷ್ಣನ ಮೇಲೆ ನುಗ್ಗಿದನು. ಸತ್ಪುರುಷರಿಗೆ ಒಡೆಯರಾದ ದೇವತೆಗಳಿಗೆ ಸಂತೋಷವನ್ನುಂಟುಮಾಡುವ

ಶ್ರೀಕೃಷ್ಣನು ತನ್ನ ಮೇಲೆ ಬೀಳಲು ರಭಸದಿಂದ ಬರುತ್ತಿದ್ದ, ಕಂಸನ ಮಿತ್ರನಾದ ಬಕಾಸುರನ ಕೊಕ್ಕುಗಳೆರಡನ್ನೂ ಎರಡು ಕೈಗಳಿಂದ ಬಲವಾಗಿ ಹಿಡಿದು ಗೋಪಾಲಬಾಲಕರೆಲ್ಲರೂ ನೋಡುತ್ತಿದ್ದಂತೆಯೇ–ನೊಜೆ ಹುಲ್ಲನ್ನು ಅತಿಸುಲಭವಾಗಿ ಸೀಳುವಂತೆ–ಲೀಲಾಜಾಲವಾಗಿ ಬಕಾಸುರನನ್ನು ಸೀಳಿಬಿಟ್ಟನು.

ಬಕಾಸುರನ ಸಂಹಾರವಾದೊಡನೆಯೇ ಸ್ವರ್ಗಲೋಕವಾಸಿಗಳಾದ ದೇವತೆಗಳು ಬಕನ ಶತ್ರುವಾದ ಶ್ರೀಕೃಷ್ಣನನ್ನು ನಂದನವನದಲ್ಲಿ ಸಿಕ್ಕುವ ಮಲ್ಲಿಗೆ-ಜಾಜಿ-ಪುನ್ನಾಗ-ಪಾರಿಜಾತ–ಇವೇ ಮೊದಲಾದ ಪುಷ್ಪಗಳಿಂದ ಮುಚ್ಚಿಬಿಟ್ಟರು. ವಿಜಯಸೂಚಕಗಳಾದ ಭೇರಿ-ಮೃದಂಗ–ಇವೇ ಮೊದ ಲಾದ ವಾದ್ಯಗಳನ್ನು ಬಾರಿಸುತ್ತಾ ಪರಮಪುರುಷನಾದ ಶ್ರೀಕೃಷ್ಣನನ್ನು ಛಂದೋಬದ್ಧವಾದ ಶ್ಲೋಕಗಳಿಂದ ಸ್ತುತಿಸಿದರು. ಇದನ್ನು ನೋಡಿದ ಗೊಲ್ಲರಿಗೆ ಅತ್ಯಾಶ್ಚರ್ಯವಾಯಿತು. ಬಕಪಕ್ಷಿಯಿಂದ ನುಂಗಲ್ಪಟ್ಟಿದ್ದ ಶ್ರೀಕೃಷ್ಣನು ಯಾವ ವಿಧವಾದ ಗಾಯಗಳೂ ಇಲ್ಲದೆ ಅದರ ಬಾಯಿಂದ ಹೊರಬಂದುದನ್ನೂ ಮತ್ತು ಶ್ರೀಕೃಷ್ಣನೇ ಅದನ್ನು ನೊಜೆಹುಲ್ಲನ್ನು ಸೀಳುವಷ್ಟೇ ಸುಲಭವಾಗಿ ಸೀಳಿ ಸಂಹರಿಸಿದುದನ್ನೂ ಕಂಡು ಪ್ರಾಣಗಳಿಂದ ಚೇತನಗೊಂಡ ಪಂಚೇಂದ್ರಿಯಗಳಂತೆ ಸಚೇತನರಾಗಿ ಗೋಪಬಾಲಕರು ಆನಂದಸಾಗರದಲ್ಲಿ ಮುಳುಗಿಹೋದರು. ಬಲರಾಮನಾದಿಯಾಗಿ ಪ್ರತಿ ಯೊಬ್ಬ ಗೊಲ್ಲಬಾಲಕರೂ ಪ್ರತ್ಯೇಕ-ಪ್ರತ್ಯೇಕವಾಗಿ ಶ್ರೀಕೃಷ್ಣನನ್ನು ಬಾಚಿತಬ್ಬಿಕೊಂಡು ಮುದ್ದಾಡಿಬಿಟ್ಟರು. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಳಿಕ ಎಲ್ಲ ಗೋಪಾಲಬಾಲಕರೂ ತಮಗೆ ಸೇರಿದ ಕರುಗಳ ಗುಂಪನ್ನು ಹೊಡೆದುಕೊಂಡು ಹಳ್ಳಿಯನ್ನು ಸೇರಿದರು. ಬಳಿಕ ಅವರು ಹಳ್ಳಿಗರೆಲ್ಲರಿಗೂ ಅಂದು ನಡೆದ ಬಕಾಸುರನ ವಧೆಯು ಪ್ರಸಂಗವನ್ನು ಬಣ್ಣಿಸಿ-ಬಣ್ಣಿಸಿ ಹೇಳಿದರು. ಬಕಾಸುರನ ವಧೆಯ ಪ್ರಸಂಗವನ್ನು ಕೇಳಿ ಗೊಲ್ಲ-ಗೊಲ್ಲತಿಯರು ಆಶ್ಚರ್ಯಚಕಿತರಾದರು. ತಮ್ಮ ಮುದ್ದುಕೃಷ್ಣನು ಮೃತ್ಯುಮುಖದಿಂದಲೇ ಹೊರಬಂದಿರುವನೆಂದು ಭಾವಿಸಿ ಪ್ರೇಮಾದರ ಗಳಿಂದಲೂ, ಉತ್ಸುಕತೆಯಿಂದಲೂ ಆ ಸುಂದರಮೂರ್ತಿಯನ್ನು ನೋಡ ತೊಡಗಿದರು. ಅವರಿಗೆ ಬಾಲಕೃಷ್ಣನನ್ನು ಎಷ್ಟು ನೋಡಿದರೂ ತೃಪ್ತಿಯೇ

ಆಗಲಿಲ್ಲ. ಎವೆಯಿಕ್ಕದೆ ಯಾವಾಗಲೂ ನೋಡುತ್ತಲೇ ಇರಲೇಬೇಕೆನ್ನಿಸಿತು ಗೋಪ-ಗೋಪಿಯರಿಗೆ. ಅವರು ತಮ್ಮ-ತಮ್ಮಲ್ಲಿಯೇ ಹೀಗೆ ಮಾತನಾಡಿ ಕೊಂಡರು.

**ಅಹೋ ಬತಾಸ್ಯ ಬಾಲಸ್ಯ ಬಹವೋ ಮೃತ್ಯವೋಽಭವನ್ ।**
**ಅಪ್ಯಾಸೀದ್ವಿಪ್ರಿಯಂ ತೇಷಾಂ ಕೃತಂ ಪೂರ್ವಂ ಯತೋ ಭಯಮ್ ॥**

"ಅಬ್ಬಾ! ಎಂತಹ ಅಚ್ಚರಿಯಿದು! ಈ ನಮ್ಮ ಮುದ್ದುಬಾಲಕನು ಹಲವಾರು ಬಾರಿ ಸಾವಿನ ದವಡೆಗೆ ಸಿಕ್ಕಿಬಿದ್ದಿದ್ದನು. ಇವನಿಗೆ ಒದಗಿ ಬಂದಿರುವ ಪ್ರಾಣಾಪತ್ತುಗಳಿಗೆ ಲೆಕ್ಕವೇ ಇಲ್ಲ. ಅದೃಷ್ಟದ ವಿಷಯವೆಂದರೆ ಇವನನ್ನು ಯಾರೇ ಕೊಲ್ಲಲು ಬಂದರೂ ಅಂತಹ ಕೊಲೆಗಡುಕರೇ ಹತರಾಗುತ್ತಾರೆ. ಆ ಕೊಲೆಪಾತಕರು ಈ ಹಿಂದೆ ಹಲವಾರು ಮಂದಿ ನಿರಪರಾಧಿಗಳನ್ನು ಹಿಂಸಿಸಿರಬಹುದು. ಅದರ ಫಲವಾಗಿಯೇ ಅವರಿಂದು ಮೃತ್ಯುವನ್ನಪ್ಪಿದ್ದಾರೆ.

**ಅಥಾಪ್ಯಭಿಭವನ್ತ್ಯೇನಂ ನೈವ ತೇ ಘೋರದರ್ಶನಾಃ ।**
**ಜಿಘಾಂಸಯೈನಮಾಸಾದ್ಯ ನಶ್ಯನ್ತ್ಯಗ್ನೌ ಪತಙ್ಗವತ್ ॥೫೬॥**

ಘೋರರೂಪಿಗಳಾದ ಆ ಎಲ್ಲ ರಾಕ್ಷಸರಿಗೂ ನಮ್ಮ ಮುದ್ದುಕೃಷ್ಣನಿಗೆ ಕೇಡನ್ನುಂಟುಮಾಡಲು ಸಾಧ್ಯವಾಗಲೇ ಇಲ್ಲ. ಬೆಂಕಿಯಿಂದ ಆಕರ್ಷಿತವಾದ ಪತಂಗದ ಹುಳುವು ಬೆಂಕಿಗೆ ಬಿದ್ದು ಸಾಯುವಂತೆ ನಮ್ಮ ಕಂದನನ್ನು ಕೊಲ್ಲಲು ಬಂದ ರಾಕ್ಷಸರೆಲ್ಲರೂ ತಾವೇ ಅಸುನೀಗಿದರು.

**ಅಹೋ ಬ್ರಹ್ಮವಿದಾಂ ವಾಚೋ ನಾಸತ್ಯಾಃ ಸನ್ತಿ ಕರ್ಹಿಚಿತ್ ।**
**ಗರ್ಗೋ ಯದಾಹ ಭಗವಾನನ್ವಭಾವಿ ತಥೈವ ತತ್ ॥೫೭॥**

ಬ್ರಹ್ಮಜ್ಞರಾದ ಮಹಾತ್ಮರ ಮಾತೆಂದಿಗೂ ಅಸತ್ಯವಾಗುವುದಿಲ್ಲ. ಪೂಜ್ಯರಾದ ಗರ್ಗರು ಮುದ್ದುಕೃಷ್ಣನ ವಿಷಯದಲ್ಲಿ ಏನು ಹೇಳಿದ್ದರೋ ಅದರಂತೆಯೇ ಈಗ ಎಲ್ಲವೂ ನಡೆಯುತ್ತಿದೆ."

ಪರೀಕ್ಷಿತಮಹಾರಾಜ! ಹೀಗೆ ನಂದನೇ ಮೊದಲಾದ ಗೋಪ-ಗೋಪಿಯರು ಶ್ರೀಕೃಷ್ಣ-ಬಲರಾಮರ ಲೀಲಾಪ್ರಸಂಗಗಳನ್ನು ಹೇಳಿಕೊಂಡು ಆನಂದದಿಂದ ಕಾಲಕಳೆಯುತ್ತಿದ್ದರು. ಶ್ರೀಕೃಷ್ಣನ ಕಥೆಗಳಲ್ಲಿಯೇ ತನ್ಮಯ

ರಾಗಿದ್ದ ಅವರಿಗೆ ಸಾಂಸಾರಿಕಕಷ್ಟಗಳೆಂಬುದು ಮನಸ್ಸಿನಲ್ಲಿಯೂ ಸುಳಿಯುತ್ತಿರಲಿಲ್ಲ. ಅಂತಹ ನಿತ್ಯಾನಂದಸಾಗರದಲ್ಲಿ ಅವರು ಸದಾ ಮುಳುಗಿರುತ್ತಿದ್ದರು. ಹೀಗೆ ಕೃಷ್ಣ-ಬಲರಾಮರು ಬಾಲಗೋಪಾಲಕರೊಡನೆ ಕೆಲವು ವೇಳೆ ಮರಳಿನಲ್ಲಿ ಕಾಲಿಟ್ಟು ಕಪ್ಪೆಗೂಡುಗಳನ್ನು ಕಟ್ಟುತ್ತಾ, ಕೆಲವೊಮ್ಮೆ ಮರಳಿನಲ್ಲಿಯೇ ಸೇತುವೆಯನ್ನು ಕಟ್ಟುತ್ತಾ, ಕೆಲವೊಮ್ಮೆ ಮರಕೋತಿ ಆಟವನ್ನಾಡುತ್ತಾ, ಕೆಲವೊಮ್ಮೆ ನೆಗೆಯುತ್ತಾ, ಕುಣಿಯುತ್ತಾ, ಹಾಡುತ್ತಾ, ಕೊಳಲನ್ನು ನುಡಿಸುತ್ತಾ ವೃಂದಾವನವೆಂಬ ಕಾಡಿನಲ್ಲಿ ಬಾಲ್ಯಾವಸ್ಥೆಯನ್ನು ಕಳೆದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೧ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೧೨ನೆಯ ಅಧ್ಯಾಯ

## ಅಘಾಸುರನ ಉದ್ಧಾರ

ಶ್ರೀಶುಕಬ್ರಹ್ಮರು ಹೇಳುತ್ತಾರೆ :

**ಕ್ವಚಿದ್ವನಾಶಾಯ ಮನೋ ದಧದ್ವ್ರಜಾ-**
**ತ್ಪ್ರಾತಃ ಸಮುತ್ಥಾಯ ವಯಸ್ಯವತ್ಸಪಾನ್ ।**
**ಪ್ರಬೋಧಯನ್ ಶೃಙ್ಗರವೇಣ ಚಾರುಣಾ**
**ವಿನಿರ್ಗತೋ ವತ್ಸಪುರಃಸರೋ ಹರಿಃ ॥೧॥**

ಮಹಾರಾಜ! ಒಂದು ದಿನ ಶ್ರೀಹರಿಗೆ ವನಭೋಜನವನ್ನು ಮಾಡಲು ಮನಸ್ಸಾಯಿತು. ಅವನು ಬೆಳಗಾದೊಡನೆಯೇ ಎದ್ದು ಸುಮಧುರವಾಗಿ ಕೊಂಬು-ಕಹಳೆಗಳನ್ನೂದಿ ಗೋಪಬಾಲಕರನ್ನೂ, ಕರುಗಳನ್ನೂ ಎಚ್ಚರಗೊಳಿಸಿದನು. ಕರುಗಳ ಸಮೂಹವನ್ನು ಮುಂದೆ ಬಿಟ್ಟುಕೊಂಡು ಬಾಲಗೋಪಾಲನು ಗೊಲ್ಲರಹಳ್ಳಿಯಿಂದ ಹೊರಟನು.*

---

* ಇಲ್ಲಿಂದ ಮೂರು ಅಧ್ಯಾಯಗಳೂ ಹೊಸದಾಗಿ ಸೇರಿಸಲ್ಪಟ್ಟಿರುವುವು. ಆದರೂ ಬಹಳವಾಗಿ ವಾಡಿಕೆಯಲ್ಲಿರುವುದರಿಂದಲೂ ಕೆಲವರು ವ್ಯಾಖ್ಯಾನಮಾಡಿರುವುದರಿಂದಲೂ

ಸ್ನೇಹಪರರಾದ ಸಾವಿರಾರು ಮಂದಿ ಗೊಲ್ಲರ ಹುಡುಗರು ಊಟದ ಬುತ್ತಿಯನ್ನು ಬೆನ್ನಿಗೆ ಕಟ್ಟಿಕೊಂಡು, ಚಾವಟಿಯನ್ನು ಹಿಡಿದು ಕೊಂಬುಗಳನ್ನು ಊದುತ್ತಾ, ಕೊಳಲನ್ನು ನುಡಿಸುತ್ತಾ ತಮಗೆ ಸೇರಿದ ಸಹಸ್ರಾಧಿಕವಾದ ಕರುಗಳನ್ನು ಮುಂದೆ ಬಿಟ್ಟುಕೊಂಡು ಆನಂದಭರಿತರಾಗಿ ಮುದ್ದುಕೃಷ್ಣನೊಡನೆ ವೃಂದಾವನದ ಕಾಡಿಗೆ ತೆರಳಿದರು. ಹೀಗೆ ಹೋಗುವಾಗ ಶ್ರೀಕೃಷ್ಣನ ಅಸಂಖ್ಯಾತವಾದ ಕರುಗಳೊಡನೆ ತಮ್ಮ ಕರುಗಳನ್ನು ಸೇರಿಸಿಬಿಟ್ಟರು. ಅಲ್ಲಲ್ಲಿಯೇ ನಿಂತು ಬಾಲಯೋಗ್ಯವಾದ ಆಟಗಳನ್ನಾಡುತ್ತಾ ಶ್ರೀಕೃಷ್ಣಪ್ರಮುಖರಾದ ಗೋಪಾಲಬಾಲಕರು ಕಾಡಿನಲ್ಲಿ ತಿರುಗಾಡುತ್ತಿದ್ದರು. ಗೋಪಬಾಲಕರು ಗಾಜಿನ ಮಣಿಗಳಿಂದಲೂ, ಚಿನ್ನದ ವಂಕಿಗಳಿಂದಲೂ ತಮ್ಮ ಶರೀರವನ್ನು ಸಿಂಗರಿಸಿಕೊಂಡಿದ್ದರೂ ಕಾಡಿಗೆ ಬಂದೊಡನೆಯೇ ಹಣ್ಣುಗಳಿಂದಲೂ, ಚಿಗುರುಗಳಿಂದಲೂ, ಹೂವಿನಗೊಂಚಲುಗಳಿಂದಲೂ, ನವಿಲುಗರಿಗಳಿಂದಲೂ, ಗೈರಿಕಾದಿಧಾತುಗಳಿಂದಲೂ ತಮ್ಮ ಶರೀರಗಳನ್ನು ಮತ್ತಷ್ಟು ಸಿಂಗರಿಸಿಕೊಂಡು ಕುಣಿದಾಡಿದರು. ಜೊತೆಗೂಡಿ ಆಟವಾಡುತ್ತಿದ್ದಾಗ ಒಬ್ಬನು ಮತ್ತೊಬ್ಬನ ಬುತ್ತಿಯನ್ನು ಹಾರಿಸಿಬಿಡುತ್ತಿದ್ದನು. ಬುತ್ತಿಯನ್ನು ಕಳೆದುಕೊಂಡವನು ತನ್ನ ಬುತ್ತಿಯನ್ನು ಹುಡುಕುತ್ತಾ ಮತ್ತೊಬ್ಬನ ಕೊಳಲನ್ನು ಕದಿಯುತ್ತಿದ್ದನು. ಕೊಳಲು ಕಳೆದುಕೊಂಡವನು ತನ್ನ ಕೊಳಲುಕಳ್ಳನನ್ನು ಹುಡುಕುವಾಗ ಬೇರೊಬ್ಬನಲ್ಲಿದ್ದ ಕೊಂಬನ್ನು ಎಗರಿಸಿಬಿಡುವನು. ಕಳೆದುಕೊಂಡವರೆಲ್ಲರೂ ಪೆಚ್ಚಾಗಿ ಕಳೆದುಕೊಂಡುದನ್ನು ಹುಡುಕುತ್ತಿದ್ದರು. ಹಾರಿಸಿದವರು ಪಕ-ಪಕನೆ ನಗುವರು. ಬುತ್ತಿಯನ್ನು ಕಳೆದುಕೊಂಡವನಿಗೆ ತನ್ನ ಬುತ್ತಿಕಳ್ಳರು

---

ನಮ್ಮಿಂದಲೂ ಈ ಮೂರು ಅಧ್ಯಾಯಗಳಿಗೆ ವ್ಯಾಖ್ಯಾನವು ಮಾಡಲ್ಪಟ್ಟಿರುವುದು.

(ವೀರರಾಘವೀಯ)

೧೨-೧೩-೧೪-ಈ ಮೂರು ಅಧ್ಯಾಯಗಳೂ ಪ್ರಕ್ಷಿಪ್ತಾಧ್ಯಾಯಗಳು.

(ವಿಜಯಧ್ವಜೀಯ)

ಈ ಮೂರು ಅಧ್ಯಾಯಗಳೂ ಕೆಲವರಿಗೆ ಅಸಮ್ಮತವಾದರೂ, ವಾಸನಾಭಾಷ್ಯ ಮುಂತಾದ ಪ್ರಾಚೀನಟೀಕೆಗಳನ್ನು ಬರೆದು ಅನೇಕರು ಸಮ್ಮತಿಸಿರುವುದರಿಂದಲೂ ಸಕಲದೇಶಿಯ ಪುಸ್ತಕಗಳಲ್ಲಿಯೂ ಈ ಪಾಠವಿರುವುದರಿಂದಲೂ ಈ ಅಧ್ಯಾಯಗಳನ್ನು ಪ್ರಕ್ಷಿಪ್ತವೆಂದು ಹೇಳಲಾಗುವುದಿಲ್ಲ. (ಕ್ರಮಸಂದರ್ಭ)

ಯಾರೆಂಬುದು ತಿಳಿದು ಅದನ್ನು ತೆಗೆದುಕೊಳ್ಳಲು ಹೋದೊಡನೆಯೇ ಬುತ್ತಿಕಳ್ಳನು ಆ ಬುತ್ತಿಯನ್ನು ಬೇರೆಯವರಿಗೆ ಎಸೆದುಬಿಡುತ್ತಿದ್ದನು. ಅಲ್ಲಿಗೆ ಹೋಗಿ ಬುತ್ತಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ಅವನು ಅದನ್ನು ಮತ್ತೊಬ್ಬನಿಗೆ ಎಸೆಯುವನು. ಹೀಗೆ ಹತ್ತಾರು ಬಾರಿ ಸತಾಯಿಸಿ ಕಡೆಗೆ ಗಟ್ಟಿಯಾಗಿ ನಗುತ್ತಾ ಬುತ್ತಿಯನ್ನು ಕಳೆದುಕೊಂಡವನಿಗೆ ಅವನ ಬುತ್ತಿ ಯನ್ನು ತಲುಪಿಸುತ್ತಿದ್ದರು. ಇಂತಹ ನೂರಾರು ಆಟಗಳನ್ನಾಡುತ್ತಾ ಮುದ್ದುಕೃಷ್ಣನ ಜೊತೆಯಲ್ಲಿ ಗೋಪಾಲಬಾಲಕರು ಕುಣಿದು ಕುಪ್ಪಳಿಸು ವರು. ಕೆಲವೊಮ್ಮೆ ಬಾಲಕೃಷ್ಣನು ವನಸಿರಿಯನ್ನು ನೋಡಲು ಬಹಳ ದೂರಕ್ಕೆ ಹೋಗುವನು. ಅಲ್ಲಿಗೆ ಹೋದೊಡನೆಯೇ ವೇಣುವಾದನದ ಮೂಲಕವಾಗಿ ಸಂಗಡಿಗರಿಗೆ ಕರೆಕೊಡುವನು. ಆ ಸಮಯದಲ್ಲಿ ಗೋಪ ಬಾಲಕರು ನಾ ಮುಂದು-ತಾ ಮುಂದೆಂದು ನಾಗಾಲೋಟದಿಂದ ಓಡುತ್ತಾ ಹೋಗಿ ಶ್ರೀಕೃಷ್ಣನನ್ನು ಮುಟ್ಟುವರು. ಮೊದಲು ಶ್ರೀಕೃಷ್ಣನನ್ನು ಮುಟ್ಟಿದವನ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ. ತಾನೇ ಧೀರ-ವೀರ-ಶೂರ-ಸಂಪನ್ನ ನೆಂದು ಅವನು ಭಾವಿಸಿಕೊಳ್ಳುವನು.

ಶ್ರೀಕೃಷ್ಣನೊಂದಿಗೆ ಕೆಲವರು ಕೊಳಲು ನುಡಿಸುತ್ತಿದ್ದರು. ಕೆಲವರು ಕೊಂಬುಗಳನ್ನೂದುತ್ತಿದ್ದರು. ಕೆಲವರು ದುಂಬಿಗಳ ಧ್ವನಿಯನ್ನು ಅನುಕರಿ ಸುತ್ತಾ ಅದರಂತೆಯೇ ಧ್ವನಿಮಾಡುತ್ತಿದ್ದರು. ಆ ಶಬ್ದವನ್ನು ಕೇಳಿದವರಿಗೆ ದುಂಬಿಯೇ ಬಂದಿತೆಂಬ ಭ್ರಮೆಯುಂಟಾಗುತ್ತಿದ್ದಿತು. ಕೆಲವರು ನವಿಲು ಗಳಂತೆ 'ಕುವೋ-ಕುವೋ' ಎಂದು ಕೂಗಿ ನವಿಲುಗಳಿಗೇ ಭ್ರಾಂತಿಯ ನ್ನುಂಟುಮಾಡುತ್ತಿದ್ದರು. ಕೆಲವು ಗೋಪಾಲಬಾಲಕರು ಆಕಾಶದಲ್ಲಿ ಹಾರಿಹೋಗುತ್ತಿದ್ದ ಪಕ್ಷಿಗಳ ನೆಳಲನ್ನೇ ಅನುಸರಿಸಿ ಓಡುತ್ತಿದ್ದರು. ಕೆಲವರು ಹಂಸಪಕ್ಷಿಗಳಂತೆ ಬೆಡಗಿನಿಂದ ನಡೆಯುತ್ತಿದ್ದರು. ಕೆಲವರು ಬಕಪಕ್ಷಿಯಂತೆ ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಾಸಕ್ತರಾಗಿರುವಂತೆ ತೋರಿಸಿಕೊಳ್ಳು ತ್ತಿದ್ದರು. ಕೆಲವರು ನವಿಲುಗಳ ಜೊತೆಯಲ್ಲಿಯೇ ನರ್ತಿಸುತ್ತಿದ್ದರು. ಕೆಲವರು ಕೋತಿಗಳ ಬಾಲಗಳನ್ನು ಎಳೆಯುತ್ತಿದ್ದರು. ಕೆಲವರು ಕೋತಿಗಳ ಜೊತೆಯಲ್ಲಿಯೇ ಮರದಿಂದ ಮರಕ್ಕೆ ಹಾರುತ್ತಿದ್ದರು. ಕೆಲವರು ಅವುಗಳ ಜೊತೆಯಲ್ಲೇ ಕುಳಿತು ಅವುಗಳಂತೆಯೇ ಚೇಷ್ಟೆಮಾಡುತ್ತಿದ್ದರು. ಕೆಲವರು

ಅವುಗಳಂತೆಯೇ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ನೆಗೆಯುತ್ತಿದ್ದರು. ಕೆಲವರು ನದಿಯ ನೀರಿನಲ್ಲಿಳಿದು ತೊಳಚಾಡುತ್ತಾ ಆಟ ವಾಡುತ್ತಿದ್ದರು. ಕೆಲವರು ನೀರಿನಲ್ಲಿರುವ ಕಪ್ಪೆಗಳಂತೆಯೇ ವಟಗುಟ್ಟುತ್ತಾ ಕುಪ್ಪಳಿಸುವರು. ಕೆಲವರು ತಮ್ಮ ಮುಖಗಳನ್ನು ಒಮ್ಮೆ ಸೊಟ್ಟಗೆ ಮಾಡಿ ಕೊಂಡು, ಮತ್ತೊಮ್ಮೆ ಕೋಪಮಾಡಿಕೊಂಡು, ಮತ್ತೊಮ್ಮೆ ಬೆದರಿಕೆಯ ಭಾವವನ್ನು ತಳೆದು, ಮತ್ತೊಮ್ಮೆ ಕಿಲ-ಕಿಲನೆ ನಗುತ್ತಾ ನೀರಿನಲ್ಲಿ ಪ್ರತಿಬಿಂಬ ವನ್ನು ನೋಡಿಕೊಂಡು ಆನಂದಿಸುತ್ತಿದ್ದರು. ಕೆಲವರು ನದಿಯ ತೀರದಲ್ಲಿದ್ದ ಕೂಗುಬಂಡೆಗಳ ಮುಂದೆ ನಿಂತು–'ಯಾರೋ ಅದು ಹುಚ್ಚುಮುಂಡೇ?'– ಎಂದು ಜೋರಾಗಿ ಕೂಗುವರು. ಅದೇ ಶಬ್ದವೇ ಪ್ರತಿಧ್ವನಿಸುತ್ತಿದ್ದಿತು. 'ಏಟುಬೇಕೇನೋ?'–ಎನ್ನುವರು. ಪುನಃ ಅದೇ ಶಬ್ದವೇ ಹಿಂದಿರುಗು ತ್ತಿದ್ದಿತು. 'ಚಚ್ಚಿ ಬಿಡ್ತೀನಿ'–ಎನ್ನುತ್ತಿದ್ದರು. ಪುನಃ ಅತ್ತಕಡೆಯಿಂದಲೂ 'ಚಚ್ಚಿ ಬಿಡ್ತೀನಿ'–ಎಂಬ ಶಬ್ದವೇ ಬರುತ್ತಿದ್ದಿತು. ಹೀಗೆ ಆಡಿದಂತೆಯೇ ಆಡುವ ಪ್ರತಿ ಶಬ್ದಗಳನ್ನು ಕೇಳಿ ಗೋಪಬಾಲಕರು ಆನಂದಿಸುತ್ತಿದ್ದರು.

ಇತ್ಥಂ ಸತಾಂ ಬ್ರಹ್ಮಸುಖಾನುಭೂತ್ಯಾ
ದಾಸ್ಯಂ ಗತಾನಾಂ ಪರದೈವತೇನ ।
ಮಾಯಾಶ್ರಿತಾನಾಂ ನರದಾರಕೇಣ
ಸಾಕಂ ವಿಜಹ್ರುಃ ಕೃತಪುಣ್ಯಪುಞ್ಜಾಃ ॥೧೧॥

ಪರೀಕ್ಷಿತ! ಹೀಗೆ ಸತ್ಪುರುಷರಿಗೆ (ಜ್ಞಾನಿಗಳಿಗೆ) ಬ್ರಹ್ಮಾನಂದಾನು ಭವರೂಪನಾಗಿದ್ದ, ದಾಸ್ಯಭಾವದಿಂದ ಆರಾಧಿಸುವ ಭಕ್ತರಿಗೆ ಪರದೇವತೆ ಯಾಗಿದ್ದ, ಮಾಯೆಯಿಂದ ಮುಚ್ಚಲ್ಪಟ್ಟ ಅಜ್ಞಾನಿಗಳಿಗೆ ಸಾಧಾರಣ ಮಾನವಬಾಲಕನಾಗಿದ್ದ ಶ್ರೀಕೃಷ್ಣನೊಡನೆ ಅತ್ಯಂತಪುಣ್ಯಶಾಲಿಗಳಾಗಿದ್ದ ಗೊಲ್ಲರ ಹುಡುಗರು ನಾನಾವಿಧವಾದ ಆಟ-ಪಾಟಗಳನ್ನು ಆಡುತ್ತಿದ್ದರು.

ಯತ್ಪಾದಪಾಂಸುರ್ಬಹುಜನ್ಮಕೃಚ್ಛ್ರತೋ
ಧೃತಾತ್ಮಭಿರ್ಯೋಗಿಭಿರಪ್ಯಲಭ್ಯಃ ।
ಸ ಏವ ಯದ್ದೃಗ್ವಿಷಯಃ ಸ್ವಯಂ ಸ್ಥಿತಃ
ಕಿಂ ವರ್ಣ್ಯತೇ ದಿಷ್ಟಮತೋ ವ್ರಜೌಕಸಾಮ್ ॥೧೨॥

ಭಗವಂತನಾದ ಶ್ರೀಕೃಷ್ಣನ ಪಾದಧೂಳಿಯು ಸಾಮಾನ್ಯವಾದುದಲ್ಲ. ಹಲವಾರು ಜನ್ಮಗಳು ಬಹಳ ಕಷ್ಟಪಟ್ಟು ತಪಸ್ಸು ಮಾಡಿದ ಜಿತೇಂದ್ರಿಯ ರಾದ ಶುದ್ಧಾಂತಃಕರಣರಾದ ಮಹಾಯೋಗಿಗಳಿಗೂ ಅದು ಅಲಭ್ಯವಾ ದುದು. ಹೀಗಿರುವಾಗ ಅಂತಹ ಭಗವಂತನು ವ್ರಜವಾಸಿಗಳಾದ ಗೋಪ ಬಾಲಕರ ಸಮಕ್ಷದಲ್ಲಿಯೇ ಇದ್ದು ಅವರೊಡನೆ ಆಟವಾಡುತ್ತಿದ್ದನೆಂದರೆ ಆ ವ್ರಜವಾಸಿಗಳ ಪರಮಸೌಭಾಗ್ಯವನ್ನು ಏನೆಂದು ವರ್ಣಿಸೋಣ!

ಪರೀಕ್ಷಿತ! ಆ ಸಮಯಕ್ಕೆ ಸರಿಯಾಗಿ ಅಘಾಸುರನೆಂಬ ರಾಕ್ಷಸ ನೊಬ್ಬನು ಅಲ್ಲಿಗೆ ಬಂದನು. ಗೋಪಬಾಲಕರು ಶ್ರೀಕೃಷ್ಣನೊಡನೆ ಆಟ ವಾಡುತ್ತಾ ಆನಂದತುಂದಿಲರಾಗಿರುವುದು ಅವನಿಗೆ ಸಹ್ಯವಾಗಲಿಲ್ಲ. ಅವನು ಮಹಾಕ್ರೂರಿಯಾಗಿದ್ದನು. ಅಮೃತಪಾನಮಾಡಿ ಅಮರರಾಗಿದ್ದ ದೇವತೆಗಳು ಕೂಡ ಅವನ ಸಾವನ್ನು ಅನುದಿನವೂ ಪ್ರತೀಕ್ಷಿಸುತ್ತಲೇ ಇದ್ದರು. ಅಘಾಸುರನು ಪೂತನೆಯ ಮತ್ತು ಬಕಾಸುರನ ತಮ್ಮನಾಗಿದ್ದನು. ಕಂಸನಿಂದಲೇ ಶ್ರೀಕೃಷ್ಣನ ಸಂಹಾರಕ್ಕೆಂದು ಕಳುಹಿಸಲ್ಪಟ್ಟಿದ್ದನು. ಕೃಷ್ಣನೇ ಮೊದಲಾದ ಗೋಪಾಲಬಾಲಕರನ್ನು ನೋಡಿ ತನ್ನ ಅಣ್ಣನನ್ನೂ, ಅಕ್ಕನನ್ನೂ ಸಂಹರಿಸಿದ ಶ್ರೀಕೃಷ್ಣನನ್ನು ಗೋಪಾಲಬಾಲಕರ ಸಹಿತವಾಗಿ ಸಂಹರಿಸಿ ಈ ಮೂಲಕವಾಗಿ ಕಂಸರಾಜನ ಆಶಯವನ್ನು ಪೂರೈಸಿಕೊಡಲು ನಿಶ್ಚಯಿ ಸಿದನು. "ಕೃಷ್ಣಪ್ರಮುಖರಾದ ಈ ಗೋಪಾಲಬಾಲಕರೆಲ್ಲರನ್ನೂ ಸಂಹರಿಸಿ ನನ್ನ ಅಕ್ಕನಿಗೂ, ಅಣ್ಣನಿಗೂ ಜಲತರ್ಪಣವನ್ನು ಕೊಡುತ್ತೇನೆ. ಕೃಷ್ಣಾದಿಗಳು ಅವಸಾನಹೊಂದಿದೊಡನೆ ವ್ರಜವಾಸಿಗಳೆಲ್ಲರೂ ತಮಗೆ ತಾವೇ ಸತ್ತುಹೋಗುತ್ತಾರೆ. ಅವರನ್ನು ಸಂಹರಿಸುವ ಶ್ರಮವೇನೂ ಇರುವುದಿಲ್ಲ. ಏಕೆಂದರೆ : ಸಂತಾನವೆಂಬುದೇ ಪ್ರಾಣಿಗಳ ಪ್ರಾಣವಾಗಿದೆ. ಪ್ರಾಣಸ್ವರೂಪ ವಾದ ಸಂತಾನವೇ ವಿನಾಶಹೊಂದಿದನಂತರ ಕೇವಲ ದೇಹವು ಹೇಗೆತಾನೇ ಉಳಿದುಕೊಂಡೀತು? ಆದುದರಿಂದ ಈ ಮಕ್ಕಳ ವಿನಾಶದಿಂದ ವ್ರಜವಾಸಿಗಳೆಲ್ಲರೂ ವಿನಾಶಹೊಂದುವುದು ನಿಶ್ಚಯ."

ಪರೀಕ್ಷಿತ! ಹೀಗೂ ದುಷ್ಟನಾದ ಆ ಅಘಾಸುರನು ಯೋಚಿಸಿ ದನು. ಹೀಗೆ ಯೋಚಿಸಿದ ಆ ದುಷ್ಟ ಅಘಾಸುರನು ಒಡನೆಯೇ ಹೆಬ್ಬಾವಿನ

ರೂಪವನ್ನು ತಾಳಿದನು. ಆ ಹೆಬ್ಬಾವಿನ ಶರೀರವು ಒಂದು ಯೋಜನದಷ್ಟು ಉದ್ದವಾಗಿಯೂ ಪರ್ವತದಷ್ಟು ಎತ್ತರವಾಗಿಯೂ ಮತ್ತು ದಪ್ಪವಾಗಿಯೂ ಇದ್ದಿತು. ಕೃಷ್ಣಸಹಿತರಾದ ಗೋಪಬಾಲಕರನ್ನು ನುಂಗಿಹಾಕುವುದೇ ಅವನ ಆಶಯವಾಗಿದ್ದಿತು. ಆದುದರಿಂದ ಅಘಾಸುರನು ಗುಹೆಗೆ ಸಮಾನವಾಗಿದ್ದ ತನ್ನ ಬಾಯನ್ನು ದೊಡ್ಡದಾಗಿ ತೆರೆದುಕೊಂಡು ಹಾದಿಯಲ್ಲಿ ಮಲಗಿಬಿಟ್ಟನು. ಅದ್ಭುತಾಕಾರದ ಆ ಹೆಬ್ಬಾವಿನ ಕೆಳದುಟಿಯೇ ಭೂಮಿಯಾಗಿದ್ದಿತು. ಮೇಲ್ತುಟಿಯೇ ಆಕಾಶವಾಗಿದ್ದಿತು. ದವಡೆಗಳು ಗವಿಗಳಂತಿದ್ದುವು. ಕೋರೆದಾಡೆಗಳು ಪರ್ವತದ ಶಿಖರಗಳಂತಿದ್ದುವು. ಮುಖದೊಳಗೆ ಗಾಢಾಂಧಕಾರವು ಕವಿದಿದ್ದಿತು. ಅದರ ನೀಳವಾದ ನಾಲಗೆಯು ಒಂದು ರಾಜಬೀದಿಯಂತೆಯೇ ಕಂಗೊಳಿಸುತ್ತಿದ್ದಿತು. ಸುಂಟರಗಾಳಿಯೇ ಅದರ ಶ್ವಾಸ-ನಿಃಶ್ವಾಸವಾಗಿದ್ದಿತು. ಅದರ ಕಣ್ಣುಗಳು ದಾವಾಗ್ನಿಯಂತೆ ಪ್ರಜ್ವಲಿಸು ತ್ತಿದ್ದುವು.

ಅಘಾಸುರನ ಇಂತಹ ಪರಮಾದ್ಭುತವಾದ ಶರೀರವನ್ನು ನೋಡಿದ ಬಾಲಕರು ಅದನ್ನು ವೃಂದಾವನದ ವನಸಿರಿಯನ್ನು ಹೆಚ್ಚಿಸುವ ಪ್ರೇಕ್ಷಣೀಯವಾದ ಮತ್ತು ಆಕರ್ಷಕವಾದ ವಸ್ತುವೆಂದೇ ಭಾವಿಸಿದರು. ಆ ಭೂತವು ಯಾವುದೆಂಬುದನ್ನು ತಿಳಿಯುವ ಕುತೂಹಲದಿಂದ ಗೊಲ್ಲರ ಹುಡುಗರು ಅದನ್ನು ಪರೀಕ್ಷಿಸತೊಡಗಿದರು. ಅವರಲ್ಲಿ ಒಬ್ಬ ಉತ್ಪ್ರೇಕ್ಷೆಮಾಡಿ ಹೇಳಿದ : "ಅಗಲವಾಗಿ ಬಾಯ್ತೆರೆದುಕೊಂಡಿರುವ ಇದು ಹೆಬ್ಬಾ ವಾಗಿರಬಹುದು." ಮತ್ತೊಬ್ಬ ಹೇಳಿದ : "ಮಿತ್ರರೇ! ಇದೊಂದು ಮಹಾ ಪ್ರಾಣಿಯೇ ಆಗಿರಬಹುದು. ನಮ್ಮೆಲ್ಲರನ್ನೂ ನುಂಗಿಹಾಕಲು ಹೆಬ್ಬಾವಿ ನಂತೆ ವೇಷವನ್ನು ಧರಿಸಿ ಬಾಯ್ತೆರೆದುಕೊಂಡು ಮಲಗಿರಬಹುದು. ಎಚ್ಚರಿಕೆ!" ನಗು-ನಗುತ್ತಲೇ ಅವರು ಮಾತನ್ನು ಮುಂದುವರಿಸಿದರು. ಮತ್ತೊಬ್ಬ ಗೊಲ್ಲಬಾಲಕನು ಆ ಮಹಾಪ್ರಾಣಿಯನ್ನು ವರ್ಣಿಸತೊಡಗಿದ : "ಮಿತ್ರರೇ! ಮೇಲ್ಭಾಗದಲ್ಲಿ ನೋಡಿರಿ. ಸೂರ್ಯನ ಕಿರಣಗಳು ಬಿದ್ದು ಎಣೆಗೆಂಪಾಗಿ ಕಾಣುತ್ತಿರುವ ಮೋಡಗಳೇ ಈ ಮಹಾಪ್ರಾಣಿಯ ಮೇಲ್ತುಟಿ ಯಾಗಿರಬಹುದು. ಆ ಮೋಡಗಳ ಛಾಯೆಯಿಂದ ಕೆಂಪಾಗಿ ಕಾಣುತ್ತಿರುವ ಭೂಮಿಯೇ ಈ ಮಹಾಸತ್ತ್ವದ ಕೆಳತುಟಿಯಾಗಿರಬಹುದು." ಮತ್ತೊಬ್ಬ

ಗೋಪಾಲಬಾಲಕನು ಪರೀಕ್ಷಿಸಿ ಹೇಳಿದ : "ಇಗೋ ನೋಡಿರಿ! ಈ ಮಹಾ ಪ್ರಾಣಿಯ ಮುಖದ ಎರಡು ಭಾಗಗಳೂ ಗವಿಗಳಂತೆಯೇ ಕಾಣುತ್ತಿವೆ. ಈ ಗವಿಗಳು ಹೆಬ್ಬಾವಿನ ಎರಡು ದವಡೆಗಳೇ ಆಗಿರಬಹುದು."

ಎಲ್ಲವೂ ಸತ್ಯವೇ. ಆದರೆ ಮುಗ್ಧಬಾಲಕರಿಗೆ ತಾವು ಹೇಳುತ್ತಿರುವುದು ಸತ್ಯವೆಂಬ ಅರಿವಿಲ್ಲ. ಎಲ್ಲರೂ ಮನಬಂದಂತೆ ಉತ್ಪ್ರೇಕ್ಷೆಮಾಡುತ್ತಿದ್ದೇವೆಂದೇ ಅವರ ಭಾವನೆಯಾಗಿತ್ತು. ಮತ್ತೊಬ್ಬ ಗೊಲ್ಲಬಾಲಕ ಹೇಳಿದ : "ಗೆಳೆಯರೇ! ಎತ್ತರವಾದ ಪರ್ವತಶಿಖರಗಳು ಇದರ ಬಾಯಲ್ಲಿರುವ ಕೋರೆಹಲ್ಲುಗಳೊಡನೆ ಸ್ಪರ್ಧಿಸುವಂತೆ ಕಾಣುತ್ತಿರುವುದನ್ನು ನೋಡಿರಿ. ಈ ಮಹಾಪ್ರಾಣಿಯ ಕೋರೆಹಲ್ಲುಗಳು ಪರ್ವತಶಿಖರಗಳಂತೆಯೇ ಇವೆ." ಮತ್ತೊಬ್ಬ ಗೋಪಬಾಲಕನು ವರ್ಣಿಸಿದ : "ಗೆಳೆಯರೇ! ಎಲ್ಲರೂ ನೋಡಿರಿ. ನೀಳವಾಗಿಯೂ ವಿಸ್ತಾರವಾಗಿಯೂ ಇರುವ ಹೆದ್ದಾರಿಯು ಈ ಹೆಬ್ಬಾವಿನ ನಾಲಿಗೆಯೊಡನೆ ಸ್ಪರ್ಧಿಸುತ್ತಿರುವಂತೆ ಕಾಣುತ್ತಿದೆ. ಗಿರಿಶೃಂಗಗಳ ಮಧ್ಯದಲ್ಲಿರುವ ಅಂಧಕಾರವು ಈ ಹೆಬ್ಬಾವಿನ ಬಾಯಲ್ಲಿರುವ ಕತ್ತಲೆಯೊಡನೆ ಸೆಣೆಸುತ್ತಿದೆ." ಮತ್ತೊಬ್ಬ ಗೊಲ್ಲಬಾಲಕನು ಉತ್ಪ್ರೇಕ್ಷಿಸಿದ : "ಮಿತ್ರರೇ! ಗಮನಿಸಿರಿ. ಕಾಡುಗಿಚ್ಚಿನ ಮೇಲೆ ಬೀಸಿಬರುತ್ತಿರುವ ಉಷ್ಣವಾದ ಗಾಳಿಯೂ ಈ ಹೆಬ್ಬಾವಿನ ಶ್ವಾಸ-ನಿಃಶ್ವಾಸವೇ ಆಗಿರಬಹುದು. ಕಾಡುಗಿಚ್ಚಿನಿಂದ ಹೊರಬರುತ್ತಿರುವ ಸುಟ್ಟಪ್ರಾಣಿಗಳ ದುರ್ಗಂಧವು ಈ ಅಜಗರದ ಹೊಟ್ಟೆಗೆ ಸೇರಿರುವ ಸತ್ತಪ್ರಾಣಿಗಳ ಮಾಂಸದ ವಾಸನೆಯಾಗಿರಬಹುದು." ಕೆಲವು ಗೋಪಬಾಲಕರು ಮುಂದಾಗುವುದನ್ನೂ ಉತ್ಪ್ರೇಕ್ಷಿಸಿ ಹೇಳಿಬಿಟ್ಟರು. "ಒಡನಾಡಿಗಳೇ! ನಾವೇನಾದರೂ ಇದರ ಮುಖವನ್ನು ಪ್ರವೇಶಿಸಿದರೆ ನಮ್ಮೆಲ್ಲರನ್ನೂ ನುಂಗಿಹಾಕಲು ಅದಕ್ಕೆ ಹೇಗೆ ಸಾಧ್ಯವಾಗುತ್ತದೆ? ಒಂದು ವೇಳೆ ಹಾಗೇನಾದರೂ ನುಂಗಿಹಾಕಿದರೆ ಬಕಾಸುರನಂತೆಯೇ ವಿನಾಶಹೊಂದುತ್ತದೆ. ನಮ್ಮ ಮುದ್ದು ಕೃಷ್ಣನು ನಮ್ಮನ್ನು ನುಂಗಲು ಬಿಟ್ಟುಬಿಟ್ಟಾನಾ!"–ಎಂದು ಗೋಪಾಲ ಬಾಲಕರು ಕೃಷ್ಣನ ನಗುಮುಖವನ್ನೇ ದಿಟ್ಟಿಸಿನೋಡುತ್ತಾ ಚಪ್ಪಾಳೆಗಳನ್ನು

ತಟ್ಟುತ್ತಾ ಆನಂದತುಂದಿಲರಾಗಿ ಹೆಬ್ಬಾವಿನ ಮುಖದಲ್ಲಿ ಪ್ರವೇಶಿಸಿಯೇ ಬಿಟ್ಟರು.



ಪರೀಕ್ಷಿತ! ಹೀಗೆ ಅಜ್ಞರಾದ ಗೋಪಬಾಲಕರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದ ಉತ್ಪ್ರೇಕ್ಷೆಯ ಮಾತುಗಳನ್ನು ಶ್ರೀಕೃಷ್ಣನು ಕೇಳಿಸಿಕೊಂಡನು. ನಿಶ್ಚಯವಾಗಿಯೂ ಅವರು ಆಡುತ್ತಿದ್ದ ಮಾತುಗಳು ಉತ್ಪ್ರೇಕ್ಷೆಯ ಮಾತುಗಳಾಗಿರಲಿಲ್ಲ. ಸತ್ಯವಾದ ಮಾತುಗಳೇ ಆಗಿದ್ದುವು. ಆದರೆ ತಾವು ಉತ್ಪ್ರೇಕ್ಷೆಯ ಮಾತುಗಳನ್ನು ಆಡುತ್ತಿರುವುದಾಗಿ ಅಜ್ಞರಾದ ಗೋಪಾಲಬಾಲಕರು ಭಾವಿಸಿಕೊಂಡಿದ್ದರು. 'ಅಮೃಷಾ ಮೃಷಾಯತೇ' ಇದು ಸರ್ಪವೆಂಬುದು ಸುಳ್ಳಲ್ಲ; ಆದರೂ ಇವರು ಸುಳ್ಳಾಗಿ ಭಾವಿಸಿ ಕೊಂಡಿದ್ದಾರೆ'–ಎಂದು ಶ್ರೀಕೃಷ್ಣನು ಚಿಂತಿಸತೊಡಗಿದನು. ಶ್ರೀಕೃಷ್ಣ ಭಗವಂತನು ಸರ್ವಾಂತರ್ಯಾಮಿ. ರಾಕ್ಷಸನ ಹೃದಯದಲ್ಲೂ ಅವನೇ ಇದ್ದಾನೆ. ಆದುದರಿಂದ ಅವನಿಗೆ ಹೆಬ್ಬಾವಿನ ರೂಪದಲ್ಲಿರುವವನು ಘೋರ ರಾಕ್ಷಸನೆಂಬುದು ತಿಳಿದುಹೋಯಿತು. ತಮ್ಮವರೆಲ್ಲರನ್ನೂ ಹೆಬ್ಬಾವಿನ ಬಾಯೊಳಗೆ ಹೋಗದಂತೆ ತಡೆಯಬೇಕೆಂದು ಭಗವಂತನು ನಿಶ್ಚಯಿಸಿದನು. ಭಗವಂತನು ಹೀಗೆ ಯೋಚಿಸುತ್ತಿದ್ದಾಗಲೇ ಸಮಸ್ತಗೋಪಾಲಬಾಲಕರೂ ಕರುಗಳ ಸಮೇತವಾಗಿ ಹೆಬ್ಬಾವಿನ ಹೊಟ್ಟೆಯನ್ನು ಸೇರಿಯೇಬಿಟ್ಟರು. ಆದರೆ ಅಘಾಸುರನು ಅವರನ್ನು ನುಂಗಲಿಲ್ಲ; ಜೀರ್ಣಿಸಿಕೊಳ್ಳಲೂ ಇಲ್ಲ. ಇದಕ್ಕೆ ಕಾರಣ : ಶ್ರೀಕೃಷ್ಣನು ಅವನ ಅಣ್ಣನಾದ ಬಕಾಸುರನನ್ನೂ ಅಕ್ಕನಾದ

ಪೂತನೆಯನ್ನೂ ಸಂಹರಿಸಿದ್ದು ಅವನ ಸ್ಮರಣೆಯಲ್ಲಿದ್ದಿತು. ಆದುದರಿಂದ ಮುಖ್ಯವಾಗಿ ಶ್ರೀಕೃಷ್ಣನು ಅವನ ಹೊಟ್ಟೆಯನ್ನು ಪ್ರವೇಶಿಸಬೇಕಾಗಿದ್ದಿತು. ಅದನ್ನೇ ಅವನು ನಿರೀಕ್ಷಿಸುತ್ತಿದ್ದನು. ಶ್ರೀಕೃಷ್ಣನೂ ಪ್ರವೇಶಿಸಿಬಿಟ್ಟರೆ ಒಂದೇ ಬಾರಿಗೆ ಎಲ್ಲರನ್ನೂ ಕಬಳಿಸಿ ಅರಗಿಸಿಕೊಂಡುಬಿಡುವ ಯೋಜನೆಯು ಅಘಾಸುರನದಾಗಿತ್ತು.

ಸಕಲರಿಗೂ ಅಭಯಪ್ರದನಾದವನು ಶ್ರೀಕೃಷ್ಣ. ಗೊಲ್ಲರ ಹುಡುಗರಿಗೂ ಇವನೇ ಏಕಮಾತ್ರರಕ್ಷಕನಾಗಿದ್ದನು. ಆದರೂ ಅವರು ಇವನ ಕೈತಪ್ಪಿ ಹೋಗಿದ್ದರು. ಗೋಪಬಾಲಕರು ಒಳಗೆ ಹೋಗದಂತೆ ತಡೆಯಬೇಕು–ಎನ್ನುವಷ್ಟರಲ್ಲಿಯೇ ಕರುಗಳೊಡನೆ ಅವರೆಲ್ಲರೂ ಅಘಾಸುರನ ಹೊಟ್ಟೆಯನ್ನು ಸೇರಿಯಾಗಿದ್ದಿತು. ಹುಲ್ಲುಕಡ್ಡಿಯು ಕೈತಪ್ಪಿ ಅಗ್ನಿಗೆ ಬಿದ್ದುಹೋಗುವಂತೆ ಕರುಗಳೂ ದೀನರಾದ ಗೋಪಾಲಕರೂ ಕೃಷ್ಣನ ಕೈತಪ್ಪಿ ಅಘಾಸುರನ ಜಠರಾಗ್ನಿಗೆ ಬಿದ್ದುಹೋಗಿದ್ದರು. ದಯಾರ್ದ್ರಹೃದಯನಾದ ಶ್ರೀಕೃಷ್ಣನು ದೈವದ ಈ ವಿಚಿತ್ರವಾದ ಗತಿಯನ್ನು ನೋಡಿ ಅಚ್ಚರಿಗೊಂಡನು ಮತ್ತು ತತ್ಕಾಲದಲ್ಲಿ ತಾನು ಮಾಡಬೇಕಾದ ಕರ್ತವ್ಯದ ವಿಷಯವಾಗಿಯೂ ಯೋಚಿಸಿದನು. "ಈಗ ನಾನೇನು ಮಾಡಲಿ? ಈ ನೀಚನನ್ನು ಸಂಹರಿಸಬೇಕು. ಸಂತಸ್ವಭಾವದವರಾದ, ನನ್ನ ಗೆಳೆಯರಾದ ಗೋಪಬಾಲಕರಿಗೂ ಮತ್ತು ಕರುಗಳಿಗೂ ಯಾವ ವಿಧವಾದ ಹಿಂಸೆಯೂ ಆಗಬಾರದು. ಈ ಎರಡನ್ನೂ ಹೇಗೆ ಸಾಧಿಸಲಿ?"

ಪರೀಕ್ಷಿತನೇ! ಶ್ರೀಹರಿಯು ಭೂತ-ಭವಿಷ್ಯದ್ವರ್ತಮಾನಗಳನ್ನೂ ತಿಳಿದವನಾಗಿದ್ದನು. ಅವನಿಗೆ ಎರಡೂ ಕಾರ್ಯಗಳ ಸಾಧನೆಗೆ ಉಪಾಯವನ್ನು ಕಂಡುಕೊಳ್ಳುವುದರಲ್ಲಿ ಕಷ್ಟವೇನೂ ಆಗಲಿಲ್ಲ. ತನ್ನ ಕರ್ತವ್ಯವೇನೆಂಬುದನ್ನು ನಿಶ್ಚಯಿಸಿ ಹೆಬ್ಬಾವಿನ ಮುಖದಲ್ಲಿ ತಾನೂ ಪ್ರವೇಶಿಸಿಯೇ ಬಿಟ್ಟನು. ಆ ಸಮಯದಲ್ಲಿ ಮೋಡಗಳ ಹಿಂದಿದ್ದ ದೇವತೆಗಳೆಲ್ಲರೂ 'ಅಯ್ಯೋ! ಅಯ್ಯೋ! ಸರ್ವನಾಶವಾಗಿಹೋಯಿತು'–ಎಂದು ಕೂಗಿಕೊಂಡರು. ಅಘಾಸುರನ ಹಿತೈಷಿಗಳೂ ಬಂಧುಗಳೂ ಆದ ಕಂಸನೇ ಮೊದಲಾದವರು ಹಿರಿ-ಹಿಗ್ಗಿದರು. ತನ್ನ ಆಶಯದಂತೆ ಕೃಷ್ಣನೂ ಒಳಹೊಕ್ಕನಾದ ಕಾರಣ ಅಘಾಸುರನು ಮರುಕ್ಷಣದಲ್ಲಿಯೇ ಕೃಷ್ಣಸಹಿತರಾದ ಗೋಪಬಾಲಕ

ರನ್ನೂ ಕರುಗಳನ್ನೂ ಕೋರೆಹಲ್ಲುಗಳಿಂದ ಜಗಿದು ನುಂಗಿ ಜೀರ್ಣಮಾಡಿ ಕೊಳ್ಳಲು ಹವಣಿಸುತ್ತಿದ್ದನು. ಆದರೆ ಅವನ ದುರಾಲೋಚನೆಯನ್ನು ತಿಳಿದಿದ್ದ ಭಗವಂತನು ಅವನ ಕುತ್ತಿಗೆಯ ಪ್ರದೇಶದಲ್ಲಿ ನಿಂತು ತನ್ನ ಪುಟ್ಟ ಶರೀರವನ್ನು ಹಿಗ್ಗಿಸತೊಡಗಿದನು. ಶ್ರೀಕೃಷ್ಣನು ಮಹಾಕಾಯನಾಗಿ ಕುತ್ತಿಗೆಯನ್ನು ಆವರಿಸಿಕೊಂಡುದರಿಂದ ಆ ಹೆಬ್ಬಾವಿನ ಕುತ್ತಿಗೆಗೆ ಬಿರಟೆ ಯನ್ನು ಹಾಕಿದಂತಾಗಿ ಶ್ವಾಸೋಚ್ಛ್ವಾಸವೇ ನಿಂತುಹೋಯಿತು. ರಾಕ್ಷಸನ ಕಣ್ಣುಗುಡ್ಡೆಗಳು ಹೊರಬಂದುವು. ಆತನು ವ್ಯಾಕುಲನಾಗಿ ಪ್ರಾಣಸಂಕಟ ದಿಂದ ಚಡಪಡಿಸತೊಡಗಿದನು. ಅಂತರಂಗದಲ್ಲಿ ಪೂರ್ಣವಾಗಿ ನಿರೋಧಿಸಲ್ಪಟ್ಟಿದ್ದ ಪ್ರಾಣವಾಯುವು ಬೇರೆಲ್ಲೂ ಹೋಗಲು ಮಾರ್ಗವನ್ನು ಕಾಣದೆ ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ರಾಕ್ಷಸನ ಶರೀರದಿಂದ ಹೊರಬಿದ್ದಿತು. ಪ್ರಾಣಗಳೊಡನೆ ರಾಕ್ಷಸನ ಸಮಸ್ತವಾದ ಇಂದ್ರಿಯಗಳೂ ಭಯಂಕರವಾಗಿ ಕಾಣುತ್ತಿದ್ದ ಆ ರಾಕ್ಷಸನ ಶರೀರದಿಂದ ಹೊರಬಿದ್ದುವು. ಇಂದ್ರಿಯಗಳ ಕ್ರಿಯೆಯೂ ನಿಂತುಹೋಯಿತು. ಭಗವಂತನಾದ ಮುಕುಂದನು ಮೃತಪ್ರಾಯರಾಗಿದ್ದ ತನ್ನ ಸುಹೃದರನ್ನೂ ಕರುಗಳನ್ನೂ ಅಮೃತಮಯವಾದ ದೃಷ್ಟಿಯನ್ನು ಬೀರಿ ಪುನರುಜ್ಜೀವನಗೊಳಿಸಿ ಅವರೆಲ್ಲರೊಡನೆ ರಾಕ್ಷಸನ ಬಾಯಿಂದ ಹೊರಬಂದನು.

ಪರೀಕ್ಷಿತನೇ! ಅಚ್ಚರಿಯ ಈ ಸಂಗತಿಯನ್ನು ಕೇಳು :

**ಪೀನಾಹಿಭೋಗೋತ್ಥಿತಮದ್ಭುತಂ ಮಹ-**
**ಜ್ಜ್ಯೋತಿಃ ಸ್ವಧಾಮ್ನಾ ಜ್ವಲಯದ್ದಿಶೋ ದಶ ।**
**ಪ್ರತೀಕ್ಷ್ಯ ಖೇಽವಸ್ಥಿತಮೀಶನಿರ್ಗಮಂ**
**ವಿವೇಶ ತಸ್ಮಿನ್ಮಿಷತಾಂ ದಿವೌಕಸಾಮ್ ॥೩೩॥**

ಆ ಸಮಯದಲ್ಲಿ ಹೆಬ್ಬಾವಿನ ಸ್ಥೂಲಶರೀರದಿಂದ ಅತ್ಯದ್ಭುತವಾದ ಮಹಾಜ್ಯೋತಿಯು ಹೊರಬಂದಿತು. ಆ ದಿವ್ಯಜ್ಯೋತಿಯು ತನ್ನ ದಿವ್ಯಪ್ರಕಾಶದಿಂದ ಹತ್ತು ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತಿದ್ದಿತು. ಆ ಜ್ಯೋತಿಯು ಆಕಾಶದಲ್ಲಿಯೇ ಸ್ವಲ್ಪ ಹೊತ್ತಿನವರೆಗೆ ಬೆಳಗುತ್ತಿದ್ದು ಶ್ರೀಕೃಷ್ಣನು ಹೆಬ್ಬಾವಿನ ಶರೀರದಿಂದ ಹೊರಬರುವುದನ್ನೇ ಪ್ರತೀಕ್ಷಿಸು ತ್ತಿದ್ದಿತು. ಶ್ರೀಕೃಷ್ಣನು ಗೋಪಬಾಲಕರೊಡನೆ ಹೆಬ್ಬಾವಿನ ಮುಖದಿಂದ

ಹೊರಬಂದೊಡನೆಯೇ ಆ ಜ್ಯೋತಿಯು ದೇವತೆಗಳೆಲ್ಲರೂ ನೋಡು ತ್ತಿದ್ದಂತೆಯೇ ಪರಾತ್ಪರನಾದ ಶ್ರೀಕೃಷ್ಣನಲ್ಲಿ ಸೇರಿಕೊಂಡಿತು.

ತಮ್ಮ ಶತ್ರುವಾದ ಅಘಾಸುರನ ಸಂಹಾರದಿಂದ ಪರಮಹೃಷ್ಟರಾದ ದೇವತೆಗಳು ಶ್ರೀಕೃಷ್ಣನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಅಪ್ಸರೆ ಯರು ನರ್ತನಮಾಡಿದರು. ಗಂಧರ್ವರು ಗಾಯನಮಾಡಿದರು. ವಿದ್ಯಾಧರರು ಮಂಗಳವಾದ್ಯಗಳನ್ನು ಬಾರಿಸಿದರು. ಬ್ರಾಹ್ಮಣರು ವೇದ ಮಂತ್ರಗಳ ಮೂಲಕವಾಗಿ ಸ್ತೋತ್ರಮಾಡಿದರು. ಪಾರ್ಷದರು–'ಶ್ರೀಕೃಷ್ಣನಿಗೆ ಜಯವಾಗಲಿ! ಯದುಕುಮಾರನಿಗೆ ಜಯವಾಗಲಿ!'–ಎಂದು ಜಯ ಘೋಷಮಾಡುತ್ತಾ ಆನಂದತುಂದಿಲರಾಗಿ ಶ್ರೀಕೃಷ್ಣಭಗವಂತನನ್ನು ಅಭಿನಂದಿಸಿದರು. ಬ್ರಾಹ್ಮಣರು ಮಾಡುತ್ತಿದ್ದ ಅದ್ಭುತವಾದ ಸ್ತೋತ್ರಗಳು, ವಿದ್ಯಾಧರರು ಬಾರಿಸುತ್ತಿದ್ದ ಮಂಗಳವಾದ್ಯಗಳು, ಗಂಧರ್ವರು ಹಾಡುತ್ತಿದ್ದ ಮಂಗಳಮಯವಾದ ಗೀತೆಗಳು, ಪಾರ್ಷದರು ಮಾಡುತ್ತಿದ್ದ ಜಯಕಾರಗಳು ಇವುಗಳ ಧ್ವನಿಯು ಬ್ರಹ್ಮಲೋಕವನ್ನೂ ಮುಟ್ಟಿತು. ಬ್ರಹ್ಮನು ಮಂಗಳ ಮಯವಾದ ಆ ಶಬ್ದವನ್ನು ಕೇಳುತ್ತಲೇ ಅವಸರದಿಂದ ವಾಹನವನ್ನು ಹತ್ತಿ ಶೀಘ್ರಾತಿಶೀಘ್ರವಾಗಿ ಶ್ರೀಕೃಷ್ಣನಿದ್ದಲ್ಲಿಗೆ ಆಗಮಿಸಿದನು. ಶ್ರೀಕೃಷ್ಣನ ಅಪಾರ ಮಹಿಮೆಯನ್ನು ನೋಡಿ ಅಚ್ಚರಿಗೊಂಡನು. ಆತನನ್ನು ಪ್ರಶಂಸೆಮಾಡಿದನು.

ಪರೀಕ್ಷಿತನೇ! ವೃಂದಾವನದಲ್ಲಿ ಸತ್ತುಬಿದ್ದಿದ್ದ ಹೆಬ್ಬಾವಿನ ಚರ್ಮವು ಕೆಲವು ದಿವಸಗಳಲ್ಲಿ ಒಣಗಿಹೋಯಿತು. ಅದರ ಬಾಯಿಯು ಗುಹೆ ಯಂತೆಯೇ ಇದ್ದು ಅನೇಕ ದಿವಸಗಳವರೆಗೆ ಅದು ಗೋಪಬಾಲಕರ ಆಟದ ಗುಹೆಯಾಗಿತ್ತು. ಬಾಲಕೃಷ್ಣನು ತನ್ನ ಸ್ನೇಹಿತರನ್ನೂ ಮತ್ತು ಕರುಗಳನ್ನೂ ಮೃತ್ಯುಮುಖದಿಂದ ಪಾರುಮಾಡಿದ್ದು ಮತ್ತು ಅಘಾಸುರನಿಗೆ ಮೋಕ್ಷ ವನ್ನಿತ್ತಿದ್ದು ತನ್ನ ಕೌಮಾರಾವಸ್ಥೆಯಲ್ಲಿ; ಐದನೆಯ ವರ್ಷದಲ್ಲಿ. ಶ್ರೀಕೃಷ್ಣನು ಪೌಗಂಡಾವಸ್ಥೆಗೆ ಬಂದಾಗ, ಆಗಲೇ ನಡೆಯಿತೋ ಎಂಬಂತೆ ಗೊಲ್ಲಬಾಲಕರು ಅಘಾಸುರನ ಕಥೆಯನ್ನು ವರ್ಣಿಸಿ ಹೇಳುತ್ತಿದ್ದರು.*

---

* ಕೌಮಾರ : ಪೌಗಂಡ :

ಕೌಮಾರಂ ಪಞ್ಚಮಾಬ್ದಾನ್ತಂ ಪೌಗಣ್ಡಂ ದಶಮಾವಧಿ ।
ಕೈಶೋರಮಾಪಞ್ಚದಶಾದ್ಯೌವನಂ ಚ ತತಃ ಪರಮ್ ॥

ಅನ್ವರ್ಥನಾಮದಿಂದಲೂ ಪಾಪಸ್ವರೂಪನೇ ಆಗಿದ್ದ ಅಘಾಸುರನೂ ಭಗವಂತನ ಸ್ಪರ್ಶಮಾತ್ರದಿಂದಲೇ ಪಾಪಗಳೆಲ್ಲವನ್ನೂ ಕಳೆದುಕೊಂಡು ಅನಘಾಸುರನಾಗಿ ಅಸತ್ಪುರುಷರಿಗೆ ಸುದುರ್ಲಭವಾದ ಸಾರೂಪ್ಯಮುಕ್ತಿಯನ್ನು ಪಡೆದುಕೊಂಡನು–ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ: ಮನುಷ್ಯಬಾಲಕನಂತೆ ಲೀಲೆಯಾಡುತ್ತಿದ್ದವನು ಪರಮಪುರುಷ ಪರಮಾತ್ಮನೇ ಆಗಿದ್ದನು. ಅವನು ವ್ಯಕ್ತಾವ್ಯಕ್ತಗಳ ಮತ್ತು ಕಾರ್ಯ ಕಾರಣಗಳ ಸ್ವರೂಪನೇ ಆಗಿದ್ದನು. ಸಮಸ್ತಜಗತ್ತಿಗೂ ಏಕಮಾತ್ರ ವಿಧಾತೃವಾಗಿದ್ದನು. ಶ್ರೀಕೃಷ್ಣನ ಪೂರ್ಣಸ್ವರೂಪವೇ ಬೇಕಾಗಿಲ್ಲ. ಅವನ ಯಾವುದಾದರೂ ಅಂಗವಾದರೂ ಸರಿಯೇ. ಅನವರತವಾಗಿ ಬೇಕಾಗಿಲ್ಲ. ಒಮ್ಮೆಯಾದರೂ ಸಾಕು. ಅದನ್ನು ಒಮ್ಮೆ ಹೃತ್ಕಮಲದಲ್ಲಿ ಧ್ಯಾನಯೋಗದ ಮೂಲಕವಾಗಿ ಕಂಡುಕೊಂಡರೂ ಮನೋಮಯವಾದ ಆ ದಿವ್ಯಾಂಗವೇ ಭಗವಂತನ ಆಶ್ರಯವನ್ನು ದಯಪಾಲಿಸಿಬಿಡುತ್ತದೆ. ಹೀಗಿರುವಾಗ ನಿರಂತರವಾದ ಆತ್ಮಸುಖಾನುಭವದಿಂದ ಮಾಯೆಯನ್ನು ದೂರೀಕರಿಸಿರುವ ಸಾಕ್ಷಾತ್ ಆ ಪರಮಾತ್ಮನೇ ದೇಹವನ್ನು ಪ್ರವೇಶಿಸಿದನೆಂದಮೇಲೆ ಆ ದೇಹಿಗೆ ಮುಕ್ತಿಯು ಲಭಿಸಿದ ವಿಷಯದಲ್ಲಿ ಸಂದೇಹಕ್ಕೆ ಎಡೆಯುಂಟೇ?"

ಸೂತರು ಹೇಳುತ್ತಾರೆ :

"ಶೌನಕರೇ! ಋಷಿಸತ್ತಮರೇ! ಯದುವಂಶಶಿರೋಮಣಿಯಾದ ಶ್ರೀಕೃಷ್ಣನೇ ಪರೀಕ್ಷಿತನಿಗೆ ಜೀವದಾನಮಾಡಿದನು. ಪರೀಕ್ಷಿತನು ತನ್ನ ರಕ್ಷಕನೂ ಜೀವದಾತನೂ ಆಗಿದ್ದ ಶ್ರೀಕೃಷ್ಣನ ಸುಮನೋಹರವಾದ ಲೀಲಾಪ್ರಸಂಗಗಳನ್ನು ಕೇಳಿದನು. ಆದರೆ ಅಷ್ಟರಿಂದಲೇ ಅವನಿಗೆ ತೃಪ್ತಿಯಾಗಲಿಲ್ಲ. ಇನ್ನೂ ಕೇಳಬೇಕೆನ್ನಿಸಿತು. ಜಿತೇಂದ್ರಿಯನಾದ ಆ ಪರೀಕ್ಷಿತನು ವ್ಯಾಸಪುತ್ರರಾದ ಶ್ರೀಶುಕಮುನಿಗಳನ್ನು ಶ್ರೀಕೃಷ್ಣನ ಲೀಲಾಪ್ರಸಂಗಗಳ ವಿಷಯವಾಗಿ ಪುನಃ ಪ್ರಶ್ನಿಸಿದನು :

"ಪೂಜ್ಯರೇ! ತಾವು ಶ್ರೀಕೃಷ್ಣನ ಐದನೆಯ ವರ್ಷದಲ್ಲಿ ನಡೆದ ಲೀಲೆ

---

ಐದು ವರ್ಷದವರೆಗೆ ಕೌಮಾರ. ಆರರಿಂದ ಹತ್ತು ವರ್ಷಗಳವರೆಗೆ ಪೌಗಂಡಾವಸ್ಥೆ. ಹನ್ನೊಂದರಿಂದ ಹದಿನೈದು ವರ್ಷಗಳವರೆಗೆ ಕಿಶೋರಾವಸ್ಥೆ. ಹದಿನಾರನೆಯ ವರ್ಷಗಳಿಂದ ಮುಂದಕ್ಕೆ ಯೌವನಾವಸ್ಥೆ.

ಗಳನ್ನು ಅವನ ಆರನೆಯ ವರ್ಷದಲ್ಲಿ ಗೋಪಾಲಬಾಲಕರು ಹೇಳಿದರೆಂದು ಅಪ್ಪಣೆ ಕೊಡಿಸಿದಿರಿ. ಗತಕಾಲದ ಕಥೆಯನ್ನು ವರ್ತಮಾನದಲ್ಲಿ ನಡೆಯಿತೆಂದು ಹೇಳಲು ಹೇಗೆ ಸಾಧ್ಯವಾಯಿತು? ಮಹಾಯೋಗಿಗಳೇ! ಇದನ್ನು ಕೇಳಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ದಯಮಾಡಿ ಹೇಳಿರಿ. ನಿಶ್ಚಯವಾಗಿಯೂ ಇದು ಹರಿಯ ಮಾಯೆಯೇ ಹೊರತು ಬೇರೆ ಯಾವ ರೀತಿಯಲ್ಲಿಯೂ ಹೀಗಾಗಲು ಸಾಧ್ಯವಿಲ್ಲ. ಗುರುಗಳೇ! ಯದ್ಯಪಿ ನಾವು ಕ್ಷತ್ರಬಂಧುಗಳಾಗಿದ್ದರೂ (ಕರ್ತವ್ಯವನ್ನು ಪರಿಪಾಲಿಸದೆ ನಾಮಮಾತ್ರಕ್ಕೆ ಕ್ಷತ್ರಿಯರಾಗಿದ್ದರೂ) ಧನ್ಯತಮರಾಗಿದ್ದೇವೆ. ತಮ್ಮ ಮುಖಾರವಿಂದದಿಂದ ಪುಣ್ಯತಮವಾದ ಶ್ರೀಕೃಷ್ಣಕಥಾಮೃತವನ್ನು ಸತತವಾಗಿ ಪಾನಮಾಡುತ್ತಿದ್ದೇವಲ್ಲವೇ?"

ಸೂತರು ಹೇಳುತ್ತಾರೆ :

"ಪರಮಾತ್ಮನ ಪರಮಭಕ್ತರಲ್ಲಿಯೂ ಶ್ರೇಷ್ಠರಾದ ಶೌನಕಮುನಿವರ್ಯರೇ! ಪರೀಕ್ಷಿತನು ಹೀಗೆಂದು ಪ್ರಶ್ನಿಸುತ್ತಲೇ ಶ್ರೀಶುಕದೇವರಿಗೆ ಭಗವಂತನ ಲೀಲಾಪ್ರಸಂಗದ ಸ್ಮರಣೆಯುಂಟಾಗಿ ಇಂದ್ರಿಯಗಳೆಲ್ಲವೂ ಬಹಿರ್ವ್ಯಾಪಾರವನ್ನು ತೊರೆದು ಮನಸ್ಸಿನೊಡನೆ ಹೃತ್ಕಮಲದಲ್ಲಿ ಕಾಣುತ್ತಿದ್ದ ಶ್ರೀಕೃಷ್ಣನ ಲೀಲಾಪ್ರಸಂಗದಲ್ಲಿ ಲೀನವಾಗಿಬಿಟ್ಟುವು. ಬಹಳ ಹೊತ್ತಿನ ಮೇಲೆ ಅತ್ಯಂತಕಷ್ಟದಿಂದ ಮನಸ್ಸಿನೊಡನೆ ಆನಂದಸಾಗರದಲ್ಲಿ ಮುಳುಗಿದ್ದ ಇಂದ್ರಿಯಗಳನ್ನು ಬಹಿರ್ವ್ಯಾಪಾರಕ್ಕೆ ಸೆಳೆದು ತರಬೇಕಾಯಿತು. ಹೀಗೆ ಆತ್ಮಾನಂದವನ್ನು ಅನುಭವಿಸುತ್ತಿದ್ದ ಶುಕಬ್ರಹ್ಮರು ಬಹಿರ್ಮುಖರಾದ ನಂತರ ಪುನಃ ಭಗವಂತನ ದಿವ್ಯಲೀಲೆಗಳನ್ನು ವರ್ಣಿಸತೊಡಗಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೨ನೆಯ ಅಧ್ಯಾಯವು ಮುಗಿಯಿತು.

---

## ಬ್ರಹ್ಮನ ವ್ಯಾಮೋಹ : ವ್ಯಾಮೋಹನಿರಸನ

ಶ್ರೀಶುಕಮುನಿಗಳು ಹೇಳುತ್ತಾರೆ :

**ಸಾಧು ಪೃಷ್ಟಂ ಮಹಾಭಾಗ ತ್ವಯಾ ಭಾಗವತೋತ್ತಮ ।**
**ಯನ್ನೂತನಯಸೀಶಸ್ಯ ಶೃಣ್ವನ್ನಪಿ ಕಥಾಂ ಮುಹುಃ ॥೧॥**

“ಪರೀಕ್ಷಿತನೇ! ಮಹಾಭಾಗ್ಯಶಾಲಿಯೇ! ಭಗವದ್ಭಕ್ತರಲ್ಲಿ ಶ್ರೇಷ್ಠನಾದವನೇ! ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಶ್ರೀಕೃಷ್ಣನ ಲೀಲಾಕಥೆಗಳನ್ನು ಬಾರಿ-ಬಾರಿಗೂ ಕೇಳುತ್ತಿದ್ದರೂ ನೀನು ಕೇಳುತ್ತಿರುವ ಪ್ರಶ್ನೆಗಳ ಮೂಲಕವಾಗಿ ಸರ್ವೇಶ್ವರನ ಆ ಲೀಲಾಪ್ರಸಂಗಗಳನ್ನು ಹೊಸ ಹೊಸದಾಗಿ ಕೇಳಲು ಆಶಿಸುತ್ತಿರುವೆ.

**ಸತಾಮಯಂ ಸಾರಭೃತಾಂ ನಿಸರ್ಗೋ**
**ಯದರ್ಥವಾಣೀಶ್ರುತಿಚೇತಸಾಮಪಿ ।**
**ಪ್ರತಿಕ್ಷಣಂ ನವ್ಯವದಚ್ಯುತಸ್ಯ ಯತ್**
**ಸ್ತ್ರಿಯಾ ವಿಟಾನಾಮಿವ ಸಾಧು ವಾರ್ತಾ ॥೨॥**

ಕಾಮುಕರಾದ ವಿಟಪುರುಷರು, ಸ್ತ್ರೀಯರನ್ನು ಕುರಿತು ಮಾತನಾಡುವಾಗ ಅವರಿಗೆ ಬೇಸರವೆಂಬುದೇ ಉಂಟಾಗುವುದಿಲ್ಲ. ಹೊಸ ಹೊಸ ಕಲ್ಪನೆಗಳನ್ನು ಮಾಡಿಕೊಳ್ಳುತ್ತಾ ಸರ್ವದಾ ಅವರ ಮಾತನ್ನೇ ಆಡುತ್ತಿರುತ್ತಾರೆ. ಇದು ಅವರ ಸ್ವಭಾವವೇ ಆಗಿಬಿಟ್ಟಿರುತ್ತದೆ. ಪರಮಾತ್ಮನ ವಿಷಯದಲ್ಲಿ ಭಕ್ತರೂ ಕೂಡ ಇದೇ ಸ್ವಭಾವವನ್ನು ಹೊಂದಿರುತ್ತಾರೆ. ಸತ್ಪುರುಷರ ವಾಣಿಯು ಸದಾ ಭಗವಂತನ ಲೀಲೆಗಳನ್ನೇ ಗಾನಮಾಡುತ್ತಿರುತ್ತದೆ. ಕಿವಿಗಳು ಭಗವಂತನ ಕಥಾಶ್ರವಣವನ್ನು ಕೇಳುತ್ತಿರುತ್ತವೆ. ಹೃದಯವು ಸದಾಕಾಲದಲ್ಲಿಯೂ ಭಗವಂತನ ದಿವ್ಯಚರಣಾರವಿಂದಗಳನ್ನೇ ಚಿಂತಿಸುತ್ತಿರುತ್ತದೆ. ಭಗವಂತನ ಭಕ್ತರು ಪ್ರತಿಕ್ಷಣದಲ್ಲಿಯೂ ಭಗವಂತನ ನಿತ್ಯನೂತನವಾದ ಅನುಭವಗಳನ್ನು ಪಡೆಯುತ್ತಲೇ ಇರುತ್ತಾರೆ. ವಿಟಪುರುಷರಿಗೆ ಸ್ತ್ರೀಯರನ್ನು ಬಿಟ್ಟಿರಲಾಗದಂತೆ ಭಗವತ್ಪ್ರೇಮಿಗಳಾದ ಭಕ್ತರಿಗೆ ಭಗವಂತನನ್ನು ಅರೆಕ್ಷಣವೂ ಬಿಟ್ಟಿರಲು ಸಾಧ್ಯವಾಗುವುದಿಲ್ಲ.

ಮಹಾರಾಜ! ಅಂತಹ ಭಕ್ತಶ್ರೇಷ್ಠನೇ ನೀನಾಗಿರುವೆ. ಅತಿರಹಸ್ಯದ ವಿಷಯವನ್ನು ನಾನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

**ಬ್ರೂಯುಃ ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ ॥೩॥**

ದಯಾಳುಗಳಾದ ಆಚಾರ್ಯರು ತಮ್ಮ ಪ್ರಿಯಶಿಷ್ಯನಿಗೆ ಎಂತಹುದೇ ರಹಸ್ಯವಿಷಯಗಳನ್ನಾದರೂ ಹೇಳುತ್ತಾರೆ. ಅಂತೆಯೇ ನಾನು ನಿನಗೆ ಎಲ್ಲವನ್ನೂ ಹೇಳುತ್ತೇನೆ :

ಭಗವಂತನಾದ ಶ್ರೀಕೃಷ್ಣನು ತನ್ನ ಸಂಗಡಿಗರಾದ ಗೋಪಬಾಲಕರನ್ನು ಮೃತ್ಯುರೂಪನಾದ ಅಘಾಸುರನ ಮುಖದಿಂದ ರಕ್ಷಿಸಿದನೆಂಬ ಕಥಾ ಪ್ರಸಂಗವನ್ನು ನಿನಗೆ ಹೇಳಿದ್ದೇನಲ್ಲವೇ! ಅನಂತರ ಶ್ರೀಕೃಷ್ಣನು ತನ್ನ ಸಂಗಡಿಗರೆಲ್ಲರನ್ನೂ ಯಮುನಾನದಿಯ ತೀರದಲ್ಲಿದ್ದ ಮರಳುದಿಣ್ಣೆಯ ಬಳಿಗೆ ಕರೆದುಕೊಂಡು ಹೋಗಿ ತನ್ನ ಮಿತ್ರರಿಗೆ ಹೇಳಿದನು :

"ಪ್ರಿಯಮಿತ್ರರೇ! ಇಲ್ಲಿ ನೋಡಿರಿ. ಯಮುನೆಯ ತೀರದಲ್ಲಿರುವ ಈ ಮರಳಿನ ದಿಣ್ಣೆಯು ಅತ್ಯಂತ ರಮಣೀಯವಾಗಿದೆ. ಈ ನದಿಯ ತೀರದಲ್ಲಿ ಹರಡಿಕೊಂಡಿರುವ ಮರಳು ಕೂಡ ಕೋಮಲವಾಗಿಯೂ, ಸ್ವಚ್ಛವಾಗಿಯೂ ಇದೆ. ನಾವು ಆಟವಾಡಲು ಬೇಕಾದ ಎಲ್ಲ ಆಟದ ಸಾಮಾನುಗಳೂ ಇಲ್ಲಿ ಸಿಕ್ಕುತ್ತವೆ. ಅಲ್ಲಿ ನೋಡಿರಿ! ಅಲ್ಲಿ ಬಣ್ಣ ಬಣ್ಣದ ಕಮಲಪುಷ್ಪಗಳಿವೆ. ಅವುಗಳ ಸುಗಂಧದಿಂದ ಆಕರ್ಷಿತವಾದ ದುಂಬಿಗಳು ಅವುಗಳ ಸುತ್ತಲೂ ಝೇಂಕಾರಮಾಡುತ್ತಾ ಸುತ್ತುತ್ತಿವೆ. ಅತ್ತಕಡೆಯಲ್ಲಿ ನೋಡಿರಿ. ಸುಂದರವಾದ ನಾನಾಜಾತಿಯ ಪಕ್ಷಿಗಳು ಮಧುರವಾಗಿ ಕಲ-ಕಲನಿನಾದ ಮಾಡುತ್ತಿವೆ. ಪಕ್ಷಿಗಳ ಕಲ-ಕಲನಿನಾದವನ್ನು ಪ್ರತಿಧ್ವನಿಸುತ್ತಿರುವ ನಯನ ಮನೋಹರವಾದ ವೃಕ್ಷಗಳಿಂದ ಯಮುನಾನದಿಯ ತೀರಪ್ರದೇಶವು ವ್ಯಾಪ್ತವಾಗಿದೆ. ರಮ್ಯವಾಗಿರುವ ಈ ಸ್ಥಳದಲ್ಲಿಯೇ ನಾವೆಲ್ಲರೂ ಊಟ ಮಾಡೋಣ. ಹೊತ್ತು ಮೀರಿದ್ದು ನಾವೆಲ್ಲರೂ ಬಹಳವಾಗಿ ಹಸಿದಿದ್ದೇವೆ. ಕರುಗಳು ನೀರು ಕುಡಿದು ಇಲ್ಲಿಯೇ ಕಾಣುತ್ತಿರುವ ಗರಿಕೆಹುಲ್ಲನ್ನು ಸಾವಧಾನವಾಗಿ ಮೇಯುತ್ತಿರಲಿ." ಗೋಪಬಾಲಕರೆಲ್ಲರೂ ಒಂದೇ ಸ್ವರದಲ್ಲಿ 'ತಥಾಸ್ತು' 'ಹಾಗೆಯೇ ಆಗಲಿ'–ಎಂದು ಕೂಗಿಕೊಂಡರು. ಶ್ರೀಕೃಷ್ಣನ

ಆಣತಿಯಂತೆ ಕರುಗಳಿಗೆ ನೀರುಕುಡಿಸಿ ಹಚ್ಚಹಸಿರಾಗಿದ್ದ ಬಯಲಿನಲ್ಲಿ ಹುಲ್ಲು ಮೇಯಲು ಕರುಗಳನ್ನು ಬಿಟ್ಟುಬಿಟ್ಟರು. ತಾವು ತಂದಿದ್ದ ಬುತ್ತಿಗಳನ್ನು ಬಿಚ್ಚಿ ಶ್ರೀಕೃಷ್ಣನೊಡನೆ ಪರಮಾನಂದದಿಂದ ಊಟಮಾಡಲು ಪ್ರಾರಂಭಿಸಿದರು. ಗೋಪಬಾಲಕರ ಮಧ್ಯದಲ್ಲಿ ಶ್ರೀಕೃಷ್ಣನು ಕುಳಿತಿದ್ದನು. ಗೋಪಬಾಲಕರು ಶ್ರೀಕೃಷ್ಣನ ಸುತ್ತಲೂ ಮಂಡಲಾಕಾರದಲ್ಲಿ ಕುಳಿತಿದ್ದರು. ಎಲ್ಲರ ಮುಖಗಳೂ ಶ್ರೀಕೃಷ್ಣನ ಕಡೆಗೇ ಇದ್ದುವು. ಎಲ್ಲರ ಕಣ್ಣುಗಳೂ ಆನಂದಕಂದನಾದ

---



---

ಶ್ರೀಕೃಷ್ಣನನ್ನು ನೋಡಿದ ಆನಂದದಿಂದ ವಿಕಸಿತವಾಗಿದ್ದುವು. ಆ ಸಮಯದಲ್ಲಿ ಆ ಬಾಲಕರು ಕಮಲದ ಬೀಜಕೋಶದ ಸುತ್ತಲೂ ಇರುವ ಎಸಳುಗಳಂತೆ ವಿರಾಜಿಸುತ್ತಿದ್ದರು. ಬುತ್ತಿಯಲ್ಲಿದ್ದ ಅನ್ನವನ್ನು ತೆಗೆದಿಟ್ಟುಕೊಂಡು ಭೋಜನಮಾಡಲು ಆ ಗೋಪಬಾಲಕರಲ್ಲಿ ಕೆಲವರು ಅಗಲವಾದ ಹೂವುಗಳಿಂದಲೇ ಭೋಜನದ ತಟ್ಟೆಯನ್ನು ಮಾಡಿಕೊಂಡರು. ಕೆಲವರು ಎಸಳುಗಳಿಂದಲೂ, ಕೆಲವರು ಕೊಳವೆಗಳಿಂದಲೂ, ಕೆಲವರು ಚಿಗುರುಗಳಿಂದಲೂ, ಕೆಲವರು ಹಣ್ಣುಗಳಿಂದಲೂ, ಬುತ್ತಿಯ ನೆಲುವುಗಳಿಂದಲೂ, ಭೂರ್ಜಪತ್ರದಿಂದಲೂ, ಬಾಳೆಯ ಪಟ್ಟೆ ಗಳಿಂದಲೂ ಭೋಜನಪಾತ್ರೆಗಳನ್ನು ಮಾಡಿಕೊಂಡರು. ಕೆಲವರು ಅಗಲ ವಾದ ಕಲ್ಲುಗಳನ್ನೇ ಭೋಜನಪಾತ್ರೆಯನ್ನಾಗಿ ಮಾಡಿಕೊಂಡರು. ಹೀಗೆ ಚಿತ್ರ-ವಿಚಿತ್ರವಾದ ರೀತಿಯಲ್ಲಿ ಭೋಜನಪಾತ್ರೆಗಳನ್ನು ಮಾಡಿಕೊಂಡು ಎಲ್ಲರೂ ಆನಂದದಿಂದ ಭೋಜನಮಾಡಲು ಪ್ರಾರಂಭಿಸಿದರು. ಗೋಪ

ಬಾಲಕರು ಒಬ್ಬೊಬ್ಬರೂ ಒಂದೊಂದು ವಿಧವಾದ ಬುತ್ತಿಯನ್ನು ತಂದಿದ್ದರು. ತಮ್ಮ ಪಕ್ಕದಲ್ಲಿ ಕುಳಿತಿದ್ದವರಿಗೆ ತಾವು ತಂದಿದ್ದ ಬುತ್ತಿಯನ್ನು ರುಚಿತೋರಿಸುವರು. ಬಹಳ ರುಚಿಯಾಗಿದ್ದು ಪುನಃ ಬೇಡಲು ಬಂದರೆ ಇಲ್ಲವೆನ್ನುವರು. ಬೇರೆಯ ಕಡೆಗೆ ತಿರುಗಿದಾಗ ಬುತ್ತಿಯನ್ನೇ ಹಾರಿಸಿಬಿಡುವರು. ಸ್ವಲ್ಪಹೊತ್ತು ಹೆಣಗಾಡಿಸಿ ತಮಗೆ ಬೇಕಾದಷ್ಟು ಎತ್ತಿಕೊಂಡು ಹಿಂದಿರುಗಿಸುವರು. ಕೆಲವೊಮ್ಮೆ ಅನ್ನವನ್ನು ಜಗಿದು ತಿನ್ನುವಾಗ ಮೂತಿ ಯನ್ನು ಸೊಟ್ಟಮಾಡಿಕೊಂಡು ಪಕ್ಕದಲ್ಲಿದ್ದವರನ್ನು ನಗಿಸುವರು. ಕೆಲವರು ಲೊಚಗುಟ್ಟುವರು. ಕೆಲವರು ಗಟ್ಟಿಯಾಗಿ ತೇಗುವರು. ಹೀಗೆ ಆನಂದ ತುಂದಿಲರಾಗಿ ನಗುತ್ತಾ ನಗಿಸುತ್ತಾ ಗೋಪಬಾಲಕರು ಶ್ರೀಕೃಷ್ಣನೊಡನೆ ಭೋಜನಮಾಡುತ್ತಿದ್ದರು. ಯಜ್ಞಭುಜನಾದ ಶ್ರೀಕೃಷ್ಣನು ಉಟ್ಟಬಟ್ಟೆಗೂ, ಹೊಟ್ಟೆಗೂ ನಡುವೆ ಕೊಳಲನ್ನು ಸಿಕ್ಕಿಸಿಕೊಂಡಿದ್ದನು. ಅವನ ಎಡಕಂಕುಳಿ ನಲ್ಲಿ ಕೊಂಬು ಮತ್ತು ಚಾವಟಿಗಳಿದ್ದುವು. ಬಲಗೈಯಲ್ಲಿ ಕೆನೆಮೊಸರಿನ ಅನ್ನವಿದ್ದಿತು. ಬೆರಳುಗಳಲ್ಲಿ ನಿಂಬೇಹಣ್ಣು-ಮಾವು-ಹೇರಳೇಹಣ್ಣು ಇವೇ ಮುಂತಾದ ಹಣ್ಣುಗಳ ಉಪ್ಪಿನಕಾಯಿಗಳನ್ನು ಜೋಡಿಸಿಕೊಂಡಿದ್ದನು. ಅವನ ಸುತ್ತಲೂ ಗೊಲ್ಲಬಾಲಕರಿದ್ದರು. ಅವರ ಮಧ್ಯದಲ್ಲಿ ಕುಳಿತು ವಿನೋದವಾದ ಮಾತುಗಳಿಂದ ಅವರನ್ನು ನಗಿಸುತ್ತಾ ತಾನೂ ನಗುತ್ತಾ ಅವರೊಡನೆ ಭೋಜನಮಾಡುತ್ತಿದ್ದನು. ಸ್ವರ್ಗವಾಸಿಗಳಾದ ದೇವತೆಗಳು ಆಶ್ಚರ್ಯಚಕಿತರಾಗಿ ಭೋಜನದ ವೈಖರಿಯನ್ನು ವೀಕ್ಷಿಸುತ್ತಿದ್ದರು.

ಭರತವಂಶಶಿರೋಮಣಿಯೇ! ಹೀಗೆ ಶ್ರೀಕೃಷ್ಣನ ಲೀಲೆಗಳನ್ನು ನೋಡುತ್ತಾ ಭೋಜನಮಾಡುತ್ತಿದ್ದಾಗ ಗೋಪಬಾಲಕರು ಅವನಲ್ಲಿಯೇ ತನ್ಮಯರಾಗಿಬಿಟ್ಟರು. ಶ್ರೀಕೃಷ್ಣನ ಹೊರತು ಅವರಿಗೆ ಬೇರೆ ಯಾವುದರ ಅರಿವೂ ಇರಲಿಲ್ಲ. ಅವನ ನಗುಮುಖವನ್ನೇ ದಿಟ್ಟಿಸಿ ನೋಡುತ್ತಾ ಆನಂದ ಸಾಗರದಲ್ಲಿ ಮುಳುಗಿಹೋಗಿದ್ದರು. ಆ ವೇಳೆಗೆ ಮೇಯಲು ಬಿಟ್ಟಿದ್ದ ಕರುಗಳೆಲ್ಲವೂ ಹೊಸ ಹೊಸ ಹಸಿರುಹುಲ್ಲಿನ ಆಕರ್ಷಣೆಯಿಂದ ಬಹಳ ದೂರಕ್ಕೆ ಹೋಗಿಬಿಟ್ಟುವು. ಸ್ವಲ್ಪ ಹೊತ್ತಾದನಂತರ ಅವರಿಗೆ ಕರುಗಳ ಸ್ಮರಣೆ ಯಾಯಿತು. ಸುತ್ತಲೂ ಎಲ್ಲೂ ಕರುಗಳನ್ನು ಕಾಣದೆ ಗೋಪಬಾಲಕರು ಭಯಭ್ರಾಂತರಾದರು. ಭಕ್ತರ ಭಯಕ್ಕೇ ಭಯವನ್ನುಂಟುಮಾಡಿ ಅದನ್ನು

ಹೊಡೆದಟ್ಟುವ ಬಾಲಮುಕುಂದನು ಭಯಗ್ರಸ್ತರಾಗಿದ್ದ ತನ್ನ ಮಿತ್ರರಿಗೆ ಹೇಳಿದನು : "ನನ್ನ ಪ್ರಿಯಸಂಗಾತಿಗಳೇ! ನೀವು ಹೆದರುವ ಕಾರಣವಿಲ್ಲ. ಊಟವನ್ನು ಬಿಟ್ಟು ಏಳಬೇಕಾಗಿಯೂ ಇಲ್ಲ. ನೀವು ನಿರಾತಂಕರಾಗಿ ಊಟಮಾಡುತ್ತಿರಿ. ನಾನೀಗಲೇ ಹೋಗಿ ಕರುಗಳನ್ನು ಅವು ಎಲ್ಲೇ ಇದ್ದರೂ ಹುಡುಕಿ ಹೊಡೆದುಕೊಂಡು ಬರುವೆನು." ಪರೀಕ್ಷಿತನೇ! ಗೋಪಬಾಲಕರಿಗೆ ಹೀಗೆ ಹೇಳಿ ಅವರನ್ನು ಸಮಾಧಾನಗೊಳಿಸಿ ಬಾಲಕೃಷ್ಣನು ಕೈಯಲ್ಲಿ ಮೊಸರನ್ನದ ತುತ್ತನ್ನು ಎತ್ತಿಕೊಂಡೇ ಬೆಟ್ಟ-ಗುಡ್ಡಗಳಲ್ಲಿಯೂ, ಗುಹೆಗಳಲ್ಲಿಯೂ, ಪೊದರುಗಳಲ್ಲಿಯೂ ತನ್ನ ಮತ್ತು ತನ್ನ ಸಂಗಡಿಗರ ಕರುಗಳನ್ನು ಹುಡುಕತೊಡಗಿದನು.

ಪರೀಕ್ಷಿತನೇ! ಬ್ರಹ್ಮದೇವನು ಬಹಳ ಹಿಂದಿನಿಂದಲೇ ಆಕಾಶದಲ್ಲಿ ಉಪಸ್ಥಿತನಾಗಿದ್ದು ಬಾಲಮುಕುಂದನ ಅಮೋಘವಾದ ಲೀಲೆಗಳನ್ನು ನೋಡುತ್ತಲೇ ಇದ್ದನು. ಮಹಾಪಾಪಿಷ್ಠನಾದ ಅಘಾಸುರನಿಗೂ ಪರಮ ಪಾವನನಾದ ಶ್ರೀಕೃಷ್ಣನು ಮೋಕ್ಷವಿತ್ತುದನ್ನು ನೋಡಿ ಚತುರ್ಮುಖನಿಗೆ ಅಚ್ಚರಿಯಾಯಿತು. ಮುದ್ದುಕೃಷ್ಣನ ಇತರ ಮನೋಹರವಾದ ಮಹಿಮೆಗಳನ್ನೂ ನೋಡಬೇಕೆಂದು ಚತುರ್ಮುಖನಿಗೆ ಆಸೆಯಾಯಿತು. ಅಂತಹ ಬಯಕೆಯಿಂದಲೇ ಬ್ರಹ್ಮದೇವನು ಕರುಗಳನ್ನೂ–ಶ್ರೀಕೃಷ್ಣನು ಕರುಗಳನ್ನು ಹುಡುಕಲು ಹೊರಟುಹೋದನಂತರ–ಗೋಪಾಲಬಾಲಕರನ್ನೂ ಬೇರೆ ಬೇರೆ ನಿಗೂಢವಾದ ಸ್ಥಳಗಳಲ್ಲಿ ಬಚ್ಚಿಟ್ಟು ಮಾಯವಾಗಿಬಿಟ್ಟನು. ಕಾಡು-ಮೇಡುಗಳಲ್ಲಿ, ಗುಹೆಗಳಲ್ಲಿ, ಕಂದರಗಳಲ್ಲಿ ಅಲೆದಾಡಿದರೂ ಕರುಗಳು ಸಿಕ್ಕದಿರಲು ಶ್ರೀಕೃಷ್ಣನು ಗೋಪಬಾಲಕರಿದ್ದಲ್ಲಿಗೆ ಹಿಂದಿರುಗಿದನು. ಆದರೆ ಅಲ್ಲಿ ಗೋಪಬಾಲಕರೂ ಇರಲಿಲ್ಲ. ವಿಸ್ಮಿತನಾದ ಶ್ರೀಕೃಷ್ಣನು ಗೋಪಬಾಲಕರನ್ನೂ ಕರುಗಳನ್ನೂ ಹುಡುಕಲು ಹೊರಟನು. ನಾಲ್ಕು ದಿಕ್ಕುಗಳಲ್ಲಿಯೂ ತಿರುಗಾಡಿದನು. ಎಲ್ಲಿಯೂ ಗೋಪಬಾಲಕರಾಗಲೀ ಗೋವತ್ಸಗಳಾಗಲೀ ಕಾಣಲೇ ಇಲ್ಲ. ವಿಶ್ವದಲ್ಲಿ ಏನು ನಡೆಯುತ್ತಿದೆಯೆಂಬುದು ಶ್ರೀಕೃಷ್ಣನಿಗೆ ತಿಳಿದಿತ್ತು. ಅವನು ವಿಶ್ವವಿದನಾಗಿದ್ದನು. ಗೋಪಬಾಲಕರನ್ನೂ ಕರುಗಳನ್ನೂ ಬಚ್ಚಿಟ್ಟಿರುವವನು ಬ್ರಹ್ಮನೆಂದೇ ಶ್ರೀಕೃಷ್ಣನಿಗೆ ತಿಳಿದುಹೋಯಿತು. ವಿಶ್ವವನ್ನೇ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದ

ವಿಶ್ವಕೃದನಾದ ಶ್ರೀಕೃಷ್ಣನು ಆಗೊಂದು ಚಿಕ್ಕಸೃಷ್ಟಿಯನ್ನೇ ಮಾಡಿಬಿಟ್ಟನು. ಗೋಪಬಾಲಕರ ತಾಯಂದಿರಿಗೂ ಬ್ರಹ್ಮನಿಗೂ ತನ್ನ ಲೀಲೆಯನ್ನು ತೋರಿಸಿ ಆನಂದಗೊಳಿಸಬೇಕೆಂಬುದೇ ಅವನ ಆಶಯವಾಗಿದ್ದಿತು. ಕ್ಷಣಮಾತ್ರದಲ್ಲಿ ಗೋಪಬಾಲಕರೂ ಕರುಗಳೂ ತಾನೇ ಆಗಿಬಿಟ್ಟನು. ಅಥವಾ ಗೋಪಬಾಲಕರನ್ನೂ ಕರುಗಳನ್ನೂ ಯಥಾವತ್ತಾಗಿ ಸೃಷ್ಟಿಸಿಬಿಟ್ಟನು. ಅವನ ಸೃಷ್ಟಿಯಾದರೂ ಅಸದೃಶವಾಗಿದ್ದಿತು.

**ಯಾವದ್ವತ್ಸಪವತ್ಸಕಾಲ್ಪಕವಪುರ್ಯಾವತ್ಕರಾಙ್ಘ್ರ್ಯಾದಿಕಂ ।**
**ಯಾವದ್ಯಷ್ಟಿವಿಷಾಣವೇಣುದಲಶಿಗ್ಯಾವದ್ವಿಭೂಷಾಮ್ಬರಮ್**
**ಯಾವಚ್ಛೀಲಗುಣಾಭಿದಾಕೃತಿವಯೋ ಯಾವದ್ವಿಹಾರಾದಿಕಂ**
**ಸರ್ವಂ ವಿಷ್ಣುಮಯಂ ಗಿರೋಽಙ್ಗವದಜಃ ಸರ್ವಸ್ವರೂಪೋ ಬಭೌ ॥**

ಹಿಂದೆ ಎಷ್ಟು ಸಂಖ್ಯೆಯಲ್ಲಿ ಗೋಪಬಾಲಕರಿದ್ದರೋ ಅಷ್ಟೇ ಸಂಖ್ಯೆಯಲ್ಲಿ ಈಗಲೂ ಇದ್ದರು. ಎಷ್ಟು ಸಂಖ್ಯೆಯಲ್ಲಿ ಕರುಗಳಿದ್ದುವೋ ಈಗಲೂ ಅವು ಅಷ್ಟೇ ಸಂಖ್ಯೆಯಲ್ಲಿದ್ದುವು. ಗೋಪಬಾಲಕರ ಮತ್ತು ಕರುಗಳ ಶರೀರಗಳು ಎಷ್ಟು ಗಾತ್ರದಲ್ಲಿದ್ದುವೋ ಯಾವ ಬಣ್ಣದಲ್ಲಿದ್ದುವೋ ಈಗಲೂ ಅದೇ ಬಣ್ಣದಿಂದಲೂ, ಅದೇ ಗಾತ್ರದಿಂದಲೂ ಕಂಗೊಳಿಸುತ್ತಿದ್ದುವು. ಕೋಲು-ಕೊಂಬು-ಕೊಳಲು, ತಲೆಯಲ್ಲಿ ಸಿಂಗರಿಸಿಕೊಂಡಿದ್ದ ಚಿಗುರುಗಳು, ನವಿಲುಗರಿಗಳು, ಬುತ್ತಿ, ಉಡುಗೆ-ತೊಡುಗೆಗಳು ನಡೆ-ನುಡಿಗಳು, ಗುಣಗಳು, ಹೆಸರುಗಳು, ಆಕಾರಗಳು, ವಯಸ್ಸು–ಎಲ್ಲವೂ ಯಥಾವತ್ತಾಗಿಯೇ ಇದ್ದುವು. ಹಿಂದೆ ಗೋಪಬಾಲಕರು ಆಡುತ್ತಿದ್ದ ಆಟಗಳನ್ನೇ ಶ್ರೀಕೃಷ್ಣನ ಮಹಿಮೆಯಿಂದ ಉದ್ಭವಿಸಿ ಬಂದ ಗೋಪಬಾಲಕರೂ ಆಡುತ್ತಿದ್ದರು. ಕರುಗಳು ಕೂಡ ಸ್ವಲ್ಪವೂ ವ್ಯತ್ಯಾಸವೇ ಇಲ್ಲದಂತೆ ತಾಯಿಹಸುಗಳ ಬಳಿಗೆ ಹೋಗಿ ಹಾಲುಕುಡಿಯುತ್ತಿದ್ದುವು. ಕಾಡಿನಲ್ಲಿ ಹುಲ್ಲುಮೇಯ್ದು ನೀರು ಕುಡಿಯುತ್ತಿದ್ದುವು. 'ಸರ್ವಂ ವಿಷ್ಣುಮಯಂ ಜಗತ್'–ಎಂಬ ಪುರಾಣ ವಾಕ್ಯವೇ ಮೂರ್ತೀಭವಿಸಿತೋ ಎಂಬಂತೆ ಶ್ರೀಕೃಷ್ಣನು ಗೋಪಬಾಲ-ಗೋವತ್ಸಗಳಾಗಿ ವಿಜೃಂಭಿಸಿದನು.

**ಸ್ವಯಮಾತ್ಮಾತ್ಮಗೋವತ್ಸಾನ್ಪ್ರತಿವಾರ್ಯಾತ್ಮವತ್ಸಪೈಃ ।**
**ಕ್ರೀಡನ್ನಾತ್ಮವಿಹಾರೈಶ್ಚ ಸರ್ವಾತ್ಮಾ ಪ್ರಾವಿಶದ್ವ್ರಜಮ್ ॥೨೦॥**

ಎಂತಹ ಪರಮಾದ್ಭುತ! ಶ್ರೀಕೃಷ್ಣಭಗವಂತನು ತಾನೇ ಕರುಗಳೂ ಆದನು. ತಾನೇ ಕರುಗಳನ್ನು ಕಾಯುವ ಗೋಪಬಾಲಕರೂ ಆದನು. ಆತ್ಮಸ್ವರೂಪವೇ ಆದ ಗೋಪಬಾಲಕರಿಂದ ಆತ್ಮಸ್ವರೂಪಗಳೇ ಆದ ಗೋವತ್ಸಗಳನ್ನು ತಡೆದು ನಿಲ್ಲಿಸುತ್ತಾ, ಆತ್ಮಸ್ವರೂಪರಾದ ಗೋಪಬಾಲಕ ರೊಡನೆ ಅನೇಕ ಪ್ರಕಾರವಾದ ಆಟಗಳನ್ನಾಡುತ್ತಾ ಶ್ರೀಕೃಷ್ಣನು ಗೊಲ್ಲರ ಹಟ್ಟಿಯನ್ನು ಪ್ರವೇಶಿಸಿದನು. ಒಂದೊಂದು ಕರುವನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಆಯಾ ಮನೆಗೆ ಸೇರಿಸಿದನು. ಅಂತೆಯೇ ಆತ್ಮಸ್ವರೂಪರಾದ ಗೋಪಾಲಬಾಲಕರನ್ನೂ ಅವರವರ ಮನೆಗೆ ಸೇರುವಂತೆ ಮಾಡಿದನು. ಎಂದಿನಂತೆ ಕೃಷ್ಣಭೂತರಾದ ಗೋಪಬಾಲಕರೂ ಕೊಳಲನ್ನೂದಿಕೊಂಡೇ ಮನೆಗೆ ಬಂದರು. ಕೊಳಲಿನ ಧ್ವನಿಯನ್ನು ಕೇಳುತ್ತಲೇ ಗೋಪಿಯರು ತಟ್ಟನೆ ಮೇಲೆದ್ದು, ಪರಬ್ರಹ್ಮನಾದ ಶ್ರೀಕೃಷ್ಣನ ಸ್ವರೂಪಿಗಳಾಗಿದ್ದ ಗೋಪಬಾಲಕರನ್ನು ತಮ್ಮ ಮಕ್ಕಳೆಂದೇ ಭಾವಿಸಿ, ತೋಳುಗಳಿಂದ ಬಾಚಿ ತಬ್ಬಿಕೊಂಡು ಅಮೃತಕ್ಕಿಂತಲೂ ಮಧುರವಾಗಿದ್ದ, ಆಸವಕ್ಕಿಂತಲೂ ಹೆಚ್ಚು ಮದವನ್ನುಂಟುಮಾಡುವುದಾಗಿದ್ದ, ವಾತ್ಸಲ್ಯಪೂರ್ಣವಾದ ಸ್ತನ್ಯವನ್ನು ಅವರಿಗೆ ಉಣಿಸಿದರು.

ಪರೀಕ್ಷಿತ! ಶ್ರೀಕೃಷ್ಣನ ಲೀಲಾವಿನೋದಗಳನ್ನು ಊಹಿಸಿಕೊಳ್ಳ ಲಾದರೂ ಸಾಧ್ಯವಾಗುವುದೇ? ಗೋಪಿಯರೆಲ್ಲರೂ ತಮ್ಮ ಮಕ್ಕಳ ನೆಪ ದಲ್ಲಿ ಸಾಕ್ಷಾತ್ ಕೃಷ್ಣನಿಗೇ ಹಾಲುಣಿಸುತ್ತಿದ್ದರು. ಕೃಷ್ಣನಿಗೆ ಹಾಲುಣಿ ಸುತ್ತಿರುವೆವೆಂಬ ವಿಷಯವು ಮಾತ್ರ ಅವರಿಗೆ ತಿಳಿದಿರಲಿಲ್ಲ. ಶ್ರೀಕೃಷ್ಣನು ಸಾಯಂಕಾಲವಾಗುತ್ತಲೇ ಹೊತ್ತಿಗೆ ಸರಿಯಾಗಿ ಕೃಷ್ಣಕಲ್ಪಿತರಾದ ಗೋಪ ಬಾಲಕರು ಮತ್ತು ಗೋವತ್ಸಗಳೊಡನೆ ಕೊಳಲನ್ನೂದುತ್ತಾ ವ್ರಜಭೂಮಿಗೆ ಬಂದುಬಿಡುತ್ತಿದ್ದನು. ಕೃಷ್ಣಭೂತರಾದ ಗೋಪಬಾಲಕರೂ ಸಾಕ್ಷಾತ್ ಗೋಪಾಲಬಾಲಕರಂತೆಯೇ ವರ್ತಿಸುತ್ತಿದ್ದರು. ಅಥವಾ ಸರ್ವಾಂತರ್ಯಾಮಿ ಯಾದ ಶ್ರೀಕೃಷ್ಣನೇ ಹಾಗೆ ಮಾಡುತ್ತಿದ್ದನು. ಗೋಪಬಾಲಕರ ರೂಪದಲ್ಲಿ ಗೋಪಿಯರ ಮನೆಗಳಿಗೆ ಹೋಗಿ ಬಾಲಸುಲಭವಾದ ಲೀಲೆಗಳಿಂದ ಅವರನ್ನು ಸಂತೋಷಗೊಳಿಸುತ್ತಿದ್ದನು. ಗೋಪಿಯರು ಕೂಡ ತಮ್ಮ ಆ ಮುದ್ದುಕಂದನಿಗೆ ಸ್ನಾನಮಾಡಿಸುತ್ತಿದ್ದರು. ಅವನ ಪುಟ್ಟ ಕೈಕಾಲುಗಳನ್ನು

ಒತ್ತುತ್ತಿದ್ದರು. ಅವನಿಗೆ ಗಂಧವನ್ನು ಪೂಸುತ್ತಿದ್ದರು. ಅಲಂಕಾರಮಾಡುತ್ತಿದ್ದರು. ರಕ್ಷೆಯಿಡುತ್ತಿದ್ದರು. ತಿಲಕವಿಡುತ್ತಿದ್ದರು. ಭೋಜನಮಾಡಿಸುತ್ತಿದ್ದರು. ಇವೇ ಮುಂತಾದ ಉಪಚಾರಗಳಿಂದ ಕೃಷ್ಣನೇ ಲಾಲಿಸಲ್ಪಡುತ್ತಿದ್ದನು. ಗೋಪಿಯರಿಗೇ ತಾವು ಗೋಪಬಾಲಕನ ರೂಪದಲ್ಲಿರುವ ಶ್ರೀಕೃಷ್ಣನಿಗೆ ಮೊಲೆಯುಣಿಸುತ್ತಿದ್ದೇವೆಂಬುದು ತಿಳಿಯದಿದ್ದ ಮೇಲೆ ಹಸುಗಳಿಗಾದರೂ ತಿಳಿಯಲು ಹೇಗೆ ಸಾಧ್ಯ? ಶ್ರೀಕೃಷ್ಣನೇ ಕರುಗಳಾಗಿ ಕೃಷ್ಣನಿಂದಲೇ ಕರೆತರಲ್ಪಟ್ಟು ಕೊಟ್ಟಿಗೆಯನ್ನು ಸೇರುವುವು. ಆ ವೇಳೆಗೆ ಹಸುಗಳೂ ಕೊಟ್ಟಿಗೆಯಲ್ಲಿರುತ್ತಿದ್ದುವು. ಕರುಗಳನ್ನು ಕಂಡೊಡನೆಯೇ ವಾತ್ಸಲ್ಯದಿಂದ 'ಹಂಬಾ!' ಎಂದು ಅವು ಕೂಗುವುವು. ಕರುಗಳು ತಾಯಿಹಸುಗಳ ಬಳಿಗೆ ನಾಗಾಲೋಟದಿಂದ ಓಡಿಹೋಗುವುವು. ಹಾಗೆ ತಮ್ಮ ಬಳಿಗೆ ಓಡಿಬಂದ ಕರುಗಳನ್ನು ಅಕ್ಕರೆಯಿಂದ ನೆಕ್ಕುತ್ತಾ ಕೆಚ್ಚಲಿನಿಂದ ಒಸರುತ್ತಿರುವ ಅಮೃತೋಪಮವಾದ ಹಾಲನ್ನು ಅವುಗಳಿಗೆ ಉಣಿಸುವುವು. ಕರುಗಳ ರೂಪದಲ್ಲಿ ಶ್ರೀಕೃಷ್ಣನೇ ಎಲ್ಲ ಹಸುಗಳ ಹಾಲನ್ನೂ ಕುಡಿಯುತ್ತಿದ್ದನು.

ಪರೀಕ್ಷಿತ! ಪಾವನಾತ್ಮನಾದ ಶ್ರೀಕೃಷ್ಣನು ತನ್ನ ಅನಂತವಾದ ಶಕ್ತಿಯಿಂದ ಗೋಕುಲದಲ್ಲಿ ಸ್ವಲ್ಪವೂ ವ್ಯತ್ಯಾಸಕಾಣದಂತೆ ನಡೆದುಕೊಳ್ಳುತ್ತಿದ್ದನು. ಆದರೆ ಗೋಪಬಾಲಕರಾಗಿಯೂ, ಗೋವತ್ಸಗಳಾಗಿಯೂ ವರ್ತಿಸಿದ ಶ್ರೀಕೃಷ್ಣನಲ್ಲಿ ಗೋಪಿಯರಿಗೂ, ಗೋವುಗಳಿಗೂ ಮಾತೃಭಾವವು ಮೊದಲಿನಿಂದ ಇದ್ದರೂ ಆ ವಾತ್ಸಲ್ಯವು ಈಗ ಅತಿಶಯವಾಗಿ ವೃದ್ಧಿ ಹೊಂದಿತ್ತು. ಗೋಪಬಾಲಕರು ತಾಯಿಯಲ್ಲಿ ತೋರುತ್ತಿದ್ದ ಪ್ರೇಮಾದರಗಳನ್ನೇ ಗೋಪಬಾಲಕರೂಪದಲ್ಲಿದ್ದ ಕೃಷ್ಣನೂ ತೋರುತ್ತಿದ್ದನು. 'ಇವನು ನನ್ನ ಮಗನಲ್ಲ'–ಎಂಬ ಸಂಶಯವು ಲೇಶಮಾತ್ರವೂ ಉಂಟಾಗದಂತೆ ನಡೆದುಕೊಳ್ಳುತ್ತಿದ್ದನು. ಆದರೆ 'ಇವಳು ನನ್ನ ತಾಯಿ'–ಎಂಬ ಮೋಹವು ಅವನಲ್ಲಿರಲಿಲ್ಲ. ಹೀಗೆಯೇ ಒಂದು ವರ್ಷಪರ್ಯಂತವಾಗಿ ಗೋಪಿಯರಿಗೂ ಮತ್ತು ಗೋವುಗಳಿಗೂ ತಮ್ಮ ಬಾಲಕರ ವಿಷಯವಾಗಿ ಮತ್ತು ಕರುಗಳ ವಿಷಯವಾಗಿ ಸ್ನೇಹಲತೆಯು ವೃದ್ಧಿಹೊಂದುತ್ತಾ ಹರಡುತ್ತಲೇ ಇದ್ದಿತು. ಗೋಪಿಯರಿಗೂ ಮತ್ತು ಗೋವುಗಳಿಗೂ ಶ್ರೀಕೃಷ್ಣನ ವಿಷಯದಲ್ಲಿ ಎಂತಹ ಅಪೂರ್ವವಾದ ಪ್ರೇಮಾದರಗಳಿದ್ದುವೋ ಅಂತಹ

ಅಸೀಮವಾದ ಪ್ರೇಮಾದರಗಳನ್ನೇ ಗೊಲ್ಲತಿಯರು ಗೋಪಬಾಲಕರ ಮೇಲೆ ತೋರುತ್ತಿದ್ದರು. ಅಂತೆಯೇ ಗೋವುಗಳೂ ಕರುಗಳ ಮೇಲೆ ತೋರುತ್ತಿದ್ದುವು. ಶ್ರೀಕೃಷ್ಣನೇ ಗೋಪಬಾಲಕನಾಗಿಯೂ, ಕರುವಾಗಿಯೂ ಇದ್ದುದೇ ಇದಕ್ಕೆ ಕಾರಣವಾಗಿದ್ದಿತು. ಹೀಗೆ ಗೋಪಾಲಕೃಷ್ಣನು, ಗೋಪಬಾಲಕರೂ ಕರುಗಳೂ ಆಗಿ ತನ್ನನ್ನು ತಾನೇ ಪರಿಪಾಲಿಸಿಕೊಳ್ಳುತ್ತಾ ಒಂದುವರ್ಷದ ಪರ್ಯಂತವಾಗಿ ವೃಂದಾವನದ ಕಾಡುಗಳಲ್ಲಿಯೂ, ಈ ಗೊಲ್ಲರಹಳ್ಳಿಗಳಲ್ಲಿಯೂ, ಕೊಟ್ಟಿಗೆಗಳಲ್ಲಿಯೂ ಆತ್ಮಾನಂದದಿಂದ ಆಟವಾಡುತ್ತಿದ್ದನು. ಒಂದು ವರ್ಷತುಂಬಲು ಐದಾರು ರಾತ್ರಿಗಳು ಮಾತ್ರವೇ ಉಳಿದಿದ್ದುವು. ಅಂದಿನ ದಿನ ಶ್ರೀಕೃಷ್ಣನು, ಬಲರಾಮನನ್ನು ಜೊತೆಯಲ್ಲಿ ಕರೆದುಕೊಂಡು ಕರುಗಳನ್ನು ಮೇಯಿಸಲು ಕಾಡಿಗೆ ಹೋದನು. ಆ ಸಮಯದಲ್ಲಿ ಹಸುಗಳು ಗೋವರ್ಧನಪರ್ವತದ ತಪ್ಪಲಿನಲ್ಲಿ ಹುಲ್ಲುಮೇಯುತ್ತಿದ್ದುವು. ಅವು, ಅಲ್ಲಿಂದಲೇ ಬಹುದೂರದಲ್ಲಿ ಹಳ್ಳಿಯ ಸಮೀಪದಲ್ಲಿ ಕರುಗಳು ಹುಲ್ಲುಮೇಯುತ್ತಿರುವುದನ್ನು ನೋಡಿದುವು. ಕರುಗಳನ್ನು ನೋಡುತ್ತಲೇ ಹಸುಗಳಿಗೆ ತಮ್ಮ ಕರುಗಳ ಮೇಲಿನ ವಾತ್ಸಲ್ಯವು ಉಕ್ಕಿ ಹರಿಯಿತು. ಅವುಗಳಿಗೆ ಮೈಮೇಲೆ ಪ್ರಜ್ಞೆಯೇ ಉಳಿಯಲಿಲ್ಲ. ಮೇಯುವುದನ್ನು ನಿಲ್ಲಿಸಿ ಗೋಪಾಲಕರು ತಡೆಯು ತ್ತಿರುವುದನ್ನೂ ಲೆಕ್ಕಿಸದೆ, ಹಳ್ಳ-ಕೊಳ್ಳಗಳನ್ನೂ ಲೆಕ್ಕಿಸದೆ ನೇರವಾದ ದುರ್ಗಮಮಾರ್ಗದಲ್ಲಿ ಕೊರಳನ್ನೂ ಮುಖ-ಬಾಲಗಳನ್ನೂ ಎತ್ತಿಕೊಂಡು ಎರಡು ಕಾಲಿನ ಪ್ರಾಣಿಗಳಂತೆಯೇ (ಮನುಷ್ಯರಂತೆಯೇ) ಅತ್ಯಂತ ವೇಗವಾಗಿ ಹಾಲನ್ನು ಸುರಿಸುತ್ತಾ 'ಹಂಬಾ' ಎಂದು ಕೂಗಿಕೊಳ್ಳುತ್ತಾ ಕರುಗಳಿದ್ದೆಡೆಗೆ ಬಂದು ಸೇರಿದುವು. ಆ ಹಸುಗಳಿಗೆ ಕೆಲವು ದಿವಸಗಳ ಹಿಂದೆ ಹುಟ್ಟಿದ್ದ ಚಿಕ್ಕ ಕರುಗಳೂ ಇದ್ದುವು. ಆದರೂ ಹಳ್ಳಿಯ ಸಮೀಪದಲ್ಲಿದ್ದ ಆ ದೊಡ್ಡ ಕರುಗಳನ್ನು ಅತ್ಯಂತ ವಾತ್ಸಲ್ಯದಿಂದ ಆ ಹಸುಗಳು ನೆಕ್ಕತೊಡಗಿದುವು. ಅವುಗಳು ನೆಕ್ಕುತ್ತಿದ್ದ ವೈಖರಿಯನ್ನು ನೋಡಿದರೆ ಪ್ರೀತಿಯಿಂದ ನುಂಗಿಬಿಡುತ್ತವೆಯೋ ಎಂಬಂತೆ ಕಾಣುತ್ತಿದ್ದುವು. ಅತ್ಯಂತ ಅಕ್ಕರೆಯಿಂದ ಕರುಗಳನ್ನು ನೆಕ್ಕುತ್ತಾ ಆ ಕರುಗಳಿಗೆ ಹಾಲುಣಿಸಿದುವು. ಗೋಪಬಾಲಕರು ಕರುಗಳನ್ನು ಮೇಯಿಸುತ್ತಿದ್ದರು. ಗೋಪಾಲರು

ಹಸುಗಳನ್ನು ಮೇಯಿಸುತ್ತಿದ್ದರು. ಹಸುಗಳು ಹಳ್ಳಿಯ ಸಮೀಪದಲ್ಲಿದ್ದ ಕರುಗಳ ಬಳಿಗೆ ಹೋಗದಂತೆ ತಡೆಯಬೇಕೆಂದು ಬಹಳವಾಗಿ ಪ್ರಯತ್ನಿಸಿದರೂ ಅವರಿಗೆ ಅದು ಸಾಧ್ಯವಾಗಲೇ ಇಲ್ಲ. ಅವರ ಪ್ರಯತ್ನಗಳೆಲ್ಲವೂ ವ್ಯರ್ಥವಾಗಿ ಹೋಯಿತು. ಅಂತಹ ಪರಾಭವವನ್ನು ಅವರು ಯಾವಾಗಲೂ ಅನುಭವಿಸಿರಲಿಲ್ಲ. ಹಸುಗಳೂ ಆ ರೀತಿಯಲ್ಲಿ ಹುಚ್ಚೆದ್ದಂತೆ ಕರುಗಳನ್ನು ಕಂಡು ಓಡಿಹೋಗಿರಲಿಲ್ಲ. ಗೋಪಾಲಕರಿಗೆ ನಾಚಿಕೆಯೂ ಆಯಿತು. ಹಸುಗಳ ಮೇಲೆ ಕೋಪವೂ ಬಂದಿತು. ಹಸುಗಳು ಬಂದ ದುರ್ಗಮವಾದ ಮಾರ್ಗದಲ್ಲಿಯೇ ಬಹಳ ಕಷ್ಟಪಟ್ಟುಕೊಂಡು ಏದುಸಿರುಬಿಡುತ್ತಾ ಗೋಪಬಾಲಕರೂ, ಕರುಗಳೂ, ಶ್ರೀಕೃಷ್ಣನೂ ಇದ್ದೆಡೆಗೆ ಬಂದರು. ತಮ್ಮ ಮಕ್ಕಳನ್ನು (ಗೋಪಬಾಲಕರನ್ನು ಎಂದರೆ ಶ್ರೀಕೃಷ್ಣನ ಗೋಪಬಾಲಕರ ಸ್ವರೂಪವನ್ನು) ನೋಡುತ್ತಲೇ ಅವರಲ್ಲಿ ಪ್ರೇಮರಸವು ಉಕ್ಕಿಬಂದಿತು. ಮಕ್ಕಳ ವಿಷಯದಲ್ಲಿ ಅಲೌಕಿಕವಾದ ಹೆಚ್ಚಿನ ಅನುರಾಗವುಂಟಾಯಿತು. ಹಸುಗಳ ಮೇಲಿದ್ದ ಕೋಪವೂ ಜಾರಿಹೋಯಿತು. ಮಕ್ಕಳನ್ನೆತ್ತಿಕೊಂಡು ಗಾಢವಾಗಿ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಅನಿರ್ವಚನೀಯವಾದ ಆನಂದವನ್ನು ಅನುಭವಿಸಿದರು. ಪುತ್ರಾಲಿಂಗನದಿಂದ ಆನಂದತುಂದಿಲರಾದ ವೃದ್ಧಗೋಪಾಲಕರಿಗೆ ಮಕ್ಕಳನ್ನು ಬಿಟ್ಟುಹೋಗಲು ಸಾಧ್ಯವಾಗಲೇ ಇಲ್ಲ. ಬಹಳ ಕಷ್ಟಪಟ್ಟು ಅವರನ್ನು ಬಿಟ್ಟು ಮೆಲ್ಲ-ಮೆಲ್ಲನೆ ಹೊರಟರು. ಬಿಟ್ಟುಹೋಗುವಾಗ ಮಕ್ಕಳನ್ನೂ ಅವರ ಆಲಿಂಗನೆಯಿಂದುಂಟಾದ ಆನಂದವನ್ನೂ ಸ್ಮರಿಸುತ್ತಾ ಕಣ್ಣುಗಳಿಂದ ಆನಂದಬಾಷ್ಪಗಳನ್ನು ಸುರಿಸಿದರು. ಗೋಪಬಾಲಕರು ತಾಯಿಯ ಹಾಲುಕುಡಿಯುವ ಹಸುಳೆಗಳಾಗಿರಲಿಲ್ಲ. ಆದರೂ ಗೋಪಿಯರಿಗೆ ಅವರ ಮೇಲಿನ ಪ್ರೀತಿಯು ಕ್ಷಣ-ಕ್ಷಣಕ್ಕೂ ಅಧಿಕವಾಗುತ್ತಲೇ ಇದ್ದಿತು. ಗೋಪಾಲರೂ ಬೆಳೆದ ಆ ಮಕ್ಕಳನ್ನು ತಬ್ಬಿಕೊಂಡು ಆನಂದಪಡುತ್ತಿದ್ದರು. ಗೋವುಗಳೂ ಬೆಳೆದ ಕರುಗಳ ಮೇಲೆ, ಆಗತಾನೇ ಈಯ್ದಕರುಗಳ ಮೇಲಿನ ಪ್ರೀತಿ-ವಾತ್ಸಲ್ಯಕ್ಕಿಂತಲೂ ಹೆಚ್ಚಿನ ವಾತ್ಸಲ್ಯವನ್ನು ತೋರುತ್ತಿದ್ದುವು. ಇದಕ್ಕೇನು ಕಾರಣವಿರಬಹುದೆಂದು ಬಲರಾಮನು ಬಹಳವಾಗಿ ಯೋಚಿಸತೊಡಗಿದನು :

**ಕಿಮೇತದದ್ಭುತಮಿವ ವಾಸುದೇವೇಽಖಿಲಾತ್ಮನಿ ।**
**ವ್ರಜಸ್ಯ ಸಾತ್ಮನಸ್ತೋಕೇಷ್ವಪೂರ್ವಂ ಪ್ರೇಮ ವರ್ಧತೇ ॥೩೬॥**

"ಇದೆಂತಹ ಅದ್ಭುತವು ಕಂಡುಬರುತ್ತಿದೆ? ಸರ್ವಾತ್ಮನಾದ ಶ್ರೀಕೃಷ್ಣನಲ್ಲಿ ನನಗೂ ಮತ್ತು ವ್ರಜವಾಸಿಗಳಾದ ಗೋಪ-ಗೋಪಿಯರಿಗೂ ಅಪೂರ್ವವಾದ, ಅನಿರ್ವಾಚ್ಯವಾದ ಪ್ರೇಮವಿರುವುದು ನಿಜ. ಆದರೆ ಅಂತಹುದೇ ಪ್ರೇಮವು ನನಗೂ ಮತ್ತು ಗೋಪ-ಗೋಪಿಯರಿಗೂ ಗೋಪ ಬಾಲಕರ ಮೇಲೆ ಅಧಿಕವಾಗುತ್ತಿದೆ. ಇದಕ್ಕೆ ಕಾರಣವೇನಿರಬಹುದು? ಇದೆಂತಹ ಮಾಯೆ? ಎಲ್ಲಿಂದ ಬಂದಿರಬಹುದು? ಯಾವುದಾದರೂ ದೇವತೆಯ ಮಾಯೆಯೇ? ಮನುಷ್ಯರ ಅಥವಾ ಅಸುರರ ಮಾಯೆಯೇ? ಇಲ್ಲ ; ಇಲ್ಲ ; ಇದು ಬೇರೆ ಯಾರ ಮಾಯೆಯೂ ಅಲ್ಲ. ನನ್ನನ್ನು ವಿಮೋಹಗೊಳಿಸುತ್ತಿರುವ ಈ ಮಹಾಮಾಯೆಯು ನನ್ನ ಒಡೆಯನಾದ ಶ್ರೀಕೃಷ್ಣನದೇ ಆಗಿರಬೇಕು."

ಪರೀಕ್ಷಿತನೇ! ಹೀಗೆಂದು ನಿರ್ಧರಿಸಿದ ಬಲರಾಮನು ಗೋಪಬಾಲಕರನ್ನೂ–ಗೋವತ್ಸಗಳನ್ನೂ ಅಂತರ್ದೃಷ್ಟಿಯಿಂದ ನೋಡಿದನು. ಅವರೆಲ್ಲರೂ ಮತ್ತು ಕರುಗಳೂ ಕೂಡ ಶ್ರೀಕೃಷ್ಣಸ್ವರೂಪರೇ ಆಗಿದ್ದರು. ಎಲ್ಲರೂ ಕೃಷ್ಣನೇ–ಎಂದು ತಿಳಿದನಂತರ ಬಲರಾಮನು ಶ್ರೀಕೃಷ್ಣನನ್ನೇ ನೇರವಾಗಿ ಪ್ರಶ್ನಿಸಿದನು : "ಮುಕುಂದ! ಈ ಗೋಪಬಾಲಕರನ್ನೂ ಕರುಗಳನ್ನೂ ನಾನು ಋಷಿಗಳೆಂದೂ ದೇವತೆಗಳೆಂದೂ ನಿನ್ನ ಅನುಯಾಯಿಗಳಾಗಿ ಅವತರಿಸಿರುವವರೆಂದೂ ಭಾವಿಸಿದ್ದೆನು. ಆದರೆ ಇವರು ಋಷಿಗಳೂ ಅಲ್ಲ ; ದೇವತೆಗಳೂ ಅಲ್ಲ. ನಿನ್ನ ಸ್ವರೂಪರೇ ಆಗಿದ್ದಾರೆ. ನೀನೇ ಗೋಪಬಾಲಕರಾಗಿಯೂ ಇರುವೆ ; ಗೋವತ್ಸಗಳಾಗಿಯೂ ಇರುವೆ. ಈ ಭಿನ್ನ-ಭಿನ್ನ ರೂಪಗಳಿಗೆ ನೀನು ಆಶ್ರಯವನ್ನಿತ್ತಿದ್ದರೂ ನೀನೇ ಎಲ್ಲರಲ್ಲೂ ಪ್ರಕಾಶಮಾನವಾಗಿ ಕಾಣುತ್ತಿರುವೆ. ಇದು ಹೇಗಾಯಿತು? ನೀನೇ ಗೋಪಬಾಲಕರಾಗಲು-ಗೋವತ್ಸಗಳಾಗಲು ಕಾರಣವೇನು? ಇದನ್ನು ನೀನು ನನಗೆ ಯಥಾವತ್ತಾಗಿ ಹೇಳಬೇಕು."

ಇದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಚತುರ್ಮುಖನ ಕುತಂತ್ರದಿಂದಾಗಿ

ತಾನು ಗೋಪಬಾಲಕರೂ ಗೋವತ್ಸಗಳೂ ಆಗಬೇಕಾಯಿತೆಂದು ವರ್ಣಿಸಿ ಹೇಳಿದನು. ಆ ವೇಳೆಗೆ ಬ್ರಹ್ಮನು ತನ್ನ ಕಾಲಮಾನದಲ್ಲಿ ಒಂದು ತ್ರುಟಿಯನ್ನು* ಕಳೆದು ವ್ರಜಭೂಮಿಗೆ ಹಿಂದಿರುಗಿದನು. ಹಿಂದಿನಂತೆಯೇ ಶ್ರೀಕೃಷ್ಣನು ಗೋಪಬಾಲಕರೊಡನೆಯೂ ಮತ್ತು ಗೋವತ್ಸಗಳೊಡನೆಯೂ ಇರುವುದನ್ನು ನೋಡಿದನು. ಶ್ರೀಕೃಷ್ಣನು ಗೋಪಬಾಲಕರೊಡನೆ ಹಿಂದಿ ನಂತೆಯೇ ಕರುಗಳನ್ನು ಮೇಯಿಸುತ್ತಾ ಆಟವಾಡುತ್ತಿದ್ದನು.

ಬ್ರಹ್ಮನು ಯೋಚಿಸತೊಡಗಿದನು : 'ಗೋಕುಲದಲ್ಲಿರುವಷ್ಟು ಗೋವತ್ಸಗಳೂ ಗೋಪಬಾಲಕರೂ ನನ್ನ ಮಾಯಾಹಾಸಿಗೆಯಲ್ಲಿ ಮಲಗಿ ಬಿಟ್ಟಿದ್ದಾರೆ. ಅವರು ಇದುವರೆಗೂ ಎಚ್ಚರಗೊಂಡಿರುವುದಿಲ್ಲ. ನನ್ನ ಮಾಯೆಗೆ ಒಳಪಡದಿರುವ ಅಷ್ಟೇ ಸಂಖ್ಯೆಯ ಗೋಪಬಾಲಕರು ಮತ್ತು ಗೋವತ್ಸಗಳು ಎಲ್ಲಿಂದ ಬಂದುವು? ನಾನೆಷ್ಟು ಮಂದಿ ಗೋಪಬಾಲಕರನ್ನೂ ಮತ್ತು ಗೋವತ್ಸಗಳನ್ನೂ ವಿಮೋಹಗೊಳಿಸಿಬಿಟ್ಟಿರುವೆನೋ ಅಷ್ಟೇ ಸಂಖ್ಯೆಯ ಗೋವತ್ಸಗಳೂ ಮತ್ತು ಗೋಪಬಾಲಕರೂ ಕಳೆದ ಒಂದುವರ್ಷ ದಿಂದಲೂ ಶ್ರೀಕೃಷ್ಣನೊಡನೆ ಆಟವಾಡುತ್ತಲೇ ಇದ್ದಾರೆ.' ಚತುರ್ಮುಖನು ಎರಡು ಸ್ಥಾನಗಳಿಗೂ ಹೋಗಿ ಎರಡೂ ಕಡೆಗಳಲ್ಲೂ ಇದ್ದ ಗೋಪಬಾಲಕರನ್ನೂ ಗೋವತ್ಸಗಳನ್ನೂ ನೋಡಿದನು. ಅವರಾರು?–ಇವರಾರು? ಎಂಬುದನ್ನು ಜ್ಞಾನದೃಷ್ಟಿಯ ಮೂಲಕವಾಗಿ ತಿಳಿಯಲು ಬಹಳವಾಗಿ ಪ್ರಯತ್ನಿಸಿದನು. ಆದರೆ ಆ ಎರಡು ಗೋಪಬಾಲಕರ ಸಮೂಹದಲ್ಲಿ ಯಾರು ಹಿಂದಿನವರು? ಯಾರು ಈಚಿನವರು? ಎಂಬುದಾಗಲೀ–ನಿಜ ಗೋಪಬಾಲಕರು ಯಾರು? ಮಾಯಾಕಲ್ಪಿತರಾದವರು ಯಾರು?– ಎಂಬುದಾಗಲೀ ಬ್ರಹ್ಮನಿಗೆ ತಿಳಿಯಲೇ ಇಲ್ಲ. ವಿಶ್ವವನ್ನೇ ವಿಮೋಹಗೊಳಿ ಸುವ ಸಾಮರ್ಥ್ಯವನ್ನು ಹೊಂದಿರುವ ವಿಷ್ಣುವನ್ನು ವಿಮೋಹಗೊಳಿಸಲು ಹೋಗಿ ಬ್ರಹ್ಮನು ಹುಟ್ಟು-ಸಾವುಗಳಿಲ್ಲದವನಾದರೂ ತನ್ನ ಮಾಯೆಯಿಂದ ತಾನೇ ವಿಮೋಹಿತನಾದನು. ವಿಷ್ಣುವು ಮಾಯಾತೀತನೆಂಬ ವಿಷಯವು ಅವನ ಸ್ಮೃತಿಪಥಕ್ಕೆ ಬರಲೇ ಇಲ್ಲ.

---

* ತ್ರುಟಿ = ಬ್ರಹ್ಮನ ಒಂದು ತ್ರುಟಿ ಮನುಷ್ಯನ ಒಂದು ವರ್ಷ. ತ್ರುಟಿ–ಎಂದರೆ ಸೂಜಿಯಲ್ಲಿ ಕಮಲದ ಎಸಳನ್ನು ಚುಚ್ಚುವಷ್ಟು ಕಾಲ.

**ತಮ್ಯಾಂ ತಮೋವನ್ನೈಹಾರಂ ಖದ್ಯೋತಾರ್ಚಿರಿವಾಹನಿ ।**
**ಮಹತೀತರಮಾಯೈಶ್ಯಂ ನಿಹನ್ತ್ಯಾತ್ಮನಿ ಯುಞ್ಜತಃ ॥೪೫॥**

ಕಗ್ಗತ್ತಲೆಯಿರುವ ರಾತ್ರಿಯಲ್ಲಿ ಮಂಜಿನಿಂದ ಉಂಟಾದ ಕತ್ತಲೆಯು ಲಯವಾಗಿಹೋಗುವುದು. ಅಂತೆಯೇ ಹಗಲಿನಲ್ಲಿ ಸೂರ್ಯಪ್ರಕಾಶದ ಮುಂದೆ ಮಿಂಚುಹುಳುವಿನ ಪ್ರಕಾಶವೂ ಲಯವಾಗಿಹೋಗುವುದು. ಅದರಂತೆಯೇ ಮಾಯಾತೀತನಾದ ಮಹಾಪುರುಷನಲ್ಲಿ ಪ್ರಯೋಗಿಸುವ ಅಲ್ಪಮಾಯೆಯು ಅವನಲ್ಲೇ ಲೀನವಾಗಿ ಹೋಗುವುದು. ಯಾವ ವಿಧವಾದ ಪ್ರತಿಕ್ರಿಯೆಯನ್ನೂ ಮಾಡಲಾರದು. ಇಷ್ಟೇ ಅಲ್ಲದೆ ಹಾಗೆ ಅಲ್ಪಮಾಯೆ ಯನ್ನು ಪ್ರಯೋಗಿಸಿದವನ ಸಾಮರ್ಥ್ಯವೂ ಕುಗ್ಗಿಹೋಗುವುದು.

ಪರೀಕ್ಷಿತನೇ! ಬ್ರಹ್ಮನು ನಿಜವನ್ನು ತಿಳಿಯಲಾಗದೇ ಗೋಪಬಾಲಕ ರನ್ನೇ ನೋಡುತ್ತಿದ್ದಾಗ ಆ ಕ್ಷಣದಲ್ಲಿಯೇ ಸಮಸ್ತಗೋಪಬಾಲಕರೂ ಮೇಘಶ್ಯಾಮಲವರ್ಣದವರಾಗಿಯೂ ಪೀತಾಂಬರಧಾರಿಗಳಾಗಿಯೂ ಕಾಣಿಸಿಕೊಂಡರು. ಇಷ್ಟುಮಾತ್ರವಲ್ಲ. ಅವರು ಚತುರ್ಭುಜರಾಗಿದ್ದರು. ಶಂಖ-ಚಕ್ರ-ಗದೆ-ಕಮಲಗಳನ್ನು ಕೈಗಳಲ್ಲಿ ಹಿಡಿದಿದ್ದರು. ರತ್ನಖಚಿತವಾದ ಕಿರೀಟಗಳನ್ನು ತಲೆಗಳಲ್ಲಿ ಧರಿಸಿದ್ದರು. ಹಾರಗಳಿಂದಲೂ ವನಮಾಲೆ ಗಳಿಂದಲೂ ಸುಶೋಭಿತರಾಗಿದ್ದರು. ವಕ್ಷಃಸ್ಥಳದಲ್ಲಿ ಶ್ರೀವತ್ಸದ* ಚಿಹ್ನೆ ಯಿದ್ದಿತು. ಕನಕಾಂಗದ-ಕೇಯೂರಗಳಿದ್ದುವು. ಮಣಿಕಟ್ಟುಗಳಲ್ಲಿ ಶಂಖಾ ಕಾರವಾದ ರತ್ನಗಳನ್ನು ಮೆಟ್ಟಿದ್ದ ಬಳೆಗಳಿದ್ದುವು. ಕಾಲುಗಳಲ್ಲಿ ಕಾಲಂದುಗೆಗಳಿದ್ದುವು. ಹಸ್ತಾಭರಣಗಳಿಂದ ಅವರು ಶೋಭಿಸುತ್ತಿದ್ದರು. ಸುವರ್ಣಮಯವಾದ ಉಡಿದಾರಗಳನ್ನು ಧರಿಸಿದ್ದರು. ಬೆರಳುಗಳಲ್ಲಿ ಉಂಗುರಗಳು ಥಳ-ಥಳಿಸುತ್ತಿದ್ದುವು. ನಖ-ಶಿಖಾಂತವಾಗಿ ಸಮಸ್ತ ಅಂಗಗಳ ಲ್ಲಿಯೂ ಪುಣ್ಯವಂತರಾದ ಭಕ್ತಜನರು ಅರ್ಪಿಸಿದ ಸುಕೋಮಲವಾದ, ನೂತನವಾದ ತುಳಸೀಮಾಲೆಗಳಿಂದ ಸಮಲಂಕೃತರಾಗಿದ್ದರು. ಅವರ ಕಿರು ನಗೆಯು ಬೆಳದಿಂಗಳಿನಂತೆ ಉಜ್ಜ್ವಲವಾಗಿದ್ದಿತು. ಎಣ್ಣೆಗೆಂಪಿನಿಂದ ಕೂಡಿದ್ದ ಅವರ ಕಡೆಗಣ್ಣಿನ ನೋಟವು ಸುಮಧುರವಾಗಿದ್ದಿತು. ಬೆಳದಿಂಗಳಿನಂತಹ

---

* ಶ್ರೀವತ್ಸ : ವಿಷ್ಣುವಿನ ವಕ್ಷಸ್ಥಳದಲ್ಲಿರುವ ಶ್ವೇತರೋಮದ ಸುಳಿ.

ಅವರ ಕಿರುನಗೆಯನ್ನೂ ಎಣ್ಣೆಗೆಂಪಿನ ಕಟಾಕ್ಷವೀಕ್ಷಣವನ್ನೂ ನೋಡಿದರೆ ಸತ್ತ್ವರಜಸ್ಸುಗಳಿಂದ ತಮ್ಮ ಭಕ್ತರ ಇಷ್ಟಾರ್ಥಗಳನ್ನು ನಡೆಸಿಕೊಡಲು ಅವತರಿಸಿದ ಲೋಕಪಾಲಕರಂತೆಯೇ ಕಾಣುತ್ತಿದ್ದರು. ತನ್ನನ್ನು ಮೊದಲ್ಗೊಂಡು ಹುಲ್ಲುಕಡ್ಡಿಯವರೆಗಿನ ಸಮಸ್ತಚರಾಚರಪ್ರಾಣಿಗಳೂ ಮೂರ್ತಿಮತ್ತಾಗಿ ಬಂದು ಗೀತ-ನೃತ್ಯಗಳೇ ಮೊದಲಾದ ಹಲವಾರು ಪೂಜಾವಿಧಾನಗಳಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಆ ಎಲ್ಲ ಮೂರ್ತಿಗಳನ್ನೂ ಪೂಜಿಸುತ್ತಿದ್ದುದನ್ನು ಬ್ರಹ್ಮನು ನೋಡಿದನು. ಪ್ರತಿಯೊಂದು ಮೂರ್ತಿಯೂ ಅಣಿಮಾದಿ ಅಷ್ಟಸಿದ್ಧಿಗಳಿಂದಲೂ, ಮಾಯೆಯೇ ಮೊದಲಾದ ಜಗತ್ಕಾರಣ ಶಕ್ತಿಗಳಿಂದಲೂ, ಮಹತ್ತತ್ತ್ವವೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಿತು. ಕಾಲ, ಸ್ವಭಾವ, ವಾಸನೆ, ಸಂಕಲ್ಪ, ಕರ್ಮ, ಸತ್ತ್ವರಜಸ್ತಮೋಗುಣಗಳು–ಇವೆಲ್ಲವೂ ಪರಮಾತ್ಮನ ಮಹಿಮೆಯಿಂದ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಮೂರ್ತಿಮತ್ತಾಗಿ ಶ್ರೀಕೃಷ್ಣರೂಪರಾದ ಗೋಪಾಲಬಾಲಕರನ್ನು ಸೇವಿಸುತ್ತಿದ್ದುವು. ಆ ಗೋಪಾಲಬಾಲಕರು ಸತ್ಯಜ್ಞಾನಾನಂತಮೂರ್ತಿಗಳಾಗಿಯೂ, ಆನಂದ ಮೂರ್ತಿಗಳಾಗಿಯೂ ಬ್ರಹ್ಮನಿಗೆ ಗೋಚರಿಸಿದರು. [1] ಆ ಗೋಪಬಾಲಕರು ಅಪರೋಕ್ಷಜ್ಞಾನವನ್ನು ಪಡೆದ ಮಹಾಯೋಗಿಗಳ ಜ್ಞಾನದೃಷ್ಟಿಗೆ ಕೂಡ ಗೋಚರಿಸದಂತಹ ನಿರತಿಶಯವಾದ ಮಹಿಮೆಯುಳ್ಳವರಾಗಿದ್ದರು. ಯಾವ ಪ್ರಕಾಶದಿಂದ ಸಮಸ್ತವಾದ ಚರಾಚರಜಗತ್ತೂ ಬೆಳಗುತ್ತಿರುವುದೋ ಅಂತಹ

---

1 ಇಲ್ಲಿ ಭಗವಂತನಿಂದ ಚತುರ್ಮುಖನಿಗೆ ತೋರಿಸಲ್ಪಟ್ಟ ಶರೀರಾದಿಗಳು ಸತ್ಯಗಳೇ ಹೊರತು ಮಾಯಿಕಗಳಲ್ಲ. ಬ್ರಹ್ಮವಸ್ತುವಿಗೆ ದೃಶ್ಯತ್ವ, ಬಹುತ್ವ, ವಿವಿಧತ್ವ–ಮೊದಲಾದ ಧರ್ಮಗಳು ಸಂಗತವಲ್ಲವೆಂದು ವೇದಾಂತಿಗಳು ಹೇಳಬಹುದು. ಭಕ್ತಿಯಿಲ್ಲದೇ ವೇದಾಂತವನ್ನೋದಿದ ಮಾತ್ರದಿಂದಲೇ ಭಗವನ್ಮಹಿಮೆಯು ಗೋಚರವಾಗಲಾರದು. ಭಕ್ತ್ಯಾಹಮೇಕಯಾ ಲಭ್ಯಃ । ಭಕ್ತ್ಯಾ ಮಾಮಭಿಜಾನನ್ತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ । ನ ಚಕ್ಷುಷಾಪಶ್ಯತಿ ರೂಪಮಸ್ಯ । ಯಮೇವೈಷ ವೃಣುತೇ ತೇನ ಲಭ್ಯಃ । ತಸ್ಯೈವ ಆತ್ಮಾ ವಿವೃಣುತೇ ತನೂಂ ಸ್ವಾಂ ।ಆದಿತ್ಯವರ್ಣಂ ತಮಸಃ ಪರಸ್ತಾತ್ ।ಇತ್ಯಾದಿ ಪ್ರಮಾಣಗಳಿಂದ ಭಗವಂತನಿಗೆ ಅಪ್ರಾಕೃತ ರೂಪ-ಗುಣಾದಿಗಳುಂಟೆಂದೂ ಆತನ ಅನುಗ್ರಹವನ್ನು ಪಡೆದ ಭಕ್ತರಿಗೆ ಗೋಚರವಾಗುವುದೆಂದೂ ಸ್ಪಷ್ಟವಾಗಿದೆ. (ಸಾರಾರ್ಥದರ್ಶಿನೀ)

ಪರಬ್ರಹ್ಮಪರಮಾತ್ಮನಾದ ಶ್ರೀಕೃಷ್ಣನ ಸ್ವರೂಪಗಳನ್ನು ಚತುರ್ಮುಖನು ಒಮ್ಮೆ ಮಾತ್ರವೇ ನೋಡಿದನು. ಇಂತಹ ಅತ್ಯಾಶ್ಚರ್ಯಕರವಾದ ದೃಶ್ಯ ವನ್ನು ನೋಡಿ ಬ್ರಹ್ಮನು ಆಶ್ಚರ್ಯಚಕಿತನಾದನು. ಅವನ ಐದು ಕರ್ಮೇಂದ್ರಿಯಗಳೂ, ಐದು ಜ್ಞಾನೇಂದ್ರಿಯಗಳೂ ಮತ್ತು ಮನಸ್ಸೂ ಕ್ಷೋಭೆಗೊಂಡುವು ; ಸ್ತಬ್ಧವಾದುವು. ಬ್ರಹ್ಮನು ಶ್ರೀಕೃಷ್ಣನ ದಿವ್ಯತೇಜಸ್ಸಿನ ಮುಂದೆ ನಿಸ್ತೇಜನಾಗಿ ಮೌನಧರಿಸಿ ನಿಂತನು. ಹಾಗೆ ಅವನು ನಿಂತಿದ್ದಾಗ ಗೋಕುಲದ ಅಧಿಷ್ಠಾತೃದೇವತೆಯ ಮುಂದೆ ನಿಂತಿರುವ ಒಂದು ಹೆಣ್ಣುಗೊಂಬೆಯಂತೆಯೇ ಕಾಣುತ್ತಿದ್ದನು. ಪರೀಕ್ಷಿತನೇ! ಭಗವಂತನ ಸ್ವರೂಪವು ತರ್ಕಕ್ಕೆ ಅತೀತವಾದದ್ದು. ಅವನ ದಿವ್ಯಸ್ವರೂಪವು ಇಂತಹುದೇ ಎಂದು ಯಾರಿಂದಲೂ ನಿರ್ಣಯಿಸಿ ಹೇಳುವ ಸಾಧ್ಯತೆಯಿಲ್ಲ. ಅವನು ಸ್ವಯಂಪ್ರಕಾಶನು, ಆನಂದಸ್ವರೂಪನು, ಮಾಯಾತೀತನು. 'ನೇತಿ-ನೇತಿ'– ಎಂದು ಅನಾತ್ಮನಿರಾಕರಣಪೂರ್ವಕವಾಗಿ ವೇದಾಂತವಾಕ್ಯಗಳಿಂದ ನಿಶ್ಚಯಿ ಸಲ್ಪಡತಕ್ಕ ಆ ಪರಬ್ರಹ್ಮಸ್ವರೂಪವನ್ನು ಸಾಕ್ಷಾತ್ತಾಗಿ ಕಂಡು ಅದೇನಿರ ಬಹುದೆಂಬುದನ್ನು ನಿರ್ಣಯಿಸಲು ಸಾಧ್ಯವಾಗದೇ ಬ್ರಹ್ಮನು ಸ್ತಬ್ಧನಾಗಿ ನಿಂತುಬಿಟ್ಟನು. ಅದನ್ನು ಕಂಡ ಪರಮಕಾರುಣಿಕನಾದ ಶ್ರೀಕೃಷ್ಣನು ಯಾವ ತನ್ನ ಮಾಯೆಯಿಂದ ಚತುರ್ಮುಖನೂ ಮರುಳಾಗಿಬಿಟ್ಟನೋ ಅಂತಹ ಅದ್ಭುತವಾದ ತನ್ನ ಮಾಯೆಯ ಆವರಣವನ್ನು ತೆಗೆದುಹಾಕಿದೊಡನೆಯೇ ಬ್ರಹ್ಮನಿಗೆ ಬಾಹ್ಯಜ್ಞಾನವುಂಟಾಯಿತು. ಸತ್ತವನು ಜೀವಂತನಾದಂತೆ ಚತುರ್ಮುಖನು ತತ್ತರಿಸುತ್ತಾ ಮೇಲೆದ್ದು ನಿಂತನು. ಅವನ ಐದು ಇಂದ್ರಿಯಗಳೂ ಪುನಃ ಚೇತನವನ್ನು ಹೊಂದಿದುವು. ಬಹಳ ಕಷ್ಟಪಟ್ಟು ಕಣ್ಣುಗಳನ್ನು ತೆರೆದು ತನ್ನೊಡನೆ ಜಗತ್ತನ್ನು ಕಂಡನು. ಜಗತ್ತಿನಲ್ಲಿ ನಿಂತು ನಾಲ್ಕು ದಿಕ್ಕುಗಳನ್ನೂ ನೋಡಿದನು. ಪುನಃ ಅವನು ಮುಂದುಗಡೆ ನೋಡಿದನು. ಅದು ವೃಂದಾವನವಾಗಿದ್ದಿತು. ವೃಂದಾವನವು ಜನಗಳ ಜೀವಿಕೆಗೆ ಆಧಾರವಾದ ವೃಕ್ಷಗಳಿಂದಲೂ, ಎಲ್ಲರಿಗೂ ಪ್ರಿಯವಾದ ವಸ್ತು ಗಳಿಂದಲೂ ಕೂಡಿದ್ದಿತು. ಭಗವಾನ್ ಶ್ರೀಕೃಷ್ಣನ ಲೀಲಾಭೂಮಿಯಾಗಿದ್ದುದ ರಿಂದ ಕ್ರೋಧ-ದುರಾಸೆ-ಮದ-ಮಾತ್ಸರ್ಯಾದಿಗಳು ಅಲ್ಲಿ ಪ್ರವೇಶಿಸು ತ್ತಲೂ ಇರಲಿಲ್ಲ. ಸ್ವಭಾವದಿಂದ ವೈರಿಗಳಾಗಿದ್ದ ಹುಲಿ-ಹಸು, ಬೆಕ್ಕು-ಇಲಿ-

ಹಾವು-ಮುಂಗುಸಿ, ಆನೆ-ಸಿಂಹ ಇತ್ಯಾದಿ ಪ್ರಾಣಿಗಳೂ ಮತ್ತು ಎಲ್ಲ ಮಾನವರೂ ಅತ್ಯಂತ ಪ್ರೀತ್ಯಾದರಗಳಿಂದ ಪರಸ್ಪರವಾಗಿ ಸೇರಿ ಇರುತ್ತಿದ್ದರು. ಬ್ರಹ್ಮನು ವೃಂದಾವನವನ್ನು ಸಂದರ್ಶಿಸಿದನಂತರದಲ್ಲಿ ನಿರತಿಶಯ ಜ್ಞಾನವುಳ್ಳ ಅನಂತನಾದ ಅದ್ವಿತೀಯನಾದ ಪರಬ್ರಹ್ಮಪರಮಾತ್ಮನು ಗೋಪಬಾಲಕನಂತೆ ನಾಟ್ಯವಾಡುತ್ತಿರುವನೆಂಬ ವಿಷಯವು ತಿಳಿಯಿತು. ಹಿಂದಿನಂತೆಯೇ ಅವನು ಕೈಯಲ್ಲಿ ಮೊಸರನ್ನದ ತುತ್ತನ್ನು ಹಿಡಿದು ತನ್ನ ಸಂಗಡಿಗರನ್ನು ಮತ್ತು ಕರುಗಳನ್ನು ಅಲ್ಲಲ್ಲಿ ಹುಡುಕುತ್ತಿದ್ದನು. ಇಂತಹ ಆನಂದಕಂದನನ್ನು ನೋಡಿದೊಡನೆಯೇ ಬ್ರಹ್ಮನು ಹಂಸವಾಹನದಿಂದಿಳಿದು ಸುವರ್ಣಮಯವಾದ ತನ್ನ ಶರೀರದಿಂದ ಆತನಿಗೆ ದೀರ್ಘದಂಡನಮಸ್ಕಾರ ಮಾಡಿದನು. ತನ್ನ ನಾಲ್ಕು ಕಿರೀಟಗಳ ಅಗ್ರಭಾಗಗಳನ್ನು ಭಗವಂತನ ಚರಣಕಮಲಗಳಿಗೆ ಸೋಕಿಸಿ ನಮಸ್ಕಾರಮಾಡಿದನು ಮತ್ತು ಆನಂದಬಾಷ್ಪ ಗಳನ್ನು ಸುರಿಸುತ್ತಾ ಭಗವಂತನ ಚರಣಕಮಲಗಳನ್ನು ನೆನೆಸಿದನು. ಚತುರ್ಮುಖನು ತಾನು ಹಿಂದೆ ನೋಡಿದ ಶ್ರೀಕೃಷ್ಣನ ಮಹಿಮೆಗಳನ್ನು ಒಂದೊಂದಾಗಿ ಸ್ಮರಿಸಿಕೊಳ್ಳುವನು. ದೀರ್ಘದಂಡನಮಸ್ಕಾರಮಾಡುವನು. ಪುನಃ ಸ್ಮರಿಸಿಕೊಳ್ಳುವನು ; ದೀರ್ಘದಂಡನಮಸ್ಕಾರಮಾಡುವನು. ಹೀಗೆ ಅಜನು ಅವನ ಲೀಲಾಪ್ರಸಂಗಗಳನ್ನೆಲ್ಲಾ ಸ್ಮರಿಸಿಕೊಂಡನು. ಹಲವಾರು ಬಾರಿ ದೀರ್ಘದಂಡನಮಸ್ಕಾರವನ್ನೂ ಮಾಡಿದನು. ಶ್ರೀಕೃಷ್ಣನ ಲೀಲಾಪ್ರಸಂಗಗಳು ಇನ್ನೂ ಅನೇಕವಾಗಿಯೇ ಇದ್ದುವು. ಎಲ್ಲವನ್ನೂ ಸ್ಮರಿಸಿಕೊಳ್ಳುವ ಸಾಧ್ಯತೆಯು ಬ್ರಹ್ಮನಿಗೂ ಇರಲಿಲ್ಲ. ನಮಸ್ಕಾರಮಾಡಿ ಮೆಲ್ಲ-ಮೆಲ್ಲನೆ ಮೇಲೆದ್ದು ನಿಂತನು. ನಿರಂತರವಾಗಿ ಹೊರಬರುತ್ತಿದ್ದ ಆನಂದಬಾಷ್ಪವನ್ನು ಒರೆಸಿಕೊಂಡನು. ಮುಕುಂದನ ಮುಖಾರವಿಂದಗಳನ್ನು ಒಮ್ಮೆ ವಿಕಸಿತವಾದ ದೃಷ್ಟಿಯಿಂದ ನೋಡಿ ವಿನಮ್ರನಾಗಿ ಕತ್ತನ್ನು ಬಗ್ಗಿಸಿಕೊಂಡನು. ಕೈ ಜೋಡಿಸಿಕೊಂಡು ಗದ್ಗದವಾದ ಧ್ವನಿಯಿಂದ ಪರಮಾತ್ಮನನ್ನು ಸ್ತುತಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೩ನೆಯ ಅಧ್ಯಾಯವು ಮುಗಿಯಿತು.

---

## ಬ್ರಹ್ಮನು ಮಾಡಿದ ಶ್ರೀಕೃಷ್ಣಸ್ತೋತ್ರ

ಬ್ರಹ್ಮನು ಸ್ತೋತ್ರಮಾಡುತ್ತಾನೆ :

**ನೌಮೀಡ್ಯ ತೇऽಭ್ರವಪುಷೇ ತಡಿದಮ್ಬರಾಯ**
**ಗುಞ್ಜಾವತಂಸಪರಿಪಿಚ್ಛಲಸನ್ಮುಖಾಯ ।**
**ವನ್ಯಸ್ರಜೇ ಕವಲವೇತ್ರವಿಷಾಣವೇಣು-**
**ಲಕ್ಷ್ಮಶ್ರಿಯೇ ಮೃದುಪದೇ ಪಶುಪಾಙ್ಗಜಾಯ ॥೧॥**

"ಸ್ತೋತ್ರಾರ್ಹನಾದ ಭಗವಂತನೇ! ನಿನಗೆ ನಮಸ್ಕರಿಸುತ್ತೇನೆ. ನೀಲಮೇಘಶ್ಯಾಮನೇ! ಮಿಂಚಿನಂತಹ ಪೀತಾಂಬರವನ್ನು ಧರಿಸಿರು ವವನೇ! ಗುಲಗಂಜಿಯನ್ನೇ ಕರ್ಣಾಭರಣವಾಗಿ ಹೊಂದಿರುವವನೇ! ತಲೆಯಲ್ಲಿ ನವಿಲುಗರಿಯನ್ನು ಧರಿಸಿ ಅದರಿಂದ ಪ್ರಕಾಶಮಾನವಾಗಿ ಕಾಣುವ ಮುಖವುಳ್ಳವನೇ! ಅರಣ್ಯಕುಸುಮಗಳ ಮಾಲೆಯನ್ನು ಧರಿಸಿರುವವನೇ! ಕೈಯ್ಯಲ್ಲಿ ಮೊಸರನ್ನದ ತುತ್ತನ್ನು ಹಿಡಿದು ಉಡಿಯಲ್ಲಿ ಕೊಳಲನ್ನಿಟ್ಟು ಕೊಂಡು ಕಂಕುಳಿನಲ್ಲಿ ಕೊಂಬನ್ನೂ ಚಾವಟಿಯನ್ನೂ ಸಿಕ್ಕಿಸಿಕೊಂಡು ಅನುಪಮವಾದ ಕಾಂತಿಯಿಂದ ಪ್ರಕಾಶಿಸುತ್ತಿರುವವನೇ! ಮೃದುವಾದ ಪಾದಗಳನ್ನು ಹೊಂದಿರುವವನೇ! ನಂದಗೋಪನ ಸುತನೇ! ನಿನಗೆ ನಮಸ್ಕಾರಮಾಡುತ್ತೇನೆ.

**ಅಸ್ಯಾಪಿ ದೇವ ವಪುಷೋ ಮದನುಗ್ರಹಸ್ಯ**
**ಸ್ವೇಚ್ಛಾಮಯಸ್ಯ ನ ತು ಭೂತಮಯಸ್ಯ ಕೋऽಪಿ ।**
**ನೇಶೇ ಮಹಿ ತ್ವವಸಿತುಂ ಮನಸಾನ್ತರೇಣ**
**ಸಾಕ್ಷಾತ್ತವೈವ ಕಿಮುತಾತ್ಮಸುಖಾನುಭೂತೇಃ ॥೨॥**

ದೇವನೇ! ಈ ನಿನ್ನ ಶ್ರೀವಿಗ್ರಹವು ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸುವುದಾಗಿದೆ. ನನ್ನನ್ನು ಅನುಗ್ರಹಿಸುವುದಕ್ಕಾಗಿಯೂ ನೀನು ಈ ದಿವ್ಯವಾದ ರೂಪವನ್ನು ತಾಳಿರುವೆ. ನಿನ್ನ ಈ ಶ್ರೀವಿಗ್ರಹವನ್ನು ಪಂಚಭೂತಾತ್ಮಕವಾದುದೆಂದು ಯಾರು ತಾನೇ ಹೇಳುತ್ತಾರೆ? ಖಂಡಿತ ವಾಗಿಯೂ ನಿನ್ನದು ಪಂಚಭೂತಾತ್ಮಕಶರೀರವಲ್ಲ. ಅಪ್ರಾಕೃತವಾದ ಶುದ್ಧ

ಸತ್ತ್ವಮಯ ಶರೀರವಾಗಿದೆ. ನಾನೇ ಆಗಲೀ, ಇತರ ಯೋಗಿಗಳೇ ಆಗಲೀ ಸಮಾಧಿಸ್ಥರಾಗಿ ನಿನ್ನ ಈ ಸಚ್ಚಿದಾನಂದವಿಗ್ರಹದ ಸ್ವರೂಪವನ್ನೂ ಮಹಿಮೆಯನ್ನೂ ತಿಳಿಯಲಾರೆವು. ಆತ್ಮಾನಂದಾನುಭಾವಸ್ವರೂಪನಾದ ನಿನ್ನ ಮಹಿಮೆಯನ್ನು ಏಕಾಗ್ರಮನಸ್ಸಿನಿಂದಲಾದರೂ ಯಾರಿಗೆ ತಾನೇ ತಿಳಿಯಲು ಸಾಧ್ಯವಾಗುತ್ತದೆ?*

**ಜ್ಞಾನೇ ಪ್ರಯಾಸಮುದಪಾಸ್ಯ ನಮನ್ತ ಏವ**
**ಜೀವನ್ತಿ ಸನ್ಮುಖರಿತಾಂ ಭವದೀಯವಾರ್ತಾಮ್ ।**
**ಸ್ಥಾನೇ ಸ್ಥಿತಾಃ ಶ್ರುತಿಗತಾಂ ತನುವಾಙ್ಮನೋಭಿ-**
**ರ್ಯೇ ಪ್ರಾಯಶೋಽಜಿತ ಜಿತೋಽಪ್ಯಸಿ ತೈಸ್ತ್ರಿಲೋಕ್ಯಾಮ್ ॥**

ಪ್ರಭುವೇ! ಯಾರು ಜ್ಞಾನಯೋಗಪ್ರಾಪ್ತಿಗಾಗಿ ಪ್ರಯತ್ನಿಸದೆಯೇ ತಾವಿರುವ ಸ್ಥಳದಲ್ಲಿಯೇ ಇದ್ದುಕೊಂಡು ಸತ್ಪುರುಷರ ಸಹವಾಸದಲ್ಲಿರುತ್ತಾ, ನಿನಗೆ ಪ್ರಿಯತಮರಾದ ಸಂತರು ಹೇಳುವ ನಿನ್ನ ಲೀಲಾಪ್ರಸಂಗಗಳನ್ನು ಶರೀರ-ಮಾತು-ಮನಸ್ಸುಗಳೆಂಬ ತ್ರಿಕರಣಗಳಿಂದಲೂ ಶ್ರದ್ಧೆಯಿಟ್ಟು ಕೇಳುತ್ತಾ, ಮತ್ತಾವ ಕಾರ್ಯಗಳನ್ನೂ ಮಾಡದೇ ಇರುವರೋ—ಅಂತಹವರು ಮೂರು ಲೋಕಗಳಲ್ಲಿಯೂ ಯಾರಿಂದಲೂ ಜಯಿಸಲ್ಪಡದಿರುವ ನಿನ್ನನ್ನು

---

* ಎಲೈ ಸ್ವಾಮಿಯೇ! ವಿರಾಡ್ರೂಪನಾದ ನಿನ್ನ ಈ ಪಾಂಚಭೌತಿಕಶರೀರದ ಮಹಿಮೆಯನ್ನು ತಿಳಿಯುವುದಕ್ಕೆ ಪಿತಾಮಹನಾದ ನಾನೂ ಕೂಡ ಅಶಕ್ತನಾಗಿರುವಲ್ಲಿ ನಿಯಮ್ಯ-ನಿಯಂತೃಭೇದರಹಿತವೂ ಅಸಾಧಾರಣವೂ ಆದ ನಿನ್ನ ನಿಜರೂಪದ ಮಹಿಮೆಯನ್ನು ಯಾವನು ತಾನೇ ತಿಳಿಯಬಲ್ಲನು? (ಭಾವಾರ್ಥದೀಪಿಕಾ)

ಎಲೈ ವಾಸುದೇವನೇ! ಅಪ್ರಾಕೃತವಾದ ಈ ಶರೀರವು ನಿನ್ನ ಇಚ್ಛಾಮಾತ್ರದಿಂದ ಉಂಟಾದುದೇ ಹೊರತು ನಾನೇ ಮುಂತಾದ ಜೀವರುಗಳ ಶರೀರಗಳಂತೆ ಕರ್ಮಾಯತ್ತವೂ ಪಾಂಚಭೌತಿಕವೂ ಅಲ್ಲವಾದುದರಿಂದ ಇದು ನಮ್ಮ ಶರೀರಗಳಿಗಿಂತ ವಿಲಕ್ಷಣವೆಂದು ಮಾತ್ರ ತಿಳಿಯಬಲ್ಲೆನೇ ಹೊರತು ಅವಾಙ್ಮಾನಸಗೋಚರವಾದ ನಿನ್ನ ಅವತಾರದ ಮಹಿಮೆಯನ್ನು ತಿಳಿಯಲಾರೆನು. (ವೀರರಾಘವೀಯ)

ಪೂರ್ವಶ್ಲೋಕದಿಂದ ಅವತಾರದ ರೂಪವನ್ನು ವಿವರಿಸಿ ಈ ಶ್ಲೋಕದಿಂದ ಭಗವಂತನ ನಿಜರೂಪವನ್ನು ಬಣ್ಣಿಸುವನು. ( ಶ್ರೀಶುಕವಾಕ್ಯ )

ಜಯಿಸುತ್ತಾರೆ. ಅನನ್ಯಭಕ್ತಿಯ ಮೂಲಕವಾಗಿ ನಿನ್ನನ್ನು ವಶಪಡಿಸಿ ಕೊಳ್ಳುತ್ತಾರೆ.*

**ಶ್ರೇಯಃಸ್ರುತಿಂ ಭಕ್ತಿಮುದಸ್ಯ ತೇ ವಿಭೋ**
**ಕ್ಲಿಶ್ಯನ್ತಿ ಯೇ ಕೇವಲಬೋಧಲಬ್ಧಯೇ ।**
**ತೇಷಾಮಸೌ ಕ್ಲೇಶಲ ಏವ ಶಿಷ್ಯತೇ**
**ನಾನ್ಯದ್ಯಥಾ ಸ್ಥೂಲತುಷಾವಘಾತಿನಾಮ್ ॥೪॥**

ಭಗವಂತನೇ! ನಿನ್ನ ಮೇಲಿನ ಭಕ್ತಿಯೆಂಬುದು ನಿಶ್ಚಯವಾಗಿಯೂ ಸಮಸ್ತವಾದ ಕಲ್ಯಾಣಗಳಿಗೂ, ಶ್ರೇಯಸ್ಸುಗಳಿಗೂ ಮೂಲಸ್ರೋತವಾಗಿದೆ. ಯಾರು ಸಕಲಪುರುಷಾರ್ಥಗಳನ್ನು ಕೊಡುವ ಅಂತಹ ಅನನ್ಯಭಕ್ತಿಯನ್ನು ತೊರೆದು ಕೇವಲ ಜ್ಞಾನಕ್ಕಾಗಿ ಹಾತೊರೆಯುವರೋ ಮತ್ತು ಅದಕ್ಕಾಗಿಯೇ

---

* ಗೀತೆಯಲ್ಲಿ ಶ್ರೀಕೃಷ್ಣನ ಮಾತುಗಳು :

**ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಮ್ ।**
**ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥** (12-5)

ನನ್ನ ಅವ್ಯಕ್ತರೂಪದ ಉಪಾಸಕರಿಗೆ ಕಷ್ಟವು ಹೆಚ್ಚು. ದೇಹಾಭಿಮಾನವುಳ್ಳವರಿಗೆ ನಿರ್ಗುಣೋಪಾಸನೆಯಲ್ಲಿ ಬುದ್ಧಿಯನ್ನು ಸ್ಥಿರವಾಗಿಟ್ಟುಕೊಂಡು ಅವ್ಯಕ್ತವನ್ನು ಹೊಂದು ವುದು ಕಷ್ಟ.

**ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।**
**ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥** (ಭ.ಗೀ. ೧೨-೨)

ನನ್ನಲ್ಲಿಯೇ ಮನಸ್ಸನ್ನು ನಿಲ್ಲಿಸಿ ಪೂರ್ಣಶ್ರದ್ಧೆಯಿಂದ ನನ್ನ ಸಗುಣರೂಪವನ್ನು ಎಡೆಬಿಡದೆ ಭಜಿಸುವವರೇ ಶ್ರೇಷ್ಠರು–ಎಂದು ನನ್ನ ಅಭಿಪ್ರಾಯ. ಅಹಂ ಭಕ್ತ ಪರಾಧೀನೋ ಹ್ಯಸ್ವತನ್ತ್ರ ಇವ ದ್ವಿಜ । ಮದನ್ಯತ್ತೇ ನ ಜಾನನ್ತಿ ನಾಹಂ ತೇಭ್ಯೋ ಮನಾಗಪಿ ॥ (ದುರ್ವಾಸರಿಗೆ ಭಗವಂತನು ಹೇಳುವುದು.)

ಎಲೈ ಬ್ರಾಹ್ಮಣನೇ! ಭಕ್ತರಾದವರು ನನಗಿಂತ ಬೇರೆ ಯಾವುದನ್ನೂ ತಿಳಿಯರು. ನಾನು ಅವರಿಗಿಂತ ಬೇರೊಂದನ್ನು ತಿಳಿಯೆನು. ಹೀಗೆ ನಾನು ಭಕ್ತರಿಗೆ ಪರಾಧೀನನಾಗಿರು ವುದರಿಂದ ಸ್ವತಂತ್ರನಲ್ಲ. ಪ್ರೀತಿರೂಪಮನುಧ್ಯಾನಂ ಭಕ್ತಿರಿತ್ಯಭಿಧೀಯತೇ । ಪ್ರೇಮ ರೂಪವಾದ ಧ್ಯಾನವೇ ಭಕ್ತಿಯ ಲಕ್ಷಣ.

ಹೀಗೆ ಭಗವದ್ವಾಕ್ಯಗಳೇ ಇರುವುದರಿಂದ ಜ್ಞಾನಿಗಳಿಗಿಂತಲೂ ಭಕ್ತರೇ ಸುಲಭವಾಗಿ ಭಗವದನುಗ್ರಹವನ್ನು ಪಡೆಯುವರೆಂದು ತಿಳಿಯಬೇಕು.

ಶ್ರಮಿಸುವರೋ ಅಂತಹವರಿಗೆ ಕೇವಲ ಶ್ರಮವೇ ಫಲವಾಗಿ ಉಳಿದು ಕೊಳ್ಳುತ್ತದೆ. ಭತ್ತದ ಹೊಟ್ಟನ್ನು ಕುಟ್ಟಿದವನಿಗೆ ಕೇವಲ ಶ್ರಮವು ಮಾತ್ರ ಫಲವಾಗಿ ಉಳಿಯುವಂತೆ, (ಅಕ್ಕಿಯು ಸಿಕ್ಕದೆ ಕೇವಲ ಶ್ರಮವು ಮಾತ್ರ ಫಲವಾಗಿ ಉಳಿಯುವಂತೆ,) ಜ್ಞಾನಕ್ಕಾಗಿ ಶ್ರಮಿಸುವವನಿಗೆ ಕೇವಲ ಶ್ರಮವು ಮಾತ್ರ ಉಳಿದುಕೊಳ್ಳುತ್ತದೆ.*

**ಪುರೇಹ ಭೂಮನ್ಬಹವೋಽಪಿ ಯೋಗಿನ-**
**ಸ್ತ್ವದರ್ಪಿತೇಹಾ ನಿಜಕರ್ಮಲಬ್ಧಯಾ ।**
**ವಿಬುಧ್ಯ ಭಕ್ತ್ಯೈವ ಕಥೋಪನೀತಯಾ**
**ಪ್ರಪೇದಿರೇಽಞ್ಜೋಽಚ್ಯುತ ತೇ ಗತಿಂ ಪರಾಮ್ ॥೫॥**

ಹೇ ಅಚ್ಯುತನೇ! ಹೇ ಅನಂತನೇ! ಈ ಲೋಕದಲ್ಲಿ ಹಿಂದೆಯೂ ಹಲವಾರು ಯೋಗಿಗಳಿದ್ದರು. ಯೋಗವೇ ಮೊದಲಾದುವುಗಳ ಮೂಲಕ ವಾಗಿ ಅವರಿಗೆ ಪರಮಪದದ ಪ್ರಾಪ್ತಿಯಾಗದಿರಲು ಅವರು ತಾವು ಮಾಡಿದ

---

* ಶ್ರವಣಾದಿ ನವಭಕ್ತಿಗಳಲ್ಲಿ ಒಂದಿದ್ದರೂ ಕೃತಾರ್ಥರಾಗಬಹುದು.
(ಸಾರಾರ್ಥದರ್ಶಿನೀ)

**ಪತ್ರೇಷು ಪುಷ್ಪೇಷು ಫಲೇಷು ತೋಯೇಷ್ವಕ್ರೀತಲಭ್ಯೇಷು ಸದೈವ ಸತ್ಸು ।**
**ಭಕ್ತ್ಯಾ ಸುಲಭ್ಯೇ ಪುರುಷೇ ಪುರಾಣೇ ಭಕ್ತ್ಯೈಃ ಕಿಮರ್ಥಂ ಕ್ರಿಯತೇ ಪ್ರಯತ್ನಃ ॥**
(ನೃಸಿಂಹಪುರಾಣ)

ಎಲೆ, ಹೂವು, ಹಣ್ಣು, ನೀರು ಇವುಗಳಿಗೆ ಯಾವ ಬೆಲೆಯನ್ನೂ ಕೊಡಬೇಕಾಗಿಲ್ಲ. ಯಾವಾಗಲೂ ಸಿದ್ಧವಾಗಿರುವುವು. ಪರಮಪುರುಷನು ಭಕ್ತಿಗೆ ಸುಲಭವಾಗಿ ಸಿಕ್ಕುವನು. ಇಂತು ಪರಮಾತ್ಮನಿಗೆ ಸಮರ್ಪಿಸಬೇಕಾದ ಸಾಮಗ್ರಿಗಳು ಸುಲಭವಾಗಿಯೇ ಸಿಕ್ಕುವಾಗ ಭಕ್ತಿಗೆ ಹೆಚ್ಚು ಪ್ರಯತ್ನವೇಕೆ ಬೇಕು? ಭಕ್ತಿಮಾರ್ಗವು ಅತಿಸುಲಭವಾಗಿದ್ದರೂ ಆ ಮಾರ್ಗವನ್ನು ಹಿಡಿಯದೆ ಶ್ರಮಸಾಧ್ಯವಾದ ಜ್ಞಾನಸಂಪಾದನೆಗೆ ಶ್ರಮಪಡುವವರಿಗೆ ಕೇವಲ ಶ್ರಮವೇ ಫಲವಾಗಿ ಉಳಿಯುತ್ತದೆ.

ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ :

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥** (9-26)

ಆರಾಧಿಸುವವನು ನೀರನ್ನೋ ಪತ್ರೆಯನ್ನೋ ಪುಷ್ಪವನ್ನೋ ಅಥವಾ ಫಲವನ್ನೋ ನನಗೆ ಭಕ್ತಿಯಿಂದ ಕೊಡುವುದಾದರೆ ಅದನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ.

ವೈದಿಕ ಮತ್ತು ಲೌಕಿಕಕರ್ಮಗಳೆಲ್ಲವನ್ನೂ ನಿನಗೆ ಸಮರ್ಪಣೆಮಾಡಿಬಿಟ್ಟರು. ಹಾಗೆ ತಾವು ಮಾಡಿದ ಕರ್ಮಗಳೆಲ್ಲವನ್ನೂ ನಿನಗೆ ಸಮರ್ಪಿಸಿದ್ದರಿಂದಲೂ ನಿನ್ನ ಲೀಲಾಪ್ರಸಂಗಗಳನ್ನು ಕೇಳುತ್ತಿದ್ದುದರಿಂದಲೂ ಅವರಿಗೆ ನಿನ್ನಲ್ಲಿ ಅಪಾರವಾದ ಭಕ್ತಿಯುಂಟಾಯಿತು. ಆ ಪರಾಭಕ್ತಿಯಿಂದಲೇ ಅವರು ನಿನ್ನ ಸ್ವರೂಪದ ಜ್ಞಾನವನ್ನು ತಿಳಿದವರಾಗಿ ಬಹಳ ಸುಲಭವಾಗಿ ನಿನ್ನ ಪರಮಪದವನ್ನು ಸೇರಿದರು.*

**ತಥಾಪಿ ಭೂಮನ್ಮಹಿಮಾಗುಣಸ್ಯ ತೇ**
**ವಿಬೋದ್ಧುಮರ್ಹತ್ಯಮಲಾನ್ತರಾತ್ಮಭಿಃ ।**
**ಅವಿಕ್ರಿಯಾತ್ಸ್ವಾನುಭವಾದರೂಪತೋ**
**ಹ್ಯನನ್ಯಬೋಧಾತ್ಮತಯಾ ನ ಚಾನ್ಯಥಾ ॥೬॥**

ಆದರೂ ಪರಬ್ರಹ್ಮಸ್ವರೂಪನಾದ ಪರಮೇಶ್ವರನೇ! ನಿನ್ನ ನಿರ್ಗುಣ ಸ್ವರೂಪದ ಮಹಿಮೆಯೂ ಪರಿಶುದ್ಧವಾದ ಅಂತಃಕರಣವುಳ್ಳವರಿಗೆ ತಿಳಿಯಲು ಸಾಧ್ಯವಾಗಬಹುದು. ಆಗಲೂ ಅದು ನಿರ್ವಿಕಾರವೂ ನಿರ್ವಿಷ

---

* ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ :

**ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ।**
**ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥** (11-54)

ಅರ್ಜುನ! ಕೇವಲ ಅನನ್ಯಭಕ್ತಿಯಿಂದ ಮಾತ್ರವೇ ನನ್ನನ್ನು ಈ ರೀತಿ ತಿಳಿದುಕೊಳ್ಳಲು, ನೋಡಲು ಮತ್ತು ನನ್ನನ್ನು ಸೇರಲು ಸಾಧ್ಯವಾಗುವುದು.

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವ ಮದರ್ಪಣಮ್ ॥** (9-27)

ಕೌಂತೇಯನೇ! ನೀನು ಯಾವ ಕೆಲಸಮಾಡುವೆಯೋ, ಏನು ತಿನ್ನುವೆಯೋ, ಯಾವ ತಪಸ್ಸುಮಾಡುವೆಯೋ, ಯಾವ ಯಜ್ಞವನ್ನು ಮಾಡುವೆಯೋ, ಯಾವುದನ್ನು ದಾನಮಾಡುವೆಯೋ ಅವೆಲ್ಲವನ್ನೂ ನನಗೆ ಅರ್ಪಣೆಮಾಡು.

ಇಲ್ಲಿ 'ಅಚ್ಯುತ'–ಎಂಬ ಸಂಬೋಧನದಿಂದ ಭಗವದ್ಭಕ್ತರೆಂದಿಗೂ ಸಂಸಾರಸಾಗರದಲ್ಲಿ ಬೀಳುವುದಿಲ್ಲವೆಂದು ಸೂಚಿಸಲ್ಪಡುವುದು.

**ನ ಚ್ಯವನ್ತೇಽಥ ಯದ್ಭಕ್ತಾ ಮಹತ್ಯಾಂ ಪ್ರಲಯಾಪದಿ ।**
**ಅತೋಽಚ್ಯುತಃ ಸ್ಮೃತೋ ಲೋಕೇ ತ್ವಮೇಕೋ ವಿಷ್ಣುರವ್ಯಯಃ ॥**

**(ಕಾಶೀಖಂಡ)**

ಯವೂ ಆದ ಅಂತಃಕರಣಕ್ಕೆ ಸ್ವಯಂಪ್ರಕಾಶವಾಗಿ ಗೋಚರಿಸುತ್ತದೆಯೇ ಹೊರತು ಬೇರೆ ವಿಧದಿಂದ ಗೋಚರಿಸುವುದಿಲ್ಲ. ಯಾವ ವಿಧವಾದ ವಿಕಾರವೂ ಇಲ್ಲದೇ ಅದು ಕಾಣುತ್ತದೆ. ಅದಕ್ಕೆ ನಿರ್ದಿಷ್ಟವಾದ ರೂಪವಿಲ್ಲ. ಅದು ಹೀಗಿರುವುದೆಂದು ಇತರರಿಗೆ ಹೇಳಲು ಸಾಧ್ಯವಾಗುವುದಿಲ್ಲ. ಪ್ರಕಾಶ ಮಾನವಾದ ಆತ್ಮರೂಪದಲ್ಲಿ ಅದನ್ನು ಕಾಣಬಹುದು.*

**ಗುಣಾತ್ಮನಸ್ತೇಽಪಿ ಗುಣಾನ್ವಿಮಾತುಂ**
**ಹಿತಾವತೀರ್ಣಸ್ಯ ಕ ಈಶಿರೇಽಸ್ಯ ।**
**ಕಾಲೇನ ಯೈರ್ವಾ ವಿಮಿತಾಃ ಸುಕಲ್ಪೈ-**
**ರ್ಭೂಪಾಂಸವಃ ಖೇ ಮಿಹಿಕಾ ದ್ಯುಭಾಸಃ ॥೭॥**

ಭಗವಂತ! ಸಮರ್ಥರಾದ ಪುರುಷರು ಹಲವಾರು ಜನ್ಮಗಳ ಪರಿಶ್ರಮದಿಂದ ಭೂಮಿಯಲ್ಲಿರುವ ಕಣಗಳನ್ನೂ, ಆಕಾಶದಲ್ಲಿರುವ ಹಿಮದ ತುಂತುರುಗಳನ್ನೂ, ಝುಗಝುಗಿಸುವ ನಕ್ಷತ್ರ ತಾರೆಗಳನ್ನೂ ಎಣಿಸಿಯಾರು. ಆದರೆ ನಿನ್ನ ಸಗುಣಸ್ವರೂಪದ ಅನಂತಾನಂತಗುಣಗಳನ್ನು ಯಾರು ತಾನೇ ಎಣಿಸಬಲ್ಲರು? ಮಹಾನುಭಾವನೇ! ನೀನು ಪ್ರಪಂಚಕ್ಕೆ ಕಲ್ಯಾಣವನ್ನುಂಟು ಮಾಡಲೆಂದೇ ಅವತರಿಸಿರುವೆ. ನಿನ್ನ ಮಹಿಮೆಯನ್ನು ತಿಳಿಯುವುದು ಅತ್ಯಂತ ಕಠಿನವೇ ಸರಿ.

---

* ಎಲೈ ಭಗವಂತನೇ! 'ನೇಶೇ ಮಹಿತ್ವವಸಿತುಂ' ಎಂಬುದರಿಂದ ಭಗವನ್ಮಹಿಮೆಯು ದುರ್ಜ್ಞೇಯವೆಂದೂ 'ವಿಬುಧ್ಯ ಭಕ್ತ್ಯೈವ ತಥೋಪನೀತಯಾ' ಎಂಬುದರಿಂದ ಭಕ್ತಿಯಿಂದ ಮಾತ್ರವೇ ಸುಲಭವಾಗಿ ತಿಳಿಯತಕ್ಕದ್ದೆಂದೂ ಹೇಳಲ್ಪಡುವ ವಾಕ್ಯಗಳು ಪರಸ್ಪರ ವಿರುದ್ಧಗಳೆಂದು ಶಂಕಿಸಬಹುದು. ಆದರೆ ವಿವಾದರಾಹಿತ್ಯದಿಂದಲೂ, ಕರ್ಮಾಧೀನಗಳಾದ ಶರೀರದ ಸಂಯೋಗ-ವಿಯೋಗಗಳಿಲ್ಲದಿರುವುದರಿಂದಲೂ, ನಿರಂತರವೂ ಪ್ರತ್ಯಕ್ಷವಾಗಿರುವ ನಿಜಸ್ವರೂಪಾನುಭವದಿಂದಲೂ, ತನ್ನಿಂದ ಮಾತ್ರವೇ ತಿಳಿಯಲರ್ಹವಾದ ಸ್ವರೂಪವುಳ್ಳದುದರಿಂದ ಸ್ವಸಂವೇದ್ಯಸ್ವರೂಪವಾದ ಈ ನಿನ್ನ ಮಹಿಮೆಯೊಂದು ಮಾತ್ರ ತಿಳಿಯತಕ್ಕುದೇ ಹೊರತು ನಿನ್ನ ಸ್ವರೂಪ-ಸ್ವಭಾವಗಳು ಇಷ್ಟೆಂದು ತಿಳಿಯಲು ಅಸಾಧ್ಯವಾದುದರಿಂದ ಪರಸ್ಪರ ವಿರೋಧವಿಲ್ಲ. **ತೇ ಮಹಿ–ವಿಬೋದ್ಧುಂ ಮಾರ್ಹತಿ**–ಎಂದು ಅನ್ವಯವು. (ವೀರರಾಘವೀಯ)

ಎಲೈ ಅಪ್ರಾಕೃತಗುಣವಿಶಿಷ್ಟನೇ! ನಿನ್ನ ಮಹಿಮೆಯು ವಿಷಯಕಲುಷಿತಗಳಾದ ಇಂದ್ರಿಯಗಳಿಂದ ತಿಳಿಯಲಶಕ್ಯವಾದರೂ ನಿನ್ನ ದಿವ್ಯಮಂಗಳವಿಗ್ರಹದಲ್ಲಿಡಲ್ಪಟ್ಟ

**ತತ್ತೇಽನುಕಮ್ಪಾಂ ಸುಸಮೀಕ್ಷಮಾಣೋ**
**ಭುಞ್ಜಾನ ಏವಾತ್ಮಕೃತಂ ವಿಪಾಕಮ್ ।**
**ಹೃದ್ವಾಗ್ವಪುರ್ಭಿರ್ವಿದಧನ್ನಮಸ್ತೇ**
**ಜೀವೇತ ಯೋ ಮುಕ್ತಿಪದೇ ಸ ದಾಯಭಾಕ್ ॥೮॥**

ಯಾವ ಪುರುಷನು ಹೆಚ್ಚಿನ ಉತ್ಸಾಹದಿಂದ ನಿನ್ನ ಕೃಪೆಯನ್ನು ಕ್ಷಣ-ಕ್ಷಣಕ್ಕೂ ಪ್ರತೀಕ್ಷಿಸುತ್ತಿರುವನೋ, ಪ್ರಾರಬ್ಧಕರ್ಮಗಳಿಗೆ ಅನುಸಾರವಾಗಿ ಒದಗಿಬರುವ ಸುಖ-ದುಃಖಗಳನ್ನು ನಿರ್ವಿಕಾರವಾದ ಮನೋಭಾವದಿಂದ ಉಪಭೋಗಿಸುವನೋ, ಪ್ರೇಮಪೂರ್ಣವಾದ ಹೃದಯದಿಂದ, ಗದ್ಗದವಾದ ಧ್ವನಿಯಿಂದ, ಪುಳಕಿತವಾದ ಶರೀರದಿಂದ ತನ್ನನ್ನೇ ತಾನು ನಿನಗೆ ಅರ್ಪಿಸಿಕೊಳ್ಳುವನೋ ಅಂತಹವನು—ತಂದೆಯ ಸಂಪತ್ತಿಗೆ ಮಗನು ಸಹಜ ವಾಗಿಯೇ ಅಧಿಕಾರಿಯಾಗುವಂತೆ ನಿನ್ನ ಪರಮಪದವನ್ನು ಹೊಂದಲು ಅಧಿಕಾರಿಯಾಗುತ್ತಾನೆ.

**ಪಶ್ಯೇಶ ಮೇಽನಾರ್ಯಮನನ್ತ ಆದ್ಯೇ**
**ಪರಾತ್ಮನಿ ತ್ವಯ್ಯಪಿ ಮಾಯಿಮಾಯಿನಿ ।**
**ಮಾಯಾಂ ವಿತತ್ಯೇಕ್ಷಿತುಮಾತ್ಮವೈಭವಂ**
**ಹ್ಯಹಂ ಕಿಯಾನೈಚ್ಛಮಿವಾರ್ಚಿರಗ್ನೌ ॥೯॥**

---

ಪ್ರೇಮರೂಪಭಕ್ತಿಯಿಂದ ನಿರ್ಮಲವಾದ ಅದೇ ಇಂದ್ರಿಯಗಳಿಂದ ತಿಳಿಯಲು ಶಕ್ಯವೇ ಸರಿ. (ತತ್ತ್ವಪ್ರಕಾಶನೀ)

ಎಲೈ ದಿವ್ಯಮಂಗಳವಿಗ್ರಹನೇ! ಕೇವಲ ಭಕ್ತಿಯಿಂದ ನಿನ್ನ ಸ್ವರೂಪಾನುಭವ ವುಂಟಾಗುವುದಲ್ಲದೇ ಭಕ್ತಿಮಿಶ್ರವಾದ ಜ್ಞಾನವು ಕೂಡ ನಿನ್ನ ಸ್ವರೂಪಸಾಕ್ಷಾತ್ಕಾರಕ್ಕೆ ಕಾರಣವಾಗುವುದು. ಲೋಕದಲ್ಲಿ ವಿಷಯಾಕಾರವಾದ ಅನುಭವವು ಹೇಗೆ ಶಬ್ದಸ್ಪರ್ಶಾದಿ ವಿಷಯಗಳನ್ನೇ ಹಿಡಿಯುವುದೋ ಹಾಗೆ ಬ್ರಹ್ಮಾಕಾರವಾದ ಅನುಭವವು ಬ್ರಹ್ಮವಸ್ತುವನ್ನೇ ಗ್ರಹಿಸುವುದೆಂಬ ಭಾವವು. (ಸಾರಾರ್ಥದರ್ಶಿನೀ)

ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ :

ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥ (8-14)

ಅನನ್ಯಚಿತ್ತದಿಂದ ಸದಾ ನನ್ನನ್ನೇ ಸ್ಮರಿಸುವ ನಿತ್ಯಯುಕ್ತನಾದ ಯೋಗಿಗೆ ನಾನು ಸುಲಭವಾಗಿ ಸಿಗುತ್ತೇನೆ.

ಪ್ರಭುವೇ! ನನ್ನ ಕೌಟಿಲ್ಯವನ್ನಾದರೂ ನೋಡು. ನೀನು ಅನಂತನೂ ಆದಿಪುರುಷನೂ ಆದ ಪರಮಾತ್ಮನಾಗಿರುವೆ. ನನ್ನಂತಹ ದೊಡ್ಡ ದೊಡ್ಡ ಮಾಯಾವಿಗಳೂ ನಿನ್ನ ಮಾಯಾಚಕ್ರಕ್ಕೆ ಸಿಲುಕಿರುತ್ತಾರೆ. ಆದರೂ ನನ್ನ ಮಾಯೆಯನ್ನು ನಿನ್ನ ಮೇಲೆ ಚೆಲ್ಲಿ ನಿನ್ನ ಮಹಿಮೆಯನ್ನು ನಾನು ನೋಡಬಯಸಿದೆನು. ಆದರೆ ನಿನ್ನ ಮಾಯಾಚಕ್ರಕ್ಕೆ ಸಿಕ್ಕಿಹಾಕಿಕೊಂಡ ನಾನು ಅಗ್ನಿಯಲ್ಲಿ ಅಗ್ನಿಯನ್ನೇ ಆಧರಿಸಿರುವ ಕಿಡಿಯಂತೆ ನಿನ್ನ ಮುಂದೆ ನಗಣ್ಯನಾಗಿ ನಿಂತಿದ್ದೇನೆ.*

**ಅತಃ ಕ್ಷಮಸ್ವಾಚ್ಯುತ ಮೇ ರಜೋಭವೋ**
**ಹ್ಯಜಾನತಸ್ತ್ವತ್ಪೃಥಗೀಶಮಾನಿನಃ ।**
**ಅಜಾವಲೇಪಾನ್ಧತಮೋಽನ್ಧಚಕ್ಷುಷ**
**ಏಷೋಽನುಕಮ್ಪ್ಯೋ ಮಯಿ ನಾಥವಾನಿತಿ ॥೧೦॥**

ದಯಾಮೂರ್ತೇ! ಭಗವಂತ! ನಾನು ರಜೋಗುಣದಿಂದ ಹುಟ್ಟಿದವನಾಗಿದ್ದೇನೆ. ನಿನ್ನ ದಿವ್ಯಸ್ವರೂಪವನ್ನೂ ಮತ್ತು ಮಹಿಮೆಯನ್ನೂ ನಾನು ಚೆನ್ನಾಗಿ ತಿಳಿದವನಾಗಿಲ್ಲ. ಈ ಕಾರಣದಿಂದಲೇ ಈ ಪ್ರಪಂಚಕ್ಕೆ ನಿನ್ನಂತೆಯೇ ನಾನೂ ಒಬ್ಬ ಈಶನೆಂದೇ ಭಾವಿಸಿಕೊಂಡುಬಿಟ್ಟಿದ್ದೆನು. 'ನಾನು ಜನ್ಮರಹಿತನೂ ಜಗತ್ಕರ್ತೃವೂ ಆಗಿದ್ದೇನೆ'–ಎಂಬ ಮಾಯಾಕೃತವಾದ ಮೋಹದ ದಟ್ಟವಾದ ಅಂಧಕಾರದಲ್ಲಿ ಮುಳುಗಿ ಅಂಧನಾಗಿ ಬಿಟ್ಟಿದ್ದೇನೆ. ಆದುದರಿಂದ ಈ ವಿಷಯವನ್ನು ನೀನು ಮನಗಂಡು–'ಇವನು ನನ್ನ ಅಧೀನದಲ್ಲೇ ಇದ್ದಾನೆ ; ನನ್ನ ಸೇವಕನೇ ಆಗಿದ್ದಾನೆ ; ಇವನ ಮೇಲೆ ಕೃಪೆ ತೋರುವುದು ಅಗತ್ಯವಾಗಿದೆ'–ಎಂಬುದಾಗಿ ಭಾವಿಸಿ ನನ್ನ ಅಪರಾಧವನ್ನು ಕ್ಷಮಿಸಿಬಿಡು.[1]

---

* ಎಲೈ ಸ್ವಾಮಿಯೇ! ನಿನ್ನನ್ನು ಕೂಡ ನಾನು ವಂಚಿಸಲು ಪ್ರಯತ್ನಿಸಿದೆನಲ್ಲವೇ? ನನ್ನ ದೌರ್ಜನ್ಯವನ್ನು ಏನೆಂದು ಹೇಳಲಿ? ಭಕ್ತಿರಹಿತವಾದ ಜ್ಞಾನವೆಷ್ಟಿದ್ದರೂ ಪ್ರಯೋಜನವಿಲ್ಲವೆಂಬುದಕ್ಕೆ ನಾನೇ ದೃಷ್ಟಾಂತವಲ್ಲವೇ? (ವೈಜಯಂತೀ)

ಎಲೈ ದಯಾಳುವೇ! ಶರಣಾಗತರ ತಪ್ಪನ್ನು ಎಣಿಸದಿರುವುದು ; ಅವುಗಳನ್ನು ಮನ್ನಿಸುವುದು–ಇದೇ ವಾತ್ಸಲ್ಯಕ್ಕೆ ಲಕ್ಷಣವಾದುದರಿಂದ ನನ್ನ ಅಪರಾಧವನ್ನು ಮನ್ನಿಸು. (ತತ್ತ್ವಬೋಧಿನೀ)

1 ಎಲೈ ಅಚ್ಯುತನೇ! ನಿನ್ನವರಿಗೆಂದಿಗೂ ಚ್ಯುತಿಯಿಲ್ಲವಾದುದರಿಂದ ನಿನಗೆ ಈ

**ಕ್ವಾಹಂ ತಮೋಮಹದಹಂಖಚರಾಗ್ನಿವಾರ್ಭೂ-**
**ಸಂವೇಷ್ಟಿತಾಣ್ಡಘಟಸಪ್ತವಿತಸ್ತಿಕಾಯಃ ।**
**ಕ್ವೇದೃಗ್ವಿಧಾವಿಗಣಿತಾಣ್ಡಪರಾಣುಚರ್ಯಾ-**
**ವಾತಾಧ್ವರೋಮವಿವರಸ್ಯ ಚ ತೇ ಮಹಿತ್ವಮ್ ॥೧॥**

ಸ್ವಾಮಿಯೇ! ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವೀರೂಪವಾದ ಆವರಣಗಳಿಂದ ಕೂಡಿರುವ ಈ ಬ್ರಹ್ಮಾಂಡವು ನನ್ನ ಶರೀರವಾಗಿರುವುದೇ ನಿಶ್ಚಯ. ಆದರೆ ನಿನ್ನ ರೋಮ-ರೋಮಗಳ ಮಧ್ಯದಲ್ಲಿ ಗವಾಕ್ಷಿಯಲ್ಲಿ ಬರುವ ಸೂರ್ಯನ ಬಿಸಿಲುಕೋಲಿನಲ್ಲಿ ಕಾಣುವ ಪರಮಾಣುಗಳಂತೆ ಅಗಣಿತವಾದ ಇಂತಹ ಬ್ರಹ್ಮಾಂಡಗಳಿವೆ. ಅಂತಹ ನಿನ್ನ ಅನಂತವಾದ ಮಹಿಮೆಯೆಲ್ಲಿ? ಕೇವಲ ಏಳು ಗೇಣುದ್ದದ ಶರೀರವನ್ನು ಧರಿಸಿರುವ ನಾನೆಲ್ಲಿ? ನಮ್ಮಿಬ್ಬರಿಗೂ ಪರ್ವತ ಪರಮಾಣುಗಳ ಅಂತರವೆಂದೇ ಹೇಳಬಹುದು.*

---

ಹೆಸರು ಬಂದಿರುವುದು. ಅಲ್ಲದೇ **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯಸ್ಯಾತ್**–ಎಂದು ನೀನೇ ಹೇಳಿರುವೆ. **ರಜ ಸ್ತಮೋಭ್ಯಾಂ ಯುಕ್ತೋಭೂದ್ರಜಃ ಸತ್ತ್ವಾಧಿಕಂ ವಿಭುಮ್ । ಸಸರ್ಜ ನಾಭಿಕಮಲೇ ಬ್ರಹ್ಮಾಣಂ ಕಮಲಾಸನಮ್ ॥** ಎಂಬಂತೆ ನಾನು ರಜೋಗುಣದಿಂದ ಜನಿಸಿರುವ ಕಾರಣ ನನ್ನ ಅಪರಾಧವನ್ನು ಮನ್ನಿಸು. (ತತ್ತ್ವದೀಪಿಕಾ)

ನನ್ನ ದೌರ್ಜನ್ಯಕ್ಕೆ ದಂಡವು ತಕ್ಕುದಾದರೂ ಮಹಾದಯಾಳುವಾದ ನಿನಗೆ ಕ್ಷಮೆಯೇ ಉಚಿತವಾದುದರಿಂದ ನನ್ನ ತಪ್ಪನ್ನು ಕ್ಷಮಿಸು. (ಸಾರಾರ್ಥದರ್ಶಿನೀ)

* ವಿಷ್ಣುಪುರಾಣೋಕ್ತಪ್ರಕಾರವಾಗಿ ಭೂಮಿಯು ಆವರಣದಲ್ಲಿ ಸೇರುವುದಿಲ್ಲ. ಒಂದಕ್ಕಿಂತ ಒಂದು ಹತ್ತರಷ್ಟು ವಿಸ್ತಾರವುಳ್ಳ ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತು, ಪ್ರಕೃತಿಗಳೆಂಬ ಏಳೂ ಬ್ರಹ್ಮಾಂಡಕ್ಕೆ ಆವರಣಗಳು.

**ದಶೋತ್ತರಾಣಿ ಪಯಸಾ ಮೈತ್ರೇಯಾಣ್ಡಂ ಜಗದ್ವೃತಮ್ ।**
**ಸರ್ವೋಮ್ಬು ಪರಿಧಾನೋऽಸೌ ವಹ್ನಿನಾ ವೇಷ್ಟಿತೋ ಬಹಿಃ ॥**
**ವಹ್ನಿಶ್ಚ ವಾಯುನಾ ವಾಯುರ್ಮೈತ್ರೇಯ ನಭಸಾವೃತಃ ।**
**ಭೂತಾದಿನಾ ನಭಃ ಸೋऽಪಿ ಮಹತಾ ಪರಿವೇಷ್ಟಿತಃ ॥**
**ದಶೋತ್ತರಾಣ್ಯಶೇಷಾಣಿ ಮೈತ್ರೇಯೈತಾನಿ ಸಪ್ತ ವೈ ॥**
**ಅಣ್ಡಕೋಶೋ ಬಹಿರಯಂ ಪಞ್ಚಾಶತ್ಕೋಟಿ ವಿಸ್ತರಃ ॥** (ವೀರರಾಘವೀಯ)

ಉತ್ಕ್ಷೇಪಣಂ ಗರ್ಭಗತಸ್ಯ ಪಾದಯೋಃ
ಕಿಂ ಕಲ್ಪತೇ ಮಾತುರಧೋಕ್ಷಜಾಗಸೇ
ಕಿಮಸ್ತಿನಾಸ್ತಿವ್ಯಪದೇಶಭೂಷಿತಂ
ತವಾಸ್ತಿ ಕುಕ್ಷೇಃ ಕಿಯದಪ್ಯನನ್ತಃ ||೧೨||

ಅಧೋಕ್ಷಜನೇ! ಮಗುವು ತಾಯಿಯ ಹೊಟ್ಟೆಯಲ್ಲಿರುವಾಗ ಕೈ-ಕಾಲುಗಳನ್ನು ಬಡಿಯುತ್ತದೆ. ಇದರಿಂದಾಗಿ ಅದು ತಾಯಿಗೆ ಅಪರಾಧ ಮಾಡಿದಂತಾಗುವುದೇ? ತಾಯಿಯಾದರೂ ಅದನ್ನು ಅಪರಾಧವೆಂದು ಭಾವಿಸಿಯಾಳೇ? ಅಸ್ತಿ-ನಾಸ್ತಿ-ಎಂದು ಹೇಳಲ್ಪಡುವ ಯಾವುದೇ ವಸ್ತುಗಳಾದರೂ ನಿನ್ನ ಹೊಟ್ಟೆಯನ್ನು ಬಿಟ್ಟು ಬೇರೆಡೆಯಲ್ಲಿರುತ್ತವೆಯೇ? ಆದುದರಿಂದ ನಾನು ನಿನ್ನ ಹೊಟ್ಟೆಯಲ್ಲೇ ಇದ್ದೇನೆ. ತಾಯಿಯ ಹೊಟ್ಟೆ ಯಲ್ಲಿ ಮಗುವು ಮಾಡಿದ ಕಾರ್ಯವನ್ನು ಅಪರಾಧವೆಂದು ಭಾವಿಸುವು ದಿಲ್ಲವಷ್ಟೇ. ಹಾಗೆಯೇ ನಾನು ಮಾಡಿದ ವಂಚನೆಯ ಕಾರ್ಯವನ್ನು ನೀನು ಅಪರಾಧವೆಂದು ಭಾವಿಸಬೇಡ. ಕ್ಷಮಿಸಿಬಿಡು.*




ದಶೋತ್ತರಾದಿಕೈರ್ಯತ್ರ ಪ್ರವಿಷ್ಟಃ ಪರಮಾಣುವತ್ ।
ಲಕ್ಷ್ಯನ್ತೇ ಸ್ವರ್ಗತಶ್ಚಾನ್ಯೇ ಕೋಟಿಶೋ ಹ್ಯಣ್ಡರಾಶಯಃ ॥

ಭಗವಂತನ ಶರೀರದಲ್ಲಿ ಕೋಟಿಕೋಟಿಯಾಗಿ ಬ್ರಹ್ಮಾಂಡಗಳು ಪರಮಾಣುಗಳಂತೆ ಕಾಣಲ್ಪಡುವುವು. (ತತ್ತ್ವದೀಪಿಕಾ)

* ಸತ್ಯವೆಂದು ಹೋರಾಡುವ ಮತವನ್ನು ಯುಕ್ತಿಗಳಿಂದ ಖಂಡಿಸಿ ಅಸತ್ಯವೆಂದೂ,

ಜಗತ್ತ್ರಯಾನ್ತೋದಧಿಸಮ್ಪ್ಲವೋದೇ
ನಾರಾಯಣಸ್ಯೋದರನಾಭಿನಾಲಾತ್ ।
ವಿನಿರ್ಗತೋಽಜಸ್ತ್ವಿತಿ ವಾಙ್ನ ವೈ ಮೃಷಾ
ಕಿಂ ತ್ವೀಶ್ವರ ತ್ವನ್ನ ವಿನಿರ್ಗತೋಽಸ್ಮಿ ॥೧೩॥

ಪ್ರಳಯಕಾಲದಲ್ಲಿ ಸ್ವರ್ಗ-ಮರ್ತ್ಯ-ಪಾತಾಳಗಳೆಂಬ ಮೂರು ಲೋಕಗಳೂ ನೀರಿನಲ್ಲಿ ಮುಳುಗಿಹೋಗಿದ್ದಾಗ ನಾರಾಯಣನೊಬ್ಬನೇ ಪವಡಿಸಿದ್ದನೆಂದೂ ಅವನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನೆಂದೂ ಶ್ರುತಿಗಳು ಸಾರುತ್ತವೆ. ಈ ಶ್ರುತಿವಾಕ್ಯವು ಖಂಡಿತವಾಗಿಯೂ ಸುಳ್ಳಲ್ಲ. ಈಶ್ವರನೇ! ನೀನೇ ಹೇಳು. ನಿನ್ನ ನಾಭಿಕಮಲದಿಂದ ನಾನು ಹೊರಬಂದಿರು ವವನಲ್ಲವೇ? ಆದುದರಿಂದ ನಾನು ನಿನ್ನ ಪುತ್ರನಲ್ಲವೇ? ಮಗನು ಮಾಡಿದ ಅಪರಾಧವನ್ನು ತಂದೆಯಾದವನು ಕ್ಷಮಿಸಲೇಬೇಕು.*

---

ಅಸತ್ಯವೆಂದು ವಾದಮಾಡುವ ಮತವನ್ನು ಉಚಿತೋಕ್ತಿಗಳಿಂದ ದೂಷಿಸಿ ಸತ್ಯವೆಂದೂ ಸ್ಥಾಪಿಸಲ್ಪಡುವ ಯಾವ ಜಗತ್ತುಂಟೋ ಅದು ಸತ್ಯವಾಗಲೀ ; ಮಿಥ್ಯೆಯೇ ಆಗಲೀ ನಿನ್ನ ಕುಕ್ಷಿಯಲ್ಲಿರುವುದೇ ಹೊರತು ಹೊರಗಿಲ್ಲ. (ಸಾರಾರ್ಥದರ್ಶಿನೀ)

* ಸ್ವಪತಸ್ತಸ್ಯ ದೇವಸ್ಯ ಪದ್ಮಂ ಸೂರ್ಯಸಮಪ್ರಭಮ್ ।
ನಾಭೇರ್ವಿನಿಃಸೃತಂ ತಸ್ಯ ತತ್ರೋತ್ಪನ್ನಃ ಪಿತಾಮಹಃ ॥

ಮಹಾಜಲದಲ್ಲಿ ಮಲಗಿದ್ದ ನಾರಾಯಣನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನು. (ಮಾರ್ಕಂಡೇಯಪುರಾಣ)

ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ವಿದುರ್ಬುಧಾಃ ।
ತಸ್ಯತಾನ್ಯಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥
ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಸ್ಯ ತಾನ್ಯಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥

ಭಗವಂತನಿಂದ ಜನಿಸಿದ ಚತುರ್ವಿಂಶತಿ ತತ್ತ್ವಗಳು ಮತ್ತು ಅವುಗಳಲ್ಲಿ ಮುಖ್ಯವಾದ ಜಲವು ನಾರಾ ಎನಿಸುವುದು. ಇವುಗಳಿಗೆ ಆಶ್ರಯವಾಗಿದ್ದುದರಿಂದ ಭಗವಂತನಿಗೆ ನಾರಾಯಣನೆಂದು ಹೆಸರಾಯಿತು. (ಭಾವಾರ್ಥದೀಪಿಕಾ)

ಜಲಾದಿಗಳ ಉಪಾಧಿಯಿಂದಲೇ ಪರಮಪುರುಷನಿಗೆ ನಾರಾಯಣನೆಂಬ ಹೆಸರು ಬಂದಿರುವುದು ದಿಟವಾದಲ್ಲಿ, ಆ ಉಪಾಧಿಯು ಅಸತ್ಯವಾದುದರಿಂದ ತನ್ಮೂಲಕವಾದ ನಾರಾಯಣತ್ವವೂ ಅಸತ್ಯವಾದೀತು–ಎಂದ ು ಶಂಕಿಸಕೂಡದು. ಸತ್ಯವಾದ

**ನಾರಾಯಣಸ್ತ್ವಂ ನ ಹಿ ಸರ್ವದೇಹಿನಾ-**
**ಮಾತ್ಮಾಸ್ಯಧೀಶಾಖಿಲಲೋಕಸಾಕ್ಷೀ ।**
**ನಾರಾಯಣೋಽಙ್ಗಂ ನರಭೂಜಲಾಯನಾ-**
**ತ್ತಚ್ಚಾಪಿ ಸತ್ಯಂ ನ ತವೈವ ಮಾಯಾ ॥೧೪॥**

ಪ್ರಭುವೇ! ನಾರಾಯಣನಾಗಿರುವ ನೀನು ಸಮಸ್ತಶರೀರಗಳಿಗೂ ಆತ್ಮಸ್ವರೂಪನಾಗಿರುವೆಯಲ್ಲವೇ? ಅಧೀಶನೂ ಆಗಿರುವೆಯಲ್ಲವೇ? ಸಮಸ್ತಲೋಕಗಳಿಗೂ ಸಾಕ್ಷಿಯಾಗಿರುವೆಯಲ್ಲವೇ?ನರನಿಂದ ಹುಟ್ಟಿದ ತತ್ತ್ವಗಳಿಗೂ, ಜಲಕ್ಕೂ ಆಶ್ರಯನಾಗಿ ನಾರಾಯಣನೆನಿಸಿದ ಪುರುಷನು ನಿನ್ನ ಅಂಗವು. ಆದರೆ ಇದೂ ಸತ್ಯವಲ್ಲ. ಇದೂ ನಿನ್ನ ಮಾಯೆಯೇ ಆಗಿದೆ.*

---

ಭಗವಲ್ಲೀಲೆಗೆ ಉಪಕರಣವೆನಿಸಿ ಆತನ ಅವತಾರಾಂತರದಿಂದ ಜನಿಸಿದ ಜಲಾದಿಗಳೂ ಕೂಡ ಸತ್ಯಗಳೇ ಹೊರತು ಮಾಯಿಕಗಳಲ್ಲ. ಇಂತಹ ಜಲಾದಿಗಳೇ ಅಪರಿಚ್ಛಿನ್ನಗಳೆನ್ನುವಾಗ ನಾರಾಯಣನು ಅಪರಿಚ್ಛಿನ್ನನೆಂದು ಹೇಳುವುದೇನು?–ಎಂಬ ತಾತ್ಪರ್ಯವು.

(ಬೃಹ)

ಎಲೈ ಅಧೀಶನೇ! ನಿನಗೆ ಪುರುಷನೆಂದು ಹೆಸರುಳ್ಳ ಮೂರು ರೂಪಗಳುಂಟು. ಮಹತ್ತತ್ತ್ವವನ್ನು ಸೃಷ್ಟಿಸಿದವನು ಮೊದಲನೆಯವನು. ಆತನೇ ಜಲಶಾಯಿಯು. ಬ್ರಹ್ಮಾಂಡಾಭಿಮಾನಿಯು ಎರಡನೆಯವನು. ಸಕಲಭೂತಗಳಲ್ಲಿಯೂ ಇರುವವನು ಮೂರನೆಯವನು. ಈ ಮೂರು ರೂಪಗಳಿಗೂ ಆಶ್ರಯನಾದ ನೀನೇ ಮುಖ್ಯ ನಾರಾಯಣನು. ನಾರಾಯಣನೆಂದು ಹೆಸರುಗೊಂಡ ಜಲಶಾಯಿಯಾದ ಪ್ರಥಮ ಪುರುಷನು ಯಾವನುಂಟೋ ಅವನು ನಿನಗೆ ಅಂಗವೇ ಹೊರತು ನೀನಲ್ಲ. (ವೈಜಯಂತಿ)

ನಾರಶಬ್ದವಾಚ್ಯರಾದ ಬದ್ಧರು-ಮುಕ್ತರು–ನಿತ್ಯರೆಂಬ ಭೇದವುಳ್ಳ ಸಕಲಜೀವರಿಗೂ ಆಶ್ರಯನಾದುದರಿಂದ ನಾರಾಯಣನೆಂಬುವವನು ನೀನೇ ಹೊರತು ಬೇರೆಯಲ್ಲ.

(ಶುಕವಾಕ್ಯ )

* ನಾರಾಯಣ ಶಬ್ದಕ್ಕೆ ನಾನಾರ್ಥಗಳಿವೆ :

೧) **ನರಾಣಾಂ ಸಮೂಹೋ ನಾರಂ ತದಯನಂ ಅಸ್ಯ ನಾರಾಯಣಃ** = ನರರ ಸಮೂಹವನ್ನು ಆಶ್ರಯವನ್ನಾಗಿ ಹೊಂದಿರುವವನು–ಪರಮಾತ್ಮ.

೨) **ನಾರಾಃ ಈಯನ್ತೇ ಅನೇನ ನಾರಾಯಣಃ । ನರಾಜ್ಜಾತಾನಿ ತತ್ತ್ವಾನಿ ಆಯನಂ ಅಸ್ಯ** = ನಾರಾಯಣಃ

ತನ್ನಿಂದ ಉಂಟಾದ ತತ್ತ್ವಗಳೆಲ್ಲಕ್ಕೂ ತಾನೇ ಆಶ್ರಯನಾದುದರಿಂದ ಪರಮಾತ್ಮನು ನಾರಾಯಣನು. ಇದರಿಂದ ನಾರಾಯಣನು ಸರ್ವವ್ಯಾಪಿಯಾಗಿರುವನು.

ತಚ್ಚೇಜ್ಜಲಸ್ಥಂ ತವ ಸಜ್ಜಗದ್ವಪುಃ
ಕಿಂ ಮೇ ನ ದೃಷ್ಟಂ ಭಗವಂಸ್ತದೈವ ।
ಕಿಂ ವಾ ಸುದೃಷ್ಟಂ ಹೃದಿ ಮೇ ತದೈವ
ಕಿಂ ನೋ ಸಪದ್ಯೇವ ಪುನರ್ವ್ಯದರ್ಶಿ ॥೧೫॥

ಭಗವಂತನೇ! ನಿನ್ನ ವಿರಾಟ್‌ಸ್ವರೂಪವು ಆ ಸಮಯದಲ್ಲಿ ಜಲದಲ್ಲೇ ಇದ್ದುದಾದರೆ ನಾನು ಕಮಲನಾಳದ ಮೂಲಕ ನೀರಿನ ಒಳಹೊಕ್ಕು ನೂರು ವರ್ಷಗಳವರೆಗೂ ಹುಡುಕಿದರೂ ನಾನು ಆ ನಿನ್ನ ಸ್ವರೂಪವನ್ನು ಏಕೆ ಕಾಣಲಿಲ್ಲ? ಪುನಃ ನಾನು ತಪಸ್ಸುಮಾಡಿದಾಗ ನನ್ನ ವಕ್ಷಃಸ್ಥಳದಲ್ಲಿ ಆ ದಿವ್ಯಸ್ವರೂಪವು ಹೇಗೆ ಕಾಣಿಸಿಕೊಂಡಿತು? ಆ ದಿವ್ಯಸ್ವರೂಪವು ಹೃದಯಗುಹೆಯಲ್ಲಿ ಕ್ಷಣಮಾತ್ರವೇ ಕಂಡು ಪುನಃ ಮರೆಯಾದುದೇಕೆ?

ಅತ್ರೈವ ಮಾಯಾಧಮನಾವತಾರೇ
ಹ್ಯಸ್ಯ ಪ್ರಪಞ್ಚಸ್ಯ ಬಹಿಃ ಸ್ಫುಟಸ್ಯ ।
ಕೃತ್ಸ್ನಸ್ಯ ಚಾನ್ತರ್ಜಠರೇ ಜನನ್ಯಾ
ಮಾಯಾತ್ವಮೇವ ಪ್ರಕಟೀಕೃತಂ ತೇ ॥೧೬॥

ಮಾಯೆಯನ್ನು ಉಪಶಮನಗೊಳಿಸುವ ಮಾಯಾಧಮನನೇ! ಯುಗಾಂತರದಲ್ಲಿ ನಡೆದ ವಿಷಯವು ಹಾಗಿರಲಿ. ಇದೇ ನಿನ್ನ ಈ ಅವತಾರ ದಲ್ಲಿಯೇ ಹೊರಗೆ ಸ್ಪಷ್ಟವಾಗಿ ಕಾಣುತ್ತಿರುವ ಈ ಜಗತ್ತನ್ನು ನಿನ್ನ ಹೊಟ್ಟೆಯಲ್ಲಿ ತೋರಿಸಿ ತಾಯಿಯಾದ ಯಶೋದೆಯನ್ನು ತಬ್ಬಿಬ್ಬುಗೊಳಿಸಿ

---

ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ವಿದುರ್ಬುಧಾಃ ।
ತಾನ್ಯೇವ ಚಾಯನಂ ತಸ್ಯ ತೇನ ನಾರಾಯಣ ಸ್ಮೃತಃ ॥

ಬ್ರಹ್ಮಸೃಷ್ಟಿಗೆ ಪೂರ್ವದಲ್ಲಿ ಮಹಾಜಲರಾಶಿಯ ಮಧ್ಯದಲ್ಲಿ ಪರಬ್ರಹ್ಮನಿಗೆ ಜಲವು ಆಶ್ರಯವಾಗಿದ್ದುದರಿಂದ ಪರಮಾತ್ಮನು ನಾರಾಯಣನು. ನರಃ = ಅಕ್ಷಯನೂ ನಿರ್ವಿಕಾರನೂ ಆದ ಪರಮಾತ್ಮನು. ತಸ್ಮಾಜ್ಜಾತಾ ನಾರಾಃ = ಅಪಃ ಅಂತಹ ನರನಿಂದ ಹುಟ್ಟಿದ್ದು ನಾರಾಃ = ನೀರು. ಅಸ್ಯ ಪರಮಾತ್ಮನೋ ಅಯನಮಿತಿ ಅಸೌ ನಾರಾಯಣಃ = ಆ ನೀರು ಪರಮಾತ್ಮನ ಆಶ್ರಯಸ್ಥಾನವಾದುದರಿಂದ ಪರಮಾತ್ಮನು ನಾರಾಯಣನು.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥

ಬಿಟ್ಟೆ. ಆದುದರಿಂದ ಈ ಸಮಸ್ತಜಗತ್ತು ನಿನ್ನ ಮಾಯಾಕಲ್ಪಿತವೆಂದೇ ಸಿದ್ಧಾಂತವಾಗುತ್ತದೆ.*

**ಯಸ್ಯ ಕುಕ್ಷಾವಿದಂ ಸರ್ವಂ ಸಾತ್ಮಂ ಭಾತಿ ಯಥಾ ತಥಾ ।**
**ತತ್ತ್ವಯ್ಯಪೀಹ ತತ್ಸರ್ವಂ ಕಿಮಿದಂ ಮಾಯಯಾ ವಿನಾ ॥೧೭॥**

ದಯಾಳುವೇ! ನಿನ್ನಿಂದ ಮಾಡಿದ ಈ ಅಖಂಡವಿಶ್ವವೂ ಹೊರಗೆ ಹೇಗೆ ಕಾಣುತ್ತಿರುವುದೋ ಹಾಗೆಯೇ ನಿನ್ನ ಉದರದಲ್ಲಿಯೂ ಕಂಡಿತು. ಇದು ನಿನ್ನ ಮಾಯೆಯಲ್ಲದೇ ಮತ್ತೇನು? ಇದು ನಿನ್ನ ಲೀಲಾವಿನೋದವೇ ಆಗಿದೆ.[1]

---

* ಎಲೈ ಮಾಯಾಧಮನನೇ! ಹೊರಗೆ ವ್ಯಕ್ತವಾಗಿ ತೋರುವ ಚಿದಚಿದಾತ್ಮಕವಾದ ಈ ಪ್ರಪಂಚವನ್ನು ಇದೇ ಅವತಾರದಲ್ಲಿಯೇ ಹೊಟ್ಟೆಯೊಳಗೆ ನಿನ್ನ ತಾಯಿಗೆ ತೋರಿಸಿ ಅದ್ಭುತಮಹಿಮೆಯನ್ನು ಪ್ರಕಟಗೊಳಿಸಿದೆ. (ವೀರರಾಘವೀಯ)

ಎಲೈ ಶರಣಾಗತರ ಸಂಸಾರದುಃಖವನ್ನು ಕಳೆಯುವವನೇ! ನಿನ್ನ ಅನುಗ್ರಹದಿಂದ ನನಗೆ ದಿವ್ಯಜ್ಞಾನವುಂಟಾಯಿತು. ಹಿಂದೆ ನೀನು ಜಠರದಲ್ಲಿ ತಾಯಿಗೆ ತೋರಿಸಿದ ವಿಶ್ವರೂಪವು ಕರತಲಾಮಲಕದಂತೆ ಕಾಣುತ್ತಿರುವುದು. ಹೊರಗೆ ಪ್ರಸಿದ್ಧವಾದ ಜಗತ್ತನ್ನು ಉದರ ದಲ್ಲಿಯೇ ತೋರಿಸಿದುದರಿಂದ ಅದ್ಭುತಮಹಿಮೆಯುಳ್ಳ ನೀನು ಸರ್ವಶರೀರಕನೇ ಸರಿ. (ತತ್ತ್ವದೀಪಿಕಾ)

ಮನೆಯೊಳಗಿರುವ ಗಡಿಗೆಯಲ್ಲಿ ಆ ಮನೆಯು ಹೇಗೆ ಅಡಗಲಾರದೋ ಅಂತೆಯೇ ಜಗತ್ತಿನೊಳಗಿರುವ ಜಲದಲ್ಲಿ ನೆಲೆಸಿದ ನಾರಾಯಣನಲ್ಲಿ ಜಗತ್ತು ಅಡಗಲಾರದು. ಆದುದರಿಂದ ಆ ಜಗತ್ತು ಬೇರೆಯಾಗಿರಬಹುದೇ? ಹೊರಗಣ ಪ್ರಪಂಚವನ್ನೇ ನೀನು ಹೊಟ್ಟೆಯೊಳಗೆ ತೋರಿಸಿದೆಯಾದುದರಿಂದ ಅದು ಮಾಯೆಯೇ ಹೊರತು ಬೇರೆ ಪ್ರಪಂಚವಲ್ಲ. (ಸಾರಾರ್ಥದರ್ಶಿನೀ)

ಎಲೈ ಭಕ್ತವತ್ಸಲನೇ! ಈ ಜಗತ್ತೆಂಬುದು ನಿನ್ನ ಶಕ್ತಿಗಿಂತ ಬೇರೆಯಲ್ಲವೆಂಬುದನ್ನೂ ಸದ್ರೂಪನಾದ ನೀನೇ ಉಪಾದಾನಕಾರಣನಾದುದರಿಂದ ಸತ್ಯವೆಂಬುದನ್ನೂ ಪರಮದಯಾಳುವಾದ ನೀನು ಈ ಅವತಾರದಲ್ಲಿಯೇ ಪ್ರಕಟಗೊಳಿಸಿದೆ. (ಸಿದ್ಧಾಂತದೀಪಿಕಾ)

1 ನಮ್ಮಿಂದ (ಬ್ರಹ್ಮ-ಕೃಷ್ಣರಿಂದ) ಒಡಗೂಡಿರುವ ಈ ದೃಶ್ಯಪ್ರಪಂಚವು ಹೊರಗೆಂತು ತೋರುವುದೋ ಅಂತೆಯೇ ನಿನ್ನ ಉದರದಲ್ಲಿಯೂ ತೋರಿದುದಕ್ಕೆ ನಿನ್ನ ಅದ್ಭುತಶಕ್ತಿಯೇ ಕಾರಣವಲ್ಲದೆ ಬೇರೆಯಲ್ಲ. (ವೀರರಾಘವೀಯ)

ಆವರಣಗಳಿಂದ ಕೂಡಿದ ಯಾವ ಈ ಬ್ರಹ್ಮಾಂಡದಲ್ಲಿ ನೀನೂ ಈ ಜಗತ್ತೂ ಸಹ

**ಅದ್ಯೈವ ತ್ವದೃತೇऽಸ್ಯ ಕಿಂ ಮಮ ನ ತೇ**
**ಮಾಯಾತ್ವಮಾದರ್ಶಿತ-**
**ಮೇಕೋऽಸಿ ಪ್ರಥಮಂ ತತೋ ವ್ರಜಸುಹೃ-**
**ದ್ವತ್ಸಾಃ ಸಮಸ್ತಾ ಅಪಿ ।**
**ತಾವನ್ತೋऽಸಿ ಚತುರ್ಭುಜಾಸ್ತದಖಿಲೈಃ**
**ಸಾಕಂ ಮಯೋಪಾಸಿತಾ-**
**ಸ್ತಾವನ್ತ್ಯೇವ ಜಗನ್ತ್ಯಭೂಸ್ತದಮಿತಂ**
**ಬ್ರಹ್ಮಾದ್ವಯಂ ಶಿಷ್ಯತೇ ॥೧೮॥**

ಅಂದು ನಿನ್ನ ತಾಯಿಗೆ ಹೊಟ್ಟೆಯಲ್ಲಿ ಬ್ರಹ್ಮಾಂಡವನ್ನು ತೋರಿಸಿದ್ದ ಮಾತಿರಲಿ. ಇಂದು ನೀನು ತೋರಿಸಿದ ವಿಶ್ವರೂಪವಾದರೂ ಸಾಮಾನ್ಯವಾದ ಲೀಲೆಯೇ? ಮೊದಲು ನೀನು ಒಬ್ಬನೇ ಇದ್ದೆ. ಅನಂತರ ಸಮಸ್ತ ಗೋಪಬಾಲಕರೂ, ಕರುಗಳೂ ನೀನೇ ಆಗಿಬಿಟ್ಟೆ. ಕೊಳಲು, ಕೊಂಬು, ಬೆತ್ತಗಳೂ ನಿನ್ನ ರೂಪಗಳೇ ಆದುವು. ಅನಂತರ ಗೋಪಬಾಲಕರಾದಿಯಾಗಿ ಸಮಸ್ತ ವಸ್ತುಗಳೂ ಚತುರ್ಭುಜರಾಗಿ, ಪೀತಾಂಬರಗಳನ್ನು ಧರಿಸಿಕೊಂಡು ಸರ್ವಾಲಂಕಾರಭೂಷಿತರಾಗಿ, ನನ್ನಿಂದಲೂ ಇಪ್ಪತ್ತು ನಾಲ್ಕು ತತ್ತ್ವಗಳಿಂದಲೂ ಸೇವಿಸಲ್ಪಡುತ್ತಿರುವಂತೆ ಕಾಣಿಸಿಕೊಂಡೆ. ಅನಂತರ ನೀನೇ

---

ನೆಲೆಸಿರುವಿರೋ ಅಂತಹ ಬ್ರಹ್ಮಾಂಡವೇ ನಿನ್ನ ಉದರದಲ್ಲಿ ಕಾಣಬೇಕಾದರೆ ಅದಕ್ಕೆ ಮಾಯೆಗಿಂತ ಬೇರೆ ಉಂಟೇ? ಆದುದರಿಂದ ಈ ಜಗತ್ತೆಂಬುದು ನಿನ್ನಂತೆ ಪಾರಮಾರ್ಥಿಕಸತ್ತಲ್ಲ. (ವೈಜಯಂತೀ)

ನಾರಾಯಣನಾದ ನಿನ್ನ ಉದರದಲ್ಲಿ ಬದ್ಧಜೀವರಿಂದ ಒಡಗೂಡಿದ ಜಗತ್ತೆಂತು ಹೊಳೆಯುವುದೋ ಅಂತೆಯೇ ಈ ನಿನ್ನ ಅವತಾರಮೂರ್ತಿಗಳಲ್ಲಿಯೂ, ಚಿದಚಿದಾತ್ಮಕವಾದ ಈ ಜಗತ್ತು ಹೊಳೆಯಬೇಕಾದರೆ ಅದಕ್ಕೆ ನಿನ್ನ ಮಾಯೆ ಹೊರತು ಬೇರೆ ಕಾರಣವುಂಟೇ? (ಶ್ರೀಶುಕವಾಕ್ಯ )

ಎಲೈ ಸ್ವಾಮಿಯೇ! ಈ ಜಗತ್ತು ಹೊಟ್ಟೆಯೊಳಗೆಂತು ತೋರುವುದೋ ಅಂತೆಯೇ ಹೊರಗೂ ನಿನ್ನ ಆಧಾರದಿಂದ ನಿನ್ನಲ್ಲಿಯೇ ತೋರುತ್ತಿರುವುದು. ಇದು ನಿನ್ನ ಮಾಯಾವಿಲಾಸವೇ ಹೊರತು ಬೇರೆಯಲ್ಲ. (ತತ್ತ್ವದೀಪಿಕಾ)

ಇಲ್ಲಿ ಮಾಯಾಶಬ್ದಾರ್ಥವು ಜಗತ್ತನ್ನು ಪ್ರಕಾಶಗೊಳಿಸಬಲ್ಲ ಭಗವದಿಚ್ಛಾರೂಪವಾದ ಶಕ್ತಿಯೇ ಹೊರತು ಮಿಥ್ಯೆಯಲ್ಲ. (ಬೃ. ಕ್ರಮಸಂದರ್ಭ)

ಸಕಲಬ್ರಹ್ಮಾಂಡಗಳಾಗಿಯೂ ತೋರಿಕೊಂಡೆ. ಆದರೆ ಈಗ ನೀನೇ ಅಪರಿಚ್ಛಿನ್ನವೂ ಅದ್ವಿತೀಯವೂ ಆದ ಬ್ರಹ್ಮವಾಗಿ ಉಳಿದಿರುವೆ.*

**ಅಜಾನತಾಂ ತ್ವತ್ಪದವೀಮನಾತ್ಮ-**
**ನ್ಯಾತ್ಮಾತ್ಮನಾ ಭಾಸಿ ವಿತತ್ಯ ಮಾಯಾಮ್ ।**
**ಸೃಷ್ಟಾವಿವಾಹಂ ಜಗತೋ ವಿಧಾನ**
**ಇವ ತ್ವಮೇಷೋಽನ್ತ ಇವ ತ್ರಿನೇತ್ರಃ ॥೧೯॥**

ಯಾರು ನಿನ್ನ ನಿಜಸ್ವರೂಪವನ್ನು ಅಜ್ಞಾನದ ಕಾರಣದಿಂದ ತಿಳಿದಿರುವುದಿಲ್ಲವೋ ಅಂತಹವರಿಗೆ ನೀನು ಪೃಥ್ವಿಯಲ್ಲೇ ಇದ್ದುಕೊಂಡು ಜೀವರೂಪವಾಗಿ ಕಾಣಿಸುವೆ. ಅವರ ಮೇಲೆ ನಿನ್ನ ಮಾಯೆಯ ಆವರಣವನ್ನು ಹಾಕಿ ಸೃಷ್ಟಿಯ ಕಾಲದಲ್ಲಿ ಬ್ರಹ್ಮನಾಗಿಯೂ, ಪಾಲನೆಯ ಕಾಲದಲ್ಲಿ ವಿಷ್ಣುವಾಗಿಯೂ, ಸಂಹಾರಕಾಲದಲ್ಲಿ ರುದ್ರನಾಗಿಯೂ ಅವರಿಗೆ ಕಾಣಿಸಿಕೊಳ್ಳುವೆ. (ನೀನು ಪರಬ್ರಹ್ಮಪರಮಾತ್ಮನೇ ಆದರೂ ನಿನ್ನ ಮಾಯಾಜಾಲಕ್ಕೆ ಒಳಗಾದ ಅಜ್ಞಾನಿಗಳು ನಿನ್ನನ್ನು ಪ್ರಕೃತಿಯಲ್ಲಿ ಜೀವನೆಂದು ಭಾವಿಸುತ್ತಾರೆ. ಅಂತೆಯೇ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣರಾಗಿ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮುಬ್ಬಗೆಯ ದೇವತೆಗಳಿರುವರೆಂದೂ ತಿಳಿಯುತ್ತಾರೆ.)[1]

---

* 'ಸತ್ಯಕ್ಕೆ ನಾನಾತ್ವವಿಲ್ಲ' ಎಂಬ ನ್ಯಾಯದಿಂದ ಹಲವು ಬಗೆಯಾಗಿ ತೋರುವ ಮಾಯೆಯು ಹೇಗೆ ಸತ್ಯವಾಗುತ್ತದೆ?–ಎಂದರೆ ಸಜಾತೀಯರಹಿತವಾದುದರಿಂದ ಮೊದಲು ಒಬ್ಬನಾದೆ. ಸರ್ವಾತ್ಮಕನಾದುದರಿಂದ ಗೊಲ್ಲರೂ, ಕರುಗಳೂ ಆದೆ. ಸರ್ವಸ್ವಾಮಿಯಾದುದರಿಂದ ಜಗತ್ತುಗಳಾದೆ. ಪರಬ್ರಹ್ಮಸ್ವರೂಪನಾದುದರಿಂದ ಕಡೆಗೆ ಅದ್ವಿತೀಯನಾಗಿ ನಿಂತೆ. ಇದೆಲ್ಲವೂ ನಿನ್ನ ಶಕ್ತಿಸ್ವರೂಪವೇ ಆದುದರಿಂದ ಅದು ಸತ್ಯವೇ ಸರಿ. (ಬೃ. ಕ್ರಮಸಂದರ್ಭ)

ನಿನ್ನ ಹೊಟ್ಟೆಯೊಳಗೆ ತೋರುವ ಜಗತ್ತು, ಹೊರಗೆ ನಿನ್ನ ರೋಮಕೂಪಗಳಲ್ಲಿ ಕಾಣುವ ಜಗತ್ತುಗಳು ಸಹ ಮಾಯಿಕಗಳೆಂದೇ ನಾನು ಇಂದಿನವರೆಗೂ ತಿಳಿದಿದ್ದೆನು. ಅಚಿಂತ್ಯಮಹಿಮನಾದ ನಿನ್ನಲ್ಲಿ ಚಿನ್ಮಯಗಳಾದ ಸಾವಿರಾರು ಜಗತ್ತುಗಳೂ ಉಂಟೆಂಬುದನ್ನು ಈಗ ತಿಳಿದೆನು. (ಸಾರಾರ್ಥದರ್ಶಿನೀ)

1 ದೇಹಾತ್ಮಾಭಿಮಾನ ಸ್ವತಂತ್ರಾಭಿಮಾನಗಳಿಗೊಳಗಾಗಿ ನಿನ್ನ ಯಾಥಾತ್ಮವನ್ನರಿಯದವರಿಗೆ ನೀನು ಪ್ರಕೃತಿಗುಣಗಳಾದ ರಜಸ್ತಮಸ್ಸುಗಳನ್ನುಂಟುಮಾಡಿ ಸೃಷ್ಟಿಗಾಗಿ ನನ್ನಂತೆಯೂ, ಪಾಲನೆಗಾಗಿ ನಿನ್ನಂತೆಯೂ, ಸಂಹಾರಕ್ಕಾಗಿ ರುದ್ರನಂತೆಯೂ

**ಸುರೇಷ್ವೃಷಿಷ್ವೀಶ ತಥೈವ ನೃಷ್ವಪಿ**
**ತಿರ್ಯಕ್ಷು ಯಾದಸ್ಸ್ವಪಿ ತೇಽಜನಸ್ಯ ।**
**ಜನ್ಮಾಸತಾಂ ದುರ್ಮದನಿಗ್ರಹಾಯ**
**ಪ್ರಭೋ ವಿಧಾತಃ ಸದನುಗ್ರಹಾಯ ಚ ॥೨೦॥**

ಪ್ರಭುವೇ! ನೀನು ಸಮಸ್ತಪ್ರಪಂಚಕ್ಕೂ ಒಡೆಯನೂ ವಿಧಾತೃವೂ ಆಗಿರುವೆ. ನೀನು ಜನ್ಮರಹಿತನೇ ಆದರೂ ದೇವರ್ಷಿ-ಮನುಷ್ಯಾದಿಯೋನಿಗಳಲ್ಲಿಯೂ ಪಶು-ಪಕ್ಷಿ-ಜಲಚರಾದಿಯೋನಿಗಳಲ್ಲಿಯೂ ಅವತರಿಸಿರುವೆ. ಈ ನಿನ್ನ ಅವತಾರಗಳು ದುಷ್ಟರ ನಿಗ್ರಹಕ್ಕಾಗಿ ಮತ್ತು ಸತ್ಪುರುಷರ ಅನುಗ್ರಹಕ್ಕಾಗಿ.*

---

ಕಾಣುವೆ. ನಿನ್ನ ತತ್ತ್ವವನ್ನು ಬಲ್ಲವರಿಗಾದರೋ ಸೃಷ್ಟಿ-ಸಂಹಾರಗಳಲ್ಲಿ ಬ್ರಹ್ಮ-ರುದ್ರಶರೀರಕನಾಗಿಯೂ, ಪಾಲನದಲ್ಲಿ ನಿಜಾವತಾರರೂಪನಾಗಿಯೂ ಕಾಣುವೆ.
(ವೀರರಾಘವೀಯ)

ನಿನ್ನ ಮಹಿಮೆಯನ್ನರಿಯದ ಪಾಮರರಿಗೆ ಮಾಯೆಯನ್ನು ಹರಡಿ ಬೇರೆ ರೂಪಗಳಿಂದ ಕಾಣುವೆ. **ಯಸ್ಯ ಪ್ರಕೃತಿಃ ಶರೀರಂ । ಯಃ ಪ್ರಕೃತೌ ತಿಷ್ಠನ್ ॥ ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ**–ಇತ್ಯಾದಿ ಪ್ರಮಾಣಗಳಿಂದ ಪ್ರಕೃತಿಶರೀರಕನಾಗಿ ಪ್ರಕೃತಿಯಲ್ಲಿ ನೆಲೆಸಿ ಮರೆಯಾಗಿ ಮರುಳುಗೊಳಿಸುವೆ. (ತತ್ತ್ವಬೋಧಿನೀ)

ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳದ ಜ್ಞಾನಮಾನಿಗಳ ತಾತ್ಪರ್ಯವೇನೆಂದರೆ ನೀನು ಪ್ರಕೃತಿಯಲ್ಲಿ ನೆಲೆಸಿ ಮಾಯೆಯನ್ನು ಹರಡುವುದರಿಂದ ನಿರಾಕಾರನಾದರೂ ಸಾಕಾರನಂತೆ ಕಾಣುವೆ. ಆಕಾರಶೂನ್ಯನಾದ ನಿನಗೆ ಬ್ರಹ್ಮ-ವಿಷ್ಣು-ರುದ್ರರೆಂಬ ರೂಪಗಳು ಎಂತು ಮಾಯಿಕಗಳೋ ಅಂತೆಯೇ ಜಲಸ್ಥವಾದ ನಾರಾಯಣರೂಪವೂ ಅವತಾರಗಳೂ ಸಹ ಮಾಯಿಕಗಳೇ ಸರಿ–ಎಂಬ ಭಾವವು. (ವಿಜಯಧ್ವಜೀಯ)

ನಾನು ಅದ್ವಿತೀಯಬ್ರಹ್ಮವಾದಲ್ಲಿ ಇತರರೊಡನೆ ಸಮನೆಂಬ ಭ್ರಾಂತಿಯೇಕೆ? ಎಂದರೆ : ನಿನ್ನ ತತ್ತ್ವವನ್ನರಿಯದವರಿಗೆ ಸೃಷ್ಟಿಯಲ್ಲಿ ನಾನು, ಸಂಹಾರದಲ್ಲಿ ರುದ್ರನೂ ನಿನ್ನಂತೆಯೇ ಇರುವೆವು. ನೀನು ನಿಸ್ಸಮಾನಾತಿಶಯನಾದರೂ ಮಾಯೆಯನ್ನು ಪ್ರಪಂಚರೂಪನಾಗಿ ಹರಡಿ ಜಗತ್ತಿನಲ್ಲಿ ಆತ್ಮನಾಗಿದ್ದರೂ ಪಾಲನೆಗಾಗಿ ಅವತರಿಸಿ ನನ್ನಂತೆಯೂ ರುದ್ರನಂತೆಯೂ ತೋರುವೆ. ನಿನ್ನಲ್ಲಿರುವ ಸಾದೃಶ್ಯಕ್ಕೆ ಇದೇ ಕಾರಣವು.
(ಸಿದ್ಧಾಂತದೀಪಿಕಾ)

* ನಿನ್ನ ಅವತಾರಗಳೆಲ್ಲವೂ ಸಾಧುಸಂರಕ್ಷಣೆಗಾಗಿಯೇ ಹೊರತು ಬೇರೆಯಲ್ಲ.

ಕೋ ವೇತ್ತಿ ಭೂಮನ್ಭಗವನ್ಪರಾತ್ಮ-
ನ್ಯೋಗೇಶ್ವರೋತೀರ್ಭವತಸ್ತ್ರಿಲೋಕ್ಯಾಮ್ ।
ಕ್ವ ವಾ ಕಥಂ ವಾ ಕತಿ ವಾ ಕದೇತಿ
ವಿಸ್ತಾರಯನ್ ಕ್ರೀಡಸಿ ಯೋಗಮಾಯಾಮ್ ॥೨೧॥

ಭಗವಂತನೇ! ನೀನು ಅನಂತನೂ, ಪರಮಾತ್ಮನೂ, ಯೋಗೇಶ್ವರನೂ ಆಗಿರುವೆ. ನೀನು ನಿನ್ನ ಯೋಗಮಾಯೆಯನ್ನು ವಿಸ್ತರಿಸಿಕೊಂಡು ಯಾವಾಗ? ಎಲ್ಲಿ? ಹೇಗೆ? ಎಷ್ಟು ಕಾಲದವರೆಗೆ ಕ್ರೀಡೆಯಾಡುವೆಯೆಂಬ ವಿಷಯವು ಈ ಮೂರು ಲೋಕಗಳಲ್ಲಿ ಯಾವನಿಗೆ ತಾನೇ ತಿಳಿದಿರುತ್ತದೆ? ನಿನ್ನಂತೆಯೇ ನಿನ್ನ ಯೋಗಮಾಯೆಯೂ ಅಚಿಂತ್ಯವೂ ಅಪ್ರಮೇಯವೂ ಆಗಿದೆ.

ತಸ್ಮಾದಿದಂ ಜಗದಶೇಷಮಸತ್ಸ್ವರೂಪಂ
ಸ್ವಪ್ನಾಭಮಸ್ತಧಿಷಣಂ ಪುರುದುಃಖದುಃಖಮ್ ।
ತ್ವಯ್ಯೇವ ನಿತ್ಯಸುಖಬೋಧತನಾವನನ್ತೇ
ಮಾಯಾತ ಉದ್ಯದಪಿ ಯತ್ಸದಿವಾವಭಾತಿ ॥೨೨॥

ಆದುದರಿಂದ ಈ ಸಮಸ್ತಜಗತ್ತೂ ಅಸತ್ಸ್ವರೂಪವಾದುದು. ಇದು ಸ್ವಪ್ನಸದೃಶವಾಗಿಯೂ, ಚೈತನ್ಯರಹಿತವಾಗಿಯೂ ಮತ್ತು ದುಃಖದ ಮೇಲೆ ದುಃಖ ಒದಗಿಬರುವ ಸ್ಥಾನವಾಗಿಯೂ ಇದೆ. ಸಚ್ಚಿದಾನಂದಸ್ವರೂಪನಾದ ನಿನ್ನಲ್ಲಿ ಜಗತ್ತೆಂಬುದು ಮಾಯೆಯಿಂದ ಜನಿಸಿ ಸಚ್ಚಿದಾನಂದಾತ್ಮಕನಾದ ನಿನ್ನ ಅಧಿಷ್ಠಾನಬಲದಿಂದ ಸತ್ಯವಾಗಿರುವಂತೆಯೂ, ಸುಖಸ್ವರೂಪವಾಗಿರುವಂತೆಯೂ, ಚೇತನಸ್ವರೂಪವಾಗಿರುವಂತೆಯೂ ಭಾಸವಾಗುತ್ತಿದೆ.

ಏಕಸ್ತ್ವಮಾತ್ಮಾ ಪುರುಷಃ ಪುರಾಣಃ
ಸತ್ಯಃ ಸ್ವಯಂಜ್ಯೋತಿರನನ್ತ ಆದ್ಯಃ ।
ನಿತ್ಯೋಽಕ್ಷರೋಽಜಸ್ರಸುಖೋ ನಿರಞ್ಜನಃ
ಪೂರ್ಣೋಽದ್ವಯೋ ಮುಕ್ತ ಉಪಾಧಿತೋಽಮೃತಃ ॥

---

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ (ಭ. ಗೀ. ೪-೮)

ಪ್ರಭುವೇ! ನೀನು ಏಕಮಾತ್ರಸತ್ಯನು. ಹೇಗೆಂದರೆ ನೀನು ಸಮಸ್ತರಲ್ಲಿಯೂ ಆತ್ಮಸ್ವರೂಪನಾಗಿರುವೆ. ನೀನು ಪುರಾಣಪುರುಷನಾದುದ ರಿಂದ ಜನ್ಮಾದಿವಿಕಾರಗಳಿಂದ ರಹಿತನಾಗಿರುವೆ. ಸ್ವಯಂಜ್ಯೋತಿಯೂ, ಅನಂತನೂ, ಆದಿಪುರುಷನೂ ನೀನೇ ಆಗಿರುವೆ. ನಿತ್ಯನೂ, ಕ್ಷಯ ರಹಿತನೂ, ಅಖಂಡಾನಂದಸ್ವರೂಪನೂ ನೀನೇ ಆಗಿರುವೆ. ನಿರಂಜನನೂ, ಪೂರ್ಣನೂ, ಅದ್ವಿತೀಯನೂ ನೀನೇ ಆಗಿರುವೆ. ಸಮಸ್ತವಾದ ಉಪಾಧಿಗಳಿಂದಲೂ ಮುಕ್ತನಾಗಿರುವುದರಿಂದ ಅಮೃತಸ್ವರೂಪನೂ ನೀನೇ ಆಗಿರುವೆ.*

**ಏವಂವಿಧಂ ತ್ವಾಂ ಸಕಲಾತ್ಮನಾಮಪಿ**
**ಸ್ವಾತ್ಮಾನಮಾತ್ಮಾತ್ಮತಯಾ ವಿಚಕ್ಷತೇ ।**
**ಗುರ್ವರ್ಕಲಬ್ಧೋಪನಿಷತ್ಸುಚಕ್ಷುಷಾ**
**ಯೇ ತೇ ತರನ್ತೀವ ಭವಾನೃತಾಮ್ಬುಧಿಮ್ ॥೨೪॥**

---

* ನನ್ನಲ್ಲಿಯೇ ಹುಟ್ಟಿ ಲೀನವಾಗುತ್ತಾ ನನಗೆ ಶರೀರವೆನಿಸಿರುವ ಈ ಜಗತ್ತೆಂಬುದು ಅಸತ್ಯವಾದಲ್ಲಿ ನಾನೂ ಅಸತ್ಯವೇ ಅಲ್ಲವೇ?–ಎಂದರೆ ನೀನು ಅಸತ್ಯನಲ್ಲ. ಏಕೆಂದರೆ : ನೀನು ಪ್ರಕೃತಿ-ಪುರುಷರಿಂದ ವಿಲಕ್ಷಣನಾದವನು. ಆದುದರಿಂದ ನೀನು ಸತ್ಯನೇ ಸರಿ. (ವೀರರಾಘವೀಯ)

ನಿನ್ನ ಅವತಾರಗಳೆಲ್ಲವೂ ನಿತ್ಯಗಳೇ. ಆದುದರಿಂದ ವತ್ಸಗೋಪಾಲಕಾದಿ ರೂಪಗಳಿಂದಲೂ ಸತ್ಯ-ಜ್ಞಾನಾನಂದಶರೀರಗಳಿಂದಲೂ ಈಗ ತಾನೇ ನಾನಾವಿಧವಾಗಿ ನನಗೆ ದರ್ಶನವಿತ್ತುದೂ ಸುಳ್ಳಲ್ಲ ಮತ್ತು ಅವೆಲ್ಲವನ್ನೂ ಮರೆಗೊಳಿಸಿ ಈಗ ಒಬ್ಬನಾಗಿ ಕಾಣುವುದೂ ಸತ್ಯವೇ. (ಬೃ. ಕ್ರಮಸಂದರ್ಭ)

ಅನಂತಶರೀರವುಳ್ಳವನಾದರೂ ಅಚಿಂತ್ಯಮಹಿಮನಾದುದರಿಂದ ನೀನೊಬ್ಬನೆಂಬುದೇ ಸತ್ಯ. (ಸಾರಾರ್ಥದರ್ಶಿನಿ)

ಪರಮಾತ್ಮನು ಮೊದಲು ಭೇದರಹಿತನೂ, ಬಳಿಕ ಜೀವ-ಅಂತರ್ಯಾಮಿ-ವಿಭೂತಿ ಎಂದು ತ್ರಿವಿಧನೂ, ಅನಂತರ ಪುರಾಣಪುರುಷ ಇತ್ಯಾದಿ ಹೆಸರುಗಳನ್ನು ಪಡೆದವನೂ ಆದನು. ಪರಮಾತ್ಮನನ್ನು ವೇದಾಂತಿಗಳು ಬ್ರಹ್ಮನೆಂದೂ, ಯೋಗಿಗಳು ಆತ್ಮನೆಂದೂ, ಸಾಂಖ್ಯರು ಪುರುಷನೆಂದೂ, ವೈಷ್ಣವರು ಪುರಾಣನೆಂದೂ, ಪಾಶುಪತರು ಸತ್ಯನೆಂದೂ ಕರೆದರು. ಈ ಶ್ಲೋಕದಲ್ಲಿರುವ ಹದಿನಾರು ವಿಶೇಷಣಗಳಿಂದ ಪರಮಾತ್ಮನು ಪ್ರಕೃತಿ-ಪುರುಷ ವಿಲಕ್ಷಣನೆಂದೂ ಏಕಾದಶೇಂದ್ರಿಯ ಪಂಚಮಹಾಭೂತಗಳಿಗಿಂತ ಭಿನ್ನನೆಂದೂ ಅಥವಾ ಷೋಡಶ ಕಲೆಗಳುಳ್ಳ ನಾರಾಯಣನೆಂದೂ ಹೇಳಿದಂತಾಗುವುದು. (ಸುಬೋಧಿನೀ)

ನಿನ್ನ ಈ ದಿವ್ಯಸ್ವರೂಪವು ಸಮಸ್ತಜೀವಿಗಳಿಗೂ ಅವರವರ ಸ್ವರೂಪವೇ ಆಗಿದೆ. ನೀನು ಎಲ್ಲ ಜೀವಿಗಳಲ್ಲಿಯೂ ಆತ್ಮಸ್ವರೂಪನಾಗಿ ಬೆಳಗುವೆ. ಯಾವನು ಗುರುರೂಪನಾದ ಸೂರ್ಯನಿಂದ ತತ್ತ್ವಜ್ಞಾನರೂಪವಾದ ದಿವ್ಯದೃಷ್ಟಿಯನ್ನು ಹೊಂದಿ ನಿನ್ನನ್ನು ತನ್ನಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳುವನೋ ಅಂತಹವನು ಈ ಮಿಥ್ಯಾಸಂಸಾರಸಾಗರವನ್ನು ದಾಟುತ್ತಾನೆ.*

**ಆತ್ಮಾನಮೇವಾತ್ಮತಯಾವಿಜಾನತಾಂ**
**ತೇನೈವ ಜಾತಂ ನಿಖಿಲಂ ಪ್ರಪಞ್ಚಿತಮ್ ।**
**ಜ್ಞಾನೇನ ಭೂಯೋಽಪಿ ಚ ತತ್ಪ್ರಲೀಯತೇ**
**ರಜ್ಜ್ವಾಮಹೇರ್ಭೋಗಭವಾಭವೌ ಯಥಾ ॥೨೫॥**

ಯಾವ ಮನುಷ್ಯನು ಪರಮಾತ್ಮನನ್ನು ತನ್ನ ಆತ್ಮಸ್ವರೂಪನೆಂದು

---

* ಯಾವ ಪುರುಷರು ಗುರುಮುಖದಿಂದ ವೇದಾಂತವಾಕ್ಯಾರ್ಥವನ್ನು ನಿಶ್ಚಯಿಸಿ ಕೊಂಡು ಮನಃಪೂರ್ವಕವಾಗಿ ಉಪಾಸನೆಯನ್ನು ಮಾಡುತ್ತಾ ಸಕಲಜೀವರಿಗೂ ಸಕಲೋಪಾಸಕರಿಗೂ ಅಂತರ್ಯಾಮಿಯಾದುದರಿಂದ ತಮಗೂ ಅಂತರ್ಯಾಮಿಯೆಂದು ನಿನ್ನನ್ನು ಕರೆಯುವರೋ ಅವರು ಸಂಸಾರದಲ್ಲಿ ಅನೃತರೂಪಗಳಾದ ಪಾಪಗಳೆಂಬ ಸಮುದ್ರವನ್ನು ದಾಟುವರು. (ವೀರರಾಘವೀಯ)

ಯಾರು ಗುರೂಪದಿಷ್ಟವಾದ ರಹಸ್ಯಜ್ಞಾನದಿಂದ ನಿನ್ನನ್ನು ನಿತ್ಯ-ಬುದ್ಧ-ಮುಕ್ತರೆಂಬ ತ್ರಿವಿಧಜೀವರಿಗೂ ಧಾರಕನನ್ನಾಗಿ ತಿಳಿಯುವರೋ ಅವರು ಅವಿದ್ಯಾಕಾರ್ಯವಾದ ಸಂಸಾರವನ್ನು ಉತ್ತರಿಸುವರು.

**ಗುಕಾರಸ್ತ್ವನ್ಧಕಾರಸ್ಯಾದುಕಾರಸ್ತನ್ನಿರೋಧಕಃ ।**
**ಅನ್ಧಕಾರನಿರೋಧಿತ್ವಾದ್ಗುರುರಿತ್ಯಭಿಧೀಯತೇ ॥**

ಜ್ಞಾನವೆಂಬ ದೀಪದಿಂದ ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವವನಿಗೆ ಗುರುವೆಂದು ಹೆಸರು. (ತತ್ತ್ವಬೋಧಿನೀ)

ಯಾರು ನಿನ್ನನ್ನು ಚಿದ್ರೂಪವಾದ ದಿವ್ಯಶರೀರವುಳ್ಳವನನ್ನಾಗಿ ತಿಳಿಯುವರೋ ಅವರು ಈ ಸಂಸಾರಸಾಗರವನ್ನು ಕಡೆಹಾಯುವರು. ನಿನ್ನನ್ನು ನಂದಪುತ್ರನನ್ನಾಗಿಯೂ ಗೋಪೀನಾಥನನ್ನಾಗಿಯೂ ತಿಳಿಯುವವರು ಸಂಸಾರಸಾಗರವನ್ನು ದಾಟಿದಂತೆ ತೋರುವರೇ ಹೊರತು ದಾಟುವುದಿಲ್ಲ. (ಬೃ. ಕ್ರಮಸಂದರ್ಭ)

ಸಕಲಜೀವರಿಗೂ ಶರೀರರೂಪನೂ ಆತ್ಮರೂಪನೂ ಆದ ಷೋಡಶಕಲನಾದ ನಿನ್ನನ್ನು

ತಿಳಿದಿಲ್ಲವೋ ಅವನಿಗೆ ಆ ಅಜ್ಞಾನದಿಂದಲೇ ದೇಹಾದ್ಯಭಿಮಾನದಿಂದ ಶರೀರಾದಿಗಳೇ ಆತ್ಮನೆಂದು ತಿಳಿದುಬರುತ್ತವೆ. ಆದುದರಿಂದ ಅವರಿಗೆ ಈ ದೇಹೇಂದ್ರಿಯಾದಿ ಸಕಲಪ್ರಪಂಚವೂ ಸತ್ಯವಾಗಿ ಕಾಣುವುದು. ಆದರೆ ಸದ್ಗುರುವಿನ ಅನುಗ್ರಹದಿಂದ ಪರಮಾತ್ಮನೇ ಆತ್ಮನೆಂಬ ಆತ್ಮಸಾಕ್ಷಾತ್ಕಾರ ವಾಗುತ್ತಲೇ–ಹೇಗೆ ಹಗ್ಗದಲ್ಲಿ ಸರ್ಪವೆಂಬುದು ಅಜ್ಞಾನದಿಂದ ತೋರಿ ಬಂದು ಅಂತಹ ಅಜ್ಞಾನವು ತೊಲಗಿಹೋದೊಡನೆಯೇ ಸರ್ಪವೆಂಬುದು ಹಗ್ಗದಲ್ಲಿಯೇ ಅಡಗಿಹೋಗುವುದೋ–ಹಾಗೆಯೇ ಪ್ರಪಂಚವೆಲ್ಲವೂ ಇಲ್ಲವಾಗುತ್ತದೆ.*

---

ನಿನ್ನನ್ನು ಯಾರು 'ಬ್ರಹ್ಮವೇ ನಾನು' ಎಂದು ತಿಳಿಯುವರೋ ಅವರು ಭ್ರಾಂತರೇ ಸರಿ. ಅವರು ಅಹಂಕಾರ-ಮಮಕಾರರೂಪವಾದ ಸಂಸಾರವೆಂಬ ಮಿಥ್ಯಾಸಮುದ್ರವನ್ನು ದಾಟಿದರೂ ದಾಟಿದಂತಲ್ಲ. (ಸುಬೋಧಿನೀ)

ಸಕಲಜೀವರ ಕಣ್ಮನಗಳಿಗೂ ಆನಂದವನ್ನುಂಟುಮಾಡುವ ಈ ನಿನ್ನ ದಿವ್ಯರೂಪವನ್ನೇ ಪರಮಾತ್ಮನನ್ನಾಗಿ ತಿಳಿಯುವರೋ ಅವರು ಭವಸಾಗರವನ್ನು ಅತಿಕ್ರಮಿಸುವರು. (ಸಾರಾರ್ಥದರ್ಶಿನೀ)

ಯಾರು ನಿನ್ನನ್ನು ಭೇದಾಭೇದದಿಂದ ಧ್ಯಾನಿಸುವರೋ ಅವರು ಅನೃತಗಳೆಂಬ ಮೊಸಳೆಗಳಿಂದ ತುಂಬಿದ ಸಂಸಾರಸಮುದ್ರವನ್ನು ಕೊನೆಗಾಣಿಸುವರು. (ಸಿದ್ಧಾಂತದೀಪಿಕಾ)

"ಹಿಂದಿನ ಶ್ಲೋಕದಲ್ಲಿ ಜ್ಞಾನದಿಂದ ಸಂಸಾರವನ್ನು ದಾಟುವರೆಂದೂ, ದಾಟುವಂತೆ ತೋರುವರೆಂದೂ, ಆ ತೋರಿಕೆಯು ಜೀವೇಶ್ವರಾಭೇದಜ್ಞಾನದಿಂದ ಉಂಟಾಗುವುದೆಂದೂ ಮೂರು ವಿಷಯಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ 'ಆತ್ಮಾನಮೇವಾತ್ಮತಯಾ' ಎಂಬ ಶ್ಲೋಕದಲ್ಲಿ ಜ್ಞಾನದಿಂದ ಕಡೆಹಾಯುವರೆಂದೂ 'ಅಜ್ಞಾನಸಂಜ್ಞಾ' ಎಂಬುದರಿಂದ ಕಡೆಹಾಯುವಂತೆ ತೋರುವರೆಂದೂ 'ತ್ವಮಾತ್ಮಾನಂ' ಎಂಬ ಎರಡು ಶ್ಲೋಕಗಳಲ್ಲಿ ಜೀವೇಶ್ವರಾಭೇದಜ್ಞಾನದಿಂದ ಸಂಸಾರಸಾಗರದಿಂದ ಪಾರಾಗುವರೆಂದೂ ನಿರೂಪಿಸಲ್ಪಡು ವುದು. (ಭಾವಾರ್ಥದೀಪಿಕಾ)

ತತ್ತ್ವವನ್ನು ತಿಳಿದವರು ದಾಟುವರು. ತಿಳಿಯದವರ ಗತಿಯೇನು? ಸಂಸಾರವೇ ಗತಿ. ಅದನ್ನು ತಪ್ಪಿಸಿಕೊಳ್ಳಲು ಉಪಾಯ : ಪರಮಾತ್ಮನಾದ ನಿನ್ನನ್ನು ಸರ್ವಾಂತ ರ್ಯಾಮಿಯೆಂದು ತಿಳಿಯದೇ ಇರುವುದರಿಂದ ಅವರಿಗೆ ದೇಹಾತ್ಮಭ್ರಮ, ಸ್ವತಂತ್ರಾತ್ಮಭ್ರಮಮೂಲಕವಾದ ಅಜ್ಞಾನದಿಂದ ಸಂಸಾರವು ಪ್ರಾಪ್ತವಾಗುವುದು. ದೇಹಾತ್ಮಾಭಿಮಾನವನ್ನುಳಿದು ಪರಮಾತ್ಮೋಪಾಸನಾರೂಪವಾದ ಜ್ಞಾನದಿಂದ ಆ ಸಂಸಾರವನ್ನು ಕಳೆದುಕೊಳ್ಳಬೇಕು. ಇದಕ್ಕೆ ದೃಷ್ಟಾಂತವೇನೆಂದರೆ ಅಧಿಷ್ಠಾನಭೂತವಾದ

**ಅಜ್ಞಾನಸಂಜ್ಞೌ ಭವಬನ್ಧಮೋಕ್ಷೌ**
**ದ್ವೌ ನಾಮ ನಾನ್ಯೌ ಸ್ತ ಋತಜ್ಞಭಾವಾತ್ ।**
**ಅಜಸ್ರಚಿತ್ಯಾತ್ಮನಿ ಕೇವಲೇ ಪರೇ**
**ವಿಚಾರ್ಯಮಾಣೇ ತರಣಾವಿವಾಹನೀ ॥೨೬॥**

ದೇವದೇವ! ಸಂಸಾರಕ್ಕೆ ಸಂಬಂಧಿಸಿದಂತೆ ಬಂಧನ ಮತ್ತು ಅದರಿಂದ ಮೋಕ್ಷ ಎಂಬ ಈ ಎರಡೂ ಅಜ್ಞಾನಕಲ್ಪಿತವಾದುವುಗಳೇ ಆಗಿವೆ. ವಾಸ್ತವವಾಗಿ ಅಜ್ಞಾನಕ್ಕೆ ಬಂಧ ಮತ್ತು ಮೋಕ್ಷ–ಎಂಬ ಎರಡು ಹೆಸರುಗಳು. ಸತ್ಯ ಮತ್ತು ಜ್ಞಾನಸ್ವರೂಪನಾದ ಪರಮಾತ್ಮನಿಂದ ಇವುಗಳಿಗೆ ಭಿನ್ನವಾದ ಅಸ್ತಿತ್ವವೇನೂ ಇಲ್ಲ. ಸೂರ್ಯನಿಗೆ ಹಗಲು ಮತ್ತು ರಾತ್ರಿಯಲ್ಲಿ ಯಾವ ಭೇದವೂ ಇಲ್ಲದಂತೆ, ವಿಚಾರಮಾಡಿ ನೋಡಿದರೆ ಅಖಂಡ ಚಿತ್ಸ್ವರೂಪವಾದ ಕೇವಲ ಶುದ್ಧವಾದ ಆ ತ್ಮತತ್ತ್ವದಲ್ಲಿ ಬ ಂಧವೂ ಇಲ್ಲ,

---

ಹಗ್ಗದಲ್ಲಿ ಅಜ್ಞಾನದಿಂದ ಸರ್ಪಜ್ಞಾನವೂ ರಜ್ಜುವಿನ ಯಾಥಾತ್ಮ್ಯಜ್ಞಾನದಿಂದ ತನ್ನಿವೃತ್ತಿಯೂ ಉಂಟಾಗುವಂತೆ ದೇಹಾತ್ಮಾದ್ಯಭಿಮಾನದಿಂದ ಸಂಸಾರವೂ, ದೇಹಾತ್ಮಾದ್ಯಭಿಮಾನಪೂರ್ವಕವಾದ ಭಗವದುಪಾಸನೆಯಿಂದ ಮೋಕ್ಷವೂ ಸಿದ್ಧಿಸುವುದು. ಇಲ್ಲಿ ಮಿಥ್ಯಾವಾದಿಗಳು ( ಅದ್ವೈತಿಗಳು ) "ರಜ್ಜುವಿನ ಅಜ್ಞಾನದಿಂದುಂಟಾದ ಸರ್ಪ ಭ್ರಾಂತಿಯು ಆ ರಜ್ಜುಯಾಥಾತ್ಮ್ಯಜ್ಞಾನದಿಂದ ತೊಲಗುವಂತೆ ತತ್ತ್ವಮಸ್ಯಾದಿ ಮಹಾವಾಕ್ಯಗಳಿಂದುಂಟಾಗುವ ಯಾಥಾತ್ಮ್ಯಜ್ಞಾನವಿಲ್ಲದುದರಿಂದ ಬ್ರಹ್ಮಾಭಿನ್ನವಾದ ಜೀವನಿಗುಂಟಾಗಿರುವ ಮಿಥ್ಯಾಭೂತವಾದ ಬಂಧವು ಆ ಜೀವೇಶ್ವರಯಾಥಾತ್ಮ್ಯಜ್ಞಾನದಿಂದ ನಿವರ್ತಿಸುವುದು"–ಎಂದು ಹೇಳುವರು. "ವಾಕ್ಯಾರ್ಥಜ್ಞಾನದಿಂದ ಸತ್ಯವಾದ ಬಂಧವು ತೊಲಗುವುದಿಲ್ಲ"–ಎಂಬ ಈ ವಿಷಯದಲ್ಲಿ ಭಾಷ್ಯಾದಿಗಳಲ್ಲಿ ಏಳು ವಿಧವಾದ ಅನುಪಪತ್ತಿಗಳು ತೋರಿಸಲ್ಪಟ್ಟಿರುವುವು. (ವೀರರಾಘವೀಯ)

ಯಾರು ಶುದ್ಧಜೀವನನ್ನೇ ಆತ್ಮವನ್ನಾಗಿ ತಿಳಿದು ನಿನ್ನನ್ನು ತಿಳಿಯದಿರುವರೋ ಅವರಿಗೆ ಸಂಸಾರವೇ ಗತಿ. ಬಳಿಕ ನಿನ್ನ ಅನುಗ್ರಹದಿಂದ ಯಥಾರ್ಥಜ್ಞಾನವುಂಟಾದಲ್ಲಿ ಈ ಸಂಸಾರವು ತೊಲಗುವುದು. 'ಅವಿಜಾನತಾಂ'–ಎಂದು ಪದಚ್ಛೇದವು. (ಕ್ರಮಸಂದರ್ಭ)

ಎಲೈ ಭಗವಂತನೇ! ನಿನ್ನ ಈ ದಿವ್ಯಶರೀರವನ್ನು ಯಾರು ಚಿದ್ರೂಪವೆಂದು ತಿಳಿಯುವುದಿಲ್ಲವೋ ಅವರಿಗೆ ಸಂಸಾರವೇ ಸರಿ. ಈ ನಿನ್ನ ಶ್ರೀವಿಗ್ರಹವನ್ನು ಆತ್ಮವನ್ನಾಗಿ ತಿಳಿದಲ್ಲಿ ಆ ಸಂಸಾರವು ಲೀನವಾಗುವುದು. (ಬೃ. ಕ್ರಮಸಂದರ್ಭ)

ಜೀವನನ್ನೇ ಆತ್ಮನೆಂದು ತಿಳಿಯತಕ್ಕವರಿಗೆ ಆ ಭ್ರಾಂತಿಜ್ಞಾನದಿಂದ ಯಾವ

ಮೋಕ್ಷವು ಇಲ್ಲ. (ಆದುದರಿಂದ ಜ್ಞಾನಿಗಳು ಸಂಸಾರಸಮುದ್ರವನ್ನು ದಾಟಿದಂತೆ ತೋರುವವರೇ ಹೊರತು ನಿಶ್ಚಯವಾಗಿ ಅವರಿಗೆ ಬಂಧ-ಮೋಕ್ಷ ಗಳೆರಡೂ ಇಲ್ಲ.)*

**ತ್ವಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮೇವ ಚ ।**
**ಆತ್ಮಾ ಪುನರ್ಬಹಿರ್ಮೃಗ್ಯ ಅಹೋಽಜ್ಞಜನತಾಜ್ಞತಾ ॥೨೭॥**

---

ಅಹಂಕಾರ-ಮಮಕಾರರೂಪವಾದ ಪ್ರಪಂಚವು ಕಲ್ಪಿತವಾಗುವುದೋ ಮರಳಿ ಯಥಾರ್ಥಜ್ಞಾನದಿಂದ ಆ ಪ್ರಪಂಚಮಾತ್ರವೇ ಲಯವನ್ನು ಪಡೆಯುವುದು. ಎಂದರೆ : ರಜ್ಜುವಿನಲ್ಲಿ ಯಥಾರ್ಥಜ್ಞಾನವಿಲ್ಲದಾಗ ಭ್ರಾಂತಿಯಿಂದ ಯಾವ ಸರ್ಪವು ಕಲ್ಪಿತವಾಗುವುದೋ ಮರಳಿ ಸ್ವರೂಪಜ್ಞಾನದಿಂದ ಆ ಸರ್ಪಕ್ಕೆ ಲಯವೇ ಹೊರತು ಮತ್ತಾವುದಕ್ಕೂ ಇಲ್ಲ. ಆದುದರಿಂದ ಆತ್ಮಜ್ಞಾನದಿಂದ ಅಜ್ಞಾನಕೃತಗಳಾದ ಅಹಂಕಾರ-ಮಮಕಾರಗಳು ನಶಿಸುವುವೇ ಹೊರತು ಜಗತ್ತಿಗೆ ನಾಶವಿಲ್ಲ. (ಸುಬೋಧಿನೀ)

ನಿನ್ನನ್ನು ಪರಮಾತ್ಮನನ್ನಾಗಿ ತಿಳಿದವರಿಗೆ ಮುಕ್ತಿಯೂ ತಿಳಿಯದವರಿಗೆ ಸಂಸಾರವೂ ಘಟಿಸುವುದು.

**ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ ।**
**ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥**
**ಅಶ್ರದ್ಧಧಾನಾಃ ಪುರುಷಾಃ ಧರ್ಮಸ್ಯಾಸ್ಯ ಪರಂತಪ ।**
**ಅಪ್ರಾಪ್ಯ ಮಾಂ ನಿವರ್ತನ್ತೇ ಮೃತ್ಯುಸಾಂಸಾರವರ್ತ್ಮನಿ ॥**

ಯೋಗಮಾಯೆಯಿಂದ ಮರೆಯಾಗಿರುವ ನಾನು ಎಲ್ಲರಿಗೂ ಗೋಚರನಲ್ಲ. ಆದ್ಯಂತರಹಿತನಾದ ನನ್ನನ್ನು ಮೂಢರು ಅರಿಯಲಾರರು. ಶ್ರದ್ಧೆಯಿಲ್ಲದ ಜನರು ನನ್ನ ತತ್ತ್ವವನ್ನು ತಿಳಿಯದುದರಿಂದ ಸಂಸಾರದಲ್ಲಿ ನರಳುತ್ತಿರುವರು. (ತತ್ತ್ವಬೋಧಿನಿ)

ತಮ್ಮ ಜೀವನನ್ನು ನಾರಾಯಣಶರೀರವನ್ನಾಗಿಯೂ ಆ ನಾರಾಯಣನಿಂದಲೇ ಈ ಜಗತ್ತಿಗೆ ನಾಮ-ರೂಪಗಳುಂಟಾದುದನ್ನಾಗಿಯೂ ತಿಳಿಯುವವರಿಗೆ ಸ್ವಸ್ವರೂಪ ಜ್ಞಾನದಿಂದಲೂ ನಾರಾಯಣಜ್ಞಾನದಿಂದಲೂ ನಾಮರೂಪ-ಪರಿಷ್ವಂಗವೆಂಬ ಬಂಧವು ತೊಲಗಿ ಶುದ್ಧವಾದ ಸ್ವಸ್ವರೂಪವು ಹೊಳೆಯುವುದು. ಬನ್ಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ । ಕೈವಲ್ಯದಃ ಪರಂಬ್ರಹ್ಮ ವಿಷ್ಣುರೇವ ಸನಾತನಃ । ಬಂಧಕನೂ ಮೋಚಕನೂ ಸಹ ವಿಷ್ಣುವೇ–ಎಂಬ ಭಾವವು. ( ಶ್ರೀಶುಕವಾಕ್ಯ )

* ಸಂಸಾರರೂಪವಾದ ಬಂಧನಕ್ಕೆ ದೇಹಾತ್ಮಭ್ರಮವು–ಮೋಕ್ಷಕ್ಕೆ ಪರಮಾತ್ಮೋಪಾಸನಾತ್ಮಕಜ್ಞಾನವು–ಇವೆರಡೇ ಕಾರಣಗಳಲ್ಲದೆ ಬೇರೆಯಿಲ್ಲ. ಆದುದರಿಂದ ದೇಹಾತ್ಮಭ್ರಾಂತಿ - ಸ್ವತಂತ್ರಾತ್ಮಭ್ರಾಂತಿಗಳನ್ನುಳಿದು ಸಕಲ ಜೀವಾಂತರ್ಯಾಮಿಯೆಂದು

ಭಗವಂತ! ಇದೆಂತಹ ಅಚ್ಚರಿಯೆಂಬುದನ್ನು ನೋಡು. ನೀನು ಎಲ್ಲರಲ್ಲಿಯೂ ಆತ್ಮಸ್ವರೂಪನಾಗಿರುವೆ. ಆದರೆ ಮಾನವರು ನೀನಿಲ್ಲಿಯೇ ಇರುವವನೆಂದು ಭಾವಿಸುತ್ತಾರೆ. ದೇಹಾದಿಗಳು ಆತ್ಮಕ್ಕೆ ಸೇರಿದ್ದಲ್ಲ. ಆದರೆ ಮಾನವರು ದೇಹಾದಿಗಳನ್ನು ತಮ್ಮದೆಂದೇ ಭಾವಿಸುತ್ತಾರೆ. ದೇಹಾತ್ಮ ಬುದ್ಧಿಯುಳ್ಳವರಾಗಿರುತ್ತಾರೆ. ಸಮಸ್ತರ ಹೃದಯಕಮಲಗಳಲ್ಲಿಯೂ ವಿರಾಜಮಾನನಾಗಿರುವ ನಿನ್ನನ್ನು ಮತ್ತೆಲ್ಲೋ ಹುಡುಕಲು ಹೋಗುತ್ತಾರೆ. ಅಜ್ಞಾನಿಗಳಾದ ಜನರಿಗೆ ಇದೆಂತಹ ಅಜ್ಞಾನವು ಕವಿದುಬಿಟ್ಟಿದೆ?*

---

ಪರಮಾತ್ಮನನ್ನು ಉಪಾಸನೆಮಾಡಿದಲ್ಲಿ ಹಗಲು ಸೂರ್ಯನಿಗೆದುರಾಗಿರುವ ಕತ್ತಲೆಯಂತೆ ಪ್ರಪಂಚವೆಂಬುದು ಲೀನವಾಗುವುದು. (ವೀರರಾಘವೀಯ)

ಅಜ್ಞಾನಕಾರಣಗಳಿಂದ ಬಂಧ-ಮೋಕ್ಷಗಳೆರಡೂ ಸ್ವಸ್ವರೂಪ-ಪರಸ್ವರೂಪಗಳನ್ನರಿಯದ ಜೀವರಿಗೇ ಹೊರತು ಅವುಗಳ ಗಂಧವು ಕೂಡ ನಿನಗಿಲ್ಲ. **ಬದ್ಧೋ ಮುಕ್ತ ಇತಿ ವ್ಯಾಖ್ಯಾ ಗುಣತೋ ಮೇ ನ ವಸ್ತುತಃ । ಗುಣಸ್ಯ ಮಾಯಾ ಮೂಲತ್ವಾನ್ನಮೇ ಮೋಕ್ಷೋ ನ ಬನ್ಧನಮ್ ॥ ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ । ಬನ್ಧೋಽಸ್ಯಾವಿದ್ಯಯಾ ನಾದಿರ್ವಿದ್ಯಯಾ ಚ ತಥೇತರಃ ॥** ಬಂಧ-ಮೋಕ್ಷಗಳು ಗುಣದಿಂದಲೇ ಹೊರತು ಪರಮಾರ್ಥಗಳಲ್ಲ. ಆ ಗುಣವೂ ಮಾಯಾಮೂಲವಾದುದರಿಂದ ಪರಮಾತ್ಮನಿಗೆ ಬಂಧ-ಮೋಕ್ಷಗಳೆರಡೂ ಇಲ್ಲ. ಅಂಶಭೂತವಾದ ಜೀವನಿಗೆ ಅವಿದ್ಯೆಯಿಂದ ಅನಾದಿಯಾದ ಬಂಧವೂ ವಿದ್ಯೆಯಿಂದ ಮೋಕ್ಷವೂ ಉಂಟಾಗುವುದು. (ತತ್ತ್ವಬೋಧಿನೀ)

ನಿತ್ಯಜ್ಞಾನಾನಂದಗಳುಳ್ಳ ನಿನ್ನ ಶ್ರೀವಿಗ್ರಹಸ್ವರೂಪವನ್ನು ತಿಳಿದಲ್ಲಿ ಬಂಧ-ಮೋಕ್ಷಗಳೆರಡೂ ಅಜ್ಞಾನಮೂಲಗಳೇ–ಎಂಬುದು ವಿದಿತವಾಗುವುದು. ಸೂರ್ಯನಿದ್ದಲ್ಲಿಯೇ ಹಗಲಿರುಳೆಂಬ ವ್ಯವಹಾರವೇ ಹೊರತು ಸೂರ್ಯನಿಲ್ಲದ್ದಾಗ ಆ ವ್ಯವಹಾರವು ಎಂತಿಲ್ಲವೋ ಅಂತೆಯೇ ನಿನ್ನ ಯಥಾರ್ಥಜ್ಞಾನವಿಲ್ಲದಿದ್ದಾಗ ಬಂಧ-ಮೋಕ್ಷಗಳೇ ಹೊರತು ಯಥಾರ್ಥಜ್ಞಾನವುಂಟಾದಲ್ಲಿ ಅವೆರಡೂ ಇಲ್ಲ. (ಬೃ. ಕ್ರಮಸಂದರ್ಭ)

ಬಂಧ-ಮೋಕ್ಷಗಳು ಜೀವನಂತೆ ಪರಮಾತ್ಮನಿಗೆ ಏಕಿಲ್ಲ?–ಎಂದರೆ ಬಂಧ-ಮೋಕ್ಷಗಳು ಅಲ್ಪವಿಜ್ಞಾನವುಳ್ಳ ಬದ್ಧಜೀವರಿಗೇ ಹೊರತು ಪರಮಾತ್ಮನಿಗಿಲ್ಲ. ನಿತ್ಯಾನಂದ ಸ್ವರೂಪನಾದ ಪರಮೇಶ್ವರನನ್ನು ತನ್ನ ಹೃದಯಕಮಲದಲ್ಲಿ ಭಕ್ತಿಯಿಂದ ನೆಲೆಗೊಳಿಸಿಕೊಂಡಲ್ಲಿ ಮೋಕ್ಷವುಂಟು. ಇಲ್ಲಿ ಅಜ್ಞಾನವೆಂಬುದಕ್ಕೆ ಅಲ್ಪಜ್ಞಾನವುಳ್ಳ ಜೀವನೆಂದೂ ಋತಜ್ಞಭಾವಾತ್–ಎಂಬುದಕ್ಕೆ ಸತ್ಯಜ್ಞಾನಸ್ವರೂಪ ಪರಮಾತ್ಮನ ಭಕ್ತಿಯಿಂದ–ಎಂದೂ ಅರ್ಥವು. (ಸಿದ್ಧಾಂತದೀಪಿಕಾ)

* ಪ್ರಕೃತಿ-ಪುರುಷವಿಲಕ್ಷಣನಾದರೂ ತದಂತಃಪ್ರವೇಶದಿಂದ ಆ ದೋಷಗಳಿಗೊಳ

ಅನ್ತರ್ಭವೇಽನನ್ತ ಭವನ್ತಮೇವ
ಹ್ಯತತ್ತ್ಯಜನ್ತೋ ಮೃಗಯನ್ತಿ ಸನ್ತಃ ।
ಅಸನ್ತಮಪ್ಯನ್ತ್ಯಹಿಮನ್ತರೇಣ
ಸನ್ತಂ ಗುಣಂ ತಂ ಕಿಮು ಯನ್ತಿ ಸನ್ತಃ ॥೨೮॥

---

ಗಾಗದೇ ನಿಯಮಿಸುತ್ತಿರುವ ನಿನ್ನನ್ನು ಜೀವನನ್ನಾಗಿಯೂ, ಆ ಜೀವಾತ್ಮನನ್ನು ದೇಹವನ್ನಾಗಿಯೂ ತಿಳಿದು ಹೊರಗೆ ಪರಮಾತ್ಮನನ್ನು ಹುಡುಕುವರಲ್ಲಾ! ಅಯ್ಯೋ! ಮೂಢರ ಅವಿವೇಕವನ್ನು ಏನು ಹೇಳಲಿ? (ವೀರರಾಘವೀಯ)

ಯಾರು ಪರಮಾತ್ಮನಾದರೂ ಪುರುಷಾಕಾರನಾದ ನಿನ್ನನ್ನು ಪರಮಾತ್ಮನಿಂದ ಬೇರೆಯಾದ ಮಾಯಾಂಶಗಳನ್ನಾಗಿ ತಿಳಿದು ನಿನಗಿಂತ ಬೇರೆಯಾಗಿ ಪರಮಾತ್ಮನನ್ನು ಹುಡುಕುವರೋ, ಆ ಮೂರ್ಖರ ಅಜ್ಞಾನವನ್ನು ಏನು ಹೇಳಲಿ? ಇದರಿಂದ ವಿವರ್ತ ಪರಿಣಾಮಾದಿ ವಾದಗಳು ಮಾಯಿಕವಾದ ಜಗತ್ತಿನಲ್ಲೇ ಹೊರತು ಪೂರ್ಣಚಿತ್ತಾದ ಪರಬ್ರಹ್ಮನಲ್ಲಿ ಪ್ರವರ್ತಿಸುವುದಿಲ್ಲವೆಂದು ತಾತ್ಪರ್ಯವು. (ಸಾರಾರ್ಥದರ್ಶಿನೀ)

ಅಂಶಿಭೂತನಾದ ನಿನ್ನನ್ನು ಅತ್ಯಂತ ಭಿನ್ನನನ್ನಾಗಿಯೂ, ಅಂತೆಯೇ ಅಂಶರೂಪವಾದ ಜೀವನನ್ನು ಬ್ರಹ್ಮವನ್ನಾಗಿಯೂ ತಿಳಿದು ಇಚ್ಛಾನುಸಾರವಾದ ಕುಮಾರ್ಗಗಳಲ್ಲಿ ಜಡಸ್ವರೂಪಬ್ರಹ್ಮವನ್ನೋ ಅಥವಾ ಜ್ಞಾನಪರಿಣಾಮವಾದಾದಿರೂಪ ಬ್ರಹ್ಮವನ್ನೋ ಹುಡುಕುವ ತಾರ್ಕಿಕಾದಿಗಳ ಅಜ್ಞಾನವನ್ನೇನು ಹೇಳಲಿ? ಇಲ್ಲಿ ತಿಳಿಯತಕ್ಕದ್ದೇನೆಂದರೆ ಸನಾತನನೂ, ಬ್ರಹ್ಮಾಂಶಭೂತನೂ ಅಣುಪರಿಮಾಣನೂ ಆದವನು ಜೀವನು. ನಾರಾಯಣಾದಿ ಶಬ್ದಗಳಿಂದ ಕರೆಯಲ್ಪಡುವ ಸನಾತನನಾದ ವಿಭುಪರಿಮಾಣವುಳ್ಳವನು ಪರಮಾತ್ಮನು. ಇಂತು ಅಂಶಾಂಶಿಗಳಾದ ಜೀವೇಶ್ವರರು ಗುಣ-ಗುಣಿಗಳಂತೆಯೂ, ಜಾತಿ-ವ್ಯಕ್ತಿಗಳಂತೆಯೂ ಬೇರೆಯೆನಿಸಿದ್ದರೂ ಭಿನ್ನರಲ್ಲ. ಇವರಲ್ಲಿ ಅಂಶಭೂತನಾದ ಜೀವನು ಅನಾದಿಯಾದ ಮಾಯೆಗಳಿಗೊಳಗಾಗಿ ತನ್ನ ಅಂಶಿಯಾದ ಪರಮಾತ್ಮನನ್ನು ತಿಳಿಯದೇ ಬದ್ಧನಾಗುವನು. ಬಳಿಕ ಪರಮಾತ್ಮಭಜನದಿಂದ ಮಾಯೆಯನ್ನು ಕಳೆದುಕೊಂಡು ಭಗವಂತನ ಸಾಯುಜ್ಯರೂಪವಾದ ಮೋಕ್ಷವನ್ನು ಪಡೆಯುವನು– ಎಂಬುದೇ ಸಿದ್ಧಾಂತವು. ತಾದಾತ್ಮ್ಯವನ್ನು ವಿಧಿಸುವ ತತ್ತ್ವಮಸ್ಯಾದಿ ವಾಕ್ಯಗಳಿಂದ ಜೀವೇಶ್ವರರಿಗೆ ಅತ್ಯಂತ ಭೇದವಿಲ್ಲವೆಂದೂ ಜೀವ-ಪರಮಾತ್ಮರಿಗೆ ಭೇದವೇ ಇಲ್ಲದ ಪಕ್ಷದಲ್ಲಿ ಅಭೇದೋಪದೇಶವೇ ವ್ಯರ್ಥವಾಗುವುದರಿಂದ ಅತ್ಯಂತಾಭೇದವು ಇಲ್ಲವೆಂದೂ ತಿಳಿಯಬೇಕು. ಅದ್ವಿತೀಯವಾದ ಒಂದೇ ವಸ್ತುವಿನಲ್ಲಿ ಭೇದವನ್ನು ಕಲ್ಪಿಸುವುದಕ್ಕಾಗಲೀ ಅಭೇದವನ್ನು ಕಳೆಯುವುದಕ್ಕಾಗಲೀ ಯಾವ ಪಂಡಿತರಿಗೂ ಸಾಧ್ಯವಿಲ್ಲ. ಆದುದರಿಂದ ಜೀವ-ಪರಮಾತ್ಮರಿಗೆ ಸ್ವರೂಪದಿಂದ ಭೇದಾಭೇದವೇ ಸತ್ಯವು. (ಸಿದ್ಧಾಂತದೀಪಿಕಾ)

ಅನಂತನೇ! ನೀನು ಎಲ್ಲರ ಅಂತಃಕರಣದಲ್ಲಿಯೂ ವಿರಾಜಮಾನನಾಗಿರುವೆ. ವಿವೇಕಿಗಳಾದ ಸತ್ಪುರುಷರು ಜಡಚೇತನಮಯವಾದ ಶರೀರದಲ್ಲಿ ಅನಾತ್ಮವಾದ ಜಡಭಾಗವನ್ನು ತಿರಸ್ಕರಿಸಿ ತಮ್ಮ ಅಂತಃಕರಣದಲ್ಲಿ ಸರ್ವದೇಹಾತ್ಮಕನಾದ ನಿನ್ನನ್ನೇ ಹುಡುಕುವರು. ಅಜ್ಞಾನದಿಂದ ಹಗ್ಗದಲ್ಲಿ ಆರೋಪಿತವಾದ ಸರ್ಪದ ನಿರಾಕರಣೆಯಾದ ಹೊರತು ಹಗ್ಗದ ಜ್ಞಾನವುಂಟಾಗುವುದಿಲ್ಲ. ಹಾಗೆಯೇ ಅನಾತ್ಮಗಳಾದ ದೇಹಾದಿಗಳನ್ನು ನಿಷೇಧಿಸಿದ ಹೊರತು ಆತ್ಮಜ್ಞಾನವುಂಟಾಗುವುದಿಲ್ಲ.

**ಅಥಾಪಿ ತೇ ದೇವ ಪದಾಮ್ಬುಜದ್ವಯ-**
**ಪ್ರಸಾದಲೇಶಾನುಗೃಹೀತ ಏವ ಹಿ ।**
**ಜಾನಾತಿ ತತ್ತ್ವಂ ಭಗವನ್ಮಹಿಮ್ನೋ**
**ನ ಚಾನ್ಯ ಏಕೋಽಪಿ ಚಿರಂ ವಿಚಿನ್ವನ್ ॥೨೯॥**

ದೇವನೇ! ಯಾವ ಮನುಷ್ಯನು ನಿನ್ನ ಚರಣಕಮಲಗಳ ಅತ್ಯಲ್ಪವಾದ ಅನುಗ್ರಹವನ್ನಾದರೂ ಪಡೆಯುವನೋ ಆತನು ನಿನ್ನ ಸ್ವರೂಪದ ಮಹಿಮೆಯ ತತ್ತ್ವವನ್ನು ಸುಲಭವಾಗಿ ಬಹಳ ಬೇಗ ತಿಳಿದುಕೊಳ್ಳುತ್ತಾನೆ. ಬೇರೆಯವರು ಜ್ಞಾನ-ವೈರಾಗ್ಯಾದಿಗಳನ್ನು ಬಹಳ ಕಾಲದವರೆಗೂ ಅನುಸಂಧಾನ ಮಾಡಿದರೂ ನಿನ್ನ ಮಹಿಮೆಯನ್ನು ಯಥಾವತ್ತಾಗಿ ತಿಳಿಯುವುದಿಲ್ಲ.

**ತದಸ್ತು ಮೇ ನಾಥ ಸ ಭೂರಿಭಾಗೋ**
**ಭವೇಽತ್ರ ವಾನ್ಯತ್ರ ತು ವಾ ತಿರಶ್ಚಾಮ್ ।**
**ಯೇನಾಹಮೇಕೋಽಪಿ ಭವಜ್ಜನಾನಾಂ**
**ಭೂತ್ವಾ ನಿಷೇವೇ ತವ ಪಾದಪಲ್ಲವಮ್ ॥೩೦॥**

ಆದುದರಿಂದ, ಭಗವಂತನೇ! ನನ್ನ ಈ ಜನ್ಮದಲ್ಲಾಗಲೀ, ಬೇರೆ ಜನ್ಮದಲ್ಲಾಗಲೀ, ಪಶು-ಪಕ್ಷಿಗಳ ಜನ್ಮದಲ್ಲೇ ಆಗಲೀ, ನಿನ್ನ ಭಕ್ತಸಮೂಹದಲ್ಲಿ ಒಬ್ಬ ಭಕ್ತನಾಗಿದ್ದು, ನಿನ್ನ ಚರಣಕಮಲಗಳ ಸೇವೆ ಮಾಡಲು ಸಾಧ್ಯವಾಗುವಂತಹ ಮಹಾಭಾಗ್ಯವು ಪ್ರಾಪ್ತವಾಗುವಂತೆ ಅನುಗ್ರಹಿಸು.*

* ಪ್ರಪತ್ತಿರೂಪವಾದ ಮಂತ್ರವು ದೊರೆಯದಿದ್ದಲ್ಲಿ ಭಕ್ತಿಯೂ ಸಹ ಉಂಟಾಗಲಾರದು. ಆದುದರಿಂದ, ಎಲೈ ಸ್ವಾಮಿಯೇ! ಕರ್ಮ-ಜ್ಞಾನ-ಭಕ್ತಿಗಳಿಂದ ಹೀನನಾದರೂ

**ಅಹೋಽತಿಧನ್ಯಾ ವ್ರಜಗೋರಮಣ್ಯಃ**
**ಸ್ತನ್ಯಾಮೃತಂ ಪೀತಮತೀವ ತೇ ಮುದಾ ।**
**ಯಾಸಾಂ ವಿಭೋ ವತ್ಸತರಾತ್ಮಜಾತ್ಮನಾ**
**ಯತ್ತೃಪ್ತಯೇಽದ್ಯಾಪಿ ನ ಚಾಲಮಧ್ವರಾಃ ॥೩೧॥**

ಸ್ವಾಮಿಯೇ! ಜಗತ್ತು ಆರಂಭವಾದಾಗಿನಿಂದ ಇದುವರೆಗೂ ನಡೆದಿರುವ ಹಲವಾರು ಯಜ್ಞ-ಯಾಗಾದಿಗಳೂ ನಿನಗೆ ತೃಪ್ತಿಯನ್ನುಂಟು ಮಾಡಿಲ್ಲ. ಕರುಗಳ ರೂಪನಾಗಿ ಗೋವುಗಳ, ಮತ್ತು ಪುರುಷಶಿಶುವಿನ ರೂಪವಾಗಿ ಗೋಪಿಯರ ಅಮೃತರೂಪವಾದ ಹಾಲನ್ನು ಪರಮಾನಂದದಿಂದ ಬಹಳವಾಗಿ ಕುಡಿದು ತೃಪ್ತನಾಗಿರುವೆ. ಆದುದರಿಂದ ವ್ರಜದಲ್ಲಿರುವ ಗೋವುಗಳು ಮತ್ತು ಗೋಪಸ್ತ್ರೀಯರೇ ಅತ್ಯಂತಧನ್ಯರು.

**ಅಹೋ ಭಾಗ್ಯಮಹೋ ಭಾಗ್ಯಂ ನನ್ದಗೋಪವ್ರಜೌಕಸಾಮ್ ।**
**ಯನ್ಮಿತ್ರಂ ಪರಮಾನನ್ದಂ ಪೂರ್ಣಂ ಬ್ರಹ್ಮಸನಾತನಮ್ ॥೩೨॥**

ಪರಮಾನಂದಸ್ವರೂಪನಾದ, ಸನಾತನನಾದ, ಪರಿಪೂರ್ಣನಾದ, ಪರಬ್ರಹ್ಮಸ್ವರೂಪನಾದ ನೀನು ಯಾರಿಗೆ ಪರಮಮಿತ್ರನಾಗಿರುವೆಯೋ ಅಂತಹ ನಂದಗೋಕುಲದ ಗೋಪ-ಗೋಪಬಾಲಕರ ಭಾಗ್ಯವೇ ಭಾಗ್ಯವು.

**ಏಷಾಂ ತು ಭಾಗ್ಯಮಹಿಮಾಚ್ಯುತ ತಾವದಾಸ್ತಾ-**
**ಮೇಕಾದಶೈವ ಹಿ ವಯಂ ಬತ ಭೂರಿಭಾಗಾಃ ।**

---

ಯಾವುದರಿಂದ ನಿನ್ನ ಭಕ್ತರ ಮಧ್ಯದಲ್ಲಿ ಜನಿಸಿ ನಿನ್ನ ಪಾದಕಮಲವನ್ನು ಸೇವಿಸುವೆನೋ–ಅಂತಹ ನಿನ್ನ ಪ್ರಪತ್ತಿರೂಪವಾದ ಮಹಾಭಾಗ್ಯವು ನನಗೆ ಈ ಜನ್ಮದಲ್ಲಾಗಲೀ ಇತರ ಜನ್ಮಗಳಲ್ಲಾಗಲೀ ಉಂಟಾಗುವಂತೆ ಅನುಗ್ರಹಿಸು. **ಪಶು ರ್ಮನುಷ್ಯಃ ಪಕ್ಷೀ ವಾ ಯೇ ಚ ವೈಷ್ಣವಸಂಶ್ರಯಾಃ । ತೇನೈವ ತೇ ಪ್ರಯಾಸ್ಯನ್ತಿ ತದ್ವಿಷ್ಣೋಃ ಪರಮಂ ಪದಮ್ ॥** ಆಚಾರ್ಯನನ್ನಾಗಲೀ ಪ್ರಪತ್ತಿಮಾರ್ಗವನ್ನಾಗಲೀ ಆಶ್ರಯಿಸಿದ ಮನುಷ್ಯ-ಪಶು-ಪಕ್ಷಿಗಳು ಕೂಡ ಮುಕ್ತಿಯನ್ನು ಪಡೆಯುವುವು. ( ಶ್ರೀಶುಕವಾಕ್ಯ )

ಎಲೈ ನಾಥನೇ! ನಿನ್ನ ಅನುಗ್ರಹಕ್ಕೆ ಪಾತ್ರರಾದವರೇ ನಿನ್ನ ತತ್ತ್ವವನ್ನರಿಯುವರು. ನಿನ್ನ ಅನುಗ್ರಹಕ್ಕೆ ಪಾತ್ರನಾಗುವಷ್ಟು ಯೋಗ್ಯತೆಯು ನನಗೆಲ್ಲಿ ಬಂದೀತು? ಆದುದರಿಂದ ನಿನ್ನ ಭಕ್ತಕೋಟಿಯಲ್ಲಿ ಯಾವನೋ ಒಬ್ಬನಾಗಿ ನಿನ್ನ ಅಥವಾ ನಿನ್ನ ಭಕ್ತರ ಪಾದಕಮಲಗಳನ್ನು ಸೇವಿಸುವ ಭಾಗ್ಯವು ನನಗುಂಟಾಗಲಿ. (ಬೃ. ಕ್ರಮಸಂದರ್ಭ)

**ಏತದ್ಧೃಷೀಕಚಷಕೈರಸಕೃತ್ಪಿಬಾಮಃ**
**ಶರ್ವಾದಯೋಽಙ್ಘ್ರ್ಯುದಜಮಧ್ವಮೃತಾಸವಂ ತೇ ॥**

ಅಚ್ಯುತನೇ! ಈ ವ್ರಜವಾಸಿಗಳ ಸೌಭಾಗ್ಯದ ಮಹಿಮೆಯು ಹಾಗಿರಲಿ. ನಾವೂ ಕೂಡ ಭಾಗ್ಯಶಾಲಿಗಳೇ ಆಗಿದ್ದೇವೆ. ಹೇಗೆಂದರೆ ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಗಳಿಗೂ ಅಂತಃಕರಣಕ್ಕೂ ರುದ್ರನೇ ಮೊದಲಾದ ನಾವು ಅಧಿಷ್ಠಾತೃದೇವತೆಗಳಾಗಿದ್ದೇವೆ. ವ್ರಜವಾಸಿ ಗಳ ಮನಸ್ಸೇ ಮೊದಲಾದ ಇಂದ್ರಿಯಗಳನ್ನೇ ಪಾನಪಾತ್ರೆಗಳನ್ನಾಗಿ ಮಾಡಿಕೊಂಡು ಚಿತ್ತಕ್ಕೆ ಅಧೀಶನಾದ ನಿನ್ನ ಚರಣಕಮಲಗಳ ಅಮೃತಕ್ಕಿಂತಲೂ ಮಧುರವಾದ, ಮದಿರೆಗಿಂತಲೂ ಹೆಚ್ಚು ಮದವನ್ನುಂಟುಮಾಡುವ ಸುಮಧುರವಾದ ಮಕರಂದದ ರಸವನ್ನು ಸದಾ ಪಾನಮಾಡುತ್ತಿರುತ್ತೇವೆ. ಒಂದೊಂದು ಇಂದ್ರಿಯಗಳ ಮೂಲಕವಾಗಿ ನಿನ್ನ ಚರಣಾ ಮೃತವನ್ನು ಪಾನಮಾಡುವ ನಾವೇ ಮಹಾಭಾಗ್ಯಶಾಲಿಗಳೆಂದ ಮೇಲೆ, ಎಲ್ಲ ಇಂದ್ರಿಯಗಳಿಂದಲೂ ಸರ್ವದಾ ನಿನ್ನ ಚರಣಾರವಿಂದಗಳ ಸೇವೆ ಮಾಡುವ ವ್ರಜಜನರ ಸೌಭಾಗ್ಯವು ಎಷ್ಟೆಂಬುದನ್ನು ಹೇಳಬೇಕಾಗಿಯೇ ಇಲ್ಲ.*

**ತದ್ಭೂರಿಭಾಗ್ಯಮಿಹ ಜನ್ಮ ಕಿಮಪ್ಯಟವ್ಯಾಂ**
**ಯದ್ಗೋಕುಲೇಽಪಿ ಕತಮಾಙ್ಘ್ರಿರಜೋಽಭಿಷೇಕಮ್ ।**
**ಯಜ್ಜೀವಿತಂ ತು ನಿಖಿಲಂ ಭಗವಾನ್ಮುಕುನ್ದ-**
**ಸ್ತ್ವದ್ಯಾಪಿ ಯತ್ಪದರಜಃ ಶ್ರುತಿಮೃಗ್ಯಮೇವ ॥೩೪॥**

---

* ಜ್ಞಾನಕರ್ಮೇಂದ್ರಿಯಗಳಿಗೆ ಅಧಿಷ್ಠಾತೃಗಳಾದ ದಿಕ್-ವಾತ-ಅರ್ಕ-ಪ್ರಚೇತ-ಅಶ್ವಿನಿಗಳಿಬ್ಬರು, ವಹ್ನಿ-ಇಂದ್ರ-ಉಪೇಂದ್ರ-ಮಿತ್ರರೆಂಬ ಹತ್ತು ಮಂದಿಯು ಮನೋಧಿಷ್ಠಾತೃವಾದ ಚಂದ್ರ, ಬುಧ್ಯಧಿಷ್ಠಾತೃವಾದ ಬ್ರಹ್ಮ, ಅಹಂಕಾರಾಧಿಷ್ಠಾತೃವಾದ ರುದ್ರ–ಈ ಹದಿಮೂರು ಮಂದಿಯಲ್ಲಿ ಪಾಯು-ಉಪಸ್ಥೇಂದ್ರಿಯಗಳಿಗೆ ಭಕ್ತಿಯಲ್ಲಿ ಉಪಯೋಗವಿಲ್ಲದುದರಿಂದ ತದಭಿಮಾನಿಗಳಾದ ಮಿತ್ರ-ಪ್ರಜಾಪತಿಗಳನ್ನುಳಿದಲ್ಲಿ ಹನ್ನೊಂದು ಮಂದಿಯಾಗುವರು. ಅಥವಾ ನಿಋತಿಯನ್ನುಳಿದು ಲೋಕಪಾಲಕರು ಒಂಬತ್ತುಮಂದಿ ಸೂರ್ಯ-ಚಂದ್ರರು ಸೇರಿ ಹನ್ನೊಂದು ಮಂದಿಯಾಗುವರು.

(ಬೃ. ಕ್ರಮಸಂದರ್ಭ)

ಪ್ರಭುವೇ! ಈ ವ್ರಜಭೂಮಿಯಲ್ಲಿ ಯಾವುದಾದರೂ ಕಾಡಿನಲ್ಲಾದರೂ ಸರಿ. ಗೋಕುಲದಲ್ಲಿ ಯಾವುದಾದರೂ ಯೋನಿಯಲ್ಲಾದರೂ ಸರಿ ; ಜನ್ಮವು ಲಭಿಸಲಿ. ಹಾಗೆ ಲಭಿಸಿದರೆ ನಮಗೆ ಅದೊಂದು ವಿಶೇಷವಾದ ಸೌಭಾಗ್ಯವೇ ಸರಿ. ಏಕೆಂದರೆ ಇಲ್ಲಿ ಜನ್ಮವನ್ನು ಪಡೆದೆವಾದರೆ ನಿನ್ನ ಪ್ರೇಮೀಭಕ್ತರಲ್ಲಿ ಒಬ್ಬರ ಪಾದಧೂಳಿಯಾದರೂ ನಮ್ಮ ಮೇಲೆ ಬೀಳದೇ ಇರದು. ಇದರಿಂದಲೇ ನಾವು ಮಹಾಭಾಗ್ಯಶಾಲಿಗಳಾಗಿಬಿಡುತ್ತೇವೆ. ಪ್ರಭುವೇ! ನಿನ್ನನ್ನು ಪ್ರೀತಿಸುವ ಈ ವ್ರಜವಾಸಿಗಳ ಸಂಪೂರ್ಣಜೀವನವೂ ನಿನ್ನ ಜೀವನವೇ ಆಗಿದೆ. ನೀನು ಅವರ ಜೀವನದ ಸರ್ವಸ್ವವೂ ಆಗಿರುವೆ. ಆದುದರಿಂದ ಅವರ ಚರಣಕಮಲಗಳ ಧೂಳಿಯ ಸ್ಪರ್ಶವಾದರೆ ನಿನ್ನ ಪಾದಕಮಲಗಳ ಧೂಳಿಯ ಸ್ಪರ್ಶವಾದಂತೆಯೇ ಆಗುತ್ತದೆ. ಅನಾದಿಕಾಲ ದಿಂದಲೂ ವೇದಗಳು ನಿನ್ನ ಪಾದಧೂಳಿಯನ್ನೇ ಹುಡುಕಿಕೊಂಡು ತಡಕಾಡುತ್ತಿವೆ.

**ಏಷಾಂ ಘೋಷನಿವಾಸಿನಾಮುತ ಭವಾನ್ಕಿಂ ದೇವರಾತೇತಿ ನ-**
**ಶ್ಚೇತೋ ವಿಶ್ವಫಲಾತ್ಫಲಂ ತ್ವದಪರಂ ಕುತ್ರಾಪ್ಯಯನ್ಮುಹ್ಯತಿ ।**
**ಸದ್ವೇಷಾದಿವ ಪೂತನಾಪಿ ಸಕುಲಾ ತ್ವಾಮೇವ ದೇವಾಪಿತಾ**
**ಯದ್ಧಾಮಾರ್ಥಸುಹೃತ್ಪ್ರಿಯಾತ್ಮತನಯಪ್ರಾಣಾಶಯಾಸ್ತ್ವತ್ಕೃತೇ ॥**

ದೇವತೆಗಳಿಗೂ ಆರಾಧ್ಯನಾದ ಪ್ರಭುವೇ! ವ್ರಜವಾಸಿಗಳು ಮಾಡು ತ್ತಿರುವ ಸೇವೆಗೆ ನೀನೇನು ಫಲಕೊಡುವೆ? ಸಮಸ್ತಫಲಗಳಿಗೂ ನೀನು ಫಲಸ್ವರೂಪನಾಗಿರುವುದು ನಿಜ. ನಿನಗಿಂತ ದೊಡ್ಡದಾದ ಯಾವ ಫಲವೂ ಇಲ್ಲ. ಆದರೆ ಅಷ್ಟೇ ಫಲವು ವ್ರಜವಾಸಿಗಳಿಗೆ ಪರ್ಯಾಪ್ತವೇ?–ಎಂಬು ದನ್ನು ತರ್ಕಿಸುತ್ತಿರುವ ನನ್ನ ಮನಸ್ಸು ವಿಮೋಹಗೊಂಡಿದೆ. ಭಕ್ತಪರಾಧೀನ ನಾದ ನೀನು ನಿನ್ನನ್ನೇ ಅವರಿಗೆ ಕೊಟ್ಟುಕೊಂಡರೂ ಅವರ ಋಣದಿಂದ ಮುಕ್ತನಾಗಲಾರೆ. ಹೇಗೆಂದರೆ : ನಿನ್ನ ಸ್ವರೂಪವನ್ನು ಪೂತನೆ ಮತ್ತು ಅವಳ ಕುಲಕ್ಕೇ ಸೇರಿದ ಅಘಾಸುರ-ಬಕಾಸುರ ಮುಂತಾದವರೂ ಪಡೆದುಕೊಂಡು ಮುಕ್ತಿಯನ್ನು ಪಡೆದರು. ನಿನಗೆ ಹಾಲುಣಿಸುವಾಗ ಪೂತನೆಯ ವೇಷವು ಮಾತ್ರ ಸತೀ-ಸಾಧ್ವಿಯಂತಿದ್ದಿತೇ ಹೊರತು ಹೃದಯದಲ್ಲಿ ಅವಳು ಅತ್ಯಂತ ಕ್ರೂರಿಯೇ ಆಗಿದ್ದಳು. ಅವಳಿಗೂ ನಿನ್ನ ಸ್ವರೂಪವು ಲಭಿಸಿಬಿಟ್ಟಿತು.

ಹೀಗಿರುವಾಗ ಯಾವ ವ್ರಜವಾಸಿಗಳು ತಮ್ಮ ಮನೆ, ಸಂಪತ್ತು, ಸ್ವರ್ಗ, ಪ್ರಿಯವಸ್ತುಗಳು, ಶರೀರ, ಪುತ್ರರು, ಪ್ರಾಣ ಮತ್ತು ಮನಸ್ಸು–ಎಲ್ಲವನ್ನೂ ನಿನ್ನ ಚರಣಕಮಲಗಳಲ್ಲಿ ಸಮರ್ಪಿಸಿಬಿಟ್ಟಿರುವರೋ, ಯಾರು ಸಮಸ್ತ ಕಾರ್ಯಗಳನ್ನೂ ನಿನ್ನ ಪ್ರೀತಿ-ಒಲುಮೆ ಮತ್ತು ಸಂತೋಷಗಳಿಗಾಗಿಯೇ ಮಾಡುವರೋ, ಅಂತಹ ವ್ರಜವಾಸಿಗಳನ್ನು ಕುರಿತ ಅನುಗ್ರಹಋಣದಿಂದ ನೀನು ಹೇಗೆ ಮುಕ್ತನಾಗುವೆ?*

**ತಾವದ್ರಾಗಾದಯಃ ಸ್ತೇನಾಸ್ತಾವತ್ಕಾರಾಗೃಹಂ ಗೃಹಮ್ ।**
**ತಾವನ್ಮೋಹೋಽಙ್ಘ್ರಿನಿಗಡೋ ಯಾವತ್ಕೃಷ್ಣ ನ ತೇ ಜನಾಃ ॥೩೬॥**

ಶ್ಯಾಮಸುಂದರನೇ! ಜೀವರು ಎಂದಿನವರೆಗೆ ನಿನ್ನವರಾಗುವುದಿಲ್ಲವೋ, ನಿನ್ನ ಭಕ್ತರಾಗುವುದಿಲ್ಲವೋ–ಅಲ್ಲಿಯವರೆಗೆ ತಾನೇ ರಾಗ-ದ್ವೇಷಾದಿಗಳು ಕಳ್ಳರಾಗಿ ಆತ್ಮಗುಣಗಳನ್ನು ಅಪಹರಿಸುತ್ತಾರೆ? ಮನೆಯು ಸೆರೆಮನೆಯಾಗಿರುತ್ತದೆ ಮತ್ತು ಮೋಹವು ಕಾಲುಗಳಿಗೆ ಸಂಕೋಲೆಯಾಗಿ ಬಂಧನಕ್ಕೆ ಕಾರಣವಾಗುತ್ತದೆ?

---

* **ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।**
**ತ್ವಾಮನುಸ್ಮರತಃ ಸಾ ಮೇ ಹೃದಯಾನ್ನಾಪಸರ್ಪತು ॥**

ವಿವೇಕವಿಲ್ಲದವರಿಗೆ ಹೂವು-ಗಂಧ ಮುಂತಾದ ವಿಷಯಗಳಲ್ಲಿ ಯಾವ ದೃಢತಮವಾದ ಪ್ರೀತಿಯಿರುವುದೋ ಅಂತಹ ಪ್ರೀತಿಯು ನಿನ್ನನ್ನು ಸ್ಮರಿಸುವ ನನ್ನ ಹೃದಯದಲ್ಲಿ ನಿರಂತರವೂ ನೆಲಸಿರಲಿ–ಎಂಬುದರಿಂದ ನಿರತಿಶಯವಾದ ಪ್ರೇಮವುಳ್ಳವರೇ ಭಗವಂತನ ಕಡೆಯವರಾಗುವರೆಂಬ ಭಾವವು. (ವೈಜಯಂತಿ)

ರಾಗ-ದ್ವೇಷಾದಿ ಶೂನ್ಯರಾದ ಜ್ಞಾನಿಗಳಿಗೆ ಕೂಡ ನಿನಗಿಂತಲೂ ಬೇರೆ ಫಲವಿಲ್ಲವಾದುದರಿಂದ ಇವರಿಗೇಕೆ ಸಾಲದಾಗಿದೆ?–ಎಂದರೆ :

**ಕಾಮಾದ್ದ್ವೇಷಾದ್ಭಯಾತ್ಕ್ರೋಧಾದ್ಯಥಾ ಭಕ್ತ್ಯೇಶ್ವರೇ ಮನಃ ।**
**ಆವೇಶ್ಯ ತದಘಂ ಹಿತ್ವಾ ಬಹವಃ ಸದ್ಗತಿಂ ಗತಾಃ ॥**
**ಮನ್ನಿಮಿತ್ತಂ ಕೃತಂ ಪಾಪಂ ಮದ್ಧರ್ಮಾಯ ಪ್ರಕಲ್ಪತೇ ।**
**ಮಾಮನಾದೃತ್ಯ ಧರ್ಮೋಽಪಿ ಪಾಪಸ್ಸ್ಯಾನ್ಮತ್ಪ್ರಭಾವತಃ ॥**

ಕಾಮ-ದ್ವೇಷ-ಭಯ-ಕ್ರೋಧ–ಯಾವುದರಿಂದಾಗಲೀ ಭಗವಂತನಲ್ಲಿ ಮನಸ್ಸನ್ನಿಟ್ಟವರು ಪಾಪನಿವೃತ್ತಿಯಿಂದ ಸದ್ಗತಿಯನ್ನು ಪಡೆಯುವರು. ಭಗವದರ್ಥವಾಗಿ ಮಾಡಲ್ಪಟ್ಟ

**ಪ್ರಪಞ್ಚಂ ನಿಷ್ಪ್ರಪಞ್ಚೋಽಪಿ ವಿಡಮ್ಬಯಸಿ ಭೂತಲೇ ।**
**ಪ್ರಪನ್ನಜನತಾನನ್ದಸಂದೋಹಂ ಪ್ರಥಿತುಂ ಪ್ರಭೋ ॥೩೭॥**

ಪ್ರಭುವೇ! ನೀನು ಜಗದ್ವ್ಯಾಪಾರದಿಂದ ರಹಿತನಾಗಿದ್ದರೂ ಶರಣಾಗತರಾದ ಭಕ್ತರ ಅನಂತವಾದ ಆನಂದವನ್ನು ಪ್ರಸಿದ್ಧಿಪಡಿಸುವ ಸಲುವಾಗಿ ಭೂಮಿಯಲ್ಲಿ ಅವತರಿಸಿ ಪ್ರಪಂಚದ ಜನರಂತೆಯೇ ನಟನೆಮಾಡುತ್ತಿರುವೆ.*

**ಜಾನನ್ತ ಏವ ಜಾನನ್ತು ಕಿಂ ಬಹೂಕ್ತ್ಯಾ ನ ಮೇ ಪ್ರಭೋ ।**
**ಮನಸೋ ವಪುಷೋ ವಾಚೋ ವೈಭವಂ ತವ ಗೋಚರಃ ॥೩೮॥**

ಸ್ವಾಮಿಯೇ! ಹೆಚ್ಚು ಹೇಳುವುದರಿಂದ ಪ್ರಯೋಜನವೇನೂ ಇಲ್ಲ. ಲೋಕದಲ್ಲಿ ಯಾರು ನಿನ್ನ ಮಹಿಮೆಯನ್ನು ತಿಳಿದಿರುವರೋ ಅವರು ತಿಳಿದಿರಲಿ. ನನ್ನ ಮನಸ್ಸು, ಮಾತು ಮತ್ತು ಶರೀರಗಳಂತೂ ನಿನ್ನ ಮಹಿಮೆಯನ್ನು ತಿಳಿಯಲು ಸರ್ವಥಾ ಅಸಮರ್ಥವಾಗಿವೆ.

**ಅನುಜಾನೀಹಿ ಮಾಂ ಕೃಷ್ಣ ಸರ್ವಂ ತ್ವಂ ವೇತ್ಸಿ ಸರ್ವದೃಕ್ ।**
**ತ್ವಮೇವ ಜಗತಾಂ ನಾಥೋ ಜಗದೇತತ್ತವಾರ್ಪಿತಮ್ ॥೩೯॥**

ಸಚ್ಚಿದಾನಂದರೂಪನಾದ ಕೃಷ್ಣನೇ! ನೀನು ಸರ್ವಸಾಕ್ಷಿಯಾಗಿ ಎಲ್ಲವನ್ನೂ ತಿಳಿದವನಾಗಿರುವೆ. ಸಕಲಜಗತ್ತಿಗೂ ಸ್ವಾಮಿಯಾಗಿರುವೆ. ಈ

---

ಪಾಪವು ಪುಣ್ಯವೆನಿಸುವುದು. ಭಗವಂತನನ್ನು ಕಡೆಗಣಿಸಿ ಮಾಡಿದ ಪುಣ್ಯವೂ ಪಾಪವಾಗುವುದು. ನಿನ್ನನ್ನು ಪರಮಾತ್ಮನನ್ನಾಗಿ ತಿಳಿಯುವ ಜ್ಞಾನಿಗಳಿಗಿಂತಲೂ ವಾತ್ಸಲ್ಯಾದಿಗಳಿಂದ ಮಗನೆಂದೂ, ಮಿತ್ರನೆಂದೂ, ಆಪ್ತನೆಂದೂ ತಿಳಿದ ಗೋಕುಲದವರೇ ಭಕ್ತಾಗ್ರೇಸರರಾದ ಕಾರಣ ಇವರಿಗೆ ಫಲವು ಸಾಲದು. (ತತ್ತ್ವ ಬೋಧಿನೀ)

* ಎಲೈ ಭಗವಂತನೇ! ನೀನು ಸಹಜವಾಗಿ ಪ್ರಾಕೃತಶರೀರ ಮತ್ತು ತದ್ವ್ಯಾಪಾರರೂಪ ಪ್ರಪಂಚರಹಿತನಾದರೂ ನಿನ್ನ ಸಂಕಲ್ಪದಿಂದ ಪ್ರಪಂಚವನ್ನು ಅನುಸರಿಸುತ್ತಿರುವೆ.
(ವಿಜಯಧ್ವಜೀಯ)

ನೀನು ಪ್ರಪಂಚಾತೀತನಾದರೂ ಯಾವಾಗಲೂ ಭೂಮಿಯಲ್ಲಿದ್ದುಕೊಂಡು ಲೋಕದಲ್ಲಿರುವ ಪಿತೃ-ಪುತ್ರಾದಿ ಭಾವವನ್ನು ಅನುಸರಿಸುವೆ. ಈ ಪಿತೃ-ಪುತ್ರಾದಿಭಾವವು ಜೀವರಿಗೆ ಅವಾಸ್ತವವಾದರೂ, ನಿಷ್ಪ್ರಪಂಚನಾದ ನಿನಗೆ ಇದು ಸತ್ಯವೇ ಸರಿ. ನಿನ್ನ ಲೀಲೆಯು ಸತ್ಯವಾದುದರಿಂದ ಪ್ರಪಂಚಾತೀತವಾದರೂ ಪ್ರಪಂಚವನ್ನು ಅನುಕರಿಸುತ್ತಿರುವೆ.
(ಸಾರಾರ್ಥದರ್ಶಿನೀ)

ಅಖಂಡಭೂಮಂಡಲವೂ ನಿನ್ನಲ್ಲಿಯೇ ನೆಲೆಗೊಂಡಿದೆ. ನಾನು ನಿನ್ನ ವಿಷಯದಲ್ಲಿ ಮತ್ತೇನು ಹೇಳಲಿ? ನನ್ನನ್ನು ಭಕ್ತನನ್ನಾಗಿ ಸ್ವೀಕರಿಸು ಸ್ವಾಮಿಯೇ! ನಾನು ನನ್ನ ಲೋಕಕ್ಕೆ ಹೋಗಲು ಅನುಮತಿಸು.

**ಶ್ರೀಕೃಷ್ಣ ವೃಷ್ಣಿಕುಲಪುಷ್ಕರಜೋಷದಾಯಿನ್**
**ಕ್ಷ್ಮಾನಿರ್ಜರದ್ವಿಜಪಶೂದಧಿವೃದ್ಧಿಕಾರಿನ್ ।**
**ಉದ್ಧರ್ಮಶಾರ್ವರಹರ ಕ್ಷಿತಿರಾಕ್ಷಸಧ್ರು-**
**ಗಾಕಲ್ಪಮಾರ್ಕಮರ್ಹನ್ಭಗವನ್ನಮಸ್ತೇ ॥೪೦॥**

ಸಮಸ್ತರ ಮನಃಪ್ರಾಣಗಳನ್ನೂ ರೂಪಮಾಧುರ್ಯಗಳಿಂದ ಆಕರ್ಷಿಸುವ ಶ್ಯಾಮಸುಂದರನೇ! ನೀನು ಯದುವಂಶರೂಪವಾದ ಕಮಲವನ್ನು ವಿಕಾಸಗೊಳಿಸುವ ಸೂರ್ಯನಾಗಿರುವೆ. ಭೂ-ದೇವತಾ-ಬ್ರಾಹ್ಮಣ-ಪಶು ರೂಪವಾದ ಸಮುದ್ರವನ್ನು ಉಕ್ಕಿಸುವುದರಲ್ಲಿ ( ಅಭಿವೃದ್ಧಿಗೊಳಿಸುವುದರಲ್ಲಿ) ನೀನು ಹುಣ್ಣಿಮೆಯ ಚಂದ್ರನಾಗಿರುವೆ. ಪಾಷಂಡಿಧರ್ಮವೆಂಬ ರಾತ್ರಿಯ ಘೋರಾಂಧಕಾರವನ್ನು ನಾಶಗೊಳಿಸುವುದರಲ್ಲಿ ಚಂದ್ರ-ಸೂರ್ಯ ರಿಗೆ ಸಮಾನನಾಗಿರುವೆ. ಲೋಕದ್ರೋಹಿಗಳಾದ ಕಂಸನೇ ಮೊದಲಾದ ರಾಕ್ಷಸರಿಗೆ ನೀನು ದ್ರೋಹಿಯಾಗಿರುವೆ. ಭಗವಂತ! ಆಕಲ್ಪವಾಗಿ, ಆಚಂದ್ರಾರ್ಕವಾಗಿ ನಿನಗೆ ನಾನು ನಮಸ್ಕರಿಸುತ್ತಲೇ ಇರುತ್ತೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಸೃಷ್ಟಿಕರ್ತನಾದ ಬ್ರಹ್ಮನು ಈ ಪ್ರಕಾರವಾಗಿ ಶ್ರೀಕೃಷ್ಣನನ್ನು ಸ್ತುತಿಸಿ ಅವನಿಗೆ ಮೂರು ಪ್ರದಕ್ಷಿಣೆಗಳನ್ನು ಮಾಡಿ ನಮಸ್ಕರಿಸಿ ತನ್ನ ಸ್ಥಾನವಾದ ಸತ್ಯಲೋಕಕ್ಕೆ ತೆರಳಿದನು. ಬ್ರಹ್ಮನು ಈ ಮೊದಲೇ ಕರುಗಳನ್ನೂ ಗೋಪಬಾಲಕರನ್ನೂ ಅವರು ಹಿಂದಿದ್ದ ಸ್ಥಳಕ್ಕೆ ಕಳುಹಿಸಿಬಿಟ್ಟಿದ್ದನು. ಶ್ರೀಕೃಷ್ಣನು ಬ್ರಹ್ಮದೇವರನ್ನು ಬೀಳ್ಕೊಟ್ಟು ಕರುಗಳನ್ನು ಹೊಡೆದುಕೊಂಡು ಯಮುನಾನದಿಯ ತೀರಕ್ಕೆ ಬಂದನು. ಹಿಂದಿನಂತೆಯೇ ಮಳಲುದಿಣ್ಣೆಯ ಬಳಿಯಲ್ಲಿ ತನ್ನ ಸ್ನೇಹಿತರಾದ ಗೋಪ-ಬಾಲಕರೂ ಇದ್ದರು. ತಮ್ಮ ಜೀವನಸರ್ವಸ್ವನಾದ, ಪ್ರಾಣವಲ್ಲಭನಾದ ಶ್ರೀಕೃಷ್ಣನನ್ನು ಅಗಲಿ ಗೋಪಾಲಬಾಲಕರಿಗೆ ಒಂದು ವರ್ಷವೇ ಕಳೆದು

ಹೋಗಿದ್ದಿತು. ಆದರೂ ಶ್ರೀಕೃಷ್ಣನ ಯೋಗಮಾಯೆಯಿಂದ ಮರುಳಾದ ಗೋಪಬಾಲಕರು ಕ್ಷಣಾರ್ಧದ ಹಿಂದೆ ತಾವು ಶ್ರೀಕೃಷ್ಣನನ್ನು ನೋಡಿದ್ದೆವೆಂದೇ ಭಾವಿಸಿಕೊಂಡರು. ಕೃಷ್ಣನನ್ನು ಅಗಲಿದ ಭಾವನೆಯೇ ಅವರಲ್ಲಿ ಉಂಟಾಗಲಿಲ್ಲ. ಕರುಗಳನ್ನು ಕರೆತರುವ ಸಲುವಾಗಿ ಹೋಗಿದ್ದನಲ್ಲವೇ ಶ್ರೀಕೃಷ್ಣ? ಆದರೆ ಎಡೆಬಿಡದೆ ತಮ್ಮ ಜೊತೆಯಲ್ಲೇ ಶ್ರೀಕೃಷ್ಣನಿರುವನೆಂದು ಅವರು ಭಾವಿಸಿಕೊಂಡರು.

**ಕಿಂ ಕಿಂ ನ ವಿಸ್ಮರನ್ತೀಹ ಮಾಯಾಮೋಹಿತಚೇತಸಃ ।**
**ಯನ್ಮೋಹಿತಂ ಜಗತ್ಸರ್ವಮಭೀಕ್ಷ್ಣಂ ವಿಸ್ಮೃತಾತ್ಮಕಮ್ ॥೪೪॥**

ಜಗತ್ತಿನಲ್ಲಿರುವ ಸಮಸ್ತಜೀವಿಗಳೂ ಭಗವಂತನ ಯೋಗಮಾಯೆ ಯೆಂಬ ತೆರೆಯಿಂದ ಮುಚ್ಚಿದುವುಗಳಾಗಿ ಯಾವುದನ್ನು ತಾನೇ ಮರೆಯದೇ ಇರುತ್ತವೆ? ಆತನ ಯೋಗಮಾಯೆಯಿಂದ ವಿಮೋಹಗೊಳಿಸಲ್ಪಟ್ಟ ಜಗತ್ತು ಆತ್ಮಸ್ವರೂಪವನ್ನು ಸಂಪೂರ್ಣವಾಗಿ ಮರೆತೇಬಿಡುತ್ತದೆ.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನನ್ನು ಕಾಣುತ್ತಲೇ ಗೋಪ ಬಾಲಕರು ಅತ್ಯುತ್ಸಾಹದಿಂದ ಆತನಿಗೆ ಹೇಳಿದರು : "ಕೃಷ್ಣ! ನೀನು ಬಂದುದು ಒಳ್ಳೆಯದೇ ಆಯಿತು. ನಿನಗೆ ಸ್ವಾಗತಬಯಸುತ್ತೇವೆ. ನೀನಿಲ್ಲದೆ ನಾವು ಒಂದು ತುತ್ತು ಅನ್ನವನ್ನೂ ತಿಂದಿರುವುದಿಲ್ಲ. ಇತ್ತ ಬಾ. ಕುಳಿತುಕೋ. ನಾವೆಲ್ಲರೂ ಒಟ್ಟಾಗಿ ಆನಂದದಿಂದ ಊಟಮಾಡೋಣ." ಶ್ರೀಕೃಷ್ಣನು ನಗುನಗುತ್ತಲೇ ಗೋಪಬಾಲಕರ ಜೊತೆಯಲ್ಲಿ ಕುಳಿತು ಆನಂದ ದಿಂದ ಊಟಮಾಡಿದನು. ಬಳಿಕ ಹೆಬ್ಬಾವಿನ ತೊಗಲನ್ನು ಗೋಪಬಾಲಕರಿಗೆ ತೋರಿಸಿ ವೃಂದಾವನದಿಂದ ವ್ರಜಭೂಮಿಗೆ ಹಿಂದಿರುಗಿದನು. ಶ್ರೀಕೃಷ್ಣನ ತಲೆಯು ನವಿಲುಗರಿಯಿಂದಲೂ, ಹೂವಿನ ದಂಡೆಯಿಂದಲೂ ಸಮಲಂಕೃತವಾಗಿದ್ದಿತು. ಹೊಸ ಹೊಸ ಬಣ್ಣದ ಧಾತುಗಳಿಂದ ಆತನ ಶ್ಯಾಮಲ ಶರೀರವು ಚಿತ್ರಿತವಾಗಿದ್ದಿತು. ಅವನು ಹಳ್ಳಿಯ ಕಡೆಗೆ ಹೋಗುತ್ತಿದ್ದಾಗ ಕೆಲವು ಗೋಪಾಲಕರು ಕೊಳಲನ್ನೂದುತ್ತಿದ್ದರು. ಕೆಲವರು ಕೊಂಬುಗಳನ್ನು ಊದುತ್ತಿದ್ದರು. ಕೆಲವರು ಎಲೆಯಲ್ಲಿ ಪೀಪಿಗಳನ್ನು ಮಾಡಿ ಕೊಂಡು ಊದುತ್ತಿದ್ದರು. ಇದೊಂದು ವಾದ್ಯೋತ್ಸವದಂತೆಯೇ ಕಾಣು

ತ್ತಿದ್ದಿತು. ಹಿಂಭಾಗದಲ್ಲಿ ಕೆಲವು ಗೋಪಬಾಲಕರು ಶ್ರೀಕೃಷ್ಣನ ಲೋಕ ಪಾವನವಾದ ಕೀರ್ತನೆಗಳನ್ನು ಹಾಡುತ್ತಿದ್ದರು. ಕೆಲವರು ತಮ್ಮ ಕರುಗಳ ಹೆಸರುಗಳನ್ನು ಹಿಡಿದು ಕೂಗುತ್ತಿದ್ದರು. ಕೆಲವರು ತಮ್ಮ ಕರುಗಳಿಗೆ ಮುದ್ದಿಡುತ್ತಾ ಹೋಗುತ್ತಿದ್ದರು. ಎರಡೂ ಕಡೆಗಳಲ್ಲಿ ನಿಂತು ಉತ್ಸಾಹದಿಂದ ನೋಡುತ್ತಿದ್ದ ಗೋಪಿಕಾಸ್ತ್ರೀಯರ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಾ ಶ್ರೀಕೃಷ್ಣನು ವ್ರಜವನ್ನು ಪ್ರವೇಶಿಸಿದನು.

ಪರೀಕ್ಷಿತನೇ! ಅಂದಿಗೆ ಅಘಾಸುರನ ಸಂಹಾರವಾಗಿ ಒಂದು ವರ್ಷವು ಕಳೆದುಹೋಗಿದ್ದರೂ ಪರಮಾತ್ಮನ ಯೋಗಮಾಯೆಯಿಂದ ಆವರಿಸ ಲ್ಪಟ್ಟಿದ್ದ ಗೋಪಬಾಲಕರು ಹಳ್ಳಿಯನ್ನು ಸೇರಿದನಂತರ ತಮ್ಮ ತಂದೆ- ತಾಯಿಗಳಿಗೆ ಹೇಳಿದರು :

**ಅದ್ಯಾನೇನ ಮಹಾವ್ಯಾಲೋ ಯಶೋದಾನನ್ದಸೂನುನಾ ।**
**ಹತೋಽವಿತಾ ವಯಂ ಚಾಸ್ಮಾದಿತಿ ಬಾಲಾ ವ್ರಜೇ ಜಗುಃ ॥೪೮॥**

"ಅಪ್ಪ! ಯಶೋದಾ ಮಾತೆಯ ಮುದ್ದುಮಗನಾದ ಶ್ರೀಕೃಷ್ಣನು ಇಂದು ವೃಂದಾವನದಲ್ಲಿ ಒಂದು ದೊಡ್ಡ ಹೆಬ್ಬಾವನ್ನು ಸಂಹರಿಸಿ ನಮ್ಮೆಲ್ಲರನ್ನೂ ರಕ್ಷಿಸಿದನು."

ರಾಜನು ಪ್ರಶ್ನಿಸುತ್ತಾನೆ :

"ಬ್ರಾಹ್ಮಣಶ್ರೇಷ್ಠರೇ! ವ್ರಜವಾಸಿಗಳಿಗೆ ಶ್ರೀಕೃಷ್ಣನು ಮಗನಾಗಿರ ಲಿಲ್ಲ. ಬೇರೆಯವರ ಮಗನಾಗಿದ್ದನು. ಹಾಗಿದ್ದರೂ ಆತನ ಮೇಲೆ ವ್ರಜವಾಸಿಗಳಿಗೆ ಅಷ್ಟು ಅಪಾರವಾದ ಪ್ರೀತಿಯಿದ್ದುದರ ಕಾರಣವೇನು? ಶ್ರೀಕೃಷ್ಣನ ಮೇಲಿದ್ದಂತಹ ಪ್ರೇಮವು ಗೋಪ-ಗೋಪಿಯರಿಗೆ ತಮ್ಮ ಮಕ್ಕಳ ಮೇಲೆಯೇ ಇರಲಿಲ್ಲ. ತಾವು ದಯಮಾಡಿ ಇದಕ್ಕೆ ಕಾರಣವನ್ನು ತಿಳಿಸಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಮಹಾರಾಜ! ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳಿಗೂ ಅವುಗಳ ಆತ್ಮನಲ್ಲಿಯೇ ಹೆಚ್ಚಿನ ಪ್ರೀತಿವಿಶ್ವಾಸವಿರುತ್ತದೆ. ಪ್ರಾಣಿಗಳು ತಮ್ಮ ಆತ್ಮವನ್ನೇ ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತವೆ. ಪುತ್ರ-ಧನ–ಇತ್ಯಾದಿಗಳ ಮೇಲಿನ

ಪ್ರೇಮವು ಕೂಡ ತನ್ನ ಆತ್ಮನ ಮೇಲಿರುವ ಅಪಾರವಾದ ಪ್ರೇಮದಿಂದಲೇ ಉಂಟಾಗುತ್ತದೆ. ಆತ್ಮಪ್ರೀತಿಗಾಗಿ ಮಕ್ಕಳನ್ನು ಪಡೆಯುವುದು. ಆತ್ಮಪ್ರೀತಿಗಾಗಿ ಧನವನ್ನು ಸಂಪಾದಿಸುವುದು. ಆತ್ಮಪ್ರೀತಿಗಾಗಿ ವಿವಾಹ ಎಲ್ಲವೂ ಆತ್ಮವನ್ನು ತಣಿಸುವುದಕ್ಕಾಗಿಯೇ. ಆದುದರಿಂದ ಎಲ್ಲ ಪ್ರಾಣಿಗಳಿಗೂ ಅವುಗಳ ಆತ್ಮನಲ್ಲಿ ಅಪಾರವಾದ ಪ್ರೀತಿಯಿರುತ್ತದೆ.

ಈ ಕಾರಣದಿಂದಲೇ ರಾಜೇಂದ್ರ! ಎಲ್ಲ ಪ್ರಾಣಿಗಳಿಗೂ ತಮ್ಮ ಆತ್ಮದ ಮೇಲೆ ಎಷ್ಟು ಮಮತೆಯಿರುವುದೋ ಅಷ್ಟು ಮಮತೆಯು ತನ್ನದೆನಿಸಿಕೊಂಡ ಮಕ್ಕಳ ಮೇಲಾಗಲೀ, ಧನದ ಮೇಲಾಗಲೀ, ಗೃಹದ ಮೇಲಾಗಲೀ, ಗೃಹಿಣಿಯ ಮೇಲಾಗಲೀ ಇರುವುದಿಲ್ಲ. ನೃಪಶ್ರೇಷ್ಠನೇ! ದೇಹವೇ ಆತ್ಮವೆಂದು ತಿಳಿದುಕೊಂಡಿರುವವರಿಗೂ ಕೂಡ ತಮ್ಮ ದೇಹದ ಮೇಲೆ ಎಷ್ಟು ಮಮತೆಯಿರುವುದೋ ಆ ಮಮತೆಯು ಅವರ ಶರೀರಕ್ಕೆ ಸಂಬಂಧಿಸಿದ ಪುತ್ರ-ಮಿತ್ರ-ಕಳತ್ರಾದಿಗಳ ಮೇಲಿರುವುದಿಲ್ಲ. ವಿಚಾರಮಾಡಿ–'ದೇಹವು ನಾನಲ್ಲ ; ಅದರಲ್ಲಿರುವ ಆತ್ಮನು ನಾನು'–ಎಂಬ ತಿಳುವಳಿಕೆಯುಂಟಾದಾಗ ದೇಹದ ಮೇಲಿನ ಪ್ರೇಮಕ್ಕಿಂತಲೂ ಆತ್ಮದ ಮೇಲೆಯೇ ಹೆಚ್ಚಿನ ಮಮತೆ ಯುಂಟಾಗುತ್ತದೆ. ಹಾಗೆ ಆತ್ಮನ ಮೇಲೆ ಹೆಚ್ಚಿನ ಮಮತೆಯುಂಟಾಗು ವುದರಿಂದಲೇ ಶರೀರವು ಜೀರ್ಣಿಸಿಹೋಗುತ್ತಿದ್ದರೂ ಬದುಕಿರಬೇಕೆನ್ನುವ ಆಸೆಯು ಹೆಚ್ಚಾಗುತ್ತಿರುತ್ತದೆ. ಇದಕ್ಕೆ ಆತ್ಮನ ಮೇಲಿರುವ ಅಗಾಧವಾದ ಪ್ರೇಮವೇ ಕಾರಣ.

**ತಸ್ಮಾತ್ಪ್ರಿಯತಮಃ ಸ್ವಾತ್ಮಾ ಸರ್ವೇಷಾಮಪಿ ದೇಹಿನಾಮ್ ।**
**ತದರ್ಥಮೇವ ಸಕಲಂ ಜಗದೇತಚ್ಚರಾಚರಮ್ ॥೫೪॥**

ಆದುದರಿಂದ, ಮಹಾರಾಜ! ಪ್ರಪಂಚದಲ್ಲಿರುವ ಸಮಸ್ತಪ್ರಾಣಿ ಗಳಿಗೂ ಅತ್ಯಂತಪ್ರಿಯವಾದುದ್ದೆಂದರೆ ಅವುಗಳಲ್ಲಿರುವ ಆತ್ಮವೇ ಆಗಿದೆ. ಅಂತಹ ಆತ್ಮದ ಸುಪ್ರೀತಿಗಾಗಿಯೇ ಚರಾಚರಾತ್ಮಕವಾದ ಈ ಸಕಲಜಗತ್ತು ನಿರ್ಮಿತವಾಗಿದೆ.

ಅಂತಹ ಸಮಸ್ತಆತ್ಮಗಳಿಗೂ ಶ್ರೀಕೃಷ್ಣನೇ ಆತ್ಮಸ್ವರೂಪನಾಗಿದ್ದಾ ನೆಂದು ತಿಳಿ. ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡುವ ಸಲುವಾಗಿ ಇವನು ಯೋಗಮಾಯೆಯನ್ನಾಶ್ರಯಿಸಿ ದೇಹಧಾರಿಯಾದ ಮಾನವನಂತೆ ಕಾಣಿಸಿ

ಕೊಂಡಿದ್ದಾನೆ. ಶ್ರೀಕೃಷ್ಣನನ್ನು ಯಾರು ಅವನ ನಿಜಸ್ವರೂಪದಿಂದ ತಿಳಿದಿರುವರೋ ಅವನಿಗೆ ಚರಾಚರವಸ್ತುಗಳಿಂದ ಕೂಡಿರುವ ಈ ಜಗತ್ತೂ ಇದಕ್ಕಿಂತಲೂ ಅತಿರಿಕ್ತವಾದ ದೇವರೂಪಗಳೂ–ಎಲ್ಲವೂ ಶ್ರೀಕೃಷ್ಣರೂಪ ವಾಗಿಯೇ ಕಾಣುತ್ತವೆ. ಶ್ರೀಕೃಷ್ಣನನ್ನು ಬಿಟ್ಟು ಬೇರೆ ಯಾವುದೇ ಪ್ರಾಕೃತ ಅಥವಾ ಅಪ್ರಾಕೃತವಸ್ತುಗಳಿಲ್ಲವೆಂದೇ ಅವರು ಭಾವಿಸುತ್ತಾರೆ. ಏಕೆಂದರೆ : ಯಾವ ವಸ್ತುವು ಪರಿಣಾಮವನ್ನು ಪಡೆದು ಸಕಲಭೂತಗಳಿಗೂ ಕಾರಣ ವೆನಿಸಿದೆಯೋ ಅಂತಹ ಪ್ರಕೃತಿಗೆ ಕೂಡ ಶ್ರೀಕೃಷ್ಣನೇ ಮೂಲಕಾರಣನಾ ಗಿರುವುದರಿಂದ ಸರ್ವಾತ್ಮನಾದ ಅವನಿಗಿಂತಲೂ ವಿಶಿಷ್ಟವಾದ ಭಿನ್ನವಾದ ವಸ್ತುವು ಯಾವುದುತಾನೇ ಇದ್ದೀತು? ಹೇಳಿರಿ! ಯಾವ ಮನುಷ್ಯರು ಸತ್ಪುರುಷರಿಗೆ ಆಶ್ರಯವಾದ, ಮುಕುಂದನ ಪಾದಪಲ್ಲವವೆಂಬ ನೌಕೆಯನ್ನು ಆಶ್ರಯಿಸಿರುವರೋ ಅಂತಹವರಿಗೆ ಭವಸಾಗರವೆಂಬುದು ಗೋಷ್ಪಾದದಂತೆ ದಾಟಲು ಬಹಳ ಸುಲಭವಾಗುತ್ತದೆ. ಅಂತಹವರು ಭಗವದನುಗ್ರಹದಿಂದ ಬಹಳ ಶೀಘ್ರವಾಗಿ ಪರಮಪದವನ್ನು ಹೊಂದುತ್ತಾರೆ. ಅಂತಹವರಿಗೆ, ವಿಪತ್ತುಗಳಿಗೆ ನಿವಾಸಸ್ಥಾನವಾದ ಸಂಸಾರವೆಂಬುದಿರುವುದಿಲ್ಲ.

ಪರೀಕ್ಷಿತನೇ! ಶ್ರೀಕೃಷ್ಣನು ಕುಮಾರನಾಗಿದ್ದಾಗ ಮಾಡಿದ ಸಾಹಸ ಕಾರ್ಯವನ್ನು ಗೋಪಾಲಕರು ಅವನು ಪೌಗಂಡಾವಸ್ಥೆಗೆ ಬಂದಾಗ ಹೇಗೆ ಹೇಳಿದರು?–ಎಂದು ನೀನು ಕೇಳಿದೆಯಲ್ಲವೇ? ಆ ಸಂಬಂಧವಾಗಿ ನಡೆದ ಎಲ್ಲ ವಿಷಯಗಳನ್ನೂ ನಿನಗೆ ಹೇಳಿಯಾಗಿದೆ.

**ಏತತ್ಸುಹೃದ್ಭಿಶ್ಚರಿತಂ ಮುರಾರೇ-**
**ರಘಾರ್ದನಂ ಶಾದ್ವಲಜೇಮನಂ ಚ ।**
**ವ್ಯಕ್ತೇತರದ್ರೂಪಮಜೋರ್ವಭಿಷ್ಟವಂ**
**ಶೃಣ್ವನ್ ಗೃಣನ್ನೇತಿ ನರೋಽಖಿಲಾರ್ಥಾನ್ ॥೬೦॥**

ಶ್ರೀಕೃಷ್ಣಭಗವಂತನು ಗೋಪಬಾಲಕರೊಡನೆ ವೃಂದಾವನದಲ್ಲಿ ಆಟವಾಡಿದ್ದು, ಅಘಾಸುರನ ಸಂಹಾರ, ಹಚ್ಚಹಸಿರಾದ ಗರಿಕೆಯ ಹುಲ್ಲಿನ ಮೇಲೆ ಕುಳಿತು ಗೋಪಬಾಲಕರೊಡನೆ ಶ್ರೀಕೃಷ್ಣನು ಭೋಜನಮಾಡಿದ್ದು, ಅಪ್ರಾಕೃತವಾದ ರೀತಿಯಲ್ಲಿ ಕರುಗಳನ್ನೂ ಗೋಪಬಾಲಕರನ್ನೂ ಶ್ರೀಕೃಷ್ಣನು

ಪ್ರಕಟಪಡಿಸಿದ್ದು, ಬ್ರಹ್ಮನು ಮಾಡಿದ ಅದ್ಭುತವಾದ ಶ್ರೀಕೃಷ್ಣಸ್ತೋತ್ರ–ಈ ಪ್ರಸಂಗಗಳನ್ನು ಯಾವನು ಶ್ರದ್ಧೆಯಿಂದ ಕೇಳುವನೋ ಅಥವಾ ಪಠಿಸುವನೋ ಅಂತಹವನಿಗೆ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕುವಿಧ ಪುರುಷಾರ್ಥಗಳೂ ಲಭಿಸುತ್ತವೆ.

ಪರೀಕ್ಷಿತನೇ! ಹೀಗೆ ಶ್ರೀಕೃಷ್ಣ-ಬಲರಾಮರು ಕುಮಾರಾವಸ್ಥೆಯಲ್ಲಿ ಆ ವಯಸ್ಸಿಗೆ ಅನುರೂಪವಾದ ಕಣ್ಣುಮುಚ್ಚಾಲೆ, ಸೇತುಬಂಧನ, ಮರಕೋತಿ–ಇವೇ ಮುಂತಾದ ಆಟಗಳನ್ನು ಆಡುತ್ತಾ ತಮ್ಮ ಕುಮಾರಾವಸ್ಥೆಯನ್ನು ವ್ರಜಭೂಮಿಯಲ್ಲೇ ಕಳೆದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೪ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೧೫ನೆಯ ಅಧ್ಯಾಯ

## ಧೇನುಕಾಸುರನ ಉದ್ಧಾರ : ಕಾಲಿಯನಾಗನ ವಿಷದಿಂದ ಗೋಪಬಾಲಕರನ್ನು ಶ್ರೀಕೃಷ್ಣನು ಬಿಡುಗಡೆಮಾಡಿದುದು

ಶ್ರೀಶುಕರು ಹೇಳುತ್ತಾರೆ :

ತತಶ್ಚ ಪೌಗಣ್ಡವಯಃ ಶ್ರಿತೌ ವ್ರಜೇ
ಬಭೂವತುಸ್ತೌ ಪಶುಪಾಲಸಮ್ಮತೌ ।
ಗಾಶ್ಚಾರಯನ್ತೌ ಸಖಿಭಿಃ ಸಮಂ ಪದೈ-
ರ್ವೃನ್ದಾವನಂ ಪುಣ್ಯಮತೀವ ಚಕ್ರತುಃ ॥೧॥

ಪರೀಕ್ಷಿತಮಹಾರಾಜ! ಶ್ರೀಕೃಷ್ಣ-ಬಲರಾಮರಿಗೆ ಪೌಗಂಡಾವಸ್ಥೆಯು ಪ್ರಾಪ್ತವಾಯಿತು. ಆ ಅವಸ್ಥೆಯನ್ನು ಹೊಂದಿದೊಡನೆಯೇ ಅವರು ಅಧಿಕೃತವಾಗಿ ಗೋಪಾಲಕರಾದರು. ಹಸುಗಳನ್ನು ಕಾಯುವ ಹಕ್ಕು ಅವರಿಗೆ ಸಿಕ್ಕಿತು. ಅವರು ತಮ್ಮ ಗೆಳೆಯರಾದ ಗೋಪಬಾಲಕರೊಡನೆ ಹಸುಗಳನ್ನು ಮೇಯಿಸುತ್ತಾ ವೃಂದಾವನದಲ್ಲಿ ಸಂಚರಿಸುತ್ತಿದ್ದು

ಆ ಪ್ರದೇಶವನ್ನು ತಮ್ಮ ಪಾದಾರವಿಂದಗಳ ಧೂಳಿಯಿಂದ ಪರಮಪವಿತ್ರವನ್ನಾಗಿ ಮಾಡಿಬಿಟ್ಟರು.

ಆ ವೃಂದಾವನವು ಹಸುಗಳು ಮೇಯಲು ಹಚ್ಚಹಸಿರಾದ ಹುಲ್ಲಿನಿಂದ ಸಂಪನ್ನವಾಗಿದ್ದಿತು. ಬಣ್ಣ-ಬಣ್ಣದ ಪುಷ್ಪಗಳಿಂದಲೂ ಸಮಲಂಕೃತವಾಗಿ ದ್ದಿತು. ಮುಂದೆ ಹಸುಗಳು ಹುಲ್ಲುಮೇಯುತ್ತಾ ಹೋಗುತ್ತಿದ್ದುವು. ಅವು ಗಳ ಹಿಂಬದಿಯಲ್ಲಿ ಶ್ರೀಕೃಷ್ಣನು ಕೊಳಲು ನುಡಿಸುತ್ತಾ ಹೋಗುತ್ತಿದ್ದನು. ಶ್ರೀಕೃಷ್ಣನ ಹಿಂದೆ ಬಲರಾಮನಿರುತ್ತಿದ್ದನು. ಅವನ ಹಿಂದೆ ಗೋಪಬಾಲಕರು ಶ್ರೀಕೃಷ್ಣನ ಗುಣಗಾನಮಾಡುತ್ತಾ ಹೋಗುತ್ತಿದ್ದರು. ಹೀಗೆ ಅವರೆಲ್ಲರೂ ಹಸುಗಳನ್ನು ಮುಂದೆಬಿಟ್ಟುಕೊಂಡು ಕ್ರೀಡಿಸುವ ಇಚ್ಛೆಯಿಂದ ವೃಂದಾವನ ವನ್ನು ಪ್ರವೇಶಿಸಿದರು. ಆ ವೃಂದಾವನದಲ್ಲಿ ದುಂಬಿಗಳು ಪುಷ್ಪಗಳ ಮೇಲೆ ಕುಳಿತು ಸುಮಧುರವಾಗಿ ಧ್ವನಿಮಾಡುತ್ತಿದ್ದುವು. ಜಿಂಕೆಗಳು ಗುಂಪು- ಗುಂಪಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಿಹೋಗುತ್ತಿದ್ದುವು. ಸುಂದರವಾದ ಪಕ್ಷಿಗಳು ವೃಕ್ಷಗಳ ಮೇಲೆ ಕುಳಿತು ಚಿಲಿಪಿಲಿಗುಟ್ಟುತ್ತಿದ್ದುವು. ಅಲ್ಲಿ ಮಹಾತ್ಮರ ಮನಸ್ಸಿನಂತೆ ಸ್ವಚ್ಛವಾದ ನೀರಿನಿಂದ ತುಂಬಿದ್ದ ಹಲವಾರು ಸರೋವರಗಳಿದ್ದುವು. ಆ ಸರೋವರಗಳ ಮೇಲಿನಿಂದ ಕಮಲಪುಷ್ಪಗಳ ಸೌರಭವನ್ನು ಹೊತ್ತು ಸುಗಂಧವಾದ ಮತ್ತು ಶೀತಲವಾದ ತಂಗಾಳಿಯು ವೃಂದಾವನವನ್ನು ಸೇವಿಸುತ್ತಿದ್ದಿತು. ಅಂತಹ ಮನೋಹರವಾದ ಚೆಲುವಿನ ಗಣಿಯಾಗಿದ್ದ ವೃಂದಾವನವನ್ನು ನೋಡಿ ಭಗವಂತನು ಅಲ್ಲಿ ವಿಹರಿಸಲು ನಿಶ್ಚಯಿಸಿದನು. ಎಣ್ಣೆಗೆಂಪಿನ ಚಿಗುರುಗಳ ಕಾಂತಿಯಿಂದ ಕೂಡಿ ಫಲ-ಪುಷ್ಪ ಗಳ ಭಾರದಿಂದ ಬಗ್ಗಿದ ರೆಂಬೆಗಳ ವೃಕ್ಷಗಳು ಶ್ರೀಕೃಷ್ಣನ ಪಾದಗಳಿಗೆ ನಮಸ್ಕರಿಸುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಅಂತಹ ನೇತ್ರಾನಂದಕರ ವಾದ ವೃಕ್ಷಗಳನ್ನು ನೋಡಿ ಆದಿದೇವನಾದ ಶ್ರೀಕೃಷ್ಣಪರಮಾತ್ಮನು ಅಣ್ಣನಾದ ಬಲರಾಮನಿಗೆ ಹೇಳಿದನು :

“ದೇವಶಿರೋಮಣಿಯೇ! ಶ್ರೇಷ್ಠರಾದ ದೇವತೆಗಳೂ ನಿನ್ನ ಚರಣ ಕಮಲಗಳನ್ನು ಪೂಜಿಸುವುದೇನೋ ಸರಿ. ಆದರೆ ಅಲ್ಲಿ ನೋಡು. ಈ ವೃಂದಾವನದಲ್ಲಿರುವ ವೃಕ್ಷಗಳು ಕೂಡ ತಮ್ಮ ರೆಂಬೆಗಳ ಮೂಲಕವಾಗಿ ಫಲ-ಪುಷ್ಪಗಳನ್ನು ಹೊತ್ತು ನಿನ್ನ ಚರಣಾರವಿಂದಗಳ ಸೇವೆಮಾಡಲು

ಬಗ್ಗಿ ನಮಸ್ಕರಿಸುತ್ತಿವೆ. ಅವುಗಳು ಇಂತಹ ಸೌಭಾಗ್ಯವನ್ನು ಪಡೆಯುವ ಸಲುವಾಗಿ ಮತ್ತು ನಿನ್ನ ದರ್ಶನಮಾಡಿ ನಿನ್ನ ಲೀಲಾಪ್ರಸಂಗಗಳನ್ನು ಶ್ರವಣ ಮಾಡಿದವರ ಅಜ್ಞಾನವನ್ನು ನಾಶಗೊಳಿಸುವ ಸಲುವಾಗಿ ಈ ಪುಣ್ಯಸ್ಥಳ ವಾದ ವೃಂದಾವನದಲ್ಲಿ ವೃಕ್ಷಗಳಾಗಿ ಹುಟ್ಟಿವೆ. ನಿಶ್ಚಯವಾಗಿಯೂ ಇವುಗಳ ಜೀವನವೇ ಧನ್ಯವಾದುದು. ಆದಿಪುರುಷನೇ! ಯದ್ಯಪಿ ನೀನು ಸಾಮಾನ್ಯಬಾಲಕನ ವೇಷವನ್ನು ಧರಿಸಿ ನಿನ್ನ ದಿವ್ಯರೂಪವನ್ನು ಮರೆಮಾಚಿ ಕೊಂಡಿದ್ದರೂ ನಿನ್ನ ಭಕ್ತಶ್ರೇಷ್ಠರಾದ ಮುನಿಜನರು ತಮ್ಮ ಇಷ್ಟದೈವ ವಾದ ನೀನು ಇಲ್ಲಿರುವುದನ್ನು ಜ್ಞಾನದೃಷ್ಟಿಯಿಂದ ತಿಳಿದು ಪ್ರಾಯಶಃ ದುಂಬಿಗಳ ರೂಪವನ್ನು ಹೊಂದಿ ಲೋಕಪಾವನವಾದ ನಿನ್ನೀ ಯಶಸ್ಸನ್ನು ನಿರಂತರವಾಗಿ ಗಾನಮಾಡುತ್ತಿದ್ದಾರೆ ಮತ್ತು ನಿನ್ನ ದಿವ್ಯನಾಮಗಳನ್ನೂ ಭಜಿಸುತ್ತಲೇ ಇದ್ದಾರೆ. ನೀನು ಗೂಢನಾಗಿದ್ದರೂ ಅವರು ಆತ್ಮದೈವವನ್ನು ಒಂದರೆಕ್ಷಣವಾದರೂ ಬಿಟ್ಟಿರಲಾರರು. ಸ್ತೋತ್ರಮಾಡಲು ಅತ್ಯಂತ ಅರ್ಹನಾದವನೇ! ಅಣ್ಣ! ಅದೋ ನೋಡು. ಈ ನವಿಲುಗಳು ನಿನ್ನನ್ನು ತಮ್ಮ ಮನೆಗೆ ಬಂದುಬಿಟ್ಟಿರುವನೆಂದು ಭಾವಿಸಿ ಆನಂದಾತಿಶಯದಿಂದ ನೃತ್ಯಮಾಡುತ್ತಾ ನಿನ್ನನ್ನು ಆದರಪೂರ್ವಕವಾಗಿ ಸ್ವಾಗತಿಸುತ್ತಿವೆ. ಈ ಹೆಣ್ಣು ಜಿಂಕೆಗಳು ಹರಿಣಾಕ್ಷಿಯರಾದ ಗೋಪಿಯರಂತೆಯೇ ತಮ್ಮ ಪ್ರೇಮ ಪೂರ್ವಕವಾದ ಕಡೆಗಣ್ಣಿನ ನೋಟದಿಂದ ನಿನ್ನ ಮೇಲಿನ ಪ್ರೀತಿಯನ್ನು ಪ್ರಕಟಪಡಿಸುತ್ತಿವೆ. ಈ ಕೋಗಿಲೆಗಳಾದರೋ ತಮ್ಮ ಸುಮಧುರವಾದ 'ಕುಹೂ-ಕುಹೂ'–ಧ್ವನಿಯಿಂದ ನಿನಗೆ ಸ್ವಾಗತಗೀತೆಯನ್ನು ಹಾಡುತ್ತಿವೆ. ಇವೆಲ್ಲವೂ ಅರಣ್ಯದಲ್ಲಿಯೇ ಇದ್ದರೂ ಧನ್ಯತೆಯನ್ನು ಸಾಧಿಸಿವೆ. ಮನೆಗೆ ಬಂದ ಪ್ರಿಯನಾದ ಅತಿಥಿಯನ್ನು ತಮ್ಮಲ್ಲಿರುವ ಅತ್ಯಂತಪ್ರಿಯವಾದ ವಸ್ತುಗಳ ಪ್ರದಾನದಿಂದ ಸ್ವಾಗತಿಸುವುದು ಸತ್ಪುರುಷರ ಸ್ವಭಾವವೇ ಆಗಿದೆ.

ಬಲದೇವ! ಇಂದು ಈ ವೃಂದಾವನದ ಭೂಮಿಯು ಹಚ್ಚಹಸಿರಾದ ಹುಲ್ಲ ನ್ನು ಹೊಂದಿರುವುದರ ಜೊತೆಗೆ ನಿನ್ನ ಚರಣಾರವಿಂದಗಳ ಸ್ಪಶಮಾಡಿ ಧನ್ಯವಾಗಿದೆ. ಇಲ್ಲಿರುವ ಮರ-ಗಿಡ-ಬಳ್ಳಿಗಳು ನಿನ್ನ ಬೆರಳುಗಳ ಸ್ಪರ್ಶ ದಿಂದಲೇ ಧನ್ಯತೆಯನ್ನು ಹೊಂದಿವೆ. ನಿನ್ನ ಕೃಪಾಪೂರ್ಣವಾದ ಅವಲೋಕನ ದಿಂದ ನದೀ-ಪರ್ವತ-ಪಶು-ಪಕ್ಷಿಗಳು ಕೃತಾರ್ಥವಾಗಿವೆ. ಯಾವ ಸುಂದರ

ವಾದ ವಕ್ಷಃಸ್ಥಳವನ್ನು ಸ್ಪರ್ಶಿಸಬೇಕೆಂದು ಲೋಕಮಾತೆಯಾದ ಶ್ರೀಲಕ್ಷ್ಮಿಯು ಅಪೇಕ್ಷಿಸುವಳೋ ಅಂತಹ ನಿನ್ನ ವಕ್ಷಃಸ್ಥಳವನ್ನು ಸ್ಪರ್ಶಿಸಿ ಆಲಿಂಗಿಸಿ ವ್ರಜದ ಗೋಪಿಯರು ಧನ್ಯರಾಗಿರುತ್ತಾರೆ."*

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಶ್ರೀಕೃಷ್ಣನು ಬಲರಾಮನನ್ನು ಸ್ತೋತ್ರಮಾಡುತ್ತಾ ಅತ್ಯಂತ ಸುಂದರವಾಗಿದ್ದ ವೃಂದಾವನವನ್ನು ನೋಡಿ ಆನಂದಭರಿತನಾದನು. ಅವನು ತನ್ನ ಮಿತ್ರರಾದ ಗೋಪಬಾಲಕರೊಡನೆ ಗೋವರ್ಧನಪರ್ವತದ ತಪ್ಪಲುಪ್ರದೇಶಗಳಲ್ಲಿಯೂ ಯಮುನಾನದಿಯ ತೀರಪ್ರದೇಶಗಳಲ್ಲಿಯೂ ಹಸುಗಳನ್ನು ಮೇಯಿಸುತ್ತಾ ಅನೇಕ ಪ್ರಕಾರವಾಗಿ ಕ್ರೀಡಿಸುತ್ತಿದ್ದನು. ಒಂದೆಡೆಯಲ್ಲಿ ಗೋಪಬಾಲಕರು ಹಾಡುಗಳನ್ನು ಕಟ್ಟಿ ಶ್ರೀಕೃಷ್ಣನ ಬಾಲ ಲೀಲೆಗಳನ್ನು ಹಾಡುತ್ತಿದ್ದರು. ಮತ್ತೊಂದೆಡೆಯಲ್ಲಿ ಶ್ರೀಕೃಷ್ಣನು ವನಮಾಲೆ ಯನ್ನು ಧರಿಸಿ ಬಲರಾಮನೊಡನೆ ಹೋಗುತ್ತಿದ್ದನು. ವನಮಾಲೆಯ

---

* **ಗೋಪ್ಯೋಂತರೇಣ ಭುಜಯೋರಪಿ ಯತ್ಸ್ಪೃಹಾ ಶ್ರೀಃ** ।–ಇದು ಈ ಶ್ಲೋಕದ ಕಡೆಯಪಾದ. ಲಕ್ಷ್ಮೀದೇವಿಯು ಕೂಡ ಯಾರ ವಕ್ಷಃಸ್ಥಳದಲ್ಲಿ ನಿರಂತರವಾಗಿ ನೆಲೆಸಲು ಬಯಸುವಳೋ ಅಂತಹ ನಿನ್ನ ವಕ್ಷಃಸ್ಥಳದಿಂದ ಆಲಿಂಗಿಸಲ್ಪಡುವ ಗೋಪಿಯರು ಧನ್ಯರು–ಎಂಬುದು ಇದರ ಅರ್ಥ. ಬಲರಾಮನ ವಕ್ಷಃಸ್ಥಳದಲ್ಲಿ ಲಕ್ಷ್ಮೀದೇವಿಗೆ ಸ್ಥಾನವುಂಟೇ? ಎಂಬುದೇ ಇಲ್ಲಿಯ ಜಿಜ್ಞಾಸೆಗೆ ಕಾರಣವಾಗಿದೆ. ವಿದ್ವಾಂಸರ ಅಭಿಪ್ರಾಯಗಳನ್ನು ಈ ಕೆಳಗೆ ಕೊಡಲಾಗಿದೆ.

೧) ಇಲ್ಲಿ ಬಲರಾಮನ ವಕ್ಷಃಸ್ಥಳಾಲಿಂಗನವು ಲಕ್ಷ್ಮಿಯಿಂದ ಬಯಸಲ್ಪಟ್ಟಂತೆ ಅರ್ಥವಾಗುವುದು. ಇದು ವಿರುದ್ಧವು. ಇದು ಕೃಷ್ಣವಾಕ್ಯವೆಂಬುದರಿಂದ ಕೆಲವರು 'ಶ್ರೀಕೃಷ್ಣನು ಬಲಭದ್ರನನ್ನು ತನ್ನನ್ನಾಗಿಯೇ ಭಾವಿಸಿ ಹೇಳಿದನು'–ಎನ್ನುತ್ತಾರೆ. ಮತ್ತೆ ಕೆಲವರು ಈ ಶ್ಲೋಕವನ್ನೇ ಬಲರಾಮವಾಕ್ಯವೆನ್ನುವರು. ಇದಕ್ಕೆ ತಕ್ಕಂತೆ ಕೆಲವು ಪುಸ್ತಕಗಳಲ್ಲಿ **ಸ್ಮಯನ್ನಿವಾಹಾಗ್ರಜ ಆದಿಪುರುಷಂ**–ಎಂಬ ಪಾಠಾಂತರವೂ ಇದೆ. ಅಲ್ಲದೇ ಈ ಪಕ್ಷದಲ್ಲಿ ವಿಶಿಷ್ಟಶ್ಲೋಕದ ಯಥಾಶ್ರುತಾರ್ಥವು ಕೃಷ್ಣನಲ್ಲಿ ಸಮನ್ವಯವೂ ಆಗುವುದು. ಆದರೆ ಬಹಳ ಮಟ್ಟಿಗೆ ವ್ಯಾಖ್ಯಾತೃಗಳೆಲ್ಲರೂ ಈ ಶ್ಲೋಕವನ್ನು ಕೃಷ್ಣವಾಕ್ಯವಾಗಿಯೇ ಸಮ್ಮತಿಸಿರುವುದರಿಂದಲೂ 'ಏವಂ ವೃನ್ದಾವನಂ ಶ್ರೀಮತ್ಕೃಷ್ಣಃ' ಎಂಬ ಮುಂದಿನ ಶುಕವಾಕ್ಯದಿಂದ ವಿಹಾರಕರ್ತೃತ್ವವು ಶ್ರೀಕೃಷ್ಣ ನಲ್ಲಿಯೇ ತೋರುವುದರಿಂದಲೂ ಪ್ರಕೃತದಲ್ಲಿ ಬಲರಾಮನಿಂದ ಧೇನುಕಾಸುರ

ಮಧುವನ್ನು ಸವಿದು ಬಂದ ಮದಿಸಿದ ದುಂಬಿಗಳು 'ಗುಂಯ್'–ಎಂದು ಹಾಡುತ್ತಿದ್ದುವು. ಅದನ್ನು ಅನುಕರಿಸುತ್ತಾ ಶ್ರೀಕೃಷ್ಣನೂ ದುಂಬಿಗಳಂತೆ ಗುಂಯ್ಯನೆ ಆಲಾಪಿಸುತ್ತಿದ್ದನು. ರಾಜಹಂಸಗಳು ಕೂಗಿದಾಗ ಶ್ರೀಕೃಷ್ಣನು ಅವುಗಳಂತೆಯೇ ಅವುಗಳ ಜೊತೆಯಲ್ಲೇ ಕೂಗುತ್ತಾ ಅವುಗಳನ್ನು ಅಣಕಿಸುವನು. ಮತ್ತೊಮ್ಮೆ ನೃತ್ಯವಾಡುವ ನವಿಲುಗಳೊಡನೆ ತಕ-ತಕನೆ ತಾನೂ ಕುಣಿಯುತ್ತಾ ತನ್ನ ಮಿತ್ರರನ್ನು ಸಂತೋಷಗೊಳಿಸುವನು. ಒಮ್ಮೆ ಬಹಳ ದೂರಕ್ಕೆ ಹೋದ ಹಸುಗಳನ್ನು ಅವುಗಳ ಹೆಸರು ಹಿಡಿದು ಮೇಘದಂತೆ ಗಂಭೀರವಾದ ಧ್ವನಿಯಿಂದಲೂ ಪ್ರೇಮಪುರಸ್ಸರವಾಗಿಯೂ ಕೂಗುವನು. ಅವನ ಆ ಸುಮಧುರಧ್ವನಿಯು ಗೋವುಗಳ ಮತ್ತು ಗೋಪಾಲಬಾಲಕರ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತಿತ್ತು. ಒಮ್ಮೆ ಚಕೋರ, ಕ್ರೌಂಚ, ಹಂಸ, ಚಕ್ರವಾಕ, ಭರದ್ವಾಜ, ನವಿಲು–ಈ ಪಕ್ಷಿಗಳ ಧ್ವನಿಯನ್ನು ಅನುಕರಿಸಿ ಕೂಗುವನು. ಕೆಲವು ವೇಳೆ ಹುಲಿ-ಸಿಂಹಗಳಂತೆ ಗರ್ಜಿಸುವನು.

---

ಸಂಹಾರವು ನಡೆಯಬೇಕಾದ ಸಂದರ್ಭವಿರುವುದರಿಂದಲೂ ಶ್ರೀಕೃಷ್ಣನು ಆ ಬಲರಾಮ ನಲ್ಲಿ ತನ್ನ ಅಂಶವನ್ನು ತೋರಿಸಿ ಆತನನ್ನು ಪ್ರೋತ್ಸಾಹಗೊಳಿಸುವುದಕ್ಕಾಗಿ ಹೀಗೆ ಹೇಳಿದನೆಂಬುದೇ ಯುಕ್ತವಾಗಿ ಕಾಣುವುದು. (ಮೋಟಗಾನಹಳ್ಳಿ ರಾ. ಶಾಸ್ತ್ರಿಗಳ ಸಂಸ್ಕರಣ)

ಶ್ರೀಮದ್ರಾಮಾಯಣದಲ್ಲಿ ಲಕ್ಷ್ಮಣನು ಆದಿಶೇಷನ ಅವತಾರವಾಗಿದ್ದಂತೆಯೇ ವಿಷ್ಣುವಿನ ಅಂಶವೂ ಆಗಿದ್ದನು–ಎಂಬುದು ಶ್ರೀಮದ್ರಾಮಾಯಣದಲ್ಲಿ ಪ್ರಸಿದ್ಧವಾಗಿದೆ. ಹಾಗೆಯೇ ಇಲ್ಲಿ ಬಲರಾಮನು ಸಂಕರ್ಷಣರೂಪಿಯಾಗಿ ಆದಿಶೇಷನ ಅವತಾರ ವಾಗಿದ್ದಂತೆಯೇ ವೈಷ್ಣವಾಂಶಸಂಭೂತನೂ ಆಗಿದ್ದನು. ಪರವಾಸುದೇವನಲ್ಲಿರುವ ಜ್ಞಾನ-ಬಲ - ಐಶ್ವರ್ಯ - ವೀರ್ಯ- ಶಕ್ತಿ - ತೇಜಸ್ಸುಗಳೆಂಬ ಆರು ಗುಣಗಳಲ್ಲಿ ಮೊದಲನೆಯ ಎರಡು ಗುಣಗಳು ಸಂಕರ್ಷಣನಲ್ಲಿವೆಯೆಂದು ಪಾಂಚರಾತ್ರಾಗಮವು ಹೇಳುತ್ತದೆ. ಆದುದರಿಂದ ಬಲರಾಮನಲ್ಲಿಯೇ ವೈಷ್ಣವಾಂಶವಿದೆ. ಆ ಅಂಶದ ದೃಷ್ಟಿಯಿಂದ ಆತನು ಲಕ್ಷ್ಮಿಯ ಅಂಶಕ್ಕೆ ತನ್ನ ವಕ್ಷಃಸ್ಥಳದಲ್ಲಿ ಆಶ್ರಯನಾಗಿ ದ್ದಾನೆ.

ಗೋಪಿ–ಎಂಬ ಪರ್ಯಾಯನಾಮವುಳ್ಳ ಒಂದಾನೊಂದು ಬಳ್ಳಿಯನ್ನು ಅಲಂಕಾರಕ್ಕಾಗಿ ಎದೆಯಲ್ಲಿ ಧರಿಸಿರುವ ಬಲರಾಮನನ್ನು ಕುರಿತು ಹೇಳುತ್ತಾನೆ : ಎಲೈ ಬಲಭದ್ರನೇ! ರಮಾದೇವಿಯಿಂದ ಕೂಡ ಅಪೇಕ್ಷಿಸಲ್ಪಡುವ ನಿನ್ನೆದೆಯನ್ನಪ್ಪುವುದರಿಂದ

ಆ ಗರ್ಜನೆಯಿಂದ ಮೃಗ-ಪಕ್ಷಿಗಳು ಹೆದರುವಂತೆ ತಾನೂ ಹೆದರಿದವನಂತೆ ನಟನೆಮಾಡುವನು. ಕೆಲವು ವೇಳೆ ಬಲರಾಮನು ಆಟವಾಡಿ ಆಯಾಸ ಗೊಂಡು ಶ್ರೀಕೃಷ್ಣನ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು



ಮಲಗು ತ್ತಿದ್ದನು. ಕೆಲವು ಸಮಯಗಳಲ್ಲಿ ಶ್ರೀಕೃಷ್ಣನು ತಾನೇ ಬಲರಾಮನ ಎರಡು ಕಾಲುಗಳನ್ನೂ ಒತ್ತುತ್ತಾ ಗಾಳಿಯನ್ನು ಬೀಸುತ್ತಾ ಅವನ ಆಯಾಸವನ್ನು ಕ್ಷಣಮಾತ್ರದಲ್ಲಿ ಪರಿಹರಿಸುತ್ತಿದ್ದನು. ಒಂದೆಡೆಯಲ್ಲಿ ಗೋಪಬಾಲಕರು ಕುಣಿಯುತ್ತಿದ್ದರು. ಮತ್ತೊಂದೆಡೆಯಲ್ಲಿ ಗುಂಪಾಗಿ ಕುಳಿತು ಹಾಡುತ್ತಿದ್ದರು. ಇನ್ನೊಂದೆಡೆಯಲ್ಲಿ ನೆಗೆದಾಡುತ್ತಿದ್ದರು. ಬೇರೊಂದೆಡೆಯಲ್ಲಿ ಕುಸ್ತಿಗಳನ್ನಾಡುತ್ತಿದ್ದರು. ಅಂತಹ ಕಡೆಗಳಲ್ಲಿ ಬಲರಾಮ-ಕೃಷ್ಣರು ಒಬ್ಬರ

---

ಗೋಪಿಯರೆಂತು ಧನ್ಯರೋ ಅಂತೆಯೇ ಅಲಂಕಾರಗಳಿಗೂ ಅಲಂಕಾರವೆನಿಸುವ ನಿನ್ನೆದೆಯನ್ನಪ್ಪುವುದರಿಂದ ಈ ಗೋಪಿಯೇ (ಬಳ್ಳಿಯೇ) ಭಾಗ್ಯವತಿಯು.

(ಇದು ಶ್ಲೇಷೋಕ್ತಿಯು)

ರಮಾದೇವಿಯು ಶ್ರೀಕೃಷ್ಣನ ವಕ್ಷಃಸ್ಥಳಾಲಿಂಗನವನ್ನು ಬಯಸುವಳೆಂಬ ವಿಷಯ ದಲ್ಲಿ : ಸದಾ ವಕ್ಷಃಸ್ಥಳಸ್ಥಾಪಿ ವೈಕುಣ್ಠೇಶಿತುರಿನ್ದಿರಾ । ಕೃಷ್ಣೋರುಸ್ಪೃಹ ಯಾನ್ಸ್ವೈರೂಪಂ ವಿವೃಣುತೇಽಧಿಕಮ್ । ಪೌರಾಣಿಕಮುಪಾಖ್ಯಾನಮತ್ರ ಸಂಕ್ಷಿಪ್ಯ ಲಿಖ್ಯತೇ। ಶ್ರೀಃ ಪ್ರೇಕ್ಷ್ಯ ಕೃಷ್ಣಸೌನ್ದರ್ಯಂ ತತ್ರ ಲುಬ್ಧಾತತಸ್ತತಃ । ಕುರ್ವನ್ತೀ ಪ್ರಾಹತಾಂ ಕೃಷ್ಣಃ ಕಿಂ ತೇ ತಪಸಿ ಕಾರಣಮ್ ॥ ವಿಜಿಹೀರ್ಷೇ ತ್ವಯಾ ಗೋಷ್ಠೇ

ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ಕುಣಿಯುತ್ತಿದ್ದ, ಹಾಡುತ್ತಿದ್ದ, ನೆಗೆಯುತ್ತಿದ್ದ, ಕುಸ್ತಿಯಾಡುತ್ತಿದ್ದ ಗೋಪಾಲಬಾಲಕರನ್ನು 'ಭಲೇ-ಭಲೇ'– ಎಂದೆನ್ನುತ್ತಾ ಕೇಕೆಹಾಕಿಕೊಂಡು ನಗುತ್ತಾ ಪ್ರೋತ್ಸಾಹಿಸುತ್ತಿದ್ದರು. ಕೆಲವು ಸಮಯದಲ್ಲಿ ಶ್ರೀಕೃಷ್ಣನು ಕೂಡ ಗೋಪಾಲಬಾಲಕರೊಡನೆ ಕುಸ್ತಿಯನ್ನಾಡಿ ಬಳಲುತ್ತಿದ್ದನು. ಅಂತಹ ಸಮಯದಲ್ಲಿ ಶ್ರೀಕೃಷ್ಣನು ಸುಂದರವಾದ ವೃಕ್ಷದಡಿಯಲ್ಲಿ ಚಿಗುರೆಲೆಗಳನ್ನು ಹಾಸಿಕೊಂಡು ಗೊಲ್ಲಬಾಲಕನ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿ ದಣಿವಾರಿಸಿಕೊಳ್ಳುತ್ತಿದ್ದನು. ಆ ಸಮಯದಲ್ಲಿ ಪುಣ್ಯಾತ್ಮರಾದ ಗೋಪಬಾಲಕರು ಮಹಾತ್ಮನಾದ ಶ್ರೀಕೃಷ್ಣನ ಸುಂದರವಾದ ಕಾಲುಗಳನ್ನು ಒತ್ತುತ್ತಿದ್ದರು. ನಿಷ್ಪಾಪರಾದ ಮತ್ತೆ ಕೆಲವರು ಬೀಸಣಿಗೆ ಯಿಂದ ಆತನಿಗೆ ಗಾಳಿಯನ್ನು ಬೀಸುತ್ತಿದ್ದರು. ಸ್ನೇಹಮಗ್ನವಾದ ಮನಸ್ಸಿ ನಿಂದ ಕೂಡಿದ್ದ ಕೆಲವು ಗೋಪಾಲಬಾಲಕರು ಶ್ರೀಕೃಷ್ಣನ ಲೀಲೆಗಳಿಗೆ ಅನುಗುಣವಾದ ಮನೋಜ್ಞವಾದ ಕಿವಿಗಿಂಪಾದ ಗೀತೆಗಳನ್ನು ಅವನ ಸುತ್ತಲೂ ಕುಳಿತು ನಿಧಾನವಾಗಿ ಹಾಡುತ್ತಿದ್ದರು.

ಮಹಾರಾಜ! ಹೀಗೆ ಭಗವಂತನು ತನ್ನ ಯೋಗಮಾಯೆಯಿಂದ ತನ್ನ ಐಶ್ವರ್ಯಮಯವಾದ ಸ್ವರೂಪವನ್ನು ಬಚ್ಚಿಟ್ಟುಕೊಂಡಿದ್ದನು. ಅವನು ಆಡುತ್ತಿದ್ದ ಆಟಗಳೆಲ್ಲವೂ ಗೋಪಬಾಲಕರು ಆಡುತ್ತಿದ್ದ ಆಟಗಳೇ ಆಗಿರುತ್ತಿದ್ದುವು. ಯಾವನ ಚರಣಕಮಲಗಳ ಸೇವೆಯಲ್ಲಿ ಸಾಕ್ಷಾತ್ ಲಕ್ಷ್ಮೀ

---

**ಗೋಪೀ ರೂಪೇತಿ ಸಾಬ್ರವೀತ್ । ತದ್ದುರ್ಲಭಮಿತಿ ಪ್ರೋಕ್ತಾ ಲಕ್ಷ್ಮೀಸ್ತಂ ಪುನರ ಬ್ರವೀತ್ । ಸ್ವರ್ಣರೇಖೇವ ತೇ ನಾಥ ವಸ್ತುಮಿಚ್ಛಾಮಿ ವಕ್ಷಸಿ ॥ ಏವಮಸ್ತ್ವಿತಿ ಸಾ ತಸ್ಯ ತದ್ರೂಪಾ ವಕ್ಷಸಿ ಸ್ಥಿತಾ ॥**

ಲಕ್ಷ್ಮೀದೇವಿಯು ಯಾವಾಗಲೂ ಶ್ರೀಹರಿಯ ವಕ್ಷಃಸ್ಥಳದಲ್ಲೇ ನೆಲೆಸಿರುವವಳಾದರೂ ಒಮ್ಮೆ ಕೃಷ್ಣನ ಸೌಂದರ್ಯವನ್ನು ಕಂಡು ಆಸೆಗೊಂಡು ತಪಸ್ಸುಮಾಡಿದಳು. ತಪಸ್ಸಿಗೆ ಕಾರಣವೇನೆಂದು ಕೃಷ್ಣನು ಪ್ರಶ್ನಿಸಲು–'ಕಾಂತನೇ! ನಿನ್ನೊಡನೆ ಗೋಕುಲದಲ್ಲಿ ಗೋಪೀರೂಪದಿಂದ ಕ್ರೀಡಿಸಲು ಇಚ್ಛಿಸುವೆನು'–ಎಂದು ಹೇಳಿದಳು. ಆಗ ಕೃಷ್ಣನು 'ಪ್ರಿಯೇ! ಅದು ಸಾಧ್ಯವಿಲ್ಲ'–ಎಂದುಬಿಟ್ಟನು. ರಮೆಯು ಪುನಃ ಹೇಳಿದಳು : 'ನಾಥನೇ! ನಿನ್ನ ವಕ್ಷಃಸ್ಥಳದಲ್ಲಿ ಸ್ವರ್ಣರೇಖೆಯಂತೆ ಇರುವೆನು. ಇದಕ್ಕಾದರೂ ಸಮ್ಮತಿಸು.' ಕೃಷ್ಣನು ಸಮ್ಮತಿಸಿದನು. ( ಭಾಗವತಾಮೃತದೀಪಿಕಾ )

ದೇವಿಯೇ ನಿರತಳಾಗಿರುತ್ತಿದ್ದಳೋ ಅಂತಹ ವಿಶ್ವವ್ಯಾಪಕನಾದ ಭಗವಂತನು ಗ್ರಾಮೀಣಬಾಲಕರೊಡನೆ ಗ್ರಾಮ್ಯವಾದ ಆಟಗಳನ್ನು ಅತ್ಯಂತ ಪ್ರೇಮ ದಿಂದಲೂ, ಆನಂದದಿಂದಲೂ ಆಡುತ್ತಿದ್ದನು. ಆದರೂ ಕೆಲವು ವೇಳೆ ಇವನ ಪರಮಾದ್ಭುತವಾದ ಈಶ್ವರೀಮಾಯೆಗಳು ಪ್ರಕಟವಾಗುತ್ತಲೇ ಇದ್ದುವು. ಶ್ರೀದಾಮ ಎಂಬುವವನು ಬಲರಾಮ-ಕೃಷ್ಣರಿಗೆ ಆಪ್ತಸ್ನೇಹಿತನಾಗಿದ್ದನು. ಒಂದು ದಿನ ಶ್ರೀದಾಮ, ಸುಬಲ, ಚಿಕ್ಕಕೃಷ್ಣ ಇವರು ಪ್ರೇಮಪೂರ್ವಕವಾಗಿ ಬಲರಾಮ-ಕೃಷ್ಣರಿಗೆ ಹೇಳಿದರು :

"ಮಹಾಬಾಹುವಾದ ಬಲರಾಮನೇ! ದುಷ್ಟನಾಶಕನಾದ ಶ್ರೀಕೃಷ್ಣನೇ! ಇಲ್ಲಿಗೆ ಸ್ವಲ್ಪ ದೂರದಲ್ಲಿಯೇ ತಾಳೆಯ ಮರಗಳಿಂದ ತುಂಬಿ ರುವ ಒಂದು ದೊಡ್ಡ ಅರಣ್ಯವಿದೆ. ಅಲ್ಲಿ ಹಲವಾರು ಪಕ್ವವಾದ ತಾಳೆಯ ಹಣ್ಣುಗಳು ಮರಗಳಿಂದ ಕೆಳಕ್ಕೆ ಬಿದ್ದಿವೆ. ಇನ್ನೂ ಬೀಳುತ್ತಲೂ ಇವೆ. ಆದರೆ ಅಲ್ಲಿಯೇ ಇರುವ ದುರಾತ್ಮನಾದ ಧೇನುಕಾಸುರನು ಆ ಹಣ್ಣುಗಳನ್ನು ಬೇರೆಯವರಾರೂ ತೆಗೆದುಕೊಳ್ಳಲು ಸಾಧ್ಯವಾಗದಂತೆ ತಡೆಯುತ್ತಿದ್ದಾನೆ. ಬಲರಾಮ-ಕೃಷ್ಣರೇ! ಆ ದೈತ್ಯನು ಕತ್ತೆಯ ರೂಪವನ್ನು ಧರಿಸಿ ಯಾವಾಗಲೂ ಅಲ್ಲಿಯೇ ಇರುತ್ತಾನೆ. ಅವನು ಮಹಾಬಲಿಷ್ಠನು. ಅವನಂತೆಯೇ ಇನ್ನೂ ಹಲವಾರು ಬಲಿಷ್ಠರಾದ ಮತ್ತು ಅವನ ಜ್ಞಾತಿಗಳಾದ ದೈತ್ಯರು ಕತ್ತೆಗಳ ರೂಪವನ್ನೇ ಧರಿಸಿ ಅವನ ಜೊತೆಯಲ್ಲಿದ್ದಾರೆ. ಕ್ರೂರಿ ಯಾದ ಆ ದೈತ್ಯನು ತನ್ನ ಸಂಗಡಿಗರೊಡನೆ ಇದುವರೆಗೆ ಎಷ್ಟು ಜನರನ್ನು ತಿಂದುಹಾಕಿದ್ದಾನೆಂಬುದನ್ನು ನಾವರಿಯೆವು. ಈಗಂತೂ ಮರಣಭಯ ದಿಂದಾಗಿ ಯಾವ ಮನುಷ್ಯರೂ ಅಲ್ಲಿಗೆ ಹೋಗುತ್ತಿಲ್ಲ. ಮನುಷ್ಯರು ಮಾತ್ರ ವಲ್ಲ ; ಪಶು-ಪಕ್ಷಿಗಳು ಕೂಡ ಆ ಅರಣ್ಯದ ಕಡೆಗೆ ಕಣ್ಣೆತ್ತಿಯೂ ನೋಡು ತ್ತಿಲ್ಲ. ತಾಳೆಯ ಫಲವಂತೂ ಸುವಾಸನೆಯಿಂದ ಘಮಘಮಿಸುತ್ತಿದೆ. ಆದರೆ ನಾವು ಇದುವರೆಗೆ ಅದರ ರುಚಿಯನ್ನು ಸವಿದಿಲ್ಲ. ನಾಲ್ಕು ದಿಕ್ಕುಗಳಲ್ಲಿಯೂ ಅದರ ಸುಗಂಧವು ಪ್ರಸರಿಸುತ್ತಿದೆ. ಸ್ವಲ್ಪ ಮನಸ್ಸಿಟ್ಟು ಗಮನಿಸಿದರೆ ಅದರ ಮಾಧುರ್ಯವನ್ನು ಅರಿಯಬಹುದು. ಕೃಷ್ಣ! ಅದರ ವಾಸನೆಯಿಂದಲೇ ಬಹಳವಾಗಿ ಆಕರ್ಷಿತರಾಗಿರುವ ನಮಗೆ ಹೇಗಾದರೂ ಮಾಡಿ ಆ ಹಣ್ಣುಗಳನ್ನು ತಂದುಕೊಡು. ಬಲರಾಮ! ಅವುಗಳನ್ನು ಪಡೆದುಕೊಳ್ಳ

ಬೇಕೆಂದು ನಮಗೆ ತುಂಬಾ ಆಸೆಯಾಗಿಬಿಟ್ಟಿದೆ. ನಿನಗೆ ಉಚಿತವೆನಿಸಿದರೆ ಈಗಲೇ ಅಲ್ಲಿಗೆ ಹೋಗಿ ನಮ್ಮ ಮನೋರಥವನ್ನು ನೆರವೇರಿಸಿಕೊಡಪ್ಪಾ."

ಪರೀಕ್ಷಿತಮಹಾರಾಜ! ತಮ್ಮ ಸ್ನೇಹಿತರಾದ ಗೋಪಬಾಲಕರು ಪರಮಪ್ರೇಮದಿಂದ ಹೇಳಿದ ಈ ಮಾತನ್ನು ಹೇಳಿ ಅವರಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಬಲರಾಮ-ಕೃಷ್ಣರು ತಮ್ಮ ಗೆಳೆಯರೊಡನೆ ತಾಳೆವನಕ್ಕೆ ಹೋದರು. ಅಲ್ಲಿಗೆ ಹೋದನಂತರ ಬಲರಾಮನು ತನ್ನ ತೋಳುಗಳಿಂದ ತಾಳೆಯ ಮರವನ್ನು ಬಿಗಿದಪ್ಪಿ ಚಿಕ್ಕ ಆನೇಮರಿಯಂತೆ ತಾಳೆಯಮರವನ್ನು ಅತ್ಯಂತ ರಭಸದಿಂದ ಅಲ್ಲಾಡಿಸಿದನು. ನೂರಾರು ಹಣ್ಣುಗಳು ತೊಪ-ತೊಪನೆ ಕೆಳಕ್ಕೆಬಿದ್ದುವು. ಕತ್ತೆಯ ರೂಪದಲ್ಲಿದ್ದ ದೈತ್ಯನು ತಾಳೆಯ ಹಣ್ಣುಗಳು ಬೀಳುತ್ತಿರುವ ಶಬ್ದವನ್ನು ಕೇಳಿದೊಡನೆಯೇ ಪರ್ವತದಿಂದ ಕೂಡಿದ ಪೃಥ್ವಿಯನ್ನೇ ನಡುಗಿಸುತ್ತಾ ಅಲ್ಲಿಗೆ ಧಾವಿಸಿದನು. ಕತ್ತೆಯ ರೂಪದಲ್ಲಿದ್ದ ಆ ಧೇನುಕರಾಕ್ಷಸನು ಮಹಾಬಲಿಷ್ಠನಾಗಿದ್ದನು. ತಾಳೆಯ ಮರವನ್ನು ಅಲ್ಲಾಡಿಸುತ್ತಿದ್ದ ಬಲರಾಮನ ಮುಂದೆ ಹಿಮ್ಮುಖವಾಗಿ ನಿಂತು ತನ್ನ ಹಿಂಬದಿಯ ಎರಡು ಕಾಲುಗಳಿಂದಲೂ ಬಲರಾಮನ ವಕ್ಷಃಸ್ಥಳಕ್ಕೆ ಪ್ರಹರಿಸಿ ಕತ್ತೆಯಂತೆಯೇ ಕಿರುಚುತ್ತಾ ಅಲ್ಲಿಂದ ಹಿಂದಕ್ಕೆ ಸರಿದು ನಿಂತನು. ಕತ್ತೆಯ ರೂಪದಲ್ಲಿದ್ದ ಆ ಧೇನುಕಾಸುರನು ಅತ್ಯಂತ ಕ್ರುದ್ಧನಾಗಿ ಕತ್ತೆಯಂತೆಯೇ ಕಿರುಚುತ್ತಾ ಬಲರಾಮನ ಬಳಿಗೆ ಹೋಗಿ ಹಿಂದು-ಮುಂದಾಗಿ ನಿಂತು ತನ್ನ ಹಿಂದಿನ ಎರಡು ಕಾಲುಗಳಿಂದಲೂ ಪುನಃ ಬಲರಾಮನನ್ನು ಝಾಡಿಸಿ ಒದ್ದನು. ಇದರಿಂದ ಕುಪಿತನಾದ ಬಲರಾಮನು ಒಂದೇ ಕೈಯಿಂದ ಆ ಧೇನುಕಾಸುರನ ಎರಡು ಕಾಲುಗಳನ್ನೂ ಹಿಡಿದುಕೊಂಡು ಗರ-ಗರನೆ ತಿರುಗಿಸಿ ತಾಳೆಯ ಮರದ ಮೇಲಕ್ಕೆಸೆದನು. ಹಾಗೆ ಗರ-ಗರನೆ ತಿರುಗಿಸುತ್ತಿರುವಾಗಲೇ ರಾಕ್ಷಸನ ಪ್ರಾಣಪಕ್ಷಿಯು ಹಾರಿಹೋಗಿದ್ದಿತು. ತಾಳೇಮರದ ಮೇಲ್ಭಾಗವು ಅಸಂಖ್ಯಾತವಾದ ಗರಿಗಳಿಂದಲೂ, ಫಲಗಳಿಂದಲೂ ಕೂಡಿದ್ದು ಅತಿಸ್ಥೂಲವಾಗಿದ್ದಿತು. ಬಲರಾಮನಿಂದ ಎಸೆಯಲ್ಪಟ್ಟ ಧೇನುಕಾಸುರನು ಅದರ ಮೇಲೆ ಬಿದ್ದೊಡನೆಯೇ ತಾಳೇಮರವೂ ತೂರಾಡುತ್ತಾ ಕೆಳಕ್ಕೆ ಬಿದ್ದುಹೋಯಿತು. ಹಾಗೆ ಬೀಳುವಾಗ ಅದರ ಪಕ್ಕದಲ್ಲಿದ್ದ ತಾಳೆಯ

ಮರದ ಮೇಲೆ ಬಿದ್ದು ಅದನ್ನೂ ಕೆಳಕ್ಕೆ ಕೆಡವಿತು. ಪಕ್ಕದ ಮರವು ಬೀಳುವಾಗ ಅದರ ಪಕ್ಕದ ಮರದ ಮೇಲೆ ಬಿದ್ದು ಅದನ್ನೂ ಕೆಳಕ್ಕೆ ಕೆಡವಿತು. ಪಕ್ಕದ ಮರವು




ಬೀಳುವಾಗ ಅದರ ಪಕ್ಕದ ಮರದ ಮೇಲೆ ಬಿದ್ದು ಅದನ್ನೂ ಕೆಡವಿ ತಾನೂ ಬಿದ್ದಿತು. ಹೀಗೆ ಒತ್ತಾಗಿ ಬೆಳೆದಿದ್ದ ನೂರಾರು ತಾಳೇ ಮರಗಳು ಒಂದರ ಹಿಂದೆ ಮತ್ತೊಂದರಂತೆ ಕೆಳಕ್ಕುರುಳಿದುವು. ಬಲರಾಮನಿಗೆ ಇದೊಂದು ಲೀಲೆಯಾಗಿತ್ತು. ಆದರೆ ಇವನಿಂದ ಎಸೆಯಲ್ಪಟ್ಟ ಧೇನುಕಾಸುರನ ಪ್ರಹಾರದಿಂದ ಹಲವಾರು ತಾಳೇ ಮರಗಳು ಸುಂಟರಗಾಳಿಯ ಬಡಿತಕ್ಕೆ ಸಿಕ್ಕಿದಂತೆ ಬುಡಮೇಲಾಗಿ ಕೆಳಗುರುಳಿದುವು.

ಪರೀಕ್ಷಿತ! ಅನಂತಾವತಾರನಾದ ಬಲರಾಮನು ಸಾಕ್ಷಾತ್ ಜಗದೀಶ್ವರನೇ ಸರಿ. ಅವನಲ್ಲಿ ಈ ಜಗತ್ತು ಬಟ್ಟೆಯಲ್ಲಿ ದಾರವು ಹಾಸುಹೊಕ್ಕಾಗಿರುವಂತೆ ಹೆಣೆದುಕೊಂಡಿದೆ. ಅಂತಹವನು ಧೇನುಕಾಸುರನನ್ನು ತೃಣಕ್ಕೆ ಸಮಾನವಾಗಿ ಕಂಡುದುದರಲ್ಲಿ ಆಶ್ಚರ್ಯವೇನಿದೆ? ಹೀಗೆ ಧೇನುಕಾಸುರನ ವಧೆಯಾದ ಬಳಿಕ ಅವನ ಜ್ಞಾತಿ-ಬಾಂಧವರೆಲ್ಲರೂ ಅತ್ಯಂತ ಕುಪಿತರಾಗಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಾ ರಾಮ-ಕೃಷ್ಣರನ್ನು ರಭಸದಿಂದ ಆಕ್ರಮಿಸಿದರು. ತಮ್ಮ ಬಳಿಗೆ ಬಂದ ಕತ್ತೆಯ ರೂಪದ ರಾಕ್ಷಸರೆಲ್ಲರನ್ನೂ ರಾಮ-ಕೃಷ್ಣರು ಅವುಗಳ ಹಿಂಗಾಲುಗಳನ್ನು ಹಿಡಿದು ಒಬ್ಬೊಬ್ಬರನ್ನಾಗಿ ಗರ-ಗರನೆ ತಿರುಗಿಸುತ್ತಾ ತಾಳೇಮರದ ಮೇಲಕ್ಕೆ ಎಸೆಯತೊಡಗಿದರು.

ರಾಮ-ಕೃಷ್ಣರ ಈ ಸಾಹಸಕಾರ್ಯದಿಂದಾಗಿ ತಾಳೇಮರಗಳಲ್ಲಿದ್ದ ಹಣ್ಣುಗಳೆಲ್ಲಾ ಕೆಳಕ್ಕೆ ಉದುರಿದುವು. ಅವುಗಳ ಜೊತೆಯಲ್ಲಿಯೇ ಪ್ರಾಣ ಗಳನ್ನು ಕಳೆದುಕೊಂಡು ಧೇನುಕಾಸುರನ ಅನುಯಾಯಿಗಳೂ ಭೂಮಿಯ ಮೇಲೆ ಬಿದ್ದರು. ಮೋಡಗಳಿಂದ ವ್ಯಾಪ್ತವಾದ ಆಕಾಶದಂತೆ ಹಣ್ಣು ಗಳಿಂದಲೂ ರಾಕ್ಷಸರ ಮೃತಶರೀರಗಳಿಂದಲೂ ವ್ಯಾಪ್ತವಾಗಿದ್ದ ಆ ಮಹಾರಣ್ಯವು ಬಹಳವಾಗಿ ಶೋಭಿಸಿತು. ರಾಮ-ಕೃಷ್ಣರ ಇಂತಹ ಸಾಹಸ ಕಾರ್ಯವನ್ನು ನೋಡಿ ದೇವತೆಗಳು ರಾಮ-ಕೃಷ್ಣರ ಮೇಲೆ ಪೂಮಳೆಗರೆದು ಸ್ತುತಿಸಿದರು. ಭೇರೀ-ಮೃದಂಗಗಳು ಮೊಳಗಿದುವು. ಧೇನುಕಾಸುರನ ಸಂಹಾರವಾದನಂತರ ಆ ಅರಣ್ಯದಲ್ಲಿ ಮಾನವರು ಯಾವ ವಿಧವಾದ ಭಯವೂ ಇಲ್ಲದೆ ತಾಳೆಯ ಹಣ್ಣುಗಳನ್ನು ಭಕ್ಷಿಸತೊಡಗಿದರು. ಹಸುಗಳೂ ಯಾವ ವಿಧವಾದ ಆತಂಕವೂ ಇಲ್ಲದೆ ಹುಲ್ಲುಮೇಯತೊಡಗಿದುವು. ಯಾವನ ಲೀಲೆಗಳ ಶ್ರವಣವೂ ಕೀರ್ತನವೂ ಅತ್ಯಂತಪುಣ್ಯಕರವೋ ಅಂತಹ ಕಮಲಲೋಚನನಾದ ಭಗವಾನ್ ಶ್ರೀಕೃಷ್ಣನು ತನ್ನ ಅಗ್ರಜನೊಡನೆ ಗೋಪಬಾಲಕರಿಂದ ಸ್ತುತಿಸಲ್ಪಡುತ್ತಾ ವ್ರಜಕ್ಕೆ ತೆರಳಿದನು.

ಆ ಸಮಯದಲ್ಲಿ ಶ್ರೀಕೃಷ್ಣನ ಮುಂಗುರುಳು ಗೋಧೂಲಿಯಿಂದ ಮಲಿನವಾಗಿದ್ದಿತು. ಆದರೂ ಅದು ನವಿಲುಗರಿಯಿಂದ ಅಂದಗೊಳಿಸಲ್ಪಟ್ಟಿ ದ್ದಿತು. ಕಾಡುಹೂಗಳ ಮಾಲೆಯಿಂದ ಶ್ರೀಕೃಷ್ಣನು ಸಮಲಂಕೃತನಾಗಿದ್ದನು. ಅವನ ಕಡೆಗಣ್ಣಿನ ನೋಟವೂ ಹುಸಿನಗೆಯೂ ಸುಮಧುರ-ಮಧುರ ವಾಗಿದ್ದು ವೀಕ್ಷಕರ ಕಣ್ಮನಗಳೆರಡನ್ನೂ ಅಪಹರಿಸುತ್ತಿದ್ದುವು. ಕರ್ಣಾನಂದ ಕರವಾಗಿ ಆತನು ಕೊಳಲನ್ನು ಊದುತ್ತಿದ್ದನು. ಇವನ ಗೆಳೆಯರೆಲ್ಲರೂ ಆತನ ಲೀಲಾಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕೃಷ್ಣನನ್ನು ನೋಡುವ ಕಾತುರದಿಂದ ಕೂಡಿದ್ದ ಗೋಪಿಯರೆಲ್ಲರೂ ವೇಣುಗಾನವನ್ನು ಕೇಳುತ್ತಲೇ ಸಾಮೂಹಿಕವಾಗಿ ನೇತ್ರಾನಂದಕರನಾದ ಶ್ರೀಕೃಷ್ಣನನ್ನು ನೋಡಲು ಮನೆಗಳಿಂದ ಹೊರಬಂದರು. ಒಡನೆಯೇ ಗೋಪಿಯರು ತಮ್ಮ ಕಣ್ಣುಗಳೆಂಬ ದುಂಬಿಗಳಿಂದ ಶ್ರೀಕೃಷ್ಣನ ಮುಖಾರವಿಂದದ ಮಧುವನ್ನು ಪಾನಮಾಡಿ ಹಗಲೆಲ್ಲಾ ಕಾಣದೆ ವಿರಹದಿಂದುಂಟಾಗಿದ್ದ ತಾಪವನ್ನು ಕಳೆದು ಕೊಂಡರು. ಶ್ರೀಕೃಷ್ಣನು ಕೂಡ ಅವರ ಲಜ್ಜೆಯಿಂದ ಕೂಡಿದ ಹುಸಿನಗೆಯ

ಮತ್ತು ವಿನಯದಿಂದ ಕೂಡಿದ ಕಟಾಕ್ಷವೀಕ್ಷಣದ ಸತ್ಕಾರವನ್ನು ಸ್ವೀಕರಿಸಿ ವ್ರಜವನ್ನು ಪ್ರವೇಶಿಸಿದನು.

ಪುತ್ರವತ್ಸಲೆಯರಾದ ಯಶೋದಾ-ರೋಹಿಣಿಯರು ತಮ್ಮ ಇಬ್ಬರು ಮಕ್ಕಳಿಗೂ ಅವರ ಇಚ್ಛೆಗೆ ಅನುಸಾರವಾಗಿ ಸಮಯಕ್ಕೆ ಅನುಗುಣವಾಗಿ ಅವರಿಗೆ ಬೇಕುಬೇಕಾದ ವಸ್ತುಗಳನ್ನು ಸಿದ್ಧಪಡಿಸಿದರು. ಕಾಡಿನಲ್ಲೆಲ್ಲಾ ಅಲೆದು ಆಯಾಸಗೊಂಡಿದ್ದ ಮಕ್ಕಳಿಗೆ ಎಣ್ಣೆಯ ಮಜ್ಜನವನ್ನು ಮಾಡಿಸಿ ಕೈಕಾಲುಗಳನ್ನು ಚೆನ್ನಾಗಿ ನೀವಿ ನೀರೆರೆದು ಸ್ನಾನಮಾಡಿಸಿದರು. ಅನಂತರ ಅವರಿಗೆ ಸುಂದರವಾದ ಬಟ್ಟೆಗಳನ್ನುಡಿಸಿ ಪುಷ್ಪಹಾರವನ್ನು ಕೊರಳಿಗೆ ಹಾಕಿ ಚಂದನವನ್ನು ಮೈಗೆಲ್ಲಾ ಪೂಸಿದರು. ಬಳಿಕ ಯಶೋದಾ-ರೋಹಿಣಿಯರು ತಮ್ಮ ಮಕ್ಕಳನ್ನು ಮುದ್ದಿಸುತ್ತಾ ಶುಚಿ-ರುಚಿಯಾದ ಮೃಷ್ಟಾನ್ನವನ್ನು ಅವರಿಗೆ ತಿನ್ನಿಸಿ ಸುಖಕರವಾದ ಹಾಸಿಗೆಗಳಲ್ಲಿ ಅವರನ್ನು ಮಲಗಿಸಿದರು. ರಾಮ ಮತ್ತು ಶ್ಯಾಮರು ಆರಾಮವಾಗಿ ನಿದ್ರಿಸಿದರು.

ಪರೀಕ್ಷಿತಮಹಾರಾಜ! ಹೀಗೆ ಶ್ರೀಕೃಷ್ಣನು ವೃಂದಾವನದಲ್ಲಿ ಅನೇಕ ಪ್ರಕಾರವಾದ ಲೀಲೆಗಳನ್ನು ತೋರುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಂದುದಿನ ಶ್ರೀಕೃಷ್ಣನು ತನ್ನ ಗೆಳೆಯರೊಡನೆ ಯಮುನಾನದಿಯ ತೀರಕ್ಕೆ ಹೋದನು.

ಅಂದು ಬಲರಾಮನು ಅವರ ಜೊತೆಯಲ್ಲಿರಲಿಲ್ಲ. ಆ ಸಮಯದಲ್ಲಿ ಗೋ-ಗೋಪಾಲಕರು ಬೇಸಿಗೆಯ ಬಿಸಿಲಿನಿಂದ ಬಳಲಿ ಬಾಯಾರಿದ್ದು ಅವರ ಗಂಟಲು ಒಣಗಿಹೋಗಿದ್ದಿತು. ಇದರಿಂದಾಗಿ ಅವರು ಯಮುನಾನದಿಯ ನೀರನ್ನು ಯಥೇಚ್ಛವಾಗಿ ಕುಡಿದುಬಿಟ್ಟರು. ಆದರೆ ಅದು ವಿಷಮಿಶ್ರಿತವಾಗಿದ್ದಿತು. ದುರದೃಷ್ಟವಶಾತ್ ಈ ವಿಷಯವು ಅವರಿಗೆ ತಿಳಿದಿರಲಿಲ್ಲ. ಬಾಯಾರಿಕೆಯ ಸಂಕಟದಿಂದ ಆ ನೀರನ್ನು ಕುಡಿದೊಡನೆಯೇ ಗೋ-ಗೋಪಾಲಕರೆಲ್ಲರೂ ಗತಪ್ರಾಣರಾಗಿ ಯಮುನಾನದಿಯ ತೀರದಲ್ಲಿ ಬಿದ್ದುಬಿಟ್ಟರು. ಅವರು ಯಮುನಾತೀರದಲ್ಲಿ ಮೃತರಾಗಿ ಬಿದ್ದಿರುವುದನ್ನು ನೋಡಿದೊಡನೆಯೇ ಯೋಗೇಶ್ವರರೆಲ್ಲರಿಗೂ ಈಶ್ವರನಾದ ಶ್ರೀಕೃಷ್ಣಪರಮಾತ್ಮನು ಅಮೃತವನ್ನು ಸುರಿಸುತ್ತಿದ್ದ ತನ್ನ ನೋಟದಿಂದಲೇ, ತನ್ನನ್ನೇ ನಾಥನನ್ನಾಗಿ ನಂಬಿದ್ದ ಆ ಗೋ-ಗೋಪಾಲಕರೆಲ್ಲರನ್ನೂ ಬದುಕಿಸಿಬಿಟ್ಟನು.

ಮಹಾರಾಜ! ಸ್ಮೃತಿಯು ಬಂದೊಡನೆಯೇ ಗೋವಳರು ಮೇಲೆದ್ದು ಆಶ್ಚರ್ಯಚಕಿತರಾಗಿ ಒಬ್ಬರು ಮತ್ತೊಬ್ಬರನ್ನು ಪರಸ್ಪರವಾಗಿ ನೋಡಿ ಕೊಂಡರು. ತಮ್ಮ-ತಮ್ಮಲ್ಲಿಯೇ ವಿಚಾರವಿನಿಮಯಮಾಡಿಕೊಂಡು ಈ ನಿಶ್ಚಯಕ್ಕೆ ಬಂದರು.

"ನಾವೆಲ್ಲರೂ ವಿಷದಿಂದ ಮಿಶ್ರಿತವಾದ ನೀರನ್ನು ಕುಡಿದು ಪರಲೋಕಯಾತ್ರೆಯನ್ನೇ ಮಾಡಿಬಿಟ್ಟಿದ್ದೆವು. ಆದರೆ ದಯಾಮಯನಾದ ನಮ್ಮ ಕೃಷ್ಣಸ್ವಾಮಿಯು ನಮ್ಮೆಲ್ಲರನ್ನೂ ತನ್ನ ಅನುಗ್ರಹಪೂರ್ಣವಾದ ದೃಷ್ಟಿಯಿಂದ ನೋಡಿ ಬದುಕಿಸಿದ್ದಾನೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೫ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೧೬ನೆಯ ಅಧ್ಯಾಯ

## ಕಾಳಿಯನ ಮೇಲೆ ಕೃಪೆತೋರಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ವಿಲೋಕ್ಯ ದೂಷಿತಾಂ ಕೃಷ್ಣಾಂ ಕೃಷ್ಣಃ ಕೃಷ್ಣಾಹಿನಾ ವಿಭುಃ ।**
**ತಸ್ಯಾ ವಿಶುದ್ಧಿಮನ್ವಿಚ್ಛನ್ಸರ್ಪಂ ತಮುದವಾಸಯತ್ ॥೧॥**

"ಮಹಾರಾಜ! ಕಾಳಿಯನಾಗನು ಯಮುನಾನದಿಯ ನೀರನ್ನು ವಿಷಭರಿತವನ್ನಾಗಿ ಮಾಡಿಬಿಟ್ಟಿರುವನೆಂಬ ವಿಷಯವನ್ನು ಶ್ರೀಕೃಷ್ಣನು ತಿಳಿದುಕೊಂಡನು. ಯಮುನಾನದಿಯ ನೀರನ್ನು ಶುದ್ಧಗೊಳಿಸಲು ಶ್ರೀಕೃಷ್ಣನು ಕಾಳಿಯನಾಗನನ್ನು ಅಲ್ಲಿಂದ ಓಡಿಸಿಬಿಟ್ಟನು."

ಪರೀಕ್ಷಿತನು ಪ್ರಶ್ನಿಸುತ್ತಾನೆ :

"ವಿಪ್ರರ್ಷಿಯೇ! ಯಮುನೆಯ ಅಗಾಧವಾದ ನೀರಿನಲ್ಲಿದ್ದ ಕಾಳಿಯ ಸರ್ಪವನ್ನು ಶ್ರೀಕೃಷ್ಣನು ಹೇಗೆ ದಮನಮಾಡಿದನು? ಕಾಳಿಯಸರ್ಪವು ಜಲಚರಪ್ರಾಣಿಯಲ್ಲ. ಹಾಗಿದ್ದರೂ ಅದು ಅನೇಕ ಯುಗಗಳಿಂದ ಅಲ್ಲಿ ಹೇಗೆ ವಾಸವಾಗಿದ್ದಿತು ಮತ್ತು ಏಕೆ ವಾಸವಾಗಿದ್ದಿತು?–ಈ ವಿಷಯವನ್ನು ದಯ

ಮಾಡಿ ಹೇಳಿರಿ. ಬ್ರಾಹ್ಮಣಶ್ರೇಷ್ಠರೇ! ಪರಬ್ರಹ್ಮಸ್ವರೂಪನೂ, ತನ್ನ ಇಷ್ಟಾನುಸಾರವಾಗಿ ವರ್ತಿಸುವವನೂ ಆದ ಶ್ರೀಕೃಷ್ಣನು ಗೋಪಾಲರೂಪ ದಿಂದ ನಡೆಸಿದ ಅದ್ಭುತಲೀಲಾಮೃತವನ್ನು ಎಷ್ಟು ಕುಡಿದರೆ ತಾನೇ ತೃಪ್ತಿ ಯುಂಟಾಗುತ್ತದೆ? ಎಷ್ಟು ಕುಡಿದರೂ ಇನ್ನೂ ಕುಡಿಯುತ್ತಲೇ ಇರ ಬೇಕೆನ್ನಿಸುತ್ತದೆ.”

ಶ್ರೀಶುಕರು ಹೇಳುತ್ತಾರೆ :

“ಮಹಾರಾಜ! ಯಮುನಾನದಿಯಲ್ಲಿ ಕಾಳಿಯನಾಗಕ್ಕೆ ನೆಲೆಯಾದ ಒಂದು ಕುಂಡವಿದ್ದಿತು. ಅದರ ನೀರು ಸರ್ಪದ ವಿಷವೆಂಬ ಅಗ್ನಿಯಿಂದ ಕುದಿಯುತ್ತಿದ್ದಿತು. ಆ ಕುಂಡದ ಮೇಲೆ ಹಾರಿಕೊಂಡು ಬಂದ ಪಕ್ಷಿಗಳು ವಿಷದ ಬೇಗೆಯನ್ನು ತಾಳಲಾರದೆ ಕುಂಡದಲ್ಲೇ ಬಿದ್ದುಬಿಡುತ್ತಿದ್ದುವು. ಅಲೆ ಗಳ ಮೂಲಕವಾಗಿ ಹೊರಬಂದ ತುಂತುರುಗಳಿಂದ ಕೂಡಿದ ವಿಷದ ಗಾಳಿಯು ತೀರಪ್ರದೇಶದಲ್ಲಿ ಬೀಸಿ ಅಲ್ಲಿದ್ದ ಮರ-ಬಳ್ಳಿಗಳು ಸುಟ್ಟುಹೋಗಿ ಪಶು-ಪಕ್ಷಿಗಳು ಮರಣಹೊಂದುತ್ತಿದ್ದುವು. ದುಷ್ಟರ ದಮನಕ್ಕಾಗಿಯೇ ಅವತರಿಸಿದ್ದ ಭಗವಂತನು ಸರ್ಪದ ವಿಷವು ಪ್ರಚಂಡವಾಗಿರುವುದೆಂಬು ದನ್ನೂ ಭಯಂಕರವಾದ ಆ ವಿಷವೇ ಕಾಳಿಯಸರ್ಪದ ಬಲವಾಗಿರುವು ದೆಂಬುದನ್ನೂ ಮತ್ತು ತಾನು ವಿಹರಿಸುವ ಯಮುನೆಯೂ ಸರ್ಪದ ವಿಷ ದಿಂದ ದೂಷಿತವಾಗಿರುವುದೆಂಬುದನ್ನೂ ತಿಳಿದುಕೊಂಡನು. ಒಡನೆಯೇ ಆತನು ಕಾರ್ಯೋನ್ಮುಖನಾಗಿ ಸೊಂಟಕ್ಕೆ ಪಟ್ಟಿಯನ್ನು ಬಿಗಿದು ಹತ್ತಿರದಲ್ಲೇ ಇದ್ದ ಅತ್ಯಂತ ಎತ್ತರವಾಗಿದ್ದ ಒಂದು ಕದಂಬವೃಕ್ಷದ ಮೇಲೇರಿ ಕೈಗಳಿಂದ ಎರಡು ಭುಜಗಳನ್ನು ತಟ್ಟಿಕೊಳ್ಳುತ್ತಾ ಮಡುವಿನೊಳಗೆ ಧುಮುಕಿಬಿಟ್ಟನು.

ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಅತ್ಯಂತವೇಗದಿಂದ ಧುಮುಕಿದ ಕಾರಣ ಕಾಳಿಯಮಡುವು ಕ್ಷೋಭೆಗೊಂಡಿತು. ಸರ್ಪದ ವಿಷದಿಂದ ಕೂಡಿದ್ದ ಆ ಜಲಾಶಯವು ಅಲ್ಲೋಲಕಲ್ಲೋಲವಾಗಿ ರಭಸದಿಂದ ಮೇಲಕ್ಕೆ ಚಿಮ್ಮಿತು. ವಿಷದಿಂದ ಕೂಡಿದ್ದ ದೊಡ್ಡ ದೊಡ್ಡ ಅಲೆಗಳು ಮೇಲೆದ್ದು ಸುಮಾರು ನೂರು ಗಜಗಳಷ್ಟು ದೂರಕ್ಕೆ ಆ ವಿಷ ಮಿಶ್ರಿತವಾದ ಜಲವು ಹಾರಿತು. ಅನಂತಬಲನಾದ ಶ್ರೀಕೃಷ್ಣನಿಗೆ ಈ ಕಾರ್ಯವು ಅಂತಹ ಮಹತ್ವದ್ದೇನೂ ಆಗಿರಲಿಲ್ಲ.

ಪರೀಕ್ಷಿತನೇ! ಮದಿಸಿದ ಆನೆಯಂತೆ ಮಹಾಪರಾಕ್ರಮಿಯಾದ ಶ್ರೀಕೃಷ್ಣನು ಕಾಳಿಯ ಮಡುವಿನಲ್ಲಿ ಧುಮುಕಿ ಮದಿಸಿದ ಆನೆಯ ದಂತ ಗಳಂತಿದ್ದ ತನ್ನ ದುಂಡಾದ ತೋಳುಗಳಿಂದ ನೀರನ್ನು ಬಡಿಯುತ್ತಾ ಅಲ್ಲೋಲ-ಕಲ್ಲೋಲಗೊಳಿಸಿದನು. ಸುಘೋರವಾದ ಆ ಶಬ್ದವನ್ನು ಕೇಳಿ–ಕಣ್ಣುಗಳನ್ನೇ ಕಿವಿಗಳನ್ನಾಗಿಯೂ ಹೊಂದಿದ್ದ ಸರ್ಪರಾಜನು ಯಾರೋ ತನ್ನ ಸ್ಥಳಕ್ಕೆ ಬಂದು ತನ್ನನ್ನು ತಿರಸ್ಕಾರಭಾವನೆಯಿಂದ ಕಾಣುತ್ತಿದ್ದಾರೆಂದು ಭಾವಿಸಿದನು. ಅದನ್ನು ಅವನಿಗೆ ಸಹಿಸಲಾಗಲಿಲ್ಲ. ಕುಪಿತನಾಗಿ ಶ್ರೀಕೃಷ್ಣ ನಿದ್ದಲ್ಲಿಗೆ ಆಗಮಿಸಿದನು. ಅಲ್ಲವನು ಕಂಡಿದ್ದೇನು? ಪ್ರೇಕ್ಷಣೀಯನಾದ ಸುಕುಮಾರನಾದ ಒಬ್ಬ ಬಾಲಕ. ಪುನಃ ಪುನಃ ನೋಡಬೇಕೆನ್ನುವಷ್ಟು ಸೌಂದರ್ಯವು ಅವನಲ್ಲಿದ್ದಿತು. ವರ್ಷಾಕಾಲದ ಮೇಘದಂತೆ ಶ್ಯಾಮಲ ವರ್ಣದವನಾಗಿದ್ದನು. ಅವನ ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿದ್ದಿತು. ಪೀತಾಂಬರವನ್ನು ಉಟ್ಟಿದ್ದನು. ಆತನ ಸುಂದರವಾದ ಮುಖಾರವಿಂದ ದಿಂದ ಸುಮಧುರವಾದ ಮಂದಹಾಸವು ಹೊರಸೂಸುತ್ತಿದ್ದಿತು. ಅವನ ಹೊಕ್ಕಳೂ ಮತ್ತು ಪಾದಗಳೂ ಕಮಲಪುಷ್ಪಗಳಂತೆ ಸುಮನೋಹರವಾಗಿ ದ್ದುವು. ಯಾವ ವಿಧವಾದ ಭಯವೂ ಇಲ್ಲದೆ ಆ ಸುಂದರಬಾಲಕನು ನೀರಿನಲ್ಲಿ ತೊಳಚಾಡುತ್ತಿದ್ದನು. ಇಂತಹ ತಿರಸ್ಕಾರವನ್ನು ಕಂಡ ಸರ್ಪರಾಜನ ಕೋಪವು ನೆತ್ತಿಗೇರಿತು. ಕಾರ್ಯಾಕಾರ್ಯವಿವೇಚನೆಯೂ ಇಲ್ಲದೆ ಆತನು ಸುಕುಮಾರನಾದ ಬಾಲಕನ ಮರ್ಮಸ್ಥಳಗಳನ್ನು ಬಲವಾಗಿ ಕಚ್ಚಿದನಲ್ಲದೆ ಶ್ರೀಕೃಷ್ಣನನ್ನು ತನ್ನ ಶರೀರದಿಂದ ಬಂಧಿಸಿಬಿಟ್ಟನು. ಯಶೋದಾಕಂದನು ನಾಗಪಾಶದಿಂದ ಬಂಧಿಸಲ್ಪಟ್ಟು ನಿಶ್ಚೇಷ್ಟನಾದನು. ಇದನ್ನು ನೋಡಿ ಅವನ ಪ್ರಾಣಪ್ರಿಯರಾದ ಗೋಪಬಾಲಕರು ಬಹಳವಾಗಿ ಸಂಕಟಪಟ್ಟರು. ದುಃಖ-ಪಶ್ಚಾತ್ತಾಪ ಮತ್ತು ಭಯಗಳಿಂದ ಮೂರ್ಛಿತರಾಗಿ ಕೆಳಗೆಬಿದ್ದರು. ಏಕೆಂದರೆ : ಅವರು ತಮ್ಮ ಶರೀರ-ಬಂಧುಗಳು-ಮಿತ್ರರು-ಧನಸಂಪತ್ತಿ-ಪುತ್ರ-ಕಳತ್ರರು-ಭೋಗಗಳು ಮತ್ತು ಸಮಸ್ತವಾದ ಕಾಮನೆ ಗಳು—ಈ ಎಲ್ಲವನ್ನೂ ಭಗವಂತನಾದ ಶ್ರೀಕೃಷ್ಣನಿಗೆ ಸಮರ್ಪಿಸಿಬಿಟ್ಟಿದ್ದರು. ಅವರಿಗೆ ತಮ್ಮದೆಂದು ಹೇಳಿಕೊಳ್ಳುವ ವಸ್ತುವು ಯಾವುದೂ ಇರಲೇ ಇಲ್ಲ. ಹೀಗೆ ದುಃಖಪಡುತ್ತಿದ್ದವರು ಕೇವಲ ಗೋಪಬಾಲಕರು ಮಾತ್ರವಲ್ಲ :

**ಗಾವೋ ವೃಷಾ ವತ್ಸತರ್ಯಃ ಕ್ರನ್ದಮಾನಾಃ ಸುದುಃಖಿತಾಃ ।**
**ಕೃಷ್ಣೇ ನ್ಯಸ್ತೇಕ್ಷಣಾ ಭೀತಾ ರುದತ್ಯ ಇವ ತಸ್ಥಿರೇ ॥೧೧॥**

ಹಸುಗಳು, ಎತ್ತುಗಳು, ಕರುಗಳು, ಎಳೆಗರುಗಳು ಎಲ್ಲವೂ ಸರ್ಪ ಪಾಶದಿಂದ ಕಟ್ಟಿಹಾಕಲ್ಪಟ್ಟಿದ್ದ ಬಾಲಕೃಷ್ಣನನ್ನೇ ದಿಟ್ಟಿಸಿ ನೋಡುತ್ತಾ ಅಪರಿಮಿತವಾದ ದುಃಖದಿಂದ ಕಿರುಚಿಕೊಳ್ಳುತ್ತಿದ್ದುವು. ಭಯಗೊಂಡು ಅಳುತ್ತಿವೆಯೋ ಎಂಬಂತೆ ಸ್ವಲ್ಪವಾದರೂ ಕದಲದೆ ನಿಂತಿದ್ದುವು. ಅತ್ತ ಗೋಕುಲದಲ್ಲಿ ಭಯವು ಸನ್ನಿಹಿತವಾಗಿರುವುದೆಂಬುದನ್ನು ಸೂಚಿಸುವ ಮೂರುಬಗೆಯ ದಾರುಣವಾದ ಮಹೋತ್ಪಾತಗಳು ಕಾಣಿಸಿಕೊಂಡುವು. ಭೂಮಿಯು ಕಂಪಿಸಿತು. ಅಂತರಿಕ್ಷದಿಂದ ಉಲ್ಕೆಗಳು ಬೀಳತೊಡಗಿದುವು. ಪುರುಷರ ಎಡಪಕ್ಕವೂ (ಎಡಗಣ್ಣು-ಎಡಭುಜ ಇತ್ಯಾದಿಗಳು) ಸ್ತ್ರೀಯರ ಬಲ ಪಕ್ಕವೂ (ಬಲಗಣ್ಣು-ಬಲಭುಜ ಇತ್ಯಾದಿಗಳು) ಅದುರತೊಡಗಿದುವು. ನಂದಗೋಪನೇ ಮೊದಲಾದವರು ಮಹೋತ್ಪಾತಗಳನ್ನು ನೋಡಿ ಭಯ ದಿಂದ ಉದ್ವಿಗ್ನರಾದರು. ಬಲರಾಮನನ್ನು ಬಿಟ್ಟು ಶ್ರೀಕೃಷ್ಣನೊಬ್ಬನೇ ಹಸು ಗಳನ್ನು ಮೇಯಿಸಲು ಹೋಗಿರುವನೆಂದು ತಿಳಿದನಂತರ ಅವರ ಭಯವು ಮತ್ತಷ್ಟು ಉಲ್ಬಣಿಸಿತು. ಭಗವಂತನು ತನ್ನ ಪ್ರಭಾವವು ಎಷ್ಟೆಂಬುದನ್ನು ಪುನಃ ಪುನಃ ಪ್ರಕಟಪಡಿಸುತ್ತಿದ್ದರೂ ಮಾಯೆಯ ಆವರಣದಿಂದಾಗಿ ಅವರು, ಅದು ಭಗವಂತನ ಪ್ರಭಾವವೆಂಬುದನ್ನು ಅರಿಯದೇ ಹೋದರು. ಈ ಕಾರಣದಿಂದ ಅಶುಭವಾದ ಶಕುನಗಳನ್ನು ನೋಡಿದ ಅವರಿಗೆ ಶ್ರೀಕೃಷ್ಣನಿಗೆ ಮೃತ್ಯುವೇ ಸಂಭವಿಸಿಬಿಟ್ಟಿರುವುದೆಂಬ ಭಯವುಂಟಾಯಿತು. ಹೀಗೆ ಭಾವಿಸಿ ಕೊಂಡೇ ಅವರು ದುಃಖ-ಶೋಕ-ಭಯಗಳಿಂದ ಪೀಡಿತರಾದರು. ಶ್ರೀಕೃಷ್ಣನೇ ಅವರಿಗೆ ಪಂಚಪ್ರಾಣನಾಗಿದ್ದನು. ಅವರ ಮನಸ್ಸು ಯಾವಾಗಲೂ ಅವನಲ್ಲಿಯೇ ಲೀನವಾಗಿಬಿಟ್ಟಿದ್ದಿತು. ಗೊಲ್ಲರಹಳ್ಳಿಯಲ್ಲಿ ಗೋಸೇವೆಯಲ್ಲಿ ನಿರತರಾಗಿರುತ್ತಿದ್ದ ಬಾಲಕರೂ, ವೃದ್ಧರೂ, ಸ್ತ್ರೀಯರೂ ಸಮಸ್ತರೂ ಶ್ರೀಕೃಷ್ಣನಿಗೆ ಅಪಾಯ ಸಂಭವಿಸಿಬಿಟ್ಟಿರಬಹುದೆಂಬ ಭಾವನೆಯಿಂದ, ಅತ್ಯಂತ ದೀನರಾಗಿ ಅವನನ್ನು ಕಾಣುವ ಉತ್ಕಟವಾದ ಇಚ್ಛೆಯಿಂದ, ಮನೆ-ಮಠಗಳನ್ನು ಹೇಗಿದ್ದಿತೋ ಹಾಗೆಯೇ ಬಿಟ್ಟು ಹೊರಟುಬಿಟ್ಟರು. ಶ್ರೀಕೃಷ್ಣ ನನ್ನು ಕಾಣದೆ ಆಬಾಲವೃದ್ಧರಾದಿಯಾಗಿ ಸಮಸ್ತರೂ ಕಾತುರತೆಯಿಂದಿರುವು

ದನ್ನು ಕಂಡು ಭಗವಂತನಾದ ಬಲರಾಮನು ಒಮ್ಮೆ ನಕ್ಕುಬಿಟ್ಟನು. ಮತ್ತೇನನ್ನೂ ಹೇಳಲಿಲ್ಲ. ಏಕೆಂದರೆ: ಬಲರಾಮನಿಗೆ ತನ್ನ ತಮ್ಮನ ಪ್ರಭಾವವು ಚೆನ್ನಾಗಿ ತಿಳಿದಿದ್ದಿತು.

ಅನಂತರ ವ್ರಜವಾಸಿಗಳು ತಮಗೆ ಅತ್ಯಂತಪ್ರಿಯನಾದ ಶ್ರೀಕೃಷ್ಣನನ್ನು ಹುಡುಕಲು ತೊಡಗಿದರು. ಹುಡುಕಲು ಅವರಿಗೆ ಅಷ್ಟೇನೂ ಕಷ್ಟವಾಗಲಿಲ್ಲ. ಭಗವಂತನಿಟ್ಟಿದ್ದ ವಿಶೇಷಲಕ್ಷಣಗಳುಳ್ಳ ಹೆಜ್ಜೆಗಳನ್ನೇ ಅನುಸರಿಸಿಹೋದರು. ಆ ಹೆಜ್ಜೆಗಳು ಅವರನ್ನು ಯಮುನಾನದಿಯ ತೀರಕ್ಕೆ ಒಯ್ದುವು. ಮಾರ್ಗದಲ್ಲಿ ಹೋಗುತ್ತಿದ್ದಾಗ ಗೋವುಗಳು, ಕರುಗಳು ಮತ್ತು ಗೋಪಬಾಲಕರ ಹೆಜ್ಜೆಗಳ ನಡು-ನಡುವೆ ಭಗವಂತನ ಕಮಲ, ಯವ, ಅಂಕುಶ, ವಜ್ರಾಯುಧ, ಧ್ವಜಗಳ ಚಿಹ್ನೆಗಳಿಂದ ಕೂಡಿದ ಹೆಜ್ಜೆಗಳ ಗುರುತೂ ಸ್ಪಷ್ಟವಾಗಿ ಕಾಣಿಸುತ್ತಿದ್ದಿತು. ಅದನ್ನು ನೋಡಿಕೊಂಡು ಅದನ್ನೇ ಅನುಸರಿಸಿ ಗೋವಳರು ಅವಸರದಿಂದ ಯಮುನಾನದಿಯ ತೀರಕ್ಕೆ ಹೋದರು. ದೂರದಿಂದಲೇ ಅವರು ಶ್ರೀಕೃಷ್ಣನು ಕಾಳಿಯಸರ್ಪದಿಂದ ಬಂಧಿಸಲ್ಪಟ್ಟು ನಿಶ್ಚೇಷ್ಟನಾಗಿರುವುದನ್ನು ನೋಡಿದರು. ಮಡುವಿನ ಸಮೀಪ ದಲ್ಲಿ ಗೋಪಬಾಲಕರೂ ಮೂರ್ಛಿತರಾಗಿ ಬಿದ್ದಿರುವುದನ್ನೂ ಹಸುಗಳೂ–ಎತ್ತುಗಳೂ ಕರುಗಳೂ ಕುಂಡದ ಸುತ್ತಲೂ ನಿಂತು ಆರ್ತನಾದಮಾಡು ತ್ತಿರುವುದನ್ನೂ ನೋಡಿದರು. ಇಂತಹ ಅತಿದಾರುಣವಾದ, ಅತಿಭಯಂಕರ ವಾದ ದೃಶ್ಯವನ್ನು ನೋಡಿದೊಡನೆಯೇ ನಂದಪ್ರಮುಖರಾದ ಗೋಪಾಲ ರೆಲ್ಲರೂ ವ್ಯಾಕುಲಗೊಂಡು ಮೂರ್ಛಿತರಾಗಿ ಕೆಳಗೆ ಬಿದ್ದರು.

ಗೋಪಸ್ತ್ರೀಯರ ಸಂಕಟವಂತೂ ವರ್ಣಿಸಲು ಅಸದಳವಾದದ್ದು. ಭಗವಂತನಾದ ಅನಂತನಲ್ಲಿಯೇ ಅವರ ಮನಸ್ಸು ಅನುರಕ್ತವಾಗಿದ್ದಿತು. ನಿತ್ಯನಿರಂತರವಾದ ಭಗವಂತನ ಸೌಹಾರ್ದ, ಅವನ ಸುಮಧುರವಾದ ಮಂದಹಾಸ, ಪ್ರೇಮಪೂರ್ವಕವಾದ ಮತ್ತು ಮನಸ್ಸನ್ನು ಸೆಳೆಯುವ ಕುಡಿ ನೋಟ, ಅವನ ಸುಮಧುರವಾದ ವಾಣಿ–ಇವೆಲ್ಲವನ್ನೂ ಗೋಪಿಯರು ಒಂದೊಂದನ್ನಾಗಿ ಸ್ಮರಿಸಿಕೊಂಡರು. ತಮ್ಮ ಪ್ರಿಯತಮನಾದ ಶ್ಯಾಮಸುಂದ ರನು ಸರ್ಪಪಾಶದಿಂದ ಬಂಧಿಸಲ್ಪಟ್ಟಿರುವುದನ್ನು ನೋಡಿದೊಡನೆಯೇ ಅಸಹನೀಯವಾದ ದುಃಖದಿಂದ ಪರಿತಪಿಸಿದರು. ಅವರ ಹೊಟ್ಟೆಗೆ ಬೆಂಕಿ

ಯಿಟ್ಟಂತಾಯಿತು. ಪ್ರಿಯತಮನಾದ ಶ್ರೀಕೃಷ್ಣನಿಲ್ಲದ ಮೂರು ಲೋಕಗಳೂ ಅವರಿಗೆ ಶೂನ್ಯವಾಗಿ ಕಂಡುವು. ತಾಯಿಯಾದ ಯಶೋದೆಯಂತೂ, ತಾನೂ ಮಡುವಿಗೆ ಬಿದ್ದುಬಿಡುವೆನೆಂದೇ ಧಾವಿಸಿದಳು. ಆದರೆ ಇತರ ಗೋಪಿಯರು ಅವಳನ್ನು ತಡೆದು ನಿಲ್ಲಿಸಿದರು. ಇತರ ಗೋಪಿಯರಿಗೂ ಕೃಷ್ಣನಿಲ್ಲದ ದುಃಖವು ಯಶೋದೆಯ ದುಃಖಕ್ಕಿಂತ ಕಡಿಮೆಯಾಗಿರಲಿಲ್ಲ. ಅವರ ಕಣ್ಣುಗಳಿಂದಲೂ ಕಂಬನಿಯು ಧಾರಾಕಾರವಾಗಿ ಸುರಿಯುತ್ತಿದ್ದಿತು. ಎಲ್ಲರ ಕಣ್ಣುಗಳೂ ಶ್ರೀಕೃಷ್ಣನಲ್ಲಿಯೇ ಕೇಂದ್ರೀಕೃತವಾಗಿದ್ದುವು. ಕೆಲವರು ಗೋಪಿಯರು ಪೂತನಾದಮನ, ತೃಣಾವರ್ತಸಂಹಾರ, ಬಕಾಸುರ ಸಂಹಾರ ಇವೇ ಮುಂತಾದ ಕಥೆಗಳನ್ನು ಹೇಳಿಕೊಂಡು ಯಶೋದೆಗೆ ಧೈರ್ಯ ತುಂಬುತ್ತಿದ್ದರು. ಆದರೆ ಹೆಚ್ಚು ಜನರು ಜೀವವಿಲ್ಲದ ಶವಗಳಂತೆಯೇ ಆಗಿಬಿಟ್ಟಿದ್ದರು. ಶ್ರೀಕೃಷ್ಣನೇ ತಮ್ಮ ಪಂಚಪ್ರಾಣವೆಂದು ಭಾವಿಸಿಕೊಂಡಿದ್ದ ನಂದನೇ ಮೊದಲಾದ ಗೋಪರು ಮೂರ್ಛೆಯು ತಿಳಿದೊಡನೆಯೇ ಶ್ರೀಕೃಷ್ಣನಿದ್ದ ಕುಂಡಕ್ಕೆ ಧುಮುಕಲು ಮುಂದಾದರು. ಆದರೆ ಬಲರಾಮನು ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ತಿಳಿದವನಾಗಿದ್ದುದರಿಂದ ಹಾಗೆ ಕುಂಡಕ್ಕೆ ಧುಮುಕದಂತೆ ಅವರೆಲ್ಲರನ್ನೂ ತಡೆದನು.

ಪರೀಕ್ಷಿತನೇ! ಸರ್ಪದ ಬಂಧನಕ್ಕೊಳಪಟ್ಟುದು ಶ್ರೀಕೃಷ್ಣನ ಒಂದು ಮಾನುಷಲೀಲೆಯೇ ಆಗಿದ್ದಿತು. ಸರ್ಪದ ಬಂಧನದಲ್ಲಿಯೇ ಇದ್ದುಕೊಂಡು ಆಬಾಲವೃದ್ಧರಾದಿಯಾಗಿ ಸಮಸ್ತವ್ರಜವಾಸಿಗಳೂ ತನ್ನ ಸಲುವಾಗಿ ದುಃಖಪಡುತ್ತಿರುವುದನ್ನು ಶ್ರೀಕೃಷ್ಣನು ನೋಡಿದನು. ವ್ರಜವಾಸಿಗಳಿಗೆ ತನ್ನನ್ನು ಬಿಟ್ಟು ಬೇರೆ ಯಾರೂ ಆ ಶ್ರಯದಾತರಿಲ್ಲವೆಂಬುದನ್ನು ಕೃಷ್ಣನು ಮನಗಂಡನು. ಯೋಗೇಶ್ವರನಾದ ಶ್ರೀಕೃಷ್ಣನು ಮುಹೂರ್ತಕಾಲ ಸರ್ಪದ ಬಂಧನದಲ್ಲಿದ್ದು ಯಾವ ಪ್ರಯತ್ನವೂ ಇಲ್ಲದೇ ಬಂಧನದಿಂದ ಹೊರ ಬಂದನು. ಬಂಧನದಿಂದ ಬಿಡಿಸಿಕೊಳ್ಳಲು ಶ್ರೀಕೃಷ್ಣನು ಮಾಡಿದ್ದೇನೆಂದರೆ : ತನ್ನ ಶರೀರವನ್ನು ಹಿಗ್ಗಿಸಿಕೊಂಡನು. ಇದರಿಂದ ಸರ್ಪದ ಬಿಗಿ ತಪ್ಪಿ ಸಡಿಲವಾಯಿತು. ಇದರಿಂದ ವ್ಯಥಿತನಾದ ಕಾಳಿಯನು ಕೃಷ್ಣನನ್ನು ಬಂಧಿಸಲು ಮಂಡಲಾಕಾರವಾಗಿ ಸುತ್ತಿದ್ದ ತನ್ನ ಶರೀರವನ್ನು ನೆಟ್ಟಗೆ ಮಾಡಿಕೊಂಡು ಹೆಡೆಯನ್ನು ಬಿಚ್ಚಿ ಮೇಲಕ್ಕೆತ್ತಿಕೊಂಡು ಅತಿರೋಷದಿಂದ

ವಿಷದ ಬಾಣಗಳಂತೆ ಮೂಗಿನ ಹೊಳ್ಳೆಗಳಿಂದ ನಿಟ್ಟುಸಿರನ್ನು ಬಿಡುತ್ತಾ ಸ್ವಲ್ಪವಾದರೂ ಅಲುಗಾಡದೆ ಉರಿಯುವ ಪಂಜಿನಂತಹ ಕಣ್ಣುಗಳಿಂದ ಶ್ರೀಕೃಷ್ಣನನ್ನು ದಿಟ್ಟಿಸಿ ನೋಡುತ್ತಾ ಸೆಟೆದು ನಿಂತನು. ಕಾಳಿಯನು ಅತ್ಯಂತಕುಪಿತನಾಗಿ ತನ್ನ ಹೆಡೆಗಳಲ್ಲಿದ್ದ ಎರಡೆರಡು ನಾಲಿಗೆಗಳಿಂದ ಕಟವಾಯಿಗಳನ್ನು ನೆಕ್ಕಿಕೊಳ್ಳುತ್ತಿದ್ದನು. ಭಯಂಕರವಾದ ಕಣ್ಣುಗಳಿಂದ ವಿಷದ ಜ್ವಾಲೆಯನ್ನು ಕಾರುತ್ತಿದ್ದನು. ಆಕಾಶದಲ್ಲಿ ಹಾರಾಡುತ್ತಿರುವ ಗರುಡನು ಭೂಮಿಯ ಮೇಲಿರುವ ಹಾವನ್ನು ಹಿಡಿಯಲು ಹೊಂಚು ಹಾಕುವಂತೆ ಶ್ರೀಕೃಷ್ಣನು ಸರ್ಪವನ್ನು ಹಿಡಿಯಲು ಹೊಂಚುಹಾಕುತ್ತಾ ಅದರ ಸುತ್ತಲೂ ತಿರುಗುತ್ತಿದ್ದನು. ಅಂತೆಯೇ ಕಾಳಿಯನೂ ಶ್ರೀಕೃಷ್ಣ ನನ್ನು ಬಗ್ಗುಬಡಿಯಲು ಹೊಂಚುಹಾಕುತ್ತಾ ಅವನ ಸುತ್ತಲೂ ಸುತ್ತು ತ್ತಿದ್ದನು. ಹೀಗೆ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಹಿಡಿಯಲು ಸುತ್ತುತ್ತಿರಲಾಗಿ ಕಾಳಿಯನ ಬಲವು ಕ್ಷೀಣಿಸುತ್ತಾ ಬಂದಿತು. ಇದೇ ಸಮಯವನ್ನು ಕಾಯುತ್ತಿದ್ದ ಶ್ರೀಕೃಷ್ಣನು ಸರ್ಪದ ದೊಡ್ಡ ದೊಡ್ಡ ಹೆಡೆಗಳನ್ನು ಸ್ವಲ್ಪ ಬಗ್ಗಿಸಿ ಥಂಗನೆ ಅವುಗಳ ಮೇಲೆ ಹತ್ತಿದನು. ಇಷ್ಟು




ಮಾತ್ರವಲ್ಲ. ಅವನ ತಲೆಯ ಮೇಲೆ ನೃತ್ಯವಾಡತೊಡಗಿದನು. ಹೀಗೆ ನೃತ್ಯವಾಡುತ್ತಿದ್ದಾಗ ಕಾಳಿಯನ ಹೆಡೆಗಳಲ್ಲಿದ್ದ ಥಳಥಳಿಸುತ್ತಿದ್ದ ಕೆಂಪು ರತ್ನಗಳು ಶ್ರೀಕೃಷ್ಣನ ಪಾದಗಳನ್ನು ಬೆಳಗತೊಡಗಿದುವು. ರತ್ನಗಳ

ಕಾಂತಿಯಿಂದ ಶ್ರೀಕೃಷ್ಣನ ಪಾದಗಳು ಮತ್ತಷ್ಟು ಕೆಂಪಾಗಿ ಕಂಡುವು. ಆ ರತ್ನಗಳ ಬೆಳಕಿನಲ್ಲಿ ಸಮಸ್ತಕಲೆಗಳಿಗೂ ಆದಿಪ್ರವರ್ತಕನಾದ ಶ್ರೀಕೃಷ್ಣನು ನಾನಾಭಂಗಿಗಳಲ್ಲಿ ನೃತ್ಯವಾಡತೊಡಗಿದನು. ಭಗವಂತನು ನೃತ್ಯವಾಡಲು ಪ್ರಾರಂಭಿಸಿದ್ದನ್ನು ನೋಡಿ ಅವನ ಪ್ರಿಯಭಕ್ತರಾದ ಗಂಧರ್ವ-ಸಿದ್ಧ-ಚಾರಣರೂ, ದೇವತೆಗಳೂ, ದೇವಾಂಗನೆಯರೂ ಅತ್ಯಂತ ಪ್ರೀತಿಯಿಂದ ತಾಳ-ಮೃದಂಗ-ನಗಾರಿ ಇವೇ ಮೊದಲಾದ ವಾದ್ಯಗಳಿಂದ ಕೂಡಿದವರಾಗಿ ಶ್ರೀಕೃಷ್ಣನ ಲೀಲೆಗಳನ್ನು ಗಾನಮಾಡುತ್ತಾ ಪುಷ್ಪೋಪಹಾರಗಳನ್ನು ತೆಗೆದುಕೊಂಡು ಶ್ರೀಕೃಷ್ಣನ ಬಳಿಗೆ ಆಗಮಿಸಿದರು.

ಮಹಾರಾಜ! ದುಷ್ಟರಿಗೆ ಯಮಪ್ರಾಯನಾಗಿದ್ದ ಶ್ರೀಕೃಷ್ಣನು ಕಾಳಿಯನ ನೂರೊಂದು ತಲೆಗಳಲ್ಲಿ ಯಾವ ಯಾವ ತಲೆಯು ರೋಷದಿಂದ ಸೆಟೆದು ನಿಲ್ಲುತ್ತಿದ್ದಿತೋ ಆ ತಲೆಗಳನ್ನು ನೃತ್ಯದ ವ್ಯಾಜದಿಂದ ಪುನಃ ಅದು ಮೇಲೆದ್ದು ನಿಲ್ಲದಂತೆ ಮೆಟ್ಟಿಬಿಡುತ್ತಿದ್ದನು. ಕಾಳಿಯನ ಯಾವ ತಲೆಗಳೂ ಮೇಲೇಳದಂತಾದುವು. ಅವನ ಆಯುಷ್ಯವು ಕ್ಷಣ-ಕ್ಷಣಕ್ಕೂ ಕ್ಷೀಣಿಸ ತೊಡಗಿತು. ಭ್ರಾಂತನಾದ ಕಾಳಿಯನ ಬಾಯಿ-ಮೂಗುಗಳಿಂದ ರಕ್ತವು ಪ್ರವಾಹರೂಪವಾಗಿ ಹೊರಹೊಮ್ಮಿತು. ಅವನು ಯಾತನೆಯನ್ನು ತಡೆಯ ಲಾರದೆ ಮೂರ್ಛೆಹೋದನು. ಆತನು ಸ್ವಲ್ಪ ಎಚ್ಚರಗೊಂಡೊಡನೆಯೇ ಕುಪಿತನಾಗಿ ಪುನಃ ಕಣ್ಣುಗಳಿಂದ ವಿಷವನ್ನು ಸುರಿಸುವನು. ಗಟ್ಟಿಯಾಗಿ ಬುಸುಗುಟ್ಟುವನು. ಹೀಗವನು ಬುಸುಗುಟ್ಟುತ್ತಾ ಯಾವುದಾದರೂ ತಲೆಯನ್ನು ಎತ್ತಿದನೆಂದರೆ ಶ್ರೀಕೃಷ್ಣನು ಒಡನೆಯೇ ಆ ಹೆಡೆಯ ಮೇಲಕ್ಕೆ ಹಾರಿ ನಾಟ್ಯಮಾಡುತ್ತಾ ಆ ಹೆಡೆಯನ್ನು ಬಗ್ಗಿಸಿಬಿಡುವನು. ಹಾಗೆ ನೃತ್ಯಮಾಡುವಾಗ ನಾಗನ ಹೆಡೆಯಲ್ಲಿ ರಕ್ತವು ಹರಿದು ಶ್ರೀಕೃಷ್ಣನ ಕಾಲುಗಳಿಗೂ ಅಂಟಿಕೊಳ್ಳುತ್ತಿದ್ದಿತು. ಕೆಂಪಾದ ರಕ್ತವು ಪಾದಗಳ ಮೇಲಿರುವುದನ್ನು ನೋಡಿದರೆ ಕೆಂಪು ಹೂವುಗಳಿಂದ ಪುರಾಣಪುರುಷನ ಪಾದಾರವಿಂದಗಳಿಗೆ ಪೂಜೆಮಾಡಿರುವಂತೆ ಭಾಸವಾಗುತ್ತಿದ್ದಿತು.

ಭಗವಂತನ ಆ ಅದ್ಭುತವಾದ ತಾಂಡವನೃತ್ಯದಿಂದಾಗಿ ಕಾಳಿಯನ ಛತ್ರರೂಪವಾಗಿದ್ದ ಹೆಡೆಗಳು ಛಿನ್ನ-ಭಿನ್ನವಾದುವು. ಅವನ ಅಂಗೋ ಪಾಂಗಗಳೂ ನುಚ್ಚುನೂರಾದುವು. ಮುಖದಿಂದ ರಕ್ತದ ಕೋಡಿಯೇ

ಹರಿಯಿತು. ಆಗ ನಾಗನಿಗೆ ಚರಾಚರಾತ್ಮಕವಾದ ಜಗತ್ತಿಗೇ ಗುರುವಾದ, ಆದಿಪುರುಷನಾದ ನಾರಾಯಣನ ಸ್ಮರಣೆಯಾಯಿತು. ಕಾಳಿಯನು ಮನಸ್ಸಿನಿಂದಲೇ ಭಗವಂತನನ್ನು ಶರಣುಹೊಂದಿದನು. ಬಾಲಕೃಷ್ಣನ ಪುಟ್ಟಹೆಜ್ಜೆಗಳ ತುಳಿತದಿಂದ ಘೋರನಾದ ಕಾಳಿಯನಿಗೆ ಅಷ್ಟು ಗಾಯಗಳಾದುವೆ? ಎಂದರೆ: ಮೂರ್ತಿ ಚಿಕ್ಕದಾಗಿ ಕಾಣುತ್ತಿದ್ದರೂ ಕೃಷ್ಣಮೂರ್ತಿಯು ಬ್ರಹ್ಮಾಂಡಗಳನ್ನೇ ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡಿದ್ದನು. ಈ ಕಾರಣದಿಂದ ಅವನು ಅಪಾರಭಾರವಾಗಿದ್ದನು. ಅವನ ಭಾರವನ್ನು ತಡೆಯಲಾರದೆ ಕುಸಿದುಬಿದ್ದ ಫಣೀಂದ್ರನ ಛತ್ರಿಯರೂಪವಾಗಿದ್ದ ಫಣಗಳು ಬಾಲಕೃಷ್ಣನ ಹಿಮ್ಮಡಿಯ ಪೆಟ್ಟುಗಳನ್ನು ತಿಂದು ನುಚ್ಚುನೂರಾದುವು. ತಮ್ಮ ಪತಿಯು ಅಂತಹ ದುರವಸ್ಥೆಯಲ್ಲಿದ್ದುದನ್ನು ಕಂಡು ಅವನ ಪತ್ನಿಯರು ದುಃಖಪೀಡಿತರಾಗಿ ಶ್ರೀಕೃಷ್ಣನ ಬಳಿಗೆ ಬಂದರು. ಆ ಸಮಯದಲ್ಲಿ ಭಯಗ್ರಸ್ತರಾಗಿದ್ದ ನಾಗಪತ್ನಿಯರ ವಸ್ತ್ರಾಭರಣಗಳು ಅಸ್ತವ್ಯಸ್ತಗೊಂಡಿದ್ದುವು. ತಲೆಗೂದಲು ಗಳು ಕೆದರಿಹೋಗಿದ್ದುವು. ಆ ಸಮಯದಲ್ಲಿ ಸಾಧ್ವಿಯರಾದ ಕಾಳಿಯನ ಪತ್ನಿಯರು ಬಹಳವಾಗಿ ಗಾಬರಿಗೊಂಡಿದ್ದರು. ತಮ್ಮ ಮಕ್ಕಳನ್ನು ಮುಂದೆ ಮಾಡಿಕೊಂಡು ತಲೆಯನ್ನು ಭೂಮಿಗೆ ಮುಟ್ಟಿಸಿ ಪ್ರಾಣಿಮಾತ್ರಕ್ಕೇ ಏಕಮಾತ್ರ ಸ್ವಾಮಿಯಾದ ಶ್ರೀಕೃಷ್ಣನಿಗೆ ಪ್ರಣಾಮಮಾಡಿದರು. ಭಗವಂತನಾದ ಶ್ರೀಕೃಷ್ಣನನ್ನು ಶರಣಾಗತವತ್ಸಲನೆಂದು ತಿಳಿದು ಅಪರಾಧಿಯಾಗಿದ್ದ ತಮ್ಮ ಪತಿಯನ್ನು ಬಿಡಿಸಿಕೊಳ್ಳಬೇಕೆಂಬ ಆಶಯದಿಂದ ನಾಗಪತ್ನಿಯರು ಶ್ರೀಕೃಷ್ಣನಿಗೆ ಶರಣಾದರು. ಬಳಿಕ ಶ್ರೀಕೃಷ್ಣನನ್ನು ಪರಿಪರಿಯಾಗಿ ಸ್ತುತಿಸುತ್ತಾ ಹೇಳಿದರು :

**ನ್ಯಾಯ್ಯೋ ಹಿ ದಣ್ಡಃ ಕೃತಕಿಲ್ಬಿಷೇಽಸ್ಮಿಂ-**
**ಸ್ತವಾವತಾರಃ ಖಲನಿಗ್ರಹಾಯ ।**
**ರಿಪೋಃ ಸುತಾನಾಮಪಿ ತುಲ್ಯದೃಷ್ಟೇ-**
**ರ್ಧತ್ಸೇ ದಮಂ ಫಲಮೇವಾನುಶಂಸನ್ ॥೩೩॥**

"ಪ್ರಭುವೇ! ನಿನ್ನ ಈ ಅವತಾರವು ದುಷ್ಟರನ್ನು ಶಿಕ್ಷಿಸುವುದೇ ಆಗಿದೆ. ಆದುದರಿಂದ ಅಪರಾಧಿಯಾದ ಈ ಕಾಳಿಯನನ್ನು ಶಿಕ್ಷಿಸಿರುವುದು ಉಚಿತವೇ ಆಗಿದೆ. ನಿನ್ನ ದೃಷ್ಟಿಯಲ್ಲಿ ಶತ್ರುಗಳಿಗೂ ಪುತ್ರರಿಗೂ ಯಾವ ಭೇದ

ಭಾವವೂ ಇರುವುದಿಲ್ಲ. ಯಾರಲ್ಲಿಯೂ ನಿನಗೆ ಪಕ್ಷಪಾತವಿಲ್ಲ. ನೀನು ದುಷ್ಟರನ್ನು ಶಿಕ್ಷಿಸುವುದು ಅವರು ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮತ್ತು ಅವರನ್ನು ಅನುಗ್ರಹಿಸುವುದಕ್ಕಾಗಿ. ಇಂತಹ ಅನುಪಮವಾದ ಫಲವನ್ನುಂಟುಮಾಡುವ ಸಲುವಾಗಿಯೇ ನೀನು ಅವರನ್ನು ದಂಡಿಸುವೆ.

**ಅನುಗ್ರಹೋಽಯಂ ಭವತಃ ಕೃತೋ ಹಿ ನೋ**
**ದಣ್ಡೋಽಸತಾಂ ತೇ ಖಲು ಕಲ್ಮಷಾಪಹಃ ।**
**ಯದ್ದನ್ದಶೂಕತ್ವಮಮುಷ್ಯ ದೇಹಿನಃ**
**ಕ್ರೋಧೋಽಪಿ ತೇಽನುಗ್ರಹ ಏವ ಸಮ್ಮತಃ ॥೩೪॥**

ನಮ್ಮ ಪತಿಯಾದ ಈ ಕಾಳಿಯನನ್ನು ಶಿಕ್ಷಿಸಿ ನೀನು ನಮ್ಮ ಮೇಲೆ ಅಪಾರವಾದ ಅನುಗ್ರಹವನ್ನೇ ತೋರಿರುವೆ. ಹೇಗೆಂದರೆ : ನೀನು ಯಾವ ದುಷ್ಟರನ್ನು ದಂಡಿಸುವೆಯೋ ಅಂತಹ ದುಷ್ಟರ ಪಾಪವೆಲ್ಲವೂ ಪರಿಹಾರ ವಾಗುತ್ತದೆ. ಈ ಕಾಳಿಯನು ಅಪರಾಧಿಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇವನು ಅಪರಾಧಿಯಾಗಿರದಿದ್ದರೆ ಇವನಿಗೆ ಸರ್ಪಯೋನಿಯೇ ಪ್ರಾಪ್ತವಾಗುತ್ತಿರಲಿಲ್ಲ. ಸರ್ಪಯೋನಿಯಲ್ಲಿರುವುದರಿಂದಲೇ ಇವನು ಪಾಪಮಾಡಿರುವನೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ನಿನ್ನ ಕ್ರೋಧವು ಕೂಡ ನಮಗೆ ಪರಮಾನುಗ್ರಹವೆಂದೇ ನಾವು ಭಾವಿಸುತ್ತೇವೆ.

**ತಪಃ ಸುತಪ್ತಂ ಕಿಮನೇನ ಪೂರ್ವಂ**
**ನಿರಸ್ತಮಾನೇನ ಚ ಮಾನದೇನ ।**
**ಧರ್ಮೋಽಥ ವಾ ಸರ್ವಜನಾನುಕಮ್ಪಯಾ**
**ಯತೋ ಭವಾಂಸ್ತುಷ್ಯತಿ ಸರ್ವಜೀವಃ ॥೩೫॥**

ಪ್ರಭುವೇ! (ಸರ್ಪಯೋನಿಯಲ್ಲಿ ಹುಟ್ಟಲು ಮಾಡಿರಬಹುದಾದ ಅಲ್ಪ-ಸ್ವಲ್ಪ ಪಾಪವನ್ನು ಬಿಟ್ಟು) ಪೂರ್ವಜನ್ಮದಲ್ಲಿ ಈ ನಮ್ಮ ಸ್ವಾಮಿಯು ನಿರಹಂಕಾರನಾಗಿ, ಸತ್ಪುರುಷರನ್ನು ಯಥಾಯೋಗ್ಯವಾಗಿ ಸಮ್ಮಾನಿಸುತ್ತಾ ಮಹತ್ತರವಾದ ತಪಸ್ಸನ್ನು ಮಾಡಿರಬೇಕು. ಸಮಸ್ತರಲ್ಲಿಯೂ ಅನುಕಂಪ ವನ್ನು ತೋರುವ ಧರ್ಮವನ್ನಾದರೂ ಆಚರಿಸಿರಬೇಕು. ಸಮಸ್ತರಿಗೂ

ಬೀಜಸ್ವರೂಪನಾಗಿರುವ ನೀನು ಇವನ ವಿಷಯದಲ್ಲಿ ಸಂತುಷ್ಟನಾಗಿರುವೆಯಲ್ಲವೇ? ನೀನು ಸಂತುಷ್ಟನಾಗಿರಬೇಕಾದರೆ ಎರಡೇ ಉಪಾಯಗಳು : ನಿರಹಂಕಾರನಾಗಿ ಸತ್ಪುರುಷರನ್ನು ಸಮ್ಮಾನಿಸುವುದು ಮತ್ತು ಎಲ್ಲ ಪ್ರಾಣಿಗಳಲ್ಲಿಯೂ ದಯಾಪರನಾಗಿರುವುದು.*

**ಕಸ್ಯಾನುಭಾವೋಽಸ್ಯ ನ ದೇವ ವಿದ್ಮಹೇ**
**ತವಾಙ್ಘ್ರಿರೇಣುಸ್ಪರ್ಶಾಧಿಕಾರಃ ।**
**ಯದ್ವಾಞ್ಛಯಾ ಶ್ರೀರ್ಲಲನಾಚರತ್ತಪೋ**
**ವಿಹಾಯ ಕಾಮಾನ್ಸುಚಿರಂ ಧೃತವ್ರತಾ ॥೩೬॥**

ದೇವೇಶನೇ! ನಮ್ಮ ಪತಿಯು ಯಾವ ಮಹತ್ತರವಾದ ಪುಣ್ಯದ ಮಹಿಮೆಯಿಂದ ನಿನ್ನ ಚರಣಾರವಿಂದಗಳ ಧೂಳಿಯನ್ನು ಸ್ಪರ್ಶಿಸುವ ಅಧಿಕಾರವನ್ನು ಪಡೆದುಕೊಂಡನೋ ತಿಳಿಯದು. ನಿನ್ನ ಚರಣಾರವಿಂದಗಳ ಧೂಳಿಯ ಸ್ಪರ್ಶಕ್ಕಾಗಿ ನಿನ್ನ ಅರ್ಧಾಂಗಿಯೇ ಆದ ಲಕ್ಷ್ಮೀದೇವಿಯು ಬಹಳ ದಿವಸಗಳವರೆಗೆ ಸಮಸ್ತಭೋಗಗಳನ್ನೂ ತ್ಯಾಗಮಾಡಿ ನಿಯಮಗಳನ್ನು ಪಾಲಿಸುತ್ತಾ ಅತ್ಯಂತ ಕಠಿನವಾದ ತಪಸ್ಸನ್ನಾಚರಿಸಿದಳು. ಜಗನ್ಮಾತೆಯಾದ ಲಕ್ಷ್ಮೀದೇವಿಗೆ ನಿನ್ನ ಪಾದಧೂಳಿಯು ಇಷ್ಟು ದುರ್ಲಭವಾಗಿರುವಾಗ ಸರ್ವಥಾ ಅಪರಾಧಿಯಾದ ಈ ಕಾಳಿಯನಿಗೆ ಅದು ಹೇಗೆ ಲಭಿಸಿತು?

**ನ ನಾಕಪೃಷ್ಠಂ ನ ಚ ಸಾರ್ವಭೌಮಂ**
**ನ ಪಾರಮೇಷ್ಠ್ಯಂ ನ ರಸಾಧಿಪತ್ಯಮ್ ।**
**ನ ಯೋಗಸಿದ್ಧೀರಪುನರ್ಭವಂ ವಾ**
**ವಾಞ್ಛಂತಿ ಯತ್ಪಾದರಜಃ ಪ್ರಪನ್ನಾಃ ॥೩೭॥**

ಪ್ರಭುವೇ! ಭಗವಂತ! ದಯಾಮಯ! ಯಾರು ನಿನ್ನ ಚರಣಕಮಲಗಳ ಧೂಳಿಯಲ್ಲಿ ಆಶ್ರಯವನ್ನು ಪಡೆದಿರುವರೋ ಅಂತಹ ಭಕ್ತೋ

---

* ಈ ಕಾಳಿಯನು ಪೂರ್ವಜನ್ಮದಲ್ಲಿ ತಪಸ್ಸನ್ನು ಮಾಡಿದವನಲ್ಲ. ಸಾಧುಗಳನ್ನು ಸೇವಿಸಿದವನಲ್ಲ. ಗರ್ವವನ್ನು ಬಿಟ್ಟವನಲ್ಲ. ಪ್ರಾಣಿಗಳಲ್ಲಿ ಇಂತಹವನನ್ನೂ ಅನುಗ್ರಹಿಸುವುದಕ್ಕೆ ನಿನ್ನ ಅಕೃತ್ರಿಮವಾದ ವಾತ್ಸಲ್ಯವೇ ಕಾರಣವಲ್ಲದೆ ಬೇರೆಯಲ್ಲ.

(ವೀರರಾಘವೀಯ)

ತ್ತಮರು ಸ್ವರ್ಗವನ್ನೂ ಬಯಸುವುದಿಲ್ಲ ; ಸಾರ್ವಭೌಮತ್ವವನ್ನೂ ಅಪೇಕ್ಷಿಸುವುದಿಲ್ಲ ; ಪಾತಾಳಲೋಕದ ಒಡೆತನವನ್ನೂ ಬಯಸುವುದಿಲ್ಲ ; ಬ್ರಹ್ಮಪದವಿಯನ್ನೂ ಅಪೇಕ್ಷಿಸುವುದಿಲ್ಲ ; ಅಣಿಮೆಯೇ ಮುಂತಾದ ಎಂಟು ಯೋಗಸಿದ್ಧಿಗಳನ್ನೂ ಅಪೇಕ್ಷಿಸುವುದಿಲ್ಲ ; ಹುಟ್ಟು-ಸಾವುಗಳಿಂದ ಪಾರಾಗ ಬಹುದಾದ ಮೋಕ್ಷವನ್ನಾಗಲೀ ಅಪೇಕ್ಷಿಸುವುದಿಲ್ಲ.

**ತದೇಷ ನಾಥಾಪ ದುರಾಪಮನ್ಯೈ-**
**ಸ್ತಮೋಜನಿಃ ಕ್ರೋಧವಶೋಽಪ್ಯಹೀಶಃ ।**
**ಸಂಸಾರಚಕ್ರೇ ಭ್ರಮತಃ ಶರೀರಿಣೋ**
**ಯದಿಚ್ಛತಃ ಸ್ಯಾದ್ವಿಭವಃ ಸಮಕ್ಷಃ ॥೩೮॥**

ಸ್ವಾಮಿನ್! ಈ ನಾಗರಾಜನು ತಮೋಗುಣಗಳ ಯೋನಿಯಲ್ಲಿ ಹುಟ್ಟಿದವನು. ಸ್ವಾಭಾವಿಕವಾಗಿಯೇ ಮಹಾಕೋಪಿಷ್ಠನೂ ಆಗಿದ್ದಾನೆ. ಆದರೂ ಇತರರಿಗೆ ಸುದುರ್ಲಭವಾದ ನಿನ್ನ ಪಾದಗಳ ಧೂಳಿಯ ಆಶ್ರಯ ವನ್ನು ಪಡೆದಿರುತ್ತಾನೆ. ಸಂಸಾರಚಕ್ರದಲ್ಲಿ ಸಿಕ್ಕಿಹಾಕಿಕೊಂಡು ತೊಳಲು ತ್ತಿರುವ ಜೀವಿಗಳು ನಿನ್ನ ಪಾದಧೂಳಿಯನ್ನು ಪಡೆಯಬೇಕೆನ್ನುವ ಇಚ್ಛಾ ಮಾತ್ರದಿಂದಲೇ ಸಂಸಾರದಲ್ಲಿ ವೈಭವವನ್ನೂ, ಸಂಪತ್ತನ್ನೂ ಪಡೆದುಕೊಳ್ಳು ವರು. ಇಷ್ಟು ಮಾತ್ರವಲ್ಲದೇ ಮೋಕ್ಷವನ್ನೂ ಪಡೆಯುತ್ತಾರೆ. ನಿನ್ನ ಪಾದಧೂಳಿಯ ಮಹತ್ವವೇ ಅಂತಹುದು.*

**ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।**
**ಭೂತಾವಾಸಾಯ ಭೂತಾಯ ಪದಾಯ ಪರಮಾತ್ಮನೇ ॥೩೯॥**

ಅಚಿಂತ್ಯವಾದ ಐಶ್ವರ್ಯಕ್ಕೂ ನಿತ್ಯನಿಧಿಯಾಗಿರತಕ್ಕವನೇ! ಸಮಸ್ತರ

---

* ಎಲೈ ಸ್ವಾಮಿಯೇ! ಬ್ರಹ್ಮಾದಿಗಳಿಗೂ ಲಭ್ಯವಾಗದ ನಿನ್ನ ಪಾದಸ್ಪರ್ಶವು ಅಜ್ಞಾನಿಯಾದ ಈ ಕಾಳಿಯನಿಗೆ ಘಟಿಸಿದುದೆಂತು? ಸಂಸಾರಚಕ್ರದಲ್ಲಿ ನರಳುತ್ತಿರುವ ಜೀವಿಗಳಿಗೆ ನೀನೇ ಯದೃಚ್ಛೆಯಾಗಿ ದರ್ಶನವನ್ನಿತ್ತು ಸಲಹುವೆಯಾದುದರಿಂದ ಇವನಿಗೆ ನಿನ್ನ ದರ್ಶನವು ಲಭಿಸಿತು.

ಏವಂ ಸಂಸೃತಿಚಕ್ರೇಽಸ್ಮಿನ್ ಭ್ರಾಮ್ಯಮಾಣೇ ದುರತ್ಯಯೇ ।
ಜೀವೇ ದುಃಖಾಕುಲೇ ವಿಷ್ಣೋಃ ಕೃಪಾಕಾಪ್ಯುಪಜಾಯತೇ ॥

(ವೀರರಾಘವೀಯ)

ಅಂತಃಕರಣದಲ್ಲಿಯೂ ವಿರಾಜಿಸುತ್ತಿರುವವನೇ! ಸಮಸ್ತಪ್ರಾಣಿಗಳಿಗೂ ಮತ್ತು ವಸ್ತುಗಳಿಗೂ ಆಶ್ರಯನಾಗಿರತಕ್ಕವನೇ! ಪ್ರಾಣಿಗಳು ಮತ್ತು ಪದಾರ್ಥಗಳ ರೂಪಗಳಲ್ಲಿಯೂ ಇರತಕ್ಕವನೇ! ಪ್ರಕೃತಿಗೂ ಅತೀತನಾದ ಪರಮಾತ್ಮನೇ! ನಿನಗೆ ನಮಸ್ಕಾರವು.

**ಜ್ಞಾನವಿಜ್ಞಾನನಿಧಯೇ ಬ್ರಹ್ಮಣೇಽನನ್ತಶಕ್ತಯೇ ।**
**ಅಗುಣಾಯಾವಿಕಾರಾಯ ನಮಸ್ತೇಽಪ್ರಾಕೃತಾಯ ಚ ॥೪೦॥**

ದೇವ! ನೀನು ಸಮಸ್ತವಾದ ಜ್ಞಾನಗಳಿಗೂ ಮತ್ತು ಅನುಭವಗಳಿಗೂ ನಿಧಿಪ್ರಾಯನಾಗಿರುವೆ. ನಿನ್ನ ಮಹಿಮೆ ಮತ್ತು ಶಕ್ತಿಯು ಅನಂತವಾದುದು. ನಿನ್ನ ಸ್ವರೂಪವು ಅಪ್ರಾಕೃತವೂ, ದಿವ್ಯವೂ, ಚಿನ್ಮಯವೂ ಆಗಿದೆ. ನೀನು ನಿರ್ಗುಣ-ನಿರಾಕಾರ-ನಿರ್ವಿಕಾರನು. ನೀನೇ ಪರಬ್ರಹ್ಮವಸ್ತುವು. ಅಂತಹ ನಿನಗೆ ನಮಸ್ಕರಿಸುತ್ತೇವೆ.

**ಕಾಲಾಯ ಕಾಲನಾಭಾಯ ಕಾಲಾವಯವಸಾಕ್ಷಿಣೇ ।**
**ವಿಶ್ವಾಯ ತದುಪದ್ರಷ್ಟ್ರೇ ತತ್ಕರ್ತ್ರೇ ವಿಶ್ವಹೇತವೇ ॥೪೧॥**

ನೀನು ಪ್ರಕೃತಿಯಲ್ಲಿ ಕ್ಷೋಭೆಯನ್ನುಂಟುಮಾಡುವ ಕಾಲಪುರುಷನಾಗಿರುವೆ. ಕಾಲಶಕ್ತಿಗೆ ಆಶ್ರಯನಾಗಿರುವೆ. ಕಾಲದ ಕ್ಷಣ-ಕಲ್ಪಾದಿ ಸಮಸ್ತ ಅವಯವಗಳಿಗೂ ಸಾಕ್ಷೀಭೂತನಾಗಿರುವೆ. ನೀನು ವಿಶ್ವರೂಪನಾಗಿದ್ದರೂ ಅದನ್ನು ಪ್ರತ್ಯೇಕಗೊಳಿಸಿ ಅದಕ್ಕೂ ಸಾಕ್ಷೀಭೂತನಾಗಿರುವೆ. ಜಗತ್ತಿನ ಕರ್ತೃವೂ ಜಗತ್ತಿಗೆ ಕಾರಣನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇವೆ.

**ಭೂತಮಾತ್ರೇನ್ದ್ರಿಯಪ್ರಾಣಮನೋಬುದ್ಧ್ಯಾಶಯಾತ್ಮನೇ ।**
**ತ್ರಿಗುಣೇನಾಭಿಮಾನೇನ ಗೂಢಸ್ವಾತ್ಮಾನುಭೂತಯೇ ॥೪೨॥**

ಪ್ರಭುವೇ! ಪಂಚಭೂತಗಳು ಮತ್ತು ಪಂಚತನ್ಮಾತ್ರೆಗಳು, ಇಂದ್ರಿಯಗಳು, ಪ್ರಾಣ, ಮನಸ್ಸು, ಬುದ್ಧಿ ಮತ್ತು ಇವೆಲ್ಲಕ್ಕೂ ಆಶ್ರಯ ಸ್ಥಾನವಾದ ಚಿತ್ತ–ಎಲ್ಲವೂ ನೀನೇ ಆಗಿರುವೆ. ನಿನಗೆ ನಮಸ್ಕಾರವು. ನಿನ್ನ ಅಂಶಭೂತರಾದ ಜೀವಾತ್ಮರ ಶುದ್ಧಜ್ಞಾನವನ್ನು ತ್ರಿಗುಣಾತ್ಮಕವಾದ ಅಹಂಕಾರದಿಂದ ಮರೆಮಾಡಿರುವ ನಿನಗೆ ನಮಸ್ಕಾರವು.

**ನಮೋಽನನ್ತಾಯ ಸೂಕ್ಷ್ಮಾಯ ಕೂಟಸ್ಥಾಯ ವಿಪಶ್ಚಿತೇ ।**
**ನಾನಾವಾದಾನುರೋಧಾಯ ವಾಚ್ಯವಾಚಕಶಕ್ತಯೇ ॥೪೩॥**

ನೀನು ನಾಶವಿಲ್ಲದವನೂ, ಸೂಕ್ಷ್ಮನೂ, ವಿಕಾರವಿಲ್ಲದವನೂ, ಸರ್ವಜ್ಞನೂ ಆಗಿರುವೆ. ಇಂತಹ ನಿನಗೆ ನಮಸ್ಕಾರವು. 'ಪರಮಾತ್ಮನು ಇದ್ದಾನೆ. ಪರಮಾತ್ಮನು ಇಲ್ಲ. ಅವನು ಸರ್ವಜ್ಞನು. ಸರ್ವಜ್ಞನಲ್ಲ'–ಇವೇ ಮುಂತಾದ ವಾದ-ವಿವಾದಗಳಿಗೆ ವಿಷಯನಾಗಿಯೂ, ಶಬ್ದರೂಪ ನಾಗಿಯೂ, ಶಬ್ದಾರ್ಥರೂಪನಾಗಿಯೂ ಮತ್ತು ಅವೆರಡಕ್ಕೂ ಸಂಬಂಧ ವನ್ನು ಕಲ್ಪಿಸುವ ಶಕ್ತಿಯುಳ್ಳವನಾಗಿಯೂ ಇರುವ ನಿನಗೆ ನಮಸ್ಕಾರವು.

**ನಮಃ ಪ್ರಮಾಣಮೂಲಾಯ ಕವಯೇ ಶಾಸ್ತ್ರಯೋನಯೇ ।**
**ಪ್ರವೃತ್ತಾಯ ನಿವೃತ್ತಾಯ ನಿಗಮಾಯ ನಮೋ ನಮಃ ॥೪೪॥**

ಪ್ರತ್ಯಕ್ಷಪ್ರಮಾಣ, ಅನುಮಾನಪ್ರಮಾಣ ಮತ್ತು ಶಬ್ದಪ್ರಮಾಣ– ಈ ಪ್ರಮಾಣಗಳನ್ನು ಪ್ರಮಾಣೀಕರಿಸುವ ಮೂಲಪುರುಷನು ನೀನೇ ಆಗಿರುವೆ. ಸಮಸ್ತವೇದ-ಶಾಸ್ತ್ರಗಳಿಗೂ ನೀನೇ ಉಗಮಸ್ಥಾನವಾಗಿರುವೆ. ನೀನು ಜ್ಞಾನಸ್ವರೂಪನಾಗಿರುವೆ. ಪ್ರವೃತ್ತಿಮಾರ್ಗಸ್ವರೂಪನೂ, ನಿವೃತ್ತಿ ಮಾರ್ಗಸ್ವರೂಪನೂ ನೀನೇ ಆಗಿರುವೆ. ಪ್ರವೃತ್ತಿ-ನಿವೃತ್ತಿಮಾರ್ಗಗಳ ವಿಧಾಯಕನಾದ ವೇದಸ್ವರೂಪನೂ ನೀನೇ. ಅಂತಹ ನಿನಗೆ ನಮಸ್ಕಾರವು.

**ನಮಃ ಕೃಷ್ಣಾಯ ರಾಮಾಯ ವಸುದೇವಸುತಾಯ ಚ ।**
**ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥೪೫॥**

ಕೃಷ್ಣನಿಗೆ ನಮಸ್ಕಾರವು ; ರಾಮನಿಗೆ ನಮಸ್ಕಾರವು. ಶುದ್ಧಸತ್ತ್ವ ಮಯನಾದ ವಸುದೇವಪುತ್ರ ಶ್ರೀಕೃಷ್ಣವಾಸುದೇವನಾಗಿರುವ ನಿನಗೆ ನಮಸ್ಕಾರವು. ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೂ ನೀನೇ ಆಗಿರುವೆ. ಹೀಗೆ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರೆಂಬ ನಾಲ್ಕು ಮೂರ್ತಿಗಳ ರೂಪದಲ್ಲಿ ಭಕ್ತರಿಗೂ ಮತ್ತು ಯಾದವರಿಗೂ ಸ್ವಾಮಿ ಯಾಗಿರುವ ಶ್ರೀಕೃಷ್ಣನಿಗೆ ನಮಸ್ಕರಿಸುತ್ತೇವೆ.

**ನಮೋ ಗುಣಪ್ರದೀಪಾಯ ಗುಣಾತ್ಮಚ್ಛಾದನಾಯ ಚ ।**
**ಗುಣವೃತ್ತ್ಯುಪಲಕ್ಷ್ಯಾಯ ಗುಣದ್ರಷ್ಟ್ರೇ ಸ್ವಸಂವಿದೇ ॥೪೬॥**

ನೀನು ತ್ರಿಗುಣಗಳನ್ನು ಪ್ರಕಾಶಪಡಿಸುವವನು; ತ್ರಿಗುಣಗಳಿಂದ ಸ್ವಸ್ವರೂಪವನ್ನು ಮರೆಮಾಡಿಕೊಂಡಿರುವವನೂ ನೀನೇ. ಚಿತ್ತಾದಿಗಳ ಮೂಲಕವಾಗಿಯೇ ಉಪಾಸಕರಿಗೆ ವಿಚಿತ್ರಫಲವನ್ನುಂಟುಮಾಡುವುದಕ್ಕಾಗಿ ಹಲವು ರೂಪದಿಂದ ತೋರುವ ನೀನು ಈ ಗುಣಗಳಿಗೂ ಮತ್ತು ಅವುಗಳ ವೃತ್ತಿಗಳಿಗೂ ಸಾಕ್ಷೀಭೂತನೂ, ಸ್ವಯಂಪ್ರಕಾಶನೂ ಆಗಿರುವೆ. ಅಂತಹ ನಿನಗೆ ನಮಸ್ಕಾರವು.

**ಅವ್ಯಾಕೃತವಿಹಾರಾಯ ಸರ್ವವ್ಯಾಕೃತಸಿದ್ಧಯೇ ।**
**ಹೃಷೀಕೇಶ ನಮಸ್ತೇಽಸ್ತು ಮುನಯೇ ಮೌನಶೀಲಿನೇ ॥೪೭॥**

ಮಹಾನುಭಾವನೇ! ನೀನು ಮೂಲಪ್ರಕೃತಿಯಲ್ಲಿ ನಿತ್ಯವೂ ವಿಹರಿಸುವೆ. ಸಮಸ್ತವಾದ ಸ್ಥೂಲ ಮತ್ತು ಸೂಕ್ಷ್ಮಜಗತ್ತು ನಿನ್ನಿಂದಲೇ ಸಿದ್ಧವಾಗುತ್ತದೆ. ಹೃಷೀಕೇಶನೇ! ನೀನು ಮನನಶೀಲನಾದ ಆತ್ಮಾರಾಮ ನಾಗಿರುವೆ. ಮೌನವೇ ನಿನ್ನ ಸ್ವಭಾವವಾಗಿದೆ. ಅಂತಹ ನಿನಗೆ ನಮಸ್ಕರಿಸುತ್ತೇವೆ.

**ಪರಾವರಗತಿಜ್ಞಾಯ ಸರ್ವಾಧ್ಯಕ್ಷಾಯ ತೇ ನಮಃ ।**
**ಅವಿಶ್ವಾಯ ಚ ವಿಶ್ವಾಯ ತದ್ದ್ರಷ್ಟ್ರೇಽಸ್ಯ ಚ ಹೇತವೇ ॥೪೮॥**

ನೀನು ಸ್ಥೂಲವಾದ ಮತ್ತು ಸೂಕ್ಷ್ಮವಾದ ಸಮಸ್ತಗತಿಗಳನ್ನೂ ತಿಳಿದವನಾಗಿರುವೆ ಮತ್ತು ಎಲ್ಲಕ್ಕೂ ಸಾಕ್ಷೀಭೂತನಾಗಿರುವೆ. ನೀನು ವಿಶ್ವವಲ್ಲದಿದ್ದರೂ ವಿಶ್ವದ ಸ್ವರೂಪನಾಗಿರುವೆ. ಅಂತಹ ವಿಶ್ವಕ್ಕೆ ಸಾಕ್ಷೀ ಭೂತನೂ ಆಗಿರುವೆ ಮತ್ತು ಕಾರಣನೂ ಆಗಿರುವೆ. ಅಂತಹ ಸರ್ವೋತ್ಕೃಷ್ಟ ಮಹಿಮನಾಗಿರುವ ನಿನಗೆ ನಮಸ್ಕಾರಮಾಡುತ್ತೇವೆ.*

---

* **ಶರೀರೇಷು ಪ್ರತಿಷ್ಠತ್ವಾತ್ ವಿಶ್ವೋಜೀವ ಉದೀರ್ಯತೇ ॥**
**ಜೀವಸ್ಯ ತದಧೀನತ್ವಾದ್ವಿಶ್ವೋ ವಿಷ್ಣುರಿತಿ ಸ್ಮೃತಃ ।**
**ಅಸ್ಯೋತ್ಪತ್ತ್ಯಾದಿ ಹೇತುತ್ವಾದ್ವಿಶ್ವ ಹೇತುಶ್ಚ ಕೀರ್ತಿತಃ ॥**

ಶರೀರದಲ್ಲಿ ನೆಲೆಸಿರುವುದರಿಂದ ಜೀವಕ್ಕೆ 'ವಿಶ್ವ'–ಎಂದು ಹೆಸರು. ಆ ವಿಶ್ವನು (ಜೀವನು) ವಿಷ್ಣುವಿಗೆ ಅಧೀನನಾಗಿರುವುದರಿಂದ ವಿಷ್ಣುವೂ 'ವಿಶ್ವ'–ಎಂದು ಹೇಳಲ್ಪಡುತ್ತಾನೆ. ಈ ವಿಶ್ವನ (ಜೀವನ) ಉತ್ಪತ್ತಿ, ಸ್ಥಿತಿ, ಸ್ವಾತಂತ್ರ್ಯ ಮುಂತಾದುವುಗಳಿಗೆ

**ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ಪ್ರಭೋ**
**ಗುಣೈರನೀಹೋಽಕೃತ ಕಾಲಶಕ್ತಿಧೃಕ್ ।**
**ತತ್ತತ್ಸ್ವಭಾವಾನ್ಪ್ರತಿಬೋಧಯನ್ಸತಃ**
**ಸಮೀಕ್ಷಯಾಮೋಘವಿಹಾರ ಈಹಸೇ ॥೪೯॥**

ಪ್ರಭುವೇ! ನೀನು ತ್ರಿಗುಣಾತೀತನಾಗಿದ್ದರೂ ಅನಾದಿಯಾದ ಕಾಲ ಶಕ್ತಿಯನ್ನು ಪ್ರೇರಿಸಿ ಪ್ರಕೃತಿಯ ಗುಣಗಳಾದ ಸತ್ತ್ವ-ರಜಸ್ಸು ಮತ್ತು ತಮಸ್ಸುಗಳ ಮೂಲಕ ಈ ವಿಶ್ವದ ಉತ್ಪತ್ತಿ-ಸ್ಥಿತಿ-ಲಯಗಳನ್ನು ಮಾಡುವೆ. ಇದು ನಿನ್ನ ಲೀಲೆಯಾಗಿದೆ. ನೀನು ಸತ್ಯಸಂಕಲ್ಪನು. ಆದುದರಿಂದಲೇ ಜೀವಗಳಲ್ಲಿ ಸಂಸ್ಕಾರರೂಪದಿಂದ ನಿಗೂಢವಾಗಿರುವ ಸ್ವಭಾವಗಳನ್ನು ನಿನ್ನ ದೃಷ್ಟಿಪಾತದಿಂದಲೇ ಜಾಗ್ರತಗೊಳಿಸುತ್ತಾ ವಿಹರಿಸುತ್ತಿರುವೆ.

**ತಸ್ಯೈವ ತೇಽಮೂಸ್ತನವಸ್ತ್ರಿಲೋಕ್ಯಾಂ**
**ಶಾನ್ತಾ ಅಶಾನ್ತಾ ಉತ ಮೂಢಯೋನಯಃ ।**
**ಶಾನ್ತಾಃ ಪ್ರಿಯಾಸ್ತೇ ಹ್ಯಧುನಾವಿತುಂ ಸತಾಂ**
**ಸ್ಥಾತುಶ್ಚ ತೇ ಧರ್ಮಪರೀಪ್ಸಯೇಹತಃ ॥೫೦॥**

ಪ್ರಭುವೇ! ಮೂರು ಲೋಕಗಳಲ್ಲಿಯೂ ಸತ್ತ್ವಗುಣಪ್ರಧಾನವಾದ ಶಾಂತ, ರಜೋಗುಣಪ್ರಧಾನವಾದ ಅಶಾಂತ ಮತ್ತು ತಮೋಗುಣಪ್ರಧಾನ ವಾದ ಮೂಢ–ಎಂಬ ಮುಬ್ಬಗೆಯಾದ ಮೂರ್ತಿಗಳಿವೆ. ಈ ಮೂರೂ ನಿನ್ನ ಲೀಲಾಮೂರ್ತಿಗಳೇ ಆಗಿವೆ. ಆದರೂ ಈ ಸಮಯದಲ್ಲಿ ಸತ್ತ್ವಗುಣಪ್ರಧಾನವಾದ ಶಾಂತಮೂರ್ತಿಗಳೇ ನಿನ್ನ ವಿಶೇಷವಾದ ಪ್ರೀತಿಗೆ ಪಾತ್ರವಾಗಿವೆ. ಏಕೆಂದರೆ : ನಿನ್ನ ಈ ಸತ್ತ್ವಗುಣಮಯವಾದ ಅವತಾರವೇ ಶಿಷ್ಟರ ರಕ್ಷಣೆಗಾಗಿಯೂ ಧರ್ಮದ ರಕ್ಷಣೆ ಮತ್ತು ವಿಸ್ತಾರಕ್ಕಾಗಿಯೂ ಆಗಿದೆ.

**ಅಪರಾಧಃ ಸಕೃದ್ಭರ್ತ್ರಾ ಸೋಢವ್ಯಃ ಸ್ವಪ್ರಜಾಕೃತಃ ।**
**ಕ್ಷನ್ತುಮರ್ಹಸಿ ಶಾನ್ತಾತ್ಮನ್ಮೂಢಸ್ಯ ತ್ವಾಮಜಾನತಃ ॥೫೧॥**

---

ಕಾರಣನಾಗಿರುವುದರಿಂದ ವಿಷ್ಣುವು 'ವಿಶ್ವಹೇತು'–ಎಂದೂ ಕರೆಯಲ್ಪಡುತ್ತಾನೆ. (ವಿಜಯಧ್ವಜೀಯ)

ಶಾಂತಾತ್ಮನೇ! ರಾಜನಾದವನು ತನ್ನ ಪ್ರಜೆಗಳು ಮಾಡಿದ ಮೊದಲ ಅಪರಾಧವನ್ನು ಕ್ಷಮಿಸಬೇಕು. ಹಾಗೆಯೇ ನೀನು ಯಾರೆಂಬುದನ್ನು ತಿಳಿಯದೇ ಮಾಡಿರುವ ಈ ಮೂಢನ (ನಮ್ಮ ಪತಿಯ) ಈ ಅಪರಾಧವನ್ನು ಕ್ಷಮಿಸಿಬಿಡು.

**ಅನುಗೃಹ್ಣೀಷ್ವ ಭಗವನ್ಪ್ರಾಣಾಂಸ್ತ್ಯಜತಿ ಪನ್ನಗಃ ।**
**ಸ್ತ್ರೀಣಾಂ ನಃ ಸಾಧುಶೋಚ್ಯಾನಾಂ ಪತಿಃ ಪ್ರಾಣಃ ಪ್ರದೀಯತಾಮ್ ॥**

ಭಗವಂತನೇ! ದಯೆತೋರು. ಇಷ್ಟರಲ್ಲಿಯೇ ಈ ನಾಗರಾಜನು ಮರಣಹೊಂದುವುದರಲ್ಲಿದ್ದಾನೆ. ಸಾಧುಪುರುಷರು ಯಾವಾಗಲೂ ನಮ್ಮಂತಹ ಅಬಲೆಯರ ಮೇಲೆ ದಯೆತೋರುತ್ತಾರೆ. ಆದುದರಿಂದ ಪ್ರಾಣ ಸ್ವರೂಪನಾಗಿರುವ ನಮ್ಮ ಪತಿಯನ್ನು ನಮಗೆ ದಯಪಾಲಿಸು.

**ವಿಧೇಹಿ ತೇ ಕಿಙ್ಕರೀಣಾಮನುಷ್ಠೇಯಂ ತವಾಜ್ಞಯಾ ।**
**ಯಚ್ಛ್ರದ್ಧಯಾನುತಿಷ್ಠನ್ವೈ ಮುಚ್ಯತೇ ಸರ್ವತೋ ಭಯಾತ್ ॥**

ಪ್ರಭುವೇ! ನಾವು ನಿನ್ನ ದಾಸಿಯರಾಗಿದ್ದೇವೆ. ನಾವು ನಿನಗೆ ಯಾವ ವಿಧವಾದ ಸೇವೆಯನ್ನು ಮಾಡಬೇಕೆಂಬುದರ ಬಗೆಗೆ ನಮಗೆ ಆಜ್ಞಾಪಿಸು. ಯಾರು ನಿನ್ನ ಆಜ್ಞೆಯನ್ನೂ ಮತ್ತು ಸೇವೆಯನ್ನೂ ಶ್ರದ್ಧೆಯಿಂದ ಮಾಡುವರೋ ಅಂತಹವರು ಸಮಸ್ತವಾದ ಭಯಗಳಿಂದಲೂ ಮುಕ್ತರಾಗುತ್ತಾರೆ.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ನೃತ್ಯದ ನೆಪದಿಂದ ಭಗವಂತನು ಬೀರಿದ ಪಾದಗಳ ಪ್ರಹಾರಗಳಿಂದ ಕಾಳಿಯನ ಹೆಡೆಗಳು ಛಿನ್ನ-ಭಿನ್ನವಾಗಿದ್ದುವು. ಅವನು ಎಚ್ಚರತಪ್ಪಿ ತಲೆಗಳನ್ನು ತಗ್ಗಿಸಿಕೊಂಡೇ ಇದ್ದನು. ನಾಗರಾಜನ ಪತ್ನಿಯರು ಹೀಗೆ ಪ್ರಾರ್ಥಿಸಿಕೊಂಡನಂತರ ದಯಾಮಯನಾದ ಭಗವಂತನು ಕಾಳಿಯನನ್ನು ಬಿಟ್ಟುಬಿಟ್ಟನು. ಮೆಲ್ಲ-ಮೆಲ್ಲಗೆ ಆ ಕಾಳಿಯನಿಗೆ ಪ್ರಾಣಗಳಲ್ಲಿಯೂ ಇಂದ್ರಿಯಗಳಲ್ಲಿಯೂ ಚೇತನವುಂಟಾಯಿತು. ಆತನು ಬಹಳ ಕಷ್ಟದಿಂದ ಉಸಿರಾಡಲು ಪ್ರಾರಂಭಿಸಿದನು. ಸ್ವಲ್ಪಹೊತ್ತಾದನಂತರ ಆತನು ಕೈಗಳನ್ನು ಜೋಡಿಸಿಕೊಂಡು ದೈನ್ಯದಿಂದ ಶ್ರೀಕೃಷ್ಣನಿಗೆ ಹೇಳಿದನು :

"ನಾಥನೇ! ನಾವು ಜನ್ಮದಿಂದಲೇ ದುಷ್ಟರಾಗಿದ್ದೇವೆ. ತಮೋಗುಣಿಗಳಾಗಿದ್ದೇವೆ. ದೀರ್ಘಕೋಪಿಗಳಾಗಿದ್ದೇವೆ. ಪ್ರಾಣಿಗಳಿಗೆ ತಮ್ಮ ಸ್ವಭಾವವನ್ನು ಬಿಡುವುದು ಬಹಳ ಕಷ್ಟವೇ ಸರಿ. ಈ ಕಾರಣದಿಂದಲೇ ಪ್ರಪಂಚದ ಜನರು ನಾನಾಪ್ರಕಾರವಾದ ದುರಾಗ್ರಹಗಳಿಂದ ಕೂಡಿರುತ್ತಾರೆ. ವಿಶ್ವವಿಧಾತನೇ! ಸತ್ತ್ವ-ರಜಸ್ತಮೋಗುಣಗಳಿಂದ ನೀನೇ ಸೃಷ್ಟಿಸಿರುವ ಈ ಜಗತ್ತಿನಲ್ಲಿ ನಾನಾಪ್ರಕಾರವಾದ ಸ್ವಭಾವ, ವೀರ್ಯ, ಬಲ, ಯೋನಿ, ಬೀಜ, ಚಿತ್ತ ಮತ್ತು ಆಕೃತಿಗಳಿರುವ ಪ್ರಾಣಿಗಳಿವೆ.

ಆ ನಿನ್ನ ಸೃಷ್ಟಿಯಲ್ಲಿಯೇ ನಾವು ಸೇರಿದ್ದು ಸರ್ಪಯೋನಿಯಲ್ಲಿ ಹುಟ್ಟಿದ್ದೇವೆ. ತಮೋಗುಣಿಗಳಾದ ನಾವು ಹುಟ್ಟಿನಿಂದಲೇ ಕೋಪಿಷ್ಠರಾಗಿದ್ದೇವೆ. ನಿನ್ನ ಈ ಮಾಯಾಚಕ್ರಕ್ಕೆ ಸಿಕ್ಕಿ ನಾವೂ ಮೋಹಿತರಾಗಿದ್ದೇವೆ. ಬಹಳ ಪ್ರಯತ್ನದಿಂದಲೂ ಪರಿತ್ಯಜಿಸಲಾಗದ ನಿನ್ನ ಮಾಯೆಯನ್ನು ಹೇಗೆ ತಾನೇ ಬಿಟ್ಟೇವು? ಮಾಯಾತೀತರಾಗಲು ಹೇಗೆ ಸಾಧ್ಯ? ನೀನು ಸರ್ವಜ್ಞನೂ ಜಗದೀಶ್ವರನೂ ಆಗಿರುವೆ. ನಮ್ಮನ್ನಾವರಿಸಿರುವ ಮಾಯೆಗೂ ಮತ್ತು ನಮ್ಮ ಸ್ವಭಾವಕ್ಕೂ ನೀನೇ ಕಾರಣನಾಗಿರುವೆ. ಈಗ ನೀನು ನಿನ್ನ ಇಚ್ಛೆಯಂತೆ ನನ್ನನ್ನು ನಿಗ್ರಹಿಸಲೂಬಹುದು. ಅನುಗ್ರಹಿಸಲೂಬಹುದು."

ಶ್ರೀಶುಕಮುನಿಗಳು ಹೇಳುತ್ತಾರೆ :

ಮಹಾರಾಜ! ಕಾಳಿಯನಾಗನ ಈ ಮಾತನ್ನು ಕೇಳಿ ಲೀಲಾಮಾನುಷ ವಿಗ್ರಹನಾದ ಕೃಷ್ಣಮೂರ್ತಿಯು ಹೇಳಿದನು :

"ಕಾಳಿಯನಾಗನೇ! ನೀನು ಇನ್ನು ಮುಂದೆ ಯಮುನೆಯ ಈ ಮಡುವಿನಲ್ಲಿರಬಾರದು. ನಿನ್ನ ಪುತ್ರ-ಭ್ರಾತೃ-ಭಾರ್ಯಾ-ಬಂಧುಗಳೊಡನೆ ಸಮುದ್ರಕ್ಕೆ ಹೊರಟುಹೋಗಬೇಕು. ಇಲ್ಲಿರುವ ಗೋವುಗಳೂ ಗೋಪಾಲಕರೂ ಯಮುನೆಯ ನೀರನ್ನು ಉಪಯೋಗಿಸುವಂತಾಗಬೇಕು.

ಯ ಏತತ್ಸಂಸ್ಮರೇನ್ಮರ್ತ್ಯ-
ಸ್ತುಭ್ಯಂ ಮದನುಶಾಸನಮ್ ।
ಕೀರ್ತಯನ್ನುಭಯೋಃ ಸನ್ಧ್ಯೋ-
ರ್ನ ಯುಷ್ಮದ್ಭಯಮಾಪ್ನುಯಾತ್ ॥೬೧॥

ಯಾವ ಮನುಷ್ಯನು ಎರಡು ಸಂಧ್ಯಾಕಾಲಗಳಲ್ಲಿಯೂ ನಾನು ನಿನಗಿತ್ತಿರುವ ಈ ಆಜ್ಞೆಯನ್ನು ಸ್ಮರಿಸುವನೋ ಮತ್ತು ಈ ಪ್ರಕರಣವನ್ನು ಪಠನಮಾಡುವನೋ ಅಂತಹವನಿಗೆ ನಿಮ್ಮಿಂದ (ಸರ್ಪಗಳಿಂದ) ಯಾವಾಗಲೂ ಭಯವುಂಟಾಗಬಾರದು.

**ಯೋಽಸ್ಮಿನ್ಸ್ನಾತ್ವಾ ಮದಾಕ್ರೀಡೇ ದೇವಾದೀಂಸ್ತರ್ಪಯೇಜ್ಜಲೈಃ ।**
**ಉಪೋಷ್ಯ ಮಾಂ ಸ್ಮರನ್ನರ್ಚೇತ್ಸರ್ವಪಾಪೈಃ ಪ್ರಮುಚ್ಯತೇ ॥೬೨॥**

ನಾನು ಈ ಮಡುವಿನಲ್ಲಿ ಕ್ರೀಡೆಯಾಡಿದ್ದೇನೆ. ಆದುದರಿಂದ ಯಾವ ಮನುಷ್ಯನು ಇಲ್ಲಿ ಸ್ನಾನಮಾಡಿ ದೇವ-ಪಿತೃಗಳಿಗೆ ಜಲತರ್ಪಣವನ್ನು ಕೊಡುವನೋ, ಉಪವಾಸವಿದ್ದು ನನ್ನ ಸ್ಮರಣೆಮಾಡುತ್ತಾ ನನ್ನನ್ನು ಅರ್ಚಿಸುವನೋ–ಅಂತಹವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಕಾಳಿಯನೇ! ನೀನು ಗರುಡನ ಭಯದಿಂದಾಗಿ ರಮಣಕದ್ವೀಪವನ್ನು ಬಿಟ್ಟು ಇಲ್ಲಿಗೆ ಬಂದು ಸೇರಿಕೊಂಡಿರುವೆಯಲ್ಲವೇ? ಈಗ ನಿನ್ನ ಶರೀರವು ನನ್ನ ಚರಣಗಳ ಚಿಹ್ನೆಯಿಂದ ಅಂಕಿತವಾಗಿದೆ. ಆದುದರಿಂದ ಮುಂದೆ ಗರುಡನು ನಿನ್ನನ್ನು ತಿನ್ನಲು ಬರುವುದಿಲ್ಲ. ಮುಂದೆ ನಿನಗೆ ಗರುಡನಿಂದ ಭಯವಿಲ್ಲ. ಆದುದರಿಂದ ನೀನು ನಿರ್ಭಯನಾಗಿ ಸಮುದ್ರಕ್ಕೆ ಹೋಗಬಹುದು.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತ! ಅದ್ಭುತಲೀಲನಾದ ಶ್ರೀಕೃಷ್ಣನು ಹೀಗೆ ಹೇಳುತ್ತಲೇ ಕಾಳಿಯನಾಗನು ಮತ್ತು ಅವನ ಪತ್ನಿಯರು ಆನಂದತುಂದಿಲರಾಗಿ ಅತ್ಯಂತ ಆದರದಿಂದ ಶ್ರೀಕೃಷ್ಣಸ್ವಾಮಿಯನ್ನು ಪೂಜಿಸಿದರು. ಕಾಳಿಯನು ಮತ್ತು ಅವನ ಪತ್ನಿಯರು ದಿವ್ಯವಾದ ವಸ್ತ್ರಗಳಿಂದಲೂ, ಪುಷ್ಪವಾಟಿಕೆಗಳಿಂದಲೂ, ಮಣಿಗಳಿಂದಲೂ, ಬಹುಮೂಲ್ಯವಾದ ಆಭರಣಗಳಿಂದಲೂ, ದಿವ್ಯವಾದ ಗಂಧದಿಂದಲೂ, ದೊಡ್ಡದಾದ ಕಮಲಗಳ ಮಾಲೆಯಿಂದಲೂ ಜಗದೀಶ್ವರನಾದ, ಗರುಡಧ್ವಜನಾದ ಶ್ರೀಕೃಷ್ಣನನ್ನು ಭಕ್ತಿಯಿಂದ ಪೂಜಿಸಿ ಪ್ರಸನ್ನಗೊಳಿಸಿದರು. ಬಳಿಕ ಪ್ರೇಮದಿಂದಲೂ ಆನಂದದಿಂದಲೂ ಪ್ರದಕ್ಷಿಣ

ನಮಸ್ಕಾರಮಾಡಿ ಅಲ್ಲಿಂದ ಪ್ರಯಾಣಮಾಡಲು ಅವನ ಅನುಮತಿಯನ್ನು ಪಡೆದುಕೊಂಡರು. ಅನಂತರ ಕಾಳಿಯನು ಪತ್ನೀ-ಪುತ್ರ-ಜ್ಞಾತಿ-ಬಂಧುಗಳ ಸಮೇತನಾಗಿ ಸಮುದ್ರದ ಮಧ್ಯದಲ್ಲಿ ಸರ್ಪಗಳಿಗೆ ವಾಸಮಾಡಲು ಯೋಗ್ಯವಾಗಿದ್ದ ರಮಣಕದ್ವೀಪಕ್ಕೆ ಪ್ರಯಾಣಮಾಡಿದನು. ಲೀಲಾ ಮಾನುಷವಿಗ್ರಹನಾದ ಶ್ರೀಕೃಷ್ಣಸ್ವಾಮಿಯು ತನ್ನ ಅನುಗ್ರಹದಿಂದ ಯಮುನಾನದಿಯ ಜಲವನ್ನು ವಿಷದಿಂದ ರಹಿತವನ್ನಾಗಿ ಮಾಡಿದುದಲ್ಲದೆ ಅದನ್ನು ಅಮೃತಮಯವನ್ನಾಗಿಯೂ ಮಾಡಿಬಿಟ್ಟನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೬ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೧೭ನೆಯ ಅಧ್ಯಾಯ

## ಕಾಳಿಯನು ಯಮುನೆಯ ಮಡುವಿಗೆ ಬರಲು ಕಾರಣ : ದಾವಾನಲದಿಂದ ವ್ರಜವಾಸಿಗಳ ಮುಕ್ತಿ

ರಾಜನು ಪ್ರಶ್ನಿಸುತ್ತಾನೆ :

**ನಾಗಾಲಯಂ ರಮಣಕಂ ಕಸ್ಮಾತ್ತತ್ಯಾಜ ಕಾಲಿಯಃ ।**
**ಕೃತಂ ಕಿಂ ವಾ ಸುಪರ್ಣಸ್ಯ ತೇನೈಕೇನಾಸಮಞ್ಜಸಮ್ ॥೧॥**

"ಪೂಜ್ಯರೇ! ಕಾಳಿಯನಾಗನು ಸರ್ಪಗಳ ನಿವಾಸಸ್ಥಾನವಾದ ರಮಣಕದ್ವೀಪವನ್ನು ಹಿಂದೆ ಏಕೆ ಪರಿತ್ಯಜಿಸಿ ಯಮುನಾನದಿಯ ಮಡುವಿಗೆ ಬಂದು ಸೇರಿಕೊಂಡನು? ಆ ಕಾಳಿಯನೊಬ್ಬನೇ ಗರುಡನಿಗೆ ಮಾಡಿದ ಅಪರಾಧವಾದರೂ ಏನು?"

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತನೇ! ಗರುಡಪಕ್ಷಿಗೆ ಆಹಾರವಸ್ತುವೆಂದರೆ ಸರ್ಪಗಳೇ. ಪೂರ್ವಕಾಲದಲ್ಲಿ ಗರುಡನೂ-ಸರ್ಪಗಳೂ ಸೇರಿ ಗರುಡನ ಸರ್ಪಾಹಾರದ ವಿಷಯದಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದುವು. ಆ ಒಪ್ಪಂದ ದಂತೆ ಪ್ರತಿಯೊಂದು ತಿಂಗಳೂ ಸರ್ಪಗಳು ನಿರ್ದಿಷ್ಟವಾದ ಒಂದು ವೃಕ್ಷದಡಿ ಯಲ್ಲಿ ಗರುಡನ ಆಹಾರಕ್ಕಾಗಿ ಹಾವುಗಳನ್ನು ಒಪ್ಪಿಸಬೇಕಾಗಿದ್ದಿತು. ಈ ಒಪ್ಪಂದದ ಪ್ರಕಾರವಾಗಿ ಗರುಡನು ಮನಬಂದಂತೆ ತನಗೆ ಸಿಕ್ಕಿದ ಹಾವು

ಗಳನ್ನೆಲ್ಲಾ ಸ್ವೇಚ್ಛೆಯಿಂದ ತಿನ್ನುವಂತಿರಲಿಲ್ಲ. ಈ ನಿಯಮಕ್ಕೆ ಅನುಸಾರವಾಗಿ ಪ್ರತಿಯೊಂದು ಅಮಾವಾಸ್ಯೆಯಲ್ಲಿಯೂ ಸರ್ಪಗಳು ತಮ್ಮ ರಕ್ಷಣೆಗಾಗಿ ತಮ್ಮ-ತಮ್ಮ ಭಾಗಗಳನ್ನು ಸುಪರ್ಣನಿಗೆ ಅರ್ಪಿಸಿಬಿಡುತ್ತಿದ್ದುವು.* ಕದ್ರುವಿನ ಆ ಮಕ್ಕಳಲ್ಲಿ ಕಾಳಿಯನೆಂಬ ನಾಗನು ತನ್ನಲ್ಲಿದ್ದ ಘೋರವಾದ ವಿಷ ದಿಂದಲೂ ಮತ್ತು ಬಲದಿಂದಲೂ ಮಹಾಗರ್ವಿಷ್ಠನಾಗಿದ್ದನು. ಅವನು ತನ್ನ ಪರಿವಾರದಿಂದ ಸರ್ಪವನ್ನು ಸುಪರ್ಣನಿಗೆ ಬಲಿಯಾಗಿ ಕೊಡದಿದ್ದುದು ಮಾತ್ರವಲ್ಲದೆ ಬೇರೆಯ ಸರ್ಪಗಳು ಗರುಡನಿಗೆ ಇಟ್ಟಿದ್ದ ಬಲಿಯನ್ನೂ (ಸರ್ಪವನ್ನೂ ) ಅವನೇ ಭಕ್ಷಿಸಿಬಿಡುತ್ತಿದ್ದನು. ಹೀಗೆ ಕಾಳಿಯನು ಗರುಡ ನನ್ನು ಬಹಳ ತಿರಸ್ಕಾರದಿಂದ ಕಾಣುತ್ತಿದ್ದನು. ಆತನು ತನ್ನನ್ನು ಬಹಳ ತಿರಸ್ಕಾರಭಾವನೆಯಿಂದ ಕಾಣುತ್ತಿದ್ದಾನೆಂಬುದನ್ನು ತಿಳಿದು ಭಗವಂತನಿಗೆ ಅತ್ಯಂತಪ್ರಿಯನಾದ ಸುಪರ್ಣನು ಬಹಳವಾಗಿ ಕೋಪಗೊಂಡನು. ಅವನನ್ನು ಆ ಕ್ಷಣದಲ್ಲಿಯೇ ಸಂಹರಿಸಿಬಿಡಬೇಕೆಂದು ನಿಶ್ಚಯಿಸಿ ಸುಪರ್ಣನು ಅತ್ಯಂತ ವೇಗದಿಂದ ಬಂದು ನಾಗನನ್ನು ಆಕ್ರಮಿಸಿದನು. ವಿಷಬಲಗರ್ವಿತನಾದ ಕಾಳಿಯನಾಗನು, ಗರುಡನು ತನ್ನನ್ನು ಆಕ್ರಮಿಸಲು ಬರುತ್ತಿರುವನೆಂದು ತಿಳಿದೊಡನೆಯೇ ತನ್ನ ನೂರೊಂದು ಹೆಡೆಗಳನ್ನೂ ಎತ್ತಿಕೊಂಡು ಗರುಡ

---

* ಗರುಡನಿಗೂ ಸರ್ಪಗಳಿಗೂ ಆದ ಒಪ್ಪಂದದ ಕಥೆಯು ಹೀಗಿದೆ :

ಗರುಡನ ತಾಯಿಯಾದ ವಿನತೆಗೂ ಸರ್ಪಗಳ ತಾಯಿಯಾದ ಕದ್ರುವಿಗೂ ಪರಸ್ಪರ ದ್ವೇಷವಿದ್ದಿತು. ಕದ್ರುವಿನ ಮಕ್ಕಳಾದ ಸರ್ಪಗಳು ವಿನತೆಯನ್ನು ದ್ವೇಷಿಸುತ್ತಿದ್ದುವು. ಇದರಿಂದ ಕುಪಿತನಾದ ಗರುಡನು ಕಣ್ಣಿಗೆ ಬಿದ್ದ ಸರ್ಪಗಳೆಲ್ಲವನ್ನೂ ತಿನ್ನಲು ಪ್ರಾರಂಭಿಸಿದನು. ಇದರಿಂದ ವ್ಯಾಕುಲಗೊಂಡ ಸರ್ಪಗಳು ಬ್ರಹ್ಮನ ಬಳಿಗೆ ಹೋಗಿ ತಮ್ಮ ಕಷ್ಟವನ್ನು ಹೇಳಿಕೊಂಡುವು. ಆಗ ಬ್ರಹ್ಮನು ಈ ನಿಯಮವನ್ನು ಮಾಡಿದನು : ಪ್ರತಿಯೊಂದು ಅಮಾವಾಸ್ಯೆಯ ದಿನದಲ್ಲಿಯೂ ಎಲ್ಲ ಸರ್ಪಪರಿವಾರದವರೂ ತಮ್ಮ ಪರಿವಾರದಿಂದ ಒಂದೊಂದು ಸರ್ಪವನ್ನು ಗರುಡನಿಗೆ ಅರ್ಪಿಸಬೇಕು. ಈ ಲೋಕದಲ್ಲಿ ಸರ್ಪೋಪದ್ರವಪರಿಹಾರಕ್ಕಾಗಿ ಸರ್ಪೋಪಾಸಕರು ಪ್ರತಿತಿಂಗಳಲ್ಲಿಯೂ ಸರ್ಪಗಳಿಗೆ ವೃಕ್ಷಮೂಲದಲ್ಲಿ ಕೊಡಬೇಕೆಂದು ಕ್ಲುಪ್ತವಾಗಿರುವ ಯಾವ ಬಲಿಯುಂಟೋ ಆ ಬಲಿಯಲ್ಲಿ ಸರ್ಪಗಳು ಸ್ವಲ್ಪ ಭಾಗವನ್ನು ಗರುಡನಿಗೂ ಕೊಡುತ್ತಿದ್ದುವು. ಒಮ್ಮೆ ಆ ಭಾಗವನ್ನು ಕಾಳಿಯನು ಅಪಹರಿಸಿದನು—ಎಂದೂ ಅರ್ಥಮಾಡುತ್ತಾರೆ.

ನನ್ನು ಎದುರಿಸಿದನು. ವಿಷವಿರುವ ಹಲ್ಲುಗಳೇ ಕಾಳಿಯನಾಗನ ಶಸ್ತ್ರಗಳಾಗಿದ್ದುವು. ಆ ಹಲ್ಲುಗಳಿಂದಲೇ ನಾಗನು ಗರುಡನನ್ನು ಕಚ್ಚತೊಡಗಿದನು. ಆ ಸಮಯದಲ್ಲಿ ಉಗ್ರಕೋಪನಾದ ಕಾಳಿಯನಾಗನು ತನ್ನ ಭಯಂಕರವಾದ ಎರಡೆರಡು ನಾಲಿಗೆಗಳಿಂದ ಕಟವಾಯಿಗಳನ್ನು ನೆಕ್ಕಿಕೊಳ್ಳುತ್ತಿದ್ದನು. ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದನು. ಭಯಂಕರವಾದ ಕಣ್ಣುಗಳಿಂದ ಗರುಡನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದನು. *ತಾರ್ಕ್ಷ್ಯಪುತ್ರನಾದ ಗರುಡನು ವಿಷ್ಣುವಿನ ವಾಹನವಾಗಿದ್ದನು. ಅವನು ಪ್ರಚಂಡವೇಗನೂ ಉಗ್ರಪರಾಕ್ರಮಿಯೂ ಆಗಿದ್ದನು. ಕಾಳಿಯನಾಗನು ತನ್ನನ್ನು ಎದುರಿಸಿದ್ದನ್ನೂ ಹಲ್ಲುಗಳಿಂದ ಕಚ್ಚುತ್ತಿರುವುದನ್ನೂ ನೋಡಿ ಅತ್ಯಂತಕುಪಿತನಾಗಿ ಸುವರ್ಣಮಯವಾದ ತನ್ನ ಎಡಭಾಗದ ರೆಕ್ಕೆಯಿಂದ ನಾಗನನ್ನು ಅಪ್ಪಳಿಸಿದನು. ಗರುಡನ ರೆಕ್ಕೆಯ ಪ್ರಹಾರದಿಂದ ಕಾಳಿಯನು ಬಹಳವಾಗಿ ಗಾಯಗೊಂಡನು. ಆತನು ಗರುಡನನ್ನು ಎದುರಿಸಿ ನಿಲ್ಲಲಾಗದೆ ಗಾಬರಿಗೊಂಡು ಯಮುನೆಯ ಮಡುವಿಗೆ ಓಡಿಹೋಗಿ ಅದರಲ್ಲಿ ಸೇರಿಕೊಂಡನು. ಯಮುನಾನದಿಯ ಆ ಕುಂಡವು ಗರುಡನಿಗೆ ಅಗಮ್ಯವಾಗಿದ್ದಿತು. ಅಲ್ಲಿಗೆ ಅವನು ಹೋಗುವಂತಿರಲಿಲ್ಲ. ಮೇಲಾಗಿ ಆ ಕುಂಡವು ಬೇರೆಯವರಿಗೆ ಪ್ರವೇಶಿಸಲಾಗದಷ್ಟು ಆಳವಾಗಿಯೂ ಇದ್ದಿತು.

ಪರೀಕ್ಷಿತನೇ! ಗರುಡನು ಯಮುನೆಯ ಆ ಮಡುವಿಗೆ ಹೋಗದಿರಲು ಕಾರಣವೇನೆಂಬುದನ್ನು ಹೇಳುವೆನು, ಕೇಳು : ಒಮ್ಮೆ ಹಸಿವಿನಿಂದ ಬಹಳವಾಗಿ ಬಳಲಿದ್ದ ಗರುಡನು ಈ ಮಡುವಿನ ಬಳಿಗೆ ಬಂದು ಅಲ್ಲಿದ್ದ ಮೀನುಗಳನ್ನು ತಿನ್ನಲು ಪ್ರಾರಂಭಿಸಿದನು. ಅಲ್ಲಿಯೇ ಇದ್ದ ಸೌಭರೀ ಮಹರ್ಷಿಯು ಬೇಡವೆಂದು ತಡೆದರೂ ಗರುಡನು ಅವನ ಮಾತನ್ನು ನಿರ್ಲಕ್ಷಿಸಿ ತನಗೆ ಬೇಕಾಗಿದ್ದ ಮೀನನ್ನು ಬಲಾತ್ಕಾರವಾಗಿ ನೀರಿನಿಂದ ಸೆಳೆದುಕೊಂಡು ನುಂಗಿಯೇಬಿಟ್ಟನು. ತಮಗೆ ರಾಜನಾಗಿದ್ದ ಮಹಾಮತ್ಸ್ಯವು ಹೀಗೆ ವಿನಾಶವಾಗಲು ನೀರಿನಲ್ಲಿದ್ದ ಮೀನುಗಳು ಬಹಳ ದುಃಖಗೊಂಡುವು. ಬಹಳ ದೈನ್ಯ

---

* ತೃಕ್ಷನೆಂಬ ಹೆಸರುಳ್ಳ ಮರೀಚಿ ಬ್ರಹ್ಮನಿಗೆ ಪುತ್ರನಾದುದರಿಂದ ಕಶ್ಯಪನಿಗೆ ತಾರ್ಕ್ಷ್ಯನೆಂದು ಹೆಸರಾಯಿತು. ಆ ತಾರ್ಕ್ಷ್ಯಕಶ್ಯಪನ ಪುತ್ರನೇ ತಾರ್ಕ್ಷ್ಯನೆಂದು ಪ್ರಸಿದ್ಧನಾದ ಗರುಡನು.

ದಿಂದ ದುಃಖಿಸುತ್ತಿದ್ದ ಆ ಮೀನುಗಳನ್ನು ನೋಡಿ ಪರಮದಯಾಳುವಾದ ಸೌಭರಿಯು ಅವುಗಳಿಗೆ ಕ್ಷೇಮವನ್ನುಂಟುಮಾಡುವ ಸಲುವಾಗಿ ಹೇಳಿದನು :

**ಅತ್ರ ಪ್ರವಿಶ್ಯ ಗರುಡೋ ಯದಿ ಮತ್ಸ್ಯಾನ್ಸ ಖಾದತಿ ।**
**ಸದ್ಯಃ ಪ್ರಾಣೈರ್ವಿಯುಜ್ಯೇತ ಸತ್ಯಮೇತದ್ಬ್ರವೀಮ್ಯಹಮ್ ॥೧೧॥**

"ಮುಂದೆ ಗರುಡನೇನಾದರೂ ಈ ಮಡುವನ್ನು ಪ್ರವೇಶಿಸಿ ಮೀನು ಗಳನ್ನೇನಾದರೂ ತಿಂದಿದ್ದೇ ಆದರೆ ಆ ಗರುಡನು ಒಡನೆಯೇ ಪ್ರಾಣಕಳೆದು ಕೊಳ್ಳುತ್ತಾನೆ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ."

ಪರೀಕ್ಷಿತನೇ! ಸೌಭರಿಯು ಗರುಡನಿಗೆ ಕೊಟ್ಟ ಈ ಶಾಪವು ಸರ್ಪ ಗಳಲ್ಲಿ ಕೇವಲ ಕಾಳಿಯನಾಗನಿಗೆ ತಿಳಿದಿದ್ದಿತು. ಹೀಗೆ ಗರುಡನ ಭಯ ದಿಂದಾಗಿ ಕಾಳಿಯನಾಗನು ಇಲ್ಲಿ ವಾಸಮಾಡುತ್ತಿದ್ದನು. ಭಗವಾನ್ ಶ್ರೀಕೃಷ್ಣನು ನಾಗನ ಮನಸ್ಸಿನಲ್ಲಿದ್ದ ಈ ಭಯವನ್ನು ಹೋಗಲಾಡಿಸಿ ಅವನನ್ನು ರಮಣಕದ್ವೀಪಕ್ಕೆ ಕಳುಹಿಸಿಕೊಟ್ಟನು.

ಮಹಾರಾಜ! ಇತ್ತಲಾಗಿ ಶ್ರೀಕೃಷ್ಣನು ದಿವ್ಯವಾದ ಮಾಲೆ-ಗಂಧ-ವಸ್ತ್ರ-ಬಹುಮೂಲ್ಯವಾದ ಮಣಿಗಳು-ಸುವರ್ಣಮಯವಾದ ಆಭರಣ ಗಳು–ಇವುಗಳಿಂದ ಅಲಂಕೃತನಾಗಿ ಮಡುವಿನಿಂದ ಹೊರಕ್ಕೆ ಬಂದನು. ಅವನನ್ನು ನೋಡಿದೊಡನೆಯೇ ಪ್ರಾಣವಾಯುವನ್ನು ಪಡೆದ ಅಪಾನಾದಿ ವಾಯುಗಳಂತೆ ಅಥವಾ ಪ್ರಾಣಗಳನ್ನು ಪಡೆದ ಇಂದ್ರಿಯಗಳಂತೆ ಸಮಸ್ತ ವ್ರಜವಾಸಿಗಳೂ ಎದ್ದುಕುಳಿತರು. ಸಮಸ್ತಗೋಪಾಲರ ಹೃದಯಗಳೂ ಆನಂದದಿಂದ ತುಂಬಿಹೋದುವು. ಅವರು ಅತ್ಯಂತಪ್ರೇಮದಿಂದಲೂ ಆನಂದದಿಂದಲೂ ಬಾಲಕೃಷ್ಣನನ್ನು ಬಾಚಿ ತಬ್ಬಿಕೊಂಡರು.

ಪರೀಕ್ಷಿತನೇ! ಯಶೋದೆ, ರೋಹಿಣೀ, ನಂದಗೋಪ, ಗೋಪ-ಗೋಪಿಯರು ಎಲ್ಲರೂ ಪುನಃ ಶ್ರೀಕೃಷ್ಣನನ್ನು ಪಡೆದುಕೊಂಡು ನವಚೈತನ್ಯ ವನ್ನು ಹೊಂದಿದರು. ಗಾಯಗೊಳ್ಳದ ಶ್ರೀಕೃಷ್ಣನನ್ನು ನೋಡಬೇಕೆಂದಿದ್ದ ಅವರ ಮನೋರಥವು ಸಫಲವಾಯಿತು. ಬಲರಾಮನಿಗಾದರೋ ಭಗವಂತ ನಾದ ಶ್ರೀಕೃಷ್ಣನ ಪ್ರಭಾವವು ಚೆನ್ನಾಗಿಯೇ ತಿಳಿದಿತ್ತು. ಅವನು ಕೂಡ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಕಿಲ-ಕಿಲನೆ ನಗುತ್ತಾ ತನ್ನ

ಸಂತೋಷವನ್ನು ವ್ಯಕ್ತಪಡಿಸಿದನು. ಶ್ರೀಕೃಷ್ಣನ ಪುನರಾಗಮನದಿಂದ ಹಸು-ಎತ್ತು-ಕರುಗಳು ಮಾತ್ರವಲ್ಲದೆ ಪರ್ವತ-ವೃಕ್ಷಗಳೂ ಆನಂದಿಸಿದುವು. ನಂದಗೋಪನ ಕುಲಗುರುಗಳಾದ ಬ್ರಾಹ್ಮಣರು ಪತ್ನಿಯರ ಸಮೇತರಾಗಿ ನಂದನ ಬಳಿಗೆ ಬಂದು ಹೇಳಿದರು :

"ನಂದಮಹಾರಾಜ! ಕಾಳಿಯನಾಗನಿಂದ ಬಂಧಿಸಲ್ಪಟ್ಟಿದ್ದ ನಿನ್ನ ಪ್ರೇಮಪುತ್ರನು ಸೌಭಾಗ್ಯವಶದಿಂದ ಬಿಡುಗಡೆಯನ್ನು ಹೊಂದಿರುವನು. ಶ್ರೀಕೃಷ್ಣನು ಮೃತ್ಯುವಿನ ದವಡೆಯಿಂದ ಹೊರಬಂದಿರುವನಾದ ಕಾರಣ ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನಮಾಡು."

ಪರೀಕ್ಷಿತನೇ! ಬ್ರಾಹ್ಮಣರ ಈ ಮಾತನ್ನು ಕೇಳಿ ನಂದಗೋಪನು ಸುಪ್ರೀತನಾದನು. ಅವರ ಮಾತಿನಂತೆ ಆತನು ಸುವರ್ಣನಾಣ್ಯಗಳನ್ನೂ ಗೋವುಗಳನ್ನೂ ಬ್ರಾಹ್ಮಣರಿಗೆ ದಾನಮಾಡಿದನು. ಪರಮಸೌಭಾಗ್ಯವತಿ ಯಾದ ಯಶೋದಾದೇವಿಯು ಕೂಡ ನಷ್ಟವಾಗಿ ಹೋಗಿದ್ದ ಪ್ರೀತಿಯ ಮುದ್ದುಕೃಷ್ಣನನ್ನು ಪುನಃ ಪಡೆದು ಆನಂದಪರವಶಳಾಗಿ ಅವನನ್ನು ಬಾಚಿ ತಬ್ಬಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ಆನಂದಾಶ್ರುಗಳಿಂದ ಅಭಿಷೇಕಮಾಡಿಬಿಟ್ಟಳು.

ರಾಜೇಂದ್ರನೇ! ವ್ರಜವಾಸಿಗಳೂ ಮತ್ತು ಗೋವುಗಳೂ ಅಂದು ಬಹಳ ಆಯಾಸಗೊಂಡಿದ್ದುವು. ಮೇಲಾಗಿ ಹಸಿವು-ಬಾಯಾರಿಕೆಗಳು ಅವರನ್ನು ಕಾಡುತ್ತಿದ್ದಿತು. ಆದುದರಿಂದ ಹಳ್ಳಿಗೆ ಹೋಗಲು ಇಷ್ಟಪಡದೆ ಅವರೆಲ್ಲರೂ ಆ ರಾತ್ರಿ ಯಮುನಾನದಿಯ ತೀರದಲ್ಲಿಯೇ ಇದ್ದುಬಿಟ್ಟರು. ಅದು ಬೇಸಿಗೆಯ ಕಾಲವಾಗಿತ್ತು. ಮರ-ಗಿಡ-ಬಳ್ಳಿಗಳೆಲ್ಲವೂ ಒಣಗಿ ಹೋಗಿದ್ದುವು. ಅರ್ಧರಾತ್ರಿಯ ಸಮಯದಲ್ಲಿ ದಾವಾಗ್ನಿಯು ಹೊತ್ತಿ ಕೊಂಡಿತು. ಸ್ವಲ್ಪಹೊತ್ತಿನಲ್ಲಿಯೇ ಆ ದಾವಾಗ್ನಿಯು ಮಲಗಿದ್ದ ವ್ರಜವಾಸಿ ಗಳ ಸುತ್ತಲೂ ಹೊತ್ತಿಕೊಂಡು ಉರಿಯತೊಡಗಿತು. ಅಗ್ನಿಯ ಜ್ವಾಲೆಯನ್ನು ಕಾಣುತ್ತಲೇ ವ್ರಜವಾಸಿಗಳೆಲ್ಲರೂ ಗಾಬರಿಗೊಂಡು ಎದ್ದು ಕುಳಿತರು. ರಕ್ಷಣೆಗೆ ಅನ್ಯಮಾರ್ಗವನ್ನು ಕಾಣದೆ ಲೀಲಾಮಾನುಷವಿಗ್ರಹನಾದ ಶ್ರೀಕೃಷ್ಣ ನಿಗೇ ಶರಣುಹೋದರು.

**ಕೃಷ್ಣ ಕೃಷ್ಣ ಮಹಾಭಾಗ ಹೇ ರಾಮಾಮಿತವಿಕ್ರಮ ।**
**ಏಷ ಘೋರತಮೋ ವಹ್ನಿಸ್ತಾವಕಾನ್ ಗ್ರಸತೇ ಹಿ ನಃ ॥೨೩॥**

"ಕೃಷ್ಣ! ಮುಕುಂದ! ಮಹಾಭಾಗ್ಯಶಾಲಿಯೇ! ಅಮಿತವಿಕ್ರಮನಾದ ಬಲರಾಮನೇ! ನಿಮ್ಮಿಬ್ಬರ ಬಲಪರಾಕ್ರಮಗಳೂ ಅಮಿತವಾಗಿವೆ ; ಅಪ್ರಮೇಯವಾಗಿವೆ. ಅತ್ಯಂತ ಭಯಂಕರವಾಗಿ ಹೊತ್ತಿಕೊಂಡು ಉರಿಯುತ್ತಿರುವ ಈ ಕಾಡುಗಿಚ್ಚಿನ ದಳ್ಳುರಿಯು ನಿಮ್ಮವರೇ ಆದ ನಮ್ಮನ್ನು ನುಂಗಿ ಹಾಕುವುದರಲ್ಲಿದೆ.

**ಸುದುಸ್ತರಾನ್ನಃ ಸ್ವಾನ್ಪಾಹಿ ಕಾಲಾಗ್ನೇಃ ಸುಹೃದಃ ಪ್ರಭೋ ।**
**ನ ಶಕ್ನುಮಸ್ತ್ವಚ್ಚರಣಂ ಸಂತ್ಯಕ್ತುಮಕುತೋಭಯಮ್ ॥೨೪॥**

ನೀವು ಸರ್ವಸಮರ್ಥರಾಗಿರುವಿರಿ. ನಾವು ನಿಮ್ಮ ಸುಹೃದರಾಗಿದ್ದೇವೆ. ಆದುದರಿಂದ ಈ ಪ್ರಳಯಾಗ್ನಿಯಿಂದ ನಮ್ಮನ್ನು ರಕ್ಷಿಸಿರಿ. ಯಾವಾಗಲೂ ಸನ್ನಿಹಿತವಾಗಿರುವ ಮೃತ್ಯುವಿಗಾಗಿ ನಾವು ಭಯಪಡುತ್ತಿಲ್ಲ. ಆದರೆ ಅಪಾಯರಹಿತವಾದ ನಿನ್ನ ದಿವ್ಯಚರಣಕಮಲಗಳನ್ನು ಬಿಟ್ಟುಹೋಗಲು ನಾವು ಸಮರ್ಥರಾಗಿಲ್ಲ."

ಪರೀಕ್ಷಿತಮಹಾರಾಜ! ಜಗದೀಶ್ವರನಾದ, ಅನಂತವಾದ ಶಕ್ತಿ-ಸಾಮರ್ಥ್ಯಗಳನ್ನು ಹೊಂದಿದ್ದ ಭಗವಾನ್ ಶ್ರೀಕೃಷ್ಣನು ವ್ರಜವಾಸಿಗಳ ಈ ಮಾತನ್ನು ಕೇಳಿ, ಅವರು ಕಾಡುಗಿಚ್ಚಿನಿಂದ ಸುತ್ತುವರಿಯಲ್ಪಟ್ಟು



ಕಷ್ಟಪಡುತ್ತಿರುವುದನ್ನು ನೋಡಿ ಭಯಂಕರವಾಗಿದ್ದ ಆ ಕಾಡುಗಿಚ್ಚನ್ನು ಪಾನಮಾಡಿಬಿಟ್ಟನು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೭ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೧೮ನೆಯ ಅಧ್ಯಾಯ

## ಪ್ರಲಂಬಾಸುರನ ಸಂಹಾರ

ಶ್ರೀಶುಕಮುನಿಗಳು ಹೇಳುತ್ತಾರೆ :

**ಅಥ ಕೃಷ್ಣಃ ಪರಿವೃತೋ ಜ್ಞಾತಿಭಿರ್ಮುದಿತಾತ್ಮಭಿಃ ।**
**ಅನುಗೀಯಮಾನೋ ನ್ಯವಿಶದ್ವ್ರಜಂ ಗೋಕುಲಮಣ್ಡಿತಮ್ ॥೧॥**

"ಮಹಾರಾಜ! ಆನಂದತುಂದಿಲರಾದ ಜ್ಞಾತಿ-ಬಾಂಧವರಿಂದ ಸುತ್ತುವರಿಯಲ್ಪಟ್ಟಿದ್ದ ಶ್ರೀಕೃಷ್ಣನು ತನ್ನ ಅನುಯಾಯಿಗಳಿಂದ ಸ್ತುತಿಸಲ್ಪ

---

* ಶ್ರೀಕೃಷ್ಣನ ಅಗ್ನಿಪಾನವನ್ನು ಭಾವುಕರು ಬಗೆ ಬಗೆಯಾಗಿ ಅರ್ಥೈಸಿದ್ದಾರೆ :

1) 'ದೇಹಧಾರಿಗಳ ಸಂತಾಪವನ್ನು ಹೋಗಲಾಡಿಸುವುದಕ್ಕಾಗಿಯೇ ನಾನು ಅವತರಿಸಿದ್ದೇನೆ. ಆದುದರಿಂದ ಈ ದಾವಾಗ್ನಿಯನ್ನು ದೂರೀಕರಿಸುವುದೂ ನನ್ನ ಕರ್ತವ್ಯವಾಗಿದೆ'–ಎಂದು ಭಾವಿಸಿ ಶ್ರೀಕೃಷ್ಣನು ದಾವಾಗ್ನಿಯನ್ನು ನುಂಗಿಹಾಕಿದನು.

2) 'ರಾಮಾವತಾರದಲ್ಲಿ ಅಗ್ನಿದೇವನು ನನ್ನ ಪತ್ನಿಯಾದ ಸೀತಾದೇವಿಯನ್ನು ಸುರಕ್ಷಿತವಾಗಿಟ್ಟುಕೊಂಡು ಉಪಕಾರಮಾಡಿದ್ದನು. ಆದುದರಿಂದ ಈ ಅವತಾರದಲ್ಲಿ ಅಗ್ನಿಯನ್ನು ಮುಖದಲ್ಲಿ ಧರಿಸಿ ಸತ್ಕರಿಸುವುದು ನನ್ನ ಕರ್ತವ್ಯವಾಗಿದೆ.'

3) ಕಾರ್ಯವು ಕಾರಣದಲ್ಲಿ ಲಯವಾಗಿಹೋಗುತ್ತದೆ. ಭಗವಂತನ ಮುಖದಿಂದ ಅಗ್ನಿಯು ಪ್ರಕಟವಾದುದು. 'ಮುಖಾದಿನ್ದ್ರಶ್ಚಾಗ್ನಿಶ್ಚ!' ಆದುದರಿಂದ ಭಗವಂತನು ದಾವಾಗ್ನಿಯನ್ನು ಮುಖದಲ್ಲಿಯೇ ಸ್ಥಾಪಿಸಿಕೊಂಡನು.

4) ಮುಖದ ಮೂಲಕವಾಗಿ ದಾವಾಗ್ನಿಯನ್ನು ಶಾಂತಗೊಳಿಸಿ ಶ್ರೀಕೃಷ್ಣನು ಈ ಭಾವವನ್ನು ಪ್ರಕಟಪಡಿಸಿದ್ದಾನೆ. 'ಸಂಸಾರವೆಂಬ ದಾವಾಗ್ನಿಯನ್ನು ಶಾಂತಗೊಳಿಸಲು ಭಗವಂತನ ಮುಖಸ್ಥಾನೀಯನಾದ ಬ್ರಾಹ್ಮಣನೇ ಸಮರ್ಥನು. ಬ್ರಾಹ್ಮಣೋऽಸ್ಯ ಮುಖಮಾಸೀತ್ ॥'

ಡುತ್ತಾ ಗೋವುಗಳ ಸಮೂಹಗಳಿಂದ ಸಮಲಂಕೃತವಾದ ಗೊಲ್ಲರಹಳ್ಳಿಯನ್ನು ಪ್ರವೇಶಿಸಿದನು.

ಪರೀಕ್ಷಿತನೇ! ರಾಮ-ಕೃಷ್ಣರು ತಮ್ಮ ಯೋಗಮಾಯೆಯಿಂದ ಗೋಪಬಾಲಕರ ವೇಷಗಳನ್ನು ಧರಿಸಿ ಅವರೊಡನೆ ಅನೇಕವಿಧವಾದ ಆಟಗಳನ್ನಾಡುತ್ತಿದ್ದರು. ಹೀಗೆಯೇ ಇರುತ್ತಿರಲಾಗಿ ಗ್ರೀಷ್ಮರ್ತುವು ಬಂದಿತು. ಸ್ವಾಭಾವಿಕವಾಗಿಯೇ ಬೇಸಿಗೆಯ ಆ ಕಾಲವು ಪ್ರಾಣಿಗಳಿಗೆ ಅಷ್ಟು ಪ್ರಿಯವಾಗಿರಲಿಲ್ಲ. ಆದರೆ ವೃಂದಾವನದಲ್ಲಿ ಮಾತ್ರ ವಸಂತರ್ತುವಿನ ಲಕ್ಷಣಗಳೇ ಇದ್ದುವು. ಶ್ಯಾಮಸುಂದರನಾದ ಶ್ರೀಕೃಷ್ಣನೂ ಶ್ವೇತವರ್ಣನಾದ ಬಲರಾಮನೂ ಅಲ್ಲಿ ಇರುತ್ತಿದ್ದುದೇ ಇದಕ್ಕೆ ಕಾರಣವಾಗಿದ್ದಿತು. ವೃಂದಾವನದಲ್ಲಿ ಹರಿಯುತ್ತಿದ್ದ ಗಿರಿನದಿಗಳ ಪ್ರವಾಹಶಬ್ದದಿಂದ ಜೀರುಂಡೆಯೇ ಮೊದಲಾದ ಹುಳುಗಳ ಶಬ್ದವೂ ಕೇಳಿಸುತ್ತಿರಲಿಲ್ಲ. ಗಿರಿನದಿಗಳ ಪ್ರವಾಹದ ತುಂತುರುಗಳಿಂದ ನೆನೆಸಲ್ಪಡುತ್ತಿದ್ದ ವೃಕ್ಷಗಳ ಗುಂಪುಗಳಿಂದ ವೃಂದಾವನವು ಸಮಲಂಕೃತವಾಗಿದ್ದಿತು. ಅಲ್ಲಿನ ತಂಗಾಳಿಯು ನದಿ, ಸರೋವರ, ಗಿರಿನದಿಗಳ ಅಲೆಗಳ ಮೂಲಕವಾಗಿ ಬೀಸುತ್ತಾ ಸೌಗಂಧಿಕ, ಕಮಲ ಕನ್ನೈದಿಲೆಗಳ ಸುಗಂಧಮಯವಾದ ಧೂಳಿಯನ್ನು ಹೊತ್ತುತಂದು ವೃಂದಾವನವನ್ನೇ ಸುಗಂಧಮಯವಾಗಿಯೂ ಶೀತಲವಾಗಿಯೂ ಮಾಡುತ್ತಿದ್ದಿತು. ಇಂತಹ ವಾತಾವರಣದಿಂದ ಹಚ್ಚಹಸಿರಾಗಿದ್ದ ಆ ವೃಂದಾವನದಲ್ಲಿ ವಾಸಮಾಡುತ್ತಿದ್ದವರಿಗೆ ಕಾಡುಗಿಚ್ಚಿನ ಬೇಗೆಯಾಗಲೀ ಗ್ರೀಷ್ಮಸೂರ್ಯನ ತಾಪವಾಗಲೀ ಇರಲಿಲ್ಲ. ನದಿಗಳಲ್ಲಿ ನೀರು ತುಂಬಿಹರಿಯುತ್ತಿದ್ದಿತು. ಆ ನದಿಗಳಲ್ಲಿ ಎತ್ತರವಾದ ಅಲೆಗಳು ಎದ್ದುಬರುತ್ತಿದ್ದು ನದಿಯ ದಡಗಳಲ್ಲಿರುತ್ತಿದ್ದ ಮರಳು ದಿಣ್ಣೆಗಳಿಗೆ ರಭಸದಿಂದ ಅಪ್ಪಳಿಸುತ್ತಿದ್ದುವು. ಹೀಗೆ ನಿರಂತರವಾಗಿ ಅಪ್ಪಳಿಸುತ್ತಿದ್ದುದರಿಂದ ಅಲ್ಲಿ ಪಾಚಿಯು ಕಟ್ಟಿ ಹಸಿರಾಗಿ ಕಾಣುತ್ತಿದ್ದಿತು. ಅಂತಹ ಪಾಚಿಯನ್ನು ವಿಷದಂತೆ ತೀಕ್ಷ್ಣವಾದ ಮತ್ತು ಪ್ರಚಂಡವಾದ ಗ್ರೀಷ್ಮಸೂರ್ಯನ ಕಿರಣಗಳೂ ಹೀರಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹಚ್ಚಹಸಿರಿನಿಂದ ಕೂಡಿದ್ದ ವೃಂದಾವನವು ಎಲ್ಲೆಡೆಯಲ್ಲಿಯೂ ಹೂಗಳಿಂದ ಸೊಂಪಾಗಿ ಸಂಪದ್ಭರಿತವಾಗಿದ್ದಿತು. ನಾನಾವಿಧವಾದ ಚಿತ್ರ-ವಿಚಿತ್ರವಾದ ಮೃಗ-ಪಕ್ಷಿಗಳು ಧ್ವನಿಮಾಡುತ್ತಿದ್ದುವು. ನವಿಲು-ದುಂಬಿಗಳು ಗಾಯನಮಾಡು

ತ್ತಿದ್ದುವು. ಕೋಕಿಲ-ಸಾರಸಪಕ್ಷಿಗಳು ಸುಮಧುರವಾಗಿ ಕೂಗುತ್ತಿದ್ದುವು. ಅಂತಹ ಸುಮಧುರವಾದ ವೃಂದಾವನದಲ್ಲಿ ಆಟವಾಡುವ ಇಚ್ಛೆಯಿಂದ ಬಲರಾಮಸಹಿತನಾದ ಶ್ರೀಕೃಷ್ಣನು ಗೋವುಗಳಿಂದಲೂ ಗೋಪಾಲಕ ರಿಂದಲೂ ಪರಿವೃತನಾಗಿ ಕೊಳಲನ್ನು ನುಡಿಸುತ್ತಾ ಆ ವನವನ್ನು ಪ್ರವೇಶಿ ಸಿದನು. ರಾಮ-ಶ್ಯಾಮರೂ ಮತ್ತು ಗೋಪಾಲಬಾಲಕರೂ ಹೊಚ್ಚ ಹೊಸ ದಾದ ಚಿಗುರುಗಳಿಂದಲೂ, ನವಿಲುಗರಿಗಳಿಂದಲೂ, ವಿಕಸಿತವಾದ ಸುಗಂಧ ಪುಷ್ಪಗಳಿಂದಲೂ, ಹವಳಗಳಿಂದಲೂ ಬಣ್ಣಬಣ್ಣದ ಮಣಿಶಿಲೆ, ಸಿಂಧೂರವೇ ಮೊದಲಾದ ಗೈರಿಕಧಾತುಗಳಿಂದಲೂ ತಮ್ಮ ಶರೀರಗಳನ್ನು ನಾನಾರೀತಿ ಯಲ್ಲಿ ಸಿಂಗರಿಸಿಕೊಂಡರು. ಅವರಲ್ಲಿ ಕೆಲವರು ಆನಂದಮಗ್ನರಾಗಿ ನರ್ತಿಸಲು




ತೊಡಗಿದರು. ಕೆಲವರು ಸೊಂಟಕ್ಕೆ ಪಟ್ಟಿಯನ್ನು ಕಟ್ಟಿ ಕಾಳಗವಾಡಲು ಪ್ರಾರಂಭಿಸಿದರು. ಕೆಲವರು ಹಾಡಲು ಪ್ರಾರಂಭಿಸಿದರು. ಶ್ರೀಕೃಷ್ಣನು ನರ್ತಿಸ ತೊಡಗಿದಾಗ ಕೆಲವು ಗೊಲ್ಲರು ಹಾಡುವರು. ಕೆಲವರು ಕೊಳಲು ನುಡಿಸು ವರು. ಕೆಲವರು ತಾಳಕ್ಕೆ ಅನುಸರಿಸಿ ಚಪ್ಪಾಳೆ ತಟ್ಟುವರು. ಕೆಲವರು ಕೊಂಬುಗಳನ್ನೂದುವರು. ಉಳಿದವರು–'ಭಲೇ ಕೃಷ್ಣ! ಭಲೇ ಕೃಷ್ಣ!'– ಎನ್ನುತ್ತಾ ನೃತ್ಯವನ್ನು ಪ್ರೋತ್ಸಾಹಿಸುವರು.

ಪರೀಕ್ಷಿತಮಹಾರಾಜ! ಆ ಸಮಯದಲ್ಲಿ ನಟರು ತಮ್ಮ ನಾಯಕ ನನ್ನು ಪ್ರಶಂಸೆಮಾಡುವಂತೆ–ಗೋಪಾಲಕರ ವೇಷಗಳನ್ನು ಧರಿಸಿದ್ದ ದೇವತೆ

ಗಳು ಗೊಲ್ಲರಜಾತಿಯಲ್ಲಿ ಜನ್ಮತಳೆದು ತಮ್ಮ ನಿಜಸ್ವರೂಪವನ್ನು ಮರೆಸಿಕೊಂಡಿದ್ದ ರಾಮ-ಶ್ಯಾಮರನ್ನು ಸ್ತೋತ್ರಮಾಡಿದರು. * ಕಾಕಪಕ್ಷಧರರಾಗಿದ್ದ ರಾಮ-ಕೃಷ್ಣರು ಒಮ್ಮೆ ಪರಸ್ಪರವಾಗಿ ಕೈಗಳನ್ನು ಹಿಡಿದುಕೊಂಡು ಕುಂಬಾರನ ಚಕ್ರದಂತೆ ಗರಗರನೆ ಸುತ್ತುವರು. ಅಪ್ಪಾಲೆ-ತಿಪ್ಪಾಲೆ ಆಟವನ್ನು ಆಡುವರು. ಮತ್ತೊಮ್ಮೆ ಎತ್ತರಕ್ಕೂ ಮತ್ತು ದೂರಕ್ಕೂ ನೆಗೆಯುವರು. ಕೆಲವೊಮ್ಮೆ ವೃಕ್ಷಗಳಲ್ಲಿರುತ್ತಿದ್ದ ಹಣ್ಣುಗಳಿಗೆ ಕವಣೇಕಲ್ಲಿನಿಂದ ಗುರಿಯಿಟ್ಟು ಹೊಡೆಯುವರು. ಪರಸ್ಪರ ಗುದ್ದಾಡುವರು. ಪರಸ್ಪರ ಕಾಳಗವಾಡುವರು. ಎರಡು ಗುಂಪಿನವರು ಹಗ್ಗವನ್ನು ಹಿಡಿದು ಪರಸ್ಪರ ಎಳೆದಾಡುವರು. ಹೀಗೆ ಗೋಪಾಲಬಾಲಕರಿಂದ ಕೂಡಿದ್ದ ರಾಮ-ಶ್ಯಾಮರು ನಾನಾಪ್ರಕಾರವಾದ ಆಟಗಳನ್ನಾಡುತ್ತಿದ್ದರು. ಕೆಲವು ಸಮಯಗಳಲ್ಲಿ ಗೋಪಬಾಲಕರು ನೃತ್ಯವನ್ನಾಡುವಾಗ ರಾಮ-ಶ್ಯಾಮರು ಹಾಡುವರು ; ಕೊಳಲನ್ನೂ ನುಡಿಸುವರು. ಮಧ್ಯ-ಮಧ್ಯದಲ್ಲಿ 'ಭಲೇ! ಭಲೇ! ನೃತ್ಯವು ಬಹಳ ಚೆನ್ನಾಗಿದೆ. ಮುಂದುವರಿಸಿರಿ'—ಎಂದೆನ್ನುತ್ತಾ ರಾಮ-ಶ್ಯಾಮರು ಗೋಪಬಾಲಕರನ್ನು ಪ್ರಶಂಸಿಸುತ್ತಿದ್ದರು. ಗೋಪಬಾಲಕರಿಂದ ಪರಿವೃತರಾದ ರಾಮ-ಕೃಷ್ಣರು ಕೆಲವು ವೇಳೆ ಬೇಲದಕಾಯಿಗಳಿಂದಲೂ, ಬಿಲ್ವದ ಕಾಯಿಗಳಿಂದಲೂ, ನೆಲ್ಲಿಕಾಯಿಗಳಿಂದಲೂ ಚೆಂಡಿನ ಆಟಗಳನ್ನಾಡುವರು. ಕೆಲವೊಮ್ಮೆ ಕೆಲವು ಗೋಪಬಾಲಕರ ಕಣ್ಣುಗಳಿಗೆ ಬಟ್ಟೆಗಳನ್ನು ಕಟ್ಟಿ ಕಣ್ಣುಮುಚ್ಚಾಲೆ ಆಟವನ್ನು ಆಡುವರು. ಕೆಲವು ವೇಳೆ ಮೃಗಗಳಂತೆಯೂ, ಪಕ್ಷಿಗಳಂತೆಯೂ ಕೂಗುವರು. ಮರಕೋತಿ ಆಟವನ್ನಾಡುವರು. ಗೂಳಿಗಳಂತೆ ಗುಟುರುಹಾಕುವರು. ಕುದುರೆಗಳಂತೆ ಕೆನೆಯುವರು. ಕತ್ತೆಗಳಂತೆ ಅರಚುವರು. ಸಿಂಹಗಳಂತೆ ಗರ್ಜಿಸುವರು. ಜಿಂಕೆಗಳಂತೆ ಓಡುವರು. ಕೆಲವು ವೇಳೆ ಗೋಪಬಾಲಕರು ಕಪ್ಪೆಗಳಂತೆ ಕುಪ್ಪಳಿಸುವರು. ಕೆಲವು ಗೋಪಬಾಲಕರು ಕಪಿಯಂತೆ ಮುಖಮಾಡಿಕೊಂಡು ಹಲ್ಲುಕಿರಿಯುವರು. ಕೆಲವರು ವಿದೂಷಕನ ವೇಷ ಧರಿಸಿ ನಾನಾವಿಧವಾದ ಅಂಗಚೇಷ್ಟೆಗಳಿಂದ ಎಲ್ಲರನ್ನೂ ನಗಿಸುವರು. ಕೆಲವು ವೇಳೆ ಮರಗಳ ಕೊಂಬೆಗಳಲ್ಲಿ ಜೋಲಿ

---

* ಕಾಕಪಕ್ಷ : ಬಾಲಕರ ಕಿವಿಗಳ ಪಕ್ಕದ ಕೆನ್ನೆಗಳ ಮೇಲಿರುವ ಕೂದಲು ; ತಲೆಯ ಪಕ್ಕದ ಕೂದಲು. ಕಾಕಪಕ್ಷಧರರೆಂದರೆ ಚಿಕ್ಕವಯಸ್ಸಿನವರು—ಎಂದರ್ಥ.

ಗಳನ್ನು ಕಟ್ಟಿ ಉಯ್ಯಾಲೆಯಾಡುವರು. ಕೆಲವು ವೇಳೆ ಒಬ್ಬರು ಮತ್ತೊಬ್ಬರನ್ನು ಹೆಗಲಮೇಲೆ ಹೊತ್ತುಕೊಂಡು 'ಕೂಸುಮರಿ'–ಆಟವಾಡುವರು. ಕೆಲವು ವೇಳೆ ರಾಜಾ-ಮಂತ್ರಿಗಳ ಆಟಗಳನ್ನಾಡುವರು.




ಹೀಗೆ ರಾಮ-ಶ್ಯಾಮರು ನದಿಗಳ ತೀರಗಳಲ್ಲಿಯೂ ಪರ್ವತದ ತಪ್ಪಲುಗಳಲ್ಲಿಯೂ, ಪೊದರುಗಳಲ್ಲಿಯೂ, ಅರಣ್ಯಗಳಲ್ಲಿಯೂ, ಸರೋವರಗಳ ಸಮೀಪದಲ್ಲಿಯೂ ಲೋಕಪ್ರಸಿದ್ಧವಾದ ಆಟಗಳನ್ನಾಡುತ್ತಾ ವೃಂದಾವನದಲ್ಲಿ ಆನಂದದಿಂದ ಸಂಚರಿಸುತ್ತಿದ್ದರು.

ಪರೀಕ್ಷಿತನೇ! ಹೀಗೆಯೇ ಒಂದು ದಿನ ಬಲರಾಮ-ಕೃಷ್ಣರು ಗೋಪಬಾಲಕರೊಡನೆ ಹಸುಗಳನ್ನು ಮೇಯಿಸುತ್ತಿದ್ದಾಗ ಪ್ರಲಂಬನೆಂಬ ರಾಕ್ಷಸನು ಗೊಲ್ಲನ ವೇಷವನ್ನು ಧರಿಸಿ ಅಲ್ಲಿಗೆ ಆಗಮಿಸಿದನು. ರಾಮ-ಶ್ಯಾಮರನ್ನು ಅಪಹರಿಸಿಕೊಂಡು ಹೋಗುವುದೇ ಅವನ ಉದ್ದೇಶವಾಗಿದ್ದಿತು. ಶ್ರೀಕೃಷ್ಣನು ಸರ್ವಾತ್ಮನಾಗಿದ್ದುದರಿಂದ ಯಾರ-ಯಾರ ಹೃದಯದಲ್ಲಿ ಎಂತಹ ಮನೋಭಾವವಿರುವುದೆಂಬುದನ್ನು ತಿಳಿದವನಾಗಿದ್ದನು. ಆದುದರಿಂದ ವೇಷಮರೆಸಿಕೊಂಡು ಬಂದಿದ್ದ ಪ್ರಲಂಬರಾಕ್ಷಸನ ಆಶಯವೇನೆಂಬುದು ಶ್ರೀಕೃಷ್ಣನಿಗೆ ತಿಳಿದುಹೋಯಿತು. ಅವನು ತನ್ನನ್ನು ಅಪಹರಿಸಬೇಕೆನ್ನುವ ದುರಾಲೋಚನೆಯಿಂದ ಬಂದಿರುವನೆಂಬ ವಿಷಯವು ಶ್ರೀಕೃಷ್ಣನಿಗೆ ತಿಳಿದಿದ್ದರೂ ಅವನು ಪ್ರಲಂಬನಿಗೆ ಸ್ನೇಹಹಸ್ತವನ್ನೇ ನೀಡಿದನು.

ಆದರೂ ಅವನನ್ನು ಹೇಗೆ ಸಂಹರಿಸಬೇಕೆಂಬುವ ಬಗೆಗೆ ಶ್ರೀಕೃಷ್ಣನು ಯೋಚಿಸುತ್ತಲೇ ಇದ್ದನು. ಎಲ್ಲಿ? ಯಾರೊಡನೆ? ಯಾವಾಗ? ಹೇಗೆ ಆಟವಾಡಬೇಕೆಂಬುದನ್ನು ತಿಳಿದಿದ್ದ ಶ್ರೀಕೃಷ್ಣನು ಗೋಪಬಾಲಕರೆಲ್ಲರನ್ನೂ ಹತ್ತಿರಕ್ಕೆ ಕರೆದು ಹೇಳಿದನು :

"ಗೋಪಾಲಬಾಲಕರೇ! ಇಂದು ನಮ್ಮಲ್ಲಿ ಎರಡು ಗುಂಪುಗಳಾಗಿ ಮಾಡಿಕೊಂಡು ಯಥಾಯೋಗ್ಯವಾಗಿ ಆಟವಾಡೋಣ." ಹಾಗೆಯೇ ಆಗಲೆಂದೊಪ್ಪಿದ ಗೋಪಾಲಕರು ಒಂದು ಗುಂಪಿಗೆ ಶ್ರೀಕೃಷ್ಣನನ್ನೂ ಮತ್ತೊಂದು ಗುಂಪಿಗೆ ಬಲರಾಮನನ್ನೂ ನಾಯಕರನ್ನಾಗಿ ಮಾಡಿಕೊಂಡರು. ಕೆಲವರು ಶ್ರೀಕೃಷ್ಣನ ಸಂಗಾತಿಗಳಾದರು. ಹೊಸ ಗೆಳೆಯನಾದ ಪ್ರಲಂಬನು ಶ್ರೀಕೃಷ್ಣನ ಪಕ್ಷಕ್ಕೇ ಸೇರಿದ್ದನು. ಮತ್ತೆ ಕೆಲವರು ಬಲರಾಮನ ಸಂಗಾತಿಗಳಾದರು. ಎರಡು ಪಕ್ಷದವರಲ್ಲಿ ಇಬ್ಬಿಬ್ಬರು ಸೇರಿ ಆಡುತ್ತಿದ್ದ ಅವರ ಆಟಗಳಲ್ಲಿ ಒಂದು ನಿಯಮವನ್ನು ಮಾಡಿಕೊಂಡಿದ್ದರು. ಆ ನಿಯಮದ ಪ್ರಕಾರ ಸೋತವರು ಗೆದ್ದವರನ್ನು ಬೆನ್ನು ಮೇಲೆ ಹೊತ್ತುಕೊಂಡು ನಿರ್ದಿಷ್ಟವಾದ ಸ್ಥಾನಕ್ಕೆ ಹೋಗಬೇಕಾಗಿದ್ದಿತು. ಹಾಗೆಯೇ ಗೆದ್ದವರು ಸೋತವರ ಬೆನ್ನೇರುತ್ತಿದ್ದರು. ಹೀಗೆಯೇ ಹೊತ್ತುಕೊಂಡು ಅಥವಾ ಹತ್ತಿಕೊಂಡು ಶ್ರೀಕೃಷ್ಣಪ್ರಮುಖರಾದ ಗೋಪಾಲಕರು ಹಸುಗಳನ್ನು ಮೇಯಿಸುತ್ತಾ ಭಾಂಡೀರಕವೆಂಬ ಹೆಸರಿನ ಆಲದ ಮರದ ಬಳಿಗೆ ಹೋದರು. ಹೀಗೆಯೇ ಆಟವಾಡುತ್ತಿದ್ದಾಗ ಒಮ್ಮೆ ಬಲರಾಮ-ಶ್ರೀದಾಮ-ವೃಷಭರು ಒಂದು ಪಕ್ಷದಲ್ಲಿಯೂ ಶ್ರೀಕೃಷ್ಣ-ಭದ್ರಸೇನ-ಪ್ರಲಂಬರು ಮತ್ತೊಂದು ಪಕ್ಷದಲ್ಲಿಯೂ ಇದ್ದು ಆಟವಾಡುತ್ತಿದ್ದರು . ಆ ಆಟದಲ್ಲಿ ಕೃಷ್ಣನ ಪಕ್ಷವು ಸೋತುಹೋಯಿತು. ನಿಯಮದಂತೆ ಭಗವಂತನಾದ ಶ್ರೀಕೃಷ್ಣನು ಶ್ರೀದಾಮನನ್ನು ಹೊತ್ತುಕೊಂಡನು. ಭದ್ರಸೇನನು ವೃಷಭನನ್ನು ಹೊತ್ತುಕೊಂಡನು. ಪ್ರಲಂಬನು ಬಲರಾಮನನ್ನು ಹೊತ್ತುಕೊಂಡನು. ಶ್ರೀಕೃಷ್ಣನನ್ನು ಅಪಹರಿಸಿಕೊಂಡು ಹೋಗಬೇಕೆನ್ನುವುದು ಪ್ರಲಂಬನ ಇಚ್ಛೆಯಾಗಿದ್ದಿತಾದರೂ ಅವನು ಶ್ರೀಕೃಷ್ಣನ ಪಕ್ಷಕ್ಕೆ ಸೇರಿದ್ದರಿಂದಲೂ ಮತ್ತು ಶ್ರೀಕೃಷ್ಣನನ್ನು ಎತ್ತಿಕೊಂಡು ಹೋಗಲು ಸಾಧ್ಯವಿಲ್ಲವೆಂಬುದನ್ನು ಅವನು ಮನಗಂಡಿದ್ದರಿಂದಲೂ ಬಲರಾಮನನ್ನೇ ಅಪಹರಿಸಿ

ಕೊಂಡುಹೋಗಲು ನಿಶ್ಚಯಿಸಿದನು. ಅದಕ್ಕೆ ಅನುಕೂಲವಾದ ಸಮಯವೂ ಒದಗಿಬಂದಿತ್ತು. ಸೋತಪಕ್ಷಕ್ಕೆ ಸೇರಿದವನಾಗಿದ್ದುದರಿಂದ ಆಟದ ನೆಪದಲ್ಲಿ ಬಲರಾಮನನ್ನು ಎತ್ತಿಕೊಂಡು ಹೋಗಲು ಅನುಕೂಲವಾಯಿತು. ಅಂತೆಯೇ ಪ್ರಲಂಬನು ಬಲರಾಮನನ್ನೆತ್ತಿಕೊಂಡು ಬಹಳ ವೇಗವಾಗಿ ಹೋಗಿಬಿಟ್ಟನು. ನಿರ್ದಿಷ್ಟವಾದ ಸ್ಥಳದಲ್ಲಿ ಕೆಳಗಿಳಿಸಬೇಕೆಂಬ ಸೂಚನೆ ಯಿದ್ದಂತೆ ಪ್ರಲಂಬನು ನಡೆದುಕೊಳ್ಳಲಿಲ್ಲ. ನಿರ್ದಿಷ್ಟವಾಗಿದ್ದ ಸ್ಥಳದಿಂದಲೂ ಮುಂದಕ್ಕೆ ಬಲರಾಮನನ್ನು ಎತ್ತಿಕೊಂಡು ಸಾಗಿದನು. ಆದರೆ ರಾಕ್ಷಸನಿಗೆ ಬಲರಾಮನನ್ನೆತ್ತಿಕೊಂಡು ಬಹಳ ದೂರ ಹೋಗಲು ಸಾಧ್ಯವಾಗಲಿಲ್ಲ. ಏಕೆಂದರೆ ಬಲರಾಮನು ದೊಡ್ಡ ಪರ್ವತದಷ್ಟೇ ಭಾರವಾಗಿದ್ದನು. ಇದರಿಂದಾಗಿ ಆತನು ಮುಂದೆ ಹೋಗಲಾರದೆ ನಿಂತುಬಿಟ್ಟನು. ಆಗ ಅವನು ತನ್ನ ಸ್ವಾಭಾವಿಕವಾದ ದೈತ್ಯರೂಪವನ್ನು ಪ್ರಕಟಪಡಿಸಿದನು. ರಾಕ್ಷಸನು ಸುವರ್ಣಾಭರಣಗಳಿಂದ ಸಮಲಂಕೃತನಾಗಿದ್ದನು. ಗೌರಾಂಗನಾದ ಬಲರಾಮನನ್ನು ಎತ್ತಿಕೊಂಡಿದ್ದ ರಾಕ್ಷಸನು ಆ ಸಮಯದಲ್ಲಿ ಮಿಂಚಿನಿಂದ ಯುಕ್ತವಾದ ಕಾರ್ಮುಗಿಲು ಚಂದ್ರನನ್ನು ಒಳಗೊಂಡಿರುವಂತೆಯೇ ಪ್ರಕಾಶಿಸಿದನು.*

ಪ್ರಲಂಬಾಸುರನ ಕಣ್ಣುಗಳು ಅಗ್ನಿಯಂತೆ ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದುವು. ಅವನ ಹುಬ್ಬುಗಳು ಗಂಟಿಕ್ಕಿದ್ದುವು. ಅವನ ಕೋರೆ

---

* ಪ್ರಲಂಬನು ಕಂಸನಿಗೆ ಮುಖ್ಯಶತ್ರುವಾದ ಶ್ರೀಕೃಷ್ಣನನ್ನು ಬಿಟ್ಟು ಬಲರಾಮ ನನ್ನೇಕೆ ಅಪಹರಿಸಿದನೆಂದರೆ ಬಲರಾಮನ ಮೂಲಕವಾಗಿ ಅವನನ್ನು ಕೊಲ್ಲಲೆಣಿಸಿ ಶ್ರೀಕೃಷ್ಣನು ತನ್ನ ತೇಜಸ್ಸನ್ನು ಆತನಲ್ಲಿ ನೆಲೆಗೊಳಿಸಿದುದರಿಂದ ಪ್ರಲಂಬನು ಶ್ರೀಕೃಷ್ಣನ ಕಡೆಗೆ ಸೇರಿ ಬಲರಾಮನನ್ನು ಅಪಹರಿಸಿದನು. **ತೇ ವಾಹಯನ್ತಸ್ತ್ವ ನ್ಯೋನ್ಯಂ ಭಾಣ್ಡೀರಸ್ಕನ್ಧಮೇತ್ಯ ವೈ । ನ ತಸ್ಥೌ ಪ್ರಜಗಾಮೈವ ಸಚನ್ದ್ರ ಇವ ವಾರಿದಃ ॥**–ಎಂದು ವಿಷ್ಣುಪುರಾಣದಲ್ಲಿ ಹೇಳಿರುವಂತೆ ಕೃಷ್ಣಾದಿಗಳು ಒಬ್ಬರನ್ನೊಬ್ಬರು ಹೊತ್ತುಕೊಂಡು ಭಾಂಡೀರಕವೃಕ್ಷವನ್ನು ಮುಟ್ಟಿ ಹಿಂದಿರುಗಿದರು. ಪ್ರಲಂಬನು ಮಾತ್ರ ಹಾಗೆ ಮಾಡದೆ ಬಲರಾಮನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಹಾರಿಹೋದನು–ಎಂದು ಹೇಳಿರುವುದರಿಂದ ಇಲ್ಲಿ ಅವರೋಹಣತಃ ಎಂಬುದಕ್ಕೆ ಭಾಂಡೀರಕ ವೃಕ್ಷದ ಬುಡದವರೆಗೆಂದು ತಾತ್ಪರ್ಯವು.

(ವೈಜಯಂತೀ)

ಪ್ರಲಂಬನು ಹಿಂದಿನ ವ್ಯೋಮಾಸುರನ ವೃತ್ತಾಂತವನ್ನು ಸ್ಮರಿಸಿಕೊಂಡು ಕೃಷ್ಣನನ್ನು

ದಾಡೆಗಳು ಭಯಂಕರವಾಗಿದ್ದುವು. ಸುವರ್ಣಮಯವಾದ ಕರ್ಣಕುಂಡಲ ಗಳ ಮತ್ತು ಕಿರೀಟದ ಕಾಂತಿಯಿಂದ ಅವನ ತಲೆಗೂದಲುಗಳು ಅಗ್ನಿಯ ಜ್ವಾಲೆಯಂತೆಯೇ ಕಾಣುತ್ತಿದ್ದುವು. ಅಂತಹ ಭಯಂಕರನಾದ ದೈತ್ಯನು ತನ್ನನ್ನೆತ್ತಿಕೊಂಡು ಆಕಾಶದಲ್ಲಿ ಬಹಳ ವೇಗವಾಗಿ ಹೋಗುತ್ತಿರುವುದನ್ನು ನೋಡಿ ಬಲರಾಮನೂ ಸ್ವಲ್ಪ ಹೆದರಿದನು. ಆದರೆ ಮರುಕ್ಷಣದಲ್ಲಿಯೇ ತಾನಾರೆಂಬುದು ಬಲರಾಮನ ಸ್ಮರಣೆಗೆ ಬಂದು ಅವನ ಭಯವು ದೂರ ಸರಿಯಿತು. ಕಳ್ಳನೊಬ್ಬನು ಕಳ್ಳತನಮಾಡಿ ಅಪಾರವಾದ ಹಣವನ್ನೆತ್ತಿ ಕೊಂಡು ಓಡಿಹೋಗುವಂತೆ–ಪ್ರಲಂಬಾಸುರನು ತನ್ನನ್ನು ಕದ್ದುಕೊಂಡು ಓಡಿಹೋಗುತ್ತಿರುವನೆಂಬುದನ್ನು ಬಲರಾಮನು ಅರಿತುಕೊಂಡನು. ಇದರಿಂದ ಅತ್ಯಂತಕ್ರುದ್ಧನಾದ ಬಲರಾಮನು–ಇಂದ್ರನು ವಜ್ರಾಯುಧವನ್ನು ಪರ್ವತಗಳ ಮೇಲೆ ಪ್ರಹರಿಸುವಂತೆ–ವಜ್ರಾಯುಧಕ್ಕೆ ಸಮಾನವಾದ ತನ್ನ ದೃಢವಾದ ಮುಷ್ಟಿಯಿಂದ ಪ್ರಲಂಬಾಸುರನ ತಲೆಗೆ ಪ್ರಹರಿಸಿದನು. ಹೀಗೆ ಆ ಮಹಾಸುರನು ದೃಢವಾದ ಮುಷ್ಟಿಯಿಂದ ಪ್ರಹರಿಸಲ್ಪಟ್ಟೊಡನೆಯೇ ಅವನ ತಲೆಯು ನುಚ್ಚು-ನೂರಾಗಿಬಿಟ್ಟಿತು. ರಕ್ತವನ್ನು ಕಾರುತ್ತಾ ಚೇತನಾರಹಿತನಾಗಿ ಭಯಂಕರವಾಗಿ ಶಬ್ದಮಾಡುತ್ತಾ–ಇಂದ್ರನ ವಜ್ರಾ ಯುಧದಿಂದ ಪ್ರಹರಿಸಲ್ಪಟ್ಟ ಪರ್ವತವು ಕೆಳಕ್ಕೆ ರಭಸದಿಂದ ಬೀಳುವಂತೆ–ಪ್ರಲಂಬಾಸುರನು ಗತಪ್ರಾಣನಾಗಿ ಭೂಮಿಯ ಮೇಲೆ ಬಿದ್ದನು.

ಮಹಾಬಲಿಷ್ಠನಾದ ಬಲರಾಮನು ಪ್ರಲಂಬಾಸುರನನ್ನು ಸಂಹರಿಸಿದ್ದನ್ನು ನೋಡಿ ಗೋಪರೆಲ್ಲರಿಗೂ ಅಚ್ಚರಿಯಾಯಿತು. 'ಭಲೇ ಬಲರಾಮ! ಭಲೇ ರೌಹಿಣೇಯ!'–ಎನ್ನುತ್ತಾ ಆತನನ್ನು ಬಹಳವಾಗಿ ಕೊಂಡಾಡಿದರು. ತಮಗೆ ಅತ್ಯಂತಪ್ರಿಯನಾಗಿದ್ದ, ತಮ್ಮ ನಾಯಕನಾಗಿದ್ದ ಬಲರಾಮನನ್ನು

---

ಹೊತ್ತುಕೊಂಡು ಹೋದರೆ ತಾನೂ ವ್ಯೋಮಾಸುರನಂತೆಯೇ ಮಡಿಯ ಬೇಕಾಗುವುದೆಂದು ಯೋಚಿಸಿ ಬಲರಾಮನನ್ನು ಎತ್ತಿಕೊಂಡು ಹೋದನು. (ವೀರರಾಘವೀಯ)

ಪ್ರಲಂಬನು ಶ್ರೀಕೃಷ್ಣನೊಡನೆ ಸ್ನೇಹವನ್ನು ಪಡೆದುದರಿಂದ ಭಗವಂತನಾದ ಶ್ರೀಕೃಷ್ಣ ನನ್ನು ಯಾವನೂ ಹೊರಲಾರನೆಂದೂ ಇತರರನ್ನು ಕೋಟಲೆಗೊಳಿಸಿದರೂ ತನ್ನ ಕೆಲಸವು ಕೈಗೂಡುವುದೆಂದೂ ತಿಳಿದು ಬಲರಾಮನನ್ನು ಅಪಹರಿಸಿದನು.

ಪ್ರಲಂಬಾಸುರನು ಎತ್ತಿಕೊಂಡು ಓಡಿಹೋದಕಾರಣ ಗೋಪರ ಮನಸ್ಸೆಲ್ಲವೂ ಪ್ರೇಮದಿಂದ ವ್ಯಾಕುಲಗೊಂಡಿದ್ದಿತು. ಮೃತ್ಯುರೂಪನಾಗಿದ್ದ ಪ್ರಲಂಬ




ನಿಂದ ತಪ್ಪಿಸಿಕೊಂಡು ಬಂದ ಕಾರಣ ಗೋಪರೆಲ್ಲರೂ ಬಲರಾಮನು ಸತ್ತುಬದುಕಿದನೆಂದೇ ಭಾವಿಸಿ ಆನಂದತುಂದಿಲರಾದರು. ಪ್ರಶಂಸೆಗೆ ಅರ್ಹನಾದ ಬಲರಾಮನನ್ನು ಅವರೆಲ್ಲರೂ ತಬ್ಬಿಕೊಂಡು ಆಶೀರ್ವದಿಸುತ್ತಾ ಅವನ ಪರಾಕ್ರಮವನ್ನು ಬಹಳವಾಗಿ ಹೊಗಳಿದರು. ಪಾಪಿಷ್ಠನಾದ ಪ್ರಲಂಬನು ಹತನಾಗಲಾಗಿ ದೇವತೆಗಳೆಲ್ಲರೂ ಸುಖಿಗಳಾದರು. ಪುಷ್ಪಮಾಲಿಕೆಗಳನ್ನೇ ಬಲರಾಮನ ಮೇಲೆ ಆಕಾಶದಿಂದ ಸುರಿಸುತ್ತಾ 'ಸಾಧು! ಬಲರಾಮ ಸಾಧು!'–ಎಂದು ಸಾಧುವಾದಗಳನ್ನು ಹೇಳುತ್ತಾ ಬಲಭದ್ರನನ್ನು ಬಹಳವಾಗಿ ಪ್ರಶಂಸಿಸಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೮ನೆಯ ಅಧ್ಯಾಯವು ಮುಗಿಯಿತು.

---

## ಗೋವುಗಳನ್ನೂ ಗೋಪಾಲಕರನ್ನೂ ಶ್ರೀಕೃಷ್ಣನು ಕಾಡುಗಿಚ್ಚಿನಿಂದ ಸಂರಕ್ಷಿಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ಕ್ರೀಡಾಸಕ್ತೇಷು ಗೋಪೇಷು ತದ್ಗಾವೋ ದೂರಚಾರಿಣೀಃ ।**
**ಸ್ವೈರಂ ಚರನ್ತ್ಯೋ ವಿವಿಶುಸ್ತೃಣಲೋಭೇನ ಗಹ್ವರಮ್ ॥೧॥**

ಜನಮೇಜಯ! ಒಮ್ಮೆ ಗೋಪಾಲರೆಲ್ಲರೂ ಆಟಗಳಲ್ಲಿ ಮಗ್ನರಾಗಿಬಿಟ್ಟಿದ್ದರು. ಅವರಿಗೆ ಹಸುಗಳ ಕಡೆ ಅಷ್ಟಾಗಿ ಗಮನವಿರಲಿಲ್ಲ. ತಡೆಯುವವರೇ ಇಲ್ಲದ ಕಾರಣ ಹಸುಗಳು ಸ್ವೇಚ್ಛೆಯಿಂದ ಸಂಚರಿಸುತ್ತಾ ಬಹಳ ದೂರಕ್ಕೆ ಹೋಗಿಬಿಟ್ಟುವು. ಹಸಿರುಹುಲ್ಲಿನ ಆಸೆಯಿಂದಾಗಿ ಮುಂಜಾರಣ್ಯವೆಂಬ ಘೋರವಾದ ನೊಜೆಹುಲ್ಲಿನ ಕಾಡನ್ನು ಪ್ರವೇಶಿಸಿದುವು. ಮೇಕೆಗಳು, ಎಮ್ಮೆಗಳು, ಹಸುಗಳು ಹಸಿರುಹುಲ್ಲಿನ ಆಸೆಯಿಂದಾಗಿ ವನದಿಂದ ವನಕ್ಕೆ ಹೋಗುತ್ತಿದ್ದುವು. ಹೀಗೆಯೇ ಯಾರ ತಡೆಯೂ ಇಲ್ಲದೆ ಮುಂದುವರಿಯುತ್ತಾ ಬಿಸಿಲಿನ ತಾಪದಿಂದಾಗಿ ಪರಿತಪಿಸತೊಡಗಿದುವು. ದಿಕ್ಕು ಕಾಣದೆ ಕೂಗಿಕೊಳ್ಳುತ್ತಾ ಮುಂಜಾರಣ್ಯವನ್ನು ಸೇರಿದುವು. ಆಟವು ಮುಗಿದನಂತರ ಗೋಪಾಲರಿಗೆ ಹಸುಗಳ ಕಡೆಗೆ ಗಮನವು ಹರಿಯಿತು. ಆದರೆ ಸುತ್ತ-ಮುತ್ತಲೂ ಯಾವ ಪ್ರಾಣಿಯೂ ಇರಲಿಲ್ಲ. ಸ್ವಲ್ಪ ದೂರ ಅಡ್ಡಾಡಿ ನೋಡಿದರು. ಹಸು-ಕರುಗಳ ಸುಳಿವೇ ಇಲ್ಲ. ರಾಮ-ಕೃಷ್ಣರೇ ಮೊದಲಾದ ಗೋಪಾಲಬಾಲಕರಿಗೆ ಬಹಳ ಸಂಕಟವಾಯಿತು. ಹಸುಗಳು ಹೋದ ಮಾರ್ಗವೇ ಅವರಿಗೆ ತಿಳಿಯಲಿಲ್ಲ. ಗೋವುಗಳೇ ವ್ರಜವಾಸಿಗಳಿಗೆ ಜೀವನದ ಸಾಧನಗಳಾಗಿದ್ದುವು. ತಮ್ಮ ಜೀವನಕ್ಕೆ ಆಸರೆಯಾಗಿದ್ದ ಹಸುಗಳನ್ನು ಕಾಣದೆ ಗೋಪಾಲರೆಲ್ಲರೂ ಬುದ್ಧಿಗೆಟ್ಟವರಂತಾದರು. ಬಳಿಕ ಅವರು ಹಸುಗಳು ನಡೆದು ಹೋದ ಜಾಗ, ಹುಲ್ಲು ಮೇಯ್ದಿರುವ ಜಾಗ, ಗೊರಸುಗಳನ್ನು ಊರಿರುವ ಜಾಗ–ಇವುಗಳನ್ನೇ ಗುರುತುಗಳನ್ನಾಗಿಟ್ಟುಕೊಂಡು ಈ ಚಿಹ್ನೆಗಳನ್ನೇ ಅನುಸರಿಸಿ ಹೋಗತೊಡಗಿದರು. ಹೀಗೆಯೇ ಮುಂದುವರಿದು ಮುಂಜಾರಣ್ಯವನ್ನು ತಲುಪಿ ಹಸುಗಳು

ದಾರಿ ತಪ್ಪಿ ದಿಕ್ಕುಗಾಣದೆ ಎಲ್ಲಿಯೋ ಕೂಗಿಕೊಳ್ಳುತ್ತಿದ್ದುದನ್ನು ಕೇಳಿದರು. ಆ ಸಮಯದಲ್ಲಿ ಗೋಪಾಲರೂ ಬಹಳವಾಗಿ ಆಯಾಸಗೊಂಡಿದ್ದು ಬಾಯಾರಿಕೆಯಿಂದ ಬಳಲಿದ್ದರು. ಅವರಿಗೆ ಮುಂದುವರಿಯಲೂ ಸಾಧ್ಯ ವಾಗಲಿಲ್ಲ. ಹಸುಗಳನ್ನು ಬಿಟ್ಟು ಹಿಂದಿರುಗಲೂ ಇಷ್ಟವಿರಲಿಲ್ಲ. ಹೀಗಾಗಿ ಅವರು ನಡುದಾರಿಯಲ್ಲೇ ನಿಲ್ಲಬೇಕಾಯಿತು. ಅಂತಹ ಪರಿಸ್ಥಿತಿಯಲ್ಲಿ ಪ್ರಣತಾರ್ತಿಹರನಾದ ಶ್ರೀಕೃಷ್ಣನು ಮೇಘಸದೃಶವಾದ ಗಂಭೀರ ಧ್ವನಿಯಿಂದ ಹಸುಗಳ ಹೆಸರುಗಳನ್ನು ಹಿಡಿದು ಕೂಗಲು ಪ್ರಾರಂಭಿಸಿದನು. ಶ್ರೀಕೃಷ್ಣನ ಸುಮಧುರವಾದ ಕಂಠದಿಂದ ತಮ್ಮ ಹೆಸರುಗಳು ಉಚ್ಚರಿಸಲ್ಪಡು ತ್ತಿರುವುದನ್ನು ಕೇಳಿ ಗೋವುಗಳ ಆನಂದಕ್ಕೆ ಪಾರವೇ ಇಲ್ಲವಾಯಿತು. 'ಹುಂಬಾ'–ಎಂದೆನ್ನುತ್ತಾ ಹಸುಗಳು ಶ್ರೀಕೃಷ್ಣನ ಕರೆಗೆ ಓಗೊಟ್ಟುವು.

ಪರೀಕ್ಷಿತಮಹಾರಾಜ! ಹೀಗೆ ಶ್ರೀಕೃಷ್ಣನು ಹಸುಗಳನ್ನು ಕೂಗುತ್ತಿರಲು ಮತ್ತು ಹಸುಗಳೂ ಆನಂದದಿಂದ ಅವುಗಳ ಭಾಷೆಯಲ್ಲಿಯೇ ಪ್ರತ್ಯುತ್ತರಿಸುತ್ತಿರಲು ಅಕಸ್ಮಾತ್ತಾಗಿ ಅರಣ್ಯದ ನಾಲ್ಕು ದಿಕ್ಕುಗಳಲ್ಲಿಯೂ ವನವಾಸಿಗಳಿಗೆ ವಿನಾಶಕರವಾದ ಕಾಡುಗಿಚ್ಚು ಹೊತ್ತಿಕೊಂಡಿತು. ಇದರ ಜೊತೆಯಲ್ಲಿಯೇ ಬಿರುಗಾಳಿಯು ಬೀಸುತ್ತಾ ತನ್ನ ಸ್ನೇಹಿತನ ವೃದ್ಧಿಗೆ ಅನುವುಮಾಡಿಕೊಟ್ಟಿತು. ಸ್ವಲ್ಪಹೊತ್ತಿನಲ್ಲಿಯೇ ಭಯಂಕರವಾದ ಜ್ವಾಲೆ ಗಳಿಂದ ಕೂಡಿದ ದಾವಾಗ್ನಿಯು ಆ ಮಹಾರಣ್ಯದಲ್ಲಿದ್ದ ಸಮಸ್ತಚರಾಚರ ಪ್ರಾಣಿಗಳನ್ನೂ ಭಸ್ಮಮಾಡತೊಡಗಿತು. ದಾವಾಗ್ನಿಯು ನಾಲ್ಕು ದಿಕ್ಕು ಗಳಲ್ಲಿಯೂ ಹೊತ್ತಿಕೊಂಡು ತಮ್ಮ ಕಡೆಗೆ ಗಾಳಿಯ ಸಹಾಯದಿಂದ ಧಾವಿಸಿಬರುತ್ತಿರುವುದನ್ನು ನೋಡಿ ಗೋವುಗಳೂ ಮತ್ತು ಗೋಪಾಲಕರೂ ಬಹಳವಾಗಿ ಭಯಗೊಂಡರು. ಮೃತ್ಯುಭಯದಿಂದ ಪೀಡಿಸಲ್ಪಟ್ಟ ಜನರು ಶ್ರೀಹರಿಯನ್ನು ಶರಣುಹೋಗುವಂತೆ ದಾವಾಗ್ನಿಯಿಂದ ಪೀಡಿತರಾದ ಗೋಪಾಲರು ಬಲರಾಮಸಮೇತನಾಗಿದ್ದ ಶ್ರೀಕೃಷ್ಣನನ್ನು ಶರಣುಹೊಂದಿ ಪ್ರಾರ್ಥಿಸತೊಡಗಿದರು :

**ಕೃಷ್ಣ ಕೃಷ್ಣ ಮಹಾವೀರ ಹೇ ರಾಮಾಮಿತವಿಕ್ರಮ ।**
**ದಾವಾಗ್ನಿನಾ ದಹ್ಯಮಾನಾನ್ಪ್ರಪನ್ನಾಂಸ್ತ್ರಾತುಮರ್ಹಥಃ ॥೯॥**

"ಕೃಷ್ಣ! ಕೃಷ್ಣ! ಮಹಾವೀರನೇ! ಅಮಿತಪರಾಕ್ರಮನಾದ ಬಲ

ರಾಮನೇ! ನಮ್ಮ ಪ್ರಾರ್ಥನೆಯನ್ನು ಕೇಳಿರಿ. ನಾವೆಲ್ಲರೂ ನಿಮಗೆ ಶರಣಾಗತರಾಗಿದ್ದೇವೆ. ದಾವಾಗ್ನಿಯಿಂದ ನಾವೆಲ್ಲರೂ ಈಗ ಭಸ್ಮವಾಗುವುದರಲ್ಲಿದ್ದೇವೆ. ನೀವಿಬ್ಬರೂ ಶರಣಾಗತರಾಗಿರುವ ನಮ್ಮನ್ನು ಈ ದಾವಾಗ್ನಿಯಿಂದ ಸಂರಕ್ಷಿಸಿರಿ.

**ನೂನಂ ತ್ವದ್ಬಾನ್ಧವಾಃ ಕೃಷ್ಣ ನ ಚಾರ್ಹನ್ತ್ಯವಸೀದಿತುಮ್ ।**
**ವಯಂ ಹಿ ಸರ್ವಧರ್ಮಜ್ಞ ತ್ವನ್ನಾಥಾಸ್ತ್ವತ್ಪರಾಯಣಾಃ ॥೧೦॥**

ನಾವೆಲ್ಲರೂ ನಿಶ್ಚಯವಾಗಿಯೂ ನಿನ್ನ ಬಂಧುಗಳೇ ಆಗಿರುತ್ತೇವೆ. ಆಪದ್ಬಾಂಧವನ ಬಂಧುಗಳಾಗಿರುವ ನಾವು ಹೀಗೆ ವಿನಾಶಹೊಂದಬಾರದು. ಸಮಸ್ತವಾದ ಧರ್ಮಗಳನ್ನೂ ತಿಳಿದಿರತಕ್ಕವನೇ! ನಿನ್ನನ್ನೇ ನಾವು ನಮ್ಮ ಏಕಮಾತ್ರರಕ್ಷಕನೆಂದು ಭಾವಿಸಿಕೊಂಡಿರುತ್ತೇವೆ. ನೀನೇ ನಮಗೆ ಪರಮಾಶ್ರಯನಾಗಿರುವೆ. ಆದುದರಿಂದ ಈ ಸಮಯದಲ್ಲಿ ನಮ್ಮನ್ನು ಈ ದಾವಾಗ್ನಿಯಿಂದ ಸಂರಕ್ಷಿಸು."

ಶ್ರೀಶುಕರು ಹೇಳುತ್ತಾರೆ :

ಮಹಾರಾಜ! ತನ್ನ ಬಂಧುಗಳು ದೈನ್ಯದಿಂದ ಮಾಡಿಕೊಂಡ ಪ್ರಾರ್ಥನೆಯನ್ನು ದೀನಬಂಧುವಾದ, ಕೃಪಾಸಾಗರನಾದ ಶ್ರೀಕೃಷ್ಣನು ಕೇಳಿದನು :

'ಮಾ ಭೈಷ್ಟ' 'ಹೆದರಬೇಡಿರಿ' 'ನಿಮೀಲಯತ ಲೋಚನಾನಿ'–'ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ'–ಎಂದು ಶ್ರೀಹರಿಯು ಹೇಳಿದನು.

ಭಗವಂತನ ಆಜ್ಞೆಯನ್ನು ಕೇಳಿದ ಗೋಪಾಲರು ಹಾಗೆಯೇ ಆಗ ಲೆಂದು ಹೇಳುತ್ತಾ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಬಳಿಕ ಯೋಗೇಶ್ವರನಾದ, ಸರ್ವಶಕ್ತನಾದ ಶ್ರೀಕೃಷ್ಣನು ಭಯಂಕರವಾಗಿದ್ದ ಆ ಕಾಡುಗಿಚ್ಚನ್ನು ತನ್ನ ಮುಖದಿಂದ ಪಾನಮಾಡಿಬಿಟ್ಟನು. ಹೀಗೆ ಅವನು ಭಕ್ತರಾದ ಗೋಪಾಲರನ್ನು ಘೋರವಾದ ಪ್ರಾಣಸಂಕಟದಿಂದ ಬಿಡುಗಡೆ ಮಾಡಿದನು.* ಶ್ರೀಕೃಷ್ಣನು ಗೋಪಾಲರಿಗೆ ಕಣ್ಣುಗಳನ್ನು ಬಿಡಬಹುದೆಂದು

---

* ಭಾವುಕರು ದಾವಾಗ್ನಿಪಾನದ ಈ ಪ್ರಕರಣವನ್ನು ನಾನಾಪ್ರಕಾರವಾಗಿ ವರ್ಣಿಸಿರುತ್ತಾರೆ:

1) ಭಗವಾನ್ ಶ್ರೀಕೃಷ್ಣನು ಭಕ್ತರಿಂದ ಅರ್ಪಿತವಾಗುವ ಪ್ರೇಮ-ಭಕ್ತಿ-ಸುಧಾರಸದ

ಹೇಳಿ, ಅವರು ಕಣ್ಣುಗಳನ್ನು ಬಿಟ್ಟು ನೋಡುವ ವೇಳೆಗೆ ಅವರೆಲ್ಲರೂ ಭಾಂಡೀರಕವಟವೃಕ್ಷದ ಸಮೀಪದಲ್ಲಿದ್ದರು. ಇದೂ ಕೃಷ್ಣನ ಯೋಗ ಮಾಯೆಯೇ. ಹೀಗೆ ತಾವು ಮತ್ತು ಗೋವುಗಳು ದಾವಾಗ್ನಿಯಿಂದ ಮುಕ್ತರಾದುದನ್ನು ಕಂಡು ಗೋಪಾಲರಿಗೆ ಅಚ್ಚರಿಯಾಯಿತು. ಶ್ರೀಕೃಷ್ಣನ ಯೋಗಸಿದ್ಧಿಯನ್ನೂ, ಅವನು ತನ್ನ ಯೋಗಮಾಯೆಯ ಪ್ರಭಾವದಿಂದ ತಮ್ಮನ್ನು ದಾವಾಗ್ನಿಯಿಂದ ವಿಮುಕ್ತಿಗೊಳಿಸಿದುದನ್ನೂ ಮತ್ತು ಅದರಿಂದ ತಮಗೆ ಕ್ಷೇಮವುಂಟಾದುದನ್ನೂ ಕಂಡು ಗೋಪಾಲರು ಶ್ರೀಕೃಷ್ಣನನ್ನು ದೇವತೆಯೆಂದೇ ಭಾವಿಸಿದರು.

ಪರೀಕ್ಷಿತಮಹಾರಾಜ! ಸಾಯಂಕಾಲವಾಗುತ್ತಲೇ ಬಲರಾಮಸಹಿತ ನಾದ ಶ್ರೀಕೃಷ್ಣನು ಗೋವುಗಳನ್ನು ಅರಣ್ಯದಿಂದ ಹಿಂದಿರುಗಿಸಿ ಅವುಗಳ ಹಿಂದೆ ಕೊಳಲನ್ನೂದುತ್ತಾ ಗೊಲ್ಲರಹಳ್ಳಿಯ ಕಡೆಗೆ ಹೊರಟನು. ಅವನನ್ನು ಅನುಸರಿಸಿ ಗೋಪಾಲರು ಶ್ರೀಕೃಷ್ಣನನ್ನು ಸ್ತೋತ್ರಮಾಡುತ್ತಾ ಹೋಗು ತ್ತಿದ್ದರು. ವ್ರಜದಲ್ಲಿದ್ದ ಗೋಪಿಯರಿಗೆ ಮುದ್ದುಕೃಷ್ಣನಿಲ್ಲದ ಒಂದೊಂದು ಕ್ಷಣವೂ ಒಂದೊಂದು ಯುಗವಾಗಿ ಕಾಣುತ್ತಿದ್ದಿತು. ಕೊಳಲನ್ನೂದುತ್ತಾ ಬಂದ ಗೋವಿಂದನನ್ನು ಸಂದರ್ಶಿಸಿದೊಡನೆಯೇ ಗೋಪಿಯರು ಅಗಾಧವಾದ ಆನಂದಸಾಗರದಲ್ಲಿ ಮುಳುಗಿಹೋದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೧೯ನೆಯ ಅಧ್ಯಾಯವು ಮುಗಿಯಿತು.

---

ಪಾನಮಾಡುತ್ತಾನೆ. ಅದೆಷ್ಟು ಸವಿಯಾಗಿರುವುದೆಂಬುದನ್ನು ತಿಳಿಯಬೇಕೆಂಬ ಆಸೆಯಿಂದ ಅಗ್ನಿಯೇ ಶ್ರೀಕೃಷ್ಣನ ಮುಖವನ್ನು ಪ್ರವೇಶಿಸಿದನಂತೆ.

2) ವಿಷಾಗ್ನಿ ಮುಂಜಾಗ್ನಿ ಮತ್ತು ದಾವಾಗ್ನಿ ಈ ಮೂರನ್ನೂ ಭಗವಂತನಾದ ಶ್ರೀಕೃಷ್ಣನು ಪಾನಮಾಡಿ ತನ್ನ ಪ್ರತಾಪಶಕ್ತಿಯನ್ನು ವ್ಯಕ್ತಪಡಿಸಿದ್ದಾನೆ.

3) ಹಿಂದೆ ಶ್ರೀಕೃಷ್ಣನು ಯಮುನೆಯ ತೀರದಲ್ಲಿ ರಾತ್ರಿಯ ವೇಳೆ ಅಗ್ನಿಪಾನ ಮಾಡಿದ್ದನು. ಈಗ ಹಗಲಿನಲ್ಲಿಯೇ ಅಗ್ನಿಪಾನಮಾಡಿದ್ದಾನೆ. ಇದರಿಂದ ಭಗವಂತನು ಹಗಲು-ರಾತ್ರಿಗಳೆಂಬ ಪರಿವೆಯೇ ಇಲ್ಲದೆ ತನ್ನ ಭಕ್ತರ ಪಾಪಗಳನ್ನು ಪರಿಹರಿಸುವುದರಲ್ಲಿ ತತ್ಪರನಾಗಿರುತ್ತಾನೆಂಬುದು ಸ್ಪಷ್ಟವಾಗುತ್ತದೆ.

## ವರ್ಷರ್ತು-ಶರದೃತುಗಳ ವರ್ಣನೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ತಯೋಸ್ತದದ್ಭುತಂ ಕರ್ಮ ದಾವಾಗ್ನೇರ್ಮೋಕ್ಷಮಾತ್ಮನಃ ।**
**ಗೋಪಾಃ ಸ್ತ್ರೀಭ್ಯಃ ಸಮಾಚಖ್ಯುಃ ಪ್ರಲಮ್ಬವಧಮೇವ ಚ ॥೧॥**

ಪರೀಕ್ಷಿತಮಹಾರಾಜ! ಗೋಪಾಲರು ಶ್ರೀಕೃಷ್ಣನೊಡನೆಯೂ, ಬಲರಾಮನೊಡನೆಯೂ, ಹಸುಗಳೊಡನೆಯೂ ಗೊಲ್ಲರಹಳ್ಳಿಯನ್ನು ಸೇರಿದ ನಂತರ ಕೊಟ್ಟಿಗೆಗಳಲ್ಲಿ ಹಸುಗಳನ್ನು ಕಟ್ಟಿಹಾಕಿ ತಮ್ಮ-ತಮ್ಮ ಮನೆಗಳಿಗೆ ಹೋಗಿ ಮನೆಯಲ್ಲಿದ್ದ ತಾಯಿ-ತಂಗಿ-ಹೆಂಡತಿ—ಇವರೇ ಮೊದಲಾದ ಸ್ತ್ರೀಯರಿಗೆ ಶ್ರೀಕೃಷ್ಣನು ದಾವಾಗ್ನಿಯಿಂದ ತಮ್ಮನ್ನು ರಕ್ಷಿಸಿದ ಸಮಾಚಾರವನ್ನೂ ಬಲರಾಮನು ಪ್ರಲಂಬಾಸುರನನ್ನು ಸಂಹರಿಸಿದ ಸಮಾಚಾರವನ್ನೂ ವರ್ಣಿಸಿ ಹೇಳಿದರು. ವ್ರಜದಲ್ಲಿದ್ದ ವೃದ್ಧರಾದ ಗೋಪಾಲರೂ ಮತ್ತು ಗೋಪಿಯರು ಬಲರಾಮ-ಕೃಷ್ಣರ ಆ ಅಲೌಕಿಕವಾದ ಲೀಲೆಗಳನ್ನು ಕೇಳಿ ವಿಸ್ಮಿತರಾದರು. ರಾಮ-ಕೃಷ್ಣರ ವೇಷದಲ್ಲಿ ಯಾರೋ ದೇವಶ್ರೇಷ್ಠರು ಗೊಲ್ಲರಹಳ್ಳಿಗೆ ಆಗಮಿಸಿರಬಹುದೆಂದು ಅವರೆಲ್ಲರೂ ಭಾವಿಸಿದರು.

ಸಹಿಸಲಾಗದ ತಾಪದಿಂದ ಕೂಡಿದ್ದ ಗ್ರೀಷ್ಮರ್ತುವು ಕಳೆದು ವರ್ಷರ್ತುವು ಪ್ರಾರಂಭವಾಯಿತು. ಸಕಲಪ್ರಾಣಿಗಳಿಗೂ ಜೀವನವನ್ನಿತ್ತು ಸಲಹುವ ಕಾಲವದು. ಸೂರ್ಯ-ಚಂದ್ರರ ಸುತ್ತಲೂ ಪರಿವೇಷವೃತ್ತವು* ಕಾಣತೊಡಗಿತು. ಗುಡುಗು-ಸಿಡಿಲು-ಮಿಂಚು-ಗಾಳಿಗಳಿಂದ ಆಕಾಶವು ಕ್ಷೋಭೆಗೊಂಡಿತು. ದಟ್ಟವಾದ ಮತ್ತು ಕಪ್ಪಾದ ಮೇಘಗಳಿಂದ ಆಕಾಶವು

---

4) ಹಿಂದೆ ಯಮುನಾತೀರದಲ್ಲವನು ಸಮಸ್ತರ ಸಮಕ್ಷದಲ್ಲಿಯೂ ಅಗ್ನಿಪಾನಮಾಡಿದನು. ಈಗ ಎಲ್ಲರ ಕಣ್ಣುಗಳನ್ನೂ ಮುಚ್ಚಿಸಿ ಅಗ್ನಿಪಾನಮಾಡಿದ್ದಾನೆ. ಭಗವಂತನು ಪರೋಕ್ಷ ಮತ್ತು ಅಪರೋಕ್ಷ ಈ ಎರಡು ಪ್ರಕಾರಗಳಿಂದಲೂ ಭಕ್ತಜನರಿಗೆ ಹಿತವನ್ನುಂಟು ಮಾಡುವನೆಂಬುದೇ ಇದರ ಅಭಿಪ್ರಾಯವಾಗಿದೆ.

* ಪರಿವೇಷ : ಪರಿವೇಷವೆಂದರೆ ಉಪಸೂರ್ಯಮಂಡಲದಲ್ಲಿ ಕಾಣುವ ವೃತ್ತ. ಪರಿವೇಷಸ್ತು ಪರಿಧಿರುಪಸೂರ್ಯಕಮಣ್ಡಲೇ । (ಅಮರಕೋಶ)

ವ್ಯಾಪ್ತವಾಯಿತು. ಗುಡುಗಿನ ಶಬ್ದದೊಡನೆ ಮಿಂಚು ಕಾಣಿಸತೊಡಗಿತು. ಸೂರ್ಯ-ಚಂದ್ರರು ಮತ್ತು ತಾರೆಗಳು ಕಾರ್ಮುಗಿಲಿನಿಂದ ಮುಚ್ಚಿಹೋಗಿ ಅಸ್ಪಷ್ಟವಾಗಿ ಕಾಣುತ್ತಿದ್ದು ಆಕಾಶವು ಸತ್ತ್ವ-ರಜಸ್ತಮೋಗುಣಗಳಿಂದ ಕೂಡಿದ ಪರಬ್ರಹ್ಮವಸ್ತುವಿನಂತೆ ಕಾಣುತ್ತಿದ್ದಿತು.*

**ಅಷ್ಟೌ ಮಾಸಾನ್ ನಿಪೀತಂ ಯದ್ಭೂಮ್ಯಾಶ್ಚೋದಮಯಂ ವಸು ।**
**ಸ್ವಗೋಭಿರ್ಮೋಕ್ತುಮಾರೇಭೇ ಪರ್ಜನ್ಯಃ ಕಾಲ ಆಗತೇ ॥೫॥**

ಭೂಮಂಡಲದಲ್ಲಿರುವ ರಾಜರಂತೆ ಸೂರ್ಯದೇವನು ಎಂಟು ತಿಂಗಳುಗಳ ಕಾಲ ಭೂಮಿಯಲ್ಲಿ ನೀರಿನರೂಪವಾದ ಕಂದಾಯವನ್ನು ಸಂಗ್ರಹಿಸುತ್ತಿದ್ದು ಉಳಿದ ಈ ನಾಲ್ಕು ತಿಂಗಳುಗಳಕಾಲ ಭೂಮಂಡಲದ ಸಂಪತ್ಸಮೃದ್ಧಿಗಾಗಿ ತಾನು ಸಂಗ್ರಹಿಸಿದ್ದ ಆ ಕಂದಾಯವನ್ನು ತನ್ನ ಕಿರಣಗಳ ಮೂಲಕವಾಗಿ ಭೂಮಿಗೆ ಮಳೆಯರೂಪದಲ್ಲಿ ಹಿಂದಿರುಗಿಸುತ್ತಾನೆ. ಯಾವ ರೀತಿಯಲ್ಲಿ ದಯಾಳುಗಳಾದ ಮನುಷ್ಯರು ಪೀಡೆಗೊಳಗಾದವರನ್ನು ರಕ್ಷಿಸುವ ಸಲುವಾಗಿ ತಮ್ಮ ಪ್ರಾಣಗಳನ್ನಾದರೂ ಒತ್ತೆಯಿಡುವರೋ–ಅದೇ ರೀತಿಯಲ್ಲಿ ಮೋಡಗಳು ಮಿಂಚುಗಳೆಂಬ ಕಣ್ಣುಗಳ ಮೂಲಕವಾಗಿ ಪ್ರಪಂಚದ ಜನರ ಕಷ್ಟವನ್ನು ನೋಡಿ ಅವರ ಕಲ್ಯಾಣಕ್ಕಾಗಿ ತಮ್ಮ ಜೀವನ ರೂಪವಾದ ನೀರನ್ನು ಸುರಿಸುತ್ತವೆ. ಕಾಮ್ಯಫಲಗಳ ಪ್ರಾಪ್ತಿಗಾಗಿ ತಪಸ್ಸು ಮಾಡುವವನ ಶರೀರವು ದುರ್ಬಲವಾಗಿದ್ದು ಫಲವು ಲಭಿಸಿದನಂತರ ದಷ್ಟ-

---

* ಇಲ್ಲಿ ಮಿಂಚು, ಗುಡುಗು ಮತ್ತು ಮೋಡಗಳು ಕ್ರಮವಾಗಿ ಸತ್ತ್ವ-ರಜಸ್ತಮಸ್ಸುಗಳಿಗೂ ಸೂರ್ಯ-ಚಂದ್ರ-ನಕ್ಷತ್ರಾದಿ ಜ್ಯೋತಿಗಳು ಚಿದಾಭಾಸನಾದ ಜೀವನಿಗೂ ಆಕಾಶವು ಪರಮಾತ್ಮನಿಗೂ ಹೋಲಿಸಲ್ಪಟ್ಟಿರುವುದು. (ಭಾವಾರ್ಥದೀಪಿಕಾ)

ಮಳೆಗಾಲದ ಆಕಾಶವು ಪ್ರಕೃತಿಯಿಂದ ಮರೆಗೊಳಿಸಲ್ಪಟ್ಟ ಧರ್ಮಭ್ರಾಂತಿಜ್ಞಾನವುಳ್ಳ ಜೀವನಂತೊಪ್ಪಿತು. ವರ್ಷಾಕಾಲದ ಅಂತರಿಕ್ಷಕ್ಕೆ ಶರತ್ಕಾಲ ಬರುವವರೆಗೂ ಮಿಂಚು-ಗುಡುಗು-ಮೋಡ ಮುಂತಾದುವುಗಳ ಸಂಬಂಧವಿರುವಂತೆ ಜೀವನಿಗೆ ಮುಕ್ತಿದೊರಕುವವರೆಗೂ ಸತ್ತ್ವಾದಿಗುಣಗಳ ಸಂಬಂಧವು ತಪ್ಪುವುದಿಲ್ಲವೆಂದೂ ಆಕಾಶದಂತೆ ನಿರ್ಮಲನಾದ ಜೀವನಿಗೆ ಈ ಮಾಲಿನ್ಯವು ಆಗಂತುಕವೆಂದೂ ತಿಳಿದು ಮೋಕ್ಷಕ್ಕಾಗಿ ಯತ್ನಿಸಬೇಕೆಂಬ ಭಾವವು. (ವೀರರಾಘವೀಯ)

ಮಳೆಗಾಲದ ಗಗನವು ಚತುರ್ಮುಖಬ್ರಹ್ಮನಂತೆ ಹೊಳೆಯಿತು.
(ವಿಜಯಧ್ವಜೀಯ)

ಪುಷ್ಟವಾಗುವಂತೆ–ಗ್ರೀಷ್ಮರ್ತುವಿನಲ್ಲಿ ಬಿಸಿಲಿನ ತಾಪದಿಂದ ಒಣಗಿಹೋಗಿದ್ದ ಭೂಮಿಯು ವರ್ಷಾಕಾಲವು ಬಂದೊಡನೆಯೇ ವೃದ್ಧಿಹೊಂದಿ ಹಚ್ಚಹಸಿರಾಗಿ ನಗುತ್ತಿರುತ್ತದೆ. ಕಲಿಯುಗದಲ್ಲಿ ಪಾಪದ ಪ್ರಾಬಲ್ಯದಿಂದಾಗಿ ವೈದಿಕ ಮತವು ಮರೆಯಾಗಿ ಪಾಖಂಡಮತವು ಪ್ರಕಾಶಕ್ಕೆ ಬರುವಂತೆ–ವರ್ಷಾಕಾಲದ ಸಾಯಂಕಾಲಗಳಲ್ಲಿ ಕಾರ್ಮುಗಿಲಿನ ಆಚ್ಛಾದನೆಯಿಂದಾಗಿ ಚಂದ್ರ-ಗ್ರಹ-ನಕ್ಷತ್ರಗಳ ಬೆಳಕುಕಾಣದೆ ಕೇವಲ ಮಿಣುಕುಹುಳುಗಳ ಪ್ರಕಾಶವು ಕಾಣಿಸುತ್ತಿರುತ್ತದೆ. ನಿತ್ಯಕರ್ಮಗಳು ಮುಗಿದನಂತರ ಗುರುಗಳ ಆದೇಶದಂತೆ ಬ್ರಹ್ಮಚಾರಿಗಳು ವೇದವನ್ನು ಉರುಹೊಡೆಯುವಂತೆ–ಅದುವರೆಗೂ ಶಬ್ದಮಾಡದಿದ್ದ ಈ ಕಪ್ಪೆಗಳು ವರ್ಷಾಕಾಲದ ಮೇಘಗಳ ಗರ್ಜನೆಯನ್ನು ಕೇಳುತ್ತಲೇ ವಟಗುಟ್ಟಲು ಪ್ರಾರಂಭಿಸುತ್ತವೆ. ಗ್ರೀಷ್ಮರ್ತುವಿನಲ್ಲಿ ಬತ್ತಿಹೋಗಿದ್ದ ನದಿಗಳು, ವರ್ಷಾಕಾಲದಲ್ಲಿ–ಜಿತೇಂದ್ರಿಯನಲ್ಲದವನು ಯೌವನ ಮತ್ತು ಧನಸಂಪತ್ತಿಯನ್ನು ಅಪವ್ಯಯಗೊಳಿಸುವಂತೆ–ಮೇರೆದಪ್ಪಿ ಹರಿಯುತ್ತವೆ. ಕೆಲವು ಕಡೆಗಳಲ್ಲಿ ಭೂಮಿಯು ಗರಿಕೆಹುಲ್ಲಿನಿಂದ ವ್ಯಾಪ್ತವಾಗಿದ್ದು ಹಚ್ಚಹಸಿರಾಗಿಯೂ ಕೆಲವೆಡೆಗಳಲ್ಲಿ ಚಂದ್ರಚೂಡಗಳೆಂಬ ಹುಳುಗಳಿಂದ ತುಂಬಿದ್ದು ಕೆಂಪಾಗಿಯೂ ಮತ್ತೆ ಕೆಲವೆಡೆಗಳಲ್ಲಿ ನಾಯಿಕೊಡೆಗಳಿಂದ ತುಂಬಿದ್ದು ಬಿಳುಪಾಗಿಯೂ ಕಾಣಿಸುತ್ತಿದ್ದು ನಾನಾಬಣ್ಣದ ಉಡಿಗೆ-ತೊಡಿಗೆಗಳನ್ನು ಧರಿಸಿದ ರಾಜರ ಸೈನಿಕರಂತೆ ಕಾಣುತ್ತಿರುತ್ತವೆ. ಎಲ್ಲ ಹೊಲ-ಗದ್ದೆಗಳೂ ಸಸ್ಯಸಮೃದ್ಧಿಯಿಂದ ಕೂಡಿದ್ದು ರೈತರಿಗೆ ಆನಂದವನ್ನುಂಟುಮಾಡುತ್ತವೆ. ಸರ್ವವೂ ದೈವಾಧೀನವೆಂಬ ರಹಸ್ಯವನ್ನು ತಿಳಿಯದಿದ್ದ ಧನಿಕರಿಗೆ ರೈತರ ಸಸ್ಯಸಂಪತ್ತನ್ನು ನೋಡಿ ಅನುತಾಪವುಂಟಾಗುತ್ತದೆ. ಅವರೂ ತಮ್ಮಂತೆಯೇ ಧನಿಕರಾಗಿಬಿಡುತ್ತಾರಲ್ಲಾ–ಎಂಬ ಅಸೂಯೆಯು ಧನಿಕರಿಗಾಗುತ್ತದೆ. ವರ್ಷಾಕಾಲದಲ್ಲಿ ಮಳೆಯಿಂದ ಸಂಗ್ರಹವಾದ ಹೊಸ ನೀರಿನ ಪಾನದಿಂದ ಜಲಚರಗಳೂ ಮತ್ತು ಭೂಚರಪ್ರಾಣಿಗಳೂ–ಹರಿಸೇವೆಯಿಂದ ಮನುಷ್ಯನು ಸಂಸ್ಕೃತವಾದ ಮನಸ್ಸನ್ನು * ಹೊಂದುವಂತೆ–ಸುಂದರ

---

* ವಸತಿ ಹೃದಿ ಸನಾತನೇ ಚ ತಸ್ಮಿನ್ ಭವತಿ ಪುಮಾನ್ ಜಗತೋಽಸ್ಯ ಸೌಮ್ಯರೂಪಃ ॥ ಎಂಬಂತೆ ಯಾವನ ಹೃದಯಕಮಲದಲ್ಲಿ ಭಗವಂತನು ನೆಲೆಸಿರುವನೋ ಅವನು ಸೌಮ್ಯರೂಪನಾಗುವನು.

ವಾದ ರೂಪುಗಳನ್ನು ಹೊಂದುತ್ತವೆ. ವರ್ಷಾಕಾಲದಲ್ಲಿ ಸ್ವಾಭಾವಿಕವಾಗಿಯೇ ಗಾಳಿಯ ಬಡಿತದಿಂದ ಸಮುದ್ರದಲ್ಲಿ ಎತ್ತರವಾದ ಅಲೆಗಳೆದ್ದು ಅಲ್ಲೋಲ-ಕಲ್ಲೋಲವಾಗಿಬಿಡುತ್ತದೆ. ಇದರ ಜೊತೆಗೆ ತುಂಬಿದ ನದಿಗಳೂ ಸಮುದ್ರ ವನ್ನು ಸೇರುವಾಗ ದೊಡ್ಡ ದೊಡ್ಡ ಅಲೆಗಳಿಂದ ಕೂಡಿದ್ದು ಸಮುದ್ರವು ಮತ್ತಷ್ಟು ಕ್ಷುಭಿತವಾಗುತ್ತದೆ. ಇನ್ನೂ ಪಳಗದಿರುವ ಯೋಗಿಯ ಕಾಮಾ ಸಕ್ತವಾದ ಚಿತ್ತವು ಭೋಗವಸ್ತುಗಳ ಸಂಸರ್ಗವನ್ನು ಹೊಂದಿದರೆ ಹೇಗೆ ಕ್ಷೋಭೆಗೊಳ್ಳುತ್ತದೆಯೋ ಹಾಗೆ ಸಮುದ್ರವು ವರ್ಷಾಕಾಲದಲ್ಲಿ ಅತಿಯಾಗಿ ಕ್ಷೋಭೆಗೊಳ್ಳುತ್ತದೆ. ಒನಕೆಯಷ್ಟು ದಪ್ಪದ ಧಾರೆಯಿಂದ ಕೂಡಿದ ಮಳೆಯು ಸತತವಾಗಿ ಸುರಿದರೂ ಪರ್ವತಗಳಿಗೆ ಯಾವ ವಿಧವಾದ ವ್ಯಥೆಯೂ ಉಂಟಾಗುವುದಿಲ್ಲ. ಅದೇ ರೀತಿಯಲ್ಲಿ ಹಲವಾರು ವ್ಯಸನ ಗಳಿಂದ ಪೀಡಿಸಲ್ಪಡುತ್ತಿದ್ದರೂ ಅಧೋಕ್ಷಜನಲ್ಲಿಯೇ ಲೀನವಾಗಿ ಹೋದ ಮನಸ್ಸುಳ್ಳ ಭಕ್ತಶಿರೋಮಣಿಗಳಿಗೆ ಯಾವ ವಿಧವಾದ ವ್ಯಥೆಯೂ ಉಂಟಾ ಗುವುದಿಲ್ಲ. ದ್ವಿಜರಿಂದ ಸತತವಾಗಿ ಅಭ್ಯಾಸಮಾಡಲ್ಪಡದಿರುವ ವೇದಗಳು ದ್ವಿಜರಿಗೆ ಕಾಲಾನುಕ್ರಮವಾಗಿ ಮರೆತೇಹೋಗುವಂತೆ ಶುದ್ಧಿಸಂಸ್ಕಾರ ಹೀನವಾದ ಮಾರ್ಗಗಳು ಹುಲ್ಲಿನಿಂದಲೂ ತುಂಬಿಕೊಂಡು ಅಲ್ಲಿ ಮಾರ್ಗ ಗಳಿವೆಯೆಂಬುದೇ ತಿಳಿಯದಾಗುತ್ತದೆ. ಮಳೆಗಾಲದಲ್ಲಿ ಅಲ್ಲಿ ಓಡಾಡು ವುದೂ ಕಷ್ಟವಾಗುತ್ತದೆ. ಚಂಚಲವಾದ ಅನುರಾಗವನ್ನು ಹೊಂದಿರುವ ಕಾಮಿನೀ ಸ್ತ್ರೀಯರು ಗುಣವಂತನಾದ ಪುರುಷನ ಬಳಿಯಲ್ಲಿ ಸ್ಥಿರವಾಗಿರು ವುದಿಲ್ಲ. ಅಂತೆಯೇ ಲೋಕೋಪಕಾರಿಗಳಾದ ಮೇಘಗಳೊಡನೆ ಮಿಂಚು ಗಳು ಸ್ಥಿರವಾಗಿರುವುದಿಲ್ಲ. ತ್ರಿಗುಣಾತ್ಮಕವಾದ ಈ ಪ್ರಪಂಚದಲ್ಲಿ ನಿರ್ಗುಣ ನಾದ ಪರಮಾತ್ಮನು ಬೆಳಗುವಂತೆ ಗುಡುಗು-ಸಿಡಿಲು–ಇವೇ ಮುಂತಾದ ಗುಣಗಳಿಂದ (ಶಬ್ದಗಳಿಂದ) ಕೂಡಿರುವ ಆಕಾಶದಲ್ಲಿ ನಿರ್ಗುಣೆಯಾದ ನಾಣೆ ಲ್ಲದ ಇಂದ್ರನ ಧನುಸ್ಸು ( ಕಾಮನ ಬಿಲ್ಲು ) ಮೂಡಿಬರುತ್ತದೆ.* ತನ್ನ ಚೈತನ್ಯ

---

* ಶಬ್ದಗುಣಕ್ಕೂ ಆಕಾಶಕ್ಕೂ ಎಷ್ಟು ಸಂಬಂಧವೋ ಮಾಯಾಗುಣಗಳಿಗೂ ಆತ್ಮನಿಗೂ ಅಷ್ಟೇ ಸಂಬಂಧವೆಂಬುದರಿಂದ ಆಕಾಶದಂತೆ ಪರಮಾತ್ಮನು ನಿರಂಜನನೆಂದು ಭಾವವು.

(ಭಾವಾರ್ಥದೀಪಿಕಾ)

ದಿಂದಲೇ ಬೆಳಗಿಸಲ್ಪಟ್ಟ ದೇಹಾತ್ಮಭ್ರಾಂತಿಯಿಂದ ಕೂಡಿದ ಅಹಂಕಾರದಿಂದ ಪರಮಾತ್ಮನೇ ಮರೆಯಾಗುವಂತೆ–ಚಂದ್ರನ ಬೆಳದಿಂಗಳಿಂದಲೇ ಪ್ರಕಾಶಗೊಂಡ ಮೋಡಗಳ ಆವರಣದಿಂದ ಚಂದ್ರನು ಮರೆಯಾಗಿದ್ದಾನೆ.* ಸಂಸಾರದ ಜಂಜಾಟದಿಂದ ಪರಿತಪಿಸುತ್ತಾ ಮುಂಗಾಣದೆ ದುಃಖಪಡುತ್ತಿರುವವರ ಮನೆಗೆ ಹರಿದಾಸರು ಆಗಮಿಸಿದರೆ ಅವರನ್ನು ಆ ದುಃಖಸಂತಪ್ತರು ಎಷ್ಟು ಆದರದಿಂದ ಸ್ವಾಗತಿಸುವರೋ–ಅದೇ ರೀತಿಯಲ್ಲಿ ಮೇಘಗಳ ಶುಭಾಗಮನದಿಂದಾಗಿ ನವಿಲುಗಳು ಕೇಕೆಹಾಕಿಕೊಂಡು ನೃತ್ಯಮಾಡುತ್ತಾ ಆನಂದೋತ್ಸವವನ್ನು ಪ್ರಕಟಪಡಿಸುತ್ತಿವೆ. ಕಾಮ್ಯಫಲಗಳ ಪ್ರಾಪ್ತಿಗಾಗಿ ಘೋರವಾದ ತಪಸ್ಸನ್ನು ಮಾಡುತ್ತಾ ದೇಹವನ್ನು ಕೃಶಗೊಳಿಸಿರುವ ಯೋಗಿಯು ಫಲಪ್ರಾಪ್ತಿಯಾದನಂತರ ದಷ್ಟ-ಪುಷ್ಟನಾಗುವಂತೆ–ಗ್ರೀಷ್ಮರ್ತುವಿನಲ್ಲಿ ಬಿಸಿಲಿನ ಬೇಗೆಯಿಂದ ಒಣಗಿಹೋಗಿದ್ದ ಗಿಡ-ಮರ-ಬಳ್ಳಿಗಳು ವರ್ಷಾಕಾಲವು ಬರುತ್ತಲೇ ಬೇರುಗಳ ಮೂಲಕವಾಗಿ ನೀರನ್ನು ಸೇವಿಸಿ ಸೊಂಪಾಗಿ ಚಿಗುರಿಕೊಳ್ಳುತ್ತವೆ. ಮನಸ್ಸಿಗೆ ಹಿತವಾಗದ ಹಲವಾರು ಕಾರ್ಯಗಳು ಮನೆಯಲ್ಲಿ ನಡೆಯುತ್ತಿದ್ದರೂ ಕೆಟ್ಟ ಅಭಿಪ್ರಾಯವುಳ್ಳ

---

ಸತ್ತ್ವಾದಿಗುಣಪರಿಣಾಮರೂಪವಾದ ಶರೀರದಲ್ಲಿ ಗುಣತ್ರಯರಹಿತನಾದ ಜೀವನು ಹೊಳೆಯುವಂತೆ–ಶಬ್ದಗುಣಕವಾದ ಆಕಾಶದಲ್ಲಿ ಗುಣವೆಂಬ ಹೆದೆಯಿಲ್ಲದ ಕಾಮನಬಿಲ್ಲು ಶೋಭಿಸಿತು. ಇದರಿಂದ ಗಗನೇಂದ್ರಚಾಪಗಳಂತೆಯೇ ದೇಹಾತ್ಮರಿಗೂ ಸ್ವರೂಪ-ಸ್ವಭಾವಗಳಲ್ಲಿ ವೈಲಕ್ಷಣ್ಯವುಂಟೆಂಬುದು ಭಾವವು. (ವಿಜಯಧ್ವಜೀಯ)

ಸೃಷ್ಟಿಗಿಂತ ಮೊದಲು ಗುಣಪ್ರವೃತ್ತಿಯಿಲ್ಲದುದರಿಂದ ನಿರ್ಗುಣಪ್ರವೃತ್ತಿ ಸಗುಣವಾಗಿ ಹೊಳೆಯುವಂತೆ ನಿರ್ಗುಣವಾದ ಇಂದ್ರಧನುಸ್ಸು ಸಗುಣಾಕಾರದಲ್ಲಿ ಮೆರೆಯಿತು.

(ವೀರರಾಘವೀಯ)

* ತನ್ನನ್ನು ಎಡೆಬಿಡದಿರುವ ಧರ್ಮಭೂತಜ್ಞಾನದಿಂದಲೇ ಬೆಳಕನ್ನು ಪಡೆದ ದೇಹಾತ್ಮಭ್ರಾಂತಿಯಿಂದ ತಾನು ದೇಹಕ್ಕಿಂತ ಬೇರೆಯಲ್ಲವೆಂದು ತಿಳಿಯದಂತೆ ಮರೆಯಾದ ಜ್ಞಾನವುಳ್ಳ ಪ್ರತ್ಯಗಾತ್ಮನಂತೆ ಚಂದ್ರನು ಮೋಡಗಳಿಂದ ಮರೆಯಾದನು.

(ವೀರರಾಘವೀಯ)

ಸಂಸಾರಿಯಾದ ಪುರುಷನ ಸ್ವರೂಪವು ಅಹಂಕಾರದಿಂದ ಮುಚ್ಚಲ್ಪಡುವುದೆಂದೂ ಭಗವತ್ಪ್ರಸಾದಲಬ್ಧವಾದ ಜ್ಞಾನಪ್ರಕಾಶದಿಂದ ಅಭಿವ್ಯಕ್ತವಾಗುವುದೆಂದೂ ಭಾವವು.

(ವಿಜಯಧ್ವಜೀಯ)

ಪ್ರಾಕೃತಜನರು ಆ ಮನೆಯನ್ನು ಬಿಟ್ಟು ಹೇಗೆ ಹೋಗುವುದಿಲ್ಲವೋ– ಹಾಗೆಯೇ ವಾಸಿಸುತ್ತಿರುವ ಸರೋವರಗಳು ಮಳೆ ಸುರಿಯುವಿಕೆಯಿಂದ ಕೊಚ್ಚೆಯಾಗಿದ್ದರೂ ಸಾರಸಪಕ್ಷಿಗಳು ಅಂತಹ ಸರೋವರಗಳನ್ನು ವರ್ಷಾ ಕಾಲದಲ್ಲಿ ಬಿಟ್ಟುಹೋಗುವುದಿಲ್ಲ. ಕಲಿಯುಗದಲ್ಲಿ ನಾಸ್ತಿಕರ ಮಿಥ್ಯಾವಾದ ಗಳಿಂದ ವೈದಿಕಮತವು ಎಲ್ಲೆಮೀರಿ ಹೋಗುವಂತೆ ವರ್ಷಾಕಾಲದಲ್ಲಿ ದೇವೇಂದ್ರನು ಮುಸಲದಂತಹ ಧಾರೆಯಿರುವ ಮಳೆಯನ್ನು ಸುರಿಸುತ್ತಿರ ಲಾಗಿ ನೀರಿನ ಪ್ರವಾಹದಿಂದ ಹಲವಾರು ಅಣೆಕಟ್ಟುಗಳೂ, ಸೇತುವೆಗಳೂ ಕೊಚ್ಚಿಹೋಗುತ್ತವೆ. ಬ್ರಾಹ್ಮಣರ ಪ್ರೇರಣೆಯಿಂದ ಧನಿಕರಾದವರು ಜನೋಪಯೋಗಿಗಳಾದ ಕಲ್ಯಾಣಕಾರ್ಯಗಳನ್ನು ಮಾಡುವಂತೆ–ವರ್ಷಾ ಕಾಲದಲ್ಲಿ ವಾಯುವಿನ ಪ್ರೇರಣೆಯಿಂದ ದಟ್ಟವಾದ ಮೇಘಗಳು ಪ್ರಾಣಿಗಳ ಹಿತದ ಸಲುವಾಗಿ ಅಮೃತಮಯವಾದ ನೀರನ್ನು ಸುರಿಸುತ್ತವೆ.

ಪರೀಕ್ಷಿತಮಹಾರಾಜ! ಹೀಗೆ ಆ ವೃಂದಾವನವು ಅತ್ಯಂತ ಶೋಭಾಯಮಾನವಾಗಿದ್ದಿತು. ಮತ್ತು ಖರ್ಜೂರದ ಹಣ್ಣುಗಳಿಂದಲೂ, ನೇರಳೇಹಣ್ಣುಗಳಿಂದಲೂ ಸಮೃದ್ಧವಾಗಿದ್ದಿತು. ಅಂತಹ ಸುಂದರವಾದ ವನದಲ್ಲಿ ವಿಹರಿಸಲು ರಾಮ ಮತ್ತು ಶ್ಯಾಮರು ಗೋವುಗಳೊಡನೆಯೂ, ಗೋಪಾಲಕರೊಡನೆಯೂ ಪ್ರವೇಶಿಸಿದರು. ಕೆಚ್ಚಲುಗಳಲ್ಲಿ ಹಾಲುತುಂಬಿ ಬಹಳ ಭಾರವಾಗಿದ್ದುದರಿಂದ ಹಸುಗಳು ನಿಧಾನವಾಗಿ ನಡೆದುಹೋಗು ತ್ತಿದ್ದುವು. ಶ್ರೀಕೃಷ್ಣನು ಆ ಹಸುಗಳ ಹೆಸರುಗಳನ್ನು ಹಿಡಿದು ಕೂಗಿದೊಡ ನೆಯೇ ಅವು ಕೆಚ್ಚಲಭಾರವನ್ನೂ ಲೆಕ್ಕಿಸದೇ ನಾಗಾಲೋಟದಿಂದ ಓಡ ತೊಡಗಿದುವು. ಆ ಸಮಯದಲ್ಲಿ ಅವುಗಳ ಕೆಚ್ಚಲುಗಳಿಂದ ಹಾಲು ಕರೆಯ ದೆಯೇ ಧಾರಾಕಾರವಾಗಿ ಸುರಿಯುತ್ತಿದ್ದಿತು. ಆ ವೃಂದಾವನದಲ್ಲಿ ಶ್ರೀಕೃಷ್ಣನು ಆನಂದತುಂದಿಲರಾದ ವನವಾಸಿಗಳನ್ನೂ, ಜೇನನ್ನು ಸುರಿಸುತ್ತಿರುವ ವೃಕ್ಷಗಳನ್ನೂ, ತುಂಬಿಹರಿಯುತ್ತಿದ್ದ ಮತ್ತು ಭೋರ್ಗರೆಯುತ್ತಿದ್ದ ಗಿರಿನದಿಗಳ ಪ್ರವಾಹವನ್ನೂ ಮತ್ತು ಅವುಗಳ ಸಮೀಪದಲ್ಲಿಯೇ ಇದ್ದ ಗುಹೆಗಳನ್ನೂ ನೋಡಿದನು. ಮಳೆಯು ಬಂದಾಗ ಶ್ರೀಕೃಷ್ಣನು ಕೆಲವೊಮ್ಮೆ ವೃಕ್ಷಗಳ ಪೊಟರೆಗಳಲ್ಲಿಯೂ ಕೆಲವು ವೇಳೆ ಗುಹೆಗಳಲ್ಲಿಯೂ ಅಡಗಿಕೊಳ್ಳುತ್ತಿದ್ದನು. ಕೆಲವು ವೇಳೆ ಗೆಡ್ಡೆ-ಗೆಣಸು-ಹಣ್ಣುಗಳನ್ನು ತಿನ್ನುತ್ತಾ

ಗೋಪಬಾಲಕರೊಡನೆ ಆಟವಾಡುತ್ತಿದ್ದನು. ಕೆಲವು ವೇಳೆ ಶ್ರೀಕೃಷ್ಣನು ನದಿಯ ತೀರದಲ್ಲಿದ್ದ ಬಂಡೆಯ ಮೇಲೆ ಬಲರಾಮನೊಡನೆಯೂ, ಗೋಪಾಲಬಾಲಕರೊಡನೆಯೂ ಕುಳಿತು ಮನೆಯಿಂದ ತಂದ ಮೊಸರನ್ನ ವನ್ನು ಮೆಲ್ಲುತ್ತಿದ್ದನು. ಆ ವರ್ಷಾಕಾಲದಲ್ಲಿ ಎತ್ತುಗಳು, ಕರುಗಳು ಮತ್ತು ಕೆಚ್ಚಲಿನ ಭಾರದಿಂದ ದಣಿದಿದ್ದ ಹಸುಗಳು ಕೆಲ ಹೊತ್ತಿನವರೆಗೆ ಹುಲ್ಲು ಮೇಯುತ್ತಿದ್ದು ಹೊಟ್ಟೆ ತುಂಬಿದ ಮೇಲೆ ಹುಲ್ಲಿನ ಮೇಲೆಯೇ ಮಲಗಿ ಕಣ್ಣುಮುಚ್ಚಿಕೊಂಡು ಮೆಲುಕುಹಾಕುತ್ತಿದ್ದುವು. ಸಮಸ್ತಪ್ರಾಣಿಗಳಿಗೂ ಸುಖದಾಯಕವಾದ, ಆನಂದಪ್ರದವಾದ ಇಂತಹ ವರ್ಷಾಕಾಲದ ಸೊಬ ಗನ್ನೂ ತನ್ನ ಲೀಲಾವಿಲಾಸದಿಂದಲೇ ಪ್ರಾದುರ್ಭವಿಸಿ ಪ್ರಕಾಶಗೊಂಡಿದ್ದ ಆ ಸನ್ನಿವೇಶಗಳೆಲ್ಲವನ್ನೂ ನೋಡಿ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾದನು ಮತ್ತು ಅವುಗಳನ್ನು ಬಹಳವಾಗಿ ಪ್ರಶಂಸೆಮಾಡಿದನು. ಹೀಗೆ ರಾಮ-ಕೇಶವರಿಬ್ಬರೂ ಮಹಾನಂದದಿಂದ ವ್ರಜದಲ್ಲಿ ನಿವಾಸಮಾಡುತ್ತಿರಲಾಗಿ ವರ್ಷಾಕಾಲವು ಕಳೆದು ಶರದೃತುವು ಪ್ರಾರಂಭವಾಯಿತು. ಆಕಾಶವು ಮೋಡಗಳಿಲ್ಲದೆ ನಿರ್ಮಲವಾಗಿದ್ದಿತು. ಗಾಳಿಯು ಮೆಲ್ಲ-ಮೆಲ್ಲನೆ ಬೀಸುತ್ತಿದ್ದಿತು. ಯೋಗಭ್ರಷ್ಟನಾದವನ ಚಿತ್ತವು ಪುನಃ ಯೋಗಾಭ್ಯಾಸಮಾಡುವುದರಿಂದ ನಿರ್ಮಲವಾಗುವಂತೆ–ಸರೋವರಗಳಲ್ಲಿ ಪುನಃ ಕಮಲಗಳು ಮೈದೋರಿ ನೀರು ತನ್ನ ಸಹಜವಾದ ಸ್ವಚ್ಛತೆಯನ್ನು ಪಡೆದುಕೊಂಡಿತು. ಶ್ರೀಕೃಷ್ಣ ನಲ್ಲಿಟ್ಟಿರುವ ಅನನ್ಯಭಕ್ತಿಯು ಯಾವ ರೀತಿಯಲ್ಲಿ ಬ್ರಹ್ಮಚಾರಿಗಳನ್ನೂ, ಗೃಹಸ್ಥರನ್ನೂ ಮತ್ತು ಸಂನ್ಯಾಸಿಗಳನ್ನೂ ಸಕಲವಿಧವಾದ ಕಷ್ಟಗಳಿಂದಲೂ ಮತ್ತು ಅಶುಭಗಳಿಂದಲೂ ಮುಕ್ತರನ್ನಾಗಿ ಮಾಡುವುದೋ–ಅದೇ ರೀತಿ ಯಲ್ಲಿ ಶರದೃತುವು ಆಕಾಶವನ್ನು ಮೋಡಗಳಿಂದಲೂ, ವಾಯುಭೂತ ವನ್ನು ವಿವಿಧವರ್ಣದ ಧೂಳಿನಿಂದಲೂ, ಭೂಮಿಯನ್ನು ಕೆಸರಿನಿಂದಲೂ ನೀರನ್ನು ರಾಡಿಯಿಂದಲೂ ಮುಕ್ತಗೊಳಿಸಿತು. ಪುತ್ರೇಷಣ, ವಿತ್ತೇಷಣ ಮತ್ತು ದಾರೇಷಣಗಳೆಂಬ ಈಷಣಾತ್ರಯಗಳನ್ನು ಪರಿತ್ಯಾಗಮಾಡಿ ಕಾಮ-ಕ್ರೋಧಾದಿಗಳನ್ನು ದೂರೀಕರಿಸಿ, ಪಾಪರಹಿತರಾಗಿ ಶುದ್ಧಾತ್ಮರಾದ ಬ್ರಹ್ಮಜ್ಞಾನಿಗಳಂತೆ ಆಕಾಶದಲ್ಲಿದ್ದ ಮೇಘಗಳು ತಮ್ಮಲ್ಲಿದ್ದ ನೀರೆಲ್ಲವನ್ನೂ ಸಂಪೂರ್ಣವಾಗಿ ದಾನಮಾಡಿ ಪರಿಶುದ್ಧವಾದ ತೇಜಸ್ಸಿನಿಂದ ಕಂಗೊಳಿ

ಸಿದುವು. ಶರತ್ಕಾಲದಲ್ಲಿ ಬಿಳುಪಾದ ಮೇಘಗಳು ಆಕಾಶವನ್ನು ಅಲಂಕರಿಸಿದ್ದುವು. ಜ್ಞಾನಿಗಳಾದವರು ಜ್ಞಾನಾಮೃತವನ್ನು ಕೆಲವು ವೇಳೆ ಕೆಲವರಿಗೆ ಅನುಗ್ರಹಿಸುವಂತೆ ಮತ್ತೆ ಕೆಲವರಿಗೆ ಅನುಗ್ರಹಿಸದೆಯೂ ಇರುವಂತೆ– ವರ್ಷಾಕಾಲದಲ್ಲಿ ತುಂಬಿ ಹರಿಯುತ್ತಿದ್ದ ಗಿರಿನದಿಗಳು ಶರತ್ಕಾಲದಲ್ಲಿ ಅಮೃತಪ್ರಾಯವಾದ ನೀರಿನಿಂದ ಕೂಡಿ ಹರಿಯುತ್ತಿದ್ದುವು ಮತ್ತು ಕೆಲವು ವೇಳೆ ಬತ್ತಿಹೋಗುತ್ತಿದ್ದುವು. ಸಂಸಾರದ ಭರಣ-ಪೋಷಣೆಗಳಲ್ಲಿಯೇ ಆಸಕ್ತರಾದ ಮೂಢಜನರು ಕ್ಷಣ-ಕ್ಷಣಕ್ಕೂ ತಮ್ಮ ಆಯುಷ್ಯವು ಕ್ಷೀಣಿಸುತ್ತಿರುವುದೆಂಬುದನ್ನು ಅರಿಯುವುದಿಲ್ಲ. ಅಂತೆಯೇ ಆಳವಿಲ್ಲದ ಜಲಾಶಯದಲ್ಲಿ ವಾಸಮಾಡುವ ಜಲಚರಪ್ರಾಣಿಗಳು ಜಲಾಶಯದ ನೀರು ದಿನ-ದಿನಕ್ಕೂ ಬತ್ತಿಹೋಗುತ್ತಿರುವುದೆಂಬುದನ್ನು ತಿಳಿದಿರುವುದಿಲ್ಲ. ಯಾವ ರೀತಿಯಲ್ಲಿ ಇಂದ್ರಿಯಗಳಿಗೆ ವಶನಾಗಿರುವ ದರಿದ್ರನಾದ, ಕುಟುಂಬಿಯಾದ, ಕೃಪಣನಾದ ಮನುಷ್ಯನು ನಾನಾಪ್ರಕಾರವಾದ ತಾಪಗಳಿಂದ ಪರಿತಪಿಸುವನೋ ಅದೇ ರೀತಿಯಲ್ಲಿ ಆಳವಿಲ್ಲದ ನೀರಿನಲ್ಲಿ ವಾಸಮಾಡುವ ಜಲಚರಗಳು ಶರತ್ಕಾಲದ ಪ್ರಖರವಾದ ಸೂರ್ಯನ ತಾಪದಿಂದ ಪರಿತಪಿಸುತ್ತವೆ. ವಿವೇಕಸಂಪನ್ನನಾದ ಸಾಧಕನು ಮೆಲ್ಲ-ಮೆಲ್ಲಗೆ ಶರೀರವೇ ಮುಂತಾದ ಅನಾತ್ಮವಸ್ತುಗಳನ್ನು 'ಇದು ನಾನಲ್ಲ', 'ಇದು ನಾನಲ್ಲ' 'ನೇತಿ–ನೇತಿ' ಎಂದು ಭಾವಿಸುತ್ತಾ ಆತ್ಮವಸ್ತುವನ್ನು ಕಂಡುಕೊಂಡು ನಾನು-ನನ್ನದು ಎಂಬ ಅಹಂಕಾರ-ಮಮಕಾರಗಳನ್ನು ತೊರೆಯುವಂತೆ–ಶರತ್ಕಾಲದಲ್ಲಿ ಭೂಮಿಯು ಕೆಸರನ್ನೂ ಔಷಧಿಲತೆಗಳು ಮಳೀರೋಗವನ್ನೂ ತೊರೆದುವು. ಮನಸ್ಸು ನಿಸ್ಸಂಕಲ್ಪವಾದಾಗ ಆತ್ಮಾರಾಮನಾದ ಪುರುಷನು ಕರ್ಮ ಕಾಂಡದ ಜಂಜಾಟದಿಂದ ದೂರವಾಗಿ ಶಾಂತನಾಗಿರುವಂತೆ–ಶರತ್ಕಾಲದಲ್ಲಿ ಸಮುದ್ರವು ಯಾವ ವಿಧವಾದ ಕ್ಷುಬ್ಧತೆಯೂ ಇಲ್ಲದೆ ಗಂಭೀರವಾಗಿಯೂ, ಶಾಂತವಾಗಿಯೂ, ಸ್ಥಿರವಾಗಿಯೂ ಇದ್ದಿತು.

ಯಾವ ರೀತಿಯಲ್ಲಿ ಯೋಗಿಗಳಾದವರು ಪ್ರತ್ಯಾಹಾರದ ಮೂಲಕ ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯಗಳಿಂದ ತಡೆದು ನಿಲ್ಲಿಸಿ ಮಿಂಚಿಹೋಗುವ ಜ್ಞಾನವನ್ನು ರಕ್ಷಿಸಿಕೊಳ್ಳುವರೋ–ಅದೇ ರೀತಿಯಲ್ಲಿ ರೈತರು ಶರತ್ಕಾಲದಲ್ಲಿ ಗದ್ದೆಗಳಿಗೆ ಬಲವಾದ ಬದುಗಳನ್ನು ಕಟ್ಟಿ ನೀರನ್ನು

ರಕ್ಷಿಸಿಕೊಳ್ಳುತ್ತಾರೆ. ದೇಹಾಭಿಮಾನದಿಂದ ಉಂಟಾದ ಅಜ್ಞಾನವನ್ನು ಜ್ಞಾನವು ಹೋಗಲಾಡಿಸುವಂತೆಯೂ, ಗೋಪಿಯರ ವಿರಹತಾಪವನ್ನು ಶ್ರೀಕೃಷ್ಣನು ಹೋಗಲಾಡಿಸುವಂತೆಯೂ ಶರತ್ಕಾಲದ ಸೂರ್ಯನ ಕಿರಣಗಳಿಂದ ಪ್ರಾಣಿಗಳಿಗೆ ಉಂಟಾಗುವ ತಾಪವನ್ನು ಶರಚ್ಚಂದ್ರನು ರಾತ್ರಿಯಲ್ಲಿ ಪರಿಹರಿಸುತ್ತಾನೆ. ವೇದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದಿರುವ ಸತ್ತ್ವ ಯುಕ್ತವಾದ ಮನುಷ್ಯನ ಮನಸ್ಸು ಪರಿಶುದ್ಧವಾಗಿರುವಂತೆ ಶರತ್ಕಾಲದ ರಾತ್ರಿಯ ಸಮಯದಲ್ಲಿ ಮೇಘಗಳಿಂದ ರಹಿತವಾದ ನಿರ್ಮಲಾಕಾಶವು ತಾರೆ ಗಳಿಂದ ಕೂಡಿ ಶೋಭಾಯಮಾನವಾಗಿರುತ್ತದೆ. ಭೂಮಂಡಲದಲ್ಲಿ ವೃಷ್ಣಿ ವೀರರ ಮಧ್ಯದಲ್ಲಿ ಯದುಪತಿಯಾದ ಭಗವಾನ್ ಶ್ರೀಕೃಷ್ಣನು ಪ್ರಕಾಶಿಸು ವಂತೆ–ಆಕಾಶದಲ್ಲಿ ಜಗ-ಜಗಿಸುವ ತಾರೆಗಳ ಮಧ್ಯದಲ್ಲಿ ಪೂರ್ಣಬಿಂಬ ದಿಂದ ಕೂಡಿದ ಶರತ್ಕಾಲದ ಚಂದ್ರನು ಪ್ರಕಾಶಿಸುತ್ತಾನೆ. ವಿಕಸಿತವಾದ ವನ ಕುಸುಮಗಳನ್ನು ಆಲಿಂಗಿಸಿಕೊಂಡು ಮೆಲ್ಲ-ಮೆಲ್ಲಗೆ ಮತ್ತು ಸಮಶೀತೋಷ್ಣ ವಾಗಿ ಬೀಸುತ್ತಿದ್ದ ಮಾರುತವು ಸಮಸ್ತಜನರ ತಾಪವನ್ನೂ ಪರಿಹರಿಸು ತ್ತಿದ್ದಿತು. ಆದರೆ ಗೋಪಿಯರ ವಿರಹತಾಪವನ್ನು ಮಾತ್ರ ಪರಿಹರಿಸಲು ಸಮರ್ಥವಾಗಲಿಲ್ಲ. ಅವರ ಮನಸ್ಸುಗಳನ್ನು ಶ್ರೀಕೃಷ್ಣನೇ ಅಪಹರಿಸಿ ಬಿಟ್ಟಿದ್ದನು. ಶ್ರೀಕೃಷ್ಣನಿಲ್ಲದೆ ಸುಗಂಧಯುಕ್ತವಾದ ಮಂದಮಾರುತದ ಸ್ಪರ್ಶವೂ ಅವರಿಗೆ ಸಹ್ಯವಾಗಲಿಲ್ಲ. ಸಮರ್ಥರಾದವರಿಂದ ಮಾಡಲ್ಪಡುವ ಕ್ರಿಯೆಗಳನ್ನು ಫಲಗಳು ಅನುಸರಿಸುವಂತೆ–ಶರತ್ಕಾಲದಲ್ಲಿ ಹಸುಗಳೂ, ಜಿಂಕೆಗಳೂ, ಪಕ್ಷಿಗಳೂ, ಹೆಂಗಸರೂ, ಹೋರಿಗಳಿಂದಲೂ, ಗಂಡುಜಿಂಕೆ ಗಳಿಂದಲೂ, ಗಂಡುಪಕ್ಷಿಗಳಿಂದಲೂ, ಗಂಡಸರಿಂದಲೂ ಅನುಸರಿಸಲ್ಪಟ್ಟು ಸಮಾಗಮವನ್ನು ಹೊಂದಿ ಗರ್ಭಿಣಿಯರಾಗುತ್ತಾರೆ.

ರಾಜನ ಶುಭಾಗಮನದಿಂದ ಕಳ್ಳಕಾಕರು, ದರೋಡೆಕೋರರು ಇವ ರನ್ನು ಬಿಟ್ಟು ಉಳಿದ ಪ್ರಜಾಸಮುದಾಯಕ್ಕೆ ಭಯವು ದೂರವಾಗುವಂತೆ– ಸೂರ್ಯನ ಉದಯದಿಂದ ಕನ್ನೈದಿಲೆಗಳನ್ನು ಬಿಟ್ಟು ಉಳಿದ ಕಮಲವೇ ಮೊದಲಾದ ಪುಷ್ಪಗಳು ವಿಕಸಿತವಾಗುತ್ತವೆ. ಶರತ್ಕಾಲದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ *ಆಗ್ರಯಣವೂ ಇಂದ್ರನ ಸಂಬಂಧ

* ಆಗ್ರಯಣ : ಹೊಸಧಾನ್ಯವು ಬಂದಾಗ ದೇವತೆಗಳ ಪ್ರೀತ್ಯರ್ಥವಾಗಿ ಅದರಿಂದ

ವಾದ ಉತ್ಸವವೂ ನಡೆಯತೊಡಗಿತು. ಮಾಗಿನಿಂತಿದ್ದ ಬೆಳೆಗಳಿಂದ ಭೂಮಿಯು ಸಂಪನ್ನವಾಗಿತ್ತು ಮತ್ತು ಶ್ರೀಮನ್ನಾರಾಯಣನ ಲೀಲಾವ ತಾರಗಳಾಗಿದ್ದ ರಾಮ-ಕೃಷ್ಣರ ಉಪಸ್ಥಿತಿಯಿಂದಲೂ ಭೂಮಂಡಲವು ಬಹಳವಾಗಿ ಶೋಭಿಸುತ್ತಿದ್ದಿತು. ಸಾಧಕರು ತಮ್ಮ ಯೋಗಸಾಧನೆಗಳಿಂದ ಕಾಲಾನುಕ್ರಮವಾಗಿ ದಿವ್ಯಶರೀರಗಳನ್ನು ಪಡೆದುಕೊಳ್ಳುವಂತೆ–ವರ್ಷಾ ಕಾಲದಲ್ಲಿ ಮಳೆಯ ಕಾರಣದಿಂದ ಒಂದೇ ಸ್ಥಳದಲ್ಲಿ ತಡೆಹಿಡಿಯಲ್ಪಟ್ಟಿದ್ದ ವೈಶ್ಯರು-ರಾಜರು-ಸಂನ್ಯಾಸಿಗಳು ಮತ್ತು ಸ್ನಾತಕರು ಶರತ್ಕಾಲವು ಪ್ರಾರಂಭವಾಗುತ್ತಲೇ ಸ್ವೇಚ್ಛೆಯಿಂದ ತಮ್ಮ-ತಮ್ಮ ಕಾರ್ಯಗಳಲ್ಲಿ ತೊಡಗಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೦ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೨೧ನೆಯ ಅಧ್ಯಾಯ

## ವೇಣುಗೀತ

ಶ್ರೀಶುಕಮುನಿಗಳು ಹೇಳುತ್ತಾರೆ :

**ಇತ್ಥಂ ಶರತ್ಸ್ವಚ್ಛಜಲಂ ಪದ್ಮಾಕರಸುಗನ್ಧಿನಾ ।**
**ನ್ಯವಿಶದ್ವಾಯುನಾ ವಾತಂ ಸಗೋಗೋಪಾಲಕೋಽಚ್ಯುತಃ ॥೧॥**

ಮಹಾರಾಜ! ಆ ಶರತ್ಕಾಲದಲ್ಲಿ ವೃಂದಾವನವು ಬಹಳ ಸುಂದರವಾಗಿ ಕಾಣುತ್ತಿದ್ದಿತು. ಜಲಾಶಯಗಳಲ್ಲಿನ ನೀರು ನಿರ್ಮಲವಾಗಿದ್ದಿತು. ಜಲಾಶಯ ಗಳಲ್ಲಿದ್ದ ಕಮಲಪುಷ್ಪಗಳ ಮೇಲೆ ಗಾಳಿಯು ಬೀಸಿ ಅವುಗಳಲ್ಲಿದ್ದ ಸುಗಂಧವನ್ನು ಹೊತ್ತು ಮೆಲ್ಲ-ಮೆಲ್ಲನೆ ಬೀಸುತ್ತಿದ್ದಿತು. ಶ್ರೀಕೃಷ್ಣನು ಗೋವುಗಳೊಡನೆಯೂ ಗೋಪಾಲರೊಡನೆಯೂ ಕೂಡಿಕೊಂಡು ಅಂತಹ ಸುಂದರವಾದ ವನವನ್ನು ಪ್ರವೇಶಿಸಿದನು.

---

ಮಾಡುವ ಯಜ್ಞ: ಹೊಸಧಾನ್ಯವನ್ನು ದೇವತೆಗಳಿಗೆ ಅರ್ಪಿಸುವ ಮುಂಚೆ ಉಪ ಯೋಗಿಸಕೂಡದು. ಶಸ್ಯಂ ನಾಶ್ನೀಯಾದಗ್ನಿಹೋತ್ರಮಹುತ್ವಾ

(ಅಶ್ವಲಾಯನಶ್ರೌತಸೂತ್ರ)

ಸುಂದರವಾದ ಮತ್ತು ಸುಗಂಧಯುಕ್ತವಾದ ಪುಷ್ಪಗಳಿಂದ ಸಮಲಂಕೃತವಾಗಿದ್ದ ವೃಕ್ಷಗಳ ಸಾಲುಗಳಲ್ಲಿ ದುಂಬಿಗಳು ಝೇಂಕರಿಸುತ್ತಾ ಮಧುಪಾನಮಾಡುತ್ತಿದ್ದುವು.

ಸರೋವರಗಳಲ್ಲಿಯೂ, ನದಿಯ ತೀರಗಳಲ್ಲಿಯೂ, ಪರ್ವತದ ತಪ್ಪಲುಗಳಲ್ಲಿಯೂ ನಾನಾವಿಧವಾದ ಪಕ್ಷಿಗಳು ಕುಳಿತು ಕಲಕಲನಿನಾದ ಮಾಡುತ್ತಿದ್ದುವು. ಮಧುಪತಿಯಾದ ಶ್ರೀಕೃಷ್ಣನು ಬಲರಾಮನೊಡನೆ ಮತ್ತು ಗೋಪಾಲರೊಡನೆ ಸೇರಿಕೊಂಡು ವೃಂದಾವನವನ್ನು ಪ್ರವೇಶಿಸಿ ಹಸು ಗಳನ್ನು ಮೇಯಿಸುತ್ತಾ ತನ್ನ ಕೊಳಲನ್ನು ಕರ್ಣಾನಂದಕರವಾಗಿ ನುಡಿಸ ತೊಡಗಿದನು. ಶ್ರೀಕೃಷ್ಣನ ಆ ಸುಮಧುರವಾದ ವೇಣುಗಾನವು ಭಗವಂತನ ವಿಷಯದಲ್ಲಿ ಭಕ್ತಿಭಾವವನ್ನು ಉಂಟುಮಾಡುವುದಾಗಿದ್ದಿತು. ಅವನನ್ನು ಸೇರಲೇಬೇಕೆಂಬ ಆಕಾಂಕ್ಷೆಯನ್ನು ಹುಟ್ಟಿಸುವುದಾಗಿದ್ದಿತು. ವೃಂದಾವನದಲ್ಲಾಗುತ್ತಿದ್ದ, ಕಾಮವನ್ನು ಉದ್ದೀಪಿಸುವ ವೇಣುಗಾನವನ್ನು ಕೇಳಿ ಗೋಪಿಕಾಸ್ತ್ರೀಯರ ಹೃದಯವು ಪ್ರೇಮದಿಂದ ತುಂಬಿಹೋಯಿತು. ಅವರು ಏಕಾಂತದಲ್ಲಿ ತಮ್ಮ ಸಖಿಯರೊಡನೆ ಶ್ರೀಕೃಷ್ಣನ ರೂಪ, ಗುಣ, ಅವನು ನುಡಿಸುತ್ತಿದ್ದ ವೇಣುಗಾನದ ಚಿತ್ತಾಪಹಾರಕವಾದ ಮಾಧುರ್ಯ–ಇವೇ ಮುಂತಾದುವನ್ನು ವರ್ಣಿಸತೊಡಗಿದರು. ಗೋಪಿಯರು ವೇಣುಗಾನದ ಮಾಧುರ್ಯವನ್ನು ವರ್ಣಿಸಲು ಪ್ರಾರಂಭಿಸುತ್ತಿದ್ದಂತೆಯೇ ಅವರಿಗೆ ಕೊಳಲನ್ನು ನುಡಿಸುತ್ತಿದ್ದ ಶ್ರೀಕೃಷ್ಣನ ಚಿತ್ರವು ಎದುರಾಗುತ್ತಿದ್ದಿತು. ಅವನ ಕೆಂದುಟಿ, ಕುಡಿನೋಟ, ಸುಂದರವಾದ ಹುಬ್ಬುಗಳು, ಅವನ ತಲೆಯ ಮೇಲೆ ಬೆಳಗುತ್ತಿದ್ದ ನವಿಲುಗರಿ, ಗುಂಗುರುಕೂದಲು, ಅವನ ಮುಗುಳ್ನಗೆ– ಇವೆಲ್ಲವೂ ಅವರ ಸ್ಮೃತಿಪಥದಲ್ಲಿ ಸುಳಿದು ಜಗದಾನಂದಕಂದನನ್ನು ಸೇರಬೇಕೆಂಬ ಕಾತರವು ಹೆಚ್ಚಾಗಿ ವೇಣುಗಾನಮಾಧುರ್ಯದ ವರ್ಣನೆಯು ಮುಂದುವರಿಯಲೇ ಇಲ್ಲ. ಅವರ ಮನಸ್ಸೆಲ್ಲವೂ ಶ್ರೀಕೃಷ್ಣನಲ್ಲಿಯೇ ಸೇರಿ ಹೋಗಿದ್ದಿತು. ಕೃಷ್ಣಪ್ರೇಮಿಗಳಾಗಿದ್ದ ಗೋಪಿಯರು ವ್ರಜದಲ್ಲಿದ್ದೇ ಕೃಷ್ಣಮೂರ್ತಿಯ ಚಿತ್ರವನ್ನು ತಮ್ಮ ಹೃದಯಕಮಲದಲ್ಲಿ ಚಿತ್ರಿಸಿಕೊಂಡರು.

“ಶ್ರೀಕೃಷ್ಣನು ಗೋಪಾಲರೊಡನೆ ವೃಂದಾವನವನ್ನು ಪ್ರವೇಶಿಸುತ್ತಿದ್ದಾನೆ. ಅವನ ತಲೆಯ ಮೇಲೆ ನವಿಲುಗರಿಯು ಬೆಳಗುತ್ತಿದೆ. ಕಿವಿಗಳನ್ನು

ಕರ್ಣಿಕಾರಪುಷ್ಪವು ಅಲಂಕರಿಸಿದೆ. ಆತನು ಹೊಂಬಣ್ಣದ ಪೀತಾಂಬರವನ್ನು ಉಟ್ಟಿದ್ದಾನೆ. ಆತನ ಕುತ್ತಿಗೆಯಲ್ಲಿ ಐದು ಪ್ರಕಾರವಾದ ಸುವಾಸನೆಯ ಪುಷ್ಪಗಳಿಂದ ಪೋಣಿಸಿದ ವೈಜಯಂತೀಮಾಲೆಯಿದೆ. ಸುಂದರವಾದ ವಸ್ತ್ರ ಗಳನ್ನು ಧರಿಸಿ ನಾಟಕವಾಡಲು ಸಿದ್ಧನಾಗಿರುವ ನಟನಂತೆಯೇ ಕಾಣು




ತ್ತಿದ್ದಾನೆ. ಆತನು ಕೊಳಲಿನ ರಂಧ್ರಗಳಲ್ಲಿ ತನ್ನ ಅಧರಾಮೃತವನ್ನು ತುಂಬುತ್ತಿದ್ದಾನೆ. ಅವನ ಹಿಂದೆ ಲೋಕಪಾವನಗಳಾದ ಅವನ ಕೀರ್ತನೆ ಗಳನ್ನು ಹಾಡಿಕೊಂಡು ಗೋಪಾಲಕರು ಹೋಗುತ್ತಿದ್ದಾರೆ. ಹೀಗೆ ಶ್ರೀಕೃಷ್ಣನು ವೈಕುಂಠಕ್ಕಿಂತಲೂ ಶ್ರೇಷ್ಠವಾದ ವೃಂದಾವನವನ್ನು ತನ್ನ ಚರಣಕಮಲಗಳ ಚಿಹ್ನೆಯಿಂದ ಮತ್ತಷ್ಟು ರಮಣೀಯವನ್ನಾಗಿ ಮಾಡುತ್ತಾ ಮುನ್ನಡೆ ಯುತ್ತಿದ್ದಾನೆ."

ಹೀಗೆ ಮನಸ್ಸಿನಲ್ಲಿಯೇ ಶ್ರೀಕೃಷ್ಣನನ್ನು ಚಿತ್ರಿಸಿಕೊಂಡು ಅವರು ಆತನಲ್ಲಿಯೇ ತಲ್ಲೀನರಾಗಿಹೋದರು.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ವೇಣುವಾದನವು ನಿಶ್ಚಯ ವಾಗಿಯೂ ಎಲ್ಲ ಪ್ರಾಣಿಗಳಿಗೂ ಪರಮಾನಂದದಾಯಕವಾಗಿದ್ದಿತು. ವ್ರಜ ದಲ್ಲಿದ್ದ ಗೋಪಿಯರು ಅದನ್ನು ಕೇಳಿ ಪುನಃ ವರ್ಣಿಸತೊಡಗಿದರು. ಅವರ ಮನಸ್ಸು ವೇಣುವಾದನಮಾಡುತ್ತಿದ್ದ ಶ್ರೀಕೃಷ್ಣನಲ್ಲಿ ಲೀನವಾಗಿಹೋಯಿತು. ಶ್ರೀಕೃಷ್ಣಮೂರ್ತಿಯನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು ಗಾಢವಾಗಿ ಆಲಿಂಗಿಸಿಕೊಂಡು ಆನಂದಿಸಿದರು.

ಗೋಪಿಯರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾರೆ :

ಒಬ್ಬಳು ಹೇಳುತ್ತಾಳೆ : "ಸಖಿಯರೇ! ಕಣ್ಣುಗಳನ್ನು ಹೊಂದಿರುವವರಿಗೆ ಯಾವ ಫಲವೆಂಬುದನ್ನು ನಾವು ತಿಳಿದಿರುತ್ತೇವೆ. ಇದಕ್ಕಿಂತಲೂ ಬೇರೆ ಯಾವ ಫಲವಿರುವುದೆಂಬುದನ್ನು ನಾವು ತಿಳಿದಿಲ್ಲ. ನಮ್ಮ ರಾಜನಾದ ನಂದಗೋಪನ ಮಕ್ಕಳಾದ ರಾಮ-ಶ್ಯಾಮರು ಹಸುಗಳೊಡನೆಯೂ ಗೋಪಾಲರೊಡನೆಯೂ ವ್ರಜದಿಂದ ವೃಂದಾವನಕ್ಕೆ ಹೋಗುವುದನ್ನೂ, ವೃಂದಾವನದಿಂದ ವ್ರಜಕ್ಕೆ ಬರುವುದನ್ನೂ ಅನುದಿನವೂ ಈ ನಮ್ಮ ಅರಳಿದ ಕಣ್ಣುಗಳಿಂದ ನೋಡುತ್ತೇವೆ. ಇದಕ್ಕಿಂತ ಬೇರೆಯ ಸೌಭಾಗ್ಯವು ಯಾವುದಿದೆ? ಇಷ್ಟುಮಾತ್ರವಲ್ಲ. ಕೊಳಲಿನಿಂದ ಸಮಲಂಕೃತವಾದ ಅವರ ಮುದ್ದು ಮುಖಗಳನ್ನು ನೋಡುತ್ತೇವೆ. ಅಧರಾಮೃತವನ್ನು ಪಾನಮಾಡುವ ಕೊಳಲನ್ನು ನೋಡುತ್ತೇವೆ. ನಮ್ಮ ಕಣ್ಣುಗಳಿಗೆ ಇದಕ್ಕಿಂತಲೂ ಮಿಗಿಲಾದ ಸಮಾರಾಧನೆ ಯಾವುದು ತಾನೇ ಇದೆ? ಪ್ರೇಮಪೂರ್ಣವಾದ ಕಡೆಗಣ್ಣಿನ ನೋಟದಿಂದ ನಮ್ಮನ್ನು ಶ್ರೀಕೃಷ್ಣ-ಬಲರಾಮರು ನೋಡುವಾಗ ಚೇತೋ ಹಾರಿಯಾದ ಕಟಾಕ್ಷವೀಕ್ಷಣದಿಂದ ಹುಟ್ಟಿದ ಅಮೃತವನ್ನು ನಮ್ಮ ಕಣ್ಣು ಗಳಲ್ಲದೇ ಬೇರೆ ಯಾವುವು ತಾನೇ ಪಾನಮಾಡುತ್ತವೆ? ಕಣ್ಣುಳ್ಳವರಿಗೆ ಇದಕ್ಕಿಂತಲೂ ಮಿಗಿಲಾದ ಪ್ರಯೋಜನವು ಯಾವುದಿದೆ?"

ಮತ್ತೊಬ್ಬಳು ಹೇಳುತ್ತಾಳೆ :

"ಸಖಿಯರೇ! ಶ್ಯಾಮಲವರ್ಣನಾಗಿರುವ ಕೃಷ್ಣನು ಪೀತಾಂಬರವನ್ನು ಧರಿಸಿದ್ದಾನೆ. ಗೌರಾಂಗನಾಗಿರುವ ಬಲರಾಮನು ನೀಲಾಂಬರವನ್ನು ಧರಿಸಿದ್ದಾನೆ. ವೃಂದಾವನದಲ್ಲಿ ಇವರು ಮಾವಿನಚಿಗುರು, ನವಿಲುಗರಿ, ಹೂವಿನ ಗೊಂಚಲು, ನೈದಿಲೆ-ತಾವರೆಗಳ ಹಾರಗಳು–ಇವುಗಳಿಂದ ಸಿಂಗರಿಸಿಕೊಂಡು ವಿಚಿತ್ರವಾದ ವೇಷಗಳನ್ನು ಧರಿಸಿ ಗೋಪಾಲರ ಮಧ್ಯದಲ್ಲಿ ಹಾಡುಗಳನ್ನು ಹಾಡುತ್ತಾ ರಂಗಮಂಟಪದಲ್ಲಿ ನಟಿಸುವ ಶ್ರೇಷ್ಠರಾದ ನಟರಂತೆಯೇ ವಿರಾಜಿಸುತ್ತಾರೆ."

ಮತ್ತೊಬ್ಬಳು ಹೇಳುತ್ತಾಳೆ :

"ಗೋಪಿಯರೇ! ಈ ಕೊಳಲಿನ ಭಾಗ್ಯವನ್ನಾದರೂ ನೋಡಿರಿ.

ವೇಣುವು ಪುರುಷಜಾತಿಯದು. ಆದರೂ ಇದು ಹಿಂದಿನ ಜನ್ಮದಲ್ಲಿ ಎಂತಹ ಪುಣ್ಯಕಾರ್ಯಗಳನ್ನೂ, ತಪಸ್ಸುಗಳನ್ನೂ ಮಾಡಿದ್ದಿತೋ ತಿಳಿಯದು. ನಮಗೆ ಮಾತ್ರವೇ ಮೀಸಲೆಂದು ಭಾವಿಸಲಾಗಿದ್ದ ಮಾಧವನ ಅಧರಾಮೃತ ವನ್ನು ನಮಗೆ ಸ್ವಲ್ಪವಾದರೂ ಉಳಿಯದಂತೆ ಕುಡಿದುಬಿಡುತ್ತಿದೆ. ದಾಮೋದರನ ಅಧರಾಮೃತವನ್ನು ಕುಡಿದು ಪಾವನವಾದ ಈ ವೇಣುವನ್ನು ಬೆಳೆಸಿ ಪೋಷಿಸಿದ ಸರೋವರಗಳು, ವಿಕಸಿತವಾದ ಕಮಲಗಳ ಮೂಲಕ ವಾಗಿ ತಮಗಾದ ರೋಮಾಂಚನವನ್ನು ವ್ಯಕ್ತಪಡಿಸುತ್ತಿವೆ. ಕೊಳಲಿನ ಉಗಮಸ್ಥಾನವಾದ ಬಿದಿರಿನ ಸಂತೋಷವಂತೂ ಹೇಳತೀರದು. ಆರ್ಯ ರಾದವರು ತಮ್ಮ ವಂಶದಲ್ಲಿ ಭಗವದ್ಭಕ್ತರು ಹುಟ್ಟಿದರೆ ಆನಂದಿಸುವಂತೆ– ಬಿದಿರುಮೆಳೆಗಳು ತಮ್ಮ ವಂಶಕ್ಕೆ ಸೇರಿದ ವೇಣುವು ಶ್ರೀಕೃಷ್ಣನ ಅಧರಾಮೃತಪಾನಮಾಡುತ್ತಿರುವುದನ್ನು ನೋಡಿ ಹಿರಿಹಿಗ್ಗಿ ಜೇನುಹನಿಗಳ ರೂಪದಲ್ಲಿ ಆನಂದಬಾಷ್ಪವನ್ನು ಸುರಿಸುತ್ತಿವೆ.”

ಮತ್ತೊಬ್ಬಳು ಹೇಳುತ್ತಾಳೆ :

“ಸಖಿಯರೇ! ನನ್ನ ಮಾತನ್ನು ಕೇಳಿರಿ. ಈ ವೃಂದಾವನವು ಯಶೋದಾನಂದನನಾದ ಶ್ರೀಕೃಷ್ಣನ ಪಾದಕಮಲಗಳ ಚಿಹ್ನೆಯನ್ನು ಹೊಂದಿ ರುವುದರಿಂದ ಈ ಭೂಲೋಕದ ಕೀರ್ತಿಯನ್ನು ವೈಕುಂಠದವರೆಗೂ ಹರಡಿದೆ. ಶ್ರೀಕೃಷ್ಣನು ಮುನಿಜನರನ್ನೂ ವಿಮೋಹಗೊಳಿಸುವ ಕೊಳಲನ್ನು ಊದಲು ಪ್ರಾರಂಭಿಸಿದೊಡನೆಯೇ ನವಿಲುಗಳು ಮದವೇರಿ ನರ್ತಿಸಲು ಪ್ರಾರಂಭಿಸುತ್ತವೆ. ಇದನ್ನು ನೋಡಿದೊಡನೆಯೇ ಪರ್ವತದ ತಪ್ಪಲು ಪ್ರದೇಶಗಳಲ್ಲಿರುವ ಸಮಸ್ತಪ್ರಾಣಿಗಳೂ ಮೇಯುವುದನ್ನು ಬಿಟ್ಟು ನಿಂತು ಬಿಡುತ್ತವೆ. ಪ್ರಾಣವಲ್ಲಭನಾದ ಶ್ರೀಕೃಷ್ಣನು ವಿಚಿತ್ರವಾದ ವೇಷವನ್ನು ಧರಿಸಿ ಕೊಂಡು ಕೊಳಲನ್ನು ನುಡಿಸಲು ಪ್ರಾರಂಭಿಸಿದೊಡನೆಯೇ ಮಂದಬುದ್ಧಿ ಯುಳ್ಳವುಗಳಾಗಿದ್ದರೂ ಹೆಣ್ಣುಜಿಂಕೆಗಳು ಮುರಳಿಯ ನಾದವನ್ನು ಕೇಳಿ ಪತಿಯಾದ ಕೃಷ್ಣಸಾರದೊಡನೆ ಸೇರಿಕೊಂಡು ನಂದನಂದನನ ಬಳಿಗೆ ಹೋಗಿ ಕಮಲದಂತೆ ವಿಶಾಲವಾದ ಮತ್ತು ಚಂಚಲವಾದ ಕಣ್ಣುಗಳ ಅವಲೋಕನ ಗಳಿಂದಲೇ ಶ್ರೀಕೃಷ್ಣನನ್ನು ಪೂಜಿಸುತ್ತವೆ. ನಿಶ್ಚಯವಾಗಿಯೂ ಈ ಜಿಂಕೆಗಳ ಜೀವನವೇ ಧನ್ಯವಲ್ಲವೇ!”

ಮತ್ತೊಬ್ಬಳು ಹೇಳುತ್ತಾಳೆ :

“ಸಖಿಯರೇ! ಜಿಂಕೆಯ ಮಾತಾದರೂ ಹಾಗಿರಲಿ. ಅತ್ತನೋಡಿರಿ. ವಿಮಾನದಲ್ಲಿ ಸಂಚರಿಸುವ ಅಪ್ಸರೆಯರು, ಕಾಮಿನಿಯರ ಕಣ್ಮನಗಳನ್ನೂ ಸೂರೆಗೊಳ್ಳುವ ಸೌಂದರ್ಯದಿಂದಲೂ ಸೌಶೀಲ್ಯದಿಂದಲೂ ಕೂಡಿರುವ ಕೃಷ್ಣನನ್ನು ಕಂಡು ಮತ್ತು ವೇಣುವಿನ ಮೂಲಕ ಅವನು ನುಡಿಸುತ್ತಿರುವ ಸುಮಧುರವಾದ ಸಂಗೀತವನ್ನು ಕೇಳಿ ಕಾಮಾವೇಶದಿಂದ ಧೈರ್ಯಗುಂದಿ ತುರುಬುಗಳಿಂದ ಹೂವಿನ ಮಾಲೆಗಳು ಜಾರುತ್ತಿರುವುದನ್ನೂ ಉಟ್ಟಸೀರೆಗಳು ಸಡಿಲವಾಗುತ್ತಿರುವುದನ್ನೂ ಅರಿಯದೆ ವಿಮೋಹಿತರಾಗಿದ್ದಾರೆ.”

ಮತ್ತೊಬ್ಬಳು ಹೇಳುತ್ತಾಳೆ :

“ಅಪ್ಸರೆಯರ ವಿಷಯವನ್ನು ಏಕೆ ಹೇಳುವಿರಿ? ಮಾತಿಲ್ಲದ ಹಸುಗಳ ವರ್ತನೆಯನ್ನಾದರೂ ವೀಕ್ಷಿಸಿರಿ. ಶ್ರೀಕೃಷ್ಣನ ಮುಖಾರವಿಂದದಿಂದ ಹೊರಟ ವೇಣುಗಾನಸುಧೆಯನ್ನು ಕೇಳಿದೊಡನೆಯೇ ನಮ್ಮ ಗೋವುಗಳು ತಮ್ಮೆರಡು ಕಿವಿಗಳನ್ನು ಮೇಲೆತ್ತಿಕೊಂಡು ಕಿವಿಗಳನ್ನೇ ಬೊಗಸೆಗಳನ್ನಾಗಿ ಮಾಡಿ ಕೊಂಡು ಗಾನಾಮೃತಸುಧೆಯನ್ನು ಹೀರಿಕೊಳ್ಳುತ್ತಿವೆ. ತಮ್ಮ ಕಣ್ಣುಗಳ ಮೂಲಕವಾಗಿ ಶ್ಯಾಮಸುಂದರನನ್ನು ತಮ್ಮ ಹೃದಯದಲ್ಲಿರಿಸಿಕೊಂಡು ಆಲಿಂಗನೆಮಾಡಿಕೊಂಡು ಆನಂದಬಾಷ್ಪವನ್ನು ಸುರಿಸುತ್ತಿವೆ. ಹಸುಗಳ ಮೊಲೆಯುಣ್ಣುತ್ತಿರುವ ಎಳೆಗರುಗಳೂ ಕೂಡ ಶ್ರೀಕೃಷ್ಣನ ವೇಣುಗಾನವನ್ನು ಕೇಳಿ ಬಾಯಲ್ಲಿರುವ ನೊರೆಹಾಲನ್ನೂ ಗುಟುಕಿಸದೆ ಸ್ತಬ್ಧವಾಗಿ ನಿಂತುಬಿಡುತ್ತಿವೆ. ಅವುಗಳದ್ದು ಎಂತಹ ಸೌಭಾಗ್ಯವಮ್ಮಾ!”

ಮತ್ತೊಬ್ಬಳು ಹೇಳುತ್ತಾಳೆ :

“ಸಖಿಯರೇ! ನನ್ನ ಮಾತನ್ನು ಕೇಳಿರಿ. ಹಸು-ಕರುಗಳು ನಮ್ಮ ಜೊತೆಯಲ್ಲಿಯೇ ಇರುವುದರಿಂದ ಅವುಗಳಿಗೂ ನಮ್ಮಂತೆಯೇ ಶ್ರೀಕೃಷ್ಣನ ಮೇಲೆ ಪ್ರೇಮಾದರಗಳು ಮೂಡಿಬರಬಹುದು. ಆದರೆ ವೃಂದಾವನದಲ್ಲಿ ರುವ ಪಕ್ಷಿಗಳನ್ನು ನೋಡಿರಿ. ನಿಜ ಹೇಳುವುದಾದರೆ ಅವು ಪಕ್ಷಿಗಳಲ್ಲ. ಪಕ್ಷಿ ಗಳ ರೂಪದಲ್ಲಿ ಋಷಿ-ಮುನಿಗಳೇ ಅಲ್ಲಿದ್ದಾರೆ. ಸುಂದರವಾದ ಚಿಗುರೆಲೆ ಗಳಿಂದ ಕೂಡಿರುವ ವೃಕ್ಷಗಳ ರೆಂಬೆಗಳ ಮೇಲೆ ಕುಳಿತು ವೃಂದಾವನದಲ್ಲಿ

ಕೊಳಲುನುಡಿಸಿಕೊಂಡು ಆಟವಾಡುವ, ಸೌಂದರ್ಯದ ಖನಿಯಾದ ಶ್ರೀಕೃಷ್ಣನನ್ನೇ ಎವೆಯಿಕ್ಕದೇ ನೋಡುತ್ತಿರುತ್ತವೆ. ಅವು ಮುನಿಗಳೇ ಆಗಿರುವುದರಿಂದ ಬೇರೆ ಯಾವ ವಿಧವಾದ ಶಬ್ದವನ್ನೂ ಕೇಳದೆ ಶ್ರೀಕೃಷ್ಣನ ಸುಮಧುರವಾದ ವಾಣಿಯನ್ನೂ ಮತ್ತು ಅಮೃತಧಾರೆಗೆ ಸಮಾನವಾದ ತ್ರಿಭುವನಮೋಹಕವಾದ ವೇಣುಗಾನವನ್ನೂ ಕೇಳುತ್ತಿರುತ್ತವೆ. ಇಂತಹ ಪಕ್ಷಿಗಳಿಗಿಂತ ಧನ್ಯರಾದವರು ಯಾರಿದ್ದಾರೆ?"

ಮತ್ತೊಬ್ಬಳು ಹೇಳುತ್ತಾಳೆ :

"ಸಖಿಯರೇ! ಇದುವರೆಗೆ ನೀವೆಲ್ಲರೂ ಶ್ರೀಕೃಷ್ಣನ ವಿಷಯದಲ್ಲಿ ಮತ್ತು ಅವನ ವೇಣುಗಾನದಲ್ಲಿ ಅಪ್ಸರೆಯರಿಗೆ, ಹಸುಗಳಿಗೆ, ಕರುಗಳಿಗೆ, ಪಕ್ಷಿಗಳಿಗೆ ಇರುವ ಪ್ರೇಮಾತಿಶಯವನ್ನು ವ್ಯಕ್ತಪಡಿಸಿರುವಿರಿ. ಎಷ್ಟೇ ಆದರೂ ಇವೆಲ್ಲವೂ ಚೈತನ್ಯವುಳ್ಳವುಗಳು. ಶ್ರೀಕೃಷ್ಣನ ವಿಷಯದಲ್ಲಿ ಇವುಗಳಿಗಿರುವ ಪ್ರೇಮವು ಸಹಜವಾದುದೆಂದೇ ಹೇಳಬಹುದು. ಆದರೆ : ಇಲ್ಲಿ ಹರಿಯು ತ್ತಿರುವ ನದಿಯೂ ಶ್ರೀಕೃಷ್ಣನ ವಿಷಯದಲ್ಲಿ ಎಂತಹ ಸೌಹಾರ್ದ ಭಾವನೆಯನ್ನೂ, ಪೂಜ್ಯಭಾವನೆಯನ್ನೂ ಹೊಂದಿರುವುದೆಂಬುದನ್ನು ಗಮನಿಸಿರುವಿರಾ? ಅದೋ ನೋಡಿರಿ. ನದಿಗಳೂ ಮುಕುಂದನ ಸುಮಧುರವಾದ ವೇಣುಗಾನವನ್ನು ಕೇಳಿ ಸುಳಿಗಳ ನೆಪದಿಂದ ಶ್ರೀಕೃಷ್ಣನನ್ನು ಸೇರಬೇಕೆನ್ನುವ ತೀವ್ರವಾದ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿವೆ. ಆದುದರಿಂದಲೇ ಪ್ರವಾಹದ ವೇಗವೂ ಕಡಿಮೆಯಾಗಿದೆ. ತಮ್ಮಲ್ಲಿರುವ ತೆರೆಗಳೆಂಬ ಕೈಗಳಿಂದ ಶ್ರೀಕೃಷ್ಣನ ಪಾದಾರವಿಂದಗಳಿಗೆ ಕಮಲದ ಪುಷ್ಪಗಳನ್ನು ಸಮರ್ಪಿಸುತ್ತಾ ಆತನ ಚರಣಕಮಲಗಳನ್ನೇ ಆಲಿಂಗನಮಾಡಿಕೊಳ್ಳುತ್ತಿವೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಸಖಿಯರೇ! ನದಿಗಳು ವೃಂದಾವನದ ಪರಿಸರದಲ್ಲಿಯೇ ಇರುವುದ ರಿಂದ ಅವುಗಳಿಗೆ ಶ್ರೀಕೃಷ್ಣನ ಮೇಲೆ ಪ್ರೇಮವಿರುವುದು ಸಹಜವಾಗಿಯೇ ಇದೆ. ಆದರೆ ಮೋಡಗಳ ವರ್ತನೆಯನ್ನು ವೀಕ್ಷಿಸಿರಿ. ಕೃಷ್ಣ-ಬಲರಾಮರು ಗೋಪಾಲಕರೊಡನೆ ಬಿಸಿಲಿನಲ್ಲಿ ಹಸುಗಳನ್ನು ಮೇಯಿಸುತ್ತಿರುವುದನ್ನು ಕಂಡು ಹೃದಯಾನಂದಕರವಾಗಿ ಕೊಳಲು ನುಡಿಸುತ್ತಿರುವುದನ್ನು ಕೇಳಿ ಮೋಡಗಳ ಹೃದಯವು ಪ್ರೇಮರಸದಿಂದ ತುಂಬಿಹೋಗುತ್ತಿದೆ.

ಶ್ರೀಕೃಷ್ಣನು ಮೇಘಶ್ಯಾಮನಾದುದರಿಂದ ತಮ್ಮ ಆಪ್ತಮಿತ್ರನೆಂದೇ ಭಾವಿಸಿರುವ ಮೇಘಗಳು ಶ್ರೀಕೃಷ್ಣನ ಮತ್ತು ಅವನ ಪರಿವಾರದ ಮೇಲೆ ಹರಡಿಕೊಂಡು ಅವರ ತಾಪವನ್ನು ನಿವಾರಿಸುತ್ತಿವೆ. ಹಾಗೆಯೇ ಶ್ರೀಕೃಷ್ಣನ ಮೇಲೆ ತುಂತುರುಗಳ ರೂಪವಾದ ಬಿಳಿಯ ಹೂವುಗಳನ್ನು ಸುರಿಸುತ್ತಾ ಶ್ರೀಕೃಷ್ಣನನ್ನು ಪೂಜಿಸುತ್ತಿವೆ."

ಮತ್ತೊಬ್ಬಳು ಹೇಳುತ್ತಾಳೆ :

"ಗೆಳತಿಯರೇ! ಈ ವೃಂದಾವನದಲ್ಲಿ ಸಂಚರಿಸುವ ಬೇಡತಿಯರೂ ಕೃತಕೃತ್ಯರಾಗಿರುವರೆಂದು ನಾನು ಭಾವಿಸುತ್ತೇನೆ. ನಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ನೋಡಿದಾಗ ಈ ಬೇಡತಿಯರಿಗೂ ಅವನೊಡನೆ ಸೇರುವ ಆಕಾಂಕ್ಷೆಯಾಗುತ್ತದೆ. ಅವರೂ ಕಾಮಜ್ವರಪೀಡಿತರಾಗುತ್ತಾರೆ. ಅದರಿಂದ ಪಾರಾಗಲು ಅವರು ಕಂಡುಕೊಂಡಿರುವ ಉಪಾಯವನ್ನೂ ಹೇಳುವೆನು, ಕೇಳಿರಿ : ನಮ್ಮ ಇನಿಯನ ಪ್ರೇಯಸಿಯರು ತಮ್ಮ ವಕ್ಷಃಸ್ಥಳಗಳನ್ನು ಶ್ರೀಕುಂಕುಮದಿಂದ ಅಲಂಕರಿಸಿಕೊಂಡಿರುತ್ತಾರೆ. ಕ್ರೀಡೆಗಳನ್ನಾಡುವಾಗ ವಕ್ಷಃಸ್ಥಳದ ಶ್ರೀಕುಂಕುಮವು ನಮ್ಮ ಇನಿಯನ ಚರಣಾರವಿಂದಗಳಿಗೆ ಅಂಟಿಕೊಳ್ಳುತ್ತದೆ. ಹಾಗೆ ಅಂಟಿಕೊಂಡ ಶ್ರೀಕುಂಕುಮವು ನಮ್ಮ ಕೃಷ್ಣನು ವೃಂದಾವನದಲ್ಲಿ ತಿರುಗಾಡುವಾಗ ಗರಿಕೆಹುಲ್ಲಿನ ಮೇಲೆ ಅಂಟಿಕೊಂಡಿರುತ್ತದೆ. ಗರಿಕೆಹುಲ್ಲಿನ ಮೇಲಿರುವ ಶ್ರೀಕುಂಕುಮವನ್ನು ಅಲ್ಲಲ್ಲಿ ಹುಡುಕಿ ಬೇಡತಿಯರು ಪವಿತ್ರವಾದ ಪರಮೋತ್ಕೃಷ್ಟವಾದ ಆ ಶ್ರೀಕುಂಕುಮವನ್ನು ತಮ್ಮ ಹಣೆಗೂ ಮತ್ತು ಕುಚಗಳಿಗೂ ಹಚ್ಚಿಕೊಂಡು ಕಾಮಜ್ವರವನ್ನು ನಿವಾರಣೆಮಾಡಿಕೊಳ್ಳುತ್ತಾರೆ. ಇದರಿಂದ ಬೇಡತಿಯರು ಎಷ್ಟು ಧನ್ಯರೆಂಬುದನ್ನು ನೀವೇ ಊಹಿಸಿರಿ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಅಬಲೆಯರೇ! ಈ ಗೋವರ್ಧನಪರ್ವತವು ಎಲ್ಲರಿಗಿಂತಲೂ ಮಿಗಿಲಾಗಿ ಶ್ರೀಕೃಷ್ಣನ ಸೇವೆಯನ್ನು ಮಾಡುತ್ತಿರುವುದೆಂದು ನಾನು ಭಾವಿಸುತ್ತೇನೆ. ಈ ಪರ್ವತವು ಭಗವಂತನ ಭಕ್ತರಲ್ಲಿ ಶ್ರೇಷ್ಠನಾದ ಭಕ್ತನಂತೆಯೇ ವರ್ತಿಸುತ್ತಿದೆ. ನಮ್ಮ ಪ್ರಾಣವಲ್ಲಭನಾದ ಶ್ರೀಕೃಷ್ಣನ ಮತ್ತು ನಯನಾಭಿ

ರಾಮನಾದ ಬಲರಾಮನ ಪಾದಸ್ಪರ್ಶದಿಂದಲೇ ಇದು ಮಹಾನಂದವನ್ನು ಅನುಭವಿಸುತ್ತಿದೆ. ಆನಂದದಿಂದ ಪುಳಕಿತವಾಗಿ ಈ ಪರ್ವತವು ರಾಮ-ಕೃಷ್ಣರಿಗೂ ಗೋ-ಗೋಪಾಲರಿಗೂ ಸದಾಕಾಲದಲ್ಲಿಯೂ ಸತ್ಕಾರಮಾಡುತ್ತದೆ. ಸ್ನಾನ-ಪಾನಗಳಿಗಾಗಿ ಗಿರಿನದಿಗಳಿಂದ ನಿರ್ಮಲವಾದ ನೀರನ್ನು ಒದಗಿಸಿಕೊಡುತ್ತದೆ. ಹಸುಗಳಿಗೆ ಮೇಯಲು ಹಚ್ಚಹಸಿರಾದ ಹುಲ್ಲನ್ನು ನೀಡುತ್ತದೆ. ರಾಮ-ಕೃಷ್ಣರು ಮತ್ತು ಗೋಪಾಲರು ವಿಶ್ರಮಿಸಿಕೊಳ್ಳಲು ಸುಂದರವಾದ ಗುಹೆಗಳನ್ನು ಒದಗಿಸುತ್ತದೆ. ಆಹಾರಕ್ಕಾಗಿ ಕಂದ-ಮೂಲ-ಫಲಗಳನ್ನು ಯಥೇಚ್ಛವಾಗಿ ಒದಗಿಸಿಕೊಡುತ್ತದೆ. ಈಗ ಹೇಳಿರಿ. ಈ ಗೋವರ್ಧನಪರ್ವತದಂತೆ ಶ್ರೀಹರಿಗೆ ನಿರಂತರವಾಗಿ ಸತ್ಕಾರಮಾಡುವವರು ಮತ್ತಾರಿದ್ದಾರೆ? ನಿಶ್ಚಯವಾಗಿಯೂ ಈ ಗೋವರ್ಧನಗಿರಿಯೇ ಪರಮ ಧನ್ಯವಾದುದು."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಗೆಳತಿಯರೇ! ನಾನು ಮತ್ತೊಂದು ವಿಚಿತ್ರಸಂಗತಿಯನ್ನು ಹೇಳುವೆನು ; ಲಾಲಿಸಿರಿ. ರಾಮ-ಕೃಷ್ಣರು ತುಂಟ ಹಸುಗಳನ್ನೂ ಎತ್ತುಗಳನ್ನೂ ಕಟ್ಟಿಹಾಕುವುದಕ್ಕಾಗಿ ಬಿರಿಹಗ್ಗಗಳ ಸಿಂಬೆಯನ್ನು ತಲೆಯ ಮೇಲೂ ಹೆಗಲ ಮೇಲೂ ಹೊತ್ತುಕೊಂಡು ಗೊಲ್ಲರೊಡನೆ ಹಸುಗಳನ್ನು ಮೇಯಿಸುತ್ತಾ ಕೊಳಲುನುಡಿಸುತ್ತಾ ಹೋಗುತ್ತಿರುತ್ತಾರೆ. ಇವರ ಕರ್ಣಾನಂದಕರವಾದ ವೇಣುಗಾನವನ್ನು ಕೇಳಿದೊಡನೆಯೇ ಜಂಗಮಗಳು (ಹಸುಗಳು) ಸ್ಥಾವರಗಳಾಗುತ್ತವೆ. ಅವು ಸ್ತಬ್ಧವಾಗಿ ನಿಂತುಬಿಡುತ್ತವೆ. ಸ್ಥಾವರಗಳು ಜಂಗಮಗಳಾಗುತ್ತವೆ. ಸ್ಥಾವರಗಳಾದ ಗಿಡ-ಮರ-ಬಳ್ಳಿಗಳು ಪುಷ್ಪೋದ್ಗಮಾದಿಗಳ ರೂಪದಲ್ಲಿ ವೇಣುಗಾನದ ಆಸ್ವಾದನೆಯಿಂದ ಪುಳಕಿತವಾಗುವುದನ್ನು ವ್ಯಕ್ತಪಡಿಸುತ್ತವೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ವೃಂದಾವನದಲ್ಲಿ ಸಂಚರಿಸುತ್ತಿದ್ದ ಶ್ರೀಕೃಷ್ಣನ ವಿಧ-ವಿಧವಾದ ಕ್ರೀಡಾವಿಹಾರಗಳನ್ನು ಪರಸ್ಪರವಾಗಿ ಹೇಳಿ

ಕೊಂಡು ಅವನ ಗುಣಗಾನಮಾಡುತ್ತಿದ್ದ ಗೋಪಿಯರು ತನ್ಮಯರೇ ಆಗಿ ಬಿಟ್ಟರು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೨೨ನೆಯ ಅಧ್ಯಾಯ

## ಗೋಪೀವಸ್ತ್ರಾಪಹರಣ

ಶ್ರೀಶುಕಮುನಿಗಳು ಹೇಳುತ್ತಾರೆ :

**ಹೇಮನ್ತೇ ಪ್ರಥಮೇ ಮಾಸಿ ನನ್ದವ್ರಜಕುಮಾರಿಕಾಃ ।**
**ಚೇರುರ್ಹವಿಷ್ಯಂ ಭುಞ್ಜಾನಾಃ ಕಾತ್ಯಾಯನ್ಯರ್ಚನವ್ರತಮ್ ॥೧॥**

ಪರೀಕ್ಷಿತನೇ! ಹಿಮಂತಋತುವು ಪ್ರಾದುರ್ಭವಿಸಿತು. ಇದಕ್ಕೆ ಹಿಂದೆಯೇ (ಮಾರ್ಗಶಿರಮಾಸದಲ್ಲಿಯೇ) ನಂದಗೋಪನ ಹಳ್ಳಿಯಲ್ಲಿದ್ದ ಕುಮಾರಿಯರು ಕಾತ್ಯಾಯನೀದೇವಿಯ ಪೂಜೆಯನ್ನು ಮತ್ತು ವ್ರತವನ್ನು ಆರಂಭಿಸಿದ್ದರು. ವ್ರತದ ನಿಯಮದಂತೆ ಅವರು ಹವಿಷ್ಯಾನ್ನವನ್ನೇ ಊಟ ಮಾಡುತ್ತಿದ್ದರು.*

ಮಹಾರಾಜ! ಆ ಕನ್ಯೆಯರು ಅರುಣೋದಯವಾಗುತ್ತಲೇ ಯಮುನಾನದಿಯ ತೀರ್ಥದಲ್ಲಿ ಸ್ನಾನಮಾಡಿ, ತೀರದಲ್ಲಿರುವ ಮಳಲಿನಿಂದಲೇ ಕಾತ್ಯಾಯನೀಮೂರ್ತಿಯನ್ನು ಕಲ್ಪಿಸಿಕೊಂಡು, ಸುಗಂಧಿತವಾದ ಗಂಧ ಗಳಿಂದಲೂ, ಪುಷ್ಪಹಾರಗಳಿಂದಲೂ, ಬಗೆ-ಬಗೆಯ ನೈವೇದ್ಯಗಳಿಂದಲೂ, ಧೂಪ-ದೀಪಗಳಿಂದಲೂ, ದೊಡ್ಡದಾದ ಮತ್ತು ಚಿಕ್ಕದಾದ ಪೂಜಾಸಾಮಗ್ರಿ

---

* ಹವಿಷ್ಯಾನ್ನ : ವ್ರತಾಚರಣೆಯ ಕಾಲದಲ್ಲಿ ಭುಂಜಿಸಲು ಯೋಗ್ಯವಾದ ಆಹಾರ. ಪೂರ್ವಾಧ್ಯಾಯದಲ್ಲಿ ಹಳ್ಳಿಗಳಿಂದ ಬಂದ ಗೊಲ್ಲಮಡದಿಯರಿಗೆ ಶ್ರೀಕೃಷ್ಣನಲ್ಲಿರುವ ಪ್ರೇಮವು ಶರತ್ಪ್ರಸಂಗದಿಂದ ವರ್ಣಿಸಲ್ಪಟ್ಟಿತು. ಈಗ ಮದುವೆಯಿಲ್ಲದ ಗೋಕುಲದ ಕುಮಾರಿಯರಿಗೆ ಕೃಷ್ಣನಲ್ಲಿರುವ ಅನುರಾಗವು ವರ್ಣಿಸಲ್ಪಡುವುದು. (ವೈಜಯಂತಿ)

ಭಗವದನುಗ್ರಹವನ್ನು ಸಂಪಾದಿಸುವುದಕ್ಕೆ ಭಕ್ತಿಯೇ ಕಾರಣವೆಂದು ತೋರಿಸುವುದಕ್ಕಾಗಿ ಈ ಅಧ್ಯಾಯದಲ್ಲಿ ಗೋಪಕನ್ಯೆಯರಿಗೆ ಶ್ರೀಕೃಷ್ಣನಲ್ಲಿರುವ ಪ್ರೇಮರೂಪವಾದ ಭಕ್ತಿಯು ವರ್ಣಿಸಲ್ಪಟ್ಟಿದೆ. (ವಿಜಯಧ್ವಜೀಯ)

ಗಳಿಂದಲೂ, ಚಿಗುರೆಲೆಗಳಿಂದಲೂ, ಅಕ್ಕಿಯಿಂದಲೂ ದೇವಿಯ ಪೂಜೆಯನ್ನು ಮಾಡುತ್ತಿದ್ದರು.

**ಕಾತ್ಯಾಯನಿ ಮಹಾಮಾಯೇ ಮಹಾಯೋಗಿನ್ಯಧೀಶ್ವರಿ ।**
**ನನ್ದಗೋಪಸುತಂ ದೇವಿ ಪತಿಂ ಮೇ ಕುರು ತೇ ನಮಃ ॥೪॥**

"ಹೇ ಕಾತ್ಯಾಯನಿ ಮಹಾಮಾಯಾದೇವಿಯೇ! ಮಹಾಯೋಗಿನಿಯೇ! ಸಮಸ್ತರಿಗೂ ಏಕಮಾತ್ರಸ್ವಾಮಿನಿಯೇ! ನಂದಗೋಪನ ಮಗನಾದ ಶ್ರೀಕೃಷ್ಣನು ನನಗೆ ಪತಿಯಾಗುವಂತೆ ಅನುಗ್ರಹಿಸು. ನಿನ್ನ ಪಾದಾರವಿಂದಗಳಲ್ಲಿ ನಮಸ್ಕರಿಸುತ್ತೇನೆ"–ಎಂಬ ಈ ಮಹಾಮಂತ್ರವನ್ನು ಎಲ್ಲ ಕುಮಾರಿಯರೂ ಜಪಿಸುತ್ತಾ ಕಾತ್ಯಾಯನೀದೇವಿಯ ಪೂಜೆಯನ್ನು ಮಾಡುತ್ತಿದ್ದರು.

ಹೀಗೆ ಶ್ರೀಕೃಷ್ಣನಲ್ಲಿಯೇ ನೆಟ್ಟುಹೋಗಿದ್ದ ಮನಸ್ಸುಳ್ಳವರಾಗಿದ್ದ ಆ ಕುಮಾರಿಯರು ಒಂದು ತಿಂಗಳು ವ್ರತಾನುಷ್ಠಾನಮಾಡುತ್ತಾ ನಂದಗೋಪನ ಮಗನೇ ತಮಗೆ ಪತಿಯಾಗಬೇಕೆಂದು ಭದ್ರಕಾಳಿಯನ್ನು ಶ್ರದ್ಧೆಯಿಂದ ಪೂಜಿಸಿದರು.*

ಮಹಾರಾಜ! ಆ ಗೋಪಬಾಲಕಿಯರು ಪ್ರತಿನಿತ್ಯವೂ ಉಷಃಕಾಲದಲ್ಲೆದ್ದು ಒಬ್ಬೊಬ್ಬ ಸಂಗಾತಿಯನ್ನೂ ಆಕೆಯ ಹೆಸರು ಹಿಡಿದು ಕೂಗುತ್ತಾ

---

* ಮಹಾಯೋಗಿನಿ! ಎಂಬುದರಿಂದ–"ತಾಯೇ! ಶ್ರೀಕೃಷ್ಣನೊಡನೆ ನಮ್ಮನ್ನು ಕೂಡಿಸುವುದಕ್ಕೆ ನೀನೇ ಶಕ್ತಳು. ತಂದೆ-ತಾಯಿಗಳನ್ನು ನಿರೀಕ್ಷಿಸಿ ನಾವು ಕಾಲವಿಳಂಬವನ್ನು ಸೈರಿಸಲಾರೆವು. ಅಲ್ಲದೇ ಕೃಷ್ಣನಿಗಿನ್ನೂ ಉಪನಯನವೇ ಇಲ್ಲದುದರಿಂದ ವಿವಾಹಕ್ಕೆ ಯೋಗ್ಯತೆಯಿಲ್ಲ. ಆದುದರಿಂದ ಅವನನ್ನು ಗಾಂಧರ್ವವಿವಾಹದಿಂದಲಾದರೂ ನಮಗೆ ಪತಿಯಾಗುವಂತೆ ಮಾಡು"–ಎಂಬ ಭಾವವು.

ಮಹಾಮಾಯೆ!–ಎಂಬುದರಿಂದ : "ಜನನಿಯೇ! ಕೃಷ್ಣಮೂರ್ತಿಯನ್ನುಳಿದು ಇತರರಿಗೆ ನಮ್ಮನ್ನು ಕೊಡದಂತೆಯೂ ಒಮ್ಮೆ ಕೊಟ್ಟರೂ ನಾವು ಕೃಷ್ಣಾಂಗಸಂಗದಿಂದ ಸುಖಿಸುವುದನ್ನರಿಯದಂತೆಯೂ ನಮ್ಮ ತಂದೆ-ತಾಯಿಗಳನ್ನು ಮರುಳುಗೊಳಿಸು"– ಎಂದು ತಾತ್ಪರ್ಯವು ಇದರಿಂದ ಗೋಪಬಾಲೆಯರಿಗೆ ಕೃಷ್ಣಭಗವಂತನಲ್ಲಿ ನಿರತಿಶಯಪ್ರೇಮವಿದ್ದಿತೆಂದೂ ಅಂತಹ ಪ್ರೇಮವೇ ಭಕ್ತಿಯೆನಿಸಿ ಪರಮಪುರುಷಾರ್ಥವಾಗುವುದೆಂದೂ ತಿಳಿಯಬೇಕು.

ಭಕ್ತಿಃ ಪರಾನುರಕ್ತಿರೀಶ್ವರೇ ( ಶಾಂಡಿಲ್ಯಸೂತ್ರ )-( ಸಾರಾರ್ಥದರ್ಶಿನೀ )

ಎಲ್ಲರೂ ಒಟ್ಟಾಗಿ ಸೇರಿದನಂತರ ಒಬ್ಬರು ಮತ್ತೊಬ್ಬರ ಕೈಹಿಡಿದುಕೊಂಡು ಗಟ್ಟಿಯಾಗಿ ಏಕಕಂಠದಿಂದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಗಾನ ಮಾಡುತ್ತಾ, ಕ್ಷಣಕ್ಷಣಕ್ಕೂ ಅವನ ನಾಮೋಚ್ಚಾರಣೆಮಾಡುತ್ತಾ ಯಮುನಾ ನದಿಗೆ ಹೋಗಿ ಸ್ನಾನಮಾಡುತ್ತಿದ್ದರು. ಅನಂತರ ಎಲ್ಲರೂ ಸೇರಿಕೊಂಡು ದೇವಿಯ ಆರಾಧನೆಯನ್ನು ಮಾಡುತ್ತಿದ್ದರು.

ಒಂದು ದಿನ ಎಲ್ಲ ಗೋಪಕುಮಾರಿಯರೂ ಹಿಂದಿನಂತೆಯೇ ಉಷಃಕಾಲದಲ್ಲೆದ್ದು ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಾ ಯಮುನಾನದಿಯ ತೀರಕ್ಕೆ ಬಂದು ಸ್ನಾನಮಾಡುವ ಸಲುವಾಗಿ ವಸ್ತ್ರಗಳೆಲ್ಲ ವನ್ನೂ ತೀರದಲ್ಲಿ ಬಿಚ್ಚಿಟ್ಟು ಜಲಕ್ರೀಡೆಯಾಡತೊಡಗಿದರು. ಅಪಾರ ಮಹಿಮನೂ *ಯೋಗೇಶ್ವರರಿಗೂ ಈಶ್ವರನೂ ಆದ ಶ್ರೀಕೃಷ್ಣನಿಗೆ ಗೋಪ ಕನ್ಯೆಯರ ಆಶಯವು ತಿಳಿದುಹೋಯಿತು. ಆತನು ಅವರ ಆಶಯವನ್ನು ಪೂರೈಸಿಕೊಡುವ ಸಲುವಾಗಿ, ಅವರು ಮಾಡಿದ ದೇವಿಯ ಪೂಜೆಯನ್ನು ಸಫಲಗೊಳಿಸುವುದಕ್ಕಾಗಿ ತನ್ನ ಗೆಳೆಯರಾದ ಗೋಪಾಲಬಾಲಕರೊಡನೆ ಸಮಾವೃತನಾಗಿ ಯಮುನಾನದಿಯ ತೀರಕ್ಕೆ ಆಗಮಿಸಿದನು.

ಗೋಪಬಾಲಕಿಯರೆಲ್ಲರೂ ವಸ್ತ್ರಗಳನ್ನು ತೀರದಲ್ಲಿ ಬಿಚ್ಚಿಟ್ಟು ಜಲ ಕ್ರೀಡೆಯಾಡುತ್ತಿರುವುದನ್ನು ಶ್ರೀಕೃಷ್ಣನು ನೋಡಿದನು. ಅವಸರದಿಂದಲೇ ಹೋಗಿ ಅವರ ಸೀರೆಗಳೆಲ್ಲವನ್ನೂ ಎತ್ತಿಕೊಂಡು ಹತ್ತಿರದಲ್ಲಿದ್ದ ಒಂದು ಕದಂಬವೃಕ್ಷವನ್ನು ಹತ್ತಿಕುಳಿತುಬಿಟ್ಟನು. ಶ್ರೀಕೃಷ್ಣನ ಈ ಕೃತ್ಯವನ್ನು ನೋಡಿ

---

* ಇಲ್ಲಿ ಯೋಗೇಶ್ವರೇಶ್ವರಃ– ಎಂಬುದರಿಂದ ಶ್ರೀಕೃಷ್ಣಮೂರ್ತಿಯು ಸರ್ವಜ್ಞ ನೆಂದೂ ಆ ಕನ್ಯೆಯರೆಲ್ಲರ ಕೋರಿಕೆಗಳನ್ನೂ ನೆರವೇರಿಸಬಲ್ಲವನೆಂದೂ, ಕಣ್ಣೆದು ರಾಗಿಯೇ ಇಟ್ಟುಕೊಂಡಿದ್ದ ವಸ್ತ್ರಗಳನ್ನೆಲ್ಲಾ ಅವರಿಗೆ ತಿಳಿಯದಂತೆಯೇ ಕದಿಯಲು ಸಮರ್ಥನೆಂದೂ, ಪ್ರಾಣಕ್ಕಿಂತಲೂ ಮಾನವೇ ಹಿರಿದೆಂದು ನಿಶ್ಚಯಿಸಿದ್ದ ಆ ಕುಲಬಾಲಕಿಯರ ಲಜ್ಜೆಯನ್ನು ಬಿಡಿಸಿ ಅವರೆಲ್ಲರೂ ನಿರ್ವಾಣದಿಂದ ತಡಿಗೆ ಬಂದು ಕೈಮುಗಿದು ನಮಸ್ಕರಿಸುವಂತೆ ಮಾಡಲು ಸಮರ್ಥನೆಂದೂ, ಏಕಾಂತದಲ್ಲಿ ಬೆತ್ತಲೆ ಯಾಗಿ ಬಳಿಯಲ್ಲೇ ನಿಂತು ಹೇಳಿದಂತೆ ಕೇಳುವವರಾಗಿದ್ದರೂ ಅವರನ್ನಾಗ ಕಾಮಿಸದೇ ಇದ್ದುದರಿಂದ ಅನಾದಿಬ್ರಹ್ಮಚಾರಿಯೆಂದೂ ಹೇಳಿದಂತಾಗುವುದು. ಕೃಷ್ಣನು ಏಕಾಂತಸ್ಥಳಕ್ಕೆ ಇತರರನ್ನು ಕರೆದುಕೊಂಡು ಹೋಗಬಹುದೇ?–ಎಂದರೆ ಅವನೊಡನೆ ಬಂದಿದ್ದವರು ಹೆಣ್ಣು-ಗಂಡೆಂಬ ವಿವೇಕವಿಲ್ಲದ ಬೆತ್ತಲೆಯಾದ ಎರಡು

ಗೋಪಬಾಲಕರೂ ಕಿಲಕಿಲನೆ ನಗತೊಡಗಿದರು. ಶ್ರೀಕೃಷ್ಣನೂ ಅವರೊಡನೆ ಸೇರಿಕೊಂಡು ನಗುತ್ತಾ ಗೋಪಕುಮಾರಿಯರಿಗೆ ಹೇಳಿದನು :

**ಅತ್ರಾಗತ್ಯಾಬಲಾಃ ಕಾಮಂ ಸ್ವಂ ಸ್ವಂ ವಾಸಃ ಪ್ರಗೃಹ್ಯತಾಮ್ ।**
**ಸತ್ಯಂ ಬ್ರುವಾಣಿ ನೋ ನರ್ಮ ಯದ್ಯೂಯಂ ವ್ರತಕರ್ಶಿತಾಃ ॥೧೦॥**

"ಕುಮಾರಿಯರೇ! ನಿಮಗೆ ನಿಮ್ಮ ವಸ್ತ್ರಗಳು ಬೇಕಾಗಿದ್ದರೆ ಇಲ್ಲಿಗೆ ಬಂದು ತೆಗೆದುಕೊಂಡು ಹೋಗಿರಿ. ನಾನು ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ. ಪರಿಹಾಸ್ಯಕ್ಕಾಗಿ ಹೇಳುತ್ತಿಲ್ಲ. ಅಥವಾ ನೀವು ವಸ್ತ್ರಗಳನ್ನು ತೆಗೆದುಕೊಂಡು ಹೋಗುವಾಗ ನಿಮ್ಮನ್ನು ನೋಡಿ ನಗುವುದೂ ಇಲ್ಲ. ಏಕೆಂದರೆ ನೀವೆಲ್ಲರೂ ವ್ರತಾನುಷ್ಠಾನದಿಂದ ದುರ್ಬಲೆಯರಾಗಿಬಿಟ್ಟಿರುವಿರಿ. ಆದುದರಿಂದ ನಿಮ್ಮನ್ನು ಕಾಡುವುದೂ ಸರಿಯಲ್ಲ.

ಸುಂದರವಾದ ನಡುಪ್ರದೇಶವನ್ನು ಹೊಂದಿರುವ ಸುಕುಮಾರಿ ಯರೇ! ನಾನು ಈ ಹಿಂದೆ ಸುಳ್ಳುಹೇಳಿದವನಲ್ಲ. ಇದು ನನ್ನ ಗೆಳೆಯರಾದ ಗೋಪಬಾಲಕರಿಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ನೀವು ಒಬ್ಬೊಬ್ಬರೇ ಬಂದು ನಿಮ್ಮ ನಿಮ್ಮ ವಸ್ತ್ರಗಳನ್ನು ತೆಗೆದುಕೊಳ್ಳಿರಿ. ಅಥವಾ ಎಲ್ಲರೂ ಒಟ್ಟಾಗಿಯೇ ಬಂದು ಬೇಕಾದರೂ ನಿಮ್ಮ ವಸ್ತ್ರಗಳನ್ನು ತೆಗೆದುಕೊಳ್ಳಿರಿ. ಇದರಿಂದ ನನಗಾವ ತೊಂದರೆಯೂ ಇಲ್ಲ."

ಶ್ರೀಕೃಷ್ಣನ ಪರಿಹಾಸ್ಯಪೂರ್ಣವಾದ ಈ ಮಾತುಗಳನ್ನು ಕೇಳಿ ಗೋಪ

---

ಮೂರು ವಯಸ್ಸಿನ ಹಸುಳೆಗಳಾದುದರಿಂದ ಬಾಧಕವಿಲ್ಲ. **ಜಂಘಾನ್ತಪೀವರ ಕಟೀರ ತಟೀನಿಬದ್ಧ ವ್ಯಾಲೋಲಕಿಂಕಿಣಿ ಘಟಾಘಟಿತೈರಟದ್ಭಿಃ । ಮುಗ್ಧೈಸ್ತರಕ್ಷುನಖಕಲ್ಪಿತ ಕಂಠಭೂಷೈರವ್ಯಕ್ತಮಂಜುವಚನೈಃ ಪೃಥುಕೈಃ ಪರೀತಮ್ ॥**

ಆ ಹುಡುಗರು ಉಡುಗೆಜ್ಜೆ-ಹುಲಿಯುಗುರು ಸರಗಳನ್ನು ಕಟ್ಟಿಕೊಂಡು ತೊದಲು ನುಡಿಗಳನ್ನಾಡುತ್ತಾ ಕೃಷ್ಣನನ್ನು ಹಿಂಬಾಲಿಸಿದರು. (ಸಾರಾರ್ಥದರ್ಶಿನೀ)

ಶ್ರೀಕೃಷ್ಣನಿಗೆ ಪರಮಾಪ್ತರಾಗಿಯೂ ಅಂತಃಕರಣಸ್ವರೂಪರಾಗಿಯೂ ಇರುವ ದಾಮ-ಸುದಾಮ-ವಸುದಾಮ-ಕಿಂಕಿಣಿ–ಎಂಬ ನಾಲ್ವರೂ ಅವನೊಡನಿದ್ದರು.

**ದಾಮ ಸುದಾಮ ವಸುದಾಮ ಕಿಂಕಿಣೀರ್ಗನ್ಧಪುಷ್ಪಕೈಃ ।**
**ಅನ್ತಃಕರಣರೂಪಾಸ್ತೇ ಕೃಷ್ಣಸ್ಯ ಪರಿಕೀರ್ತಿತಾಃ ।**
**ಆತ್ಮಾಭೇದೇನ ತೇ ಪೂಜ್ಯಾ ಯಥಾ ಕೃಷ್ಣಸ್ತಥೈವ ಚ** (ಗೌತಮೀ ತಂತ್ರ)
(ವೈಜಯಂತಿ)

ಬಾಲಕಿಯರ ಮನಸ್ಸುಗಳು ಪ್ರೇಮರಸದಿಂದ ತುಂಬಿಹೋಯಿತು. ನೀರಿನಲ್ಲಾಡುತ್ತಿದ್ದ ಅವರು ಕೂಡ ಪರಸ್ಪರವಾಗಿ ಒಬ್ಬರನ್ನೊಬ್ಬರು ನೋಡಿಕೊಂಡು ಕಿಲಕಿಲನೆ ನಗತೊಡಗಿದರು. ಆದರೆ ಶ್ರೀಕೃಷ್ಣನು ಹೇಳಿದಂತೆ ಒಡನೆಯೇ ಅವರು ವಸ್ತ್ರಗಳನ್ನು ತೆಗೆದುಕೊಳ್ಳಲು ನೀರಿನಿಂದ ಹೊರಗೆ ಬರಲಿಲ್ಲ. ಗೋವಿಂದನು ಪರಿಹಾಸ್ಯದ ಮಾತುಗಳನ್ನಾಡುತ್ತಾ ಗಹ-ಗಹಿಸಿ ನಗುತ್ತಿರಲಾಗಿ ಅವರ ಮನಸ್ಸು ಮತ್ತಷ್ಟು ಶ್ರೀಕೃಷ್ಣನ ಕಡೆಗೆ ಸೆಳೆಯಲ್ಪಟ್ಟಿದ್ದಿತು. ಅಂತಹ ಸರಸೋಕ್ತಿಗಳನ್ನು ಪುನಃ ಪುನಃ ಶ್ರೀಕೃಷ್ಣನ ಮುಖಾರವಿಂದದಿಂದ ಕೇಳುತ್ತಲೇ ಇರಬೇಕೆನ್ನಿಸಿತು. ಕುಮಾರಿಯರು ಅಕಂಠವಾಗಿ ಯಮುನೆಯ ನೀರಿನಲ್ಲಿದ್ದರು. ಸ್ವಲ್ಪಹೊತ್ತು ಕಳೆಯುತ್ತಲೇ ಅವರೆಲ್ಲರೂ ಚಳಿಯಿಂದ ನಡುಗತೊಡಗಿದರು. ನಡುಗುತ್ತಲೇ ಕೃಷ್ಣನನ್ನು ಪ್ರಾರ್ಥಿಸಿದರು :

**ಮಾನಯಂ ಭೋಃ ಕೃಥಾಸ್ತ್ವಾಂ ತು ನನ್ದಗೋಪಸುತಂ ಪ್ರಿಯಮ್ ।**
**ಜಾನೀಮೋಽಙ್ಗ ವ್ರಜಶ್ಲಾಘ್ಯಂ ದೇಹಿ ವಾಸಾಂಸಿ ವೇಪಿತಾಃ ॥೧೪॥**

“ಭೋಃ ಸಮಸ್ತರಿಗೂ ಪ್ರಿಯನಾದ ಕೃಷ್ಣನೇ! ಇಂತಹ ಅನ್ಯಾಯ ವನ್ನು ನೀನು ಮಾಡಬಾರದು. ನೀನು ನಮ್ಮ ರಾಜನಾದ ನಂದಗೋಪನಿಗೆ ಅತ್ಯಂತಪ್ರಿಯನಾದ ಮುದ್ದುಮಗನೆಂಬುದನ್ನೂ ನಾವು ಬಲ್ಲೆವು. ಸಮಸ್ತ ವ್ರಜವಾಸಿಗಳಿಂದಲೂ ಶ್ಲಾಘಿಸಲ್ಪಡತಕ್ಕವನೆಂಬುದನ್ನೂ ನಾವು ಬಲ್ಲೆವು. ಆದುದರಿಂದ ನಮಗೂ ನೀನು ಪ್ರಿಯತಮನೇ ಆಗಿರುವೆ. ನಾವೀಗ ಚಳಿಯಿಂದ ನಡುಗುತ್ತಿದ್ದೇವೆ. ಹೆಚ್ಚು ಪರಿಹಾಸ್ಯಮಾಡಹೋಗದೆ ನಮ್ಮ ವಸ್ತ್ರಗಳನ್ನು ನಮಗೆ ಕೊಟ್ಟುಬಿಡು.”

ಮತ್ತೊಬ್ಬ ಕುಮಾರಿಯು ಹೇಳಿದಳು :

**ಶ್ಯಾಮಸುನ್ದರ ತೇ ದಾಸ್ಯಃ ಕರವಾಮ ತವೋದಿತಮ್ ।**
**ದೇಹಿ ವಾಸಾಂಸಿ ಧರ್ಮಜ್ಞ ನೋ ಚೇದ್ರಾಜ್ಞೇ ಬ್ರುವಾಮಹೇ ॥೧೫॥**

“ಶ್ಯಾಮಸುಂದರನೇ! ಮನಮೋಹನಾಂಗನೇ! ನಾವೆಲ್ಲರೂ ನಿನ್ನ ದಾಸಿಯರಾಗಿದ್ದೇವೆ. ನೀನು ಹೇಳಿದಂತೆ ಮಾಡಲು ಸಿದ್ಧರಾಗಿದ್ದೇವೆ. ನೀನು ಧರ್ಮಜ್ಞನಾಗಿರುವೆ. ಧರ್ಮಕ್ಕೆ ವಿರುದ್ಧವಾಗಿ ನಮಗೆ ಆಜ್ಞೆಯನ್ನು ನೀಡ

ಬಾರದು. ಹೆಚ್ಚು ಹೆಣಗಿಸದೆ ನಮ್ಮ ವಸ್ತ್ರಗಳನ್ನು ನಮಗೆ ಕೊಟ್ಟುಬಿಡು. ಕೊಡಲಿಲ್ಲವಾದರೆ ರಾಜನಿಗೆ ದೂರುಕೊಡುತ್ತೇವೆ. ತಿಳಿದಿರಲಿ."

ಭಗವಂತನು ಹೇಳುತ್ತಾನೆ :

**ಭವತ್ಯೋ ಯದಿ ಮೇ ದಾಸ್ಯೋ ಮಯೋಕ್ತಂ ವಾ ಕರಿಷ್ಯಥ ।**
**ಅತ್ರಾಗತ್ಯ ಸ್ವವಾಸಾಂಸಿ ಪ್ರತೀಚ್ಛನ್ತು ಶುಚಿಸ್ಮಿತಾಃ ॥೧೬॥**

"ಶುಭ್ರವಾದ ಮಂದಹಾಸವುಳ್ಳ ಕುಮಾರಿಯರೇ! ನನಗೆ ದಾಸಿಯ ರಾಗಿರಲು ನೀವು ಇಷ್ಟಪಟ್ಟಿರುವುದಾದರೆ ನಾನು ಹೇಳಿದಂತೆ ಮಾಡಿಬಿಡಿರಿ. ಇಲ್ಲಿಗೆ ಬನ್ನಿರಿ. ನಿಮ್ಮ ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ."

ಕುಮಾರಿಯರು ಶೀತದಿಂದ ನಡುಗುತ್ತಿದ್ದರು. ಕೃಷ್ಣನ ಆಜ್ಞೆಯನ್ನು ಪರಿಪಾಲಿಸದೆ ಅವರಿಗೆ ಅನ್ಯಮಾರ್ಗವೇ ಇರಲಿಲ್ಲ. ರಾಜನ ಬಳಿಗೆ ದೂರು ಕೊಡಲಾದರೂ ಹೋಗುವುದು ಹೇಗೆ? ತಮ್ಮ ಪ್ರಿಯತಮನ ಆಜ್ಞೆಯಂತೆ ನಡೆದುಕೊಳ್ಳಲು ನಿರ್ಧರಿಸಿದರು. ಎಲ್ಲ ಕುಮಾರಿಯರೂ ಚಳಿಯಲ್ಲಿ ನಡುಗುತ್ತಾ ತಮ್ಮೆರಡು ಕೈಗಳಿಂದಲೂ ಜನನಾಂಗವನ್ನು ಮುಚ್ಚಿಕೊಂಡು ಜಲಾಶಯದಿಂದ ಯಮುನಾನದಿಯ ತೀರಕ್ಕೆ ಹತ್ತಿಬಂದರು.

ಅವರ ಶುದ್ಧವಾದ ಅಂತಃಕರಣವನ್ನು ನೋಡಿ ಭಗವಂತನು ಪ್ರಸನ್ನ ನಾದನು. ತನ್ನ ಆಜ್ಞಾನುಸಾರವಾಗಿ ಅವರೆಲ್ಲರೂ ತನ್ನ ಬಳಿಗೆ ಬಂದುದನ್ನು ನೋಡಿ ಅವರ ವಸ್ತ್ರಗಳೆಲ್ಲವನ್ನೂ ಹೆಗಲಮೇಲೆ ಹಾಕಿಕೊಂಡು ಮುಗುಳ್ನಗೆಯನ್ನು ಬೀರುತ್ತಾ ಹೇಳಿದನು :

**ಯೂಯಂ ವಿವಸ್ತ್ರಾ ಯದಪೋ ಧೃತವ್ರತಾ**
**ವ್ಯಗಾಹತೈತತ್ತದು ದೇವಹೇಲನಮ್ ।**
**ಬಧ್ವಾಞ್ಜಲಿಂ ಮೂರ್ಧ್ನ್ಯಪನುತ್ತಯೇಽಂಹಸಃ**
**ಕೃತ್ವಾ ನಮೋಽಧೋ ವಸನಂ ಪ್ರಗೃಹ್ಯತಾಮ್ ॥೧೯॥**

"ಗೋಪಕುಮಾರಿಯರೇ! ನೀವು ಕಾತ್ಯಾಯನೀವ್ರತವನ್ನೇನೋ ಶ್ರದ್ಧೆಯಿಂದಲೂ ಭಕ್ತಿಯಿಂದಲೂ ವಿಧಿವತ್ತಾಗಿ ಮಾಡಿರುವಿರಿ. ಇದರಲ್ಲಿ ಸಂದೇಹವೇ ಇಲ್ಲ. ಆದರೆ ನೀವು ವಸ್ತ್ರಹೀನರಾಗಿ ನದಿಯಲ್ಲಿ ಸ್ನಾನಮಾಡಿ

ದುದು ಜಲಾಧಿಷ್ಠಾತೃದೇವನಾದ ವರುಣನಿಗೂ ಮತ್ತು ಯಮುನಾ ದೇವಿಗೂ ಮಾಡಿದ ಅಪರಾಧವಾಗಿದೆ.* ಈ ದೋಷದ ಶಾಂತಿಗಾಗಿ ನೀವು ನಿಮ್ಮೆರಡು ಕೈಗಳನ್ನೂ ಜೋಡಿಸಿ (ಬದ್ಧಾಂಜಲಿಗಳಾಗಿ) ತಲೆಯ ಮೇಲಿಟ್ಟುಕೊಂಡು ಬಗ್ಗಿ ನಮಸ್ಕಾರವನ್ನು ಮಾಡಬೇಕು. ಹೀಗೆ ಮಾಡುವುದರಿಂದ ಮಾತ್ರವೇ ಈ ದೋಷದ ಪರಿಹಾರವಾಗುತ್ತದೆ. ದೋಷವನ್ನು ಈ ಪರಿಯಲ್ಲಿ ಪರಿಹರಿಸಿಕೊಂಡನಂತರ ನೀವು ನಿಮ್ಮ ನಿಮ್ಮ ಸೀರೆಗಳನ್ನು ತೆಗೆದುಕೊಳ್ಳಬಹುದು."

ಪರೀಕ್ಷಿತ! ಭಗವಂತನಾದ ಶ್ರೀಕೃಷ್ಣನು ಹೀಗೆ ಹೇಳುತ್ತಲೇ ಗೋಪ ಬಾಲಕಿಯರು ವಸ್ತ್ರಹೀನರಾಗಿ ನದಿಯಲ್ಲಿ ಸ್ನಾನಮಾಡಿದುದರಿಂದ ತಾವು ಮಾಡುತ್ತಿದ್ದ ವ್ರತದ ಭಂಗವಾಯಿತೆಂದೇ ಭಾವಿಸಿದರು. ಆದುದರಿಂದ ನಿರ್ವಿಘ್ನವಾಗಿ ಮತ್ತು ನಿರ್ದುಷ್ಟವಾಗಿ ತಾವು ಪ್ರಾರಂಭಿಸಿದ ವ್ರತವು ನೆರವೇರಲು ಶ್ರೀಕೃಷ್ಣನು ಹೇಳಿದಂತೆ ಎರಡು ಕೈಗಳನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಸಮಸ್ತಕರ್ಮಗಳಿಗೂ ಸಾಕ್ಷೀಭೂತನಾದ ಭಗವಂತ ನಾದ ಶ್ರೀಕೃಷ್ಣನಿಗೆ ನಮಸ್ಕಾರಮಾಡಿದರು. ಹೀಗೆ ಮಾಡಿದುದರಿಂದ ತಮ್ಮ ದೋಷಪರಿಹಾರವಾಯಿತೆಂದು ಅವರು ಭಾವಿಸಿಕೊಂಡರು. ಎಲ್ಲ ಗೋಪ ಕುಮಾರಿಯರೂ ತಾನು ಹೇಳಿದಂತೆ ತನ್ನ ಆಜ್ಞೆಗೆ ಅನುಸಾರವಾಗಿ ನಡೆದುಕೊಂಡುದನ್ನು ನೋಡಿ ಶ್ರೀಕೃಷ್ಣನಿಗೆ ಪರಮಾನಂದವಾಯಿತು. ಸ್ವಾಭಿಮಾನವನ್ನು ತೊರೆದು ಆ ಕುಮಾರಿಯರು ಶ್ರೀಕೃಷ್ಣನಿಗೆ ತಮ್ಮನ್ನು ಸಮರ್ಪಿಸಿಕೊಂಡುಬಿಟ್ಟಿದ್ದರು. ಅವರ ಶುದ್ಧಾಂತಃಕರಣದಿಂದ ಸುಪ್ರೀತನಾದ ಶ್ರೀಕೃಷ್ಣನು ಅವರಿಗೆ ಅವರವರ ವಸ್ತ್ರಗಳನ್ನು ಕೊಟ್ಟುಬಿಟ್ಟನು.

ಪರೀಕ್ಷಿತಮಹಾರಾಜ! ಹೀಗೆ ಗೋಪಕುಮಾರಿಯರು ಶ್ರೀಕೃಷ್ಣನಿಂದ ವಂಚಿತರಾದರು. ಲಜ್ಜೆಯನ್ನು ಬಿಡಬೇಕಾಗಿಬಂದಿತು. ಅಪಹಾಸ್ಯಕ್ಕೀಡಾ ದರು. ಆಟದ ಗೊಂಬೆಗಳನ್ನು ಆಡಿಸುವಂತೆ ಶ್ರೀಕೃಷ್ಣನು ಗೋಪಕುಮಾರಿ ಯರನ್ನು ಮನಬಂದಂತೆ ಆಟವಾಡಿಸಿಬಿಟ್ಟನು. ಅವರ ವಸ್ತ್ರಗಳನ್ನು ಅಪ ಹರಿಸಿಬಿಟ್ಟನು. ಆದರೂ ಕುಮಾರಿಯರು ಅವನ ಮೇಲೆ ಕೋಪಗೊಳ್ಳಲಿಲ್ಲ.

---

* ನ ನಗ್ನಃ ಸ್ನಾಯಾತ್ = ನಗ್ನನಾಗಿ ಸ್ನಾನಮಾಡಬಾರದು. (ಶಾಸ್ತ್ರವಚನ)
ನ ವಿವಸನಃ ಸ್ನಾಯಾತ್ = ಬಟ್ಟೆಯಿಲ್ಲದೆ ಸ್ನಾನಮಾಡಬಾರದು. (ಶ್ರುತಿ)

ಅವನು ಮಾಡಿದ ಕಾರ್ಯಗಳಲ್ಲಿ ದೋಷವೆಣಿಸಲಿಲ್ಲ. ವ್ರತತೊಟ್ಟು ಬಯಸಿದ್ದ ಶ್ರೀಕೃಷ್ಣನ ಸಹವಾಸವೇ ಸಿಕ್ಕಿದ್ದಕ್ಕಾಗಿ ಆನಂದಿಸಿದರು. ಬಳಿಕ ಅವರೆಲ್ಲರೂ ಶ್ರೀಕೃಷ್ಣನು ದಯಪಾಲಿಸಿದ ಪವಿತ್ರವಾದ ಸೀರೆಗಳನ್ನು ಉಟ್ಟುಕೊಂಡರು. ಆದರೆ ಅವರು ಅಲ್ಲಿಂದ ಹೋಗಲು ಒಂದು ಹೆಜ್ಜೆಯನ್ನೂ ಮುಂದಿಡಲಿಲ್ಲ. ಹಾಗೆ ಇಡಲು ಸಾಧ್ಯವಾಗಲಿಲ್ಲ. ಶ್ರೀಕೃಷ್ಣನಿಂದ ಅವರು ಸಂಪೂರ್ಣವಾಗಿ ಆಕರ್ಷಿಸಲ್ಪಟ್ಟಿದ್ದರು. ಕೃಷ್ಣನನ್ನು ಬಿಟ್ಟುಹೋಗು ವುದೇ ಅವರಿಗೆ ಸಾಹಸದ ಕಾರ್ಯವಾಗಿತ್ತು. ಲಜ್ಜೆಯಿಂದ ಕೂಡಿದ ಕುಡಿ ನೋಟಗಳನ್ನು ಶ್ರೀಕೃಷ್ಣನ ಕಡೆಗೆ ಬೀರುತ್ತಾ ನಿಂತಲ್ಲಿಯೇ ನಿಂತುಬಿಟ್ಟರು. ತನ್ನ ಪಾದಗಳನ್ನು ಸ್ಪರ್ಶಿಸುವ ಇಚ್ಛೆಯಿಂದ ಕಾತುರರಾಗಿ ಕುಮಾರಿಯರು ಕಾದಿರುವರೆಂಬುದನ್ನು ಶ್ರೀಕೃಷ್ಣನು ತಿಳಿದುಕೊಂಡನು. ಅದಕ್ಕಾಗಿಯೇ ಅವರು ವ್ರತವನ್ನು ಕೈಗೊಂಡು ದೇವಿಯನ್ನು ಪೂಜಿಸುತ್ತಿದ್ದರು. ಶ್ರೀಕೃಷ್ಣ ನನ್ನು ಸೇವಿಸಬೇಕೆಂಬುದೇ ಅವರ ಜೀವನದ ಏಕಮಾತ್ರಸಂಕಲ್ಪವಾಗಿದ್ದಿತು. ಕುಮಾರಿಯರ ಪ್ರೇಮಕ್ಕೆ ಮನಸೋತು ಶ್ರೀಕೃಷ್ಣನು ಅವರಿಗೆ ಹೇಳಿದನು :

**ಸಂಕಲ್ಪೋ ವಿದಿತಃ ಸಾಧ್ವ್ಯೋ ಭವತೀನಾಂ ಮದರ್ಚನಮ್ ।**
**ಮಯಾನುಮೋದಿತಃ ಸೋಽಸೌ ಸತ್ಯೋ ಭವಿತುಮರ್ಹತಿ ॥೨೫॥**

"ಪ್ರೇಯಸಿಯರಾದ ಕುಮಾರಿಯರೇ! ಸಾಧ್ವಿಯರೇ! ನನ್ನ ಸೇವೆ ಮಾಡಬೇಕೆನ್ನುವ ನಿಮ್ಮ ಸಂಕಲ್ಪವನ್ನು ನಾನು ತಿಳಿದಿರುತ್ತೇನೆ. ನಿಮ್ಮ ಈ ಆಶಯವನ್ನು ನಾನು ಅನುಮೋದಿಸಿದ್ದೇನೆ. ನನ್ನನ್ನು ಅರ್ಚಿಸಬೇಕೆಂದಿರುವ ನಿಮ್ಮ ಸಂಕಲ್ಪವು ಸತ್ಯವಾಗಿ ಪರಿಣಮಿಸಲಿ. ನೀವು ನನ್ನನ್ನು ಮನದುಂಬಿ ಪೂಜಿಸಿರಿ.

**ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।**
**ಭರ್ಜಿತಾ ಕ್ವಥಿತಾ ಧಾನಾ ಪ್ರಾಯೋ ಬೀಜಾಯ ನೇಷ್ಯತೇ ॥೨೬॥**

ಯಾರು ತಮ್ಮ ಮನಸ್ಸನ್ನೂ ಪ್ರಾಣಗಳನ್ನೂ ನನಗೆ ಅರ್ಪಿಸಿ ಕೊಂಡಿರುವರೋ ಅಂತಹವರ ಕಾಮನೆಗಳು ಸಾಂಸಾರಿಕಭೋಗಗಳ ಕಡೆಗೆ ಇರುವುದಿಲ್ಲ. ಓಡಿನಲ್ಲಿ ಹುರಿಯಲ್ಪಟ್ಟ ಅಥವಾ ನೀರಿನಲ್ಲಿ ಕುದಿಸಲ್ಪಟ್ಟ ಬೀಜವು ಮೊಳೆಯದಂತೆ ನನ್ನಲ್ಲಿಡುವ ಅನುರಾಗವು ಪ್ರಾಪಂಚಿಕವಾದ ಸಕಲ ಕಾಮನೆಗಳನ್ನೂ ವಿನಾಶಗೊಳಿಸುವುದೇ ಹೊರತು ವೃದ್ಧಿಗೊಳಿಸುವುದಿಲ್ಲ.

ಕುಮಾರಿಯರೇ! ನೀವಿನ್ನು ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ. ನಿಮ್ಮ ಸಾಧನೆಯು ಸಿದ್ಧಿಸಿದೆ. ಮುಂದೆ ಬರಲಿರುವ ಶರದೃತುವಿನ ರಾತ್ರಿ ಯಲ್ಲಿ ನನ್ನೊಡನೆ ನೀವು ವಿಹರಿಸುವಿರಂತೆ. ಈ ಕಾರಣಕ್ಕಾಗಿಯೇ ಅಲ್ಲವೇ ನೀವು ವ್ರತನಿಷ್ಠರಾಗಿ ಕಾತ್ಯಾಯನೀದೇವಿಯನ್ನು ಪೂಜಿಸಿದ್ದುದು?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ತಮ್ಮ ಕಾಮನೆಗಳನ್ನು ಪೂರೈಸಿಕೊಂಡ ಗೋಪಕುಮಾರಿಯರು ತಮ್ಮ ಪ್ರೇಮಪುತ್ಥಳಿಯಾದ ಶ್ರೀಕೃಷ್ಣನ ಆಜ್ಞೆಯಂತೆ ಅವನ ದಿವ್ಯಪಾದಾರವಿಂದಗಳನ್ನೇ ಅಡಿಗಡಿಗೂ ಚಿಂತಿಸುತ್ತಾ ವ್ರಜಕ್ಕೆ ಹೋಗಲು ಇಷ್ಟವಿಲ್ಲದಿದ್ದರೂ ಬಹಳ ಕಷ್ಟದಿಂದ ಗೋಕುಲಕ್ಕೆ ಹಿಂದಿರುಗಿದರು.

ಮಹಾರಾಜ! ಹೀಗೆಯೇ ಇರುತ್ತಿರಲಾಗಿ ಒಂದು ದಿನ ಶ್ರೀಕೃಷ್ಣನು ಅಣ್ಣನಾದ ಬಲರಾಮನೊಡನೆಯೂ ಗೋಪಾಲಕರೊಡನೆಯೂ ಕೂಡಿ ಕೊಂಡು ಹಸುಗಳನ್ನು ಮೇಯಿಸುತ್ತಾ ವೃಂದಾವನದಿಂದ ಬಹಳ ದೂರಕ್ಕೆ ಹೋಗಿಬಿಟ್ಟನು. ಅದು ಗ್ರೀಷ್ಮಋತುವಾಗಿದ್ದು ಸೂರ್ಯನ ಕಿರಣವು ಅತ್ಯಂತತೀಕ್ಷ್ಣವಾಗಿದ್ದಿತು. ಆದರೆ ದಟ್ಟವಾಗಿದ್ದ ವೃಕ್ಷಗಳು ಶ್ರೀಕೃಷ್ಣನಿಗೆ ಛತ್ರಿಯಸೇವೆಯನ್ನು ಸಲ್ಲಿಸುತ್ತಿದ್ದುವು. ಕೊಡೆಗಳಂತೆ ತಮಗೆ ನೆಳಲನ್ನು ಒದಗಿಸುತ್ತಿದ್ದ ಅರಣ್ಯದ ವೃಕ್ಷಗಳನ್ನು ನೋಡಿ ಶ್ರೀಕೃಷ್ಣನು ತನ್ನ ಸಂಗಡಿಗರಾದ ಚಿಕ್ಕಕೃಷ್ಣ, ಅಂಶ, ಶ್ರೀದಾಮ, ಸುಬಲ, ಅರ್ಜುನ, ವಿಶಾಲ, ಋಷಭ, ತೇಜಸ್ವೀ, ದೇವಪ್ರಸ್ಥ, ವರೂಥಪ–ಇವರೇ ಮೊದಲಾದ ಗೋಪಬಾಲಕರಿಗೆ ಹೇಳಿದನು :

**ಪಶ್ಯತೈತಾನ್ಮಹಾಭಾಗಾನ್ ಪರಾರ್ಥೈಕಾನ್ತಜೀವಿತಾನ್ ।**
**ವಾತವರ್ಷಾತಪಹಿಮಾನ್ ಸಹನ್ತೋ ವಾರಯನ್ತಿ ನಃ ॥೩೨॥**

"ನನ್ನ ಪ್ರಿಯಮಿತ್ರರೇ! ಇದೋ ನೋಡಿರಿ! ಈ ವೃಕ್ಷಗಳು ಎಷ್ಟು ಭಾಗ್ಯಶಾಲಿಗಳೆಂಬುದನ್ನು! ಇವುಗಳ ಜೀವನವು ಕೇವಲ ಇತರರ ಸೇವೆ ಗಾಗಿಯೇ ಮೀಸಲಾಗಿದೆ. ಇವುಗಳು ತಮ್ಮ ಮೇಲೆ ಬೀಳುವ ಬಿಸಿಲನ್ನೂ,

ಮಳೆಯನ್ನೂ, ಹಿಮವನ್ನೂ, ಗಾಳಿಯನ್ನೂ ಸಹಿಸಿಕೊಂಡು ನಮ್ಮನ್ನು ಬಿಸಿಲಿನಿಂದ ರಕ್ಷಿಸುತ್ತಿವೆ.

**ಅಹೋ ಏಷಾಂ ವರಂ ಜನ್ಮ ಸರ್ವಪ್ರಾಣ್ಯುಪಜೀವನಮ್ ।**
**ಸುಜನಸ್ಯೇವ ಯೇಷಾಂ ವೈ ವಿಮುಖಾ ಯಾನ್ತಿ ನಾರ್ಥಿನಃ ॥೩೩॥**

ಈ ವೃಕ್ಷಗಳ ಜೀವನವು ಇತರ ಎಲ್ಲ ಪ್ರಾಣಿಗಳ ಜೀವನಕ್ಕಿಂತಲೂ ಶ್ರೇಷ್ಠವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ವೃಕ್ಷಗಳ ಮೂಲಕವಾಗಿ ಸಮಸ್ತಪ್ರಾಣಿಗಳಿಗೂ ಯಾವುದಾದರೊಂದು ರೀತಿಯಲ್ಲಿ ಉಪಕಾರವಾಗು ತ್ತಲೇ ಇರುತ್ತದೆ. ಸತ್ಪುರುಷರ ಮನೆಗೆ ಬಂದ ಯಾಚಕನು ಬರಿಗೈಯ್ಯಲ್ಲಿ ಹೋಗದಂತೆ ಈ ವೃಕ್ಷಗಳನ್ನು ಆಶ್ರಯಿಸಿಬಂದವನು ಯಾವುದಾದರೂ ಪ್ರಯೋಜನವನ್ನು ಪಡೆದುಕೊಂಡೇ ಹೋಗುತ್ತಾನೆ. ಈ ವೃಕ್ಷಗಳು ತಮ್ಮಲ್ಲಿರುವ ಎಲೆ-ಹೂವು-ಹಣ್ಣು-ನೆಳಲು-ಬೇರು-ನಾರು-ಮೇಣ- ಹಾಲು- ಇಜ್ಜಲು-ಮೊಳಕೆ-ಚಿಗುರುಗಳಿಂದ ಜನರ ಇಷ್ಟಾರ್ಥಗಳನ್ನು ನೆರವೇರಿಸಿ ಕೊಡುತ್ತವೆ.

ನನ್ನ ಪ್ರಿಯಮಿತ್ರರೇ! ಪ್ರಪಂಚದಲ್ಲಿ ಹಲವಾರು ಪ್ರಾಣಿಗಳಿವೆ. ಆದರೆ ಯಾವ ಪ್ರಾಣಿಯು ಧನದಿಂದ, ಬುದ್ಧಿಯಿಂದ, ವಿವೇಕವಾದ ಮಾತು ಗಳಿಂದ ಸಮಯಗಳಲ್ಲಿ ಪ್ರಾಣತೆತ್ತಾದರೂ ಇತರ ಪ್ರಾಣಿಗಳಿಗೆ ಶ್ರೇಯಸ್ಸ ನ್ನುಂಟುಮಾಡುವುದೋ ಅಂತಹ ಪ್ರಾಣಿಯ ಜೀವನವೇ ಸಾರ್ಥಕ್ಯವನ್ನು ಹೊಂದುತ್ತದೆ.”

ಮಹಾರಾಜ! ಹೀಗೆ ತನ್ನ ಗೆಳೆಯರಿಗೆ ಹೇಳುತ್ತಾ ಶ್ರೀಕೃಷ್ಣನು ಚಿಗುರುಗಳ, ಹೂವಿನ ಗೊಂಚಲುಗಳ ಮತ್ತು ಹಣ್ಣುಗಳ ಭಾರದಿಂದ ಬಗ್ಗಿದ ವೃಕ್ಷಗಳ ಮಧ್ಯದ ನೆಳಲಿನಲ್ಲಿ ಯಮುನಾನದಿಗೆ ಬಂದನು. ಯಮುನಾ ನದಿಯ ಜಲವು ಮಧುರವಾಗಿಯೂ ಶೀತಲವಾಗಿಯೂ ಸ್ವಚ್ಛವಾಗಿಯೂ ಇದ್ದಿತು. ಶ್ರೀಕೃಷ್ಣನೇ ಮೊದಲಾದ ಗೋಪಾಲರು ಪರಮಹೃಷ್ಟರಾಗಿ ಮೊದಲು ಗೋವುಗಳಿಗೆ ನೀರನ್ನು ಕುಡಿಸಿ ಅನಂತರ ತಾವೂ ಕೂಡ ಯಥೇಚ್ಛ ವಾಗಿ ನೀರನ್ನು ಕುಡಿದರು. ಬಳಿಕ ಗೋಪಾಲರು ಯಮುನಾನದಿಯ ತೀರದಲ್ಲಿದ್ದ ಉಪವನದಲ್ಲಿ ಹಸುಗಳನ್ನು ಸ್ವೇಚ್ಛೆಯಿಂದ ಮೇಯಿಸುತ್ತಿದ್ದರು.

ಹೊತ್ತುಮೀರಿದ್ದು ಹಸಿವಿನಿಂದ ಪೀಡಿತರಾಗಿದ್ದ ಗೋಪಾಲಕರು ರಾಮ-ಕೃಷ್ಣರ ಬಳಿಗೆ ಬಂದು ಹೇಳಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೨ನೆಯ ಅಧ್ಯಾಯವು ಮುಗಿಯಿತು.



## ಬ್ರಾಹ್ಮಣಪತ್ನಿಯರ ಮೇಲೆ ಶ್ರೀಕೃಷ್ಣನು ದಯೆತೋರಿದುದು

**ಗೋಪಾಲರು ಹೇಳುತ್ತಾರೆ :**

**ರಾಮ ರಾಮ ಮಹಾವೀರ್ಯ ಕೃಷ್ಣ ದುಷ್ಟನಿಬರ್ಹಣ ।**
**ಏಷಾ ವೈ ಬಾಧತೇ ಕ್ಷುನ್ನಸ್ತಚ್ಛಾನ್ತಿಂ ಕರ್ತುಮರ್ಹಥಃ ॥೧॥**

"ಮಹಾವೀರ್ಯನೇ! ನಯನಾಭಿರಾಮನೇ! ಬಲರಾಮ! ದುಷ್ಟ ದಮನನೇ! ಕೃಷ್ಣ! ನೀವು ಇದುವರೆಗಾಗಲೇ ಹಲವಾರು ದುಷ್ಟರನ್ನು ವಿನಾಶಗೊಳಿಸಿ ನಮ್ಮನ್ನು ಕಾಪಾಡಿರುವಿರಿ. ಇಂದು ಹಸಿವೆಂಬುದು ಆ ದುಷ್ಟ ರಂತೆಯೇ ನಮ್ಮನ್ನು ಬಹಳವಾಗಿ ಪೀಡಿಸುತ್ತಿದೆ. ದುಷ್ಟವಾದ ಹಸಿವನ್ನು ಶಾಂತಿಗೊಳಿಸಲು ನೀವಿಬ್ಬರೂ ಸೇರಿ ಯಾವುದಾದರೂ ಉಪಾಯವನ್ನು ಮಾಡಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಗೋಪಾಲರೆಲ್ಲರೂ ಸೇರಿ ಶ್ರೀಕೃಷ್ಣನನ್ನು ಹೀಗೆ ಪ್ರಾರ್ಥಿಸಲು ತನ್ನ ಭಕ್ತೆಯರಾದ ಬ್ರಾಹ್ಮಣೆಯರನ್ನು ಅನುಗ್ರಹಿಸುವ ಆಶಯದಿಂದ ಕೃಷ್ಣನು ತನ್ನ ಗೆಳೆಯರಿಗೆ ಹೇಳಿದನು :

"ನನ್ನ ನೆಚ್ಚಿನ ಗೆಳೆಯರೇ! ಇಲ್ಲಿಗೆ ಸ್ವಲ್ಪದೂರದಲ್ಲಿ ವೇದವಾದಿ ಗಳಾದ ಬ್ರಾಹ್ಮಣರು ಸ್ವರ್ಗದ ಕಾಮನೆಯಿಂದ* ಆಂಗಿರಸವೆಂಬ ಹೆಸರಿನ ಸತ್ರವನ್ನು ಮಾಡುತ್ತಿದ್ದಾರೆ. ನೀವು ಅವರ ಯಜ್ಞಶಾಲೆಗೆ ಹೋಗಿರಿ.

---

* ಯಜಮಾನರು-ಋತ್ವಿಜರು–ಎಂಬ ನಿರ್ಣಯವಿಲ್ಲದ ಬಹುಕರ್ತೃಕವಾದ ಯಾಗಕ್ಕೆ ಸತ್ರಯಾಗವೆಂದೂ ಇದೇ ಕ್ರಮದಿಂದ ಇಪ್ಪತ್ತುನಾಲ್ಕು ರಾತ್ರಿಗಳು ಮಾತ್ರ ನಡೆಯತಕ್ಕ ಯಾಗಕ್ಕೆ ಆಂಗಿರಸಸತ್ರವೆಂದೂ ಹೆಸರು. (ಸುಬೋಧಿನೀ)

ನಮ್ಮಿಂದ ಕಳುಹಿಸಲ್ಪಟ್ಟ ನೀವು ನಮ್ಮಣ್ಣನಾದ ಪೂಜ್ಯ ಬಲರಾಮನ ಮತ್ತು ನನ್ನ ಹೆಸರನ್ನು ಹೇಳಿ ಅನ್ನವನ್ನು ಅವರಿಂದ ಯಾಚಿಸಿ ತನ್ನಿರಿ."

ಪರೀಕ್ಷಿತ! ಭಗವಂತನು ಹೀಗೆ ಆಜ್ಞಾಪಿಸಲು ಗೋಪಾಲರು ಬ್ರಾಹ್ಮಣರ ಯಜ್ಞಶಾಲೆಗೆ ಹೋದರು ಮತ್ತು ಭಗವಂತನ ಆಜ್ಞಾನುಸಾರ ವಾಗಿ ಅವರಿಂದ ಅನ್ನವನ್ನು ಬೇಡಿದರು. ಅವರು ಮೊದಲು ಬ್ರಾಹ್ಮಣರಿಗೆ ದೀರ್ಘದಂಡನಮಸ್ಕಾರಮಾಡಿ ಬಳಿಕ ಕೈಗಳೆರಡನ್ನೂ ಜೋಡಿಸಿಕೊಂಡು ಬ್ರಾಹ್ಮಣರಿಗೆ ಹೇಳಿದರು :

"ಭೂದೇವತೆಗಳೇ! ನಿಮಗೆ ಮಂಗಳವಾಗಲಿ. ನಾವು ಗೊಲ್ಲರು. ಭಗವಂತನಾದ ಶ್ರೀಕೃಷ್ಣನ ಮತ್ತು ಪೂಜ್ಯನಾದ ಬಲರಾಮನ ಆಜ್ಞೆಯಂತೆ ಇಲ್ಲಿಗೆ ಬಂದಿರುತ್ತೇವೆ.

ನಮ್ಮ ಮಾತುಗಳನ್ನು ಕೇಳಿರಿ : ಬಲರಾಮ-ಕೃಷ್ಣರು ಇಲ್ಲಿಗೆ ಸ್ವಲ್ಪ ದೂರದಲ್ಲಿಯೇ ಹಸುಗಳನ್ನು ಮೇಯಿಸುತ್ತಿದ್ದಾರೆ. ಅವರು ಬಹಳವಾಗಿ ಹಸಿದಿರುವುದರಿಂದ ನಿಮ್ಮಿಂದ ಸ್ವಲ್ಪ ಅನ್ನವನ್ನು ಅಪೇಕ್ಷಿಸಿದ್ದಾರೆ. ಬ್ರಾಹ್ಮಣೋತ್ತಮರೇ! ನೀವೆಲ್ಲರೂ ಧರ್ಮದ ಮರ್ಮವನ್ನು ತಿಳಿದವರಾಗಿರು ವಿರಿ. ನಿಮಗೆ ಶ್ರದ್ಧೆಯಿರುವುದಾದರೆ ಭೋಜನಾರ್ಥಿಗಳಾಗಿರುವ ರಾಮ- ಕೃಷ್ಣರಿಗೆ ಸ್ವಲ್ಪ ಅನ್ನವನ್ನು ಕೊಡಿರಿ.

**ದೀಕ್ಷಾಯಾಃ ಪಶುಸಂಸ್ಥಾಯಾಃ ಸೌತ್ರಾಮಣ್ಯಾಶ್ಚ ಸತ್ತಮಾಃ ।**
**ಅನ್ಯತ್ರ ದೀಕ್ಷಿತಸ್ಯಾಪಿ ನಾನ್ನಮಶ್ನನ್ಹಿ ದುಷ್ಯತಿ ॥೮॥**

ಬ್ರಾಹ್ಮಣಶ್ರೇಷ್ಠರೇ! ಯಜ್ಞದೀಕ್ಷೆಯನ್ನು ವಹಿಸಿದನಂತರ ವಪಾ ಹೋಮವಾಗುವವರೆಗೂ ಅಗ್ನಿಷ್ಟೋಮಯಾಗದಲ್ಲಿಯೂ ಸೌತ್ರಾಮಣೀ ಯಾಗದಲ್ಲಿಯೂ ದೀಕ್ಷಿತಾನ್ನವು ನಿಷಿದ್ಧವೇ ಹೊರತು, ಸೌತ್ರಾಮಣಿಯನ್ನು ಬಿಟ್ಟು ಇತರ ಯಜ್ಞಗ್ಗಳಲ್ಲಿಯೂ, ವಪಾಹೋಮವಾದ ಬಳಿಕ ಅಗ್ನಿಷ್ಟೋಮ ದಲ್ಲಿಯೂ ದೀಕ್ಷಿತಾನ್ನವು ನಿಷಿದ್ಧವಲ್ಲ. ಆದುದರಿಂದ ಆಂಗಿರಸಸತ್ರದಲ್ಲಿನ ದೀಕ್ಷಿತಾನ್ನವು ಭೋಜನಕ್ಕೆ ನಿಷಿದ್ಧವಲ್ಲ."*

---

* ನ ದೀಕ್ಷಿತವಸನಂ ಪರಿದಧೀತ । ನಾಸ್ಯ ಪಾಪಂ ಕೀರ್ತಯೇತ್ । ನಾನ್ನಮಶ್ನೀ

ಪರೀಕ್ಷಿತನೇ! ಹೀಗೆ ಭಗವಂತನೇ ಅನ್ನಕ್ಕಾಗಿ ಪ್ರಾರ್ಥಿಸಿ ಗೋಪಾಲಕರನ್ನು ಕಳುಹಿಸಿದ್ದರೂ ಬ್ರಾಹ್ಮಣರು ಅವರ ಮಾತಿಗೆ ಲಕ್ಷ್ಯವನ್ನೇ ಕೊಡಲಿಲ್ಲ. ಸ್ವರ್ಗವೇ ಮೊದಲಾದ ತುಚ್ಛಫಲಗಳಿಗಾಗಿ ಶ್ರಮಸಾಧ್ಯವಾದ ಯಜ್ಞಕಾರ್ಯಗಳನ್ನು ಮಾಡುತ್ತಿದ್ದ ಅವರು ಮೂರ್ಖರಾದರೂ ಮಹಾಪಂಡಿತರೆಂದೂ ಜ್ಞಾನವೃದ್ಧರೆಂದೂ ತಮ್ಮನ್ನು ಭಾವಿಸಿಕೊಂಡು ಬಿಟ್ಟಿದ್ದರು.

ಪರೀಕ್ಷಿತ! ಯಜ್ಞಕ್ಕೆ ಸಾಮಗ್ರಿಗಳೆನಿಸಿದ ದೇಶ-ಕಾಲ-ಆಜ್ಯ-ಚರು-ಪುರೋಡಾಶಾದಿ ದ್ರವ್ಯಗಳೂ, ಮಂತ್ರ-ತಂತ್ರ-ಋತ್ವಿಜರು-ಗಾರ್ಹಪತ್ಯ-ಆಹವನೀಯ-ದಕ್ಷಿಣಾಗ್ನಿಗಳೆಂಬ ಅಗ್ನಿಗಳೂ, ಇಂದ್ರಾದಿದೇವತೆಗಳೂ, ಯಜಮಾನ-ಕ್ರತು-ಧರ್ಮ ಇವೆಲ್ಲವೂ ಕೃಷ್ಣಮಯವೇ ಆಗಿವೆ. ಅಂತಹ ಇಂದ್ರಿಯಾತೀತನಾದ, ಪರಬ್ರಹ್ಮಪರಮಾತ್ಮನಾದ, ಸಾಕ್ಷಾತ್ತಾಗಿಯೇ ಬಂದು ಬೇಡಿದ ಕೃಷ್ಣನನ್ನು ಬುದ್ಧಿಗೆಟ್ಟಿದ್ದ, ಮರಣಧರ್ಮವುಳ್ಳ ಆ ಬ್ರಾಹ್ಮಣರು ಮನುಷ್ಯಮಾತ್ರದವನೆಂದು ಭಾವಿಸಿಬಿಟ್ಟರು. ಇಷ್ಟುಮಾತ್ರವಲ್ಲ. ದೀರ್ಘದಂಡನಮಸ್ಕಾರಮಾಡಿ ಕೈಮುಗಿದು ಬೇಡಿಕೊಂಡ ಗೋಪಾಲರಿಗೆ 'ಓಂ' 'ಆಗಲಿ'–ಎಂಬ ಉತ್ತರವನ್ನಾಗಲಿ 'ನ' 'ಇಲ್ಲ'–ಎಂಬ ಉತ್ತರವನ್ನಾಗಲೀ ಕೊಡಲಿಲ್ಲ. ಅವರ ಮಾತಿಗೂ ತಮಗೂ ಸಂಬಂಧವೇ ಇಲ್ಲವೋ–ಎಂಬಂತೆ ಅಷ್ಟು ಒರಟಾಗಿ ಅವರು ವರ್ತಿಸಿಬಿಟ್ಟರು. ಇದರಿಂದ ಗೋಪಾಲಕರಿಗೆ ಸಹಜವಾಗಿಯೇ ಅತಿನಿರಾಶೆಯಾಯಿತು. ಹಿಂದಿರುಗಿ ಬಂದು ರಾಮ-ಕೃಷ್ಣರಿಗೆ ವರದಿಯನ್ನು ಒಪ್ಪಿಸಿಬಿಟ್ಟರು. ಸಮಸ್ತಜಗತ್ತಿಗೂ ಸ್ವಾಮಿಯಾದ ಶ್ರೀಕೃಷ್ಣನು ಅವರ ಮಾತುಗಳನ್ನು ಕೇಳಿ ನಕ್ಕುಬಿಟ್ಟನು. ಪುನಃ ಗೋಪರನ್ನು ಲೌಕಿಕವಾದ ರೀತಿಯಲ್ಲಿ ಸಮಾಧಾನಗೊಳಿಸುತ್ತಾ ಹೇಳಿದನು: "ಗೆಳೆಯರೇ! ಪ್ರಪಂಚದಲ್ಲಿ ಆಶೆಯ ಹಿಂದೆ ನಿರಾಶೆಯೆಂಬುದು ಬರುತ್ತಲೇ ಇರುತ್ತದೆ. ನಮ್ಮ ಪ್ರಯತ್ನಗಳೆಲ್ಲವೂ ಸಫಲವಾಗಿ ಬಿಡುವುದಿಲ್ಲ. ಆದರೂ ನಾವು ನಿರಾಶರಾಗಬಾರದು. ಪುನಃ ಪುನಃ ಫಲವು ಸಿಕ್ಕುವವರೆಗೂ ಪ್ರಯತ್ನಿಸುತ್ತಲೇ ಇರಬೇಕು. ಆದುದರಿಂದ ನೀವು ನಿರಾಶರಾಗದೆ ಈಗ

---

ಯಾತ್ । ದೀಕ್ಷಿತನ ವಸ್ತ್ರಗಳನ್ನು ಇತರರು ಧರಿಸಬಾರದು. ಅವನನ್ನು ನಿಂದಿಸಬಾರದು. ಅವನ ಅನ್ನವನ್ನು ತಿನ್ನಬಾರದು. (ಶ್ರೌತಸೂತ್ರ)

ಅವರ ಪತ್ನಿಯರ ಬಳಿಗೆ ಹೋಗಿರಿ. ನಾವಿಬ್ಬರೂ ಇಲ್ಲಿಗೆ ಬಂದಿರುವ ಸಮಾಚಾರವನ್ನು ಅವರಿಗೆ ಹೇಳಿರಿ. ಅವರು ನಿಮಗೆ ಬೇಕಾದಷ್ಟು ಅನ್ನವನ್ನು ನೀಡುತ್ತಾರೆ. ಅವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಾರೆ. ಆದುದರಿಂದ ನೀವೀಗಲೇ ಬ್ರಾಹ್ಮಣಪತ್ನಿಯರ ಬಳಿಗೆ ಹೋಗಿರಿ."

ಪರೀಕ್ಷಿತ! ಶ್ರೀಕೃಷ್ಣನ ಆಜ್ಞೆಯಂತೆ ಗೋಪಾಲರು ಪತ್ನೀಶಾಲೆಗೆ ಹೋದರು. ಅಲ್ಲಿ ಬ್ರಾಹ್ಮಣಪತ್ನಿಯರು ಸುಂದರವಾದ ವಸ್ತ್ರಗಳನ್ನುಟ್ಟು ಸರ್ವಾಲಂಕಾರಭೂಷಿತೆಯರಾಗಿ ಕುಳಿತಿರುವುದನ್ನು ಅವರು ನೋಡಿದರು. ಒಡನೆಯೇ ಅವರು ದ್ವಿಜಪತ್ನಿಯರಿಗೆ ನಮಸ್ಕರಿಸಿ ವಿನೀತರಾಗಿ ಈ ಮಾತನ್ನು ಹೇಳಿದರು :

"ಬ್ರಾಹ್ಮಣಪತ್ನಿಯರಾದ ನಿಮಗೆ ನಾವೆಲ್ಲರೂ ನಮಸ್ಕರಿಸುತ್ತೇವೆ. ನೀವು ದಯಮಾಡಿ ನಮ್ಮ ಈ ಮಾತನ್ನು ಕೇಳಿರಿ : ಇಲ್ಲಿಗೆ ಸ್ವಲ್ಪದೂರ ದಲ್ಲಿಯೇ ನಮ್ಮ ಸ್ವಾಮಿಯಾದ ಶ್ರೀಕೃಷ್ಣನಿದ್ದಾನೆ. ಅವನೇ ನಮ್ಮನ್ನು ನಿಮ್ಮಲ್ಲಿಗೆ ಕಳುಹಿಸಿರುತ್ತಾನೆ. ಶ್ರೀಕೃಷ್ಣನು ಬಲರಾಮನೊಡನೆಯೂ ನಮ್ಮೊಡನೆಯೂ ಕೂಡಿಕೊಂಡು ಹಸುಗಳನ್ನು ಮೇಯಿಸುತ್ತಾ ಗೋಕುಲ ದಿಂದ ಬಹಳ ದೂರಕ್ಕೆ ಬಂದುಬಿಟ್ಟಿದ್ದಾನೆ. ಈ ಸಮಯದಲ್ಲಿ ಅವನಿಗೂ ಹಸಿವಾಗಿದೆ. ಈಗ ನೀವು ನಮ್ಮೆಲ್ಲರಿಗೂ ದಯೆಯಿಟ್ಟು ಭೋಜನವನ್ನು ಮಾಡಿಸಿರಿ."

ಪರೀಕ್ಷಿತ! ಆ ಬ್ರಾಹ್ಮಣಪತ್ನಿಯರು ಬಹಳ ದಿವಸಗಳಿಂದಲೂ ಶ್ರೀಕೃಷ್ಣನ ಮನೋಹರವಾದ ಲೀಲಾಪ್ರಸಂಗಗಳನ್ನು ಕೇಳುತ್ತಲೇ ಇದ್ದರು. ಅವರ ಮನಸ್ಸೆಲ್ಲವೂ ಶ್ರೀಕೃಷ್ಣನಲ್ಲಿಯೇ ಲೀನವಾಗಿಬಿಟ್ಟಿದ್ದಿತು. ಶ್ರೀಕೃಷ್ಣನನ್ನು ಸಂದರ್ಶಿಸಬೇಕೆಂದು ಅವರು ಸದಾಕಾಲದಲ್ಲಿಯೂ ತವಕಿಸುತ್ತಿದ್ದರು. ಅಚ್ಯುತನು ತಮ್ಮ ಸಮೀಪಕ್ಕೆ ಬಂದಿರುವನೆಂಬ ಸಮಾಚಾರವು ತಿಳಿದೊಡ ನೆಯೇ ಅವರಿಗೆ ಸಂಭ್ರಮವೋ ಸಂಭ್ರಮ. ಒಡನೆಯೇ ದ್ವಿಜಪತ್ನಿಯರು ಪರಿಶುದ್ಧವಾದ ಪಾತ್ರೆಗಳಲ್ಲಿ ರುಚಿಕರವಾದ, ಹಿತಕರವಾದ ಮತ್ತು ಶುಚಿ ಯಾದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯಗಳೆಂಬ ನಾಲ್ಕು ವಿಧವಾದ ಭೋಜನಪದಾರ್ಥಗಳನ್ನು ತೆಗೆದುಕೊಂಡು—ನದಿಗಳು ಪತಿಯಾದ ಸಮುದ್ರ ರಾಜನ ಬಳಿಗೆ ಸರಸರನೆ ಹರಿದುಹೋಗುವಂತೆ—ಪರಮಪ್ರಿಯನಾದ ಶ್ರೀಕೃಷ್ಣ

ನನ್ನು ಕಾಣಲು ತವಕದಿಂದ ಹೊರಟೇಬಿಟ್ಟರು. ಅವರು ಹಾಗೆ ಅವಸರ ದಿಂದ ಹೊರಟುದನ್ನು ಕಂಡು ಅವರ ಗಂಡಂದಿರು, ಸಹೋದರರು, ಬಂಧುಗಳು ಮತ್ತು ಮಕ್ಕಳು ಅವರನ್ನು ತಡೆಯಲು ಹೋದರು. ಶ್ರೀಕೃಷ್ಣ ನಲ್ಲಿಯೇ ನೆಟ್ಟಮನಸ್ಸುಳ್ಳ ಅವರನ್ನು ಯಾರಿಂದಲೂ ತಡೆಯಲು ಸಾಧ್ಯ ವಾಗಲಿಲ್ಲ. ಹಲವಾರು ದಿವಸಗಳಿಂದ ಶ್ರೀಕೃಷ್ಣನ ಲೀಲೆಗಳು, ಸೌಂದರ್ಯ, ಗುಣ, ಮಾಧುರ್ಯ–ಇವುಗಳನ್ನು ಕೇಳುತ್ತಲೇ ಇದ್ದ ದ್ವಿಜಪತ್ನಿಯರು ತಮ್ಮನ್ನು ಶ್ರೀಕೃಷ್ಣನಿಗೇ ಅರ್ಪಿಸಿಕೊಂಡುಬಿಟ್ಟಿದ್ದರು. ಯಮುನಾನದಿಯ ತೀರದಲ್ಲಿ ಚಿಗುರುಗಳಿಂದ ಸಮಲಂಕೃತವಾದ ವೃಕ್ಷರಾಜಿಯಿಂದ ಕೂಡಿದ್ದ ಅಶೋಕವನದಲ್ಲಿ, ಗೋಪರಿಂದ ಸುತ್ತುವರಿಯಲ್ಪಟ್ಟು ಅಣ್ಣನಾದ ಬಲರಾಮನೊಡನೆ ಸಂಚರಿಸುತ್ತಿದ್ದ ಮನಮೋಹಕನಾದ ಶ್ರೀಕೃಷ್ಣನನ್ನು ಬ್ರಾಹ್ಮಣಪತ್ನಿಯರು ನೋಡಿದರು.

ಆ ಸಮಯದಲ್ಲಿ ಮೇಘಶ್ಯಾಮಲನಾದ ಶ್ರೀಕೃಷ್ಣನು ಪೀತಾಂಬರ ವನ್ನುಟ್ಟಿದ್ದನು. ಆತನ ಕತ್ತಿನಲ್ಲಿ ವನಮಾಲೆಯು ವಿರಾಜಿಸುತ್ತಿದ್ದಿತು. ತಲೆಯಲ್ಲಿ ನವಿಲುಗರಿಯ ಕಿರೀಟವಿದ್ದಿತು. ಮಣಿಶಿಲೆಯೇ ಮೊದಲಾದ ಧಾತುಗಳಿಂದ ಶರೀರದಲ್ಲಿ ಚಿತ್ರಿಸಿಕೊಂಡು, ಚಿಗುರೆಲೆಗಳ ಗುಚ್ಛದಿಂದ ಶರೀರವನ್ನು ಸಿಂಗರಿಸಿಕೊಂಡು ನಾಟಕದಲ್ಲಿ ನಟಿಸಲು ಹೊರಟಿರುವ ನಟ ನಂತೆಯೇ ಆತನು ಕಾಣುತ್ತಿದ್ದನು. ತನ್ನ ಒಂದು ಕೈಯ್ಯನ್ನು ಗೋಪಬಾಲಕನ ಹೆಗಲಮೇಲಿಟ್ಟಿದ್ದನು. ಮತ್ತೊಂದು ಕೈಯಿಂದ ಕಮಲಪುಷ್ಪದ ದಂಟನ್ನು ಹಿಡಿದು ಅದನ್ನು ಗರ-ಗರನೆ ತಿರುಗಿಸುತ್ತಿದ್ದನು. ಕಿವಿಗಳಲ್ಲಿ ಕಮಲಗಳೇ ಕುಂಡಲಗಳಾಗಿ ಧರಿಸಲ್ಪಟ್ಟಿದ್ದುವು. ಆತನ ಕೆನ್ನೆಗಳ ಮೇಲೆ ಮುಂಗುರುಳು ನಲಿದಾಡುತ್ತಿದ್ದಿತು. ಕಮಲಸದೃಶವಾದ ಮುದ್ದುಮುಖದಿಂದ ಚೇತೋ ಹಾರಿಯಾದ ಮಂದಹಾಸವನ್ನು ಬೀರುತ್ತಿದ್ದನು.

ಪರೀಕ್ಷಿತನೇ! ಈ ಮೊದಲು ಬ್ರಾಹ್ಮಣಪತ್ನಿಯರು ಶ್ಯಾಮಸುಂದರನ ಸುಮನೋಹರವಾದ ಲೀಲಾಪ್ರಸಂಗಗಳನ್ನು ಕಿವಿಗಳಿಂದ ಕೇಳಿ ತಮ್ಮ ತಮ್ಮ ಮನಸ್ಸನ್ನು ಅವನಲ್ಲಿಯೇ ಮುಳುಗಿಸಿಬಿಟ್ಟಿದ್ದರು. ಈಗಲಾದರೋ ಅವರು ತಮ್ಮ ವಿಶಾಲವಾದ ಕಣ್ಣುಗಳೆಂಬ ಹೆಬ್ಬಾಗಿಲುಗಳ ಮೂಲಕವಾಗಿ ಪ್ರೇಮ ಮೂರ್ತಿಯನ್ನು ಹೃತ್ಕಮಲದಲ್ಲಿ ಭದ್ರವಾಗಿರಿಸಿಕೊಂಡು, ಮನಸ್ಸು ತಣಿಯು

ವವರೆಗೂ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡಿದ್ದು, ತಮ್ಮ ಹೃದಯದ ವಿರಹತಾಪವನ್ನು ನೀಗಿಕೊಂಡರು. ಎಚ್ಚರ-ಕನಸುಗಳಲ್ಲಿ ಆಗುವ 'ನಾನು-ನನ್ನದು'–ಎಂಬ ಮನೋವೃತ್ತಿಗಳೆಲ್ಲವೂ ಗಾಢನಿದ್ರಾವಸ್ಥೆಯು ಬಂದ ನಂತರ ಸುಷುಪ್ತಿಗೆ ಸಾಕ್ಷಿಯಾದ ಪ್ರಾಜ್ಞನಲ್ಲಿ ಲಯವಾಗುವಂತೆ–ಬ್ರಾಹ್ಮಣ ಪತ್ನಿಯರು ಶ್ರೀಕೃಷ್ಣನಲ್ಲಿಯೇ ಲೀನರಾಗಿ ಸಂಸಾರದ ತಾಪವನ್ನು ಕಳೆದುಕೊಂಡರು.

ಪರೀಕ್ಷಿತನೇ! ಭಗವಂತನು ಸಮಸ್ತರ ಮನಸ್ಸಿನಲ್ಲಿರುವುದನ್ನೂ ತಿಳಿದಿರತಕ್ಕವನು. ಎಲ್ಲರ ಬುದ್ಧಿಗೂ ಭಗವಂತನು ಸಾಕ್ಷೀಭೂತನಾಗಿದ್ದಾನೆ. ಬ್ರಾಹ್ಮಣಪತ್ನಿಯರು ತಮ್ಮ ಪತಿ-ಪುತ್ರರನ್ನೂ, ಸಹೋದರರನ್ನೂ, ಬಂಧುಗಳನ್ನೂ ತೊರೆದು ವಿಷಯಸುಖಗಳನ್ನು ಪರಿತ್ಯಜಿಸಿ, ಕೇವಲ ತನ್ನ ದರ್ಶನಕ್ಕಾಗಿ ಬಂದಿರುವರೆಂಬುದನ್ನು ತಿಳಿದು ಶ್ರೀಕೃಷ್ಣಪರಮಾತ್ಮನು ನಗೆಮೊಗದಿಂದ ಬ್ರಾಹ್ಮಣಪತ್ನಿಯರಿಗೆ ಹೇಳಿದನು :

"ಮಹಾಭಾಗ್ಯವತಿಯರೇ! ನಿಮಗೆ ಸ್ವಾಗತಬಯಸುತ್ತೇನೆ. ಇತ್ತ ಬನ್ನಿರಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿರಿ. ನಾನು ನಿಮಗೆ ಯಾವ ಕಾರ್ಯವನ್ನು ಮಾಡಿಕೊಡಲಿ? ನೀವೆಲ್ಲರೂ ನನ್ನನ್ನು ಸಂದರ್ಶಿಸಬೇಕೆನ್ನುವ ಆಶಯದಿಂದ ಸರ್ವಸ್ವವನ್ನೂ ಪರಿತ್ಯಜಿಸಿ ಇಲ್ಲಿಗೆ ಬಂದಿರುವಿರಿ. ಪ್ರೇಮಪೂರ್ಣಹೃದಯಿಗಳಾಗಿರುವ ನಿಮಗೆ ಇದು ಅನುರೂಪವಾಗಿಯೇ ಇದೆ.

ಆತ್ಮೋನ್ನತಿಯು ಹೇಗೆಂದು ತಿಳಿದಿರುವ ವಿವೇಕಿಗಳು ಸಕಲರ ಆತ್ಮಸ್ವರೂಪನೂ ಮತ್ತು ಸಕಲರಿಗೂ ಅತ್ಯಂತಪ್ರಿಯನೂ ಆದ ನನ್ನಲ್ಲಿ ಫಲಾಭಿಸಂಧಿಯಿಲ್ಲದ ನಿರಂತರವಾದ ಭಕ್ತಿಭಾವವನ್ನು ಇಟ್ಟುಕೊಂಡಿರುತ್ತಾರೆ. ಪ್ರಾಣ, ಬುದ್ಧಿ, ಮನಸ್ಸು, ಶರೀರ, ಸ್ವಜನ, ಸ್ತ್ರೀ, ಪುತ್ರ, ಧನ, ಸಂಪತ್ತು–ಇವೆಲ್ಲವೂ ಯಾರ ಸಂಪರ್ಕದಿಂದ ಪ್ರಿಯವಾಗಿ ಕಾಣುವುವೋ ಅಂತಹ ಆತ್ಮಕ್ಕಿಂತಲೂ, ಪರಮಾತ್ಮನಿಗಿಂತಲೂ, ಆತ್ಮ-ಪರಮಾತ್ಮ ಸ್ವರೂಪನಾದ ನನಗಿಂತಲೂ (ಶ್ರೀಕೃಷ್ಣನಿಗಿಂತಲೂ) ಪ್ರಿಯತಮರು ಬೇರೆ ಯಾರಿದ್ದಾರೆ?*

---

* ನವಾ ಆರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ ।
ಆತ್ಮನಸ್ತು ಕಾಮಾಯ ಸರ್ವಮಿದಂ ಪ್ರಿಯಂ ಭವತಿ ।

( ಬೃಹದಾರಣ್ಯಕೋಪನಿಷತ್ತು )

ಆದುದರಿಂದ ನನ್ನನ್ನು ಸಂದರ್ಶಿಸಲು ನೀವು ಬಂದಿರುವುದು ಯೋಗ್ಯವಾಗಿಯೇ ಇದೆ. ನಾನು ನಿಮ್ಮನ್ನು ಶ್ಲಾಘಿಸುತ್ತೇನೆ. ನೀವು ನನ್ನನ್ನು ಮನಃಪೂರ್ತಿಯಾಗಿ ಸಂದರ್ಶಿಸಿರುವಿರಿ. ಇನ್ನು ನೀವು ಯಜ್ಞಶಾಲೆಗೆ ಹೋಗಿರಿ. ಏಕೆಂದರೆ : ನಿಮ್ಮ ಬ್ರಾಹ್ಮಣಪತಿಗಳು ನಿಮ್ಮನ್ನು ಕೂಡಿಕೊಂಡೇ ತಾವು ಪ್ರಾರಂಭಿಸಿರುವ ಯಜ್ಞವನ್ನು ಪೂರ್ಣಗೊಳಿಸಬೇಕಾಗಿದೆ. ನಿಮ್ಮನ್ನು ಬಿಟ್ಟು ಅವರು ಯಜ್ಞವನ್ನು ಪೂರ್ಣಗೊಳಿಸುವಂತಿಲ್ಲ."

ಬ್ರಾಹ್ಮಣಪತ್ನಿಯರು ಹೇಳುತ್ತಾರೆ :

"ಶ್ಯಾಮಸುಂದರನೇ! ವಿಭುವೇ! ಇಷ್ಟು ನಿಷ್ಠುರವಾದ ಮಾತುಗಳನ್ನಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ಭಗವಂತನನ್ನು ಕಂಡುಕೊಂಡವನು ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲವೆಂದು ಶ್ರುತಿಗಳು ಸಾರುತ್ತವೆ. ಆ ನಿನ್ನ ಶ್ರುತಿವಾಕ್ಯವನ್ನು ಸತ್ಯವನ್ನಾಗಿ ಮಾಡು. ನಿನ್ನ ಪಾದಗಳನ್ನು ಶಿರಸ್ಸಿನಲ್ಲಿ ಧರಿಸಬೇಕೆಂಬ ಆಶಯದಿಂದ, ನಿನ್ನ ಪಾದ ಕಮಲಗಳನ್ನು ಅಲಂಕರಿಸಿರುವ ತುಳಸೀಮಾಲೆಯನ್ನು ನಮ್ಮ ಶಿರಸ್ಸಿನಲ್ಲಿ ಧರಿಸಬೇಕೆಂಬ ಆಶಯದಿಂದ, ನಿನ್ನ ಪಾದಮೂಲವನ್ನೇ ಪರಮಾಶ್ರಯ ವನ್ನಾಗಿ ಮಾಡಿಕೊಂಡು ಪತಿ-ಪುತ್ರ-ಸಹೋದರರ, ಜ್ಞಾತಿಗಳ ಮಾತು ಗಳನ್ನೂ ಮೀರಿ ಇಲ್ಲಿಗೆ ಬಂದಿರುತ್ತೇವೆ.

ಸ್ವಾಮಿಯೇ! ಈಗ ನಾವು ಹಿಂದಿರುಗಿಹೋದರೆ ನಮ್ಮ ಪತಿ-ಪುತ್ರರಾಗಲೀ, ತಾಯಿ-ತಂದೆಗಳಾಗಲೀ, ಸಹೋದರ-ಸಹೋದರಿಯರಾಗಲೀ, ಸ್ವಜನ-ಸಂಬಂಧಿಗಳಾಗಲೀ, ಜ್ಞಾತಿಗಳಾಗಲೀ ನಮ್ಮನ್ನು ಹತ್ತಿರಕ್ಕೂ ಸೇರಿಸುವುದಿಲ್ಲ. ಬಂಧುಗಳೇ ಹೀಗಾದ ಮೇಲೆ ಬೇರೆಯವರ ವಿಷಯವಾಗಿ ಹೇಳುವುದೇನಿದೆ? ನಮಗೆ ಬೇರೆಲ್ಲೂ ಆಶ್ರಯ ಸಿಕ್ಕದೆಂಬುದು ನಿಶ್ಚಯ. ಆದುದರಿಂದ ನಿನ್ನ ಚರಣಾರವಿಂದಗಳಲ್ಲಿ ಅನನ್ಯ ಗತಿಕರಾಗಿ ಬಿದ್ದುಬಿಟ್ಟಿದ್ದೇವೆ. ದೇವದೇವನ ದರ್ಶನವಾದನಂತರ ಬೇರೆ ಯವರ ಆಶ್ರಯವನ್ನು ಪಡೆಯದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು ಭಕ್ತಪ್ರಿಯನಾದ ನಿನ್ನ ಕರ್ತವ್ಯವಾಗಿದೆ."

---

ಸರ್ವವೂ ಪರಮಾತ್ಮನ ಕಾಮಕ್ಕಾಗಿ ಪ್ರಿಯವೆನಿಸುವುದು. (ವೀರರಾಘವೀಯ)

ಭಗವಂತನು ಹೇಳುತ್ತಾನೆ :

“ಬ್ರಾಹ್ಮಣಪತ್ನಿಯರೇ! ನಿಮ್ಮ ಪತಿ-ಪುತ್ರರಾಗಲೀ, ತಂದೆ-ತಾಯಿಗಳಾಗಲೀ, ಸಹೋದರ-ಸಹೋದರಿಯರಾಗಲೀ ಖಂಡಿತವಾಗಿಯೂ ನಿಮ್ಮಲ್ಲಿ ದೋಷವೆಣಿಸುವುದಿಲ್ಲ. ಕೇವಲ ಅವರು ಮಾತ್ರವಲ್ಲ, ಪ್ರಪಂಚವೇ ನಿಮ್ಮನ್ನು ಸಮ್ಮಾನಿಸುತ್ತದೆ. ಇದಕ್ಕೆ ಕಾರಣವಿಷ್ಟೆ : ಈಗ ನೀವು ನನ್ನವರಾಗಿಬಿಟ್ಟಿರುವಿರಿ. ದೇವತೆಗಳೂ ನನ್ನ ಈ ಮಾತನ್ನು ಅನುಮೋದಿಸುತ್ತಿದ್ದಾರೆ. ದೇವಿಯರೇ! ಈ ಪ್ರಪಂಚದಲ್ಲಿ ಮನುಷ್ಯರಲ್ಲಿ ಪರಸ್ಪರವಾದ ಪ್ರೀತಿ-ಅನುರಾಗಗಳಿಗೆ ಕೇವಲ ಅಂಗಸಂಗವೇ ಕಾರಣವಾಗುವುದಿಲ್ಲ. ಆದುದರಿಂದ ನನ್ನ ಮಾತಿನಂತೆ ನೀವೀಗಲೇ ಯಜ್ಞಶಾಲೆಗೆ ಹೋಗಿರಿ. ಎಲ್ಲೇ ಇದ್ದರೂ ನಿಮ್ಮ ಮನಸ್ಸನ್ನು ಮಾತ್ರ ನನ್ನಲ್ಲಿಯೇ ನೆಲೆಗೊಳಿಸಿರಿ. ಹೀಗೆ ಮಾಡುವುದ ರಿಂದ ಬಹಳ ಶೀಘ್ರವಾಗಿಯೇ ನನ್ನನ್ನು ಸೇರುವಿರಿ.”




ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಭಗವಂತನು ಹೀಗೆ ಹೇಳಲು ಭಗವದ್ಭಕ್ತೆಯರಾಗಿದ್ದ ಬ್ರಾಹ್ಮಣಪತ್ನಿಯರು ಸ್ವಾಮಿಯ ಆಜ್ಞೆಯಂತೆ ಯಜ್ಞಶಾಲೆಗೆ ಹಿಂದಿರುಗಿದರು. ಶ್ರೀಕೃಷ್ಣನು ಹೇಳಿದ್ದಂತೆ ಬ್ರಾಹ್ಮಣರು ತಮ್ಮ ಪತ್ನಿಯರಲ್ಲಿ ಯಾವ ವಿಧವಾದ ದೋಷವನ್ನೂ ಕಾಣಲಿಲ್ಲ. ಅವರೊಡನೆ ಸೇರಿಕೊಂಡು ಯಜ್ಞಕ್ರಿಯೆಯನ್ನು ಪೂರ್ಣಗೊಳಿಸಿದರು.

ಮತ್ತೊಂದು ವಿಚಿತ್ರವು ನಡೆಯಿತು, ಮಹಾರಾಜ! ಬ್ರಾಹ್ಮಣರ ಪತ್ನಿಯರಲ್ಲಿ ಒಬ್ಬಳಿಗೆ ಮಾತ್ರ ಶ್ರೀಕೃಷ್ಣನ ಬಳಿಗೆ ಹೋಗಲಾಗಲಿಲ್ಲ. ಅವಳ ಪತಿಯು ಅವಳನ್ನು ಬಲಾತ್ಕಾರವಾಗಿ ಹಿಡಿದಿಟ್ಟಿದ್ದನು. ಆಗ ಅವಳು ಶ್ರೀಕೃಷ್ಣನ ಲೀಲಾಪ್ರಸಂಗದಲ್ಲಿ ಕೇಳಿದ್ದ ಶ್ರೀಕೃಷ್ಣಮೂರ್ತಿಯನ್ನೇ ಹೃದಯದಲ್ಲಿರಿಸಿ ಕೊಂಡು, ಅವನ ಧ್ಯಾನವನ್ನೇ ಸದಾಕಾಲದಲ್ಲಿಯೂ ಮಾಡುತ್ತಾ ಕರ್ಮಕ್ಕೆ ಸಂಬಂಧಿಸಿದ್ದ ದೇಹವನ್ನು ತೊರೆದು, ಶುದ್ಧಸತ್ತ್ವಮಯವಾದ ದಿವ್ಯದೇಹವನ್ನು ಧರಿಸಿ ಭಗವಂತನಲ್ಲಿ ಸೇರಿಕೊಂಡಳು.

ಇತ್ತಲಾಗಿ ಶ್ರೀಕೃಷ್ಣನು, ಬ್ರಾಹ್ಮಣಪತ್ನಿಯರು ತಂದಿದ್ದ ನಾಲ್ಕು ವಿಧವಾದ ಅನ್ನವನ್ನು ಮೊದಲು ಗೋಪಾಲರಿಗೆ ಬಡಿಸಿ ಅವರು ಭುಂಜಿಸಿ ತೃಪ್ತರಾದನಂತರ ತಾನೂ ಭೋಜನಮಾಡಿದನು. ಪರೀಕ್ಷಿತನೇ! ಹೀಗೆ ಲೀಲಾಮಾನುಷವಿಗ್ರಹನಾದ ಶ್ರೀಕೃಷ್ಣನು ಮಾನವರಂತೆಯೇ ವರ್ತಿಸು ತ್ತಿದ್ದನು. ತನ್ನ ಸೌಂದರ್ಯ, ಮಾಧುರ್ಯ, ವಾಣಿ ಮತ್ತು ಕರ್ಮಗಳಿಂದ ಗೋವುಗಳನ್ನೂ, ಗೋಪಾಲರನ್ನೂ ಮತ್ತು ಗೋಪಿಯರನ್ನೂ ಆನಂದ ಗೊಳಿಸುತ್ತಾ ತಾನೂ ಕೂಡ ಅವರ ಅಲೌಕಿಕವಾದ ಪ್ರೇಮರಸವನ್ನು ಆಸ್ವಾದಿ ಸುತ್ತಾ ಆನಂದತುಂದಿಲನಾಗಿದ್ದನು.

ಇತ್ತಲಾಗಿ ಬ್ರಾಹ್ಮಣರಿಗೆ ಶ್ರೀಕೃಷ್ಣನು ಸಾಕ್ಷಾತ್ ಭಗವಂತನೇ–ಎಂಬ ವಿಷಯವು ತಿಳಿದು ಅವರು ಬಹಳವಾಗಿ ಪಶ್ಚಾತ್ತಾಪಪಟ್ಟರು. ಭಗವಾನ್ ಶ್ರೀಕೃಷ್ಣನ ಮತ್ತು ಬಲರಾಮನ ಆಜ್ಞೆಯನ್ನು ಉಲ್ಲಂಘಿಸಿ ತಾವು ಮಹಾಪರಾಧಮಾಡಿರುವುದಾಗಿ ಭಾವಿಸಿಕೊಂಡರು. ಮನುಷ್ಯರಂತೆ ಲೀಲೆ ಗಳನ್ನು ತೋರುತ್ತಿದ್ದರೂ ಅವರು ಪರಮಾತ್ಮನ ಸ್ವರೂಪವೆಂಬುದನ್ನು ಮನಗಂಡರು. ತಮ್ಮ ಪತ್ನಿಯರಿಗೆ ಶ್ರೀಕೃಷ್ಣನಲ್ಲಿ ಅಲೌಕಿಕವಾದ ಭಕ್ತಿ ಯಿರುವುದನ್ನು ನೋಡಿ ತಾವು ಅಂತಹ ಭಗವದ್ಭಕ್ತಿಯಿಂದ ಹೀನರಾಗಿರುವು ದಕ್ಕಾಗಿ ಪಶ್ಚಾತಾಪಪಟ್ಟುದಲ್ಲದೆ ತಮ್ಮನ್ನೇ ತಾವು ನಿಂದಿಸಿಕೊಂಡರು.

**ಧಿಗ್ಜನ್ಮ ನಸ್ತ್ರಿವೃದ್ವಿದ್ಯಾಂ ಧಿಗ್ವ್ರತಂ ಧಿಗ್ಬಹುಜ್ಞತಾಮ್ ।**
**ಧಿಕ್ಕುಲಂ ಧಿಕ್ ಕ್ರಿಯಾದಾಕ್ಷ್ಯಂ ವಿಮುಖಾ ಯೇ ತ್ವಧೋಕ್ಷಜೇ ॥**

"ಅಧೋಕ್ಷಜನಿಂದ ವಿಮುಖರಾಗಿರುವ ನಮಗೆ ಧಿಕ್ಕಾರವಿರಲಿ.

ನಮ್ಮ ಬ್ರಾಹ್ಮಣಜನ್ಮಕ್ಕೆ ಧಿಕ್ಕಾರವಿರಲಿ. ನಾವು ಅಧ್ಯಯನಮಾಡಿರುವ ವೇದವಿದ್ಯೆಗೆ ಧಿಕ್ಕಾರವಿರಲಿ. ನಾವು ಕೈಗೊಂಡಿರುವ ವ್ರತಕ್ಕೆ ಧಿಕ್ಕಾರವಿರಲಿ. ನಾವು ಪಡೆದುಕೊಂಡಿರುವ ಅಧಿಕಜ್ಞಾನಕ್ಕೂ ಧಿಕ್ಕಾರವಿರಲಿ. ನಾವು ಹುಟ್ಟಿರುವ ಕುಲಕ್ಕೂ ಧಿಕ್ಕಾರವಿರಲಿ. ನಮ್ಮ ಕರ್ಮಸಾಮರ್ಥ್ಯಕ್ಕೂ ಧಿಕ್ಕಾರವಿರಲಿ. ಇವುಗಳಲ್ಲಿ ಯಾವುದೂ ಕೂಡ ನಮ್ಮನ್ನು ಭಗವದ್ಭಕ್ತರನ್ನಾಗಿ ಮಾಡಲಿಲ್ಲ. ಪರಾತ್ಪರನಾದ ಪರಮಾತ್ಮನೇ ಹೇಳಿಕಳುಹಿಸಿದರೂ ಅವನು ಪರಮಾತ್ಮನೆಂಬ ಅರಿವನ್ನು ಇವುಗಳಲ್ಲಿ ಯಾವುದೂ ಮೂಡಿಸಲಿಲ್ಲ. ನಿಶ್ಚಯವಾಗಿಯೂ ಭಗವಂತನ ಯೋಗಮಾಯೆಯು ಮಹಾಮಹಾ ಯೋಗಿಗಳನ್ನೂ ವಿಮೋಹಗೊಳಿಸುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಬ್ರಾಹ್ಮಣರಾದ ನಾವು ಸಕಲರಿಗೂ ಜ್ಞಾನದಾಯಕರಾದ ಗುರುಗಳೆನಿಸಿ ಕೊಂಡಿದ್ದೇವೆ. ಆದರೆ ಸ್ವಾರ್ಥಸಾಧನೆಯಲ್ಲಿಯೇ ಇರುತ್ತಾ ನಾವು ಮೂಢ ರಾಗಿಬಿಟ್ಟೆವು. ಸತ್ಯವನ್ನು ಮರೆತೆವು. ಎಂತಹ ಅಚ್ಚರಿ! ಜಗದ್ಗುರುವಾದ ಶ್ರೀಕೃಷ್ಣನಲ್ಲಿ ಈ ಸ್ತ್ರೀಯರಿಗಿರುವ ಅಪಾರವಾದ ಭಕ್ತಿಯನ್ನಾದರೂ ನೋಡಿರಿ. ಅವರ ಪರಾಭಕ್ತಿಯು ಗೃಹವೆಂಬ ಹೆಸರುಳ್ಳ ಯಮನ ಪಾಶಗಳನ್ನು ಕತ್ತರಿಸಿಹಾಕಿಬಿಟ್ಟಿತು.

**ನಾಸಾಂ ದ್ವಿಜಾತಿಸಂಸ್ಕಾರೋ ನ ನಿವಾಸೋ ಗುರಾವಪಿ ।**
**ನ ತಪೋ ನಾತ್ಮಮೀಮಾಂಸಾ ನ ಶೌಚಂ ನ ಕ್ರಿಯಾಃ ಶುಭಾಃ ॥೪೨॥**

ಇವರಿಗೆ ಪುರುಷರಂತೆ ದ್ವಿಜಾತಿಯೋಗ್ಯವಾದ ಉಪನಯನಾದಿ ಸಂಸ್ಕಾರಗಳಾಗಿಲ್ಲ. ಇವರು ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಹೋಗಿಲ್ಲ. ಯಾವುದೇ ವಿಧವಾದ ತಪಸ್ಸನ್ನೂ ಇವರು ಮಾಡಿರುವುದಿಲ್ಲ. ಆತ್ಮನ ಸಂಬಂಧವಾಗಿ ಯಾವುದೇ ವಿಧವಾದ ಆತ್ಮಾನಾತ್ಮವಿವೇಚನೆಯನ್ನೂ ಮಾಡಿದವರಲ್ಲ. ಅಷ್ಟೇನೂ ಪರಿಶುದ್ಧರಾಗಿಯೂ ಇರಲಿಲ್ಲ. ಯಾವಾಗಲೂ ಶುಭಕರ್ಮಗಳನ್ನೇ ಮಾಡುತ್ತಿದ್ದರೆಂದೂ ಹೇಳುವಂತಿರಲಿಲ್ಲ. ಆದರೂ ಸಮಸ್ತಯೋಗೇಶ್ವರರಿಗೂ ಈಶ್ವರನಾದ, ಪುಣ್ಯಶ್ಲೋಕನಾದ ಶ್ರೀಕೃಷ್ಣನಲ್ಲಿ ಇವರಿಗೆ ದೃಢವಾದ ಭಕ್ತಿಯಿದೆ. ನಮಗಾದರೋ ಉಪನಯನಾದಿ ಸಂಸ್ಕಾರ ಗಳಾಗಿವೆ. ಗುರುಕುಲದಲ್ಲಿದ್ದು ವೇದಶಾಸ್ತ್ರಗಳನ್ನು ಅಧ್ಯಯನಮಾಡಿದ್ದೇವೆ. ತಪಸ್ಸು ಮಾಡಿದ್ದೇವೆ. ಯಜ್ಞಗಳನ್ನು ಮಾಡಿದ್ದೇವೆ. ವೇದಾಂತವಿಚಾರ

ವನ್ನು ಅನುದಿನವೂ ಚರ್ಚಿಸುತ್ತಲೇ ಇದ್ದೇವೆ. ಹಲವಾರು ಶುಭಕಾರ್ಯಗಳನ್ನು ಮಾಡುತ್ತಿದ್ದೇವೆ. ಆಚಾರವಂತರಾಗಿದ್ದೇವೆ. ಪವಿತ್ರರಾಗಿದ್ದೇವೆ. ಆದರೆ ಮುಖ್ಯವಾಗಿ ಇರಬೇಕಾಗಿದ್ದ ಭಗವದ್ಭಕ್ತಿಯು ನಮಗಿಲ್ಲವಾಗಿದೆ. ಸಂಸಾರದ ಮೇಲಿನ ವಿಶೇಷವಾದ ಆಸಕ್ತಿಯಿಂದಾಗಿ ನಾವು ಪ್ರಮತ್ತರಾಗಿದ್ದೆವು. ನಮ್ಮ ಕಲ್ಯಾಣವನ್ನು ಅರಿಯುವುದರಲ್ಲಿ ನಾವು ಮೂಢರಾಗಿಬಿಟ್ಟೆವು. ಸತ್ಪುರುಷರಿಗೆ ಪರಮಾಶ್ರಯನಾದ ಸ್ವಾಮಿಯು ಗೊಲ್ಲರ ಮಾತಿನ ಮೂಲಕ ನಮ್ಮನ್ನು ಎಚ್ಚರಿಸಿದನು. ಆದರೂ ನಾವು ಅಹಂಕಾರದ ಕಾರಣದಿಂದಾಗಿ ಎಚ್ಚೆತ್ತುಕೊಳ್ಳಲಿಲ್ಲ. ಭಗವಂತನು ಪೂರ್ಣಕಾಮನು. ಅವನಿಗೆ ಯಾವ ಕಾಮನೆಗಳೂ ಇಲ್ಲ. ಕೈವಲ್ಯ-ಮೋಕ್ಷಪರ್ಯಂತವಾಗಿ ಎಷ್ಟು ಕಾಮನೆಗಳಿವೆಯೋ ಅಷ್ಟು ಕಾಮನೆಗಳನ್ನೂ ಭಕ್ತರಿಗೆ ಅನುಗ್ರಹಿಸಿಕೊಡುವ ಸಾಮರ್ಥ್ಯವಿರುವವನು. ಆದುದರಿಂದ ಪರಮಾತ್ಮನು ನಮ್ಮನ್ನು ಎಚ್ಚರಿಸಲು ಗೊಲ್ಲರ ಮೂಲಕ ಅನ್ನಕ್ಕಾಗಿ ಹೇಳಿ ಕಳುಹಿಸಿದನೇ ಹೊರತು ನಮ್ಮಂತಹ ಕ್ಷುದ್ರಮನುಷ್ಯರನ್ನು ಬೇಡುವ ಕಾರಣವಾದರೂ ಏನಿದೆ? ಅನ್ನದ ಯಾಚನೆಯೆಂಬುದು ಲೋಕೇಶ್ವರನ ಒಂದು ನಟನೆಯೇ ಸರಿ. ಸ್ವಯಂ ಲಕ್ಷ್ಮೀದೇವಿಯು ಇತರ ಎಲ್ಲ ದೇವತೆಗಳನ್ನೂ, ಚಂಚಲತೆ-ಗರ್ವ ಇತ್ಯಾದಿ ದೋಷಗಳನ್ನೂ ಪರಿತ್ಯಜಿಸಿ ಒಂದು ಬಾರಿಯಾದರೂ ಮುಕುಂದನ ಪಾದಗಳನ್ನು ಸ್ಪರ್ಶಿಸುವ ಆಶಯದಿಂದ ನಿರಂತರವಾಗಿ ಸೇವೆಯನ್ನು ಮಾಡುತ್ತಲೇ ಇರುತ್ತಾಳೆ. ಹೀಗಿರುವಾಗ ಅವನೇ ಭೋಜನದ ಯಾಚನೆಯನ್ನು ಮಾಡಿದನೆಂಬುದು ಜನಗಳನ್ನು ವಿಮೋಹಗೊಳಿಸುವ ನಟನೆಯಲ್ಲವೇ? ದೇಶ, ಕಾಲ, ಪ್ರತ್ಯೇಕ-ಪ್ರತ್ಯೇಕವಾದ ಯಜ್ಞಸಾಮಗ್ರಿಗಳು, ಮಂತ್ರ-ತಂತ್ರಗಳು, ಋತ್ವಿಜರು, ಅಗ್ನಿ, ದೇವತೆ, ಯಜಮಾನ, ಯಜ್ಞ ಮತ್ತು ಧರ್ಮ ಇವೆಲ್ಲವೂ ಭಗವಂತನ ಸ್ವರೂಪಗಳೇ ಆಗಿವೆ. ಯೋಗೇಶ್ವರರಿಗೂ ಈಶ್ವರನಾದ ಸಾಕ್ಷಾತ್ ವಿಷ್ಣುಪರಮಾತ್ಮನೇ ಯದುಕುಲದಲ್ಲಿ ಶ್ರೀಕೃಷ್ಣನಾಗಿ ಅವತರಿಸಿರುವನೆಂಬ ವಿಷಯವನ್ನು ನಾವು ಕೇಳಿದ್ದೆವು. ಅಂತಹ ಪರಮಾತ್ಮನೇ ಗೊಲ್ಲರ ಮೂಲಕವಾಗಿ ಎಚ್ಚರಿಸಿದರೂ ಅವನನ್ನು ಅರಿತುಕೊಳ್ಳಲಾರದಷ್ಟು ನಾವು ಮೂಢರಾಗಿಬಿಟ್ಟೆವು. ಆದರೆ ನಾವು ಇಷ್ಟಕ್ಕಾದರೂ ಸಂತೋಷಪಟ್ಟುಕೊಳ್ಳಬೇಕು. ಭಗವದ್ಭಕ್ತಿಸಂಪನ್ನೆಯರಾದ ಪತ್ನಿಯ

ರನ್ನು ಹೊಂದಿರುವುದು ನಮ್ಮ ಸೌಭಾಗ್ಯವೇ ಸರಿ. ನಾವು ಇದರಿಂದ ಧನ್ಯತಮರಾಗಿದ್ದೇವೆ. ಭಗವಂತನಲ್ಲಿ ಅವರಿಗಿರುವ ಭಕ್ತಿಭಾವದ ಪ್ರಭಾವ ದಿಂದಾಗಿ ನಮ್ಮಲ್ಲಿಯೂ ಸುನಿಶ್ಚಲವಾದ ಹರಿಭಕ್ತಿಯು ಮೂಡಿಬಂದಿದೆ.

**ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಣ್ಠಮೇಧಸೇ ।**
**ಯನ್ಮಾಯಾಮೋಹಿತಧಿಯೋ ಭ್ರಮಾಮಃ ಕರ್ಮವರ್ತ್ಮಸು ॥೫೦॥**

ಅಕುಂಠಿತವಾದ ಮೇಧಾಶಕ್ತಿಯುಳ್ಳ, ಅಚಿಂತ್ಯನೂ, ಅನಂತವಾದ ಐಶ್ವರ್ಯಕ್ಕೆ ಸ್ವಾಮಿಯೂ ಆಗಿರುವ ನಿನಗೆ ನಮಸ್ಕರಿಸುತ್ತೇವೆ. ನಿನ್ನ ಮಾಯೆಯಿಂದಲೇ ನಮ್ಮ ಬುದ್ಧಿಯು ಮೋಹಗೊಂಡಿದೆ. ಕರ್ಮಮಾರ್ಗ ದಲ್ಲಿ ಅಲೆದಾಡುತ್ತಿದ್ದೇವೆ. ನಮ್ಮನ್ನು ಸಂರಕ್ಷಿಸು. ಆದಿಪುರುಷನಾದ, ಪುರುಷೋತ್ತಮನಾದ ಭಗವಂತನಾದ ಶ್ರೀಕೃಷ್ಣನು ನಮ್ಮ ಈ ಅಪರಾಧ ವನ್ನು ಕ್ಷಮಿಸಲಿ. ನಮ್ಮ ಬುದ್ಧಿಯು ಅವನ ಮಾಯೆಯಿಂದಲೇ ವಿಮೋಹಿತವಾಗಿದೆ. ನಾವು ಅವನ ಅಪಾರವಾದ ಪ್ರಭಾವವನ್ನು ತಿಳಿಯದ ಅಜ್ಞಾನಿಗಳಾಗಿದ್ದೇವೆ.”

ಪರೀಕ್ಷಿತಮಹಾರಾಜ! ಮೊದಲು ಆ ಬ್ರಾಹ್ಮಣರು ಶ್ರೀಕೃಷ್ಣನ ಮಾತನ್ನು ತಿರಸ್ಕರಿಸಿಬಿಟ್ಟರು. ತಾವು ಮಾಡಿದ ಅಪರಾಧವನ್ನು ಅರಿತುಕೊಂಡನಂತರ ಅವರಿಗೆ ಬಹಳ ಪಶ್ಚಾತ್ತಾಪವುಂಟಾಯಿತು. ಶ್ರೀಕೃಷ್ಣ-ಬಲರಾಮರನ್ನು ನೋಡಬೇಕೆನ್ನುವ ಉತ್ಕಟವಾದ ಆಸೆಯೂ ಉಂಟಾಯಿತು. ಆದರೂ ಅವರು ಕಂಸನ ಭಯದಿಂದಾಗಿ ಶ್ರೀಕೃಷ್ಣನ ದರ್ಶನಕ್ಕೆ ಹೋಗಲಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೩ನೆಯ ಅಧ್ಯಾಯವು ಮುಗಿಯಿತು.

---

## ಇಂದ್ರನ ಯಜ್ಞನಿವಾರಣೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಭಗವಾನಪಿ ತತ್ರೈವ ಬಲದೇವೇನ ಸಂಯುತಃ ।**
**ಅಪಶ್ಯನ್ನಿವಸನ್ಗೋಪಾನಿನ್ದ್ರಯಾಗಕೃತೋದ್ಯಮಾನ್ ॥೧॥**

ಪರೀಕ್ಷಿತಮಹಾರಾಜ! ಹೀಗೆ ಭಗವಾನ್ ಶ್ರೀಕೃಷ್ಣನು, ಬಲರಾಮನೊಡನೆ ವೃಂದಾವನದಲ್ಲಿದ್ದುಕೊಂಡು ಅನೇಕಪ್ರಕಾರವಾದ ತನ್ನ ದಿವ್ಯ ಲೀಲೆಗಳನ್ನು ಪ್ರಕಟಪಡಿಸುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಗೋಕುಲದ ಗೋಪರೆಲ್ಲರೂ ಇಂದ್ರಯಜ್ಞವನ್ನು ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿರುವುದನ್ನು ಶ್ರೀಕೃಷ್ಣನು ನೋಡಿದನು. ಆತನು ಸರ್ವಾಂತರ್ಯಾಮಿಯೂ ಸರ್ವಜ್ಞನೂ ಆಗಿದ್ದುದರಿಂದ ಅವನಿಗೆ ಎಲ್ಲವೂ ತಿಳಿದಿರುತ್ತಿದ್ದಿತು. ಇಂದ್ರನ ಸಂಬಂಧವಾದ ಯಜ್ಞವನ್ನು ಗೋಪರು ಏಕೆ ಮಾಡುತ್ತಿದ್ದಾರೆ?–ಎಂಬುದೆಲ್ಲವೂ ಅವನಿಗೆ ತಿಳಿದಿದ್ದರೂ ಏನೂ ತಿಳಿಯದವನಂತೆ ವಿನಯದಿಂದ ಕೂಡಿ ನಂದನೇ ಮೊದಲಾದ ಹಿರಿಯ ಗೋಪರನ್ನು ಶ್ರೀಕೃಷ್ಣನು ಪ್ರಶ್ನಿಸಿದನು :

"ತಂದೆಯವರೇ! ಏತಕ್ಕಿಷ್ಟು ಸಂಭ್ರಮ? ಯಾವ ಉತ್ಸವವು ಈಗ ನಡೆಯಲಿದೆ? ಅದರ ಫಲವೇನು? ಆ ಯಜ್ಞವನ್ನು ಮಾಡುವ ಉದ್ದೇಶವೇನು? ಯಾವ ಯಾವ ಸಾಮಗ್ರಿಗಳಿಂದ ಈ ಯಜ್ಞವು ಮಾಡಲ್ಪಡುತ್ತದೆ? ಇದು ಯಾರಿಗಾಗಿ? ಇವೆಲ್ಲವನ್ನು ನನಗೆ ಅವಶ್ಯವಾಗಿ ಹೇಳಿರಿ.

ಇದನ್ನು ಕೇಳಬೇಕೆಂದು ನನಗೆ ತುಂಬಾ ಆಸೆಯುಂಟಾಗಿದೆ. ಲೋಕದಲ್ಲಿ ಸಮಸ್ತರನ್ನೂ ತಮ್ಮಂತೆಯೇ ಕಾಣುವ, 'ಇವರು ತಮ್ಮವರು–ಇವರು ತಮ್ಮವರಲ್ಲ'–ಎಂಬ ಭೇದಭಾವವೇ ಇಲ್ಲದಿರುವ ಸಾಧುಗಳಿಗೆ ಇತರರಿಂದ ಮುಚ್ಚಿಡಬೇಕಾದುದು ಯಾವುದೂ ಇರುವುದಿಲ್ಲ. ಇವರಿಗೆ ಮಿತ್ರ-ಶತ್ರು-ಉದಾಸೀನರಲ್ಲಿ ಯಾವ ಭೇದಭಾವವೂ ಇರುವುದಿಲ್ಲ. ಒಂದು ವೇಳೆ

ವ್ಯಾವಹಾರಿಕವಾಗಿ ಮಿತ್ರ-ಶತ್ರು-ಉದಾಸೀನರಲ್ಲಿ ಭೇದಭಾವವೆಣಿಸಿ ಶತ್ರುವಿನಂತೆ ಉದಾಸೀನನನ್ನೂ ಕಡೆಗಾಣಿಸಿದರೂ ಮಿತ್ರರನ್ನಾದರೂ ತನ್ನವ ರೆಂದೇ ತಿಳಿಯಬೇಕಾಗುವುದು. ಅವರಿಗೆ ವಿಚಾರಗಳನ್ನು ಯಥಾವತ್ತಾಗಿ ಹೇಳಬೇಕಾಗುವುದು. ಈ ಪ್ರಪಂಚದಲ್ಲಿ ತಿಳಿದೋ ತಿಳಿಯದೆಯೋ ಜನರು ಕರ್ಮಗಳನ್ನು ಮಾಡುತ್ತಲೇ ಇರುವರು. ಕರ್ಮದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಕರ್ಮಮಾಡಿದರೆ, ಮಾಡುವವರಿಗೆ ಅದಕ್ಕೆ ತಕ್ಕುದಾದ ಫಲವು ಸಿಕ್ಕುವುದು. ಆದರೆ ಕರ್ಮದ ಸ್ವರೂಪವನ್ನು ತಿಳಿಯದೇ ಕರ್ಮ ಮಾಡುವವರಿಗೆ ಅಂತಹ ಫಲವೇನೂ ಲಭಿಸುವುದಿಲ್ಲ.

ತಂದೆಯವರೇ! ಲೋಕದಲ್ಲಿ ಕರ್ಮ-ಭಕ್ತಿ-ಜ್ಞಾನಗಳೆಂಬ ಮೂರು ವಿಧವಾದ ಯೋಗಗಳುಂಟು. ಇವುಗಳಲ್ಲಿ ಮೊದಲನೆಯದಾದ ಕ್ರಿಯಾ ಯೋಗ ಅಥವಾ ಕರ್ಮಯೋಗವನ್ನು ನೀವು ಶಿಷ್ಟರಿಂದಾಗಲೀ, ಶಾಸ್ತ್ರಗಳಿಂದಾಗಲೀ ವಿಚಾರಮಾಡಿ ತಿಳಿದಿರುವಿರಾ? ಈಗ ನೀವು ಮಾಡಲು ಇಚ್ಛಿಸಿರುವ ಯಜ್ಞವು ಕರ್ಮಯೋಗಸಮ್ಮತವಾಗಿರುವುದೇ? ಅಥವಾ ಇದು ಲೋಕಾಚಾರದಿಂದ ಬಂದುದೇ? ಇವೆಲ್ಲವನ್ನೂ ತಿಳಿಯಬೇಕೆಂದಿ ರುವ ನನಗೆ ಎಲ್ಲವನ್ನೂ ವಿಶದವಾಗಿ ಹೇಳಿರಿ."

ಮಗನ ಪ್ರಶ್ನೆಯನ್ನು ಕೇಳಿ ಅಚ್ಚರಿಗೊಂಡ ನಂದಗೋಪನು ಹೇಳುತ್ತಾನೆ:

"ಮಗು! ಶ್ಯಾಮಸುಂದರ! ಭಗವಾನ್ ಇಂದ್ರದೇವನು ಮಳೆಗರೆಯುವ ಮೇಘಗಳ ಅಧಿಪತಿಯಾಗಿದ್ದಾನೆ. ಮೇಘಗಳು ಇಂದ್ರದೇವನ ಆತ್ಮಸ್ವರೂಪಗಳೇ ಆಗಿವೆ. ಆ ಮೇಘಗಳು ಸಮಸ್ತಪ್ರಾಣಿಗಳಿಗೂ ತೃಪ್ತಿಯನ್ನುಂಟುಮಾಡುವ ಮತ್ತು ಜೀವನನಿರ್ವಹಣೆಗೆ ಮುಖ್ಯಸಾಧನವಾದ ನೀರನ್ನು ಸುರಿಸುತ್ತವೆ. ಕಂದ! ನಾವು ಮತ್ತು ಇತರರು ಕೂಡ ಮೇಘಗಳಿಗೆ ಒಡೆಯನಾದ ಇಂದ್ರನಿಗೆ ಯಜ್ಞದ ಮೂಲಕವಾಗಿ ಪೂಜೆಯನ್ನು ಸಲ್ಲಿಸುತ್ತೇವೆ. ಇಂದ್ರನು ಮೇಘಗಳ ಮೂಲಕವಾಗಿ ಸುರಿಸುವ ಶಕ್ತಿಶಾಲಿಯಾದ ಜಲದಿಂದಲೇ ಯಜ್ಞಸಾಮಗ್ರಿಗಳ ಉತ್ಪನ್ನವಾಗುತ್ತದೆ. ಇಂದ್ರನ ಯಜ್ಞವನ್ನು ಪೂರ್ಣಗೊಳಿಸಿದನಂತರ ಉಳಿಯುವ ಧಾನ್ಯದಿಂದಲೇ ನಾವೆಲ್ಲರೂ ಧರ್ಮಾರ್ಥ-ಕಾಮಸಾಧಕವಾದ ಜೀವನವನ್ನು ನಿರ್ವಹಿಸುತ್ತೇವೆ.

**ಪುಂಸಾಂ ಪುರುಷಕಾರಾಣಾಂ ಪರ್ಜನ್ಯಃ ಫಲಭಾವನಃ ॥೧೦॥**

ಪುರುಷರು ಬೇಸಾಯವೇ ಮೊದಲಾದ ಪುರುಷಪ್ರಯತ್ನವನ್ನು ಎಷ್ಟೇ ಮಾಡಿದರೂ ಫಲವನ್ನು ಪಡೆಯುವುದು ಮಳೆರಾಯನ ಅನುಗ್ರಹ ದಿಂದಲೇ.

**ಯ ಏವಂ ವಿಸೃಜೇದ್ಧರ್ಮಂ**
**ಪಾರಮ್ಪರ್ಯಾಗತಂ ನರಃ ।**
**ಕಾಮಾಲ್ಲೋಭಾದ್ಭಯಾದ್ದ್ವೇಷಾ-**
**ತ್ಸ ವೈ ನಾಪ್ನೋತಿ ಶೋಭನಮ್ ॥೧೧॥**

ಇಂದ್ರಯಜ್ಞವನ್ನು ಮಾಡುವ ಈ ಧರ್ಮವು ನಮ್ಮಲ್ಲಿ ಪಾರಂಪರ್ಯವಾಗಿ ನಡೆದುಬಂದಿದೆ. ಅಂತಹ ಪರಂಪರೆಯಿಂದ ಬಂದಿರುವ ಧರ್ಮವನ್ನು ಯಾವನು ಕಾಮ-ಲೋಭಗಳಿಂದಾಗಲೀ, ಭಯದಿಂದಾಗಲೀ, ದ್ವೇಷದಿಂದಾಗಲೀ ಬಿಟ್ಟುಬಿಡುವನೋ ಅಂತಹವನಿಗೆ ಒಳ್ಳೆಯದಾಗುವುದಿಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೀ ಕೇಶವನು ತಂದೆಯ ಮತ್ತು ಇತರ ವ್ರಜವಾಸಿಗಳ ಮಾತುಗಳನ್ನು ಕೇಳಿ ಇಂದ್ರನಿಗೆ ಕ್ರೋಧವನ್ನುಂಟುಮಾಡುವ ಈ ಮಾತುಗಳನ್ನು ತನ್ನ ತಂದೆಗೆ ಹೇಳಿದನು :

**ಕರ್ಮಣಾ ಜಾಯತೇ ಜನ್ತುಃ ಕರ್ಮಣೈವ ವಿಲೀಯತೇ ।**
**ಸುಖಂ ದುಃಖಂ ಭಯಂ ಕ್ಷೇಮಂ ಕರ್ಮಣೈವಾಭಿಪದ್ಯತೇ ॥೧೩॥**

"ತಂದೆಯವರೇ! ಪ್ರಾಣಿಯು ತನ್ನ ಕರ್ಮಕ್ಕೆ ಅನುಸಾರವಾಗಿ ಎಲ್ಲಿಯೋ ಹುಟ್ಟುತ್ತದೆ ಮತ್ತು ತಾನು ಮಾಡಿದ ಕರ್ಮಕ್ಕೆ ಅನುಸಾರ ವಾಗಿಯೇ ಸಾಯುತ್ತದೆ. ತಾನು ಮಾಡಿದ ಒಳ್ಳೆಯ ಅಥವಾ ಕೆಟ್ಟಕೆಲಸಗಳಿಗೆ ಅನುಸಾರವಾಗಿಯೇ ಆ ಪ್ರಾಣಿಗೆ ಸುಖ-ದುಃಖಗಳೂ ಭಯ-ಕ್ಷೇಮಗಳೂ ಪ್ರಾಪ್ತವಾಗುತ್ತವೆ.

**ಅಸ್ತಿ ಚೇದೀಶ್ವರಃ ಕಶ್ಚಿತ್ಫಲರೂಪ್ಯನ್ಯಕರ್ಮಣಾಮ್ ।**
**ಕರ್ತಾರಂ ಭಜತೇ ಸೋಽಪಿ ನ ಹ್ಯಕರ್ತುಃ ಪ್ರಭುರ್ಹಿ ಸಃ ॥೧೪॥**

ಜಡವಾದ ಕರ್ಮವೇ ಕರ್ಮಮಾಡಿದವನಿಗೆ ಫಲವನ್ನು ನೀಡದೆಂದೂ

ಫಲವನ್ನು ಕೊಡುವ ಈಶ್ವರನೊಬ್ಬನಿದ್ದಾನೆಂದೂ ಭಾವಿಸಿದರೂ ಆ ಈಶ್ವರನೂ ಕೂಡ ಕರ್ಮಮಾಡಿದವನಿಗೆ ಫಲನೀಡಬಲ್ಲನೇ ಹೊರತು ಕರ್ಮಮಾಡದವನ ಮೇಲೆ ಅವನ ಪ್ರಭಾವವೇನೂ ನಡೆಯುವುದಿಲ್ಲ.

**ಕಿಮಿನ್ದ್ರೇಣೇಹ ಭೂತಾನಾಂ ಸ್ವಸ್ವಕರ್ಮಾನುವರ್ತಿನಾಮ್ ।**
**ಅನೀಶೇನಾನ್ಯಥಾ ಕರ್ತುಂ ಸ್ವಭಾವವಿಹಿತಂ ನೃಣಾಮ್ ॥೧೫॥**

ತಂದೆಯವರೇ! ಸಮಸ್ತಪ್ರಾಣಿಗಳೂ ತಾವು ಹಿಂದೆ ಮಾಡಿದ ಅಥವಾ ಈಗ ಮಾಡುತ್ತಿರುವ ಒಳ್ಳೆಯ ಅಥವಾ ಕೆಟ್ಟಕರ್ಮಗಳ ಫಲಗಳನ್ನೇ ಅನುಭವಿಸುತ್ತಿವೆ. ಹೀಗಿರುವಾಗ ನಮ್ಮ ಸುಖ-ದುಃಖಗಳಿಗೆ ಇಂದ್ರನ ಅವಶ್ಯಕತೆಯಾದರೂ ಏನಿದೆ? ಪೂರ್ವಸಂಸ್ಕಾರಕ್ಕೆ ಅನುಸಾರವಾಗಿ ದೊರಕುವ ಮನುಷ್ಯನ ಕರ್ಮಫಲಗಳನ್ನು ಬದಲಾಯಿಸಲು ಶಕ್ಯವಿಲ್ಲವೆಂದ ಮೇಲೆ ಇಂದ್ರನಿಂದ ನಮಗೇನಾಗಬೇಕಾಗಿದೆ?

**ಸ್ವಭಾವತನ್ತ್ರೋ ಹಿ ಜನಃ ಸ್ವಭಾವಮನುವರ್ತತೇ ।**
**ಸ್ವಭಾವಸ್ಥಮಿದಂ ಸರ್ವಂ ಸದೇವಾಸುರಮಾನುಷಮ್ ॥೧೬॥**

ಮನುಷ್ಯರೆಲ್ಲರೂ ತಮ್ಮ ಸ್ವಭಾವಕ್ಕೆ (ಹಿಂದಿನ ಸಂಸ್ಕಾರಕ್ಕೆ) ಅಧೀನರಾಗಿದ್ದಾರೆ. ಹಿಂದಿನ ಸಂಸ್ಕಾರಕ್ಕೆ ಅನುಸಾರವಾಗಿ ಕರ್ಮಗಳನ್ನು ಮಾಡುತ್ತಾ ಅದಕ್ಕೆ ಅನುರೂಪವಾದ ಫಲಗಳನ್ನೇ ಪಡೆಯುತ್ತಿರುತ್ತಾರೆ. ಕೇವಲ ಮನುಷ್ಯರು ಮಾತ್ರವಲ್ಲ; ದೇವಾಸುರ-ಮನುಷ್ಯರಿಂದ ಕೂಡಿರುವ ಈ ಜಗತ್ತೆಲ್ಲವೂ ಸ್ವಭಾವಸಿದ್ಧಾಂತಕ್ಕೊಳಪಟ್ಟಿದೆ.*

**ದೇಹಾನುಚ್ಚಾವಚಾಞ್ಜನ್ತುಃ ಪ್ರಾಪ್ಯೋತ್ಸೃಜತಿ ಕರ್ಮಣಾ ।**
**ಶತ್ರುರ್ಮಿತ್ರಮುದಾಸೀನಃ ಕರ್ಮೈವ ಗುರುರೀಶ್ವರಃ ॥೧೭॥**

ಜೀವನು ತನ್ನ ಕರ್ಮಕ್ಕೆ ಅನುಸಾರವಾಗಿ ಉತ್ತಮ ಅಥವಾ ಅಧಮ

---

* ಲೋಕದಲ್ಲಿ ಸಕಲವಸ್ತುಗಳೂ ಸ್ವಭಾವವನ್ನು ಅನುಸರಿಸುವುದೇ ಹೊರತು ಸ್ವಭಾವವನ್ನು ಯಾವುದೂ ಬಿಟ್ಟಿರುವುದಿಲ್ಲ.

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥ ಭ. ಗೀ.

ಅಧ್ಯಾಯ ೧೮ ಶ್ಲೋಕ ೪೦ (ವಿಜಯಧ್ವಜೀಯ)

ಶರೀರಗಳನ್ನು ಪಡೆಯುತ್ತಾನೆ ಮತ್ತು ತೊರೆಯುತ್ತಾನೆ. ತನ್ನ ಕರ್ಮಕ್ಕೆ ಅನುಸಾರವಾಗಿಯೇ ಒಬ್ಬನನ್ನು ಮಿತ್ರನೆಂದೂ ಒಬ್ಬನನ್ನು ಉದಾಸೀನ ನೆಂದೂ ಮತ್ತೊಬ್ಬನನ್ನು ಶತ್ರುವೆಂದೂ ಭಾವಿಸುತ್ತಾನೆ. ತಂದೆಯವರೇ! ಹೆಚ್ಚೇನು ಹೇಳಲಿ! ಕರ್ಮವೆಂಬುದೇ ಗುರು; ಕರ್ಮವೆಂಬುದೇ ಈಶ್ವರ. ಮನುಷ್ಯರ ಆಗು-ಹೋಗುಗಳ ನಿರ್ಣಯಕ್ಕೆ ಕರ್ಮವನ್ನು ಬಿಟ್ಟು ಬೇರೆ ಯಾವ ಕಾರಣವೂ ಇಲ್ಲ.

**ತಸ್ಮಾತ್ಸಮ್ಪೂಜಯೇತ್ಕರ್ಮ ಸ್ವಭಾವಸ್ಥಃ ಸ್ವಕರ್ಮಕೃತ್ ।**
**ಅಞ್ಜಸಾ ಯೇನ ವರ್ತೇತ ತದೇವಾಸ್ಯ ಹಿ ದೈವತಮ್ ॥೧೮॥**

ಆದುದರಿಂದ ತಂದೆಯವರೇ! ಮನುಷ್ಯನು, ತನ್ನ ಪೂರ್ವಸಂಸ್ಕಾರಕ್ಕೆ ಅನುಸಾರವಾಗಿ ಬಂದಿರುವ ವರ್ಣ ಮತ್ತು ಆಶ್ರಮಕ್ಕೆ ನಿರ್ದಿಷ್ಟವಾದ ಕರ್ಮವನ್ನೇ ಪೂಜಿಸಬೇಕು. ಅದನ್ನೇ ಶ್ರದ್ಧೆಯಿಂದ ಮಾಡಬೇಕು. ಯಾವ ಕರ್ಮದ ಮೂಲಕವಾಗಿ ಮನುಷ್ಯನ ಜೀವಿಕೆಯು ಸುಗಮವಾಗಿ ಸಾಗುವುದೋ ಆ ಕರ್ಮವೇ ಅವನಿಗೆ ಫಲಕೊಡುವ ದೇವತೆಯಾಗುತ್ತದೆ.

**ಆಜೀವ್ಯೈಕತರಂ ಭಾವಂ ಯಸ್ತ್ವನ್ಯಮುಪಜೀವತಿ ।**
**ನ ತಸ್ಮಾದ್ವಿನ್ದತೇ ಕ್ಷೇಮಂ ಜಾರಂ ನಾರ್ಯಸತೀ ಯಥಾ ॥೧೯॥**

ಪೂರ್ವಕರ್ಮಾನುಸಾರವಾಗಿ ಬಂದ ಸ್ವಭಾವವನ್ನು (ಕರ್ಮವನ್ನು) ಬಿಟ್ಟು ಬೇರೆಯ ಸ್ವಭಾವವನ್ನು (ಕರ್ಮವನ್ನು) ಯಾವನು ಅವಲಂಬಿ ಸುವನೋ ಅವನು ಕೈಹಿಡಿದ ಗಂಡನನ್ನು ಬಿಟ್ಟು ವಿಟಪುರುಷನ ಹಿಂದೆ ಹೋಗುವ ಜಾರಿಣಿಯಂತೆ ಆಗುವನು. ಅವನಿಗೆ ಕ್ಷೇಮವುಂಟಾಗುವುದಿಲ್ಲ.

**ವರ್ತೇತ ಬ್ರಹ್ಮಣಾ ವಿಪ್ರೋ ರಾಜನ್ಯೋ ರಕ್ಷಯಾ ಭುವಃ ।**
**ವೈಶ್ಯಸ್ತು ವಾರ್ತಯಾ ಜೀವೇಚ್ಛೂದ್ರಸ್ತು ದ್ವಿಜಸೇವಯಾ ॥೨೦॥**

ಬ್ರಾಹ್ಮಣನು ವೇದಗಳ ಅಧ್ಯಯನ-ಅಧ್ಯಾಪನೆಗಳಿಂದಲೂ, ಕ್ಷತ್ರಿ ಯನು ಪೃಥ್ವಿಯ ಪಾಲನೆಯಿಂದಲೂ, ವೈಶ್ಯನು ವಾರ್ತೆಯಿಂದಲೂ, ಶೂದ್ರನು ದ್ವಿಜಸೇವನೆಯಿಂದಲೂ ಜೀವನವನ್ನು ನಿರ್ವಹಿಸಬೇಕು.

**ಕೃಷಿವಾಣಿಜ್ಯಗೋರಕ್ಷಾ ಕುಸೀದಂ ತುರ್ಯಮುಚ್ಯತೇ ।**
**ವಾರ್ತಾ ಚತುರ್ವಿಧಾ ತತ್ರ ವಯಂ ಗೋವೃತ್ತಯೋಽನಿಶಮ್ ॥೨೧॥**

ವೈಶ್ಯರ ವೃತ್ತಿಯು ವಾರ್ತಾ ಎನಿಸುವುದು. ಇದು ನಾಲ್ಕು ಪ್ರಕಾರವಾಗಿದೆ. ಕೃಷಿ-ವಾಣಿಜ್ಯ-ಗೋರಕ್ಷಣೆ ಮತ್ತು ಬಡ್ಡಿಯಿಂದ ಜೀವಿಸುವುದು. ಈ ನಾಲ್ಕರಲ್ಲಿ ನಾವು ಗೋರಕ್ಷಣೆಯೊಂದರಿಂದಲೇ ನಮ್ಮ ಜೀವಿಕೆಯನ್ನು ನಡೆಸುತ್ತಾ ಬಂದಿರುತ್ತೇವೆ.

**ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯನ್ತಹೇತವಃ ।**
**ರಜಸೋತ್ಪದ್ಯತೇ ವಿಶ್ವಮನ್ಯೋನ್ಯಂ ವಿವಿಧಂ ಜಗತ್ ॥೨೨॥**

ಪ್ರಪಂಚದ ಉತ್ಪತ್ತಿ-ಸ್ಥಿತಿ ಮತ್ತು ಲಯಗಳು ಅನುಕ್ರಮವಾಗಿ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಂದ ಆಗುತ್ತವೆ. ವಿವಿಧ ರೀತಿಯ ಈ ಜಗತ್ತು ಸ್ತ್ರೀ-ಪುರುಷರ ಸಂಯೋಗದಿಂದ ರಜೋಗುಣದ ಮೂಲಕವಾಗಿ ಹುಟ್ಟುತ್ತದೆ.

**ರಜಸಾ ಚೋದಿತಾ ಮೇಘಾ ವರ್ಷನ್ತ್ಯಮ್ಬೂನಿ ಸರ್ವತಃ ।**
**ಪ್ರಜಾಸ್ತೈರೇವ ಸಿದ್ಧ್ಯನ್ತಿ ಮಹೇನ್ದ್ರಃ ಕಿಂ ಕರಿಷ್ಯತಿ ॥೨೩॥**

ರಜೋಗುಣದಿಂದ ಪ್ರೇರಿತವಾದ ಮೇಘಗಳು ಸರ್ವತ್ರ ಮಳೆಯನ್ನು ಸುರಿಸುತ್ತವೆ. ಮಳೆಯಿಂದ ವನಸ್ಪತಿಗಳೂ, ವನಸ್ಪತಿಗಳಿಂದ ಅನ್ನವೂ, ಅನ್ನದಿಂದ ಪ್ರಜೆಗಳೂ ಹುಟ್ಟುತ್ತಾರೆ. ಹೀಗಿರುವಾಗ ಪ್ರಾಣಿಗಳ ಜೀವನ ನಿರ್ವಹಣೆಯಲ್ಲಿ ಇಂದ್ರನ ಪಾತ್ರವೇನಿದೆ? ಅವನೇನು ಮಾಡಬಲ್ಲನು?

ತಂದೆಯವರೇ! ನಮ್ಮ ಅಧೀನದಲ್ಲಿ ಯಾವ ರಾಜ್ಯವಾಗಲೀ, ಪಟ್ಟಣವಾಗಲೀ, ಊರಾಗಲೀ, ಹಳ್ಳಿಯಾಗಲೀ ಇರುವುದಿಲ್ಲ. ನಮಗೆ ಮನೆ-ಮಠಗಳೂ ಇಲ್ಲ. ನಾವು ಯಾವಾಗಲೂ ವನವಾಸಿಗಳು. ವನ ಮತ್ತು ಪರ್ವತಗಳೇ ನಮ್ಮ ನಿವಾಸಸ್ಥಾನಗಳಾಗಿವೆ. ಆದುದರಿಂದ ನಾವು ಗೋವುಗಳು, ಬ್ರಾಹ್ಮಣರು ಮತ್ತು ಪರ್ವತ ಇವುಗಳನ್ನು ಕುರಿತ ಯಜ್ಞವನ್ನು ಪ್ರಾರಂಭಿಸೋಣ.* ಇಂದ್ರನ ಯಾಗಕ್ಕೆ ಯಾವ ಸಂಭಾರಗಳು ಸಂಗ್ರಹ

---

* ಗೊಲ್ಲಜಾತಿಗೆ ಗೋವುಗಳೂ, ಬೆಟ್ಟಗಳೂ, ಜೀವನಹೇತುಗಳಾದುದರಿಂದ ಅವುಗಳನ್ನಾರಾಧಿಸುವುದು ನ್ಯಾಯವಾಗಿದೆ. ಬ್ರಾಹ್ಮಣರನ್ನೇಕೆ ಆರಾಧಿಸಬೇಕು? ಎಂದರೆ :

**ಉತ್ತಮಾಙ್ಗೋದ್ಭವಾಜ್ಜ್ಯೈಷ್ಠ್ಯಾದ್ಬ್ರಹ್ಮಣಶ್ಚೈವ ಧಾರಣಾತ್ ।**
**ಸರ್ವಸ್ಯೈವಾಸ್ಯ ಸರ್ಗಸ್ಯ ಧರ್ಮತೋ ಬ್ರಾಹ್ಮಣಃ ಪ್ರಭುಃ ॥** (ಮನುಸ್ಮೃತಿ)

ವಾಗಿವೆಯೋ ಅದೇ ಸಾಮಗ್ರಿಗಳಿಂದ ಗೋ-ಬ್ರಾಹ್ಮಣ ಮತ್ತು ಪರ್ವತಗಳ ಪೂಜೆಯನ್ನು ಮಾಡೋಣ. ಈ ಯಾಗಕ್ಕಾಗಿ ಗೋಧಿಯ ತಿಂಡಿಗಳನ್ನೂ, ಕಜ್ಜಾಯಗಳನ್ನೂ, ಚಕ್ಕುಲಿಗಳನ್ನೂ, ಪಾಯಸ ಮೊದಲ್ಗೊಂಡು ತೊವ್ವೆಯವರೆಗಿನ ಬಗೆ-ಬಗೆಯ ಅಡಿಗೆಗಳನ್ನೂ ಸಿದ್ಧಪಡಿಸಿರಿ. ಇಂದು ಕರೆದ ಎಲ್ಲ ಹಸುಗಳ ಹಾಲನ್ನೂ ಕೂಡಿಹಾಕಿರಿ. ಬ್ರಹ್ಮವಾದಿಗಳಾದ ಬ್ರಾಹ್ಮಣರು ಅಗ್ನಿಯಲ್ಲಿ ಚೆನ್ನಾಗಿ ಹೋಮಮಾಡಲಿ. ಬಳಿಕ ಅವರಿಗೆ ಷಡ್ರಸೋಪೇತಭೋಜನವನ್ನು ಮಾಡಿಸಿ ದಕ್ಷಿಣೆಯಿಂದ ಕೂಡಿದ ಗೋವುಗಳನ್ನು ದಾನಮಾಡಿರಿ. ಬಳಿಕ ಇತರ ವರ್ಣದವರಿಗೂ, ಶುನಕ-ಚಂಡಾಲ ಪತಿತರಿಗೂ ಯಥಾಯೋಗ್ಯವಾಗಿ ಭೋಜನವನ್ನು ಮಾಡಿಸಿರಿ. ಅನಂತರ ಗೋವುಗಳಿಗೆ ಹುಲ್ಲನ್ನು ತಿನ್ನಿಸಿ ಗೋವರ್ಧನಗಿರಿಯನ್ನು ಪೂಜಿಸಿರಿ. ಬಳಿಕ ನೀವೂ ಭೋಜನವನ್ನು ಮಾಡಿ ಹೊಸಬಟ್ಟೆಗಳನ್ನು ಧರಿಸಿ ಗಂಧವನ್ನು ಪೂಸಿಕೊಂಡು ಅಲಂಕೃತರಾಗಿ ಅಗ್ನಿಗಳಿಗೂ, ಬ್ರಾಹ್ಮಣರಿಗೂ, ಪರ್ವತಕ್ಕೂ ಪ್ರದಕ್ಷಿಣೆ-ನಮಸ್ಕಾರ ಮಾಡಿರಿ. ಹೀಗೆ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ತಂದೆಯವರೇ! ಇದು ನಿಮಗೂ ಉಚಿತವೆನಿಸಿದಲ್ಲಿ ನಾನು ಹೇಳಿದಂತೆ ಮಾಡಬಹುದು. ಈ ಯಜ್ಞವು ಗೋ-ಬ್ರಾಹ್ಮಣ-ಪರ್ವತಗಳಿಗೂ ಪ್ರಿಯವಾಗಿದೆ. ನನಗೂ ಈ ಯಜ್ಞವು ಅತ್ಯಂತ ಪ್ರಿಯವಾಗಿದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕಾಲಾತ್ಮಕನಾದ ಭಗವಂತನಿಗೆ ಇಂದ್ರನ ಅಹಂಕಾರವನ್ನು ಮುರಿಯುವುದೇ ಮುಖ್ಯವಾದ ಆಶಯವಾಗಿದ್ದಿತು. ಶ್ರೀಕೃಷ್ಣನು ಯುಕ್ತಿಯುಕ್ತವಾಗಿ ಹೇಳಿದ ಮಾತನ್ನು ಕೇಳಿ–'ಸಾಧು ಸಾಧು' 'ಸಲಹೆಯು ಬಹಳ ಚೆನ್ನಾಗಿದೆ'–ಎಂದು ಹೇಳುತ್ತಾ ಶ್ರೀಕೃಷ್ಣನ ಅಭಿಪ್ರಾಯವನ್ನು ಒಮ್ಮತದಿಂದ ನಂದಗೋಪಾದಿಗಳು ಅಂಗೀಕರಿಸಿದರು.

---

ಪರಮೇಶ್ವರನ ಉತ್ತಮಾಂಗದಿಂದ (ತಲೆಯಿಂದ) ಹುಟ್ಟಿದುದರಿಂದಲೂ, ಜ್ಯೇಷ್ಠರಾದುದರಿಂದಲೂ, ವೇದವನ್ನು ಧರಿಸಿರುವುದರಿಂದಲೂ ಈ ಸಕಲಸೃಷ್ಟಿಗೂ ಬ್ರಾಹ್ಮಣನೇ ಪ್ರಭುವು ಎಂಬುದರಿಂದ ಬ್ರಾಹ್ಮಣಾರಾಧನವು ಅವಶ್ಯವು.

(ವೈಜಯಂತೀ)

ಭಗವಾನ್ ಶ್ರೀಕೃಷ್ಣನು ಯಾವ ರೀತಿಯಲ್ಲಿ ಯಜ್ಞಮಾಡಬೇಕೆಂದು ಹೇಳಿದ್ದನೋ ಅದೇ ರೀತಿಯಲ್ಲಿ ಗೋಪರೆಲ್ಲರೂ ಸೇರಿ ಇಂದ್ರಯಜ್ಞಕ್ಕೆ ಸಂಗ್ರಹವಾಗಿದ್ದ ಸಾಮಗ್ರಿಗಳಿಂದಲೇ ಗೋ-ಬ್ರಾಹ್ಮಣ-ಪರ್ವತಗಳನ್ನು ಕುರಿತ ಯಜ್ಞವನ್ನು ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಪ್ರಾರಂಭಿಸಿದರು. ಬ್ರಾಹ್ಮಣರಿಂದ ಯಥಾವಿಧಿಯಾಗಿ ಹೋಮಗಳನ್ನು ಮಾಡಿಸಿದರು. ಬಳಿಕ ಅವರಿಗೆ ಮೃಷ್ಟಾನ್ನವನ್ನು ಭೋಜನಮಾಡಿಸಿ ದಕ್ಷಿಣಾಸಹಿತವಾಗಿ ಗೋವುಗಳನ್ನು ದಾನಮಾಡಿದರು. ಬಳಿಕ ಪರ್ವತದ ಸುತ್ತಲೂ ಬಲಿಗಳನ್ನಿಟ್ಟು, ಹಸುಗಳಿಗೆ ಹುಲ್ಲನ್ನು ತಿನ್ನಿಸಿ, ಅವುಗಳನ್ನು ಮುಂದೆ ಮಾಡಿಕೊಂಡು ನಂದಗೋಪನೇ ಮುಂತಾದ ಗೋಪಾಲರು ಪರ್ವತದ ಪ್ರದಕ್ಷಿಣೆಯನ್ನು ಮಾಡಿದರು. ಗೋಪಿಯರು ಕೂಡ ಬ್ರಾಹ್ಮಣರಿಂದ ಆಶೀರ್ವಾದವನ್ನು ಪಡೆದು ಆಭರಣಗಳಿಂದ ಶರೀರಗಳನ್ನು ಅಲಂಕರಿಸಿಕೊಂಡು ಎತ್ತಿನ ಬಂಡಿಯಲ್ಲಿ ಕುಳಿತು ಶ್ರೀಕೃಷ್ಣನ ವೀರಗಾಥೆಗಳ ಗಾಯನಮಾಡುತ್ತಾ ಗಿರಿರಾಜನನ್ನು ಪ್ರದಕ್ಷಿಣೆಮಾಡಿದರು. ಭಗವಾನ್ ಶ್ರೀಕೃಷ್ಣನು ಗೊಲ್ಲರಿಗೆ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ ದೊಡ್ಡದಾದ ರೂಪವನ್ನು ಧರಿಸಿ ಗೋವರ್ಧನಗಿರಿಯ ಮೇಲೆ ಕುಳಿತು–'ನಾನೇ ಗಿರಿರಾಜ ನಾಗಿದ್ದೇನೆ'–ಎಂದು ಕೂಗಿ ಹೇಳುತ್ತಾ ಸುತ್ತಲೂ ಇದ್ದ ಬಲಿಯನ್ನು ತಾನೇ ಭಕ್ಷಿಸಿಬಿಟ್ಟನು. ಮಹಾಮಾಯನಾದ ಶ್ರೀಕೃಷ್ಣನು ಗೋಪ-ಗೋಪಿಯ ರೊಡನೆ ಸೇರಿ ತನ್ನದೇ ಆಗಿದ್ದ ಆ ಮಹಾಸ್ವರೂಪಕ್ಕೆ ತಾನೂ ನಮಸ್ಕಾರ ಮಾಡುತ್ತಾ ಹೇಳಿದನು :

**ಅಹೋ ಪಶ್ಯತ ಶೈಲೋऽಸೌ ರೂಪೀ ನೋऽನುಗ್ರಹಂ ವ್ಯಧಾತ್ ॥**

"ಅದೋ ನೋಡಿರಿ! ಈ ಗೋವರ್ಧನಪರ್ವತವು ರೂಪವನ್ನು ಧರಿಸಿ ನಮ್ಮ ಕಣ್ಣೆದುರಿಗೇ ಬಂದು ನಮ್ಮನ್ನು ಅನುಗ್ರಹಿಸುತ್ತಿದೆ.

**ಏಷೋऽವಜಾನತೋ ಮರ್ತ್ಯಾನ್ಕಾಮರೂಪೀ ವನೌಕಸಃ ।**
**ಹನ್ತಿ ಹ್ಯಸ್ಮೈ ನಮಸ್ಯಾಮಃ ಶರ್ಮಣೇ ಆತ್ಮನೋ ಗವಾಮ್ ॥೩೭॥**

ಬಂಧುಗಳೇ! ಈ ಪರ್ವತವು ಯಾವುದೇ ರೂಪವನ್ನಾದರೂ ಧರಿಸ ಬಲ್ಲುದು. ಇದನ್ನು ತಿರಸ್ಕರಿಸುವ ವನವಾಸಿಗಳನ್ನು ಈ ಪರ್ವತವು ಕೊಂದೇ

ಬಿಡುತ್ತದೆ. ಆದುದರಿಂದ ನಮ್ಮ ಕ್ಷೇಮಕ್ಕೂ ಮತ್ತು ಗೋವುಗಳ ಕ್ಷೇಮಕ್ಕೂ ನಾವು ಈ ಗೋವರ್ಧನಪರ್ವತಕ್ಕೆ ನಮಸ್ಕಾರಮಾಡೋಣ."

ಪರೀಕ್ಷಿತಮಹಾರಾಜ! ಹೀಗೆ ಭಗವಾನ್ ಶ್ರೀಕೃಷ್ಣನ ಪ್ರೇರಣೆಯಂತೆ ನಂದಗೋಪನೇ ಮೊದಲಾದ ಗೋಪಾಲರು ಗೋವರ್ಧನಪರ್ವತವನ್ನೂ, ಗೋವುಗಳನ್ನೂ ಮತ್ತು ಬ್ರಾಹ್ಮಣರನ್ನೂ ವಿಧಿಪೂರ್ವಕವಾಗಿ ಸಂಪೂಜಿಸಿ ಶ್ರೀಕೃಷ್ಣನೊಡನೆ ಗೋಕುಲಕ್ಕೆ ಹಿಂದಿರುಗಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೪ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೨೫ನೆಯ ಅಧ್ಯಾಯ

## ಶ್ರೀಕೃಷ್ಣನು ಗೋವರ್ಧನಪರ್ವತವನ್ನು ಎತ್ತಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ಇನ್ದ್ರಸ್ತದಾತ್ಮನಃ ಪೂಜಾಂ ವಿಜ್ಞಾಯ ವಿಹತಾಂ ನೃಪ ।**
**ಗೋಪೇಭ್ಯಃ ಕೃಷ್ಣನಾಥೇಭ್ಯೋ ನನ್ದಾದಿಭ್ಯಶ್ಚುಕೋಪ ಸಃ ॥೧॥**

ಗೊಲ್ಲರು ತನ್ನ ಪೂಜೆಯನ್ನು ನಿಲ್ಲಿಸಿಬಿಟ್ಟರೆಂಬುದು ತಿಳಿದ ಕೂಡಲೇ ಇಂದ್ರನು ಶ್ರೀಕೃಷ್ಣನನ್ನೇ ರಕ್ಷಕನನ್ನಾಗಿ ಹೊಂದಿದ್ದ ನಂದಗೋಪನೇ ಮೊದಲಾದ ಗೋಪಾಲರ ಮೇಲೆ ಬಹಳವಾಗಿ ಕೋಪಗೊಂಡನು. ತಾನು ಮೂರು ಲೋಕಗಳಿಗೂ ಅಧಿಪತಿಯಾಗಿರುವೆನೆಂಬ ಅಹಂಕಾರವು ಆತನಿಗೆ ಬಹಳವಾಗಿತ್ತು. ಈ ಕಾರಣದಿಂದ ಕುಪಿತನಾಗಿದ್ದ ಆತನು ಪ್ರಳಯ ವನ್ನುಂಟುಮಾಡುವ ಸಂವರ್ತಕಗಳೆಂಬ ಹೆಸರಿನ ಮೇಘಗಳನ್ನು ಆಹ್ವಾನಿಸಿ ಹೇಳಿದನು :

**ಅಹೋ ಶ್ರೀಮದಮಾಹಾತ್ಮ್ಯಂ ಗೋಪಾನಾಂ ಕಾನನೌಕಸಾಮ್ ।**
**ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಯೇ ಚಕ್ರುರ್ದೇವಹೇಲನಮ್ ॥೨॥**

"ಕಾಡುಮನುಷ್ಯರಾದ ಗೊಲ್ಲರ ಐಶ್ವರ್ಯಮದವು ಎಷ್ಟು ಹೆಚ್ಚಿ

ಬಿಟ್ಟಿದೆ? ಮನುಷ್ಯಸಾಮಾನ್ಯನಾದ ಶ್ರೀಕೃಷ್ಣನನ್ನು ಅವಲಂಬಿಸಿರುವ ಇವರು ದೇವರಾಜನಾದ ನನ್ನನ್ನೇ ಅವಮಾನಿಸುತ್ತಿರುವರಲ್ಲಾ!

**ಯಥಾದೃಢೈಃ ಕರ್ಮಮಯ್ಯೈಃ ಕ್ರತುಭಿರ್ನಾಮನೌನಿಭೈಃ ।**
**ವಿದ್ಯಾಮಾನ್ವೀಕ್ಷಿಕೀಂ ಹಿತ್ವಾ ತಿತೀರ್ಷನ್ತಿ ಭವಾರ್ಣವಮ್ ॥೪॥**

ಅಧ್ಯಾತ್ಮವಿದ್ಯೆಯನ್ನು ಬಿಟ್ಟು ಶಿಥಿಲವಾಗಿರುವ, ಕರ್ಮಮಯವಾಗಿರುವ, ನಾಮಮಾತ್ರಕ್ಕೆ ನಾವೆಗಳಂತೆ ತೋರುವ ಯಜ್ಞಗಳಿಂದ ಸಂಸಾರ ಸಾಗರವನ್ನು ದಾಟಲು ಇಚ್ಛಿಸುವಂತೆ–ಈ ಗೋವಳರು ಸರ್ವಸಂಪತ್ಸಮೃದ್ಧಿಯನ್ನು ಕೊಡುವ ಇಂದ್ರನ ಯಾಗವನ್ನು ಬಿಟ್ಟು ಗೋ-ಗೋವರ್ಧನಗಳ ಪೂಜೆಯನ್ನು ಆರಂಭಿಸಿದ್ದಾರೆ. ಇದೆಂತಹ ಹುಚ್ಚುತನ!*

**ವಾಚಾಲಂ ಬಾಲಿಶಂ ಸ್ತಬ್ಧಮಜ್ಞಂ ಪಣ್ಡಿತಮಾನಿನಮ್ ।**
**ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಗೋಪಾ ಮೇ ಚಕ್ರುರಪ್ರಿಯಮ್ ॥**

ಬಾಯಿಬಡುಕನಾದ, ಮೂರ್ಖನಾದ, ಸ್ತಬ್ಧನಾದ, ಅಜ್ಞನಾದ ಮತ್ತು ತನ್ನನ್ನು ಮಹಾಪಂಡಿತನೆಂದು ಭಾವಿಸಿಕೊಂಡುಬಿಟ್ಟಿರುವ ಮನುಷ್ಯಮಾತ್ರದವನಾದ ಶ್ರೀಕೃಷ್ಣನನ್ನು ಆಶ್ರಯಿಸಿ ಈ ಮೂರ್ಖ ಗೋಪಾಲರು ನನಗೆ ಬಹಳ ಅಪ್ರಿಯವಾದ ಕಾರ್ಯವನ್ನು ಮಾಡಿಬಿಟ್ಟರು.[1]

ಆದಕಾರಣ, ಧನಮದದಿಂದ ಕೊಬ್ಬಿ ಕೃಷ್ಣನ ಬೆಂಬಲದಿಂದ ಮೈಯುಬ್ಬಿರುವ ಈ ಗೋಪಾಲಕರ ಐಶ್ವರ್ಯಮದವನ್ನು ವಿನಾಶಗೊಳಿಸಿರಿ.

---

* ಏಕಾಂತಭಕ್ತರು ಕರ್ಮಗಳನ್ನೂ ಜ್ಞಾನಯೋಗವನ್ನೂ ಸಹ ತೊರೆದು ಕೇವಲ ಕೃಷ್ಣಭಕ್ತಿಯಿಂದಲೇ ಸಂಸಾರಬಂಧನದಿಂದ ಮುಕ್ತರಾಗಲೆಳೆಸುವಂತೆ ಇವರೂ ಬಯಸುತ್ತಿರುವರೆಂಬ ಭಾವವು. (ವೀರರಾಘವೀಯ)

1 ಈ ಶ್ಲೋಕದಿಂದ ಸಂದರ್ಭಾನುಸಾರವಾಗಿ ಶ್ರೀಕೃಷ್ಣನ ನಿಂದೆಯೇ ತೋರಿದರೂ ಅದೇ ಪದಗಳಿಂದ ಕೃಷ್ಣನ ಸ್ತುತಿಯೂ ವ್ಯಕ್ತವಾಗುವುದು. ವಾಚಾಲಂ = ಶಾಸ್ತ್ರಗಳಿಗೆ ಕರ್ತನು. ಬಾಲಿಶಂ = ಶಿಶುವಿನಂತೆ ಅಭಿಮಾನರಹಿತನು. ಸ್ತಬ್ಧಂ = ತನಗಿಂತ ದೊಡ್ಡವರಿಲ್ಲದುದರಿಂದ ನಮ್ರನಲ್ಲದವನು. ಅಜ್ಞಂ = ತನಗಿಂತ ಬಲ್ಲವರಿಲ್ಲದುದರಿಂದ ಸರ್ವಜ್ಞನು. ಪಂಡಿತಮಾನಿನಂ = ಜ್ಞಾನಿಗಳಿಂದ ಮಾನನೀಯನಾದವನು. ಮನುಷ್ಯಂ = ಭಕ್ತವಾತ್ಸಲ್ಯದಿಂದ ಮನುಷ್ಯನಾಗಿ ತೋರುವವನು. (ಭಾವಾರ್ಥದೀಪಿಕಾ)

ಇವರ ಧನಮದವನ್ನು ತಗ್ಗಿಸುವುದೆಂದರೆ ಇವರಿಗೆ ಐಶ್ವರ್ಯರೂಪವಾಗಿರುವ ಗೋವುಗಳನ್ನು ಧ್ವಂಸಮಾಡುವುದೇ ಆಗಿದೆ. ಆದುದರಿಂದ ಈ ಕೂಡಲೇ ನೀವು ಗೋಕುಲಕ್ಕೆ ಹೋಗಿ ಅವರ ಗೋಸಂಪತ್ತನ್ನು ವಿನಾಶಗೊಳಿಸಿರಿ. ಸಂವರ್ತಕಮೇಘಗಳೇ! ನಾನೂ ಕೂಡ ಹಿಂದೆಯೇ ಐರಾವತವನ್ನೇರಿ ನಂದನ ಹಳ್ಳಿಯನ್ನು ವಿನಾಶಗೊಳಿಸುವ ಸಲುವಾಗಿ ಮಹಾಪರಾಕ್ರಮಿಗಳಾದ ಮರುದ್ಗಣಗಳೊಡನೆ ಬರುತ್ತೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಹೀಗೆ ಇಂದ್ರನು ಪ್ರಳಯಕಾಲದ ಮೇಘಗಳಿಗೆ ಆಜ್ಞೆಯನ್ನು ಮಾಡಿ ಅವುಗಳ ಕಟ್ಟುಗಳನ್ನು ಬಿಚ್ಚಿ ಕಳುಹಿಸಿಕೊಟ್ಟನು. ಆ ಮೇಘಗಳು ಅತ್ಯಂತ ವೇಗವಾಗಿ ವ್ರಜಸ್ಥಾನಕ್ಕೆ ಹೋಗಿ ಒನಕೆಯಷ್ಟು ದಪ್ಪವಾದ ಧಾರೆಗಳಿಂದ ಮಳೆಗರೆಯುತ್ತಾ ವ್ರಜವಾಸಿಗಳನ್ನು ಪೀಡಿಸತೊಡಗಿದುವು. ನಾಲ್ಕು ದಿಕ್ಕುಗಳೂ ಮಿಂಚಿನಿಂದ ಪ್ರಕಾಶಿಸತೊಡಗಿದುವು. ಮೇಘಗಳು ಪರಸ್ಪರವಾಗಿ ಸಿಡಿಲು-ಗುಡುಗಿನ ಶಬ್ದಮಾಡತೊಡಗಿದುವು. ಮಳೆಗರೆಯಲು ಅನುಕೂಲವಾಗುವಂತೆ ಬಿರುಗಾಳಿಯು ಬೀಸತೊಡಗಿತು. ದೊಡ್ಡ ದೊಡ್ಡ ಆಲಿಕಲ್ಲುಗಳಿಂದ ಕೂಡಿದ ಮಳೆಯು ಸುರಿಯತೊಡಗಿತು. ಹೀಗೆ ಮೇಘಗಳು ಒನಕೆಯಷ್ಟು ದಪ್ಪವಾದ ಜಲಧಾರೆಗಳಿಂದ ಕ್ಷಣ-ಕ್ಷಣಕ್ಕೂ ಮಳೆಯನ್ನು ಸುರಿಸಲು ಅಗಾಧವಾದ ನೀರಿನ ಪ್ರವಾಹದಿಂದ ಮುಳುಗಿಹೋಗುತ್ತಿದ್ದ ವ್ರಜಭೂಮಿಯಲ್ಲಿ ಹಳ್ಳ-ತಿಟ್ಟುಗಳೇ ತಿಳಿಯುತ್ತಿರಲಿಲ್ಲ. ಹೀಗೆ ಎಡೆಬಿಡದೆ ನಿರಂತರವಾಗಿ ಸುರಿಯುತ್ತಿದ್ದ ಜಲಧಾರೆಗೆ ಸಿಕ್ಕಿ ಹಸು-ಕರುಗಳು ನಡುಗತೊಡಗಿದುವು. ಮಳೆಯಲ್ಲಿ ತೋಯ್ದುಹೋಗಿ ಶೀತದಿಂದ ಪೀಡಿತರಾದ ಗೋಪ-ಗೋಪಿಯರು ಕೂಡ ಅನನ್ಯಗತಿಕರಾಗಿ ಗೋವಿಂದನನ್ನೇ ಶರಣು ಹೋದರು. ಅತಿವೃಷ್ಟಿಯಿಂದ ಪೀಡಿತರಾದ ಗೋಪ-ಗೋಪಿಯರು ತಮ್ಮ

---

ಮುಖ್ಯಪ್ರಾಣನೊಬ್ಬನನ್ನು ಹೊರತು ಇತರ ದೇವತೆಗಳಲ್ಲೆಲ್ಲಾ ಕೆಲವೊಮ್ಮೆ ದೈತ್ಯಾವೇಶವುಂಟಾಗುವುದೆಂದೂ ಅದು ತೊಲಗಿದ ಬಳಿಕ ದೇವತಾಸ್ವಭಾವವು ವ್ಯಕ್ತವಾಗುವುದೆಂದೂ ಹೇಳಲ್ಪಟ್ಟಿರುವುದರಿಂದ ಇಂದ್ರನು ದೈತ್ಯಾವಿಷ್ಟನಾಗಿ ಹಿಂದಿನ ಶ್ಲೋಕದಲ್ಲಿ ಭಗವಂತನನ್ನು ನಿಂದಿಸಿದರೂ ಈಗ ತತ್ತ್ವಾರ್ಥವನ್ನೇ ಹೇಳುತ್ತಾನೆಂದು ತಿಳಿಯಬೇಕು. (ವಿಜಯಧ್ವಜೀಯ)

ಶಿರಸ್ಸುಗಳನ್ನು ಎರಡು ಮಂಡಿಗಳ ಮಧ್ಯದಲ್ಲೂ ಇಟ್ಟುಕೊಂಡು ಅಥವಾ ಮುಸುಕು ಹಾಕಿಕೊಂಡು ರಕ್ಷಿಸಿಕೊಳ್ಳುತ್ತಿದ್ದರು. ಅಂತೆಯೇ ಚಿಕ್ಕ-ಚಿಕ್ಕ ಮಕ್ಕಳನ್ನು ಎದೆಗಪ್ಪಿಕೊಂಡು ರಕ್ಷಿಸುತ್ತಿದ್ದರು. ಕಡೆಗೆ ಅವರೆಲ್ಲರೂ ರಕ್ಷಣೆಗಾಗಿ ಶ್ರೀಕೃಷ್ಣನ ಪಾದಮೂಲವನ್ನೇ ಸೇರಿದರು.

**ಕೃಷ್ಣ ಕೃಷ್ಣ ಮಹಾಭಾಗ ತ್ವನ್ನಾಥಂ ಗೋಕುಲಂ ಪ್ರಭೋ ।**
**ತ್ರಾತುಮರ್ಹಸಿ ದೇವಾನ್ನಃ ಕುಪಿತಾದ್ಭಕ್ತವತ್ಸಲ ॥೧೩॥**

"ಮಹಾಭಾಗ್ಯಶಾಲಿಯೇ! ಶ್ರೀಕೃಷ್ಣ! ಪ್ರಭುವೇ! ಗೋಕುಲಕ್ಕೆ ನೀನೇ ಒಡೆಯನು. ಗೊಲ್ಲರಿಗೆ ನೀನೇ ಪರಮಾಶ್ರಯನು. ಭಕ್ತವತ್ಸಲನೇ! ಕುಪಿತನಾಗಿರುವ ಇಂದ್ರದೇವನಿಂದ ನಮ್ಮನ್ನು ರಕ್ಷಿಸು."

ಪರೀಕ್ಷಿತ! ಆಲಿಕಲ್ಲುಗಳಿಂದಲೂ ಮತ್ತು ಮಳೆಯಿಂದಲೂ ಹಿಂಸಿಸಲ್ಪಡುತ್ತಿದ್ದ ಗೋವುಗಳನ್ನೂ, ಗೋಪಾಲರನ್ನೂ ಶ್ರೀಕೃಷ್ಣನು ನೋಡಿದನು. ಕುಪಿತನಾದ ಇಂದ್ರನೇ ಈ ಕಾರ್ಯವನ್ನು ಮಾಡಿರುವನೆಂಬುದನ್ನು ಭಗವಂತನಾದ ಶ್ರೀಕೃಷ್ಣನು ತಿಳಿದುಕೊಂಡನು. ಬಳಿಕ ಶ್ರೀಕೃಷ್ಣನು ಮನಸ್ಸಿನಲ್ಲಿಯೇ ಹೀಗೆ ಯೋಚಿಸಿದನು :

"ನಾವು ಇಂದ್ರನ ಯಾಗವನ್ನು ನಿಲ್ಲಿಸಿದಕಾರಣ ಮಳೆಗಾಲವಲ್ಲದ ಕಾಲದಲ್ಲಿಯೂ ಪ್ರಚಂಡವಾದ ವಾಯುವಿನೊಡನೆ ಆಲಿಕಲ್ಲುಗಳಿಂದ ಯುಕ್ತವಾದ ಘೋರವಾದ ಮಳೆಯನ್ನು ನಿರಂತರವಾಗಿ ಆತನು ಸುರಿಸುತ್ತಿದ್ದಾನೆ. ಈಗ ನಾನು ನನ್ನ ಯೋಗಮಾಯೆಯ ಮೂಲಕ ಅವನು ಮಾಡುತ್ತಿರುವುದಕ್ಕೆ ತಕ್ಕುದಾದ ಪ್ರತೀಕಾರವನ್ನು ಮಾಡುತ್ತೇನೆ. ಮೌಢ್ಯದಿಂದ ತಾವೇ ಲೋಕೇಶ್ವರರೆಂದು ಭಾವಿಸಿ ಹೆಮ್ಮೆಗೊಳ್ಳುತ್ತಿರುವವರ ಐಶ್ವರ್ಯಮದವನ್ನೂ ಮತ್ತು ಅವರ ಅಜ್ಞಾನವನ್ನೂ ತೊಲಗಿಸುತ್ತೇನೆ. ದೇವತೆಗಳು ಯಾವಾಗಲೂ ಸತ್ತ್ವಗುಣಪ್ರಧಾನರಾಗಿರುತ್ತಾರೆ. ತಮ್ಮ ಐಶ್ವರ್ಯ, ಪದವಿ ಇವುಗಳ ಸಂಬಂಧವಾಗಿ ಇವರಲ್ಲಿ ಅಹಂಕಾರವಿರಬಾರದು. ಆದುದರಿಂದ ನಾನೀಗ ಸತ್ತ್ವಗುಣದಿಂದ ಭ್ರಷ್ಟರಾಗಿರುವ ದುಷ್ಟ ದೇವತೆಗಳ ಮಾನಭಂಗಮಾಡುತ್ತೇನೆ. ಹೀಗೆ ಮಾಡುವುದರಿಂದ ಕಡೆಯಲ್ಲಿ

ಅವರಿಗೆ ಶಾಂತಿಯೇ ಲಭಿಸುತ್ತದೆ. ವ್ರಜವಾಸಿಗಳೆಲ್ಲರೂ ನನ್ನನ್ನು ಶರಣು ಹೊಂದಿದ್ದಾರೆ. ನನ್ನನ್ನೇ ಏಕೈಕನಾಥನನ್ನಾಗಿ ಭಾವಿಸಿಕೊಂಡಿರುತ್ತಾರೆ. ನಾನವರನ್ನು ನನ್ನ ರಕ್ಷಣೆಗೆ ಒಳಪಟ್ಟವರೆಂದು ಸ್ವೀಕಾರಮಾಡಿದ್ದೇನೆ. ಆದುದರಿಂದ ನನ್ನ ಯೋಗಮಾಯೆಯ ಮೂಲಕ ವ್ರಜವಾಸಿಗಳ ರಕ್ಷಣೆ ಯನ್ನು ಮಾಡಿಯೇ ತೀರುತ್ತೇನೆ. ಸತ್ಪುರುಷರನ್ನೂ ಶರಣಾಗತರನ್ನೂ ರಕ್ಷಿಸಬೇಕೆಂಬುದು ನನ್ನ ವ್ರತವೂ ಆಗಿದೆ. ಅವರನ್ನು ರಕ್ಷಿಸಬೇಕಾದ ಸಮಯವು ಈಗ ಸನ್ನಿಹಿತವಾಗಿದೆ."




ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಹೀಗೆ ಭಾವಿಸಿ–ಹುಡುಗರು ನಾಯಿಕೊಡೆಯನ್ನೆತ್ತಿ ಹಿಡಿದುಕೊಳ್ಳುವಂತೆ ಕೇವಲ ಲೀಲೆಯಿಂದಲೇ ಗೋವರ್ಧನಪರ್ವತವನ್ನು ಒಂದೇ ಕೈಯಲ್ಲಿ ಎತ್ತಿ ಹಿಡಿದು ಗೋಪರನ್ನು ಕುರಿತು ಹೇಳಿದನು :

"ಅಮ್ಮ! ಅಪ್ಪ! ವ್ರಜವಾಸಿಗಳೇ! ನನ್ನ ಮಾತನ್ನು ಕೇಳಿರಿ. ನೀವೆಲ್ಲರೂ ಈ ಕೂಡಲೇ ನಿಮ್ಮ ಗೋವುಗಳೊಡನೆಯೂ ಇತರ ಸಾಮಗ್ರಿ ಗಳೊಡನೆಯೂ ಈ ಪರ್ವತದ ತಳಭಾಗಕ್ಕೆ ಬಂದು ಯಥೋಚಿತವಾಗಿ ಯಾವ ಆತಂಕವೂ ಇಲ್ಲದೆ ಕುಳಿತುಕೊಳ್ಳಿರಿ. ನನ್ನ ಕೈಯಿಂದ ಈ ಪರ್ವತವು ಜಾರಿ ಬೀಳುವುದೆಂದು ನೀವು ಸಂದೇಹಿಸಬೇಕಾಗಿಲ್ಲ. ನೀವು ಸ್ವಲ್ಪವಾದರೂ ಭಯಪಡಬೇಡಿರಿ. ಚಂಡಮಾರುತದಿಂದಲೂ, ಧಾರಾಕಾರವಾದ ಜಡಿಮಳೆ

ಗಳಿಂದಲೂ ಮತ್ತು ಆಲಿಕಲ್ಲುಗಳಿಂದಲೂ ಯುಕ್ತವಾದ ಪ್ರಳಯಕಾಲದ ಮಳೆಯ ಭಯದಿಂದ ನಿಮ್ಮನ್ನು ರಕ್ಷಿಸುವ ಸಲುವಾಗಿಯೇ ನಾನು ಈ ಯುಕ್ತಿಯನ್ನು ಮಾಡಿದ್ದೇನೆ.” ಹೀಗೆ ಶ್ರೀಕೃಷ್ಣನು ವ್ರಜವಾಸಿಗಳಿಗೆ ಆಶ್ವಾಸನೆಯನ್ನಿತ್ತು ಧೈರ್ಯವನ್ನು ತುಂಬಲಾಗಿ–ಗೋಪಾಲರು ತಮ್ಮ ಗೋಧನವನ್ನೂ, ಕರುಗಳನ್ನೂ, ಆಡುಗಳನ್ನೂ, ಆಶ್ರಿತರನ್ನೂ, ಪುರೋಹಿತ ರನ್ನೂ, ಭೃತ್ಯರನ್ನೂ, ಮಕ್ಕಳು-ಮರಿಗಳನ್ನೂ ಜೊತೆಯಲ್ಲಿ ಕರೆದುಕೊಂಡು ಇಕ್ಕಟ್ಟಿಲ್ಲದಂತೆ ಗೋವರ್ಧನಪರ್ವತದ ಹಳ್ಳದಲ್ಲಿ ಸೇರಿಕೊಂಡರು.

ಶ್ರೀಕೃಷ್ಣನು, ವ್ರಜವಾಸಿಗಳು ನೋಡುತ್ತಿದ್ದಂತೆ ಏಳು ದಿವಸಗಳ ಕಾಲ ಹಸಿವು-ಬಾಯಾರಿಕೆಗಳನ್ನೂ ಸುಖಾಪೇಕ್ಷೆಯನ್ನೂ ತೊರೆದು ಒಂದು ಹೆಜ್ಜೆಯಷ್ಟಾದರೂ ಕದಲದೆ ಗೋವರ್ಧನಗಿರಿಯನ್ನೆತ್ತಿಕೊಂಡು ಹಾಗೆಯೇ ಸ್ತಬ್ಧನಾಗಿ ನಿಂತಿದ್ದನು. ಶ್ರೀಕೃಷ್ಣನ ಇಂತಹ ಪರಮಾದ್ಭುತವಾದ ಯೋಗಮಾಯೆಯನ್ನು ಕಂಡು ಇಂದ್ರನಿಗೆ ಅತ್ಯಾಶ್ಚರ್ಯವಾಯಿತು. ಅವನ ಗರ್ವವು ಕುಗ್ಗಿತು. ಉದ್ದೇಶವು ಈಡೇರಲಿಲ್ಲ. ತಾನಾಗಿಯೇ ಮೇಘಗಳನ್ನು ಹಿಂದಕ್ಕೆ ಕರೆಸಿಕೊಂಡು ಮಳೆಯು ನಿಲ್ಲುವಂತೆ ಮಾಡಿದನು. ಭಯಂಕರ ವಾದ ಬಿರುಗಾಳಿಯೂ ಮಳೆಯೂ ನಿಂತುದನ್ನೂ, ಆಕಾಶವು ಮೋಡಗಳಿ ಲ್ಲದೆ ನಿರ್ಮಲವಾದುದನ್ನೂ, ಸೂರ್ಯನು ಎಂದಿನಂತೆ ಪ್ರಕಾಶಮಾನನಾಗಿ ರುವುದನ್ನೂ ನೋಡಿ ಗೋವರ್ಧನಧಾರಿಯಾದ ಶ್ರೀಕೃಷ್ಣನು ಗೋಪಾಲರಿಗೆ ಹೇಳಿದನು :

“ಗೋಪಾಲರೇ! ಈಗ ನೀವು ಯಾವ ಭಯವೂ ಇಲ್ಲದೆ ನಿಮ್ಮ ಗೋವುಗಳೊಡನೆ, ಹೆಂಡಿರು-ಮಕ್ಕಳೊಡನೆ, ಬಂಧು-ಬಳಗದವರೊಡನೆ ಹಳ್ಳದಿಂದ ಹೊರಕ್ಕೆ ಬನ್ನಿರಿ. ಇದೋ ನೋಡಿರಿ! ಈಗ ಬಿರುಗಾಳಿಯೂ ನಿಂತಿದೆ ; ಮಳೆಗರೆಯುವುದೂ ನಿಂತು ಹೋಗಿದೆ. ನದಿಗಳಲ್ಲಿಯೂ ಪ್ರವಾಹವು ಇಳಿಮುಖವಾಗುತ್ತಿದೆ.”

ಶ್ರೀಕೃಷ್ಣನು ಹೀಗೆ ಹೇಳಿದನಂತರ ಗೋಪಾಲಕರು ತಮ್ಮ ಹೆಂಡಿರು-ಮಕ್ಕಳನ್ನೂ ವೃದ್ಧರಾದ ತಾಯಿ-ತಂದೆಗಳನ್ನೂ ಕರೆದುಕೊಂಡು, ಗಾಡಿ ಗಳಲ್ಲಿ ಸಾಮಗ್ರಿಗಳನ್ನು ತುಂಬಿಕೊಂಡು, ದನ-ಕರುಗಳನ್ನೂ ಸಾಗಿಸಿಕೊಂಡು

ಮೆಲ್ಲ-ಮೆಲ್ಲನೆ ಅಲ್ಲಿಂದ ಹೊರಟರು. ಸಮಸ್ತಪ್ರಾಣಿಗಳೂ ನೋಡುತ್ತಿದ್ದಂತೆಯೇ ಮಹಾಶಕ್ತಿಶಾಲಿಯಾದ ಶ್ರೀಕೃಷ್ಣನು ಗೋವರ್ಧನಪರ್ವತವನ್ನು ಅದರ ಸ್ಥಾನದಲ್ಲಿ ಲೀಲಾಜಾಲವಾಗಿ ಇರಿಸಿದನು. ಪರ್ವತವನ್ನು ಕೆಳಕ್ಕಿಳಿಸಿದ ಶ್ರೀಕೃಷ್ಣನನ್ನು ನೋಡಿದೊಡನೆಯೇ ವ್ರಜವಾಸಿಗಳ ಹೃದಯವು ಪ್ರೇಮರಸದಿಂದ ತುಂಬಿಹೋಯಿತು. ಅವರ ಆನಂದೋತ್ಸಾಹಗಳನ್ನು ವರ್ಣಿಸಲೇ ಸಾಧ್ಯವಿರಲಿಲ್ಲ. ಅವನ ಬಳಿಗೆ ಅವಸರದಿಂದ ಹೋಗಿ ಕೆಲವರು ಅವನನ್ನು ಬಾಚಿ ತಬ್ಬಿಕೊಂಡರು. ಕೆಲವರು ಮುತ್ತಿಟ್ಟರು. ಎಲ್ಲರೂ ಅವನನ್ನು ಮನಸ್ಸಿಗೆ ತೋರಿದಂತೆ ಸತ್ಕರಿಸಿದರು. ವೃದ್ಧೆಯರಾದ ಗೋಪಿಯರು ಮಹಾನಂದಯುಕ್ತರಾಗಿ ತುಂಬುಹೃದಯದಿಂದ ಆತನಿಗೆ ಆಶೀರ್ವದಿಸಿದರು. ಗೋಪಿಯರು ಸ್ನೇಹಪರವಶರಾಗಿ ಮೊಸರು-ಅಕ್ಷತೆ ಮತ್ತು ಜಲದಿಂದ ಶ್ರೀಕೃಷ್ಣಸ್ವಾಮಿಯನ್ನು ಪೂಜಿಸಿದರು. ಯಶೋದೆ, ರೋಹಿಣಿ, ನಂದಗೋಪ, ಬಲಿಷ್ಠರಲ್ಲಿ ಶ್ರೇಷ್ಠನಾದ ಬಲರಾಮ ಮುಂತಾದವರು ಸ್ನೇಹಪರವಶರಾಗಿ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿ ಕೊಂಡು ಆಶೀರ್ವದಿಸಿದರು.

ಪರೀಕ್ಷಿತನೇ! ಆ ಸಮಯದಲ್ಲಿ ಆಕಾಶದಲ್ಲಿ ಉಪಸ್ಥಿತರಾಗಿದ್ದ ದೇವತೆಗಳು, ಸಾಧ್ಯರು, ಸಿದ್ಧರು, ಗಂಧರ್ವರು, ಚಾರಣರು ಪರಮ ಸಂತುಷ್ಟರಾಗಿ ಶ್ರೀಕೃಷ್ಣಸ್ವಾಮಿಯನ್ನು ಸ್ತುತಿಸುತ್ತಾ ಅವನ ಮೇಲೆ ಪುಷ್ಪಗಳ ಮಳೆಗರೆದರು. ಸ್ವರ್ಗದಲ್ಲಿ ದೇವತೆಗಳು ಶಂಖಗಳನ್ನೂದುತ್ತಾ ದುಂದುಭಿಗಳನ್ನು ಬಾರಿಸುತ್ತಿದ್ದರು. ತುಂಬುರುವೇ ಮೊದಲಾದ ಗಂಧರ್ವ ಶ್ರೇಷ್ಠರು ಭಗವಂತನ ಲೀಲಾಪ್ರಸಂಗಗಳನ್ನು ಸುಮಧುರವಾಗಿ ಗಾನ ಮಾಡುತ್ತಿದ್ದರು. ಬಳಿಕ ಶ್ರೀಕೃಷ್ಣನು ಪರಮಪ್ರಿಯರಾದ ಗೊಲ್ಲಬಾಲಕರಿಂದ ಪರಿವೃತನಾಗಿ ಬಲರಾಮನೊಡನೆ ವ್ರಜಕ್ಕೆ ಹೊರಟನು. ಅವನೊಡನೆ ಆನಂದಭರಿತರಾಗಿದ್ದ ಗೋಪಿಯರೂ ಶ್ರೀಕೃಷ್ಣನ ಚೇತೋಹಾರಿಗಳಾದ ಗೋವರ್ಧನೋದ್ಧರಣವೇ ಮುಂತಾದ ಲೀಲಾಪ್ರಸಂಗಗಳನ್ನು ಹೃದಯಂಗಮವಾಗಿ ಹಾಡುತ್ತಾ ವ್ರಜಕ್ಕೆ ತೆರಳಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೫ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೨೬ನೆಯ ಅಧ್ಯಾಯ

# ಶ್ರೀಕೃಷ್ಣನ ಪ್ರಭಾವದ ವಿಷಯವಾಗಿ ನಂದಗೋಪನೇ ಮೊದಲಾದವರ ಜಿಜ್ಞಾಸೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಏವಂವಿಧಾನಿ ಕರ್ಮಾಣಿ ಗೋಪಾಃ ಕೃಷ್ಣಸ್ಯ ವೀಕ್ಷ್ಯ ತೇ ।**
**ಅತದ್ವೀರ್ಯವಿದಃ ಪ್ರೋಚುಃ ಸಮಭ್ಯೇತ್ಯ ಸುವಿಸ್ಮಿತಾಃ ॥೧॥**

ಪರೀಕ್ಷಿತನೇ! ವ್ರಜದ ಗೋಪಾಲರು ಭಗವಂತನಾದ ಶ್ರೀಕೃಷ್ಣನ ಗೋವರ್ಧನೋದ್ಧಾರದಂತಹ ಅಲೌಕಿಕವಾದ, ಅದ್ಭುತವಾದ, ಅಪ್ರಮೇಯವಾದ ಲೀಲಾಪ್ರಸಂಗಗಳನ್ನು ನೋಡಿ ಆಶ್ಚರ್ಯಭರಿತರಾದರು. ಶ್ರೀಕೃಷ್ಣನ ಶಕ್ತಿಯು ಅಪಾರವೆಂಬುದು ಅವರಿಗೆ ತಿಳಿದಿರಲಿಲ್ಲ. ಅವರೆಲ್ಲರೂ ಒಟ್ಟಾಗಿ ಸೇರಿ ಇದೇ ವಿಷಯವನ್ನೇ ಪರಸ್ಪರವಾಗಿ ಮಾತನಾಡಿಕೊಂಡರು. "ಈ ಬಾಲಕನ ಕ್ರಿಯೆಗಳೆಲ್ಲವೂ ಅತ್ಯದ್ಭುತವಾದುವುಗಳು. ನಮ್ಮ ಬುದ್ಧಿಗೆ ಮೀರಿದುವುಗಳು. ಇಂತಹ ಪರಮಾದ್ಭುತಬಾಲಕನು ನಮ್ಮಂತಹ ಹಳ್ಳಿಗರ ಮಧ್ಯದಲ್ಲಿ ಜನ್ಮತಾಳಿದ್ದು ವೀರಬಾಲಕನ ದೃಷ್ಟಿಯಿಂದ ಜುಗುಪ್ಸಿತವಾದುದ್ದೇ ಆಗಿದೆ. ನಿಶ್ಚಯವಾಗಿಯೂ ಇಲ್ಲಿವನು ಹುಟ್ಟಬಾರದಾಗಿತ್ತು. ಇವನ ಅದ್ಭುತ ಕಾರ್ಯಗಳು ಒಂದೇ? ಎರಡೇ? ಅಪಾರ. ಗಜರಾಜನು ಸರೋವರದಲ್ಲಿರುವ ಕಮಲವನ್ನು ಕಿತ್ತು ಮೇಲೆತ್ತಿ ಹಿಡಿಯುವಂತೆ–ಏಳು ವರ್ಷದ ಈ ಬಾಲಕನು ಗೋವರ್ಧನಗಿರಿಯನ್ನು ಏಳು ದಿನಗಳ ಪರ್ಯಂತವಾಗಿ ನಿರಾಯಾಸವಾಗಿ ಒಂದೇ ಕೈಯಿಂದ ಮೇಲೆತ್ತಿ ಹಿಡಿದು ನಿಂತಿದ್ದನು. ಇದು ಇವನಿಂದ ಹೇಗೆ ಸಾಧ್ಯವಾಯಿತು? ಇವನಿನ್ನೂ ಹಸುಳೆಯಾಗಿದ್ದಾಗಲೇ ಭಯಂಕರಳಾದ ಪೂತನೆಯು ವಿಷದ ಹಾಲುಣಿಸಲು ಬಂದಿದ್ದಳು. ಕಣ್ಣು ಮುಚ್ಚಿಕೊಂಡು ಸ್ತನ್ಯವನ್ನು ಪಾನಮಾಡಿದ ಇವನು ಸ್ತನ್ಯದೊಡನೆ–ಕಾಲನು ಶರೀರದಿಂದ ಆಯುಷ್ಯವನ್ನು ಅಪಹರಿಸುವಂತೆ–ಪೂತನೆಯ ಪ್ರಾಣಗಳನ್ನೇ ಅಪಹರಿಸಿಬಿಟ್ಟನು. ಎಂತಹ ಅದ್ಭುತವಿದು! ಇವನಿನ್ನೂ ಮೂರು ತಿಂಗಳ ಮಗುವಾಗಿದ್ದಾಗ ಗಾಡಿಯ ಕೆಳಗಡೆ ಅಳುತ್ತಾ ಮಲಗಿದ್ದನು. ಅಳುತ್ತಳುತ್ತಾ ಕೈ-ಕಾಲುಗಳನ್ನು ಆಡಿಸುತ್ತಿದ್ದಾಗ ಒಮ್ಮೆ ಅವನ ಪುಟ್ಟ

ಕಾಲು ಗಾಡಿಗೆ ತಗುಲಿ ಸಾಮಗ್ರಿಗಳಿಂದ ತುಂಬಿದ್ದ ಆ ಗಾಡಿಯು ತಲೆಕೆಳಗಾಗಿಬಿಟ್ಟಿತು. ಇದು ಹೇಗಾಯಿತೆಂದು ನಮ್ಮಿಂದ ಯೋಚಿಸಲಾದರೂ ಸಾಧ್ಯವೇ?

ಗೋಪಬಂಧುಗಳೇ! ಮತ್ತೊಂದು ಪ್ರಸಂಗವನ್ನು ಸ್ಮರಿಸಿ ಕೊಳ್ಳೋಣ. ಈ ನಮ್ಮ ಮುದ್ದುಕೃಷ್ಣನಿಗೆ ಆಗ ಒಂದು ವರ್ಷ ತುಂಬಿತ್ತು. ತೃಣಾವರ್ತನೆಂಬ ರಾಕ್ಷಸನು ಬಿರುಗಾಳಿಯ ರೂಪವನ್ನು ಧರಿಸಿ ಮಗುವನ್ನು ಆಕಾಶಕ್ಕೆ ಹಾರಿಸಿಕೊಂಡು ಹೋಗಿಬಿಟ್ಟನು. ನಾವೆಲ್ಲರೂ ಮಗುವಿನ ಆಸೆಯನ್ನು ತೊರೆದಾಗಿತ್ತು. ಆದರೆ ಈ ಅದ್ಭುತ ಬಾಲಕನು ರಾಕ್ಷಸನ ಕುತ್ತಿಗೆಯನ್ನೇ ಬಲವಾಗಿ ಹಿಡಿದು ಅವನನ್ನು ಕೆಳಗೆ ಬೀಳುವಂತೆ ಮಾಡಿ ಸಂಹರಿಸಿಬಿಟ್ಟನು.

ಇನ್ನೊಂದು ಪ್ರಸಂಗ : ಈ ಕಳ್ಳಕೃಷ್ಣನು ಬೆಣ್ಣೆಯನ್ನು ಕದಿಯುತ್ತಿದ್ದಾಗ ತಾಯಿಯ ಕೈಗೆ ಸಿಕ್ಕಿಬಿದ್ದನು. ಇವನ ತುಂಟತನವನ್ನು ತಡೆಯಲಾಗದೇ ಇವನ ತಾಯಿ ಯಶೋದೆಯು ಇವನನ್ನು ಒರಳುಕಲ್ಲಿಗೆ ಕಟ್ಟಿಹಾಕಿಬಿಟ್ಟಳು. ಈ ಪೋರನು ಒರಳುಕಲ್ಲಿನೊಡನೆಯೇ ಜೋಡಿಮತ್ತೀ ಮರದ ಬಳಿಗೆ ಹೋಗಿ ಅವುಗಳ ಮಧ್ಯದಲ್ಲಿ ನುಸುಳಿ ಅದ್ಭುತವಾಗಿದ್ದ ಆ ವೃಕ್ಷಗಳನ್ನೇ ಬುಡಮೇಲು ಮಾಡಿಬಿಟ್ಟನು. ಇದೇನು ನಂಬಲು ಸಾಧ್ಯವಾದ ಪ್ರಸಂಗವೇ? ಹತ್ತಿರದಲ್ಲಿದ್ದ ಬಾಲಕರು ಹೇಳಿದರೂ ನಾವು ಆಗ ಅವರ ಮಾತನ್ನು ನಂಬಲೇ ಇಲ್ಲ. ಇತ್ತೀಚಿನ ಪ್ರಸಂಗಗಳಿಂದ ಅದ್ಭುತಕರ್ಮನಾದ ಇವನೇ ಆ ವೃಕ್ಷಗಳನ್ನು ಉರುಳಿಸಿದನೆಂಬುದು ದೃಢವಾಗಿದೆ. ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನು ಬಲರಾಮನೊಡನೆಯೂ ಗೋಪಬಾಲಕರೊಡನೆಯೂ ಹಸುಗಳನ್ನು ಮೇಯಿಸುತ್ತಿದ್ದನು. ಆ ಸಮಯದಲ್ಲಿ ಕೃಷ್ಣನನ್ನು ಕೊಲ್ಲುವ ಸಲುವಾಗಿಯೇ ದೈತ್ಯನೊಬ್ಬನು ಬಕಪಕ್ಷಿಯ ರೂಪವನ್ನು ಧರಿಸಿ ಬಂದಿದ್ದನು. ಬಕಪಕ್ಷಿಯ ರೂಪದಲ್ಲಿರುವವನು ರಾಕ್ಷಸನೆಂದು ತಿಳಿದ ಕೂಡಲೇ ಈ ನಮ್ಮ ಪ್ರೀತಿಯ ಪೋರನು ಅದರ ಕೊಕ್ಕಿನ ಎರಡು ಭಾಗಗಳನ್ನೂ ಎರಡು ಕೈಗಳಿಂದ ಹಿಡಿದು ನೊಜೆಹುಲ್ಲನ್ನು ಸೀಳುವಂತೆ ಆ ಪಕ್ಷಿಯನ್ನು ಸೀಳಿಬಿಟ್ಟನು. ಮತ್ತೊಬ್ಬ ರಾಕ್ಷಸನೂ ಶ್ರೀಕೃಷ್ಣನನ್ನು ಸಂಹರಿಸುವ ಆಶಯದಿಂದಲೇ ಕರುವಿನ ವೇಷವನ್ನು ಧರಿಸಿ ಕರುಗಳ

ಮಧ್ಯದಲ್ಲಿ ಸೇರಿಕೊಂಡು ಹೊಂಚುಹಾಕುತ್ತಿದ್ದನು. ಇದನ್ನರಿತ ಶ್ರೀಕೃಷ್ಣನು ಆ ವತ್ಸಾಸುರನನ್ನು ಆಡಾಡುತ್ತಲೇ ಸಂಹರಿಸಿದ್ದಲ್ಲದೆ ಸತ್ತುಹೋಗಿದ್ದ ಆ ವತ್ಸಾಸುರನ ಶರೀರವನ್ನು ಬೇಲದ ಮರದ ಮೇಲಕ್ಕೆಸೆದು ನೂರಾರು ಬೇಲದ ಹಣ್ಣುಗಳನ್ನು ಉದುರಿಸಿದನು.

ಮತ್ತೊಂದು ಪ್ರಸಂಗದಲ್ಲಿ : ಬಲರಾಮನಿಂದ ಕೂಡಿದ ಶ್ರೀಕೃಷ್ಣನು ಕತ್ತೆಯ ರೂಪದಲ್ಲಿದ್ದ ಧೇನುಕಾಸುರನನ್ನೂ ಅವನ ಬಂಧುಗಳನ್ನೂ ಸಂಹರಿಸಿ ತಾಳವನವಾಸಿಗಳಿಗೆ ಕ್ಷೇಮವನ್ನುಂಟುಮಾಡಿದನು ಮತ್ತು ತಾಳವನದಲ್ಲಿ ಯಾವಾಗಲೂ ಪರಿಪಕ್ವವಾದ ತಾಳೇಹಣ್ಣುಗಳು ಸಿಕ್ಕುವಂತೆ ಮಾಡಿದನು. ಇನ್ನೊಂದು ಪ್ರಸಂಗದಲ್ಲಿ : ಬಲರಾಮನ ಮೂಲಕವಾಗಿ ಭಯಂಕರನಾಗಿದ್ದ ಪ್ರಲಂಬಾಸುರನನ್ನು ಸಂಹಾರಮಾಡಿಸಿದನು. ಗೋವು ಗಳನ್ನೂ, ಗೋಪಾಲರನ್ನೂ ಕಾಡುಗಿಚ್ಚಿನಿಂದ ಮುಕ್ತಗೊಳಿಸಿದನು. ವಿಷದ ಬಲದಿಂದಲೇ ಮದಮತ್ತನಾಗಿದ್ದ ಕಾಳಿಯನ ಗರ್ವವನ್ನು ಮುರಿದು ಬಲಾತ್ಕಾರಪೂರ್ವಕವಾಗಿ ಅವನನ್ನು ಮಡುವಿನಿಂದ ಹೊರದೂಡಿ ಯಮುನಾನದಿಯನ್ನು ವಿಷರಹಿತವನ್ನಾಗಿ ಮಾಡಿದನು.

ನಂದರಾಜ! ಈ ಗೋಕುಲದಲ್ಲಿ ವಾಸಮಾಡುತ್ತಿರುವ ನಮಗೆ ನಿನ್ನ ಮಗನಲ್ಲಿ ಅನಿರ್ವಾಚ್ಯವಾದ ಪ್ರೀತಿಯಿರುವುದು ನಿಶ್ಚಯ. ಈ ಬಾಲಕ ನಿಗೂ ನಮ್ಮ ಮೇಲೆ ಅಷ್ಟೇ ಸ್ವಾಭಾವಿಕವಾದ ಪ್ರೀತಿಯಿದೆ. ಇದಕ್ಕೆ ಕಾರಣವೇನಿರಬಹುದು? ಏಳು ವರ್ಷಗಳ ಬಾಲಕನೆಂದರೇನು! ಮಹಾಪರ್ವತವನ್ನು ಧರಿಸುವುದೆಂದರೇನು? ಇದು ನಡೆದದ್ದಂತೂ ನಿಜ. ನಾವೇ ಇದರ ಪ್ರತ್ಯಕ್ಷಾನುಭವಿಗಳು ಮತ್ತು ಪ್ರೇಕ್ಷಕರು. ವಜ್ರನಾಥನೇ! ನಿನ್ನ ಮಗನು ಯಾರಾಗಿರಬಹುದೆಂಬ ವಿಷಯದಲ್ಲಿ ನಮಗೆ ಸಂದೇಹ ವುಂಟಾಗಿದೆ. ಇವನಂತೂ ಕೇವಲ ಗೊಲ್ಲರ ಬಾಲಕನಲ್ಲ. ಅದ್ಭುತಪವಾಡ ಪುರುಷ. ಇವನು ಯಾರೆಂಬುದು ತಿಳಿಯದು. ಈ ನಮ್ಮ ಸಮಸ್ಯೆಯನ್ನು ನೀನೇ ಬಗೆಹರಿಸಿಕೊಡಬೇಕಾಗಿದೆ."

ನಂದಗೋಪನು ಹೇಳುತ್ತಾನೆ :

"ಗೋಪಾಲರೇ! ನನ್ನ ಮಾತನ್ನು ಸಾವಧಾನತೆಯಿಂದ ಕೇಳಿರಿ.

ನನ್ನ ಮಗನ ವಿಷಯದಲ್ಲಿ ನಿಮಗಿರುವ ಸಂದೇಹದ ನಿವಾರಣೆಯಾಗುತ್ತದೆ. ಮಹರ್ಷಿಗಳಾದ ಗರ್ಗರು ನನ್ನ ಮಗನ ವಿಷಯದಲ್ಲಿ ಏನು ಹೇಳಿದ್ದರೋ ಅದನ್ನೇ ನಿಮಗೆ ಹೇಳುತ್ತೇನೆ. ನಾಮಕರಣೋತ್ಸವದ ಸಂದರ್ಭದಲ್ಲಿ ಅವರು ನಮಗೆ ಹೀಗೆ ಹೇಳಿದರು :

"ನಂದಗೋಪ! ಶ್ಯಾಮಲವರ್ಣನಾಗಿರುವ ಈ ನಿನ್ನ ಬಾಲಕನು ಒಂದೊಂದು ಯುಗದಲ್ಲಿಯೂ ಒಂದೊಂದು ಬಣ್ಣದಿಂದ ಹುಟ್ಟುತ್ತಾನೆ. ಕೃತಯುಗದಲ್ಲಿ ಬಿಳೀಬಣ್ಣದವನಾಗಿಯೂ, ತ್ರೇತಾಯುಗದಲ್ಲಿ ಕೆಂಪುಬಣ್ಣ ದವನಾಗಿಯೂ, ದ್ವಾಪರಯುಗದಲ್ಲಿ ಹಳದೀಬಣ್ಣದವನಾಗಿಯೂ ಹುಟ್ಟಿ ದ್ದನು. ಈಗ ದ್ವಾಪರಯುಗದ ಅಂತ್ಯದಲ್ಲಿ ಕಪ್ಪುಬಣ್ಣದವನಾಗಿ ಹುಟ್ಟಿದ್ದಾನೆ. ಆದುದರಿಂದ ಶ್ಯಾಮಲವರ್ಣದವನಾದ ಈ ಬಾಲಕನಿಗೆ ಶ್ರೀಕೃಷ್ಣನೆಂದೇ ಹೆಸರು. ಈ ನಿನ್ನ ಮಗನು ಹಿಂದೆ ವಸುದೇವನ ಮಗನಾಗಿಯೂ ಹುಟ್ಟಿದ್ದನು. ಆದುದರಿಂದಲೇ ಈ ರಹಸ್ಯವನ್ನು ತಿಳಿದಿರುವ ಜನರು ಈ ನಿನ್ನ ಮಗನನ್ನು–'ಶ್ರೀಮಾನ್ ವಾಸುದೇವ'–ಎಂದೂ ಕರೆಯುತ್ತಾರೆ. ನಿನ್ನ ಮಗನಿಗೆ ಹಲವಾರು ಇತರ ನಾಮಧೇಯಗಳೂ ಇವೆ. ಇವನ ಕರ್ಮಗಳಿಗೆ ಅನುಸಾರವಾಗಿ ಹಲವಾರು ನಾಮಧೇಯಗಳನ್ನೂ ನಾನು ತಿಳಿದಿರುತ್ತೇನೆ. ಪ್ರಪಂಚದ ಸಾಮಾನ್ಯಜನರಿಗೆ ಈ ಹೆಸರುಗಳು ತಿಳಿಯವು. ಸಮಸ್ತ ಗೋಪಾಲಕರಿಗೂ, ಗೋವುಗಳಿಗೂ ಆನಂದವನ್ನುಂಟುಮಾಡುವ ಈ ನಿನ್ನ ಮಗನು ನಿಮಗೆ ಪರಮಕಲ್ಯಾಣಕರನಾಗುತ್ತಾನೆ. ಇವನ ಸಹಾಯದಿಂದ ನೀವು ದೊಡ್ಡ ದೊಡ್ಡ ವಿಪತ್ತುಗಳಿಂದಲೂ ಬಹಳ ಸುಲಭವಾಗಿ ಪಾರಾಗುವಿರಿ. ವ್ರಜರಾಜನೇ! ಹಿಂದೊಮ್ಮೆ ಭೂಮಂಡಲವು ಅರಾಜಕವಾಗಿತ್ತು. ದರೋಡೆಕೋರರ ಉಪಟಳವು ಹೆಚ್ಚಾಗಿದ್ದಿತು. ದರೋಡೆಕೋರರು ಸತ್ಪುರುಷರನ್ನು ಬಹಳವಾಗಿ ಪೀಡಿಸುತ್ತಿದ್ದರು. ಆ ಸಮಯದಲ್ಲಿ ಸಜ್ಜನರು ನಿನ್ನ ಈ ಮಗನ ಸಹಾಯವನ್ನು ಪಡೆದು ದರೋಡೆಕೋರರನ್ನು ಹೇಳ-ಹೆಸರಿಲ್ಲದಂತೆ ಧ್ವಂಸಮಾಡಿಬಿಟ್ಟರು. ಯಾವ ಮಹಾಭಾಗ್ಯಶಾಲಿಗಳಾದ ಮನುಷ್ಯರು ಈ ಮುದ್ದುಕೃಷ್ಣನನ್ನು ಪ್ರೀತಿಸುವರೋ ಅಂತಹವರನ್ನು ಶತ್ರು ಗಳೆಂದಿಗೂ ಜಯಿಸಲಾರರು. ವಿಷ್ಣುವಿನ ಪಕ್ಷದಲ್ಲಿರುವವರನ್ನು ಅಸುರರು ಹೇಗೆ ಬಾಧೆಪಡಿಸಲಾರರೋ ಹಾಗೆ ಈ ಶ್ರೀಕೃಷ್ಣನ ಆಶ್ರಯವನ್ನು ಪಡೆದವ

ರನ್ನು ಎಂತಹ ಶತ್ರುಗಳೂ ಬಾಧೆಪಡಿಸಲಾರರು. ನಂದಗೋಪ! ಈ ನಿನ್ನ ಮಗನು ಗುಣ, ಸಂಪತ್ತು, ಸೌಂದರ್ಯ, ಕೀರ್ತಿ, ಪ್ರಭಾವ–ಈ ಎಲ್ಲ ದೃಷ್ಟಿಗಳಿಂದಲೂ ಪರಾತ್ಪರನಾದ ಶ್ರೀಮನ್ನಾರಾಯಣನಿಗೆ ಅನುರೂಪ ನಾಗಿರುತ್ತಾನೆ. ಇವನ ಅಲೌಕಿಕವಾದ ಕಾರ್ಯಗಳನ್ನು ನೋಡಿ ಆಶ್ಚರ್ಯ ಪಡುವ ಕಾರಣವಿಲ್ಲ."

ಗೋಪಾಲರೇ! ಹೀಗೆ ಗರ್ಗಮಹರ್ಷಿಗಳು ಪ್ರತ್ಯಕ್ಷವಾಗಿ ಬಂದು ನನಗೆ ಈ ಆದೇಶವನ್ನು ನೀಡಿ ತಮ್ಮ ಮನೆಗೆ ಹೊರಟುಹೋದರು. ಅಂದಿನಿಂದ ನಾನು ಕ್ಲಿಷ್ಟವಾದ ಕಾರ್ಯಗಳನ್ನೂ ಬಹಳ ಸುಲಭವಾಗಿ ಮಾಡುವ ಈ ನಮ್ಮ ಶ್ರೀಕೃಷ್ಣನನ್ನು ನಾರಾಯಣಾಂಶಸಂಭೂತನೆಂದೇ ಭಾವಿಸಿದ್ದೇನೆ."

ಪರೀಕ್ಷಿತಮಹಾರಾಜ! ನಂದಗೋಪನ ಮುಖದಿಂದ ಭಗವಂತನ ಸಂಬಂಧವಾದ ಗರ್ಗಗೀತವನ್ನು ಕೇಳಿದ ಬಳಿಕ ಆ ವ್ರಜವಾಸಿಗಳಿಗೆ ಶ್ರೀಕೃಷ್ಣನ ಲೀಲಾವಿನೋದಗಳಲ್ಲಿ ವಿಸ್ಮಯವುಂಟಾಗಲಿಲ್ಲ. ಏಕೆಂದರೆ : ಈಗ ಅವರು ಅಮಿತತೇಜಸ್ವಿಯಾದ ಶ್ರೀಕೃಷ್ಣನ ಪ್ರಭಾವವನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಆನಂದಭರಿತರಾದ ಅವರು ನಂದಗೋಪನನ್ನೂ ಶ್ರೀಕೃಷ್ಣನನ್ನೂ ಬಹಳವಾಗಿ ಪ್ರಶಂಸಿಸಿದರು.

**ದೇವೇ ವರ್ಷತಿ ಯಜ್ಞವಿಪ್ಲವರುಷಾ ವಜ್ರಾಶ್ಮವರ್ಷಾನಿಲೈಃ**
**ಸೀದತ್ಪಾಲಪಶುಸ್ತ್ರಿ ಆತ್ಮಶರಣಂ ದೃಷ್ಟ್ವಾನುಕಮ್ಪ್ಯುತ್ಸ್ಮಯನ್ ।**
**ಉತ್ಪಾಟ್ಯೈಕಕರೇಣ ಶೈಲಮಬಲೋ ಲೀಲೋಚ್ಛಿಲೀನ್ಧ್ರಂ ಯಥಾ**
**ಬಿಭ್ರದ್ಗೋಷ್ಠಮಪಾನ್ಮಹೇನ್ದ್ರಮದಭಿತ್ಪ್ರೀಯಾನ್ನ**
**ಇನ್ದ್ರೋ ಗವಾಮ್ ॥೨೫॥**

ತನ್ನ ಸಲುವಾಗಿ ಮಾಡಬೇಕಾಗಿದ್ದ ಇಂದ್ರಯಜ್ಞದ ಭಂಗವಾಯಿತೆಂದು ತಿಳಿದೊಡನೆಯೇ ಇಂದ್ರನು ಕೋಪದಿಂದ ಕಿಡಿ-ಕಿಡಿಯಾದನು. ಆ ಗೋವಳರಿಗೆ ಪ್ರತೀಕಾರಮಾಡಲು ನಿಶ್ಚಯಿಸಿ ಒನಕೆಯಷ್ಟು ಗಾತ್ರದ ಧಾರೆಯಿಂದ ಕೂಡಿದ ಮಳೆಯನ್ನು ಸುರಿಸತೊಡಗಿದನು. ಜೊತೆಯಲ್ಲಿ ಬಿರುಗಾಳಿಯೂ ಕಲ್ಲುಮಳೆಯೂ ಸಿಡಿಲು-ಗುಡುಗುಗಳೂ ಬಂದು ವ್ರಜವಾಸಿಗಳನ್ನು ಪೀಡಿಸತೊಡಗಿದುವು. ಆಗ ಶರಣಾಗತರಾಗಿ ಬಂದ ಗೋ-

ಗೋಪಾಲ-ಗೋಪಿಯರನ್ನು ನೋಡಿ ಶ್ರೀಕೃಷ್ಣನ ಹೃದಯವು ಕರುಣಾರಸ ದಿಂದ ತುಂಬಿಹೋಯಿತು. ಆತನು ನೂತನವಾದೊಂದು ಲೀಲೆಯನ್ನು ತೋರಿಸಲು ನಿಶ್ಚಯಿಸಿ ನಸುನಕ್ಕನು. ಬಲಹೀನನಾದ ಬಾಲಕನೊಬ್ಬನು ನಾಯಿಕೊಡೆಯನ್ನು ಎತ್ತಿಹಿಡಿಯುವಷ್ಟೇ ಸುಲಭವಾಗಿ ಶ್ರೀಕೃಷ್ಣನು ಗೋವರ್ಧನಗಿರಿಯನ್ನೆತ್ತಿ ಹಿಡಿದು ಗೋಕುಲವನ್ನು ಕಾಪಾಡಿದನು. ಜೊತೆ ಯಲ್ಲಿಯೇ ಇಂದ್ರನ ಗರ್ವಭಂಗವೂ ಆಯಿತು. ಅಂತಹ ಪರಾತ್ಪರನಾದ, ಕರುಣಾಮಯನಾದ ಗೋಪತಿಯು ಸುಪ್ರೀತನಾಗಲಿ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೬ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೨೭ನೆಯ ಅಧ್ಯಾಯ

## ಗೋವಿಂದಪಟ್ಟಾಭಿಷೇಕ

ಶ್ರೀಶುಕಮುನಿಗಳು ಹೇಳುತ್ತಾರೆ :

**ಗೋವರ್ಧನೇ ಧೃತೇ ಶೈಲ ಆಸಾರಾದ್ರಕ್ಷಿತೇ ವ್ರಜೇ ।**
**ಗೋಲೋಕಾದಾವ್ರಜತ್ ಕೃಷ್ಣಂ ಸುರಭಿಃ ಶಕ್ರ ಏವ ಚ ॥೧॥**

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಗೋವರ್ಧನ ಪರ್ವತವನ್ನು ಮೇಲೆತ್ತಿ, ಗೋಪಾಲಕರಿಗೆ ಪರ್ವತದ ಹಳ್ಳದಲ್ಲಿ ಆಶ್ರಯ ವಿತ್ತು ಮುಸಲಧಾರಾವರ್ಷದಿಂದ ರಕ್ಷಿಸಿದನಂತರ ಶ್ರೀಕೃಷ್ಣನನ್ನು ಅಭಿ ನಂದಿಸುವುದಕ್ಕಾಗಿ ಗೋಲೋಕದಿಂದ ಕಾಮಧೇನುವೂ, ಕ್ಷಮಾಪಣೆಯನ್ನು ಕೇಳುವುದಕ್ಕಾಗಿ ದೇವಲೋಕದಿಂದ ಇಂದ್ರನೂ ವ್ರಜಕ್ಕೆ ಆಗಮಿಸಿದರು.*

---

* ಗೋಲೋಕವೆಂಬುದು ಪ್ರಾಕೃತವೆಂದೂ ಅಪ್ರಾಕೃತವೆಂದೂ ಎರಡು ವಿಧ. ಕಾಮಧೇನುವು ಪ್ರಾಕೃತಗೋಲೋಕದಿಂದ ಇಂದ್ರನೊಡನೆ ಬಂದಿದ್ದು. ಅಪ್ರಾಕೃತ ಗೋಲೋಕಸ್ವರೂಪವು ೨೮ನೆಯ ಅಧ್ಯಾಯದ ಕಡೆಯಲ್ಲಿ ವಿವರಿಸಲ್ಪಟ್ಟಿರುವುದು.

(ಸಾರಾರ್ಥದರ್ಶಿನೀ)

**ತಸ್ಮಿನ್ನಪ್ಯಸುರಾವೇಶೇ ಗತೇ ಪ್ರಕೃತಿರೇವತು ।** ಎಂಬ ವಚನಾನುಸಾರವಾಗಿ ದೈತ್ಯಾವೇಶವು ತೊಲಗಲು ಇಂದ್ರನು ದೇವಸ್ವಭಾವದಿಂದ ಭಗವಂತನನ್ನು ಹೊಗಳಿದನೆಂಬ ಭಾವವು. (ವಿಜಯಧ್ವಜೀಯ)

ಶ್ರೀಕೃಷ್ಣನಿಂದ ಮುಖಭಂಗಹೊಂದಿದ ಶಕ್ರನು ನಾಚಿಕೆಯಿಂದ ಏಕಾಂತದಲ್ಲಿ ಶ್ರೀಕೃಷ್ಣನನ್ನು ಸಂಧಿಸಿ, ಸೂರ್ಯನ ವರ್ಚಸ್ಸಿಗೆ ಸಮಾನವಾದ ವರ್ಚಸ್ಸಿನಿಂದ ಕೂಡಿದ ಕಿರೀಟದಿಂದ ಶ್ರೀಕೃಷ್ಣನ ಪಾದಗಳನ್ನು ಸ್ಪರ್ಶಿಸಿದನು. ಮಹಾತೇಜಸ್ವಿಯಾದ ಭಗವಾನ್ ಶ್ರೀಕೃಷ್ಣನ ಪ್ರಭಾವವನ್ನು ಕೇಳಿ ಮತ್ತು ಪ್ರತ್ಯಕ್ಷವಾಗಿ ನೋಡಿ ಇಂದ್ರನಿಗೆ ತಾನು ತ್ರಿಲೋಕಾಧಿಪತಿಯೆಂಬ ಅಹಂಕಾರವು ಹೊರಟುಹೋಯಿತು. ಕೈಜೋಡಿಸಿಕೊಂಡು ಆತನು ಶ್ರೀಕೃಷ್ಣನನ್ನು ಸ್ತೋತ್ರಮಾಡಲು ಉಪಕ್ರಮಿಸಿದನು :

**ವಿಶುದ್ಧಸತ್ತ್ವಂ ತವ ಧಾಮ ಶಾನ್ತಂ**
**ತಪೋಮಯಂ ಧ್ವಸ್ತರಜಸ್ತಮಸ್ಕಮ್ ।**
**ಮಾಯಾಮಯೋಽಯಂ ಗುಣಸಮ್ಪ್ರವಾಹೋ**
**ನ ವಿದ್ಯತೇ ತೇಽಗ್ರಹಣಾನುಬನ್ಧಃ ॥೪॥**

"ಭಗವಂತ! ನಿನ್ನ ಸ್ವರೂಪವು ಪರಮಶಾಂತಮಯವಾಗಿದೆ; ಜ್ಞಾನಮಯವಾಗಿದೆ. ಅಪ್ರಾಕೃತವಾದ ವಿಶುದ್ಧಸತ್ತ್ವರೂಪವಾಗಿದೆ. ಆದುದರಿಂದ ನಿನಗೆ ಅಜ್ಞಾನಸಂಬಂಧವಾದ ಮಾಯಾಮಯವಾದ ಸಂಸಾರಬಂಧನವಿಲ್ಲ.*

**ಕುತೋ ನು ತದ್ಧೇತವ ಈಶ ತತ್ಕೃತಾ**
**ಲೋಭಾದಯೋ ಯೇಽಬುಧಲಿಙ್ಗಭಾವಾಃ ।**
**ತಥಾಪಿ ದಣ್ಡಂ ಭಗವಾನ್ ಬಿಭರ್ತಿ**
**ಧರ್ಮಸ್ಯ ಗುಪ್ತ್ಯೈ ಖಲನಿಗ್ರಹಾಯ ॥೫॥**

ಅವಿದ್ಯಾಪ್ರಚುರವಾದ, ಮಾಯಾಮಯವಾದ ಸಂಸಾರವೇ ನಿನಗಿಲ್ಲವೆಂದ ಮೇಲೆ ದೇಹಸಂಬಂಧದಿಂದುಂಟಾದ ಜನ್ಮಾಂತರಗಳು ತಾನೇ ಹೇಗೆ ನಿನಗೆ ಉಂಟಾದಾವು? ಹಾಗೆಯೇ ಅಜ್ಞಾನಿಗಳ ಲಕ್ಷಣವಾದ ಲೋಭ-ಮೋಹಗಳೂ ನಿನಗಿಲ್ಲ. ಆದರೂ ಮಹಾಮಹಿಮನಾದ ನೀನು ಅವತಾರ

---

* ಎಲೈ ಭಗವಂತನೇ! ನಿತ್ಯಲೋಕವಾಸಿಯಾದರೂ ನೀನು ಅನಿತ್ಯವಾದ ಪ್ರಾಕೃತಲೋಕದಲ್ಲಿ ಅವತರಿಸಿ ಆ ದೋಷಗಂಧಕ್ಕೆ ಕೂಡ ಒಳಪಡದೆ ಆ ಪ್ರಾಣಿಗಳ ಅಧಿಕಾರಾನುಗುಣವಾಗಿ ನಿಗ್ರಹಾನುಗ್ರಹಗಳನ್ನು ಮಾಡುವೆಯೇ ಹೊರತು ಸಂಸಾರಿಯಂತೆ ರಾಗ-ದ್ವೇಷಗಳಿಂದಲ್ಲ. (ಸಿದ್ಧಾಂತದೀಪಿಕಾ)

ಗಳನ್ನು ಮಾಡಿ ಧರ್ಮದ ರಕ್ಷಣೆಗಾಗಿಯೂ ದುಷ್ಟನಿಗ್ರಹಕ್ಕಾಗಿಯೂ ದಂಡವನ್ನು ಧರಿಸುವೆ.*

**ಪಿತಾ ಗುರುಸ್ತ್ವಂ ಜಗತಾಮಧೀಶೋ**
**ದುರತ್ಯಯಃ ಕಾಲ ಉಪಾತ್ತದಣ್ಡಃ ।**
**ಹಿತಾಯ ಸ್ವೇಚ್ಛಾತನುಭಿಃ ಸಮೀಹಸೇ**
**ಮಾನಂ ವಿಧುನ್ವಞ್ಜಗದೀಶಮಾನಿನಾಮ್ ॥೬॥**

ದೇವದೇವ! ನೀನು ಜಗತ್ತಿಗೆ ತಂದೆಯೂ, ಗುರುವೂ, ಈಶ್ವರನೂ ಆಗಿರುವೆ. ನೀನು ಜಗತ್ತನ್ನು ನಿಯಂತ್ರಿಸಲು ದಂಡವನ್ನು ಧರಿಸಿರುವೆ. ದುಸ್ತರವಾದ ಕಾಲರೂಪಿಯೂ ಆಗಿರುವೆ. ನೀನು ನಿನ್ನ ಭಕ್ತರ ಆಸೆಗಳನ್ನು ಪೂರೈಸಿಕೊಡಲು ಸ್ವೇಚ್ಛೆಯಿಂದ ಲೀಲಾಶರೀರಗಳನ್ನು ಪ್ರಕಟಗೊಳಿಸುವೆ. ನನ್ನಂತೆ ತ್ರೈಲೋಕ್ಯಾಧಿಪತಿಯೆಂಬ ಅಹಂಕಾರದಿಂದ ಕೂಡಿರುವವರ ಮಾನವನ್ನು ಮುರಿದು ಅವರಿಗೆ ಹಿತವನ್ನೇ ಉಂಟುಮಾಡುವೆ.

**ಯೇ ಮದ್ವಿಧಾಜ್ಞಾ ಜಗದೀಶಮಾನಿನ-**
**ಸ್ತ್ವಾಂ ವೀಕ್ಷ್ಯ ಕಾಲೇಽಭಯಮಾಶು ತನ್ಮದಮ್ ।**
**ಹಿತ್ವಾರ್ಯಮಾರ್ಗಂ ಪ್ರಭಜನ್ತ್ಯಪಸ್ಮಯಾ**
**ಈಹಾ ಖಲಾನಾಮಪಿ ತೇಽನುಶಾಸನಮ್ ॥೭॥**

ಪ್ರಭುವೇ! ತಾವೇ ಜಗದೀಶರೆಂದು ಭಾವಿಸಿಕೊಂಡಿರುವ ನನ್ನಂತಹ ಅಜ್ಞಾನಿಗಳು ಯಾರುಂಟೋ ಅವರು ಮಹಾಭಯದ ಸಮಯದಲ್ಲಿಯೂ ನಿರ್ಭಯದಿಂದಿರುವ ನಿನ್ನನ್ನು ನೋಡಿ ತಮ್ಮ ಅಹಂಕಾರವನ್ನು ಬಿಟ್ಟು, ನಿಗರ್ವಿಗಳಾಗಿ, ಸತ್ಪುರುಷರಿಂದ ಸೇವಿಸಲ್ಪಡುವ ಭಕ್ತಿಮಾರ್ಗದಲ್ಲಿ ಆಶ್ರಯವನ್ನು ಪಡೆದು ನಿನ್ನ ಸ್ತೋತ್ರವನ್ನು ಮಾಡುತ್ತಾರೆ. ನಿನ್ನ ಒಂದೊಂದು ಕ್ರಿಯೆಯೂ ದುಷ್ಟರ ಶಿಕ್ಷಾವಿಧಾನವೇ ಆಗುತ್ತದೆ.

---

* ಅಸತಾಂ ಚ ಸತಾಂ ಚೈವ ಹರಿರೇವಾನುಶಾಸಕಃ ।
ಸತಾಂ ತು ಶ್ರೇಯಸೇ ಚೈವ ಹ್ಯನುಶಾಸ್ತಿರ್ಭವಿಷ್ಯತಿ ॥

ದುಷ್ಟರಿಗೂ ಶಿಷ್ಟರಿಗೂ ಹರಿಯೇ ಶಿಕ್ಷಕನು. ಶಿಷ್ಟಶಿಕ್ಷೆಯು ಅವರ ಶ್ರೇಯಸ್ಸಿಗಲ್ಲದೆ ಬೇರೆಯಲ್ಲ. (ವಿಜಯಧ್ವಜೀಯ)

**ಸ ತ್ವಂ ಮಮೈಶ್ವರ್ಯಮದಪ್ಲುತಸ್ಯ**
**ಕೃತಾಗಸಸ್ತೇಽವಿದುಷಃ ಪ್ರಭಾವಮ್ ।**
**ಕ್ಷನ್ತುಂ ಪ್ರಭೋಽಥಾರ್ಹಸಿ ಮೂಢಚೇತಸೋ**
**ಮೈವಂ ಪುನರ್ಭೂನ್ಮತಿರೀಶ ಮೇಽಸತೀ ॥೮॥**

ಸ್ವಾಮಿಯೇ! ಐಶ್ವರ್ಯದ ಮದದಲ್ಲಿ ಮುಳುಗಿಹೋಗಿದ್ದ ನಾನು ನಿನಗೆ ಅಪರಾಧವೆಸಗಿದ್ದೇನೆ. ನಿನ್ನ ಶಕ್ತಿ-ಸಾಮರ್ಥ್ಯಗಳನ್ನೂ ಪ್ರಭಾವವನ್ನೂ ನಾನು ತಿಳಿದವನಾಗಿರಲಿಲ್ಲ. ಪರಮೇಶ್ವರನೇ! ನೀನು ಕೃಪೆದೋರಿ ಮೂಢಬುದ್ಧಿಯವನಾದ ನನ್ನ ಅಪರಾಧವನ್ನು ಕ್ಷಮಿಸಿ ಮುಂದೆ ಈ ವಿಧವಾದ ಅಪರಾಧಗಳು ನನ್ನಿಂದ ನಡೆಯದಂತೆ ಅನುಗ್ರಹಿಸು.

**ತವಾವತಾರೋಽಯಮಧೋಕ್ಷಜೇಹ**
**ಸ್ವಯಮ್ಭರಾಣಾಮುರುಭಾರಜನ್ಮನಾಮ್ ।**
**ಚಮೂಪತೀನಾಮಭವಾಯ ದೇವ**
**ಭವಾಯ ಯುಷ್ಮಚ್ಚರಣಾನುವರ್ತಿನಾಮ್ ॥೯॥**

ಸ್ವಯಂಪ್ರಕಾಶನೇ! ಇಂದ್ರಿಯಾತೀತನಾದ ಪರಮಾತ್ಮನೇ! ನಿನ್ನ ಈ ದಿವ್ಯವಾದ ಅವತಾರವು, ಸ್ವಾರ್ಥಸಾಧಕರಾದ ಮತ್ತು ಭೂಮಿಗೆ ಭಾರಭೂತರಾದ ಅಸುರಸೇನಾಪತಿಗಳ ವಿನಾಶಕ್ಕಾಗಿಯೂ ಮತ್ತು ಅಂತಹವರಿಗೂ ಮೋಕ್ಷವನ್ನು ದಯಪಾಲಿಸುವ ಸಲುವಾಗಿಯೂ ಆಗಿದೆ. ಅಲ್ಲದೆ ನಿನ್ನ ದಿವ್ಯಚರಣಾನುವರ್ತಿಗಳಾದ ಅನನ್ಯಭಕ್ತರ ಉದ್ಧಾರಕ್ಕಾಗಿಯೂ ಅಭ್ಯುದಯಕ್ಕಾಗಿಯೂ ನೀನು ಅವತಾರಮಾಡಿರುವೆ.

**ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।**
**ವಾಸುದೇವಾಯ ಕೃಷ್ಣಾಯ ಸಾತ್ವತಾಂ ಪತಯೇ ನಮಃ ॥೧೦॥**

ಭಗವಂತ! ನಾನು ನಿನಗೆ ನಮಸ್ಕಾರಮಾಡುತ್ತೇನೆ. ನೀನು ಸರ್ವಾಂತರ್ಯಾಮಿಯಾದ ಪುರುಷೋತ್ತಮನೂ, ಸರ್ವಾತ್ಮನಾದ ವಾಸುದೇವನೂ ಆಗಿರುವೆ. ಯದುವಂಶಕ್ಕೆ ಏಕಮಾತ್ರಸ್ವಾಮಿಯಾಗಿರುವೆ. ಭಕ್ತವತ್ಸಲನಾದ ಕೃಷ್ಣನೂ ನೀನೇ ಆಗಿರುವೆ. ಅಂತಹ ಮಹಾತ್ಮನಾದ ನಿನಗೆ ಬಾರಿ-ಬಾರಿಗೂ ನಮಸ್ಕರಿಸುತ್ತೇನೆ.

**ಸ್ವಚ್ಛನ್ದೋಪಾತ್ತದೇಹಾಯ ವಿಶುದ್ಧಜ್ಞಾನಮೂರ್ತಯೇ ।**
**ಸರ್ವಸ್ಮೈ ಸರ್ವಬೀಜಾಯ ಸರ್ವಭೂತಾತ್ಮನೇ ನಮಃ ॥೧೧॥**

ಜೀವರಂತೆ ನೀನು ಕರ್ಮವಶನಲ್ಲದಿದ್ದರೂ ಸ್ವೇಚ್ಛೆಯಿಂದ ನಿನಗೆ ಬೇಕು-ಬೇಕಾದ ಶರೀರಗಳನ್ನು ಧರಿಸುವೆ. ದೇಹಗಳನ್ನು ಧರಿಸಿದ ಕಾರಣದಿಂದ ನೀನು ಮಾಯೆಗೆ ಒಳಪಡುವುದಿಲ್ಲ. ವಿಶುದ್ಧಜ್ಞಾನಮೂರ್ತಿಯಾಗಿಯೇ ಬೆಳಗುವೆ. ಸರ್ವಸ್ವವೂ ನೀನೇ. ಸಮಸ್ತಕ್ಕೂ ಕಾರಣನೂ ನೀನೇ ಆಗಿರುವೆ. ಸಮಸ್ತಪ್ರಾಣಿಗಳ ಆತ್ಮಸ್ವರೂಪನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ.*

**ಮಯೇದಂ ಭಗವನ್ ಗೋಷ್ಠನಾಶಾಯಾಸಾರವಾಯುಭಿಃ ।**
**ಚೇಷ್ಟಿತಂ ವಿಹತೇ ಯಜ್ಞೇ ಮಾನಿನಾ ತೀವ್ರಮನ್ಯುನಾ ॥೧೨॥**

ಭಗವಂತ! ನಾನು ಮಹಾಮಾನಿಷ್ಠನು ; ಅತ್ಯಂತಕೋಪಿಷ್ಠನು. ನನ್ನ ಸಲುವಾಗಿ ಮಾಡುತ್ತಿದ್ದ ಯಜ್ಞವು ನಿಂತುಹೋಯಿತು. ಈ ಪರಾಭವವನ್ನು ನನಗೆ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮುಸಲಧಾರೆಯಿಂದ ಕೂಡಿದ ಮಳೆಯಿಂದಲೂ ಬಿರುಗಾಳಿಯಿಂದಲೂ ವ್ರಜಭೂಮಿಯನ್ನೇ ಸಂಪೂರ್ಣವಾಗಿ ನಾಶಗೊಳಿಸಲು ನಾನು ಪ್ರಯತ್ನಿಸಿದೆನು.

**ತ್ವಯೇಶಾನುಗೃಹೀತೋಽಸ್ಮಿ ಧ್ವಸ್ತಸ್ತಮ್ಭೋ ವೃಥೋದ್ಯಮಃ ।**
**ಈಶ್ವರಂ ಗುರುಮಾತ್ಮಾನಂ ತ್ವಾಮಹಂ ಶರಣಂ ಗತಃ ॥೧೩॥**

ಸ್ವಾಮಿಯೇ! ನೀನು ನನ್ನ ಮೇಲೆ ಪರಮಾನುಗ್ರಹವನ್ನು ತೋರಿಸಿರುವೆ. ನನ್ನ ಕಾರ್ಯವನ್ನು ವ್ಯರ್ಥಗೊಳಿಸಿ ನನ್ನ ಅಹಂಕಾರವನ್ನು

---

**ಯದಾತ್ಮಕೋ ಭಗವಾನ್ ತದಾತ್ಮಿಕಾವ್ಯಕ್ತಿಃ ।** (ಶ್ರುತಿ)

ಭಗವಂತನ ಅಪ್ರಾಕೃತದಿವ್ಯಮಂಗಳವಿಗ್ರಹವು ವಿಶುದ್ಧಜ್ಞಾನದಂತೆ ಜನ್ಮ-ಜರಾದಿ ದೋಷರಹಿತವೆಂದೂ ಪುರುಷರಿಂದುದಿಸಿದ ಕೇಶಲೋಮಾದಿಗಳಂತೆಯೂ ನೆಲದಿಂದುದಿಸಿದ ಔಷಧಾದಿಗಳಂತೆಯೂ ಚರಾಚರಾತ್ಮಕವಾದ ಈ ಜಗತ್ತಿಗೆ ಆತನನ್ನುಳಿದು ಬೇರೆ ಸ್ಥಿತಿಗಳಿಲ್ಲವಾದುದರಿಂದ ಆತನೇ ಸರ್ವಸ್ವರೂಪನೆಂದೂ ತಿಳಿಯಬೇಕು. ಇಲ್ಲಿ ಸತ್ತ್ವಸ್ವರೂಪರೂ ಅಣು-ವಿಭು-ಪರಮಾಣುರೂಪರೂ ಆದ ಜೀವೇಶ್ವರರಿಗೂ ಚೇತನಾಚೇತನವಸ್ತುಗಳಿಗೂ ಸ್ವರೂಪೈಕ್ಯವು ಸಂಭವಿಸುವುದರಿಂದ ಭೇದಾಭೇದವು ಸತ್ಯವು. (ಸಿದ್ಧಾಂತದೀಪಿಕಾ)

ಮುರಿದಿರುವೆ. ನನ್ನ ಅಜ್ಞಾನವನ್ನು ಹೋಗಲಾಡಿಸಿರುವೆ. ಆದುದರಿಂದ ನೀನೇ ಸ್ವಾಮಿಯೂ, ಗುರುವೂ ಮತ್ತು ಆತ್ಮನೂ ಆಗಿರುವೆ. ನಿನಗೆ ನಾನು ಶರಣಾಗತನಾಗಿದ್ದೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ದೇವರಾಜನಾದ ಇಂದ್ರನು ಭಗವಂತನಾದ ಶ್ರೀಕೃಷ್ಣನನ್ನು ಹೀಗೆ ಸ್ತೋತ್ರಮಾಡಲಾಗಿ ಶ್ರೀಕೃಷ್ಣನು ನಸುನಗುತ್ತಾ ಮೇಘಕ್ಕೆ ಸಮಾನವಾದ ಗಂಭೀರಧ್ವನಿಯಿಂದ ಇಂದ್ರನಿಗೆ ಹೇಳಿದನು :

"ದೇವೇಂದ್ರ! ನೀನು ಐಶ್ವರ್ಯದಿಂದಲೂ ಮತ್ತು ಧನಸಂಪತ್ತಿನಿಂದಲೂ ಮದಿಸಿಹೋಗಿದ್ದೆ. ಇದನ್ನು ತಿಳಿದ ನಾನು ನಿನ್ನನ್ನು ಅನುಗ್ರಹಿಸಲೆಂದೇ ನಿನ್ನ ಪ್ರೀತಿಗಾಗಿ ಗೋಪಾಲರು ಮಾಡುತ್ತಿದ್ದ ಯಜ್ಞವನ್ನು ಭಂಗಪಡಿಸಿದೆನು. ಈ ಪ್ರಕರಣವನ್ನು ನೀನು ನಿತ್ಯನಿರಂತರವಾಗಿ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗಿದೆ. ಯಾವನು ಐಶ್ವರ್ಯ ಮತ್ತು ಧನಸಂಪತ್ತಿಯಿಂದ ಮದಿಸಿರುವನೋ ಅಂತಹವನು ಕಾಲರೂಪಪರಮೇಶ್ವರನಾದ ನಾನು ದಂಡವನ್ನು ಹಿಡಿದು ಅವನ ತಲೆಯ ಮೇಲೆ ಕುಳಿತಿರುವೆನೆಂಬುದನ್ನು ತಿಳಿದಿರುವುದಿಲ್ಲ. ಯಾವನನ್ನು ನಾನು ಅನುಗ್ರಹಿಸಲು ಬಯಸುವೆನೋ ಅಂತಹವನನ್ನು ಅವನ ಐಶ್ವರ್ಯದಿಂದ ಭ್ರಷ್ಟಗೊಳಿಸುತ್ತೇನೆ. ದೇವೇಂದ್ರ! ನಿನಗೆ ಮಂಗಳವಾಗಲಿ. ನನ್ನ ಆಜ್ಞೆಯನ್ನು ಪರಿಪಾಲಿಸು. ಪುನಃ ಅಹಂಕಾರಿಯಾಗಬೇಡ. ನಿನ್ನ ಅಧಿಕಾರಕ್ಕೆ ಅನುಸಾರವಾಗಿ ಉಚಿತವಾದ ರೀತಿಯಲ್ಲಿ ಮರ್ಯಾದೆಯನ್ನು ಮೀರದೆ ನಿನ್ನ ಪದವಿಯಲ್ಲಿಯೇ ಇದ್ದುಕೊಂಡು ಮೂರು ಲೋಕಗಳನ್ನೂ ಆಳುತ್ತಿರು."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಇಂದ್ರನಿಗೆ ಹೀಗೆ ಹೇಳುತ್ತಿದ್ದಾಗ ಪ್ರಶಸ್ತವಾದ ಮನಸ್ಸುಳ್ಳ ಕಾಮಧೇನುವು ತನ್ನ ಸಂತಾನದೊಡನೆ ಗೋಪವೇಷಧರನಾಗಿದ್ದ ಪರಮೇಶ್ವರನ ಬಳಿಗೆ ಬಂದು ಅವನಿಗೆ ತಲೆಬಾಗಿ ನಮಸ್ಕರಿಸಿ ಹೇಳಿತು :

**ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಸಮ್ಭವ ।**
**ಭವತಾ ಲೋಕನಾಥೇನ ಸನಾಥಾ ವಯಮಚ್ಯುತ ॥೧೯॥**

"ಸಚ್ಚಿದಾನಂದಸ್ವರೂಪನಾದ ಶ್ರೀಕೃಷ್ಣನೇ! ನೀನು ಮಹಾ ಯೋಗೇಶ್ವರನಾಗಿರುವೆ. ಸ್ವಯಂ ವಿಶ್ವವೂ ಆಗಿರುವೆ. ವಿಶ್ವಕ್ಕೆ ಕಾರಣನೂ ಆಗಿರುವೆ. ಅಚ್ಯುತನೇ! ಸಮಸ್ತವಿಶ್ವಕ್ಕೂ ಸ್ವಾಮಿಯಾಗಿರುವ ನಿನ್ನನ್ನು ನಾಥನನ್ನಾಗಿ ಪಡೆದು ನಾವು ಸನಾಥರಾಗಿದ್ದೇವೆ.




**ತ್ವಂ ನಃ ಪರಮಕಂ ದೈವಂ ತ್ವಂ ನ ಇನ್ದ್ರೋ ಜಗತ್ಪತೇ ।**
**ಭವಾಯ ಭವ ಗೋವಿಪ್ರದೇವಾನಾಂ ಯೇ ಚ ಸಾಧವಃ ॥೨೦॥**

ನೀನು ಜಗತ್ತಿಗೆ ಸ್ವಾಮಿಯಾಗಿರುವೆ. ಇಂದ್ರನೂ ಆಗಿರುವೆ. ನಮಗಾದರೂ ಪರಮಪೂಜ್ಯನಾದ ಆರಾಧ್ಯದೇವನೇ ಆಗಿರುವೆ. ಆದುದ ರಿಂದ ನೀನೇ ಗೋವುಗಳಿಗೂ, ಬ್ರಾಹ್ಮಣರಿಗೂ, ದೇವತೆಗಳಿಗೂ ಮತ್ತು ಸಾಧು-ಸತ್ಪುರುಷರಿಗೂ ಅವರ ರಕ್ಷಣೆಯ ಸಲುವಾಗಿ ಇಂದ್ರನಾಗು.

**ಇನ್ದ್ರಂ ವಸ್ತ್ವಾಭಿಷೇಕ್ಷ್ಯಾಮೋ ಬ್ರಹ್ಮಣಾ ನೋದಿತಾ ವಯಮ್ ।**
**ಅವತೀರ್ಣೋಽಪಿ ವಿಶ್ವಾತ್ಮನ್ ಭೂಮೇರ್ಭಾರಾಪನುತ್ತಯೇ ॥೨೧॥**

ಗೋವುಗಳಾದ ನಾವೆಲ್ಲರೂ ಸೇರಿ ಬ್ರಹ್ಮನ ಪ್ರೇರಣೆಯಂತೆ ನಿನ್ನನ್ನು ಇಂದ್ರನ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡುತ್ತೇವೆ. ವಿಶ್ವಾತ್ಮನೇ! ನೀನು ದುಷ್ಟರನ್ನು ಸಂಹರಿಸಿ ಭೂಭಾರವನ್ನು ಕಡಿಮೆಮಾಡುವುದಕ್ಕಾಗಿಯೇ ಅವತರಿಸಿರುವೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಭಗವಂತನಾದ ಶ್ರೀಕೃಷ್ಣನಿಗೆ ಕಾಮಧೇನುವು ಹೀಗೆ ಹೇಳಿ ತನ್ನ ಹಾಲಿನಿಂದಲೇ ಆತನಿಗೆ ಅಭಿಷೇಕಮಾಡಿತು. ದೇವಮಾತೃಗಳ ಪ್ರೇರಣೆಯಂತೆ ಇಂದ್ರನು, ಐರಾವತದ ಸೊಂಡಿಲಿನ ಮೂಲಕವಾಗಿ ದೇವಗಂಗೆಯನ್ನು ತರಿಸಿ, ಅದರ ಪವಿತ್ರೋದಕದಿಂದ ಋಷಿ-ಮಹರ್ಷಿಗಳೊಡನೆ ಸೇರಿಕೊಂಡು ಶ್ರೀಕೃಷ್ಣಪರಮಾತ್ಮನಿಗೆ ಅಭಿಷೇಕಮಾಡಿದನು. ಹೀಗೆ ಗೋವುಗಳಿಗೆ ಇಂದ್ರನನ್ನಾಗಿ ಮಾಡಿ ಇಂದ್ರಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದನಂತರ




ಶ್ರೀಕೃಷ್ಣನನ್ನು ಗೋವಿಂದನೆಂದೂ* ಕರೆಯತೊಡಗಿದರು. ಪಟ್ಟಾಭಿಷೇಕದ ಸಮಯಕ್ಕೆ ಸರಿಯಾಗಿ ನಾರದ, ತುಂಬುರು–ಇವರೇ ಮೊದಲಾದ ಋಷಿ-ಮುನಿಗಳೂ, ಗಂಧರ್ವ-ವಿದ್ಯಾಧರರೂ, ಸಿದ್ಧ-ಚಾರಣರೂ ಅಲ್ಲಿಗೆ ಆಗಮಿಸಿದರು. ಅವರೆಲ್ಲರೂ ಪ್ರಪಂಚದ ತಾಪ-ಪಾಪಗಳನ್ನು ಹೋಗಲಾಡಿಸುವ ಶ್ರೀಕೃಷ್ಣನ ಯಶಸ್ಸನ್ನು ಕೀರ್ತನಮಾಡುತ್ತಿದ್ದರು. ಅಪ್ಸರಸ್ತ್ರೀಯರು ಅವರ ಗಾಯನಕ್ಕೆ ಅನುಗುಣವಾಗಿ ಆನಂದಭರಿತರಾಗಿ ನರ್ತನ

---

* ಗೋ ಶಬ್ದಕ್ಕೆ ಹಸು, ಸ್ವರ್ಗ, ವೇದ–ಎಂಬ ಅರ್ಥಗಳುಂಟು. ಗಾಃ ವಿನ್ದತೀತಿ ಗೋವಿನ್ದಃ ಎಂಬ ವ್ಯುತ್ಪತ್ತಿಯಿಂದ ಗೋವುಗಳಿಗೂ ಸ್ವರ್ಗಕ್ಕೂ ಒಡೆಯನೆಂದೂ ವೇದ ವನ್ನು ಹೊರಪಡಿಸಿದವನೆಂದೂ ತಾತ್ಪರ್ಯವು. (ಭಾವಾರ್ಥದೀಪಿಕಾ)

ಮಾಡುತ್ತಿದ್ದರು. ಇಂದ್ರನೇ ಮೊದಲಾದ ಮುಖ್ಯ-ಮುಖ್ಯರಾದ ದೇವತೆಗಳು ಭಗವಂತನಾದ ಶ್ರೀಕೃಷ್ಣನನ್ನು ಸ್ತುತಿಸುತ್ತಾ ಅವನ ಮೇಲೆ ನಂದನ ವನದಿಂದ ತಂದಿದ್ದ ದಿವ್ಯಪುಷ್ಪಗಳನ್ನು ಸುರಿಸಿದರು. ಶ್ರೀಕೃಷ್ಣನ ಪಟ್ಟಾಭಿಷೇಕವು ನಡೆಯುತ್ತಿರಲಾಗಿ ಮೂರು ಲೋಕಗಳೂ ಆನಂದಸಾಗರದಲ್ಲಿ ಮುಳುಗಿಹೋದುವು. ಗೋವುಗಳು ತಾವೇತಾವಾಗಿ ಕೆಚ್ಚಲಿನಿಂದ ಸುರಿಯುತ್ತಿದ್ದ ಹಾಲಿನಿಂದ ಭೂಮಿಯನ್ನು ತೋಯಿಸಿದುವು. ಆ ಸಮಯದಲ್ಲಿ ನದಿಗಳು ನಾನಾವಿಧವಾದ ರಸಗಳಿಂದ ಕೂಡಿ ಪ್ರವಹಿಸುತ್ತಿದ್ದುವು. ವ್ಯವಸಾಯವೇ ಇಲ್ಲದೆ ಭೂಮಿಯು ಸಸ್ಯಶಾಲಿನಿಯಾಯಿತು. ಪರ್ವತಗಳಲ್ಲಿ ಮುಚ್ಚಿಹೋಗಿದ್ದ ಮಣಿ-ಮಾಣಿಕ್ಯಗಳು ತಾವೇತಾವಾಗಿ ಹೊರಕ್ಕೆ ಕಾಣಿಸಿಕೊಂಡು ಪ್ರಕಾಶಿಸತೊಡಗಿದುವು.

**ಕೃಷ್ಣೇಽಭಿಷಕ್ತ ಏತಾನಿ ಸತ್ತ್ವಾನಿ ಕುರುನನ್ದನ ।**
**ನಿರ್ವೈರಾಣ್ಯಭವಂಸ್ತಾತ ಕ್ರೂರಾಣ್ಯಪಿ ನಿಸರ್ಗತಃ ॥೨೮॥**

ಕುರುನಂದನನೇ! ಪರೀಕ್ಷಿತ! ಶ್ರೀಕೃಷ್ಣನಿಗೆ, ಗೋವುಗಳ ಇಂದ್ರ ಪದವಿಯಲ್ಲಿ ಪಟ್ಟಾಭಿಷೇಕವಾಗಲಾಗಿ ಸ್ವಾಭಾವಿಕವಾಗಿಯೇ ಕ್ರೂರಿಗಳಾಗಿದ್ದ, ಪರಸ್ಪರ ವೈರಿಗಳಾಗಿದ್ದ ಪ್ರಾಣಿಗಳೂ ವೈರವನ್ನು ತೊರೆದು ಅನ್ಯೋನ್ಯವಾಗಿ ಮೈತ್ರಿಯಿಂದ ಇರತೊಡಗಿದುವು.

ಹೀಗೆ ದೇವೇಂದ್ರನು ಗೋವುಗಳಿಗೂ, ಗೋಕುಲಕ್ಕೂ ಸ್ವಾಮಿತ್ವದ ಪದವಿಯಲ್ಲಿ ಶ್ರೀಕೃಷ್ಣನಿಗೆ ಪಟ್ಟಾಭಿಷೇಕವನ್ನು ಮಾಡಿ ಆತನ ಅನುಮತಿಯನ್ನು ಪಡೆದು ದೇವ-ಗಂಧರ್ವರೇ ಮುಂತಾದವರೊಡನೆ ಸ್ವರ್ಗಕ್ಕೆ ತೆರಳಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೭ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೨೮ನೆಯ ಅಧ್ಯಾಯ

## ಶ್ರೀಕೃಷ್ಣನು ವರುಣನ ಲೋಕದಿಂದ ನಂದಗೋಪನನ್ನು ಕರೆತಂದುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ಏಕಾದಶ್ಯಾಂ ನಿರಾಹಾರಃ ಸಮಭ್ಯರ್ಚ್ಯ ಜನಾರ್ದನಮ್ ।**
**ಸ್ನಾತುಂ ನನ್ದಸ್ತು ಕಾಲಿನ್ದ್ಯಾ ದ್ವಾದಶ್ಯಾಂ ಜಲಮಾವಿಶತ್ ॥೧॥**

ಪರೀಕ್ಷಿತಮಹಾರಾಜ! ನಂದಗೋಪನು ಶಾಸ್ತ್ರವಿಧಿಯ ಅನುಸಾರವಾಗಿ ಕಾರ್ತಿಕ ಶುದ್ಧ ಏಕಾದಶಿಯಂದು ಉಪವಾಸಮಾಡಿ, ಭಗವಂತನಾದ ಜನಾರ್ದನನನ್ನು ಪೂಜಿಸಿ, ರಾತ್ರಿಯಲ್ಲಿ ದ್ವಾದಶಿಯು ಹುಟ್ಟುತ್ತಲೇ ಸ್ನಾನಮಾಡುವ ಸಲುವಾಗಿ ಯಮುನಾನದಿಗೆ ಹೋಗಿ ನೀರಿನಲ್ಲಿಳಿದನು.* ತಾನು ನದಿಯಲ್ಲಿ ಸ್ನಾನಕ್ಕಾಗಿ ಇಳಿದಿರುವ ಕಾಲವು ರಾಕ್ಷಸರ ವಿಹಾರ ಕಾಲವೆಂಬುದು ನಂದಗೋಪನಿಗೆ ತಿಳಿದಿರಲಿಲ್ಲ. ವರುಣನ ಅಸುರಸೇವಕನೊಬ್ಬನು ಸ್ನಾನಕ್ಕಿಳಿದ ನಂದಗೋಪನನ್ನು ನೋಡಿ ಒಡನೆಯೇ ಅವನನ್ನೆತ್ತಿಕೊಂಡು ತನ್ನ ಸ್ವಾಮಿಯಾದ ವರುಣನ ಬಳಿಗೆ ಹೋದನು. ನಂದಗೋಪನನ್ನು ಕಾಣದೆ ಗೋಪಾಲರೆಲ್ಲರೂ ಗಟ್ಟಿಯಾಗಿ ಕೂಗಿಕೊಂಡರು : "ಕೃಷ್ಣ! ಬಲರಾಮ! ನಮ್ಮ ರಾಜನಾದ ನಂದಗೋಪನೇ ಕಾಣೆಯಾಗಿದ್ದಾನೆ. ನೀವೇ ನಮಗೆ ಪರಮಾಶ್ರಯರು. ನಂದಗೋಪನು ಎಲ್ಲಿದ್ದರೂ ಹುಡುಕಲು ನೀವೇ ಸಮರ್ಥರಾಗಿರುವಿರಿ. ಕೃಷ್ಣ! ಬೇಗ ಹೋಗು. ನಂದಗೋಪನು ಎಲ್ಲಿದ್ದರೂ ಹುಡುಕಿ ಕರೆದುಕೊಂಡು ಬಾ"–ಮುಂತಾಗಿ

---

* ಯಾನಿಕಾನಿ ಚ ಪಾಪಾನಿ ಬ್ರಹ್ಮಹತ್ಯಾಶತಾನಿ ಚ ।
ಅನ್ನಮಾಶ್ರಿತ್ಯ ತಿಷ್ಠನ್ತಿ ಸಂಪ್ರಾಪ್ತೇ ಹರಿವಾಸರೇ ॥

ಏಕಾದಶಿಯಂದು ಬ್ರಹ್ಮಹತ್ಯಾದಿ ಪಾಪಗಳೆಲ್ಲವೂ ಅನ್ನವನ್ನಾಶ್ರಯಿಸಿರುವುದರಿಂದ ಆ ದಿನದಲ್ಲಿ ಊಟಮಾಡಬಾರದು. (ಸಿದ್ಧಾಂತದೀಪಿಕಾ)

ಕಲಾರ್ಧಾಂ ದ್ವಾದಶೀಂ ದೃಷ್ಟ್ವಾ ನಿಶೀಥಾದೂರ್ಧ್ವಮೇವ ಹಿ ।
ಅಮಧ್ಯಾಹ್ನಾಃ ಕ್ರಿಯಾಃ ಸರ್ವಾಃ ಕರ್ತವ್ಯಾಃ ಶಮ್ಭುಶಾಸನಾತ್ ॥

ಕಲಾಮಾತ್ರ ದ್ವಾದಶಿಯಿರುವಾಗ ಮಧ್ಯಾಹ್ನದವರೆಗೂ ಮಾಡಬೇಕಾದ ಕರ್ಮಗಳೆಲ್ಲವನ್ನೂ ನಿಶೀಥಕ್ಕಿಂತ (ಅರ್ಧರಾತ್ರಿಗಿಂತ) ಮೊದಲೇ ಮಾಡಬೇಕು.

ಹೇಳಿಕೊಂಡು ಗೋಳಾಡುತ್ತಿದ್ದರು. ಗೋಪಾಲಕರ ಗೋಳನ್ನು ಕೇಳಿದ ಭಕ್ತಭಯಾಪಹನಾದ, ಸರ್ವಜ್ಞನಾದ ನಂದಕುಮಾರನು ತನ್ನ ತಂದೆಯನ್ನು ವರುಣನ ಅಸುರಸೇವಕನು ಅವೇಳೆಯಲ್ಲಿ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ಕರೆದೊಯ್ದಿರುವನೆಂಬುದನ್ನು ತಿಳಿದು ಒಡನೆಯೇ ವರುಣದೇವನ ಬಳಿಗೆ ಹೋದನು. ಅಂತರಿಂದ್ರಿಯ-ಬಹಿರಿಂದ್ರಿಯಗಳ ಪ್ರವರ್ತಕನಾದ ಭಗವಾನ್ ಶ್ರೀಕೃಷ್ಣನೇ ತನ್ನ ಲೋಕಕ್ಕೆ ಬಂದುದನ್ನು ನೋಡಿ ಲೋಕಪಾಲಕನಾದ ವರುಣನು ಶ್ರೀಕೃಷ್ಣನಿಗೆ ಮಹಾಪೂಜೆಯನ್ನು ಸಲ್ಲಿಸಿದನು. ಭಗವಂತನ ದಿವ್ಯದರ್ಶನದ ಮಹೋತ್ಸವದಿಂದಾಗಿ ವರುಣನು ಆನಂದದಿಂದ ರೋಮಾಂಚಿತನಾದನು. ಮಹಾಪೂಜೆಯನ್ನು ಭಕ್ತಿಪೂರ್ವಕವಾಗಿ ಸಲ್ಲಿಸಿದ ನಂತರ ಕೈಗಳನ್ನು ಜೋಡಿಸಿಕೊಂಡು ವರುಣನು ಶ್ರೀಕೃಷ್ಣನಿಗೆ ಹೇಳಿದನು :

**ಅದ್ಯ ಮೇ ನಿಭೃತೋ ದೇಹೋಽದ್ಯೈಽವಾರ್ಥೋಽಧಿಗತಃ ಪ್ರಭೋ ।**
**ತ್ವತ್ಪಾದಭಾಜೋ ಭಗವನ್ನವಾಪುಃ ಪಾರಮಧ್ವನಃ ॥೫॥**

"ಪ್ರಭುವೇ! ನಿನ್ನ ದಿವ್ಯದರ್ಶನದಿಂದಾಗಿ ನನ್ನ ಜನ್ಮವು ಸಾರ್ಥಕವಾಯಿತು. ಪುರುಷಾರ್ಥವು ಈಡೇರಿತು. ಇಂದು ನನಗೆ ನಿನ್ನ ಚರಣ ಕಮಲಗಳ ಸೇವೆಮಾಡುವ ಶುಭಾವಕಾಶವು ಸಿಕ್ಕಿತಲ್ಲವೇ! ನಿನ್ನ ಚರಣ




ಕಮಲಗಳನ್ನು ಆಶ್ರಯಿಸಿದ ಯಾರೇ ಆದರೂ ಭವಸಾಗರವನ್ನು ಬಹಳ ಬೇಗ ದಾಟಿಬಿಡುತ್ತಾರೆ.

**ನಮಸ್ತುಭ್ಯಂ ಭಗವತೇ ಬ್ರಹ್ಮಣೇ ಪರಮಾತ್ಮನೇ ।**
**ನ ಯತ್ರ ಶ್ರೂಯತೇ ಮಾಯಾ ಲೋಕಸೃಷ್ಟಿವಿಕಲ್ಪನಾ ॥೬॥**

ನೀನು–ಭಕ್ತರಿಗೆ ಭಗವಂತನೂ, ವೇದಾಂತಿಗಳಿಗೆ ಬ್ರಹ್ಮನೂ, ಯೋಗಿಗಳಿಗೆ ಪರಮಾತ್ಮನೂ ಆಗಿರುವೆ. ಅಂತಹ ಭಗವಂತನಾದ ಪರಬ್ರಹ್ಮ ಪರಮಾತ್ಮನಾದ ನಿನಗೆ ನಮಸ್ಕಾರಮಾಡುತ್ತೇನೆ. ವಿಭಿನ್ನವಾದ ಲೋಕಗಳ ರಚನೆಗೆ ಕಾರಣವಾದ ಮಾಯೆಯು ಯಾವನಲ್ಲಿಲ್ಲವೋ ಯಾವನು ಮಾಯಾತೀತನೋ ಅಂತಹ ನಿನಗೆ ನಮಸ್ಕರಿಸುತ್ತೇನೆ.

ಸ್ವಾಮಿಯೇ! ನನ್ನ ಮೂರ್ಖನಾದೊಬ್ಬ ಸೇವಕನು ತನ್ನ ಕರ್ತವ್ಯವೇನೆಂಬುದನ್ನು ತಿಳಿಯದೆ ನಿನ್ನ ತಂದೆಯನ್ನು ಇಲ್ಲಿಗೆ ಕರೆತಂದಿದ್ದಾನೆ. ಅವನ ಈ ಅಪರಾಧವನ್ನು ದಯಮಾಡಿ ಕ್ಷಮಿಸಿಬಿಡು.

ಕೇಶವ! ನೀನು ನಿನ್ನ ತಂದೆಯನ್ನು ಬಹಳ ಪ್ರೀತಿಯಿಂದ ಕಾಣುವೆ. ನೀನು ಪಿತೃವತ್ಸಲನು. ಇದೋ ನಿನ್ನ ತಂದೆಯು ಇಲ್ಲಿರುವನು. ಇವನನ್ನು ನೀನು ಕರೆದುಕೊಂಡು ಹೋಗಬಹುದು. ಸರ್ವಜ್ಞನಾದ ಕೃಷ್ಣನೇ! ನನ್ನನ್ನು ನೀನು ದಯಮಾಡಿ ಅನುಗ್ರಹಿಸು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಬ್ರಹ್ಮಾದಿಗಳಿಗೂ ಈಶ್ವರನಾದ ಶ್ರೀಕೃಷ್ಣನು ಹೀಗೆ ವರುಣದೇವನಿಂದ ಪ್ರಸನ್ನಗೊಳಿಸಲ್ಪಟ್ಟನಂತರ ತನ್ನ ತಂದೆಯಾದ ನಂದಗೋಪನನ್ನು ಕರೆದುಕೊಂಡು ವ್ರಜಕ್ಕೆ ಬಂದು ಅಲ್ಲಿಯ ನಿವಾಸಿಗಳೆಲ್ಲರಿಗೂ ಆನಂದವನ್ನುಂಟುಮಾಡಿದನು. ಲೋಕಪಾಲಕನಾದ ವರುಣನ ಇಂದ್ರಿಯಾತೀತವಾದ ಐಶ್ವರ್ಯವನ್ನೂ, ಸುಖಸಂಪತ್ತಿಗಳನ್ನೂ, ತನ್ನ ಮಗನಾದ ಶ್ರೀಕೃಷ್ಣನಿಗೆ ಅಲ್ಲಿಯ ನಿವಾಸಿಗಳು ನಮಸ್ಕರಿಸಿದ್ದನ್ನೂ ಕಂಡ ನಂದಗೋಪನು ಆಶ್ಚರ್ಯಚಕಿತನಾಗಿ ತನ್ನ ಬಂಧುಗಳಿಗೆ ತಾನು ಕಂಡುದೆಲ್ಲವನ್ನೂ ವಿವರಿಸಿ ಹೇಳಿದನು. ನಂದಗೋಪನು ಹೇಳಿದುದನ್ನು ಕೇಳಿದ ಗೋಪರು ಶ್ರೀಕೃಷ್ಣನನ್ನು ಸರ್ವೇಶ್ವರನೆಂದೇ ನಿಶ್ಚಯಿಸಿದರು. ತಮಗೂ ಕೂಡ–ಭಕ್ತಪ್ರೇಮಿಯಾದ, ಜಗದೀಶ್ವರನಾದ ಶ್ರೀಕೃಷ್ಣನು ಅವನ ಅನನ್ಯ ಭಕ್ತರಿಗೆ ಮಾತ್ರವೇ ಪ್ರವೇಶಿಸಲು ಸಾಧ್ಯವಾದ ಮಾಯಾತೀತವಾದ ತನ್ನ

ಪರಂಧಾಮವನ್ನು ತೋರಿಸಿಯಾನೆಂಬ ಉತ್ಸುಕತೆಯೂ ಆ ಗೋಪಾಲಕರ ಮನಸ್ಸಿನಲ್ಲುಂಟಾಯಿತು. ಸರ್ವದರ್ಶಿಯಾದ ಶ್ರೀಕೃಷ್ಣನಿಗೆ ಗೋಪಾಲರ ಆಶಯವು ತಿಳಿದುಹೋಯಿತು. ದಯಾಮಯನಾದ ಶ್ರೀಕೃಷ್ಣನು ತನ್ನ ಪ್ರಿಯಭಕ್ತರ ಸಂಕಲ್ಪವನ್ನು ಹೇಗೆ ಪೂರೈಸಿಕೊಡುವುದೆಂಬುದರ ಬಗೆಗೆ ಯೋಚಿಸತೊಡಗಿದನು.

**ಜನೋ ವೈ ಲೋಕ ಏತಸ್ಮಿನ್ನವಿದ್ಯಾಕಾಮಕರ್ಮಭಿಃ ।**
**ಉಚ್ಚಾವಚಾಸು ಗತಿಷು ನ ವೇದ ಸ್ವಾಂ ಗತಿಂ ಭ್ರಮನ್ ॥೧೩॥**

"ಈ ಪ್ರಪಂಚದಲ್ಲಿ ಜೀವಿಗಳು ಅಜ್ಞಾನವಶರಾಗಿ ದೇಹವನ್ನೇ ಆತ್ಮವೆಂದು ಭಾವಿಸಿಕೊಂಡು, ಹಲವಾರು ಕಾಮನೆಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು, ಅವುಗಳ ಪ್ರಾಪ್ತಿಗಾಗಿ ನಾನಾಪ್ರಕಾರವಾದ ಕರ್ಮಗಳನ್ನು ಮಾಡುತ್ತಿರುತ್ತಾರೆ. ಆ ಕರ್ಮಗಳ ಫಲರೂಪವಾಗಿ ಅವರು ದೇವ-ಮನುಷ್ಯ-ಪಶು-ಪಕ್ಷಿ–ಇವೇ ಮೊದಲಾದ ಉಚ್ಚ-ನೀಚಯೋನಿಗಳಲ್ಲಿ ಹುಟ್ಟಿ-ಸಾಯುತ್ತಾ ಸಾವಿರಾರು ಜನ್ಮಗಳನ್ನು ಕಳೆದರೂ ಆತ್ಮಸ್ವರೂಪದ ಗತಿಯನ್ನು ತಿಳಿಯುವುದೇ ಇಲ್ಲ." ಹೀಗೆ ಯೋಚಿಸಿದ ಪರಮಕಾರುಣಿಕನಾದ ಶ್ರೀಹರಿಯು ತನ್ನ ಪ್ರಿಯಭಕ್ತರಾದ ಗೋಪರಿಗೆ ತಮಸ್ಸಿನ ಹೊರಗಿರುವ ತನ್ನ ದಿವ್ಯಪರಂಧಾಮವನ್ನು ತೋರಿಸಿದನು. ಸಮಾಧಿನಿಷ್ಠರಾದ, ಗುಣಾತೀತರಾದ ಮಹಾಯೋಗಿಗಳು ಸತ್ಯಸ್ವರೂಪವೂ, ಜ್ಞಾನಸ್ವರೂಪವೂ, ಅನಂತವೂ, ಸನಾತನವೂ ಆದ ಯಾವ ಪರಂಜ್ಯೋತಿಯನ್ನು ತಮ್ಮ ಹೃತ್ಕಮಲದಲ್ಲಿ ಕಂಡುಕೊಳ್ಳುವರೋ ಅಂತಹ ದಿವ್ಯಜ್ಯೋತಿಯನ್ನೇ ಶ್ರೀಕೃಷ್ಣನು ಗೋಪರಿಗೆ ತೋರಿಸಿಕೊಟ್ಟನು. ತಾನು ಮುಂದೆ ಅಕ್ರೂರನಿಗೆ ತನ್ನ ನಿಜರೂಪವನ್ನು ತೋರಿಸುವ ಬ್ರಹ್ಮಹ್ರದವೆಂಬ ದಿವ್ಯಜಲಾಶಯಕ್ಕೆ ಶ್ರೀಕೃಷ್ಣನು ಗೋಪರೆಲ್ಲರನ್ನೂ ಕರೆದೊಯ್ದು ಅವರೆಲ್ಲರನ್ನೂ ಅಲ್ಲಿ ಮುಳುಗಿಸಿ ಅವರೆಲ್ಲರೂ ಬ್ರಹ್ಮಾನಂದದಲ್ಲಿ ಮೈಮರೆತುಹೋಗಲು ಅವರನ್ನು ಪುನಃ ಸಮಾಧಿಸ್ಥಿತಿಯಿಂದ ಎಚ್ಚರಗೊಳಿಸಿದನು. ಹೀಗೆ ಶ್ರೀಕೃಷ್ಣನು ಅಕ್ರೂರನಿಗೆ ತೋರಿಸಿದ ಬ್ರಹ್ಮಲೋಕವನ್ನೇ ಗೋಪಾಲಕರಿಗೂ ತೋರಿಸಿದನು.

ನಂದಗೋಪನೇ ಮೊದಲಾದ ಗೋಪಾಲಕರು ಬ್ರಹ್ಮಲೋಕವನ್ನು

ನೋಡಿದರು ಮತ್ತು ಬ್ರಹ್ಮಲೋಕದಲ್ಲಿ ಛಂದೋಮಯವಾದ ವೇದಗಳಿಂದ ಸ್ತುತಿಸಲ್ಪಡುತ್ತಿದ್ದ ಶ್ರೀಕೃಷ್ಣಭಗವಂತನನ್ನೂ ನೋಡಿದರು. ಅತ್ಯಾಶ್ಚರ್ಯ ಕರವಾದ ಆ ದೃಶ್ಯವನ್ನು ನೋಡಿ ಅವರೆಲ್ಲರೂ ಪರಮಾನಂದಭರಿತರೂ, ಪರಮಸುಖಿಗಳೂ ಆದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೮ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೨೯ನೆಯ ಅಧ್ಯಾಯ

## ಶ್ರೀಕೃಷ್ಣನ ರಾಸಕ್ರೀಡೆಯ ವರ್ಣನೆ

**ಭಗವಾನಪಿ ತಾ ರಾತ್ರೀಃ ಶರದೋತ್ಫುಲ್ಲಮಲ್ಲಿಕಾಃ ।**
**ವೀಕ್ಷ್ಯ ರನ್ತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ ॥೧॥**

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಭಗವಂತನೇ ಆಗಿದ್ದರೂ ಅರಳಿದ ಮಲ್ಲಿಗೆ ಹೂವುಗಳಿಂದ ಘಮ-ಘಮಿಸುತ್ತಿದ್ದ ಶರತ್ಕಾಲದ ರಾತ್ರಿಯನ್ನು ಕಂಡು ಯೋಗಮಾಯೆಯನ್ನಾಶ್ರಯಿಸಿ ಗೋಪಿಕಾಸ್ತ್ರೀಯರೊಡನೆ ಕ್ರೀಡಿಸಲು ಬಯಸಿದನು.* ಬಹುಕಾಲಾನಂತರ ಆಗಮಿಸಿದ ಪತಿಯು ಪತ್ನಿಯ ಸುಂದರವಾದ ಮುಖವನ್ನು ಕುಂಕುಮಕೇಸರಿಯಿಂದ ಅಲಂಕರಿ ಸುವಂತೆ ಮತ್ತು ಬಂಧುಜನರ ಕಷ್ಟಗಳನ್ನೂ ಪರಿಹರಿಸುವಂತೆ ಶ್ರೀಕೃಷ್ಣನು ರಾಸಕ್ರೀಡೆಯನ್ನು ಆಡಬೇಕೆಂದು ಸಂಕಲ್ಪಿಸಿದೊಡನೆಯೇ–ಚಂದ್ರನು ತನ್ನ ಸುಖಕರವಾದ ಕಿರಣಗಳ ರೂಪವಾದ ಕೈಗಳಿಂದ ಪೂರ್ವದಿಕ್ಕೆಂಬ ಪ್ರೇಯ ಸಿಯ ಮುಖವನ್ನು ಕೆಂಪುಬಣ್ಣವೆಂಬ ಕುಂಕುಮಕೇಸರಿಯಿಂದ ಲೇಪಿಸುತ್ತಾ

---

* ರಾಸಕ್ರೀಡೆಯ ಸಂದರ್ಭದಲ್ಲಿ ಶ್ರೀಕೃಷ್ಣನ ವಯಸ್ಸೆಷ್ಟು? ಎಂಬ ಬಗೆಗೆ ವಿದ್ವಾಂಸರು ಹೀಗೆ ನಿರೂಪಿಸಿದ್ದಾರೆ. ಗೋಪಿಕಾವಸ್ತ್ರಾಪಹರಣವಾದಾಗ ಶ್ರೀಕೃಷ್ಣ ನಿಗೆ ಏಳನೆಯ ವಯಸ್ಸು. ಅದೇ ವರ್ಷದ ಕಾರ್ತಿಕ ಅಮಾವಾಸ್ಯೆಯಲ್ಲಿ ಇಂದ್ರಯಜ್ಞಭಂಗ. ಆಶ್ವಯುಜ ಶುದ್ಧ ಪ್ರಥಮೆಯಲ್ಲಿ ಗೋ - ಬ್ರಾಹ್ಮಣ - ಗೋವರ್ಧನ ಪೂಜೆ. ಬಿದಿಗೆಯಲ್ಲಿ ಭ್ರಾತೃದ್ವಿತೀಯಾಭೋಜನೋತ್ಸವ. ತದಿಗೆಯಿಂದ ನವಮಿಯವರೆಗೆ ಗೋವರ್ಧನೋದ್ಧಾರ. ದಶಮಿಯಲ್ಲಿ ಗೋಪಾಲರ ಆಶ್ಚರ್ಯ ಕಥನ.

ಹಗಲಿನ ಬಿಸಿಲಿನಿಂದ ಸೊರಗಿದ್ದ ಓಷಧಿಗಳ ದುಃಖವನ್ನೂ ಪರಿಹರಿಸುತ್ತಾ ಉದಯಿಸಿದನು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಚಂದ್ರನು ಮೂಡಲದಿಕ್ಕಿನಲ್ಲಿ ಮೂಡಿಬಂದನಂತರ ಕುಂಕುಮಕೇಸರಿಯ ಲೇಪನದಿಂದ ಕೆಂಪಾಗಿ ಮಾಡಲ್ಪಟ್ಟ ರಮಾದೇವಿಯ ಮುಖಮಂಡಲದಂತೆ ಎಣೆಗೆಂಪಿನಿಂದ ಕೂಡಿದ್ದ ಚಂದ್ರಮಂಡಲವನ್ನೂ ಆ ಶರಚ್ಚಂದ್ರನ ಕೋಮಲವಾದ ಕಿರಣಗಳಿಂದ ನಯನಾಭಿರಾಮವಾಗಿ ಬೆಳಗುತ್ತಿದ್ದ ವೃಂದಾವನವನ್ನೂ ನೋಡಿ ಶ್ರೀಕೃಷ್ಣನು ಗೋಪಿಕಾಸ್ತ್ರೀಯರ ಮನಸ್ಸನ್ನು ಅಪಹರಿಸುವ ಸುಮಧುರವಾದ ವೇಣುಗಾನವನ್ನು ಮಾಡಿದನು.

ವೇಣುಗಾನಲೋಲನಾದ ಶ್ರೀಕೃಷ್ಣನ ಆ ದಿವ್ಯವಾದ ವೇಣುಗಾನವು ಭಗವಂತನಲ್ಲಿಯ ಪ್ರೇಮವನ್ನೂ ಮತ್ತು ಅವನನ್ನು ಸೇರಬೇಕೆಂಬ ತವಕವನ್ನೂ ಹೆಚ್ಚಿಸುವುದಾಗಿತ್ತು. ಈ ಮೊದಲೇ ಶ್ಯಾಮಸುಂದರನು ಗೋಪಿಯರ ಮನಸ್ಸನ್ನು ಅಪಹರಿಸಿಬಿಟ್ಟಿದ್ದನು. ಈಗಂತೂ ಅವರಲ್ಲಿದ್ದ ಭಯ-ಸಂಕೋಚ, ಮರ್ಯಾದೆ-ಲಜ್ಜೆ–ಇತ್ಯಾದಿಗಳನ್ನೂ ವೇಣುನಿನಾದದಿಂದ ಅಪಹರಿಸಿಬಿಟ್ಟನು. ವೇಣುಗಾನವನ್ನು ಕೇಳುತ್ತಿದ್ದಂತೆಯೇ ಅವರ ಸ್ವಭಾವದಲ್ಲಿಯೂ ಪರಿವರ್ತನೆಯಾಯಿತು. ಈ ಹಿಂದೆ ಅವರು ಒಟ್ಟಾಗಿ ಸೇರಿಕೊಂಡು ಶ್ರೀಕೃಷ್ಣನೇ ಪತಿಯಾಗಬೇಕೆಂಬ ಆಶಯದಿಂದ ಹಲವಾರು ವ್ರತಾನುಷ್ಠಾನಗಳನ್ನೂ ಮಾಡಿದ್ದರು. ಕಾತ್ಯಾಯನಿಗೆ ಪೂಜೆಯನ್ನೂ ಸಲ್ಲಿಸಿದ್ದರು. ಈಗಲಾದರೋ ಒಬ್ಬರು ಮತ್ತೊಬ್ಬರಿಗೆ ಶ್ರೀಕೃಷ್ಣನು ವೇಣುಗಾನದ ಮೂಲಕವಾಗಿ ಕರೆ ನೀಡುತ್ತಿರುವನೆಂಬ ವಿಷಯವನ್ನೇ ತಿಳಿಸಲಿಲ್ಲ. ಪರಸ್ಪರವಾಗಿ ಕರೆಯಲೂ ಹೋಗಲಿಲ್ಲ. ಪ್ರೇಮಮೂರ್ತಿಯಾದ ಶ್ರೀಕೃಷ್ಣನು ತನ್ನೊಬ್ಬಳನ್ನೇ ಕರೆಯುತ್ತಿದ್ದಾನೆಂದು

---

ಏಕಾದಶಿಯಲ್ಲಿ ಗೋವಿಂದಪದವಿಯಲ್ಲಿ ಪಟ್ಟಾಭಿಷೇಕ. ದ್ವಾದಶಿಯಲ್ಲಿ ತಂದೆಯನ್ನು ಬಿಡಿಸಿಕೊಂಡುಬರಲು ವರುಣಲೋಕಗಮನ. ಚತುರ್ದಶಿಯಲ್ಲಿ ಗೋಪಾಲರಿಗೆ ಪರಂಧಾಮವನ್ನು ತೋರಿಸುವುದಕ್ಕಾಗಿ ಬ್ರಹ್ಮಹ್ರದಪ್ರವೇಶ. ಎಂಟನೆಯ ವರ್ಷದ ಆಶ್ವಯುಜ ಹುಣ್ಣಿಮೆಯಲ್ಲಿ ರಾಸಕ್ರೀಡೆ. ಹೀಗೆ ರಾಸಕ್ರೀಡೆಯ ವೇಳೆಗೆ ಶ್ರೀಕೃಷ್ಣನಿಗೆ ಎಂಟನೆಯ ವಯಸ್ಸು. ಎಂಟು ವರ್ಷಗಳೂ ತುಂಬಿರಲಿಲ್ಲ. ಯೋಗಮಾಯೆಯಿಂದ ಗೋಪಿಯರೊಡನೆ ರಮಿಸಲು ಸಂಕಲ್ಪಮಾಡಿದನು. ಇದು ವಿಶೇಷ ಆವಿರ್ಭಾವ.

ಅವರೆಲ್ಲರೂ ಭಾವಿಸಿಕೊಂಡುಬಿಟ್ಟರು. ತಮ್ಮ ಕಾಂತನಿದ್ದೆಡೆಗೆ ಅವರು ಎಷ್ಟು ವೇಗವಾಗಿ ಹೋಗುತ್ತಿದ್ದರೆಂದರೆ ಅವರ ಕುಂಡಲಗಳು ತಮಗೂ ಶ್ರೀಕೃಷ್ಣನ ದರ್ಶನವಾಗುವುದೆಂಬ ಸಂತೋಷದಿಂದಲೋ ಎಂಬಂತೆ ತಕ-ತಕನೆ ಕುಣಿಯುತ್ತಿದ್ದುವು. ಶ್ರೀಕೃಷ್ಣನ ಮನೋಹರವಾದ ವಂಶಿಧ್ವನಿಯನ್ನು ಕೇಳುತ್ತಲೇ ಗೋಪಿಯರು ತಮ್ಮನ್ನು ತಾವೇ ಮರೆತುಬಿಟ್ಟರು. ವೇಣುಗಾನವನ್ನು ಕೇಳಿದೊಡನೆಯೇ ಹಾಲುಕರೆಯುತ್ತಿದ್ದವಳ ಹಾಲಿನ ಪಾತ್ರೆಯು ಕೆಳಗೆ ಬಿದ್ದುಹೋಯಿತು. ಅವಳು ಹಾಗೆಯೇ ವೃಂದಾವನಕ್ಕೆ ಓಡಿಹೋದಳು. ಹಾಲುಕಾಯಿಸುತ್ತಿದ್ದವಳಿಗೆ ಹಾಲು ಉಕ್ಕುತ್ತಿರುವುದೆಂಬ ಪರಿವೆಯೇ ಇರಲಿಲ್ಲ. ಆ ಹಾಲು ಉಕ್ಕುತ್ತಿರುವುದನ್ನೂ ಲೆಕ್ಕಿಸದೆ ಮತ್ತೊಬ್ಬ ಗೋಪಿಯು ಶ್ರೀಕೃಷ್ಣನ ಕಡೆಗೆ ಓಡಿದಳು. ಶ್ರೀಕೃಷ್ಣನ ಸುಮಧುರವಾದ ವೇಣುವಾದನವನ್ನು ಕೇಳಿದೊಡನೆಯೇ ಅನ್ನಮಾಡುತ್ತಿದ್ದವಳಿಗೆ ಅನ್ನವಾಯಿತೇ? ಸೀದುಹೋಯಿತೇ? ಎಂಬುದನ್ನು ತಿಳಿಯುವಷ್ಟೂ ಸಹನೆಯಿರಲಿಲ್ಲ. ವಂಶಿಧ್ವನಿಯ ಮೂಲಕವಾಗಿ ತನ್ನ ಇನಿಯನು ತನ್ನೊಬ್ಬಳನ್ನೇ ಕರೆಯುತ್ತಿದ್ದಾನೆಂಬ ಭಾವನೆಯಿಂದ ನಾಗಾಲೋಟದಿಂದಲೇ ಶ್ರೀಕೃಷ್ಣನಿದ್ದೆಡೆಗೆ ಧಾವಿಸಿದಳು. ಇದಕ್ಕಿಂತಲೂ ವಿಚಿತ್ರವಾದ್ದೆಂದರೆ ಪತಿಗೂ, ಮೈದುನರಿಗೂ, ಮಕ್ಕಳಿಗೂ ಅನ್ನಬಡಿಸುತ್ತಿದ್ದವಳು ಶ್ರೀಕೃಷ್ಣನ ಕೊಳಲು ಕೇಳುತ್ತಿದ್ದಂತೆ ಬಡಿಸುವ ಪಾತ್ರೆಯನ್ನು ಎತ್ತಿಹಾಕಿ ಓಡಿದಳು. ಮಗುವಿಗೆ ಹಾಲು ಕುಡಿಸುತ್ತಿದ್ದವಳು ಅಳುತ್ತಿದ್ದ ಮಗುವನ್ನು ಲಾಲಿಸದೆ ಪಕ್ಕಕ್ಕಿರಿಸಿ ಓಡಿದಳು. ಕೈಕಾಲುಗಳನ್ನೊತ್ತಿ ಪತಿಶುಶ್ರೂಷೆಮಾಡುತ್ತಿದ್ದ ಕೆಲವು ಗೋಪಸ್ತ್ರೀಯರು ತಾವೇನು ಮಾಡುತ್ತಿದ್ದೇವೆಂಬ ಅರಿವೇ ಇಲ್ಲದೆ ಶ್ರೀಕೃಷ್ಣನ ವೇಣುನಾದದ ಮೂಲಕವಾಗಿ ಕರೆಯು ಬಂದೊಡನೆಯೇ ಹಿಂದು-ಮುಂದು ನೋಡದೆ ಓಡಿದರು. ಊಟಮಾಡುತ್ತಿದ್ದವರಂತೂ ಬಾಯಿಗೆ ತೆಗೆದುಕೊಂಡು ಹೋಗಿದ್ದ ತುತ್ತನ್ನು–ವೇಣುಗಾನವನ್ನು ಕೇಳುತ್ತಲೇ ಕೆಳಕ್ಕೆ ಹಾಕಿ ಕೈಯ್ಯನ್ನೂ ತೊಳೆಯದೇ ಶ್ರೀಕೃಷ್ಣನಿದ್ದೆಡೆಗೆ ಓಡಿದರು. ಅಂಗರಾಗ ವನ್ನು ಶರೀರಕ್ಕೆ ಪೂಸಿಕೊಳ್ಳುತ್ತಿದ್ದ ಕೆಲವರು ಅಂಗರಾಗಹಸ್ತರಾಗಿಯೇ ಓಡಿದರು. ಗುಡಿಸಿ-ಸಾರಿಸುತ್ತಿದ್ದ ಕೆಲವರು ಅದನ್ನು ಅರ್ಧದಲ್ಲಿಯೇ ಬಿಟ್ಟು ಓಡಿದರು. ಕಾಡಿಗೆಯನ್ನು ಹಚ್ಚಿಕೊಳ್ಳುತ್ತಿದ್ದ ಕೆಲವರು ಎರಡನೆಯ

ಕಣ್ಣಿಗೆ ಹಚ್ಚಿಕೊಳ್ಳದೇ ಇರುವುದನ್ನೂ ಲೆಕ್ಕಿಸದೆ ಕಾಡಿಗೆಯ ಸಮೇತ ವಾಗಿಯೇ ಓಡಿದರು. ಕೆಲವರು ಅವಸರದಲ್ಲಿ ಸೀರೆಗಳನ್ನೂ ಆಭರಣ ಗಳನ್ನೂ ತಲೆಕೆಳಗಾಗಿ ಧರಿಸಿಕೊಂಡು ಹಾಗೆಯೇ ಓಡಿಹೋದರು. ಶ್ರೀಕೃಷ್ಣ ನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿದ್ದ ಅವರು ಮನಮೋಹಕವಾದ ಶ್ರೀಕೃಷ್ಣನ ಆಹ್ವಾನರೂಪವಾದ ವೇಣುಗಾನವನ್ನು ಕೇಳುತ್ತಲೇ ಮೈಮರೆತುಹೋದರು. ಅವರಿಗೆ ಇಹ-ಪರಗಳ ಅರಿವೇ ಇರಲಿಲ್ಲ. ಪರಮಪ್ರೇಮಿಯಾಗಿದ್ದ ಶ್ರೀಕೃಷ್ಣನನ್ನು ಸೇರುವುದೊಂದೇ ಅವರ ಪರಮಲಕ್ಷ್ಯವಾಗಿದ್ದಿತು.

ಸ್ತ್ರೀಯರ ವರ್ತನೆಯನ್ನು ನೋಡಿ ಮನೆಯಲ್ಲಿ ಎಲ್ಲರಿಗೂ ಭ್ರಾಂತಿ ಯುಂಟಾಯಿತು. ತಂದೆ, ಸಹೋದರ, ಮೈದುನ–ಎಲ್ಲರೂ ಓಡಿಹೋಗು ತ್ತಿದ್ದ ಅವರನ್ನು ತಡೆಯಲು ಹೋದರು. ಪ್ರಯೋಜನವಾಗಲಿಲ್ಲ. ಎಷ್ಟು ತಡೆದರೂ ಯಾರೂ ಹಿಂದಿರುಗಲಿಲ್ಲ. ಶ್ರೀಕೃಷ್ಣನು ಅವರ ಮನಸ್ಸನ್ನು ಮಾತ್ರವಲ್ಲ ; ನಾನು-ನನ್ನದು, ಲಜ್ಜೆ-ಅಹಂಕಾರ, ಭಯ-ಸಂಕೋಚ– ಎಂಬುದೆಲ್ಲವನ್ನೂ ಅವರಿಂದ ಅಪಹರಿಸಿಬಿಟ್ಟಿದ್ದನು. ನಿಶ್ಚಯವಾಗಿಯೂ ಆ ಸಮಯದಲ್ಲಿ ಗೋಪಿಕಾಸ್ತ್ರೀಯರು ಯೋಗೇಶ್ವರನಾದ ಶ್ರೀಕೃಷ್ಣನ ಆಟದ ಗೊಂಬೆಗಳೇ ಆಗಿದ್ದರು. ಗಂಡಸರು ಮನೆಯ ಬಾಗಿಲನ್ನು ಹಾಕಿಕೊಂಡು ಹೋಗಿದ್ದಕಾರಣ ಕೆಲವು ಗೋಪಿಯರಿಗೆ ಎಷ್ಟು ಪ್ರಯತ್ನಿಸಿದರೂ ಮನೆ ಯಿಂದ ಹೊರಬರಲು ಸಾಧ್ಯವಾಗಲೇ ಇಲ್ಲ. ಅಂತಹವರೆಲ್ಲರೂ ಕಣ್ಣು ಗಳನ್ನು ಮುಚ್ಚಿಕೊಂಡು ಶ್ರೀಕೃಷ್ಣನ ಸೌಂದರ್ಯ-ಮಾಧುರ್ಯ-ಲೀಲೆ ಗಳನ್ನೇ ಅನವರತವಾಗಿ ಚಿಂತಿಸುತ್ತಾ ಅವನಲ್ಲಿಯೇ ಮಗ್ನರಾಗಿಬಿಟ್ಟರು. ದುಸ್ಸಹವಾದ, ತೀವ್ರವಾದ ವಿರಹವೇದನೆಯ ಅನುಭವದಿಂದಾಗಿ ಆ ಗೋಪಿಕಾಸ್ತ್ರೀಯರಲ್ಲಿದ್ದ ಪಾಪದ ನಿರಸನವಾಯಿತು. ಅನವರತವಾದ ಧ್ಯಾನ ದಿಂದಾಗಿ ಹೃತ್ಕಮಲದಲ್ಲಿ ಕಾಣಿಸಿಕೊಂಡ ಮನೋಹರನಾದ ಶ್ರೀಕೃಷ್ಣನ ಗಾಢಾಲಿಂಗನದ ಸುಖದಿಂದಾಗಿ ಅವರಲ್ಲಿದ್ದ ಪುಣ್ಯವೂ ಕ್ಷೀಣಿಸಿತು.*

---

* ಪಾಪ-ಪುಣ್ಯಗಳೆರಡೂ ಪುನರ್ಜನ್ಮಕ್ಕೆ ಕಾರಣಗಳಾಗುತ್ತವೆ. ಪಾಪವು ಕೆಟ್ಟಫಲ ವನ್ನು ಕೊಡುತ್ತದೆ. ಪುಣ್ಯವು ಒಳ್ಳೆಯ ಫಲವನ್ನು ಕೊಡುತ್ತದೆ. **ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ ।** ಸ್ವರ್ಗಸುಖವನ್ನು ಅನುಭವಿಸಿ ಪುಣ್ಯವು ಕ್ಷೀಣಿಸಿದಲ್ಲಿ ಪುನಃ ಭೂಲೋಕದಲ್ಲಿ ಜನ್ಮತಾಳಬೇಕಾಗುತ್ತದೆ. ಆದುದರಿಂದ ಪರಮಾತ್ಮನ

ಪರೀಕ್ಷಿತಮಹಾರಾಜ! ನಿರಂತರವಾದ ಧ್ಯಾನದಿಂದ ಅಂತಃಕರಣದಲ್ಲಿ ಪಡೆದುಕೊಂಡ ಕೃಷ್ಣನನ್ನು ಗೋಪಿಕಾಸ್ತ್ರೀಯರು, ಆತನು ಜಾರನೆಂಬ ಬುದ್ಧಿಯಿಂದಲೇ ಗಾಢವಾಗಿ ಆಲಿಂಗಿಸಿಕೊಂಡರೂ ಅವರು ದೇವದೇವನಾದ ನಿರ್ವಿಕಾರನಾದ ಪರಮಾತ್ಮನನ್ನೇ ಆಲಿಂಗಿಸಿಕೊಂಡ ಕಾರಣ, ಪಾಪ-ಪುಣ್ಯಗಳ ಪರಿಣಾಮದಿಂದ ಪ್ರಾಪ್ತವಾದ ಗುಣಮಯವಾದ ದೇಹವನ್ನು ತೊರೆದು ಅಪ್ರಾಕೃತವಾದ ಶರೀರಗಳನ್ನು ಪಡೆದುಕೊಂಡರು. ಅಥವಾ ಶ್ರೀಕೃಷ್ಣನಲ್ಲಿಯೇ ಸೇರಿಹೋದರು. ಭಗವಂತನ ದಿವ್ಯಾಲಿಂಗನವನ್ನು ಪಡೆದುಕೊಂಡೊಡನೆಯೇ ಅವರ ಕರ್ಮಬಂಧನಗಳೆಲ್ಲವೂ ಕಳಚಿ ಬಿದ್ದುಹೋದುವು."

ಪರೀಕ್ಷಿತನು ಪ್ರಶ್ನಿಸುತ್ತಾನೆ :

"ಶುಕಮುನಿಗಳೇ! ಕೆಲವು ಗೋಪಿಕಾಸ್ತ್ರೀಯರು ಶ್ರೀಕೃಷ್ಣನನ್ನು ತಮ್ಮ ಪ್ರಿಯತಮನೆಂದು ಭಾವಿಸಿ ಅವನಲ್ಲಿಯೇ ಧ್ಯಾನಾಸಕ್ತರಾಗಿ ಹೃದಯಾಂತರಾಳದಲ್ಲಿ ಅವನನ್ನು ಕಂಡುಕೊಂಡೊಡನೆಯೇ ಅವನನ್ನು ಆಲಿಂಗಿಸಿಕೊಂಡರು–ಎಂದು ತಾವು ಹೇಳಿದಿರಿ. ಅವರಿಗೆ ಶ್ರೀಕೃಷ್ಣನಲ್ಲಿ ಪರಬ್ರಹ್ಮನೆಂಬ ಭಾವನೆಯೇನೂ ಇರಲಿಲ್ಲ. ಅಂತಹವರಿಗೆ ಗುಣಪ್ರವಾಹರೂಪವಾದ ಸಂಸಾರದಿಂದ ಹೇಗೆ ಬಿಡುಗಡೆಯಾದೀತು?"

ಶ್ರೀಶುಕಮುನಿಗಳು ಹೇಳುತ್ತಾರೆ :

**ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾ ಗತಃ ।**
**ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ ॥೧೩॥**

"ಪರೀಕ್ಷಿತ! ಚೇದಿರಾಜನಾದ ಶಿಶುಪಾಲನು ಹೃಷೀಕೇಶನನ್ನು ದ್ವೇಷಿಸುತ್ತಿದ್ದರೂ ದ್ವೇಷರೂಪವಾದ ಶ್ರೀಕೃಷ್ಣತಾದಾತ್ಮ್ಯದಿಂದ ಅವನು ಪ್ರಾಕೃತಶರೀರವನ್ನು ತೊರೆದು ಅಪ್ರಾಕೃತಶರೀರವನ್ನು ಧರಿಸಿ ಭಗವಂತನ

---

ಸಾನ್ನಿಧ್ಯವನ್ನು ಬಯಸುವವರು ಮುಕ್ತರಾಗಲು ಬಯಸುವವರು ಪಾಪ-ಪುಣ್ಯಗಳೆರಡರಿಂದಲೂ ಮುಕ್ತರಾಗಬೇಕು. ಗೋಪಿಕಾಸ್ತ್ರೀಯರಿಗೆ ಭಗವಂತನ ವಿಷಯವಾದ ವಿರಹವೇದನೆಯ ದುಃಖದಲ್ಲಿ ಪಾಪವೆಲ್ಲಾ ಮುಳುಗಿಹೋಯಿತು. ಮಾನಸಿಕವಾದ ಆತನ ಆಲಿಂಗನದ ಸುಖದಲ್ಲಿ ಅವರ ಪುಣ್ಯವೆಲ್ಲಾ ಕರಗಿಹೋಯಿತು. ಹೀಗೆ ಪಾಪ-ಪುಣ್ಯಗಳೆರಡೂ ಲಯಹೊಂದಿಬಿಟ್ಟಿದ್ದರಿಂದ ಅವರು ಮುಕ್ತರಾಗಿಬಿಟ್ಟರು.

ಪಾರ್ಷದರಲ್ಲಿ ಸೇರಿದನೆಂಬ ವಿಷಯವನ್ನು ಈ ಹಿಂದೆಯೇ ನಿನಗೆ ಹೇಳಿದ್ದೇನೆ. ಹೀಗಿರುವಾಗ ಜಾರನೆಂದಾಗಲೀ ಚೋರನೆಂದಾಗಲೀ ನಿರಂತರವಾಗಿ ಅನಿರ್ದುಷ್ಟವಾದ ಪ್ರೇಮದಿಂದ ಶ್ರೀಕೃಷ್ಣನನ್ನು ಆರಾಧಿಸುತ್ತಿದ್ದ ಗೋಪಿಯರ ವಿಷಯವಾಗಿ ಹೇಳುವುದೇನಿದೆ?

**ನೃಣಾಂ ನಿಃಶ್ರೇಯಸಾರ್ಥಾಯ ವ್ಯಕ್ತಿರ್ಭಗವತೋ ನೃಪ ।**
**ಅವ್ಯಯಸ್ಯಾಪ್ರಮೇಯಸ್ಯ ನಿರ್ಗುಣಸ್ಯ ಗುಣಾತ್ಮನಃ ॥೧೪॥**

ಪರೀಕ್ಷಿತಮಹಾರಾಜ! ವಾಸ್ತವವಾಗಿ ಭಗವಂತನು ವೃದ್ಧಿ-ವಿನಾಶ, ಪ್ರಮಾಣ-ಪ್ರಮೇಯ, ಗುಣ-ಗುಣಿ ಇತ್ಯಾದಿ ಭಾವಗಳಿಂದ ಶೂನ್ಯನಾಗಿದ್ದಾನೆ. ಅವನು ಅಚಿಂತ್ಯನೂ, ಅನಂತನೂ, ಅಪ್ರಾಕೃತನೂ, ಪರಮ ಕಲ್ಯಾಣಸ್ವರೂಪನೂ, ತ್ರಿಗುಣಾತೀತನೂ ಆಗಿದ್ದರೂ ಕಲ್ಯಾಣಗುಣಗಳಿಗೆ ಏಕಮಾತ್ರಆಶ್ರಯನೂ ಆಗಿದ್ದಾನೆ. ಭಗವಂತನ ಅವತಾರವು ಕೇವಲ ಮನುಷ್ಯರ ಕಲ್ಯಾಣಸಾಧನೆಗಾಗಿಯೇ ಆಗಿದೆ.

**ಕಾಮಂ ಕ್ರೋಧಂ ಭಯಂ ಸ್ನೇಯಮೈಕ್ಯಂ ಸೌಹೃದಮೇವ ಚ ।**
**ನಿತ್ಯಂ ಹರೌ ವಿದಧತೋ ಯಾನ್ತಿ ತನ್ಮಯತಾಂ ಹಿ ತೇ ॥೧೫॥**

ಭಗವಂತನಲ್ಲಿ ಕೇವಲ ಭಕ್ತಿಭಾವವೊಂದೇ ಇರಲೇಬೇಕೆಂಬುದೇನೂ ಇಲ್ಲ. ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲೀ, ಭಕ್ತಿಯಿಂದಾಗಲೀ ಯಾರು ಭಗವಂತನನ್ನು ನಿತ್ಯ ನಿರಂತರವಾಗಿ ತಾದಾತ್ಮ್ಯದಿಂದ ಧ್ಯಾನಿಸುವರೋ ಅವರೆಲ್ಲರೂ ತನ್ಮಯರೇ ಆಗಿಬಿಡುತ್ತಾರೆ. ಹೀಗಿರುವಾಗ ನಿತ್ಯಶುದ್ಧನಾದ ಶ್ರೀಕೃಷ್ಣನನ್ನು ಜಾರನೆಂದು ಭಾವಿಸಿ ಹೃತ್ಕಮಲದಲ್ಲಿ ಕೂಡಿಹಾಕಿಕೊಂಡು ಗಾಢಾಲಿಂಗನೆಮಾಡಿದ ಶುದ್ಧಾಂತಃಕರಣರಾದ ಗೋಪಿಯರ ವಿಷಯವಾಗಿ ಹೇಳುವುದೇನಿದೆ?

ಪರೀಕ್ಷಿತನೇ! ಆದುದರಿಂದ ಪರಮಭಾಗವತನಾದ, ಭಗವದ್ರಹಸ್ಯವನ್ನು ಸಂಪೂರ್ಣವಾಗಿ ತಿಳಿದಿರುವ, ಭಕ್ತಶ್ರೇಷ್ಠನಾದ ನಿನಗೆ ಯೋಗೇಶ್ವರರಿಗೂ ಈಶ್ವರನಾದ, ಹುಟ್ಟು-ಸಾವುಗಳಿಲ್ಲದ ಭಗವಂತನಾದ ಶ್ರೀಕೃಷ್ಣನ ವಿಷಯದಲ್ಲಿ ಹೀಗೆ ಸಂದೇಹವುಂಟಾಗಬಾರದು. ಅವನ ಸಂಕಲ್ಪಮಾತ್ರದಿಂದ ಸ್ಥಾವರ-ಜಂಗಮಗಳಿಂದ ಕೂಡಿರುವ ಈ ಜಗತ್ತೇ ಮುಕ್ತಿಯನ್ನು ಹೊಂದಬಲ್ಲುದು. ಇದೇನೂ ಆಶ್ಚರ್ಯದ ಸಂಗತಿಯಲ್ಲ."

ಹೀಗೆ ಗೋಪಿಯರ ಪಾವಿತ್ರ್ಯವನ್ನು ಕುರಿತು ವಿಶದವಾಗಿ ಹೇಳಿದ ನಂತರ ಶುಕಮುನಿಗಳು ರಾಸಕ್ರೀಡೆಯ ಪ್ರಕರಣವನ್ನು ಮುಂದುವರಿಸಿ ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ತನ್ನ ಕೊಳಲಿನ ಕರೆಯಿಂದ ಆಕರ್ಷಿತರಾದ ವ್ರಜಸ್ತ್ರೀಯರು ಸಕಲಸರ್ವಸ್ವವನ್ನೂ ಪರಿತ್ಯಜಿಸಿ ತನ್ನ ಬಳಿಗೆ ಓಡೋಡಿ ಬಂದುದನ್ನು ನೋಡಿ ವಾಗ್ಮಿಗಳಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನು ವಿನೋದವಾದ ಮಾತುಗಳಿಂದ ಗೋಪಿಯರನ್ನು ವಿಮೋಹಗೊಳಿಸುತ್ತಾ ಹೇಳಿದನು :

**ಸ್ವಾಗತಂ ವೋ ಮಹಾಭಾಗಾಃ ಪ್ರಿಯಂ ಕಿಂ ಕರವಾಣಿ ವಃ ।**
**ವ್ರಜಸ್ಯಾನಾಮಯಂ ಕಚ್ಚಿದ್ಬ್ರೂತಾಗಮನಕಾರಣಮ್ ॥೧೮॥**

"ಮಹಾಭಾಗ್ಯಶಾಲಿನಿಯರಾದ ಗೋಪಿಯರೇ! ನಿಮಗೆ ಸ್ವಾಗತ ಬಯಸುತ್ತೇನೆ. ನಿಮಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಿ ಕೊಡಲಿ? ವ್ರಜದಲ್ಲಿ ಎಲ್ಲರೂ ಕುಶಲಿಗಳಾಗಿರುವರಲ್ಲವೇ? ನಿಮ್ಮ ಆಗಮನದ ಕಾರಣವೇನು? ಹೇಳಿರಿ.

**ರಜನ್ಯೇಷಾ ಘೋರರೂಪಾ ಘೋರಸತ್ತ್ವನಿಷೇವಿತಾ ।**
**ಪ್ರತಿಯಾತ ವ್ರಜಂ ನೇಹ ಸ್ಥೇಯಂ ಸ್ತ್ರೀಭಿಃ ಸುಮಧ್ಯಮಾಃ ॥೧೯॥**

ಸುಂದರವಾದ ನಡುವಿನಿಂದ ಕೂಡಿರುವ ಗೋಪಿಯರೇ! ಇದು ಭಯಾನಕವಾದ ರಾತ್ರಿಯಾಗಿದೆ. ಭಯಂಕರವಾದ ಪ್ರಾಣಿಗಳು ಈ ಅರಣ್ಯದಲ್ಲಿ ವಾಸಮಾಡುತ್ತಿವೆ. ಹೀಗಿರುವಾಗ ಹೆಂಗಸರಾದ ನೀವು ಇಲ್ಲಿರುವುದು ತರವಲ್ಲ. ನೀವೆಲ್ಲರೂ ಈಗಲೇ ವ್ರಜಕ್ಕೆ ಹಿಂದಿರುಗಿರಿ.

**ಮಾತರಃ ಪಿತರಃ ಪುತ್ರಾ ಭ್ರಾತರಃ ಪತಯಶ್ಚ ವಃ ।**
**ವಿಚಿನ್ವನ್ತಿ ಹ್ಯಪಶ್ಯನ್ತೋ ಮಾ ಕೃಢ್ವಂ ಬನ್ಧುಸಾಧ್ವಸಮ್ ॥೨೦॥**

ನಿಮ್ಮನ್ನು ಕಾಣದ ನಿಮ್ಮ ತಾಯಿ-ತಂದೆಗಳು, ಸಹೋದರರು, ಪತಿ-ಪುತ್ರರು ಎಲ್ಲರೂ ನಿಮ್ಮನ್ನು ಹುಡುಕಲು ಹೊರಡುತ್ತಾರೆ. ಬಂಧುಗಳಿಗೆ ಭಯವುಂಟಾಗುವಂತೆ ನೀವು ವರ್ತಿಸಬೇಡಿರಿ.

ಗೋಪಸ್ತ್ರೀಯರೇ! ನೀವು ಇಲ್ಲಿಗೆ ಬಂದು ಚಂದ್ರನ ಬೆಳದಿಂಗಳಿಂದ ಪ್ರಕಾಶಮಾನವಾಗಿ ಕಾಣುತ್ತಿರುವ, ವಿಕಸಿತವಾದ, ಘಮ-ಘಮಿಸುವ ಪುಷ್ಪ

ಗಳಿಂದ ವ್ಯಾಪ್ತವಾಗಿರುವ ವೃಂದಾವನವನ್ನು ನೋಡಿದಿರಿ. ಯಮುನೆಯ ಮೇಲೆ ಬೀಸಿ ಬರುವ ತಂಗಾಳಿಯಿಂದ ಅಲುಗಾಡುವ ಚಿಗುರೆಲೆಗಳಿಂದ ಯುಕ್ತವಾದ ವೃಕ್ಷಗಳಿಂದ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿರುವ ಈ ವನಸಿರಿಯನ್ನು ನೋಡಿ ಆನಂದಿಸಿದಿರಿ. ನಿಮ್ಮ ಆಗಮನವೇನೂ ವ್ಯರ್ಥವಾಗಲಿಲ್ಲ. ನೀವಿನ್ನು ಹೋಗಬಹುದು.

ಸತೀ-ಸಾಧ್ವಿಯರೇ! ನೀವೀಗಲೇ ವ್ರಜಕ್ಕೆ ತಡಮಾಡದೇ ಹೋಗಿರಿ. ಸತೀಧರ್ಮವನ್ನನುಸರಿಸಿ ನಿಮ್ಮ ಗಂಡಂದಿರ ಶುಶ್ರೂಷೆಯನ್ನು ಮಾಡಿರಿ. ಮನೆಯಲ್ಲಿ ಮಕ್ಕಳು ಹಾಲಿಗಾಗಿ ಅಳುತ್ತಿವೆ. ಕರುಗಳೂ ಹಂಬಾ—ಎಂದು ಕೂಗಿಕೊಳ್ಳುತ್ತಿವೆ. ಕರುಗಳನ್ನು ಹಾಲುಣಲು ಬಿಟ್ಟು ಹಸುಗಳನ್ನು ಕರೆಯಿರಿ. ನಿಮ್ಮ ಮಕ್ಕಳಿಗೆ ಹಾಲುಣಿಸಿ ಮಲಗಿಸಿರಿ.

ನಿಮ್ಮ ಆಗಮನದ ಕಾರಣವೇನೆಂದು ನಾನು ಕೇಳಿದೆನಲ್ಲವೇ? ನನ್ನ ಮೇಲಿನ ಪ್ರೇಮದಿಂದ ಆಕರ್ಷಿಸಲ್ಪಟ್ಟವರಾಗಿ ನೀವೇನಾದರೂ ಇಲ್ಲಿಗೆ ಬಂದಿರುವಿರಾ? ಹಾಗೆ ಬಂದಿದ್ದರೆ ಅದೂ ಸಮಂಜಸವಾಗಿಯೇ ಇದೆ. ಎಲ್ಲರಿಗೂ ಆತ್ಮಸ್ವರೂಪನಾಗಿರುವ ನನ್ನನ್ನು ಎಲ್ಲ ಪ್ರಾಣಿಗಳೂ ಸ್ವಾಭಾವಿಕ ವಾಗಿಯೇ ಪ್ರೀತಿಸುತ್ತವೆ. ಹಾಗೆಯೇ ನೀವೂ ನನ್ನನ್ನು ಪ್ರೀತಿಸಿರುವುದರಲ್ಲಿ ವಿಶೇಷವೇನೂ ಇಲ್ಲ.

**ಭರ್ತುಃ ಶುಶ್ರೂಷಣಂ ಸ್ತ್ರೀಣಾಂ ಪರೋ ಧರ್ಮೋ ಹ್ಯಮಾಯಯಾ ।**
**ತದ್ಬನ್ಧೂನಾಂ ಚ ಕಲ್ಯಾಣ್ಯಃ ಪ್ರಜಾನಾಂ ಚಾನುಪೋಷಣಮ್ ॥**

ಮಂಗಳಾಂಗಿಯರೇ! ನಿರ್ವಂಚನೆಯಿಂದ ಪತಿಸೇವೆಮಾಡುವುದು, ಬಂಧುಗಳನ್ನು ಸಮಾದರಿಸುವುದು ಮತ್ತು ಸಂತಾನದ ಪಾಲನ-ಪೋಷಣೆ ಗಳನ್ನು ಮಾಡುವುದು ಸ್ತ್ರೀಯರ ಶ್ರೇಷ್ಠವಾದ ಧರ್ಮವಾಗಿದೆ.

**ದುಃಶೀಲೋ ದುರ್ಭಗೋ ವೃದ್ಧೋ ಜಡೋ ರೋಗ್ಯಧನೋಽಪಿ ವಾ ।**
**ಪತಿಃ ಸ್ತ್ರೀಭಿರ್ನ ಹಾತವ್ಯೋ ಲೋಕೇಪ್ಸುಭಿರಪಾತಕೀ ॥೨೫॥**

ಪರಲೋಕವನ್ನು ಬಯಸುವ ಸಾಧ್ವೀಮಣಿಯು, ತನ್ನ ಪತಿಯು ಮಹಾಪಾತಕಿಯಾಗದೇ ಇದ್ದಪಕ್ಷದಲ್ಲಿ ಆತನು ದುಃಶೀಲನಾಗಿರಲೀ ; ನಿರ್ಭಾಗ್ಯನಾಗಿರಲೀ ; ಮುದುಕನಾಗಿರಲೀ ; ಜಡನಾಗಿರಲೀ ; ದರಿದ್ರನಾಗಿ ರಲೀ ; ರೋಗಿಯಾಗಿರಲೀ ಅವನನ್ನು ಪರಿತ್ಯಜಿಸಬಾರದು.

**ಅಸ್ವರ್ಗ್ಯಮಯಶಸ್ಯಂ ಚ ಫಲ್ಗು ಕೃಚ್ಛ್ರಂ ಭಯಾವಹಮ್ ।**
**ಜುಗುಪ್ಸಿತಂ ಚ ಸರ್ವತ್ರ ಔಪಪತ್ಯಂ ಕುಲಸ್ತ್ರಿಯಾಃ ॥೨೬॥**

ಕುಲೀನಸ್ತ್ರೀಯರಿಗೆ ಜಾರಪುರುಷರೊಡನೆ ಸಮಾಗಮವು ಸರ್ವ ಪ್ರಕಾರದಿಂದಲೂ ನಿಂದನೀಯವಾದುದು. ಅವರಿಗೆ ಸ್ವರ್ಗವು ದೊರೆಯುವುದಿಲ್ಲ. ಜಾರಪುರುಷರೊಡನೆ ಮಾಡಿದ ಸಮಾಗಮದ ಫಲವಾಗಿ ನರಕವೇ ಸಿಕ್ಕುವುದು. ಈ ಲೋಕದಲ್ಲಿ ಅಪಕೀರ್ತಿಯುಂಟಾಗುತ್ತದೆ. ಜಾರಪುರುಷನೊಡನೆ ಸಮಾಗಮವನ್ನು ಎಲ್ಲರೂ ತೆಗಳುತ್ತಾರೆ. ಅಂತಹವರ ವಿಷಯ ದಲ್ಲಿ ಎಲ್ಲರೂ ಅಸಹ್ಯಪಡುತ್ತಾರೆ. ಇದು ಅತ್ಯಂತಹೇಯವಾದ ಕಾರ್ಯ. ವ್ಯಭಿಚಾರದಿಂದ ಅನೇಕ ಕಷ್ಟಗಳೂ ಒದಗಿಬರುತ್ತವೆ. ಎಲ್ಲರಿಗೂ ಹೆದರಬೇಕಾಗುತ್ತದೆ. ಕುಲೀನಸ್ತ್ರೀಯರಿಗೆ ಅದು ಅತ್ಯಂತನೀಚಕಾರ್ಯವೇ ಆಗಿದೆ.

**ಶ್ರವಣಾದ್ದರ್ಶನಾದ್ಧ್ಯಾನಾನ್ಮಯಿ ಭಾವೋಽನುಕೀರ್ತನಾತ್ ।**
**ನ ತಥಾ ಸನ್ನಿಕರ್ಷೇಣ ಪ್ರತಿಯಾತ ತತೋ ಗೃಹಾನ್ ॥೨೭॥**

ಇಷ್ಟೇ ಅಲ್ಲದೆ ನನ್ನ ಲೀಲಾಪ್ರಸಂಗಗಳ ಶ್ರವಣದಿಂದ, ಕೀರ್ತನದಿಂದ, ನನ್ನ ದರ್ಶನದಿಂದ ಮತ್ತು ನನ್ನ ಶ್ರೀವಿಗ್ರಹವನ್ನು ಧ್ಯಾನಿಸುವುದರಿಂದ ಯಾವ ವಿಧವಾದ ಅನನ್ಯಪ್ರೇಮವುಂಟಾಗುವುದೋ ಅಂತಹ ನಿಶ್ಚಲ ಪ್ರೇಮವು ಅಂಗಸಂಗದಿಂದುಂಟಾಗಲಾರದು. ಆದುದರಿಂದ ನೀವೆಲ್ಲರೂ ಶೀಘ್ರವಾಗಿ ನಿಮ್ಮ-ನಿಮ್ಮ ಮನೆಗಳಿಗೆ ಹೋಗಿರಿ.”

ಶ್ರೀಶುಕಮುನಿಗಳು ಹೇಳುತ್ತಾರೆ :

ಹಿಂದೆಯೇ ಒಂದು ರಾತ್ರಿ ಅವರೊಡನೆ ರಮಿಸುವುದಾಗಿ ಶ್ರೀಕೃಷ್ಣನು ಗೋಪಕುಮಾರಿಯರಿಗೆ ಮಾತುಕೊಟ್ಟಿದ್ದನು. ವೇಣುನಾದದ ಮೂಲಕವಾಗಿ ಪೂರ್ಣಚಂದ್ರನಿದ್ದ ಶರದ್ರಾತ್ರಿಯಲ್ಲಿ ಎಲ್ಲ ಗೋಪಿಯರಿಗೂ ಕರೆ ಕೊಟ್ಟನು. ಶ್ರೀಕೃಷ್ಣನ ಕರೆಯನ್ನು ಕೊಳಲಿನ ಮೂಲಕವಾಗಿ ಕೇಳುತ್ತಲೇ ಹುಚ್ಚುಹಿಡಿದವರಂತೆ ಗೋಪಿಯರೆಲ್ಲರೂ ಯಾರಿಗೂ ಹೇಳದೆ-ಕೇಳದೆ, ಎಡವಿ ಬೀಳುವುದನ್ನೂ ಲೆಕ್ಕಿಸದೆ ಓಡೋಡಿ ವೃಂದಾವನಕ್ಕೆ ಬಂದರು. ಮರುಕ್ಷಣದಲ್ಲಿ ಶ್ರೀಕೃಷ್ಣನ ಬಾಹುಪಾಶಗಳಲ್ಲಿ ಬೀಳುವುದೇ ಅವರ ಬಯಕೆಯಾಗಿತ್ತು. ಆದರೆ ಅವರ ನಿರೀಕ್ಷೆಗೆ ಅತ್ಯಂತ ವ್ಯತಿರಿಕ್ತವಾದ ರೀತಿಯಲ್ಲಿ ಮಾಯಾವಿಯಾದ ಶ್ರೀಕೃಷ್ಣನು ಅವರಿಗೆ ಧರ್ಮಬೋಧನೆ

ಮಾಡಿದನು. ಗೋಪಿಯರು ಉಪದೇಶವನ್ನು ಕೇಳಲು ಬಂದವರಲ್ಲ. ಸರ್ವಧರ್ಮಗಳನ್ನೂ ತ್ಯಜಿಸಿ ಶ್ರೀಕೃಷ್ಣನೇ ಪರಮಗತಿಯೆಂದು ತಿಳಿದು ಬಂದಿದ್ದರು. ಪ್ರೇಮಗೀತೆಯನ್ನು ಕೇಳಲು ಬಂದಿದ್ದರು. ಶ್ರೀಕೃಷ್ಣನ ಸುದೀರ್ಘವಾದ ಮಾತುಗಳನ್ನು ಕೇಳುತ್ತಲೇ ಗೋಪಿಯರಿಗೆ ಆಕಾಶವೇ ಕಳಚಿ ಮೇಲೆ ಬಿದ್ದಂತಾಯಿತು. ಗೋವಿಂದನಾಡಿದ ಮಾತುಗಳು ಅವರಿಗೆ ಸ್ವಲ್ಪವೂ ಪ್ರಿಯವಾಗಿರಲಿಲ್ಲ. ಅವರ ಆಸೆ-ಆಕಾಂಕ್ಷೆಗಳೆಲ್ಲವೂ ನುಚ್ಚು ನೂರಾದುವು. ಅವರು ಕಡುದುಃಖಿತರಾದರು. ದಾಟಲು ಅಸಾಧ್ಯವಾದ ಚಿಂತಾಸಮುದ್ರದಲ್ಲಿ ಮುಳುಗಿಹೋದರು. ವಿರಹದುಃಖದಿಂದಾಗಿ ಗೋಪಿಯರು ತಲೆತಗ್ಗಿಸಿ ನಿಟ್ಟುಸಿರುಬಿಡುತ್ತಿದ್ದರು. ನಿಟ್ಟುಸಿರಿನ ಬಿಸಿಯಿಂದಾಗಿ ತೊಂಡೇಹಣ್ಣಿನಂತಹ ಅವರ ಕೆಂದುಟಿಗಳು ಒಣಗಿಹೋದುವು. ಮುಂದೇನು ಮಾಡಬೇಕೆಂಬುದು ತೋರದೆ ಕಾಲುಗುರುಗಳಿಂದ ಭೂಮಿಯನ್ನು ಕೆರೆಯುತ್ತಿದ್ದರು. ಉಮ್ಮಳಿಸಿ ಬರುತ್ತಿದ್ದ ದುಃಖದಿಂದ, ಕಾಡಿಗೆಯಿಂದ ಕೂಡಿದ ಕಣ್ಣೀರು ಸುರಿಯುತ್ತಿದ್ದು ಆ ಕಣ್ಣೀರು ಕುಚಮಂಡಲದಲ್ಲಿ ಲೇಪಿತವಾಗಿದ್ದ ಕುಂಕುಮಕೇಸರಿಯನ್ನು ತೊಳೆದುಹಾಕಿತು. ದುಃಖದ ಆವೇಗದಿಂದಾಗಿ ಗಂಟಲು ಕಟ್ಟಿ ಯಾವ ಮಾತನ್ನೂ ಆಡಲಾಗದೆ ಅವರೆಲ್ಲರೂ ಮೌನವಾಗಿ ನಿಂತಿದ್ದರು. ಶ್ರೀಕೃಷ್ಣನು ಗೋಪಿಯರಿಗೆ ಪರಮಪ್ರಿಯನಾಗಿದ್ದನು. ಅವನ ಸಲುವಾಗಿಯೇ ಅವರು ಸಮಸ್ತಕಾಮನೆಗಳನ್ನೂ ಸಮಸ್ತಬಂಧುಗಳನ್ನೂ ತ್ಯಜಿಸಿಬಂದಿದ್ದರು. ತಾವಿಟ್ಟಿದ್ದ ಪ್ರೀತಿಗೆ ವಿರುದ್ಧವಾದ ತಮಗೆ ಪ್ರಿಯವಾಗದ ಮಾತುಗಳನ್ನು ಶ್ರೀಕೃಷ್ಣನಿಂದ ಕೇಳಿ ಗೋಪಿಕಾಸ್ತ್ರೀಯರಿಗೆ ಬಹಳ ದುಃಖವಾಯಿತು. ಅತ್ತತ್ತು ಕೆಂಪಾಗಿದ್ದ ಕಣ್ಣುಗಳನ್ನು ಅವರು ಒರೆಸಿಕೊಂಡರು. ಸ್ವಲ್ಪ ಧೈರ್ಯವನ್ನು ತಂದುಕೊಂಡು ಪ್ರಣಯಕೋಪವನ್ನು ತಳೆದು ಗದ್ಗದಧ್ವನಿಯಿಂದ ಶ್ರೀಕೃಷ್ಣನಿಗೆ ಹೇಳಿದರು :

**ಮೈವಂ ವಿಭೋಽರ್ಹತಿ ಭವಾನ್ಗದಿತುಂ ನೃಶಂಸಂ**
**ಸನ್ತ್ಯಜ್ಯ ಸರ್ವವಿಷಯಾಂಸ್ತವ ಪಾದಮೂಲಮ್ ।**
**ಭಕ್ತಾ ಭಜಸ್ವ ದುರವಗ್ರಹ ಮಾ ತ್ಯಜಾಸ್ಮಾನ್**
**ದೇವೋ ಯಥಾದಿಪುರುಷೋ ಭಜತೇ ಮುಮುಕ್ಷೂನ್ ॥**

"ಪ್ರಾಣವಲ್ಲಭನೇ! ಇಂತಹ ನಿಷ್ಠುರವಾದ ಮಾತುಗಳನ್ನಾಡುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ನಮ್ಮದೆಂದು ಭಾವಿಸಲ್ಪಡುತ್ತಿದ್ದ ಸಕಲ ಸರ್ವಸ್ವವನ್ನೂ ಪರಿತ್ಯಜಿಸಿ ನಿನ್ನ ಪಾದಮೂಲವನ್ನು ಸೇರಿದ್ದೇವೆ. ಸರ್ವತಂತ್ರಸ್ವತಂತ್ರನೇ! ನಮ್ಮನ್ನು ಪರಿತ್ಯಜಿಸಬೇಡ. ಆದಿಪುರುಷನಾದ ನಾರಾಯಣಸ್ವಾಮಿಯು ಮೋಕ್ಷಾಪೇಕ್ಷಿಗಳಾದ ಪುರುಷರನ್ನು ಪರಿಪಾಲಿಸು ವಂತೆ ಭಕ್ತರಾದ ನಮ್ಮನ್ನು ಪರಿಗ್ರಹಿಸಿ ಪರಿಪಾಲಿಸು.

**ಯತ್ಪತ್ಯಪತ್ಯಸುಹೃದಾಮನುವೃತ್ತಿರಙ್ಗ**
**ಸ್ತ್ರೀಣಾಂ ಸ್ವಧರ್ಮ ಇತಿ ಧರ್ಮವಿದಾ ತ್ವಯೋಕ್ತಮ್ ।**
**ಅಸ್ತ್ವೇವಮೇತದುಪದೇಶಪದೇ ತ್ವಯೀಶೇ**
**ಪ್ರೇಷ್ಠೋ ಭವಾಂಸ್ತನುಭೃತಾಂ ಕಿಲ ಬನ್ಧುರಾತ್ಮಾ ॥**

ಪ್ರಾಣಪ್ರಿಯನೇ! ಪತಿ-ಪುತ್ರರು, ಜ್ಞಾತಿಬಾಂಧವರು–ಇವರ ಸೇವೆ-ಪಾಲನೆಗಳನ್ನು ಮಾಡಿಕೊಂಡು ಇರಬೇಕಾದುದು ಸ್ತ್ರೀಯರಿಗೆ ಸ್ವಧರ್ಮ ವಾಗಿರುವುದೆಂದು ಧರ್ಮವಿದನಾದ ನೀನು ಹೇಳಿದೆಯಲ್ಲವೇ? ಇದು ಹಾಗೆಯೇ ಆಗಲಿ. ಆದರೆ ವಾಸ್ತವವಾಗಿ ನೋಡಿದರೆ ನೀನು ಶರೀರ ಧಾರಿಗಳಿಗೆ ಪರಮಪ್ರಿಯನೂ, ಬಂಧುವೂ, ಆತ್ಮನೂ ಆಗಿರುವೆ. ಆದುದ ರಿಂದ ಪತಿ-ಪುತ್ರರಾದಿಯಾಗಿ ಸಮಸ್ತವೂ ನೀನೇ ಎಂದು ಭಾವಿಸಿಬಂದಿ ರುವ ನಾವು ನಿನ್ನನ್ನಲ್ಲದೆ ಮತ್ತಾರನ್ನು ಸೇವಿಸೋಣ?*

**ಕುರ್ವನ್ತಿ ಹಿ ತ್ವಯಿ ರತಿಂ ಕುಶಲಾಃ ಸ್ವ ಆತ್ಮನ್**
**ನಿತ್ಯಪ್ರಿಯೇ ಪತಿಸುತಾದಿಭಿರಾರ್ತಿದೈಃ ಕಿಮ್ ।**
**ತನ್ನಃ ಪ್ರಸೀದ ಪರಮೇಶ್ವರ ಮಾ ಸ್ಮ ಛಿನ್ದ್ಯಾ**
**ಆಶಾಂ ಭೃತಾಂ ತ್ವಯಿ ಚಿರಾದರವಿನ್ದನೇತ್ರ ॥೩೩॥**

ತಾವರೇಗಣ್ಣನೇ! ಆತ್ಮಜ್ಞಾನಿಗಳಾದ ಮಹಾಪುರುಷರು ನಿತ್ಯ ಪ್ರಿಯನೂ, ತಮ್ಮ ಆತ್ಮಸ್ವರೂಪನೂ ಆದ ನಿನ್ನನ್ನು ಬಹಳವಾಗಿ ಪ್ರೀತಿಸು

* ಆತ್ಮೇತ್ಯೇವತೂಪಗೃಹ್ಣನ್ತಿ । (ಬ್ರಹ್ಮಸೂತ್ರ)
ಇನ್ದ್ರಸ್ಯಾತ್ಮಾನಂ ದಶಧಾ ಚರನ್ತಿ (ಯಜುರಾರಣ್ಯಕ)

ತ್ತಾರೆ. ನಿನ್ನಲ್ಲಿರಿಸುವ ಪ್ರೀತಿಯು ಅವರಿಗೆ ಸದಾ ಆನಂದದಾಯಕವಾಗಿರುತ್ತದೆ. ಆದರೆ ಪ್ರಿಯರಾಗಿ ತೋರುವ ಪತಿ-ಪುತ್ರರೇ ಮೊದಲಾದ ಬಂಧುಗಳಲ್ಲಿರುವ ಪ್ರೀತಿಯು ದುಃಖದಾಯಕವಾಗಿರುತ್ತದೆ. ಆದುದರಿಂದ, ಪರಮೇಶ್ವರನೇ! ಪ್ರಸನ್ನನಾಗು. ಬಹಳ ಕಾಲದಿಂದಲೂ ನಿನ್ನಲ್ಲಿಟ್ಟಿರುವ ಸುಕೋಮಲವಾದ ಆಶಾಲತೆಯನ್ನು ಕತ್ತರಿಸಿಹಾಕಬೇಡ.

**ಚಿತ್ತಂ ಸುಖೇನ ಭವತಾಪಹೃತಂ ಗೃಹೇಷು**
**ಯನ್ನಿರ್ವಿಶತ್ಯುತ ಕರಾವಪಿ ಗೃಹ್ಯಕೃತ್ಯೇ ।**
**ಪಾದೌ ಪದಂ ನ ಚಲತಸ್ತವ ಪಾದಮೂಲಾ-**
**ದ್ಯಾಮಃ ಕಥಂ ವ್ರಜಮಥೋ ಕರವಾಮ ಕಿಂ ವಾ ॥೩೪॥**

ಮನೋಮೋಹನನೇ! ಯಾವ ನಮ್ಮ ಮನಸ್ಸು ಇದುವರೆಗೂ ಗೃಹಕೃತ್ಯದಲ್ಲಿ ತೊಡಗಿದ್ದಿತೋ ಅಂತಹ ನಮ್ಮ ಮನಸ್ಸನ್ನೇ ಸುಖಸ್ವರೂಪನಾದ ನೀನು ಅಪಹರಿಸಿಬಿಟ್ಟಿರುವೆ. ನಮ್ಮ ಪಾದಗಳಂತೂ ನಿನ್ನ ದಿವ್ಯವಾದ ಪಾದಮೂಲಗಳಿಂದ ಒಂದು ಹೆಜ್ಜೆ ಹಿಂದಿಡಲೂ ಸಿದ್ಧವಾಗಿಲ್ಲ. ಹೀಗಿರುವಾಗ ನಾವು ವ್ರಜಕ್ಕೆ ಹೋಗುವುದಾದರೂ ಹೇಗೆ? ಅಲ್ಲಿಗೆ ಹೋಗಿ ಮಾಡುವುದಾದರೂ ಏನಿದೆ? ಮನಸ್ಸನ್ನೇ ನೀನು ಕದ್ದುಬಿಟ್ಟಿರುವಾಗ ನಮಗೆ ಪತಿ-ಪುತ್ರ-ಬಂಧುಗಳ ಮತ್ತು ಗೃಹಕೃತ್ಯದ ಸ್ಮರಣೆಯಾದರೂ ಹೇಗುಂಟಾದೀತು?

**ಸಿಞ್ಚಾಙ್ಗ ನಸ್ತ್ವದಧರಾಮೃತಪೂರಕೇಣ**
**ಹಾಸಾವಲೋಕಕಲಗೀತಜಹೃಚ್ಛಯಾಗ್ನಿಮ್ ।**
**ನೋ ಚೇದ್ವಯಂ ವಿರಹಜಾಗ್ನ್ಯುಪಯುಕ್ತದೇಹಾ**
**ಧ್ಯಾನೇನ ಯಾಮ ಪದಯೋಃ ಪದವೀಂ ಸಖೇ ತೇ ॥**

ಪ್ರಾಣಸಖನೇ! ನಿನ್ನ ಕಿರುನಗೆಯಿಂದಲೂ, ಕುಡಿನೋಟದಿಂದಲೂ, ಮನೋಹರವಾದ ಮಧುರವಾದ ವೇಣುಗಾನದಿಂದಲೂ ನಮ್ಮ ಹೃದಯದಲ್ಲಿ ಹುಟ್ಟಿರುವ ಕಾಮಾಗ್ನಿಯನ್ನು ನಿನ್ನ ಅಧರಾಮೃತವನ್ನು ಕೆಂದುಟಿಗಳ ಮೂಲಕವಾಗಿ ಸುರಿದು ಆರಿಸು. ನೀನೇನಾದರೂ ಹಾಗೆ ಮಾಡದಿದ್ದರೆ

ವಿರಹಾಗ್ನಿಗೆ ನಮ್ಮ ಶರೀರವನ್ನು ಬಲಿಗೊಟ್ಟು ಧ್ಯಾನದ ಮೂಲಕವಾಗಿ ನಿನ್ನ ಪಾದಮೂಲವನ್ನು ಸೇರಿಕೊಂಡುಬಿಡುವೆವು.

**ಯರ್ಹ್ಯಮ್ಬುಜಾಕ್ಷ ತವ ಪಾದತಲಂ ರಮಾಯಾ**
**ದತ್ತಕ್ಷಣಂ ಕ್ವಚಿದರಣ್ಯಜನಪ್ರಿಯಸ್ಯ ।**
**ಅಸ್ಪ್ರಾಕ್ಷ್ಮ ತತ್ಪ್ರಭೃತಿ ನಾನ್ಯಸಮಕ್ಷಮಜ್ಞ**
**ಸ್ಥಾತುಂ ತ್ವಯಾಭಿರಮಿತಾ ಬತ ಪಾರಯಾಮಃ ॥೩೬॥**

ಕಮಲಾಕ್ಷನೇ! ನೀನು ವನವಾಸಿಗಳನ್ನು ಪ್ರೀತಿಸುವೆ. ವನವಾಸಿಗಳಾದ ನಾವೂ ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇವೆ. ಆದುದರಿಂದಲೇ ನೀನು ಅವರ ಮಧ್ಯದಲ್ಲಿ ವಾಸಮಾಡುತ್ತಿರುವೆ. ಯಾವನ ಪಾದತಲಗಳ ಸೇವೆಯು ಲಕ್ಷ್ಮೀದೇವಿಗೂ ಆಗೊಮ್ಮೆ-ಈಗೊಮ್ಮೆ ಹಬ್ಬದ ರೂಪದಲ್ಲಿ ಪ್ರಾಪ್ತವಾಗುವುದೋ–ಅಂತಹ ನಿನ್ನ ಪಾದತಲವನ್ನು ಸ್ಪರ್ಶಿಸುವ ಸೌಭಾಗ್ಯವು ನಮಗೂ ಸಿಕ್ಕಿತು. ಅಂದು ನೀನು ನಮ್ಮನ್ನು ದಾಸಿಯರನ್ನಾಗಿ ಸ್ವೀಕರಿಸಿ ಆನಂದವನ್ನುಂಟುಮಾಡಿದೆ. ಅಂದಿನಿಂದ ನಾವು ಬೇರೆಯವರ ಮುಂದೆ ಒಂದು ಕ್ಷಣವಾದರೂ ನಿಲ್ಲಲು ಅಸಮರ್ಥರಾಗಿದ್ದೇವೆ. ಎದುರಿನಲ್ಲಿ ನಿಲ್ಲಲೇ ಸಾಧ್ಯವಿಲ್ಲವೆಂದಮೇಲೆ ಪತಿಗಳ ಸೇವೆಮಾಡಲು ಹೇಗೆತಾನೇ ಸಾಧ್ಯವಾದೀತು?

**ಶ್ರೀರ್ಯತ್ಪದಾಮ್ಬುಜರಜಶ್ಚಕಮೇ ತುಲಸ್ಯಾ**
**ಲಬ್ಧ್ವಾಪಿ ವಕ್ಷಸಿ ಪದಂ ಕಿಲ ಭೃತ್ಯಜುಷ್ಟಮ್ ।**
**ಯಸ್ಯಾಃ ಸ್ವವೀಕ್ಷಣಕೃತೇऽನ್ಯಸುರಪ್ರಯಾಸ-**
**ಸ್ತದ್ವದ್ವಯಂ ಚ ತವ ಪಾದರಜಃ ಪ್ರಪನ್ನಾಃ ॥೩೭॥**

ಯಾವ ಮಹಾಲಕ್ಷ್ಮಿಯ ಕಡೆಗಣ್ಣಿನ ನೋಟದ ಅನುಗ್ರಹಕ್ಕಾಗಿ ಇತರ ದೇವತೆಗಳು ತಪಸ್ಸಿನ ಮೂಲಕವಾಗಿ ಪ್ರಯಾಸಪಡುವರೋ ಅಂತಹ ಲಕ್ಷ್ಮೀದೇವಿಯು ನಿನ್ನ ಹೃತ್ಕಮಲದಲ್ಲಿ ನೆಲೆಸಿದ್ದಾಳೆ. ಆದರೂ ಅಲ್ಲಿರುವುದು ಅವಳಿಗೆ ತೃಪ್ತಿಯನ್ನುಂಟುಮಾಡಿಲ್ಲ. ನಿನ್ನ ಸೇವಕರಿಂದ ಸೇವಿಸಲ್ಪಡುವ ನಿನ್ನ ಪಾದಧೂಳಿಯನ್ನು ತನ್ನ ಸವತಿಯಾದ ತುಳಸೀದೇವಿಯೊಡನೆ ಸೇವಿಸಬೇಕೆಂದು ಆಸೆಪಡುತ್ತಾಳೆ. ಲಕ್ಷ್ಮೀದೇವಿಗೆ ಅಭೀಷ್ಟವಾದ ಅಂತಹ ನಿನ್ನ ಪಾದಧೂಳಿಯನ್ನೇ ನಾವೂ ಶರಣುಹೊಂದಿದ್ದೇವೆ.

**ತನ್ನಃ ಪ್ರಸೀದ ವೃಜಿನಾರ್ದನ ತೇಽಙ್ಘ್ರಿಮೂಲಂ**
**ಪ್ರಾಪ್ತಾ ವಿಸೃಜ್ಯ ವಸತೀಸ್ತ್ವದುಪಾಸನಾಶಾಃ ।**
**ತ್ವತ್ಸುನ್ದರಸ್ಮಿತನಿರೀಕ್ಷಣತೀವ್ರಕಾಮ-**
**ತಪ್ತಾತ್ಮನಾಂ ಪುರುಷಭೂಷಣ ದೇಹಿ ದಾಸ್ಯಮ್ ॥೩೮॥**

ಪಾಪಹರನೇ! ಪರಮೇಶ್ವರ! ನಿನ್ನ ಸೇವೆಮಾಡಬೇಕೆಂಬ ಆಸೆ ಯಿಂದಲೇ ನಾವು ಮನೆ-ಮಠಗಳನ್ನೂ, ಪತಿ-ಸುತರನ್ನೂ, ಬಂಧು ಗಳನ್ನೂ, ಸಕಲಸರ್ವಸ್ವವನ್ನೂ ಪರಿತ್ಯಜಿಸಿ ನಿನ್ನ ದಿವ್ಯಪಾದಗಳ ಮೂಲಕ್ಕೆ ಬಂದು ಸೇರಿಕೊಂಡುಬಿಟ್ಟಿದ್ದೇವೆ. ಪುರುಷಭೂಷಣನೇ! ನಿನ್ನ ಅಂದವಾದ ಕಿರುನಗೆಯಿಂದಲೂ, ಚೇತೋಪಹಾರಿಯಾದ ಕಡೆಗಣ್ಣಿನ ನೋಟದಿಂದಲೂ ನಮ್ಮ ಹೃದಯದಲ್ಲಿ ಕಾಮಾಗ್ನಿಯು ಹೊತ್ತಿಕೊಂಡು ಉರಿಯುತ್ತಿದೆ. ಇದ ರಿಂದ ದಹಿಸಲ್ಪಡುತ್ತಿರುವ ನಮಗೆ ನಿನ್ನ ದಾಸ್ಯವನ್ನು ಅನುಗ್ರಹಿಸಿ ಕಾಪಾಡು.

**ವೀಕ್ಷ್ಯಾಲಕಾವೃತಮುಖಂ ತವ ಕುಣ್ಡಲಶ್ರೀ-**
**ಗಣ್ಡಸ್ಥಲಾಧರಸುಧಂ ಹಸಿತಾವಲೋಕಮ್ ।**
**ದತ್ತಾಭಯಂ ಚ ಭುಜದಣ್ಡಯುಗಂ ವಿಲೋಕ್ಯ**
**ವಕ್ಷಃ ಶ್ರಿಯೈಕರಮಣಂ ಚ ಭವಾಮ ದಾಸ್ಯಃ ॥೩೯॥**

ಪ್ರಿಯತಮನೇ! ನಿನ್ನ ಗುಂಗುರುಕೂದಲುಗಳಿಂದ ಸಮಲಂಕೃತವಾದ ಮುಖಕಮಲವನ್ನೂ, ಥಳ-ಥಳಿಸುವ ಕುಂಡಲಗಳಿಂದ ಬೆಳಗುತ್ತಿರುವ ಕಪೋಲಗಳನ್ನೂ, ಅಮೃತಕ್ಕೆ ಸಮಾನವಾದ ಅಧರಾಮೃತವನ್ನು ಸುರಿಸುವ ಕೆಂದುಟಿಯನ್ನೂ, ನಯನಮನೋಹರವಾದ ಕಡೆಗಣ್ಣನ್ನೂ, ಚಿತ್ತಾಪ ಹಾರಕವಾದ ಕಿರುನಗೆಯನ್ನೂ, ಶರಣಾಗತರಿಗೆ ಅಭಯದಾನಮಾಡುವ ಎರಡು ದುಂಡಾದ ಭುಜಗಳನ್ನೂ, ಅನುಪಮವಾದ ಸೌಂದರ್ಯದಿಂದ ಬೆಳಗುತ್ತಾ ಲಕ್ಷ್ಮಿಗೆ ನಿರಂತರ ಕ್ರೀಡಾಸ್ಥಾನವಾಗಿರುವ ನಿನ್ನ ವಕ್ಷಃಸ್ಥಳವನ್ನೂ ನೋಡಿ ನಾವು ನಿನ್ನ ದಾಸಿಯರಾಗಿಬಿಟ್ಟಿದ್ದೇವೆ.

**ಕಾ ಸ್ತ್ರ್ಯಙ್ಗ ತೇ ಕಲಪದಾಯತಮೂರ್ಛಿತೇನ**
**ಸಮ್ಮೋಹಿತಾರ್ಯಚರಿತಾನ್ನ ಚಲೇತ್ತ್ರಿಲೋಕ್ಯಾಮ್ ।**
**ತ್ರೈಲೋಕ್ಯಸೌಭಗಮಿದಂ ಚ ನಿರೀಕ್ಷ್ಯ ರೂಪಂ**
**ಯದ್ಗೋದ್ವಿಜದ್ರುಮಮೃಗಾಃ ಪುಲಕಾನ್ಯಬಿಭ್ರನ್ ॥**

ಮೂರು ಲೋಕಗಳಲ್ಲಿಯೂ ಇರುವ ಸ್ತ್ರೀಯರ ಸಮೂಹದಲ್ಲಿ– ತ್ರಿಲೋಕಸುಂದರವಾದ, ಕಮನೀಯವಾದ, ಸಾವಿರ ಮನ್ಮಥರನ್ನು ಧಿಕ್ಕರಿಸುವ ಕಡುಚೆಲುವಾದ ಯಾವ ನಿನ್ನ ರೂಪವನ್ನು ನೋಡಿ ಗೋವುಗಳೂ, ಪಕ್ಷಿಗಳೂ, ವೃಕ್ಷಗಳೂ ಮತ್ತು ಮೃಗಗಳೂ ಕೂಡ ಪುಳಕಿತವಾಗುವುವೋ ಅಂತಹ ಸುಂದರಮುಖವನ್ನು ನೋಡಿದ, ವಿಸ್ತೃತವಾದ ಸ್ವರಪ್ರಸ್ತಾರದಿಂದ ಕೂಡಿರುವ, ಚಿತ್ತಾಕರ್ಷಕವಾದ ನಿನ್ನ ವೇಣುಗಾನವನ್ನು ಕೇಳಿದ ಯಾವ ಸ್ತ್ರೀಯು ತಾನೇ ಕುಲಾಚಾರದಿಂದ ಭ್ರಷ್ಟಳಾಗದೇ ಇದ್ದಾಳು? ನಿನ್ನ ಸುಂದರರೂಪವು ಪಶು-ಪಕ್ಷಿ-ವೃಕ್ಷಗಳಿಗೇ ಕಮನೀಯವಾಗಿದೆಯೆಂದರೆ ನಿನ್ನ ಕಮನೀಯರೂಪವನ್ನು ನೋಡಿದ, ನಿನ್ನ ವೇಣುಗಾನವನ್ನು ಕೇಳಿದ ಸ್ತ್ರೀಯರು ಆಕರ್ಷಿತರಾಗದೇ ಇರಲು ಸಾಧ್ಯವೇ? ನಾವು ಸರ್ವಸ್ವವನ್ನೂ ತೊರೆದು ನಿನ್ನನ್ನು ಸೇರಬೇಕೆಂದು ಬಯಸಿದರೆ ಅದರಲ್ಲಿ ಆಶ್ಚರ್ಯ ವೇನಿದೆ?

**ವ್ಯಕ್ತಂ ಭವಾನ್ ವ್ರಜಭಯಾರ್ತಿಹರೋಽಭಿಜಾತೋ**
**ದೇವೋ ಯಥಾದಿಪುರುಷಃ ಸುರಲೋಕಗೋಪ್ತಾ ।**
**ತನ್ನೋ ನಿಧೇಹಿ ಕರಪಙ್ಕಜಮಾರ್ತಬನ್ಧೋ**
**ತಪ್ತಸ್ತನೇಷು ಚ ಶಿರಸ್ಸು ಚ ಕಿಙ್ಕರೀಣಾಮ್ ॥೪೧॥**

ಆದಿಪುರುಷನಾದ ಶ್ರೀಮನ್ನಾರಾಯಣನು ದೇವತೆಗಳ ಲೋಕವನ್ನು ರಕ್ಷಿಸುವಂತೆ–ನೀನು ವ್ರಜವಾಸಿಗಳ ಭಯವನ್ನೂ, ಕಷ್ಟವನ್ನೂ ಪರಿಹರಿಸುವುದಕ್ಕಾಗಿಯೇ ಅವತರಿಸಿರುವೆಯೆಂಬುದು ಸ್ಪಷ್ಟವಾಗಿದೆ. ವ್ರಜವಾಸಿಗಳಾದ ನಾವು ಈಗ ಆರ್ತರಾಗಿಯೂ ಕಾಮಪೀಡಿತರಾಗಿಯೂ ಇದ್ದೇವೆ. ಆದುದರಿಂದ, ಆರ್ತಬಂಧುವೇ! ನಿನ್ನ ಅಭಯದಾಯಕಗಳಾದ ಕರಕಮಲಗಳನ್ನು ದಾಸಿಯರಾದ ನಮ್ಮ ಕಾಮಜ್ವರದಿಂದ ಬಿಸಿಯಾಗಿರುವ ಸ್ತನಗಳ ಮೇಲೂ ತಲೆಗಳ ಮೇಲೂ ಇಟ್ಟು ನಮ್ಮನ್ನು ಕಾಪಾಡು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಸನಕಾದಿಯೋಗಿಗಳಿಗೂ, ಶಿವನೇ ಮೊದಲಾದ ಯೋಗೇಶ್ವರರಿಗೂ ಈಶ್ವರನು. ಗೋಪಿಕಾಸ್ತ್ರೀಯರ ದುಃಖದಿಂದ ಕೂಡಿದ ಮಾತುಗಳನ್ನು ಕೇಳುತ್ತಲೇ ಅವನ ಹೃದಯವು

ದಯಾರಸದಿಂದ ತುಂಬಿಹೋಯಿತು. ಯದ್ಯಪಿ ಅವನು ಆತ್ಮಾರಾಮನಾಗಿದ್ದರೂ, ಇತರರ ಅಪೇಕ್ಷೆಯಿಲ್ಲದೆ ಬ್ರಹ್ಮಭಾವವನ್ನು ಹೊಂದಿ ಆನಂದಪಡುತ್ತಿರುವವನಾದರೂ ಗೋಪಿಕಾಸ್ತ್ರೀಯರೊಡನೆ ಕ್ರೀಡೆಯಾಡಲು ಪ್ರಾರಂಭಿಸಿದನು.

ಶ್ರೀಕೃಷ್ಣನು ತನ್ನೊಡನಿದ್ದ ಗೋಪಿಯರೊಡನೆ ಉದಾರವಾಗಿ ವರ್ತಿಸಲು ತೊಡಗಿದನು. ಅವನು ಮಂದಹಾಸವನ್ನು ಬೀರಿದಾಗ ಮಲ್ಲಿಗೆಯ ಮೊಗ್ಗಿನಂತಹ ಶುಭ್ರವಾದ ಹಲ್ಲುಗಳು ಕಾಣುತ್ತಿದ್ದುವು. ಅವನ ಕಟಾಕ್ಷವೀಕ್ಷಣದಿಂದ ಗೋಪಸ್ತ್ರೀಯರ ಮುಖಗಳು ವಿಕಸಿತವಾಗುತ್ತಿದ್ದುವು. ನಕ್ಷತ್ರಗಳಿಂದ ಚಂದ್ರನು ಪರಿವೃತನಾಗಿರುವಂತೆ–ಮಂದಹಾಸವನ್ನೂ ಕಡೆಗಣ್ಣಿನ ನೋಟವನ್ನೂ ನೋಡಿ ಹಿರಿಹಿಗ್ಗುತ್ತಿದ್ದ ಗೋಪಿಕಾಸ್ತ್ರೀಯರಿಂದ ಶ್ರೀಕೃಷ್ಣನು ಪರಿವೃತನಾಗಿದ್ದನು. ನೂರಾರು ಗೋಪಿಯರ ಗುಂಪಿಗೆ ಸ್ವಾಮಿಯಾದ ಶ್ರೀಕೃಷ್ಣನು ವೈಜಯಂತೀವನಮಾಲೆಯನ್ನು ಧರಿಸಿ ವೃಂದಾವನದ ಶೋಭೆಯನ್ನು ಹೆಚ್ಚಿಸುತ್ತಾ ಅಲ್ಲಿ ಗೋಪಿಯರೊಡನೆ ಸಂಚರಿಸುತ್ತಿದ್ದನು. ಕೆಲವು ವೇಳೆ ಗೋಪಿಯರು ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಕರ್ಣಾನಂದಕರವಾಗಿ ಹಾಡುತ್ತಿದ್ದರು. ಕೆಲವು ವೇಳೆ ಶ್ರೀಕೃಷ್ಣನೇ ಗೋಪಿಕಾಸ್ತ್ರೀಯರ ಪ್ರೇಮಗೀತೆಗಳನ್ನು ಹಾಡುತ್ತಿದ್ದನು. ಯಮುನೆಯ ತರಲತರಂಗಗಳ ಸ್ಪರ್ಶದಿಂದ ಅಲುಗಾಡುತ್ತಿದ್ದ ಕಮಲ-ಕನ್ನೈದಿಲೆಗಳ ಪರಿಮಳದ ಗಾಳಿಯಿಂದ ಕೂಡಿದ್ದ, ಯಮುನೆಯ ತೀರದಲ್ಲಿದ್ದ ಶೀತಲವಾದ ಮರಳಿನಿಂದ ಕೂಡಿದ್ದ ಮರಳುದಿಣ್ಣೆಗೆ ಶ್ರೀಕೃಷ್ಣನು ಗೋಪಿಯರೊಡನೆ ಹೋದನು.

ತೋಳುಗಳನ್ನು ಅಗಲವಾಗಿ ಚಾಚಿ ಅಪ್ಪಿಕೊಳ್ಳುವುದರಿಂದಲೂ, ಕೈಗಳಿಂದ ಮುಂಗುರುಳನ್ನು ನೇವರಿಸುವುದರಿಂದಲೂ, ಅಧರಪಾನದಿಂದಲೂ, ಸೀರೆಯ ಗಂಟನ್ನು ಸಡಿಲಿಸುವುದರಿಂದಲೂ, ಸ್ತನಗಳ ಗ್ರಹಣದಿಂದಲೂ, ನಖಕ್ಷತಗಳಿಂದಲೂ, ಸರಸೋಕ್ತಿಗಳಿಂದಲೂ ಗೋಪಿಕಾಸ್ತ್ರೀಯರ ಕಾಮವನ್ನು ಕೆರಳಿಸುತ್ತಾ ಶ್ರೀಕೃಷ್ಣನು ಅವರೊಡನೆ ಕ್ರೀಡೆಯಾಡುತ್ತಿದ್ದನು.

ಪರೀಕ್ಷಿತಮಹಾರಾಜ! ಹೀಗೆ ಮಹಾತ್ಮನಾದ ಶ್ರೀಕೃಷ್ಣನ ಗೌರವಕ್ಕೆ ಪಾತ್ರರಾದ ಗೋಪಿಕಾಸ್ತ್ರೀಯರು ಪ್ರಪಂಚದಲ್ಲಿರುವ ಎಲ್ಲ

ಸ್ತ್ರೀಯರಿಗಿಂತಲೂ ತಾವೇ ಶ್ರೇಷ್ಠತಮರೆಂದು ಭಾವಿಸಿಕೊಂಡರು. ಆಗ ಶ್ರೀಕೃಷ್ಣನು ಗೋಪಿಯರ ಸೌಂದರ್ಯಮದವನ್ನೂ ಮತ್ತು ತಾವೇ ಅಧಿಕರೆಂದು ಭಾವಿಸಿ ಗರ್ವಪಡುತ್ತಿರುವುದನ್ನೂ ಗಮನಿಸಿ ಅವರ ಸೌಂದರ್ಯಮದವನ್ನೂ ಮತ್ತು ಗರ್ವವನ್ನೂ ಹೋಗಲಾಡಿಸಿ ಅವರನ್ನು ಅನುಗ್ರಹಿಸುವುದಕ್ಕಾಗಿ ಒಡನೆಯೇ ಮಾಯವಾಗಿಬಿಟ್ಟನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೨೯ನೆಯ ಅಧ್ಯಾಯವು ಮುಗಿಯಿತು.

---

ದಶಮಸ್ಕಂಧ ೩೦ನೆಯ ಅಧ್ಯಾಯ

## ಗೋಪಿಯರ ವಿರಹವೇದನೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಅನ್ತರ್ಹಿತೇ ಭಗವತಿ ಸಹಸೈವ ವ್ರಜಾಙ್ಗನಾಃ ।**
**ಅತಪ್ಯಂಸ್ತಮಚಕ್ಷಾಣಾಃ ಕರಿಣ್ಯ ಇವ ಯೂಥಪಮ್ ॥೧॥**

ಪರೀಕ್ಷಿತ! ಅಷ್ಟು ಬೇಗನೆ ಇದ್ದಕ್ಕಿದ್ದಂತೆಯೇ ಶ್ರೀಕೃಷ್ಣನು ಮಾಯವಾಗಿ ಹೋಗಲು ಪ್ರಿಯತಮನನ್ನು ಕಾಣದಿದ್ದ ಗೋಪಿಕಾ ಸ್ತ್ರೀಯರು–ಸಲಗವನ್ನಗಲಿದ ಹೆಣ್ಣಾನೆಗಳಂತೆ–ವಿರಹಯಾತನೆಯಿಂದ ಪರಿತಪಿಸತೊಡಗಿದರು.

ರಮಾಪತಿಯಾದ ಶ್ರೀಕೃಷ್ಣನ–ಮದೋನ್ಮತ್ತನಾದ ಗಜರಾಜನ ನಡಿಗೆಯಂತಹ ಗಂಭೀರವಾದ ನಡಿಗೆಯಿಂದಲೂ, ಪ್ರೇಮಪೂರಿತವಾದ ಕಿರುನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣಿನ ನೋಟದಿಂದಲೂ ಮನೋಹರವಾದ ಸರಸ-ಸಲ್ಲಾಪಗಳಿಂದಲೂ, ಭಿನ್ನಭಿನ್ನವಾದ ಲೀಲಾ ವಿನೋದಗಳಿಂದಲೂ, ಶೃಂಗಾರರಸಭಾವಭಂಗಿಗಳಿಂದಲೂ ಆಕರ್ಷಿತರಾದ ಗೋಪಿಕಾಸ್ತ್ರೀಯರು ಅವನನ್ನೇ ನಿರಂತರವಾಗಿ ಚಿಂತಿಸುತ್ತಾ ತನ್ಮಯರೇ ಆಗಿಬಿಟ್ಟರು. ತಾವೇ ಕೃಷ್ಣನೆಂದು ಭಾವಿಸಿಕೊಂಡು ಕೃಷ್ಣನಾಡಿದಂತೆಯೇ ಕ್ರೀಡೆಗಳನ್ನಾಡತೊಡಗಿದರು.

ಶ್ರೀಕೃಷ್ಣನ ನಡಿಗೆಯಲ್ಲಿ, ಮಂದಹಾಸದಲ್ಲಿ, ಕಡೆಗಣ್ಣಿನ ನೋಟದಲ್ಲಿ,

ಸರಸ-ಸಲ್ಲಾಪಗಳಲ್ಲಿ ತನ್ಮಯರಾಗಿದ್ದ ಕೃಷ್ಣಪ್ರಿಯತಮೆಯರಾದ ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನು ಮಾಯವಾಗಿ ಹೋದನಂತರ ಕೃಷ್ಣತಾದಾತ್ಮ್ಯದಿಂದ ಕೃಷ್ಣಮಯರೇ ಆಗಿಬಿಟ್ಟರು. ಅವರ ನಡೆ-ನುಡಿಗಳು, ಕಿರುನಗೆ-ಮಂದಹಾಸಗಳು, ಭಾವ-ಭಂಗಿಗಳು, ಸರಸ-ಸಲ್ಲಾಪಗಳು, ಪ್ರೇಮಾಲಾಪ ಗಳು—ಎಲ್ಲವೂ ಕೃಷ್ಣನ ಭಾವ-ಭಂಗಿಗಳಂತೆಯೇ ಆಗಿಬಿಟ್ಟುವು. ಪ್ರತಿಯೊಬ್ಬ ಗೋಪಿಯೂ 'ನಾನೇ ಕೃಷ್ಣ'—'ಮುರಳೀಧರನು ನಾನೇ'—ಎಂದು ಭಾವಿಸಿಕೊಂಡು ಆಟವಾಡತೊಡಗಿದರು. ಎಂತಹ ತನ್ಮಯತೆ! ಋಷಿ ಗಳಿಂದಲೂ ಸಾಧಿಸಲಾಗದ ಮಹಾಸಿದ್ಧಿ ಅದು. ಎಲ್ಲರೂ ಕೃಷ್ಣರೇ ಆಗಿ ಆಟವಾಡಲು ಗೋಪಿಯರನ್ನೇ ಕಾಣದಿದ್ದ ಅವರು ಸ್ವಲ್ಪಹೊತ್ತಾದನಂತರ ತಾವೇ ಗೋಪಿಯರೆಂಬುದನ್ನು ಅರಿತುಕೊಂಡರು. ಗೋಪಿಯರೆಂಬ ಅರಿ




ವುಂಟಾದೊಡನೆಯೇ ಶ್ರೀಕೃಷ್ಣನನ್ನು ಕಾಣದೆ ಅವರಿಗೆ ವಿರಹವೇದನೆಯು ಪ್ರಾರಂಭವಾಯಿತು. ಎಲ್ಲರೂ ಸೇರಿಕೊಂಡು ಶ್ರೀಕೃಷ್ಣನ ಲೀಲಾಪ್ರಸಂಗ ಗಳನ್ನು ಗಟ್ಟಿಯಾಗಿ ಹಾಡತೊಡಗಿದರು. 'ಕೃಷ್ಣ! ಕೃಷ್ಣ! ಮುರಳೀಧರ! ಗೋಪೀಜನಪ್ರಿಯ! ಎಲ್ಲಿರುವೆ? ನಾವು ನಿನ್ನನ್ನು ಕ್ಷಣಕಾಲವಾದರೂ ಬಿಟ್ಟಿರಲಾರೆವು'—ಎಂದು ಕೂಗಿಕೊಂಡು ಹುಚ್ಚರಂತೆ ಅರಣ್ಯದಿಂದ ಅರಣ್ಯಕ್ಕೆ ಧಾವಿಸುತ್ತಿದ್ದರು. ಆಕಾಶದಂತೆ ಹೊರಗೂ ಒಳಗೂ ಎಲ್ಲ ಕಡೆಗಳಲ್ಲಿಯೂ ಇರುವ ಪರಮಾತ್ಮನನ್ನು ಕಾಣದೆ ಹುಡುಕಿ-ಹುಡುಕಿ ದಣಿವಾಗಿ ಅರಣ್ಯದಲ್ಲಿದ್ದ ಪ್ರಾಣಿಗಳನ್ನೆಲ್ಲಾ ಸ್ಥಾವರ-ಜಂಗಮಗಳೆಂಬ

ತಾರತಮ್ಯವಿಲ್ಲದೆ ಒಬ್ಬೊಬ್ಬರನ್ನಾಗಿ ಇನಿಯನ ಬಗೆಗೆ ಪ್ರಶ್ನಿಸತೊಡಗಿದರು.

**ದೃಷ್ಟೋ ವಃ ಕಚ್ಚಿದಶ್ವತ್ಥ ಪ್ಲಕ್ಷ ನ್ಯಗ್ರೋಧ ನೋ ಮನಃ ।**
**ನನ್ದಸೂನುರ್ಗತೋ ಹೃತ್ವಾ ಪ್ರೇಮಹಾಸಾವಲೋಕನೈಃ ॥೫॥**

"ಅರಳೀಮರವೇ! ಬಸರೀಮರವೇ! ಆಲದಮರವೇ! ನಂದ ಗೋಪನ ಮಗನಾದ ನಮ್ಮ ಪ್ರಿಯತಮನು ಪ್ರೇಮಪೂರ್ಣವಾದ ಮಂದಹಾಸವನ್ನೂ, ಕಡೆಗಣ್ಣಿನ ನೋಟವನ್ನೂ ನಮ್ಮ ಮೇಲೆ ಬೀರಿ ನಮ್ಮಲ್ಲಿದ್ದ ಮನಸ್ಸನ್ನು ಕದ್ದುಕೊಂಡು ಹೊರಟುಹೋಗಿಬಿಟ್ಟಿದ್ದಾನೆ. ಅಂತಹ ಕಳ್ಳಕೃಷ್ಣನನ್ನು ನೀವೇನಾದರೂ ನೋಡಿದಿರಾ?"

ಆ ವೃಕ್ಷಗಳು ಉತ್ತರಿಸದಿರಲು ಬೇಸರಗೊಂಡ ಗೋಪಿಯರು ಮುಂದೆ ಹೋಗಿ ಮತ್ತೆ ಕೆಲವು ವೃಕ್ಷಗಳನ್ನು ಪ್ರಶ್ನಿಸಿದರು :

**ಕಚ್ಚಿತ್ಕುರಬಕಾಶೋಕನಾಗಪುನ್ನಾಗಚಮ್ಪಕಾಃ ।**
**ರಾಮಾನುಜೋ ಮಾನಿನೀನಾಮಿತೋ ದರ್ಪಹರಸ್ಮಿತಃ ॥೬॥**

"ಕುರವಕವೃಕ್ಷವೇ! ಅಶೋಕವೃಕ್ಷವೇ! ನಾಗ-ಪುನ್ನಾಗವೃಕ್ಷಗಳೇ! ಚಂಪಕವೃಕ್ಷವೇ! ನೀವಾದರೂ ಹೇಳಿರಿ. ಕೇವಲ ಕಿರುನಗೆಯಿಂದಲೇ ಮಾನಿನಿಯರ ಸೊಕ್ಕನ್ನು ಮುರಿಯುವ, ಬಲರಾಮನ ತಮ್ಮನಾದ ಶ್ರೀಕೃಷ್ಣನನ್ನು ನೀವಾದರೂ ನೋಡಿದಿರಾ? ಅವನೆಲ್ಲಿಗೆ ಹೋದನು?"

ಗೋಪಿಯರ ಪ್ರಶ್ನೆಗೆ ಯಾವ ವೃಕ್ಷಗಳೂ ಉತ್ತರಿಸಲಿಲ್ಲ. ಶ್ರೀಕೃಷ್ಣನಿಗೆ ಅತಿಪ್ರಿಯಳಾದ ತುಳಸಿಯ ಬಳಿಗೆ ಹೋಗಿ ಗೋಪಿಯರು ತುಳಸಿಯನ್ನು ಪ್ರಶ್ನಿಸಿದರು :

**ಕಚ್ಚಿತ್ತುಲಸಿ ಕಲ್ಯಾಣಿ ಗೋವಿನ್ದಚರಣಪ್ರಿಯೇ ।**
**ಸಹ ತ್ವಾಲಿಕುಲೈರ್ಬಿಭ್ರದ್ದೃಷ್ಟಸ್ತೇಽತಿಪ್ರಿಯೋಽಚ್ಯುತಃ ॥೭॥**

"ತುಳಸೀದೇವಿ! ನೀನು ಸಮಸ್ತರಿಗೂ ಕಲ್ಯಾಣವನ್ನುಂಟು ಮಾಡುವೆ. ಗೋವಿಂದನ ಚರಣಾರವಿಂದಗಳನ್ನೇ ನೀನು ಬಹಳವಾಗಿ ಪ್ರೀತಿಸುವೆ. ಈ ಕಾರಣದಿಂದಲೇ ದುಂಬಿಗಳು ಗುಂಪು-ಗುಂಪಾಗಿ ನಿನ್ನನ್ನು ಅನುಸರಿಸಿ ಬರುತ್ತಿದ್ದರೂ ನಮ್ಮ ಇನಿಯನು ನಿನ್ನನ್ನು ಧರಿಸಿಯೇ ಇರುತ್ತಾನೆ.

ಅಂತಹ, ನಿನಗೆ ಅತಿಪ್ರಿಯನೆನಿಸಿದ ಶ್ರೀಕೃಷ್ಣನನ್ನು ನೀನೇನಾದರೂ ಕಂಡೆಯಾ?"

ತುಳಸಿಯು ಶ್ರೀಕೃಷ್ಣನಿಗೆ ಪ್ರಿಯಳಾದವಳೇ ಆದರೂ ಸವತಿ ಮಾತ್ಸರ್ಯದಿಂದ ಶ್ರೀಕೃಷ್ಣನೆಲ್ಲಿರುವನೆಂಬುದನ್ನು ಹೇಳಲಿಲ್ಲವೋ ಏನೋ! ಅಂತೂ ತುಳಸಿಯೂ ಗೋಪಿಯರ ಪ್ರಶ್ನೆಗೆ ಉತ್ತರಿಸಲಿಲ್ಲ.

ಗೋಪಿಯರು 'ಕೃಷ್ಣಾ! ಕೃಷ್ಣಾ!'–ಎಂದು ಗಟ್ಟಿಯಾಗಿ ಕೂಗುತ್ತಲೇ ಮುನ್ನಡೆದರು. ಅಲ್ಲಿ ಸಿಕ್ಕಿದ ಹೂವಿನಗಿಡಗಳನ್ನು ಪ್ರಶ್ನಿಸಿದರು :

**ಮಾಲತ್ಯದರ್ಶಿ ವಃ ಕಚ್ಚಿನ್ಮಲ್ಲಿಕೇ ಜಾತಿ ಯೂಥಿಕೇ ।**
**ಪ್ರೀತಿಂ ವೋ ಜನಯನ್ ಯಾತಃ ಕರಸ್ಪರ್ಶೇನ ಮಾಧವಃ ॥೮॥**

"ಜಾಜಿಯ ಗಿಡವೇ! ಮಲ್ಲಿಗೇಗಿಡವೇ! ಜಾಜಿ-ಸೇವಂತಿಕೆಗಳೇ! ತನ್ನ ಕರಸ್ಪರ್ಶದಿಂದ ನಿಮಗೆ ಆನಂದವನ್ನುಂಟುಮಾಡುತ್ತಾ ಪ್ರಿಯತಮ ನಾದ ಮಾಧವನೇನಾದರೂ ಇತ್ತಕಡೆಯಿಂದ ಹೋದುದನ್ನು ನೀವೇ ನಾದರೂ ಕಂಡಿರಾ?"

ಉತ್ತರವೇನೂ ಬರಲಿಲ್ಲ. 'ಕೃಷ್ಣ! ಆಪದ್ಬಾಂಧವ! ಎಲ್ಲಿರುವೆ?'– ಎಂದು ಕೂಗುತ್ತಾ ಮುಂದೆ ಹೋಗಿ ಕಣ್ಣಿಗೆ ಕಾಣುತ್ತಿದ್ದ ಕಾಣದಿದ್ದ ಎಲ್ಲ ವೃಕ್ಷಗಳನ್ನೂ ಸಂಬೋಧಿಸಿ ಪ್ರಶ್ನಿಸಿದರು :

**ಚೂತಪ್ರಿಯಾಲಪನಸಾನಕೋವಿದಾರ–**
**ಜಮ್ಬ್ವರ್ಕಬಿಲ್ವಬಕುಲಾಮ್ರಕದಮ್ಬನೀಪಾಃ ।**
**ಯೇಽನ್ಯೇ ಪರಾರ್ಥಭವಕಾ ಯಮುನೋಪಕೂಲಾಃ**
**ಶಂಸನ್ತು ಕೃಷ್ಣಪದವೀಂ ರಹಿತಾತ್ಮನಾಂ ನಃ ॥೯॥**

"ಪರೋಪಕಾರಕ್ಕಾಗಿಯೇ ಯಮುನಾನದಿಯ ತೀರದಲ್ಲಿ ಹುಟ್ಟಿರುವ ಮಾವು, ಪ್ರಿಯಾಳ, ಹಲಸು, ಹೊನ್ನೆ, ಕೆಂಚವಾಳ, ನೇರಳೇ, ಎಕ್ಕ, ಬಿಲ್ವ, ವಕುಳ, ಹುಳಿಮಾವು, ಕದಂಬ, ನೀರಂಜಿ–ಇವೇ ಮುಂತಾದ ವೃಕ್ಷಗಳ ಅಧಿದೇವತೆಗಳಿರಾ! ನಮ್ಮ ಪ್ರಿಯತಮನನ್ನು ಕಾಣದೆ ಬುದ್ಧಿಶೂನ್ಯರಾಗಿರುವ ನಮಗೆ ಅವನು ಹೋದ ಮಾರ್ಗವನ್ನು ದಯಮಾಡಿ ತಿಳಿಸಿರಿ."

ಗಿಡ-ಮರ-ಬಳ್ಳಿಗಳೂ ಯಾವ ಉತ್ತರವನ್ನೂ ಕೊಡದಿರಲು ಗೋಪಿಯರು ಭೂದೇವಿಯನ್ನೇ ಪ್ರಶ್ನಿಸಿದರು :

**ಕಿಂ ತೇ ಕೃತಂ ಕ್ಷಿತಿ ತಪೋ ಬತ ಕೇಶವಾಙ್ಘ್ರಿ-**
**ಸ್ಪರ್ಶೋತ್ಸವೋತ್ಪುಲಕಿತಾಙ್ಗರುಹೈರ್ವಿಭಾಸಿ ।**
**ಅಪ್ಯಙ್ಘ್ರಿಸಮ್ಭವ ಉರುಕ್ರಮವಿಕ್ರಮಾದ್ವಾ**
**ಆಹೋ ವರಾಹವಪುಷಃ ಪರಿರಮ್ಭಣೇನ ॥೧೦॥**

"ಭಗವಂತನ ಪ್ರೇಯಸಿಯಾದ ಭೂದೇವಿಯೇ! ನೀನು ಎಂತಹ ತಪಸ್ಸನ್ನು ಮಾಡಿರುವೆಯೆಂಬುದನ್ನಾದರೂ ಹೇಳು. ಶ್ರೀಕೃಷ್ಣನ ಚರಣ ಕಮಲಗಳ ಸ್ಪರ್ಶವನ್ನು ಅನವರತವಾಗಿ ಮಾಡುತ್ತಾ ನೀನು ಆನಂದ ತುಂದಿಲಳಾಗಿ ಗರಿಕೆಹುಲ್ಲುಗಳ ಮೂಲಕವಾಗಿ ನಿನಗಾಗಿರುವ ರೋಮಾಂಚನವನ್ನು ವ್ಯಕ್ತಪಡಿಸುತ್ತಿರುವೆ. ಆನಂದಪುಳಕಿತವಾದ ಈ ನಿನ್ನ ರೋಮಾಂಚನವು ನಾವು ಊಹಿಸಿರುವಂತೆ ಶ್ರೀಕೃಷ್ಣನ ಪಾದಗಳ ಸ್ಪರ್ಶ ದಿಂದ ಉಂಟಾದುದೇ? ವಾಮನಾವತಾರದಲ್ಲಿ ತ್ರಿವಿಕ್ರಮನಾಗಿ ನಿನ್ನನ್ನು ಅಳೆದುದರಿಂದ ಉಂಟಾದುದೇ? ಅಥವಾ ವರಾಹಾವತಾರದಲ್ಲಿ ಭಗವಂತನ ಅಂಗಸಂಗದಿಂದ ಉಂಟಾದುದೇ? ಅದು ಹೇಗಾದರೂ ಇರಲಿ. ನಮ್ಮ ಪ್ರಿಯತಮನಾದ ಶ್ರೀಕೃಷ್ಣನ ಪಾದಸ್ಪರ್ಶವು ಅನವರತವಾಗಿ ನಿನಗೆ ಲಭಿಸುತ್ತಲೇ ಇರುತ್ತದೆ. ಆದುದರಿಂದ ಅವನು ಎಲ್ಲಿರುವನೆಂಬ ವಿಷಯವು ನಿನಗೆ ತಿಳಿದಿರಲೇಬೇಕು. ದಯಮಾಡಿ ನಮ್ಮ ಇನಿಯನು ಎಲ್ಲಿರುವನೆಂಬುದನ್ನು ತಿಳಿಸಿಕೊಟ್ಟು ನಮ್ಮನ್ನು ಕಾಪಾಡು."

ಭೂದೇವಿಯೂ ಉತ್ತರಿಸಲಿಲ್ಲ. ಅಲ್ಲಿಯೇ ಓಡಿಹೋಗುತ್ತಿದ್ದ ಜಿಂಕೆಯನ್ನು ಗೋಪಿಯರು ಪ್ರಶ್ನಿಸಿದರು :

**ಅಪ್ಯೇಣಪತ್ನ್ಯುಪಗತಃ ಪ್ರಿಯಯೇಹ ಗಾತ್ರೈ-**
**ಸ್ತನ್ವನ್ ದೃಶಾಂ ಸಖಿ ಸುನಿರ್ವೃತಿಮಚ್ಯುತೋ ವಃ ।**
**ಕಾನ್ತಾಙ್ಗಸಙ್ಗಕುಚಕುಙ್ಕುಮರಞ್ಜಿತಾಯಾಃ**
**ಕುನ್ದಸ್ರಜಃ ಕುಲಪತೇರಿಹ ವಾತಿ ಗನ್ಧಃ ॥೧೧॥**

"ಗೆಳತಿಯಾದ ಹೆಣ್ಣುಹುಲ್ಲೆಯೇ! ನಮ್ಮ ಪ್ರಿಯತಮನು ತನ್ನ ಬೇರೆಯ ಪ್ರಿಯತಮೆಯೊಡನೆ ಕೂಡಿಕೊಂಡು ತನ್ನ ಸುಂದರವಾದ ಅಂಗಾಂಗ

ಗಳಿಂದ ನಿಮ್ಮ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಾ ಇತ್ತಕಡೆ ಏನಾದರೂ ಬಂದನೇ? ಸಂಭ್ರಮದ ಆಲಿಂಗನದಿಂದ ಪ್ರೇಯಸಿಯ ಕುಚಗಳಲ್ಲಿದ್ದ ಕುಂಕುಮಕೇಸರಿಯಿಂದ ಕೆಂಪೇರಿದ ಗೋಕುಲಪತಿಯಾದ ಶ್ರೀಕೃಷ್ಣನ ವಕ್ಷಃಸ್ಥಳದಲ್ಲಿ ಶೋಭಿಸುವ ಮಲ್ಲಿಗೇಮಾಲೆಯ ಸುಗಂಧವು ಸರ್ವತ್ರ ವ್ಯಾಪಿಸಿರುವುದರಿಂದ ನಮ್ಮ ಪ್ರಾಣಕಾಂತನು ಇಲ್ಲಿಯೇ ಎಲ್ಲೋ ಇರಬೇಕು. ಸಖಿಯೇ! ಎಲ್ಲಿರುವನೆಂಬುದನ್ನು ಹೇಳು."

ಜಿಂಕೆಯೂ ಉತ್ತರಿಸಲಿಲ್ಲ. ಗೋಪಿಯರು ಪುನಃ ವೃಕ್ಷಗಳನ್ನೇ ಬೇಡಿಕೊಳ್ಳುವರು :

**ಬಾಹುಂ ಪ್ರಿಯಾಂಸ ಉಪಧಾಯ ಗೃಹೀತಪದ್ಮೋ**
**ರಾಮಾನುಜಸ್ತುಲಸಿಕಾಲಿಕುಲೈರ್ಮದಾನ್ಧೈಃ ।**
**ಅನ್ವೀಯಮಾನ ಇಹ ವಸ್ತರವಃ ಪ್ರಣಾಮಂ**
**ಕಿಂ ವಾಭಿನನ್ದತಿ ಚರನ್ಪ್ರಣಯಾವಲೋಕೈಃ ॥೧೨॥**

"ವೃಕ್ಷಾಧಿದೇವತೆಗಳೇ! ನಮ್ಮ ಪ್ರಿಯತಮನಾದ ರಾಮಾನುಜನು ತುಳಸಿಯ ಮಾಲೆಯನ್ನು ಧರಿಸಿದ್ದಾನೆ. ತುಳಸೀಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳ ಗುಂಪು ಅವನನ್ನು ಅನುಸರಿಸಿಯೇ ಹೋಗುತ್ತಿರುತ್ತದೆ. ನಮ್ಮ ಪ್ರಾಣಕಾಂತನು ತನ್ನ ಒಂದು ತೋಳನ್ನು ಪ್ರೇಯಸಿಯ ಹೆಗಲಮೇಲಿಟ್ಟು ಮತ್ತೊಂದು ಕೈಯಿಂದ ಕಮಲಪುಷ್ಪದ ದಂಟನ್ನು ಹಿಡಿದು ತಿರುಗಿಸುತ್ತಿರುತ್ತಾನೆ. ಹಾಗಿರುವ ನಮ್ಮ ಪ್ರಿಯಸಖನು ಇತ್ತಕಡೆ ಬಂದನೇ? ಬಂದಿರಬೇಕೆಂದು ಭಾವಿಸುತ್ತೇವೆ. ಅವನಿಗೆ ಪ್ರಣಾಮಮಾಡಲೆಂದೇ ನೀವು ಬಗ್ಗಿರುವಂತೆ ತೋರುತ್ತದೆ. ಪ್ರೇಮಪೂರ್ವಕವಾದ ಕುಡಿನೋಟದಿಂದ ಅವನೂ ನಿಮ್ಮನ್ನು ಪ್ರತಿಯಾಗಿ ಅಭಿನಂದಿಸಿರಬೇಕು. ಹಾಗೇನಾದರೂ ನಮ್ಮ ಪ್ರಿಯಸಖನು ಇಲ್ಲಿಗೆ ಆಗಮಿಸಿದ್ದರೆ ದಯಮಾಡಿ ತಿಳಿಸಿರಿ."

ವೃಕ್ಷಗಳು ಮಾತನಾಡಲಿಲ್ಲ. ವೃಕ್ಷಗಳನ್ನಾಲಿಂಗಿಸಿಕೊಂಡಿದ್ದ ಲತೆಗಳನ್ನು ನೋಡಿ ಗೋಪಿಯೊಬ್ಬಳು ಹೇಳಿದಳು :

**ಪೃಚ್ಛತೇಮಾ ಲತಾ ಬಾಹೂನಪ್ಯಾಶ್ಲಿಷ್ಟಾ ವನಸ್ಪತೇಃ ।**
**ನೂನಂ ತತ್ಕರಜಸ್ಪೃಷ್ಟಾ ಬಿಭ್ರತ್ಯುತ್ಪುಲಕಾನ್ಯಹೋ ॥೧೩॥**

"ಸಖಿಯರೇ! ಬೇರೆ ಯಾರನ್ನೂ ಕೇಳಬೇಡಿ. ಈ ಲತೆಗಳನ್ನು ಕೇಳಿರಿ. ಏಕೆಂದರೆ : ಇವುಗಳು ತಮ್ಮ ಪತಿಯಾದ ವೃಕ್ಷದ ರೆಂಬೆಗಳೆಂಬ ತೋಳುಗಳಿಂದ ಆಲಿಂಗಿಸಲ್ಪಡುತ್ತಿದ್ದರೂ ನಮ್ಮ ಪ್ರಿಯತಮನಾದ ಶ್ರೀಕೃಷ್ಣನ ನಖಕ್ಷತದಿಂದಲೇ ರೋಮಾಂಚಿತವಾಗಿವೆ. ಆದುದರಿಂದ ತಮ್ಮನ್ನು ಉಗುರುಗಳಿಂದ ಜಿಗುಟಿದ ಶ್ರೀಕೃಷ್ಣನೆಲ್ಲೆಂದು ಲತೆಗಳನ್ನು ಕೇಳಿರಿ."

ಪರೀಕ್ಷಿತಮಹಾರಾಜ! ಹೀಗೆ ಗೋಪಿಯರು ಹುಚ್ಚಿಯರಂತೆ ಮಾತನಾಡುತ್ತಾ ಕಾತುರತೆಯಿಂದ ಶ್ರೀಕೃಷ್ಣನನ್ನು ಎಲ್ಲೆಲ್ಲೋ ಹುಡುಕುತ್ತಿದ್ದರು. ಹಾಗೆ ಹುಡುಕುತ್ತಿದ್ದ ಗೋಪಿಯರಿಗೆ ಪುನಃ ತನ್ಮಯತೆಯುಂಟಾಯಿತು. ತಾವೇ ಕೃಷ್ಣರೆಂದು ಭಾವಿಸಿ ಅವನಾಡಿದ್ದ ಲೀಲಾಪ್ರಸಂಗಗಳನ್ನೇ ತಾವೂ ಅನುಕರಣೆಮಾಡತೊಡಗಿದರು. ಒಬ್ಬಳು ಕೃಷ್ಣನಾದರೆ ಮತ್ತೊಬ್ಬಳು ಪೂತನೆಯಾಗುವಳು. ಕೃಷ್ಣಭಾವವನ್ನು ಹೊಂದಿದ್ದ ಗೋಪಿಯು ಪೂತನೆಯ ಭಾವವನ್ನು ಹೊಂದಿದ್ದ ಗೋಪಿಯ ಸ್ತನ್ಯವನ್ನು ಪಾನಮಾಡುವಳು. ಮತ್ತೊಂದು ಪ್ರಸಂಗದಲ್ಲಿ ಹಸುಳೆಯ ಭಾವವನ್ನು ಹೊಂದಿದ್ದ ಗೋಪಿಯು ರೋದನಮಾಡುತ್ತಾ ಶಕಟಾಸುರನ ಭಾವವನ್ನು ಹೊಂದಿದ್ದ ಗೋಪಿಯನ್ನು ಕಾಲಿನಿಂದ ಒದೆಯುವಳು. ಬಾಲಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯನ್ನು, ದೈತ್ಯನಾದ ತೃಣಾವರ್ತನ ಭಾವವನ್ನು ಹೊಂದಿದ್ದ ಗೋಪಿಯು ಅಪಹರಿಸಿಕೊಂಡು ಹೋಗುವಳು. ಇಬ್ಬರು ಗೋಪಿಯರು ಬಲರಾಮ-ಕೃಷ್ಣರಾಗಿ ಉಳಿದವರು ಗೋಪಬಾಲಕರಾಗಿ ಕೆಲವು ವೇಳೆ ಆಟವಾಡುವರು. ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯು ವತ್ಸಾಸುರನ ಭಾವವನ್ನು ಹೊಂದಿದ್ದ ಗೋಪಿಯನ್ನು ಪ್ರಹರಿಸುವಳು. ಹಾಗೆಯೇ ಶ್ರೀಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯು ಬಕಾಸುರನ ಭಾವವನ್ನು ಹೊಂದಿದ್ದ ಗೋಪಿ ಯನ್ನು ಸೀಳಹೋಗುವಳು. ಹಿಂದೆ ಶ್ರೀಕೃಷ್ಣನು ಮಾಡುತ್ತಿದ್ದಂತೆಯೇ ಒಬ್ಬ ಗೋಪಿಯು ಶ್ರೀಕೃಷ್ಣನ ಭಾವವನ್ನು ಹೊಂದಿ ಕೊಳಲು ನುಡಿಸುತ್ತಾ ದೂರದಲ್ಲಿದ್ದ ಹಸುಗಳನ್ನೂ ಕರುಗಳನ್ನೂ ಆಹ್ವಾನಿಸುವಳು. ಉಳಿದ ಗೋಪಿಯರು ಗೋಪಾಲರ ಭಾವವನ್ನು ತಳೆದು 'ಭಲೇ ಕೃಷ್ಣ! ಭಲೇ'– ಎಂದು ಪ್ರಶಂಸೆಮಾಡುವರು. ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನ

ಭಾವವನ್ನು ಹೊಂದಿದ್ದ ಗೋಪಿಯು ಮತ್ತೊಬ್ಬ ಗೋಪಿಯ ಹೆಗಲ ಮೇಲೆ ತೋಳನ್ನು ಹಾಕಿಕೊಂಡು–"ಸಖಿಯರೇ! ನಾನೇ ಕೃಷ್ಣನು. ಮನೋಹರ ವಾದ ಈ ನಡಿಗೆಯನ್ನಾದರೂ ನೋಡಿರಿ"–ಎನ್ನುವಳು. ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯು ಇತರ ಗೋಪಿಯರನ್ನು ವ್ರಜವಾಸಿಗಳೆಂದು ಭಾವಿಸಿ ಹಿಂದೆ ಶ್ರೀಕೃಷ್ಣನು ಹೇಳಿದ್ದಂತೆ–'ವ್ರಜವಾಸಿಗಳೇ! ನೀವು ಮಳೆಗೂ ಗಾಳಿಗೂ ಭಯಪಡಬೇಡಿರಿ. ಅದರ ರಕ್ಷಣೆಯ ಉಪಾಯವನ್ನು ನಾನು ಯೋಚಿಸಿದ್ದೇನೆ'–ಎಂದು ಹೇಳುತ್ತಾ ಶ್ರೀಕೃಷ್ಣನ ಗೋವರ್ಧನೋದ್ಧಾರವನ್ನು ಅನುಕರಣೆಮಾಡುತ್ತಾ ತನ್ನ ಮೇಲುಹೊದ್ದಿಕೆಯನ್ನೇ ಎತ್ತಿ ಹಿಡಿಯುವಳು. ಮತ್ತೊಂದು ಪ್ರಸಂಗದಲ್ಲಿ ಒಬ್ಬ ಗೋಪಿಯು ಕಾಳಿಯನಾಗವಾದಳು. ಮತ್ತೊಬ್ಬ ಗೋಪಿಯು ಶ್ರೀಕೃಷ್ಣಭಾವವನ್ನು ಹೊಂದಿ ಕಾಳಿಯನಾಗನ ಭಾವವನ್ನು ಹೊಂದಿದ್ದ ಗೋಪಿಯ ತಲೆಯನ್ನು ಮೆಟ್ಟುತ್ತಾ ಹೇಳಿದಳು :

"ದುಷ್ಟಸರ್ಪವೇ! ನೀನು ಇಲ್ಲಿಂದ ಹೊರಟುಹೋಗು. ನಾನು ದುಷ್ಟದಮನಕ್ಕಾಗಿಯೇ ಅವತರಿಸಿರುವೆನು."

ಮತ್ತೊಂದು ಪ್ರಸಂಗದಲ್ಲಿ ಒಬ್ಬ ಗೋಪಿಯು ತನ್ನನ್ನು ಶ್ರೀಕೃಷ್ಣ ನನ್ನಾಗಿ ಭಾವಿಸಿಕೊಂಡು ಉಳಿದ ಗೋಪಿಯರನ್ನು ಗೋಪಾಲರನ್ನಾಗಿಯೂ ಗೋವುಗಳನ್ನಾಗಿಯೂ ಭಾವಿಸಿ ಹೇಳುವಳು : "ಗೋಪಾಲಕರೇ! ಈ ಅರಣ್ಯದಲ್ಲಿ ಭಯಂಕರವಾದ ಕಾಡುಗಿಚ್ಚು ನಮ್ಮನ್ನು ಎಲ್ಲ ಕಡೆಗಳಿಂದಲೂ ಆವರಿಸಿಕೊಂಡುಬಿಟ್ಟಿದೆ. ನೀವೆಲ್ಲರೂ ಬೇಗನೆ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ. ಅನಾಯಾಸವಾಗಿ ನಿಮ್ಮೆಲ್ಲರನ್ನೂ ನಾನು ರಕ್ಷಿಸುತ್ತೇನೆ."

ಮತ್ತೊಂದು ಪ್ರಸಂಗದಲ್ಲಿ ಒಬ್ಬ ಗೋಪಿಯು ಯಶೋದೆಯ ಭಾವವನ್ನೂ ಮತ್ತೊಬ್ಬ ಗೋಪಿಯು ಶ್ರೀಕೃಷ್ಣನ ಭಾವವನ್ನೂ ಹೊಂದಿದರು. ಯಶೋದೆಯಾಗಿದ್ದ ಗೋಪಿಯು ಶ್ರೀಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯನ್ನು ಹೂವಿನ ಹಾರದಿಂದ ಒರಳುಕಲ್ಲಿಗೆ ಬಿಗಿದುಬಿಟ್ಟಳು. ಕೃಷ್ಣನ ಭಾವವನ್ನು ಹೊಂದಿದ್ದ ಗೋಪಿಯು ಮುಖವನ್ನು ಮುಚ್ಚಿಕೊಂಡು ಶ್ರೀಕೃಷ್ಣನಂತೆಯೇ ಭಯವನ್ನು ವ್ಯಕ್ತಪಡಿಸುವಳು. ಪರೀಕ್ಷಿತ ಮಹಾರಾಜ! ಹೀಗೆ ಗೋಪಿಯರು ನಾನಾಭಾವಗಳನ್ನು ಹೊಂದಿ

ಶ್ರೀಕೃಷ್ಣನ ಲೀಲಾವಿನೋದಗಳನ್ನು ಅನುಕರಿಸಿದನಂತರ ಪುನಃ ಶ್ರೀಕೃಷ್ಣ ನನ್ನು ಹುಡುಕಲು ಪ್ರಾರಂಭಿಸಿದರು. ಪುನಃ ಮರ-ಗಿಡ-ಬಳ್ಳಿಗಳನ್ನು ಕುರಿತು–'ಕಂಡಿರಾ! ನಮ್ಮ ಪ್ರಿಯಕೃಷ್ಣನನ್ನು?'–ಎಂದು ಪ್ರಶ್ನಿಸತೊಡಗಿದರು. 'ಕೃಷ್ಣ! ಕೃಷ್ಣ! ಪ್ರಿಯತಮನೇ! ಎಲ್ಲಿರುವೆ?'–ಎಂದು ಕೂಗುತ್ತಾ ಅಲೆದಾಡುತ್ತಿದ್ದಾಗ ಒಂದೆಡೆಯಲ್ಲಿ ಭಗವಂತನ ಚರಣಕಮಲಗಳ ಚಿಹ್ನೆಯನ್ನು ಕಂಡು ಪರಸ್ಪರವಾಗಿ ಮಾತನಾಡಿಕೊಂಡರು :

"ಸಖಿಯರೇ! ಹೆಜ್ಜೆಗಳ ಈ ಗುರುತು ನಿಶ್ಚಯವಾಗಿಯೂ ನಂದಕುಮಾರನಾದ ಶ್ಯಾಮಸುಂದರನದೇ ಆಗಿದೆ. ಇದರಲ್ಲಿ ಸಂಶಯವೇ ಇಲ್ಲ. ಇದೋ ಇಲ್ಲಿ ನೋಡಿರಿ. ಈ ಹೆಜ್ಜೆಯ ಗುರುತುಗಳಲ್ಲಿ ಧ್ವಜ, ಕಮಲ, ವಜ್ರ, ಅಂಕುಶ ಇವೇ ಮೊದಲಾದ ಚಿಹ್ನೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಈ ಹೆಜ್ಜೆಯ ಗುರುತನ್ನೇ ಹಿಡಿದು ನಾವು ಮುಂದೆ ಸಾಗೋಣ. ನಮ್ಮ ಇನಿಯನು ಸಿಕ್ಕಿಯೇ ಸಿಕ್ಕುತ್ತಾನೆ"–ಎಂದು ಪರಸ್ಪರವಾಗಿ ಮಾತನಾಡಿಕೊಂಡು ಆ ಹೆಜ್ಜೆಗಳ ಗುರುತನ್ನೇ ಅನುಸರಿಸಿ ಗೋಪಿಯರು ಹೊರಟರು. ಹಾಗೆಯೇ ಹುಡುಕಿಕೊಂಡು ಮುಂದೆ ಹೋಗುತ್ತಿದ್ದಾಗ ಧ್ವಜ-ಕಮಲಗಳ ಗುರುತಿದ್ದ ಹೆಜ್ಜೆಗಳ ಜೊತೆಯಲ್ಲಿ ಆ ಗುರುತುಗಳಿಲ್ಲದ ಯುವತಿಯೊಬ್ಬಳ ಹೆಜ್ಜೆಯ ಗುರುತುಗಳೂ ಕಾಣತೊಡಗಿದುವು. ಅದನ್ನು ಕಾಣುತ್ತಲೇ ಗೋಪಿಯರಿಗೆ ಬಹಳ ದುಃಖವಾಯಿತು. ಪರಸ್ಪರವಾಗಿ ಮಾತನಾಡಿಕೊಂಡರು :

"ಸಖಿಯರೇ! ಇಲ್ಲಿ ನೋಡಿರಿ. ನಮ್ಮ ಪ್ರಾಣಪ್ರಿಯನಾದ ಶ್ರೀಕೃಷ್ಣನ ಹೆಗಲಮೇಲೆ ಕೈಯಿಟ್ಟುಕೊಂಡು–ಸಲಗದೊಡನೆ ಹೋಗುವ ಹೆಣ್ಣಾನೆ ಯಂತೆ–ನಮ್ಮ ಇನಿಯನ ಜೊತೆಯಲ್ಲಿ ಹೋಗಿರುವವಳೊಬ್ಬಳ ಪಾದಗಳ ಚಿಹ್ನೆಯು ಶ್ರೀಕೃಷ್ಣನ ಪಾದಗಳ ಚಿಹ್ನೆಗಳೊಡನೆ ಸ್ಪಷ್ಟವಾಗಿ ಕಾಣುತ್ತಿದೆ. ಇದು ಯಾರದ್ದಾಗಿರಬಹುದು? ಗೆಳತಿಯರೇ! ನಿಶ್ಚಯವಾಗಿಯೂ ಸರ್ವಶಕ್ತನಾದ, ಸರ್ವವ್ಯಾಪಿಯಾದ, ಸಮಸ್ತರಿಗೂ ಈಶ್ವರನಾದ ನಮ್ಮ ಪ್ರಾಣಪ್ರಿಯನಾದ ಶ್ರೀಕೃಷ್ಣನು ಇವಳಿಂದ ಚೆನ್ನಾಗಿ ಆರಾಧಿಸಲ್ಪಟ್ಟಿರ ಬಹುದು.* ಆದುದರಿಂದಲೇ ಶ್ಯಾಮಸುಂದರನು ನಮ್ಮೆಲ್ಲರನ್ನೂ ಬಿಟ್ಟು

* ಇವಳೇ ರಾಧಾದೇವಿಯೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಅವಳೊಡನೆ ರಮಿಸಲು ಏಕಾಂತವಾದ ಸ್ಥಳಕ್ಕೆ ಅವಳನ್ನು ಕರೆದುಕೊಂಡು ಹೋಗಿದ್ದಾನೆ. ಸಖಿಯರೇ! ಯಾವನ ಚರಣಾರವಿಂದಗಳ ಧೂಳಿಯನ್ನು ಬ್ರಹ್ಮ-ರುದ್ರ-ಲಕ್ಷ್ಮಿಯೇ ಮೊದಲಾದ ದೇವತೆಗಳೂ ಪಾಪಪರಿಹಾರಕ್ಕಾಗಿ ತಲೆಯಲ್ಲಿ ಧರಿಸುವರೋ ಅಂತಹ ಗೋವಿಂದನ ಪಾದಧೂಳಿಗಳು ಪರಮಧನ್ಯವಾದುವುಗಳೇ ಸರಿ."

ಮತ್ತೊಬ್ಬಳು ಹೇಳುತ್ತಾಳೆ :

"ಗೋಪಿಯರೇ! ಗೋಪಿಯರೆಲ್ಲರಿಗೂ ಸೇರಬೇಕಾಗಿದ್ದ ನಮ್ಮ ಇನಿಯನ ಅಧರಾಮೃತವನ್ನು ಅಪಹರಿಸಿ ಒಬ್ಬಳೇ ಒಬ್ಬಳು ಪಾನ ಮಾಡುತ್ತಿದ್ದಾಳೆ. ಅಂತಹವಳ ಈ ಪಾದಚಿಹ್ನೆಗಳನ್ನು ನೋಡುತ್ತಲೇ ನಮ್ಮ ಮನಸ್ಸು ಬಹಳವಾಗಿ ತಳಮಳಿಸುತ್ತಿದೆಯಲ್ಲವೇ?"

ಮತ್ತೊಬ್ಬಳು ಹೇಳುತ್ತಾಳೆ :

"ಸಂಗಾತಿಗಳೇ! ಇತ್ತ ಗಮನಿಸಿರಿ. ಇಲ್ಲಿಂದ ಮುಂದಕ್ಕೆ ಈ ಹುಲ್ಲು ಬೆಳೆದಿರುವೆಡೆಗಳಲ್ಲಿ ನಮ್ಮ ಇನಿಯನ ಪ್ರೇಯಸಿಯ ಹೆಜ್ಜೆಗಳು ಕಾಣುತ್ತಿಲ್ಲ. ಬಹುಶಃ ನಮ್ಮ ಪ್ರಾಣಕಾಂತನು ತನ್ನ ನೂತನ ಪ್ರೇಯಸಿಯ ಕೋಮಲವಾದ ಕಾಲುಗಳಿಗೆ ಹುಲ್ಲಿನ ಕೂಳೆಗಳಿಂದ ನೋವುಂಟಾಗುವುದೆಂದು ಭಾವಿಸಿ ಹೆಗಲಮೇಲೆ ಎತ್ತಿಕೊಂಡೇ ಹೋಗಿರಬಹುದು."

ಮತ್ತೊಬ್ಬಳು ಹೇಳುತ್ತಾಳೆ :

"ಗೆಳತಿ! ನೀನು ಹೇಳಿದ್ದು ನಿಜ. ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನ ಹೆಜ್ಜೆಯ ಗುರುತುಗಳು ಇಲ್ಲಿ ಬಹಳವಾಗಿ ಊರಿರುವಂತೆ ಕಾಣುತ್ತಿವೆ. ಕಾಮುಕನಾದ ಶ್ರೀಕೃಷ್ಣನು ವಧುವಿನ ಭಾರದಿಂದ ಆಕ್ರಾಂತನಾಗಿ ಹೆಜ್ಜೆಯಿಡುತ್ತಿದ್ದುದರಿಂದಲೇ ಆ ಹೆಜ್ಜೆಯ ಗುರುತುಗಳು ಆಳವಾಗಿ ನೆಲದಮೇಲೆ ಬಿದ್ದಿವೆ."

ಮತ್ತೊಬ್ಬಳು ಹೇಳುತ್ತಾಳೆ :

"ಗೆಳತಿಯರೇ! ಇಲ್ಲಿ ನೋಡಿರಿ. ಇಲ್ಲಿಂದ ಮುಂದಕ್ಕೆ ನಮ್ಮ ಪ್ರಾಣಕಾಂತನ ದಟ್ಟವಾದ ಹೆಜ್ಜೆಯ ಗುರುತು ಕಾಣಿಸುತ್ತಿಲ್ಲ. ಆದುದರಿಂದ ಅವನು ತನ್ನ ಪ್ರೇಯಸಿಗೆ ಹೂವುಗಳನ್ನು ಬಿಡಿಸಿಕೊಡಲು ಇಲ್ಲಿ ಅವಳನ್ನು ಹೆಗಲಮೇಲಿಂದ ಇಳಿಸಿರಬಹುದು."

ಮತ್ತೊಬ್ಬಳು ಹೇಳುತ್ತಾಳೆ :

"ಗೆಳತಿಯರೇ! ಇತ್ತ ಈ ಹೂಗಿಡದ ಬಳಿಗೆ ಬನ್ನಿರಿ. ಇದೋ ಇಲ್ಲಿ ನೋಡಿರಿ. ಈ ಹೂಗಿಡದ ಕೆಳಗೆ ನಮ್ಮ ಪ್ರಾಣಕಾಂತನ ತುದಿಗಾಲುಗಳ ಚಿಹ್ನೆಗಳು ಮಾತ್ರ ಕಾಣಿಸುತ್ತಿವೆ. ಹೆಜ್ಜೆಗಳ ಗುರುತು ಪೂರ್ಣವಾಗಿ ಕಾಣಿಸುತ್ತಿಲ್ಲ. ಬಹುಶಃ ನಮ್ಮ ಪ್ರಾಣಪ್ರಿಯನು ಗಿಡದ ತುದಿಯಲ್ಲಿರುವ ಹೂವುಗಳನ್ನು ಮೆಟ್ಟಂಗಾಲಿನ ಮೇಲೆ ನಿಂತು ಎಟುಕಿಸಿಕೊಂಡು ಅವು ಗಳನ್ನು ಬಿಡಿಸಿ ತನ್ನ ಇನಿಯಳಿಗೆ ಕೊಟ್ಟಿರಬಹುದು."

"ಗೆಳತಿಯರೇ! ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನು ತನ್ನ ಪ್ರೇಯಸಿಯೊಡನೆ ಕುಳಿತಿರುವ ಗುರುತುಗಳು ಕಾಣುತ್ತಿವೆ. ಬಹುಶಃ ಕಾಮುಕನಾದ ಶ್ರೀಕೃಷ್ಣನು ಇಲ್ಲಿಯೇ ಕುಳಿತು ಕಾಮಿನಿಯಾದ ತನ್ನ ಪ್ರೇಯ ಸಿಯ ತಲೆಯನ್ನು ಬಾಚಿ ಹೆರಳನ್ನು ಹಾಕಿ ಹೂವನ್ನು ಮುಡಿಸಿರಬೇಕು."

ಗೋಪಿಕಾಸ್ತ್ರೀಯರ ಊಹೆಯು ದಿಟವಾಗಿದ್ದಿತು. ಪರೀಕ್ಷಿತಮಹಾ ರಾಜ! ಆತ್ಮತೃಪ್ತನೂ, ಆತ್ಮಾರಾಮನೂ, ಅಖಂಡನೂ ಆದ ಶ್ರೀಕೃಷ್ಣನಲ್ಲಿ ಕಾಮದ ಕಲ್ಪನೆಯಾದರೂ ಹೇಗಿದ್ದೀತು? ಆದರೂ ಕಾಮಿಗಳ ದೈನ್ಯವನ್ನೂ ಮತ್ತು ಸ್ತ್ರೀಯರ ದುಃಸ್ವಭಾವವನ್ನೂ ಪ್ರಕಟಿಸುವ ಸಲುವಾಗಿ ಶ್ರೀಕೃಷ್ಣನು ಬೇರೊಬ್ಬ ಗೋಪಿಯೊಡನೆ ಪ್ರತ್ಯೇಕವಾಗಿ ಕ್ರೀಡಿಸುತ್ತಿದ್ದನು.

ಹೀಗೆ ಶ್ರೀಕೃಷ್ಣನು ಅಹಂಕಾರಭಾವದಿಂದಿದ್ದ ಎಲ್ಲ ಗೋಪಿಯರನ್ನೂ ಪರಿತ್ಯಜಿಸಿ ಒಬ್ಬಳೇ ಗೋಪಿಯನ್ನು ಕರೆದುಕೊಂಡು ಏಕಾಂತಸ್ಥಳಕ್ಕೆ ಹೋಗಲು, ಉಳಿದ ಗೋಪಿಯರು ಶ್ರೀಕೃಷ್ಣನ ಪಾದದ ಚಿಹ್ನೆಗಳನ್ನೇ ಅನುಸರಿಸಿ ಹೋಗುತ್ತಿದ್ದರೂ ಎಲ್ಲಿಯೂ ಅವನನ್ನು ಕಾಣದೆ ಮತಿಗೆಟ್ಟವರಾಗಿ 'ಕೃಷ್ಣಾ! ಕೃಷ್ಣಾ!'–ಎಂದು ಕೂಗಿಕೊಂಡು ಕಾಡಿನಲ್ಲೆಲ್ಲಾ ಅಲೆಯುತ್ತಲೇ ಇದ್ದರು.

ಶ್ರೀಕೃಷ್ಣನು ಎಲ್ಲ ಗೋಪಿಯರನ್ನೂ ಪರಿತ್ಯಜಿಸಿ ತನ್ನೊಬ್ಬಳನ್ನೇ ಕ್ರೀಡೆಯಾಡಲು ಏಕಾಂತಸ್ಥಳಕ್ಕೆ ಕರೆದೊಯ್ದನಾದ ಕಾರಣ ಆಕೆಯು ಹೀಗೆ ಭಾವಿಸಿಕೊಂಡಳು. "ಪ್ರಿಯತಮನಾದ ಶ್ರೀಕೃಷ್ಣನು ಉಳಿದೆಲ್ಲ ಗೋಪಿಕಾ

ಸ್ತ್ರೀಯರನ್ನೂ ಪರಿತ್ಯಜಿಸಿ ನನ್ನೊಬ್ಬಳಲ್ಲಿಯೇ ರಮಿಸುತ್ತಿರುವುದರಿಂದ ನಾನೇ ಸಕಲಗೋಪಿಕಾಸ್ತ್ರೀಯರಿಗೂ ಶ್ರೇಷ್ಠಳಾಗಿದ್ದೇನೆ."

ಅವಳ ಈ ಅಹಂಕಾರವು ಭಾವನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಬ್ರಹ್ಮೇಂದ್ರಾದಿಗಳಿಗೂ ಶಾಸಕನಾದ ಶ್ರೀಕೃಷ್ಣನನ್ನೇ ಶಾಸನಮಾಡತೊಡಗಿದಳು. ಒಮ್ಮೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ತಾನೇ ಸರ್ವಶ್ರೇಷ್ಠಳೆಂಬ ಸೊಕ್ಕಿನಿಂದ ಮದಿಸಿದ ಗೋಪಿಯು ಕೇಶವನಿಗೆ ಹೇಳಿದಳು :

**ನ ಪಾರಯೇಽಹಂ ಚಲಿತುಂ ನಯ ಮಾಂ ಯತ್ರ ತೇ ಮನಃ ॥೩೮॥**

"ಸ್ವಾಮಿಯೇ! ಪ್ರಾಣಪ್ರಿಯನೇ! ನನಗೆ ಇನ್ನು ಮುಂದೆ ನಡೆಯಲು ಸಾಧ್ಯವೇ ಇಲ್ಲ. ನಾನು ಅಷ್ಟು ದಣಿದಿದ್ದೇನೆ. ನೀನು ವಿಹರಿಸಲು ಬೇರೆಲ್ಲಿಗಾದರೂ ಹೋಗಬೇಕೆಂಬ ಮನಸ್ಸಿದ್ದರೆ ಅಲ್ಲಿಗೆ ನೀನು ನನ್ನನ್ನು ಎತ್ತಿಕೊಂಡೇ ಹೋಗಬೇಕು."

ಪ್ರೇಯಸಿಯು ಹೀಗೆ ಹೇಳುತ್ತಲೇ ಕಪಟನಾಟಕಸೂತ್ರಧಾರಿಯಾದ ಶ್ರೀಕೃಷ್ಣನು ಗೋಪಿಗೆ ತನ್ನ ಹೆಗಲೇರಲು ಹೇಳಿದನು. ಆನಂದೋತ್ಸಾಹ ದಿಂದ ಆಕೆಯು ಪ್ರಿಯಕರನ ಹೆಗಲೇರಲು ಹೋದಳು. ಅಷ್ಟರಲ್ಲಿಯೇ ಶ್ರೀಕೃಷ್ಣನು ಮಾಯವಾಗಿ ಹೋಗಿದ್ದನು. ಗರ್ವಿಷ್ಠಳಾಗಿದ್ದ ಗೋಪಿಯು ಕುಸಿದುಬಿದ್ದಳು.

**ಹಾ ನಾಥ ರಮಣ ಪ್ರೇಷ್ಠ ಕ್ವಾಸಿ ಕ್ವಾಸಿ ಮಹಾಭುಜ ।**
**ದಾಸ್ಯಾಸ್ತೇ ಕೃಪಣಾಯಾ ಮೇ ಸಖೇ ದರ್ಶಯ ಸನ್ನಿಧಿಮ್ ॥೪೦॥**

"ಅಯ್ಯೋ! ನಾಥನೇ! ಎಲ್ಲಿರುವೆ? ಪ್ರಾಣನಾಥನೇ! ಮನೋರಮಣನೇ! ಮಹಾಭುಜನೇ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ? ಗೆಳೆಯನೇ! ನಾನು ನಿನ್ನ ದಾಸಿ. ದೀನಳಾಗಿದ್ದೇನೆ. ನಿನ್ನ ಸಾನ್ನಿಧ್ಯವನ್ನು ದಯಮಾಡಿ ತೋರಿ ಕಾಪಾಡು."

ಪರೀಕ್ಷಿತಮಹಾರಾಜ! ಭಗವಂತನ ಪಾದಕಮಲಗಳ ಗುರುತನ್ನೇ ಅನುಸರಿಸಿ ಪ್ರಿಯತಮನನ್ನು ಹುಡುಕಿಕೊಂಡು ಹೋಗುತ್ತಿದ್ದ ಗೋಪಿಕಾಸ್ತ್ರೀಯರು ಸ್ವಲ್ಪದೂರದಲ್ಲಿಯೇ ತಮ್ಮ ಸಖಿಯೊಬ್ಬಳು ಪ್ರಿಯತಮನ ವಿಯೋಗದುಃಖದಿಂದ ಹೀಗೆ ಬುದ್ಧಿಗೆಟ್ಟು ಕೂಗಿಕೊಳ್ಳುತ್ತಿರುವುದನ್ನು

ನೋಡಿದರು. ಒಡನೆಯೇ ಗೋಪಿಯರೆಲ್ಲರೂ ಅವಳ ಬಳಿಗೆ ಬಂದು ಅವಳ ದುಃಖಕ್ಕೆ ಕಾರಣವನ್ನು ಕೇಳಿದರು. ಮಾಧವನು ತನ್ನೊಬ್ಬಳನ್ನೇ ಪ್ರೀತಿಸಿ ಗೌರವಿಸುತ್ತಿದ್ದುದನ್ನೂ, ಅದರಿಂದ ತಾನು ಗರ್ವಿಷ್ಠಳಾಗಿ ಮಾಧವನನ್ನು ಅವಮಾನಿಸಿದ ಪ್ರಸಂಗವನ್ನೂ, ಅದರಿಂದ ಪ್ರಾಣಪ್ರಿಯನಾದ ಮಾಧವನು ತನ್ನನ್ನು ಪರಿತ್ಯಜಿಸಿ ಮಾಯವಾದುದನ್ನೂ ಆಕೆಯು ವಿವರಿಸಿ ಹೇಳಿದಳು. ಇಂತಹುದೇ ಪರಿಸ್ಥಿತಿಯನ್ನು ಅನುಭವಿಸಿದ್ದ ಗೋಪಿಕಾಸ್ತ್ರೀಯರಿಗೆ ಅವಳ ಮಾತನ್ನು ಕೇಳಿ ಪರಮಾಶ್ಚರ್ಯವಾಯಿತು.

ಪರೀಕ್ಷಿತಮಹಾರಾಜ! ಚಂದ್ರನ ಬೆಳದಿಂಗಳು ಇರುವವರೆಗೂ ಗೋಪಿಕಾಸ್ತ್ರೀಯರು ಕಾಡಿನಲ್ಲಿ ತಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ಹುಡುಕುತ್ತಲೇ ಇದ್ದರು. ಚಂದ್ರನು ಅಸ್ತನಾಗಿ ಕತ್ತಲೆಯು ಕವಿಯಲಾಗಿ ಮುಂದೆ ದಾರಿಕಾಣದೆ ಕೃಷ್ಣನೂ ಕತ್ತಲೆಯಲ್ಲಿ ಅಡಗಿಕೊಳ್ಳಬಹುದೆಂಬ ಸಂಶಯದಿಂದ ಗೋಪಿಕಾಸ್ತ್ರೀಯರು ಹಿಂತಿರುಗಿದರು.

**ತನ್ಮನಸ್ಕಾಸ್ತದಾಲಾಪಾಸ್ತದ್ವಿಚೇಷ್ಟಾಸ್ತದಾತ್ಮಿಕಾಃ ।**
**ತದ್ಗುಣಾನೇವ ಗಾಯನ್ತ್ಯೋ ನಾತ್ಮಾಗಾರಾಣಿ ಸಸ್ಮರುಃ ॥೪೪॥**

ಹುಡುಕುವುದನ್ನು ನಿಲ್ಲಿಸಿದರೇನಂತೆ! ಪರೀಕ್ಷಿತ! ಗೋಪಿಕಾಸ್ತ್ರೀಯರ ಮನಸ್ಸು ಕೃಷ್ಣಮಯವಾಗಿಬಿಟ್ಟಿದ್ದಿತು. ಅವರ ಬಾಯಿಂದ ಕೃಷ್ಣನನ್ನು ಹೊರತಾದ ಯಾವ ಮಾತೂ ಹೊರಡುತ್ತಿರಲಿಲ್ಲ. ಅವನ ಲೀಲಾಪ್ರಸಂಗ ಗಳನ್ನೇ ಅನುಕರಿಸಿ ಆಡುತ್ತಿದ್ದರು. ಅವರ ಮನಸ್ಸು ಶ್ರೀಕೃಷ್ಣನಲ್ಲಿಯೇ ನೆಲೆಸಿಹೋಗಿದ್ದಿತು. ಅವರ ರೋಮ-ರೋಮಗಳೂ ಕೃಷ್ಣಮಯವಾಗಿ ಬಿಟ್ಟಿದ್ದುವು. ಆತ್ಮವೂ ಕೃಷ್ಣಮಯವಾಗಿದ್ದಿತು. ಅವರು ಯಾವಾಗಲೂ ಶ್ರೀಕೃಷ್ಣನ ಗುಣಗಳನ್ನು ಮತ್ತು ಲೀಲಾಪ್ರಸಂಗಗಳನ್ನು ಮಾತ್ರವೇ ಹಾಡುತ್ತಿದ್ದರು. ಸಂಪೂರ್ಣವಾಗಿ ಕೃಷ್ಣಮಯರೇ ಆಗಿಬಿಟ್ಟಿದ್ದ ಅವರಿಗೆ ತಮಗೆ ದೇಹವೊಂದಿದೆಯೆಂಬ ಪರಿವೆಯೇ ಇರಲಿಲ್ಲ. ದೇಹದ ಸ್ಮರಣೆಯೇ ಇಲ್ಲದ ಮೇಲೆ ಮನೆಯ ಸ್ಮರಣೆಯಾದರೂ ಹೇಗುಂಟಾದೀತು? ಗೋಪಿಯರು ಅಷ್ಟು ಪವಿತ್ರಹೃದಯರಾಗಿದ್ದರು. ಮಹಾಭಾಗ್ಯವತಿಯರಾಗಿದ್ದರು.

**ಪುನಃ ಪುಲಿನಮಾಗತ್ಯ ಕಾಲಿನ್ದ್ಯಾಃ ಕೃಷ್ಣಭಾವನಾಃ ।**
**ಸಮವೇತಾ ಜಗುಃ ಕೃಷ್ಣಂ ತದಾಗಮನಕಾಙ್ಕ್ಷಿತಾಃ ॥೪೫॥**

ಗೋಪಿಯರ ಇಂದ್ರಿಯಗಳೆಲ್ಲವೂ ಶ್ರೀಕೃಷ್ಣನ ಶುಭಾಗಮನಕ್ಕಾಗಿಯೇ ತವಕಿಸುತ್ತಿದ್ದುವು. ಕಾಡಿನಿಂದ ಹಿಂದಿರುಗಿದ, ಕೃಷ್ಣನನ್ನೇ ಸದಾ ಕಾಲದಲ್ಲಿಯೂ ಚಿಂತಿಸುತ್ತಿದ್ದ ಗೋಪಿಯರು ಪುನಃ ಯಮುನಾನದಿಯ ಮರಳುದಿಣ್ಣೆಯ ಬಳಿಗೆ ಬಂದು ಸಾಂಘಿಕವಾಗಿ ಶ್ರೀಕೃಷ್ಣನ ಗುಣಗಾನ ಮಾಡತೊಡಗಿದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೦ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩೧ನೆಯ ಅಧ್ಯಾಯ

## ಗೋಪಿಕಾಗೀತೆ

ಗೋಪಿಕಾಸ್ತ್ರೀಯರು ಭಗವಂತನ ವಿರಹಗೀತೆಯನ್ನು ಅನನ್ಯಶರಣರಾಗಿ, ಅನನ್ಯಮನಸ್ಕರಾಗಿ, ಅನನ್ಯಭಕ್ತಿಯಿಂದ ಚೇತೋಹಾರಿಯಾದ ಕಂಠಮಾಧುರ್ಯದಿಂದ ಜೊತೆಗೂಡಿ ಹಾಡುತ್ತಾರೆ.

**ಜಯತಿ ತೇಽಧಿಕಂ ಜನ್ಮನಾ ವ್ರಜಃ**
**ಶ್ರಯತ ಇನ್ದಿರಾ ಶಶ್ವದತ್ರ ಹಿ ।**
**ದಯಿತ ದೃಶ್ಯತಾಂ ದಿಕ್ಷು ತಾವಕಾ-**
**ಸ್ತ್ವಯಿ ಧೃತಾಸವಸ್ತ್ವಾಂ ವಿಚಿನ್ವತೇ* ॥೧॥**

"ಪ್ರಿಯಕರನೇ! ಕೃಷ್ಣ! ಮಾಧವ! ನೀನು ಇಲ್ಲಿ ಹುಟ್ಟಿದ ಕಾರಣದಿಂದಾಗಿ ಈ ವ್ರಜದ ಮಹಿಮೆಯು ವೈಕುಂಠವೇ ಮೊದಲಾದ ಮಹಾಮಹಾಪುಣ್ಯಲೋಕಗಳಿಗಿಂತಲೂ ಹೆಚ್ಚಾಗಿಬಿಟ್ಟಿದೆ. ನೀನು ಇಲ್ಲಿ ಜನ್ಮತಾಳಿದಂದಿನಿಂದಲೇ ಸೌಂದರ್ಯದ ನಿಧಿಯಾದ, ಸಂಪದ್ಭರಿತಳಾದ ಲಕ್ಷ್ಮೀದೇವಿಯು ವೈಕುಂಠವನ್ನು ಪರಿತ್ಯಜಿಸಿ ನಿತ್ಯನಿರಂತರವಾಗಿ ಇಲ್ಲಿಯೇ ವಾಸಮಾಡುತ್ತಿದ್ದಾಳೆ.

ಪ್ರಿಯನೇ! ಇಂತಹ ಪರಮಪವಿತ್ರವಾದ ವ್ರಜಕ್ಕೆ ಸೇರಿದ ನಿನ್ನವರೇ ಆದ, ನಿನ್ನ ದಿವ್ಯಚರಣಾರವಿಂದಗಳಲ್ಲಿಯೇ ಪ್ರಾಣಾರ್ಪಣೆಮಾಡಿರುವ

---

* ಈ ಶ್ಲೋಕಗಳ ಪ್ರತಿಸಾಲಿನ ಮಧ್ಯದಲ್ಲಿ 'ಕೃಷ್ಣ' ಎಂದು ಸೇರಿಸಿಕೊಂಡು ಹಾಡುವ ರೂಢಿಯಿದೆ. ಜಯತಿ **ತೇಽಧಿಕಂ** 'ಕೃಷ್ಣ'–ಹೀಗೆ.

ಗೋಪಿಯರು ನಿನ್ನನ್ನು ದಿಕ್ಕು-ದಿಕ್ಕುಗಳಲ್ಲಿ ಹುಡುಕುತ್ತಿದ್ದಾರೆ. ಅವರಿಗೆ ದರ್ಶನವಿತ್ತು ಕಾಪಾಡು, ಸ್ವಾಮಿಯೇ!

**ಶರದುದಾಶಯೇ ಸಾಧುಜಾತಸತ್-**
**ಸರಸಿಜೋದರಶ್ರೀಮುಷಾ ದೃಶಾ ।**
**ಸುರತನಾಥ ತೇಽಶುಲ್ಕದಾಸಿಕಾ**
**ವರದ ನಿಘ್ನತೋ ನೇಹ ಕಿಂ ವಧಃ ॥೨॥**

ರತಿಕ್ರೀಡೆಗೆ ಸ್ವಾಮಿಯಾಗಿರತಕ್ಕವನೇ! ವರದನೇ! ನಾವು ಬೆಲೆ ಯಿಲ್ಲದ ದಾಸಿಯರಾಗಿದ್ದೇವೆ. ಶರತ್ಕಾಲದಲ್ಲಿ ಸರೋವರಗಳಲ್ಲಿ ಸೊಂಪಾಗಿ ಬೆಳೆದಿರುವ ಕಮಲಪುಷ್ಪಗಳ ಕಾಂತಿಯನ್ನು ಅಪಹರಿಸುವ ಕಣ್ಣುಗಳಿಂದ ನೀನು ನಮ್ಮನ್ನು ಕೊಲ್ಲುತ್ತಿರುವೆ. ನಿನ್ನ ನೋಟವನ್ನು ನೆನೆದರೇನೇ ನಾವು ಸೊಕ್ಕಿ ಕೆಳಕ್ಕೆ ಬೀಳುತ್ತೇವೆ. ಇದು ನಿಜವಾದ ವಧೆಯಲ್ಲವೇ?

**ವಿಷಜಲಾಪ್ಯಯಾದ್ವ್ಯಾಲರಾಕ್ಷಸಾ-**
**ದ್ವರ್ಷಮಾರುತಾದ್ವೈದ್ಯುತಾನಲಾತ್ ।**
**ವೃಷಮಯಾತ್ಮಜಾದ್ವಿಶ್ವತೋಭಯಾ-**
**ದೃಷಭ ತೇ ವಯಂ ರಕ್ಷಿತಾ ಮುಹುಃ ॥೩॥**

ಪುರುಷಶ್ರೇಷ್ಠನೇ! ಯಮುನಾನದಿಯಲ್ಲಿದ್ದ ವಿಷಮಿಶ್ರಿತವಾದ ಜಲದ ಪಾನದಿಂದ ಸನ್ನಿಹಿತವಾಗಿದ್ದ ಮೃತ್ಯುವಿನಿಂದ ನಮ್ಮನ್ನು ಪಾರು ಮಾಡಿರುವೆ. ಹೆಬ್ಬಾವಿನ ರೂಪದಿಂದಿದ್ದ ಅಘಾಸುರನಿಂದ ನಮ್ಮನ್ನು ರಕ್ಷಿಸಿರುವೆ. ಇಂದ್ರನು ಕಳುಹಿಸಿದ್ದ ಪ್ರಚಂಡವಾದ ಮಳೆ-ಗಾಳಿಗಳಿಂದಲೂ– ಸಿಡಿಲುಗಳಿಂದಲೂ ನಮ್ಮನ್ನು ರಕ್ಷಿಸಿರುವೆ. ವೃಷಭಾಸುರನಿಂದಲೂ, ಮಯಾಸುರನ ಮಗನಾದ ತೃಣಾವರ್ತನಿಂದಲೂ ನಮ್ಮನ್ನು ಕಾಪಾಡಿರುವೆ. ಹೀಗೆ ಸಕಲ ವಿಧವಾದ ಭಯಗಳಿಂದಲೂ ನಮ್ಮನ್ನು ಪದೇ-ಪದೇ ರಕ್ಷಿಸಿರುವ ನೀನು ಈಗೇಕೆ ನಮ್ಮ ಮೇಲೆ ದಯೆ ತೋರುತ್ತಿಲ್ಲ?

**ನ ಖಲು ಗೋಪಿಕಾನನ್ದನೋ ಭವಾ-**
**ನಖಿಲದೇಹಿನಾಮನ್ತರಾತ್ಮದೃಕ್ ।**
**ವಿಖನಸಾರ್ಥಿತೋ ವಿಶ್ವಗುಪ್ತಯೇ**
**ಸಖ ಉದೇಯಿವಾನ್ ಸಾತ್ವತಾಂ ಕುಲೇ ॥೪॥**

ಪ್ರಾಣಸಖನೇ! ನೀನು ಯಶೋದಾನಂದನನು ಮಾತ್ರವೇ ಅಲ್ಲ. ನೀನು ಸಮಸ್ತದೇಹಧಾರಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿದ್ದು ಅವರ ಪಾಪ-ಪುಣ್ಯಕರ್ಮಗಳಿಗೆ ಸಾಕ್ಷೀಭೂತನಾಗಿರುವೆ. ಬ್ರಹ್ಮದೇವರ ಪ್ರಾರ್ಥನೆಯಂತೆ ವಿಶ್ವವನ್ನು ರಕ್ಷಿಸುವ ಸಲುವಾಗಿ ಸಾತ್ವತವಂಶದಲ್ಲಿ ಅವತಾರಮಾಡಿರುವೆ.

**ವಿರಚಿತಾಭಯಂ ವೃಷ್ಣಿಧುರ್ಯ ತೇ**
**ಚರಣಮೀಯುಷಾಂ ಸಂಸೃತೇರ್ಭಯಾತ್ ।**
**ಕರಸರೋರುಹಂ ಕಾನ್ತ ಕಾಮದಂ**
**ಶಿರಸಿ ಧೇಹಿ ನಃ ಶ್ರೀಕರಗ್ರಹಮ್ ॥೫॥**

ಪ್ರಾಣಕಾಂತನೇ! ವೃಷ್ಣಿಶ್ರೇಷ್ಠನೇ! ಜನನ-ಮರಣರೂಪವಾದ ಸಂಸಾರಭಯದಿಂದ ಪೀಡಿತರಾಗಿರತಕ್ಕವರು ಅಂತಹ ಸಂಸಾರದಿಂದ ಮುಕ್ತರಾಗಲು ನಿನ್ನ ಚರಣಕಮಲಗಳನ್ನು ಆಶ್ರಯಿಸುತ್ತಾರೆ. ಅಂತಹವರಿಗೆ ನೀನು ಅಭಯಹಸ್ತವನ್ನು ನೀಡುವೆ. ಸಮಸ್ತಭಕ್ತರ ಅಭಿಲಾಷೆಗಳನ್ನೂ ಪೂರ್ಣಗೊಳಿಸಿಕೊಡುವ ಲಕ್ಷ್ಮೀದೇವಿಯ ಪಾಣಿಗ್ರಹಣಮಾಡಿದ ಮತ್ತು ಭಕ್ತರ ವಿಷಯದಲ್ಲಿ ಅಭಯಮುದ್ರೆಯನ್ನು ತೋರುವ ಅಂತಹ ಭವ್ಯವಾದ ಕರಕಮಲವನ್ನು ನಮ್ಮ ತಲೆಯಮೇಲಿರಿಸು, ಸ್ವಾಮಿಯೇ!

**ವ್ರಜಜನಾರ್ತಿಹನ್ ವೀರ ಯೋಷಿತಾಂ**
**ನಿಜಜನಸ್ಮಯಧ್ವಂಸನಸ್ಮಿತ ।**
**ಭಜ ಸಖೇ ಭವತ್ಕಿಙ್ಕರೀಃ ಸ್ಮ ನೋ**
**ಜಲರುಹಾನನಂ ಚಾರು ದರ್ಶಯ ॥೬॥**

ಗೋಕುಲವಾಸಿಗಳ ಪೀಡೆಯನ್ನು ಪರಿಹರಿಸತಕ್ಕವನೇ! ವೀರನೇ! ನಿನ್ನವರಾದ ಗೋಪಿಯರ ಗರ್ವವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡುವ ಕಿರುನಗೆಯುಳ್ಳವನೇ! ಸೇವಕಿಯರಾದ ನಮ್ಮನ್ನು ಅಂಗೀಕರಿಸು. ದೂರೀಕರಿಸಬೇಡ. ಅಬಲೆಯರಾದ ನಮಗೆ ನಿನ್ನ ಮುಖಾರವಿಂದವನ್ನು ತೋರಿಸು.

**ಪ್ರಣತದೇಹಿನಾಂ ಪಾಪಕರ್ಶನಂ**
**ತೃಣಚರಾನುಗಂ ಶ್ರೀನಿಕೇತನಮ್ ।**

**ಫಣಿಫಣಾರ್ಪಿತಂ ತೇ ಪದಾಮ್ಬುಜಂ**
**ಕೃಣು ಕುಚೇಷು ನಃ ಕೃನ್ಧಿ ಹೃಚ್ಛಯಮ್ ॥೭॥**

ಪ್ರಿಯಕರನೇ! ಶರಣಾಗತರಾದವರ ಪಾಪವನ್ನು ಹೋಗಲಾಡಿಸುವ, ಹುಲ್ಲುತಿನ್ನುವ ಹಸುಗಳನ್ನು ಅನುಸರಿಸಿ ಹೋಗುವ, ಸೌಂದರ್ಯಕ್ಕೂ ಮಾಧುರ್ಯಕ್ಕೂ ಸ್ಥಾನವಾಗಿರುವ, ಕಾಳಿಯನ ಹೆಡೆಗಳನ್ನು ಮೆಟ್ಟಿ ಅನುಗ್ರಹಿಸಿದ ದಿವ್ಯವಾದ ನಿನ್ನ ಪಾದಪಂಕಜಗಳನ್ನು ನಮ್ಮ ಕುಚಮಂಡಲದ ಮೇಲಿರಿಸಿ ನಮ್ಮ ಹೃದಯದಲ್ಲಡಗಿರುವ ಕಾಮಾಗ್ನಿಯನ್ನು ಶಾಂತಗೊಳಿಸು.

**ಮಧುರಯಾ ಗಿರಾ ವಲ್ಗುವಾಕ್ಯಯಾ**
**ಬುಧಮನೋಜ್ಞಯಾ ಪುಷ್ಕರೇಕ್ಷಣ ।**
**ವಿಧಿಕರೀರಿಮಾ ವೀರ ಮುಹ್ಯತೀ-**
**ರಧರಸೀಧುನಾಪ್ಯಾಯಯಸ್ವ ನಃ ॥೮॥**

ಕಮಲನೇತ್ರನೇ! ನಿನ್ನ ಮಾತು ಅದೆಷ್ಟು ಮಧುರವಾಗಿದೆ! ಆ ಮಾತಿನಲ್ಲಿರುವ ಒಂದೊಂದು ಶಬ್ದವೂ ಒಂದೊಂದು ಅಕ್ಷರವೂ ಒಂದೊಂದು ವಾಕ್ಯವೂ ಮಧುರಾತಿಮಧುರವಾಗಿದೆ. ದೊಡ್ಡದೊಡ್ಡ ವಿದ್ವಾಂಸರಿಗೂ ನಿನ್ನ ಮಾತುಗಳು ಮನೋಜ್ಞವಾಗಿವೆ. ನಿನ್ನ ಅಂತಹ ಸುಮಧುರವಾದ, ಚೆನ್ನುಡಿಗಳ ರಸಾಸ್ವಾದನೆಮಾಡುತ್ತಾ ಮೋಹಗೊಂಡು ನಿನ್ನ ಸೇವಕಿಯರಾಗಿರುವ ನಮಗೆ ನಿನ್ನ ಅಧರಾಮೃತವನ್ನು ಪಾನಮಾಡಿಸಿ ನಮ್ಮನ್ನು ತೃಪ್ತಿಗೊಳಿಸು.

**ತವ ಕಥಾಮೃತಂ ತಪ್ತಜೀವನಂ**
**ಕವಿಭಿರೀಡಿತಂ ಕಲ್ಮಷಾಪಹಮ್ ।**
**ಶ್ರವಣಮಙ್ಗಲಂ ಶ್ರೀಮದಾತತಂ**
**ಭುವಿ ಗೃಣನ್ತಿ ತೇ ಭೂರಿದಾ ಜನಾಃ ॥೯॥**

ಪ್ರಭುವೇ! ನಿನ್ನ ಲೀಲೆಯ ಕಥಾಪ್ರಸಂಗಗಳೂ ಅಮೃತಸ್ವರೂಪಗಳೇ ಆಗಿವೆ. ವಿರಹದಿಂದ ಪರಿತಪಿಸುತ್ತಿರುವವರಿಗೆ ಆ ನಿನ್ನ ಕಥಾಪ್ರಸಂಗಗಳು ಜೀವನಸ್ವರೂಪವೇ ಆಗುತ್ತವೆ. ವಿರಹಿಗಳಿಗೆ ಅದನ್ನು ಬಿಟ್ಟು ಬೇರೇನೂ ಬೇಕಾಗುವುದಿಲ್ಲ. ದೊಡ್ಡ ದೊಡ್ಡ ಜ್ಞಾನಿಗಳು ಮತ್ತು ಮಹಾ ಮಹಾಕವಿಗಳು ನಿನ್ನ ಚರಿತಾಮೃತವನ್ನು ಹಾಡಿ ಹೊಗಳಿದ್ದಾರೆ. ಚರಿತಾ

ಮೃತದ ಶ್ರವಣಮಾತ್ರದಿಂದಲೇ ಪಾಪವು ಪರಿಹಾರವಾಗುತ್ತದೆ. ಸುಖಸಂಪತ್ತುಗಳು ಪ್ರಾಪ್ತವಾಗುತ್ತವೆ. ನಿನ್ನ ಕಥಾಮೃತವನ್ನು ಲೋಕದಲ್ಲಿ ಯಾರು ಪಾನಮಾಡುವರೋ ಅಂತಹವರು ಹಿಂದಿನ ಜನ್ಮದಲ್ಲಿ ಬಹಳ ದಾನಗಳನ್ನು ಮಾಡಿದವರಾಗಿರುತ್ತಾರೆ. ಆ ಪುಣ್ಯದಿಂದ ಅವರಿಗೆ ನಿನ್ನ ಕಥಾಮೃತವನ್ನು ಈಗ ಸವಿಯುವ ಯೋಗವುಂಟಾಗಿದೆ.

**ಪ್ರಹಸಿತಂ ಪ್ರಿಯ ಪ್ರೇಮವೀಕ್ಷಣಂ**
**ವಿಹರಣಂ ಚ ತೇ ಧ್ಯಾನಮಙ್ಗಲಮ್ ।**
**ರಹಸಿ ಸಂವಿದೋ ಯಾ ಹೃದಿಸ್ಪೃಶಃ**
**ಕುಹಕ ನೋ ಮನಃ ಕ್ಷೋಭಯನ್ತಿ ಹಿ ॥೧೦॥**

ಮಾಯಾವಿಯೇ! ಪ್ರಾಣಪ್ರಿಯನೇ! ನಿನ್ನ ಪ್ರೇಮಪೂರ್ಣವಾದ ನಗು, ಪ್ರೇಮಪೂರ್ಣವಾದ ನೋಟ, ನಾನಾಬಗೆಯ ಕ್ರೀಡೆಗಳು–ಇವೆಲ್ಲವನ್ನೂ ಸ್ಮರಿಸಿಕೊಂಡು ನಾವು ಆನಂದಪಡುತ್ತಿದ್ದೆವು. ನಿನ್ನನ್ನು ಧ್ಯಾನಿಸುವುದೇ ಮಂಗಳದಾಯಕವಾದುದು. ನಮ್ಮ ಧ್ಯಾನದ ಫಲವಾಗಿ ನೀನೇ ನಮ್ಮ ಬಳಿಗೆ ಬಂದೆ. ಏಕಾಂತದಲ್ಲಿ ನಮ್ಮೊಡನೆ ಹೃದಯಸ್ಪರ್ಶಿಯಾದ ವಿನೋದದ ಮಾತುಗಳನ್ನಾಡಿದೆ. ಅದೆಲ್ಲವನ್ನೂ ಈಗ ನೆನೆಸಿಕೊಂಡರೆ ನಮ್ಮ ಮನಸ್ಸು ಕ್ಷೋಭೆಗೊಳ್ಳುತ್ತದೆ.

**ಚಲಸಿ ಯದ್ವ್ರಜಾಚ್ಚಾರಯನ್ಪಶೂನ್**
**ನಲಿನಸುನ್ದರಂ ನಾಥ ತೇ ಪದಮ್ ।**
**ಶಿಲತೃಣಾಙ್ಕುರೈಃ ಸೀದತೀತಿ ನಃ**
**ಕಲಿಲತಾಂ ಮನಃ ಕಾನ್ತ ಗಚ್ಛತಿ ॥೧೧॥**

ಪ್ರಾಣನಾಥನೇ! ನಿನ್ನ ಚರಣಕಮಲಗಳು ಕಮಲಕ್ಕಿಂತಲೂ ಸುಂದರ ವಾಗಿಯೂ ಸುಕೋಮಲವಾಗಿಯೂ ಇವೆ. ನೀನು ಹಸುಗಳನ್ನು ಹೊಡೆದು ಕೊಂಡು ವ್ರಜದಿಂದ ಹೊರಟೊಡನೆಯೇ ನಮಗೆ ನಿನ್ನ ಮೃದುವಾದ ಕಾಲುಗಳ ಯೋಚನೆಯೇ. ಹಾದಿಯಲ್ಲಿರುವ ನೊರಜುಕಲ್ಲುಗಳಿಂದಲೂ ಹುಲ್ಲಿನ ಕೂಳೆಗಳಿಂದಲೂ ನಿನ್ನ ಮೃದುವಾದ ಕಾಲುಗಳಿಗೆ ಎಷ್ಟು ನೋವಾಗುವುದೋ ಎಂದು ನಾವು ಪರಿತಪಿಸುತ್ತಿರುತ್ತೇವೆ. ನಮ್ಮ ಮನಸ್ಸು ಬಹಳವಾಗಿ ಕಳವಳಿಸುತ್ತದೆ.

ದಿನಪರಿಕ್ಷಯೇ ನೀಲಕುನ್ತಲೈ-
ರ್ವನರುಹಾನನಂ ಬಿಭ್ರದಾವೃತಮ್ ।
ಘನರಜಸ್ವಲಂ ದರ್ಶಯನ್ಮುಹು-
ರ್ಮನಸಿ ನಃ ಸ್ಮರಂ ವೀರ ಯಚ್ಛಸಿ ॥೧೨॥

ಸಾಯಂಕಾಲವಾಗುತ್ತಲೇ ನೀನು ಹಸುಗಳೊಡನೆ ವ್ರಜಕ್ಕೆ ಹಿಂದಿರುಗುವಾಗ ನಿನ್ನ ಸುಂದರವಾದ ಮುಖಕಮಲವು ಕಪ್ಪಾದ ಗುಂಗುರುಕೂದಲುಗಳಿಂದಲೂ ಗೋಧೂಳಿಯಿಂದಲೂ ವ್ಯಾಪ್ತವಾಗಿ ಅತ್ಯಂತಶೋಭಾಯಮಾನವಾಗಿ ಕಾಣುತ್ತದೆ. ಅಂತಹ ಸುಂದರಮುಖಾರ ವಿಂದವನ್ನು ತೋರುತ್ತಾ ನೀನು ನಮ್ಮ ಮನಸ್ಸಿನಲ್ಲಿ ಕಾಮಾಗ್ನಿಯನ್ನು ಕೆರಳಿಸುವೆ.

ಪ್ರಣತಕಾಮದಂ ಪದ್ಮಜಾರ್ಚಿತಂ
ಧರಣಿಮಣ್ಡನಂ ಧ್ಯೇಯಮಾಪದಿ ।
ಚರಣಪಙ್ಕಜಂ ಶನ್ತಮಂ ಚ ತೇ
ರಮಣ ನಃ ಸ್ತನೇಷ್ವರ್ಪಯಾಧಿಹನ್ ॥೧೩॥

ಪ್ರಿಯತಮನೇ! ನೀನೊಬ್ಬನೇ ನಮ್ಮ ಸಮಸ್ತವಾದ ಪೀಡೆಗಳನ್ನೂ ಪರಿಹರಿಸಲು ಸಮರ್ಥನಾಗಿರುವೆ. ನಿನ್ನ ಚರಣಕಮಲಗಳು ಶರಣಾಗತರಾದ ನಿನ್ನ ಭಕ್ತರಿಗೆ ಸಮಸ್ತವಾದ ಕಾಮನೆಗಳನ್ನೂ ಪೂರ್ಣಗೊಳಿಸಿ ಕೊಡುತ್ತವೆ. ಲಕ್ಷ್ಮಿಯಿಂದ ಮತ್ತು ಬ್ರಹ್ಮನಿಂದ ಅರ್ಚಿಸಲ್ಪಡುವ ದಿವ್ಯಪಾದಗಳವು. ನಿನ್ನ ಚರಣಾರವಿಂದಗಳು ಭೂಮಂಡಲಕ್ಕೆ ಅಲಂಕಾರಪ್ರಾಯವಾಗಿವೆ. ಆಪತ್ತಿನ ಸಮಯದಲ್ಲಿ ನಿನ್ನ ಪಾದಾರವಿಂದಗಳನ್ನು ಧ್ಯಾನಿಸಿದರೆ ಸಮಸ್ತವಾದ ಆಪತ್ತುಗಳೂ ದೂರವಾಗುತ್ತವೆ. ಅಂತಹ ಕಲ್ಯಾಣಸ್ವರೂಪವಾದ ನಿನ್ನ ಚರಣಕಮಲಗಳನ್ನು ನಮ್ಮ ವಕ್ಷಃಸ್ಥಳದಲ್ಲಿರಿಸಿ ನಮ್ಮ ಹೃದಯದಲ್ಲಿರುವ ವಿರಹವೇದನೆಯನ್ನು ಶಾಂತಗೊಳಿಸು.

ಸುರತವರ್ಧನಂ ಶೋಕನಾಶನಂ
ಸ್ವರಿತವೇಣುನಾ ಸುಷ್ಠು ಚುಮ್ಬಿತಮ್ ।
ಇತರರಾಗವಿಸ್ಮಾರಣಂ ನೃಣಾಂ
ವಿತರ ವೀರ ನಸ್ತೇಽಧರಾಮೃತಮ್ ॥೧೪॥

ಪ್ರಿಯಕರನೇ! ರತಿಕ್ರೀಡೆಯ ಅಭಿಲಾಷೆಯನ್ನು ಹೆಚ್ಚಿಸುವಂತೆಯೂ, ವಿರಹದುಃಖವನ್ನು ಕಳೆಯುವಂತೆಯೂ, ನುಡಿಸಲ್ಪಡುವ ಕೊಳಲಿನಿಂದ, ಚೆನ್ನಾಗಿ ಮುತ್ತಿಕ್ಕಲ್ಪಡುವ ಮತ್ತು ಒಮ್ಮೆ ಪಾನಮಾಡಿದ ಮನುಷ್ಯರಿಗೆ ಇತರ ಭೋಗವಸ್ತುಗಳ ಮೇಲಿನ ಆಸೆಯನ್ನು ತೊರೆಯುವಂತೆ ಮಾಡುವ, ಸುಕೋಮಲವಾದ, ಮಧುರವಾದ ನಿನ್ನ ಅಧರಾಮೃತದ ರಸವನ್ನು ನಮಗೆ ದಯಪಾಲಿಸು.

**ಅಟತಿ ಯದ್ಭವಾನಹ್ನಿ ಕಾನನಂ**
**ತ್ರುಟಿರ್ಯುಗಾಯತೇ ತ್ವಾಮಪಶ್ಯತಾಮ್ ।**
**ಕುಟಿಲಕುನ್ತಲಂ ಶ್ರೀಮುಖಂ ಚ ತೇ**
**ಜಡ ಉದೀಕ್ಷತಾಂ ಪಕ್ಷ್ಮಕೃದ್ದೃಶಾಮ್ ॥೧೫॥**

ಪ್ರಾಣಪ್ರಿಯನೇ! ಹಗಲಿನಲ್ಲಿ ನೀನು ಹಸುಗಳನ್ನು ಮೇಯಿಸಲು ಕಾಡಿಗೆ ಹೋಗುವೆ. ಆ ಸಮಯದಲ್ಲಿ ನಿನ್ನನ್ನು ಕಾಣದೆ ನಮಗೆ ಒಂದೊಂದು ಕ್ಷಣವೂ ಒಂದೊಂದು ಯುಗವಾಗಿ ಕಾಣುತ್ತವೆ. 'ಹಗಲು ಮುಗಿಯಲೇ ಇಲ್ಲವಲ್ಲಾ! ಪ್ರಿಯಕರನನ್ನು ಕಾಣಲೇ ಇಲ್ಲವಲ್ಲಾ!' ಎಂದು ಬಹಳವಾಗಿ ತವಕಿಸುತ್ತಿರುತ್ತೇವೆ. ಸಾಯಂಕಾಲವಾಗುತ್ತಲೇ ಕೊಂಕಾದ ಮುಂಗುರುಳಿಂದ ಸಮಲಂಕೃತವಾದ ನಿನ್ನ ಸುಂದರವಾದ ಮುಖವನ್ನು ನೋಡುವಾಗ ರೆಪ್ಪೆಗಳು ಕ್ಷಣ-ಕ್ಷಣಕ್ಕೂ ಮುಚ್ಚಿಕೊಳ್ಳುತ್ತಾ ನಿನ್ನನ್ನು ಎವೆಯಿಕ್ಕದೇ ನೋಡಲು ಅಡ್ಡಿಯನ್ನುಂಟುಮಾಡುತ್ತವೆ. ನಿಶ್ಚಯವಾಗಿಯೂ ನಿನ್ನ ದರ್ಶನಕ್ಕೆ ತಡೆಯನ್ನುಂಟುಮಾಡುವ ರೆಪ್ಪೆಗಳನ್ನು ಸೃಷ್ಟಿಸಿದ ಬ್ರಹ್ಮನು ಮೂರ್ಖನಲ್ಲವೇ!

**ಪತಿಸುತಾನ್ವಯಭ್ರಾತೃಬಾನ್ಧವಾ-**
**ನತಿವಿಲಙ್ಘ್ಯ ತೇಽನ್ತ್ಯಚ್ಯುತಾಗತಾಃ ।**
**ಗತಿವಿದಸ್ತವೋದ್ಗೀತಮೋಹಿತಾಃ**
**ಕಿತವ ಯೋಷಿತಃ ಕಸ್ತ್ಯಜೇನ್ನಿಶಿ ॥೧೬॥**

ಕಪಟಿಯಾದ ಅಚ್ಯುತನೇ! ಕಪಟನಾಟಕಸೂತ್ರಧಾರಿಯೇ! ನಾವು ನಮ್ಮ ಪತಿ-ಪುತ್ರರನ್ನೂ, ಸಹೋದರರನ್ನೂ, ಬಂಧುಗಳನ್ನೂ, ಕುಲಪರಿವಾರದವರನ್ನೂ ಪರಿತ್ಯಾಗಮಾಡಿ, ಅವರ ಆಜ್ಞೆಯನ್ನೂ ಉಲ್ಲಂಘಿಸಿ ನಿನ್ನ

ವೇಣುಗಾನದಿಂದ ಆಕರ್ಷಿಸಲ್ಪಟ್ಟವರಾಗಿ ಕೊಳಲಿನ ಧ್ವನಿಯಿಂದಲೇ ನೀನಿಲ್ಲಿರುವೆಯೆಂಬುದನ್ನು ತಿಳಿದುಕೊಂಡು ಆ ಧ್ವನಿಯನ್ನೇ ಅನುಸರಿಸಿ ನಿನ್ನ ಬಳಿಗೆ ಬಂದೆವು. ಆದರೆ ಪ್ರೇಮದ ಲಾಲಸೆಯಿಂದ ಬಂದ ಹೆಂಗಸರನ್ನು ರಾತ್ರಿಯ ವೇಳೆಯಲ್ಲಿ ನೀನಲ್ಲದೇ ಬೇರೆ ಯಾರು ತಾನೇ ತ್ಯಜಿಸಿಹೋಗುತ್ತಾರೆ?

**ರಹಸಿ ಸಂವಿದಂ ಹೃಚ್ಛಯೋದಯಂ**
**ಪ್ರಹಸಿತಾನನಂ ಪ್ರೇಮವೀಕ್ಷಣಮ್ ।**
**ಬೃಹದುರಃ ಶ್ರಿಯೋ ವೀಕ್ಷ್ಯ ಧಾಮ ತೇ**
**ಮುಹುರತಿಸ್ಪೃಹಾ ಮುಹ್ಯತೇ ಮನಃ ॥೧೭॥**

ನೀನು ಏಕಾಂತದಲ್ಲಿ ನಮ್ಮೊಡನೆ ಹೇಳುತ್ತಿದ್ದ ಕಾಮಪ್ರಚೋದಕ ವಾದ ಸರಸ-ಸಲ್ಲಾಪದ ಮಾತುಗಳನ್ನೂ, ಪ್ರೇಮಪೂರ್ವಕವಾದ ನಿನ್ನ ವೀಕ್ಷಣವನ್ನೂ, ಮಂದಹಾಸದಿಂದ ಕೂಡಿದ ನಿನ್ನ ಸುಂದರವಾದ ಮುಖಾರವಿಂದವನ್ನೂ, ಲಕ್ಷ್ಮಿಗೆ ನಿವಾಸಸ್ಥಾನವಾದ ನಿನ್ನ ವಿಶಾಲವಾದ ವಕ್ಷಃಸ್ಥಳವನ್ನೂ ಸ್ಮರಿಸಿಕೊಂಡು ಮುಗ್ಧವಾದ ನಮ್ಮ ಮನಸ್ಸು ನಿನ್ನನ್ನು ಪುನಃ ಸೇರಲೇಬೇಕೆಂದು ಬಹಳವಾಗಿ ತವಕಿಸುತ್ತಿದೆ.

**ವ್ರಜವನೌಕಸಾಂ ವ್ಯಕ್ತಿರಙ್ಗ ತೇ**
**ವೃಜಿನಹನ್ತ್ರ್ಯಲಂ ವಿಶ್ವಮಙ್ಗಲಮ್ ।**
**ತ್ಯಜ ಮನಾಕ್ಚ ನಸ್ತ್ವತ್ಸ್ಪೃಹಾತ್ಮನಾಂ**
**ಸ್ವಜನಹೃದ್ರುಜಾಂ ಯನ್ನಿಷೂದನಮ್ ॥೧೮॥**

ಪ್ರಿಯಕರನೇ! ನಿನ್ನ ಈ ಅವತಾರವು ಗೋಕುಲವಾಸಿಗಳ ದುಃಖವನ್ನೂ ತಾಪವನ್ನೂ ವಿನಾಶಗೊಳಿಸುವುದಾಗಿದೆ. ವಿಶ್ವಕ್ಕೆ ಮಂಗಳವನ್ನುಂಟುಮಾಡುವ ಸಲುವಾಗಿಯೂ ಈ ನಿನ್ನ ಅವತಾರವಾಗಿದೆ. ನಾವೂ ವ್ರಜವಾಸಿಗಳೇ ಆಗಿದ್ದೇವೆ. ನಿನ್ನನ್ನು ಸೇರಬೇಕೆಂಬ ಆಸೆಯನ್ನೇ ಮನಸ್ಸಿನಲ್ಲಿ ತುಂಬಿಕೊಂಡು ಮಾನಸಿಕವಾದ ರೋಗದಿಂದ ನರಳುತ್ತಿದ್ದೇವೆ. ಅಂತಹ ವಿರಹರೋಗಪರಿಹಾರಕವಾದ ಯಾವುದಾದರೂ ಔಷಧಿಯನ್ನು ಕೊಟ್ಟು ಕಾಪಾಡು.

**ಯತ್ತೇ ಸುಜಾತಚರಣಾಮ್ಬುರುಹಂ ಸ್ತನೇಷು**
**ಭೀತಾಃ ಶನೈಃ ಪ್ರಿಯ ದಧೀಮಹಿ ಕರ್ಕಶೇಷು ।**

**ತೇನಾಟವೀಮಟಸಿ ತದ್ವ್ಯಥತೇ ನ ಕಿಂಸ್ವಿತ್**
**ಕೂರ್ಪಾದಿಭಿರ್ಭ್ರಮತಿ ಧೀರ್ಭವದಾಯುಷಾಂ ನಃ ॥**

ಪ್ರಾಣಕಾಂತನೇ! ನಿನ್ನ ಚರಣಕಮಲವು ಕಮಲಪುಷ್ಪಕ್ಕಿಂತಲೂ ಸುಕೋಮಲವಾಗಿವೆ. ಅಂತಹ ಸುಕೋಮಲವಾದ ಚರಣಕಮಲಗಳನ್ನು ನಾವು ನಮ್ಮ ಕಠಿಣವಾದ ಸ್ತನಗಳ ಮೇಲೆ ಇಟ್ಟುಕೊಳ್ಳುವಾಗ ಆ ಪಾದಾರ ವಿಂದಗಳಿಗೆ ಎಲ್ಲಿ ನೋವಾಗುವುದೋ ಎಂಬ ಭೀತಿಯಿಂದ ಮೆಲ್ಲ-ಮೆಲ್ಲನೆ ಇಟ್ಟುಕೊಳ್ಳುತ್ತೇವೆ. ಈ ಘೋರರಾತ್ರಿಯಲ್ಲಿ ಈ ಘೋರಾರಣ್ಯದಲ್ಲಿ ನೀನು ಅದೇ ಸುಕೋಮಲವಾದ ಚರಣಾರವಿಂದಗಳ ಮೂಲಕವಾಗಿಯೇ ನಮ್ಮಿಂದ ತಪ್ಪಿಸಿಕೊಂಡು ಓಡಾಡುತ್ತಿರುವೆ. ಕಾಡಿನಲ್ಲಿರುವ ಕಲ್ಲು-ಮುಳ್ಳುಗಳಿಂದ ನಿನ್ನ ಸುಕೋಮಲವಾದ ಪಾದಪದ್ಮಗಳಿಗೆ ನೋವಾಗುತ್ತಿಲ್ಲವೇ? ಇದನ್ನು ನೆನೆದೊಡನೆಯೇ, ನಿನ್ನಲ್ಲಿಯೇ ಪ್ರಾಣಗಳನ್ನಿಟ್ಟುಕೊಂಡಿರುವ ನಮಗೆ ಬುದ್ಧಿಭ್ರಮಣೆಯಾಗಿಬಿಡುತ್ತದೆ. ಪ್ರಾಣನಾಥನೇ! ನಮ್ಮ ಜೀವನವು ನಿನಗಾಗಿಯೇ ಮುಡುಪಾಗಿದೆ. ನಿನ್ನ ಸೇವೆಗಾಗಿಯೇ ನಮ್ಮನ್ನು ಅರ್ಪಿಸಿ ಕೊಂಡುಬಿಟ್ಟಿದ್ದೇವೆ. ದರ್ಶನವಿತ್ತು ಕಾಪಾಡು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩೨ನೆಯ ಅಧ್ಯಾಯ

## ಭಗವಂತನು ಪ್ರತ್ಯಕ್ಷನಾಗಿ ಗೋಪಿಯರನ್ನು ಸಂತೈಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ಇತಿ ಗೋಪ್ಯಃ ಪ್ರಗಾಯನ್ತ್ಯಃ ಪ್ರಲಪನ್ತ್ಯಶ್ಚ ಚಿತ್ರಧಾ ।**
**ರುರುದುಃ ಸುಸ್ವರಂ ರಾಜನ್ ಕೃಷ್ಣದರ್ಶನಲಾಲಸಾಃ ॥೧॥**

ಪರೀಕ್ಷಿತಮಹಾರಾಜ! ಹೀಗೆ ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾಗಿದ್ದ ಗೋಪಿಯರು ಕೆಲವು ವೇಳೆ ಅವನ ಲೀಲಾಪ್ರಸಂಗಗಳನ್ನು ಹಾಡುತ್ತಾ ಕುಣಿ ಯುತ್ತಿದ್ದರು. ಕೆಲವು ವೇಳೆ ವಿರಹವೇದನೆಯನ್ನು ತಾಳಲಾರದೆ ಕರುಣಾ ಜನಕವಾದ ರೀತಿಯಲ್ಲಿ ಸುಸ್ವರದಿಂದ ಬಗೆ-ಬಗೆಯಾಗಿ ವಿಲಪಿಸುತ್ತಿದ್ದರು.

ತನ್ನ ಪ್ರೇಯಸಿಯರನ್ನು ಇನ್ನೂ ಹೆಚ್ಚು ಗೋಳಾಡಿಸಬಾರದೆಂದು

ಭಾವಿಸಿದ ಶ್ರೀಹರಿಯು ಒಡನೆಯೇ ಅವರ ಮಧ್ಯದಲ್ಲೇ ಪ್ರಕಟವಾದನು. ಅವನ ಮುಖಾರವಿಂದವು ಮಂದಹಾಸದಿಂದ ಅಲಂಕೃತವಾಗಿದ್ದಿತು. ವನಮಾಲೆಯನ್ನೂ ಪೀತಾಂಬರವನ್ನೂ ಧರಿಸಿದ್ದ ಶ್ರೀಹರಿಯು ಮನ್ಮಥನಿಗೂ ಮನ್ಮಥನಾಗಿ ಬೆಳಗಿದನು.

ಮನ್ಮಥನಿಗಿಂತಲೂ ಕಡುಚೆಲುವನಾದ ತಮ್ಮ ಪ್ರೇಮಮೂರ್ತಿಯನ್ನು ಕಂಡೊಡನೆಯೇ ಅಬಲೆಯರ ಪ್ರೀತಿಯ ದ್ಯೋತಕವಾಗಿ ಅವರ ಕಣ್ಣುಗಳು ಕಮಲದಂತೆ ಅರಳಿದುವು. ಹೋಗಿದ್ದ ಪ್ರಾಣವು ಪುನಃ ಶರೀರದಲ್ಲಿ ಸೇರಿಕೊಂಡಾಗ ಇಂದ್ರಿಯಗಳೆಲ್ಲವೂ ಏಕಕಾಲದಲ್ಲಿ ಕಾರ್ಯೋನ್ಮುಖ ವಾಗುವಂತೆ ಗೋಪಿಯರೆಲ್ಲರೂ ಒಡನೆಯೇ ಎದ್ದುನಿಂತರು. ಒಬ್ಬ ಗೋಪಿಯು ಪ್ರೇಮದಿಂದಲೂ, ಆನಂದದಿಂದಲೂ ಶ್ರೀಕೃಷ್ಣನ ಕರಕಮಲ ವನ್ನು ತನ್ನೆರಡು ಕೈಗಳಿಂದಲೂ ಹಿಡಿದುಕೊಂಡಳು. ಮತ್ತೊಬ್ಬ ಗೋಪಿಯು ಚಂದನಲಿಪ್ತವಾಗಿದ್ದ ಬಾಹುಲತೆಯನ್ನು ತನ್ನ ಕುತ್ತಿಗೆಯ ಮೇಲೆ ಬಳಸಿ ಇಟ್ಟುಕೊಂಡಳು. ಒಬ್ಬ ಗೋಪಿಯು ಶ್ರೀಕೃಷ್ಣನು ಜಗಿದಿದ್ದ ತಾಂಬೂಲವನ್ನು ಪ್ರಸಾದರೂಪವಾಗಿ ಬೊಗಸೆಯಲ್ಲಿ ಗ್ರಹಿಸಿದಳು. ಮತ್ತೊಬ್ಬಳು ಶ್ರೀಕೃಷ್ಣನ ಪಾದಕಮಲವನ್ನು ಕಾಮಾಗ್ನಿಯಿಂದ ಬಿಸಿಯಾಗಿದ್ದ ಸ್ತನಗಳ ಮೇಲೆ ಇಟ್ಟುಕೊಂಡಳು. ಇನ್ನೊಬ್ಬಳು ಪ್ರಣಯಕೋಪದಿಂದ ವಿಹ್ವಲಳಾಗಿ ಹುಬ್ಬುಗಳನ್ನು ಗಂಟಿಕ್ಕಿ ಹಲ್ಲುಗಳಿಂದ ತುಟಿಯನ್ನು ಕಚ್ಚುತ್ತಾ ಕಟಾಕ್ಷಬಾಣಗಳಿಂದ ಶ್ರೀಕೃಷ್ಣನನ್ನು ಪ್ರಹರಿಸುವಳೋ ಎಂಬಂತೆ ದುರುಗುಟ್ಟಿಕೊಂಡು ನೋಡುತ್ತಿದ್ದಳು. ಮತ್ತೊಬ್ಬಳು ಎವೆಯಿಕ್ಕದ ನೋಟದಿಂದ ಶ್ರೀಕೃಷ್ಣನ ಮುಖಾರವಿಂದದ ಮಧುವನ್ನು ಪಾನಮಾಡುತ್ತಲೇ ಇದ್ದಳು. ಸತ್ಪುರುಷರು ಭಗವಂತನ ದಿವ್ಯಚರಣಾರವಿಂದಗಳನ್ನು ಎಷ್ಟುನೋಡಿದರೂ ತೃಪ್ತರಾಗದಿರುವಂತೆ ಆ ಗೋಪಿಯು ನಿರಂತರವಾಗಿ ಮುಖಕಮಲದ ಮಧುವನ್ನು ಮುಚ್ಚದ ಕಣ್ಣುಗಳೆಂಬ ದುಂಬಿಗಳ ಮೂಲಕವಾಗಿ ಪಾನಮಾಡುತ್ತಿದ್ದರೂ ತೃಪ್ತಳಾಗಲೇ ಇಲ್ಲ.

ಮತ್ತೊಬ್ಬ ಗೋಪಿಯು ತನ್ನ ಕಣ್ಣುಗಳೆಂಬ ಬಾಗಿಲುಗಳ ಮೂಲಕವಾಗಿ ಶ್ರೀಕೃಷ್ಣನನ್ನು ಹೃದಯಕಮಲಕ್ಕೊಯ್ದು ದ್ವಾರರೂಪ ದಲ್ಲಿದ್ದ ಕಣ್ಣುಗಳನ್ನು ಮುಚ್ಚಿಕೊಂಡುಬಿಟ್ಟಳು. ಹೃದಯಗುಹೆಯಲ್ಲಿ ಪರಮ

ಪ್ರಕಾಶನಾಗಿ ಬೆಳಗಿದ ಶ್ರೀಕೃಷ್ಣನನ್ನು ಆ ಗೋಪಿಯು ಮನತುಂಬಿ ಆಲಿಂಗನಮಾಡಿಕೊಂಡು ರೋಮಾಂಚಿತಳಾದಳು. ಮಹಾಯೋಗಿಗಳು ಹೃದಯಗುಹೆಯಲ್ಲಿ ಪರಂಜ್ಯೋತಿಸ್ವರೂಪನಾದ ಪರಮಾತ್ಮನನ್ನು ಕಂಡು ಕೊಂಡು ಆನಂದಿಸುವಂತೆ ಆ ಗೋಪಿಯು ಪ್ರಿಯಕರನಾದ ಶ್ರೀಕೃಷ್ಣನನ್ನು ತುಂಬಿಕೊಂಡು ಆನಂದಸಾಗರದಲ್ಲಿ ಮುಳುಗಿಹೋದಳು.

ಪರೀಕ್ಷಿತಮಹಾರಾಜ! ಮುಮುಕ್ಷುಗಳಾದ ಜನರು ಪ್ರಾಜ್ಞನನ್ನು ಸಂದರ್ಶಿಸಿ ಸಂಸಾರದ ಜಂಜಾಟದಿಂದ ಮುಕ್ತರಾಗುವಂತೆ ಕೇಶವನನ್ನು ನೋಡಿದ ಉತ್ಸವದಿಂದ ಆನಂದಭರಿತರಾದ ಆ ಎಲ್ಲ ಗೋಪಿಯರೂ ವಿರಹತಾಪದಿಂದ ಮುಕ್ತರಾದರು. ಭಗವಂತನಾದ ಅಚ್ಯುತನು ವಿರಹಶೋಕ ದಿಂದ ಮುಕ್ತರಾದ ಗೋಪಿಯರೊಡನೆ ಸುತ್ತುವರಿಯಲ್ಪಟ್ಟವನಾಗಿ ಜ್ಞಾನ, ಬಲ–ಇವೇ ಮುಂತಾದ ಶಕ್ತಿಗಳಿಂದ ಪರಿಪೂರ್ಣನಾದ ಈಶ್ವರನಂತೆಯೇ ಅತ್ಯಂತಶೋಭಾಯಮಾನನಾಗಿ ಪ್ರಕಾಶಿಸಿದನು. ಬಳಿಕ ಶ್ರೀಕೃಷ್ಣನು ವ್ರಜದ ಗೋಪಿಯರನ್ನು ಕರೆದುಕೊಂಡು ಯಮುನಾನದಿಯ ಮರಳು ಗುಡ್ಡೆಗಳ ಬಳಿಗೆ ಹೋದನು. ಆ ಸಮಯದಲ್ಲಿ ಅರಳಿದ ಮಲ್ಲಿಗೆ ಮತ್ತು ಮಂದಾರಪುಷ್ಪಗಳ ಸುಗಂಧವನ್ನು ಹೊತ್ತು ಶೀತಲವಾದ ವಾಯುವು ಮೆಲ್ಲ-ಮೆಲ್ಲನೆ ಬೀಸುತ್ತಿದ್ದಿತು. ಸುವಾಸನೆಯಿಂದ ಆಕರ್ಷಿತವಾದ ದುಂಬಿ ಗಳೂ ಅತ್ತಲಿತ್ತ ಹಾರಾಡುತ್ತಿದ್ದುವು. ಶರತ್ಕಾಲದ ಹುಣ್ಣಿಮೆಯ ಚಂದ್ರನ ಕಿರಣಗಳಿಂದ ಮೂಡಿಬಂದ ಹೃದಯಾನಂದಕರವಾದ ಬೆಳದಿಂಗಳಿನಿಂದ ರಾತ್ರಿಯ ಕತ್ತಲೆಯು ತೊಲಗಿಹೋದದ್ದಲ್ಲದೆ ಗೋಪಿಯರಿಗೆ ಆ ರಾತ್ರಿಯು ಅತ್ಯಂತಮಂಗಳಕರವೂ ಆಯಿತು. ಯಮುನಾನದಿಯ ಚಂಚಲವಾದ ತೆರೆಗಳ ರೂಪವಾದ ಕೈಗಳಿಂದ ಎರಚಲ್ಪಟ್ಟ ಮರಳಿನಿಂದ ಕೂಡಿದ ದಿಣ್ಣೆಯ ಬಳಿಗೆ ಶ್ರೀಕೃಷ್ಣನು ಗೋಪಿಯರನ್ನು ಕರೆದುಕೊಂಡುಹೋದನು. ಶ್ರುತಿಗಳು ಕರ್ಮಕಾಂಡದ ಮೂಲಕವಾಗಿ ಪಾಪವನ್ನು ಪರಿಹರಿಸಿ ಜ್ಞಾನಕಾಂಡದ ಮೂಲಕವಾಗಿ ಆತ್ಮಸಾಕ್ಷಾತ್ಕಾರದ ಮನೋರಥವನ್ನು ಈಡೇರಿಸಿಕೊಡು ವಂತೆ ಶ್ರೀಕೃಷ್ಣನ ದರ್ಶನದಿಂದ ಗೋಪಿಯರು ಮನಸ್ಸಿನ ರೋಗವನ್ನು ಕಳೆದುಕೊಂಡು ಆನಂದಸಾಗರದಲ್ಲಿ ಮುಳುಗಿಹೋದರು. ಶ್ರೀಕೃಷ್ಣನೊಡನೆ ಮರಳಿನ ದಿಣ್ಣೆಗೆ ಹೋದನಂತರ ಗೋಪಿಯರು ವಕ್ಷಃಸ್ಥಳದಲ್ಲಿದ್ದ ಕುಂಕುಮ

ಕೇಸರಿಯಿಂದ ಅಂಕಿತವಾಗಿದ್ದ ತಮ್ಮ ಉತ್ತರೀಯಗಳನ್ನು ಹಾಸಿ ಆತ್ಮ ಬಂಧುವಾದ ಶ್ರೀಕೃಷ್ಣನಿಗೆ ಆಸನವನ್ನು ಕಲ್ಪಿಸಿಕೊಟ್ಟರು. ಮಹಾ-ಮಹಾ ಯೋಗಿಗಳು ತಮ್ಮ-ತಮ್ಮ ಹೃನ್ಮಂದಿರಗಳಲ್ಲಿ ಕಲ್ಪಿಸಿಕೊಡುವ ಆಸನಗಳಲ್ಲಿ ಕುಳಿತು ವಿರಾಜಿಸುವ ಸರ್ವೇಶ್ವರನಾದ ಶ್ರೀಕೃಷ್ಣನು ತನ್ನ ಪರಮಭಕ್ತೆಯರಾದ ಗೋಪಿಯರು ಕಲ್ಪಿಸಿಕೊಟ್ಟ ಚೀರಾಸನದಲ್ಲಿ ಕುಳಿತನು. ಮೂರು ಲೋಕಗಳ ಲಾವಣ್ಯಕ್ಕೂ ಸಾರಭೂತವಾದ, ಅತ್ಯಂತಸೌಂದರ್ಯದಿಂದ ಕೂಡಿದ ಶರೀರವನ್ನು ಧರಿಸಿ ಶ್ರೀಕೃಷ್ಣನು ಗೋಪಿಕಾಸ್ತ್ರೀಯರ ಸಮೂಹ ದಿಂದ ಅರ್ಚಿಸಲ್ಪಡುತ್ತಾ ಬಹಳವಾಗಿ ಪ್ರಕಾಶಿಸಿದನು. ಶ್ರೀಕೃಷ್ಣನು ತನ್ನ ಅಲೌಕಿಕವಾದ ಸೌಂದರ್ಯದಿಂದ ಗೋಪಿಯರ ಮನಸ್ಸನ್ನು ಕೆರಳಿಸುತ್ತಿದ್ದನು. ಅವನನ್ನು ಸೇರಬೇಕೆಂಬ ಅವನೊಡನೆ ಕ್ರೀಡಿಸಬೇಕೆಂಬ ಆಕಾಂಕ್ಷೆಯು ಅವರಲ್ಲಿ ಕ್ಷಣ-ಕ್ಷಣಕ್ಕೂ ವರ್ಧಿಸುತ್ತಿ ದ್ದಿ ತು. ಅಂತೆಯೇ ಅವರು ಮಂದ ಹಾಸದ ಮೂಲಕವಾಗಿ, ಕಡೆಗಣ್ಣಿನ ನೋಟಗಳ ಮೂಲಕವಾಗಿ, ಹುಬ್ಬು ಹಾರಿಸುವುದರ ಮೂಲಕವಾಗಿ ಅವನ ಸೇವೆಯನ್ನು ಮಾಡುತ್ತಿದ್ದರು. ಮತ್ತೆ ಕೆಲವರು ಅವನ ಪಾದಾರವಿಂದಗಳನ್ನು ತೊಡೆಯಮೇಲಿಟ್ಟುಕೊಂಡು ಒತ್ತುತ್ತಿದ್ದರು. ಕೆಲವರು ಅವನ ದುಂಡಾದ ತೋಳುಗಳನ್ನು ಹಿಡಿದು ಒತ್ತುವರು. ಅವರ ಸೇವೆಗೆ ಆತನು ಪ್ರತಿಕ್ರಿಯೆಯನ್ನೇ ತೋರದಿರಲು ಸ್ವಲ್ಪ ಕೋಪಗೊಂಡ ಗೋಪಿಯರು ತಮ್ಮ ಪ್ರಿಯಕರನಿಗೆ ಹೇಳಿದರು :

**ಭಜತೋಽನುಭಜನ್ತ್ಯೇಕ ಏಕ ಏತದ್ವಿಪರ್ಯಯಮ್ ।**
**ನೋಭಯಾಂಶ್ಚ ಭಜನ್ತ್ಯೇಕ ಏತನ್ನೋ ಬ್ರೂಹಿ ಸಾಧು ಭೋಃ ॥**

"ಪ್ರಾಣನಾಥನೇ! ಲೋಕದಲ್ಲಿ ಕೆಲವರು ತಮ್ಮನ್ನು ಯಾರು ಪ್ರೀತಿಸುವರೋ ಅವರನ್ನು ತಾವೂ ಪ್ರೀತಿಸುತ್ತಾರೆ. ಮತ್ತೆ ಕೆಲವರು ತಮ್ಮನ್ನು ಪ್ರೀತಿಸದವರನ್ನೂ ಪ್ರೀತಿಸುತ್ತಾರೆ. ಮತ್ತೆ ಕೆಲವರು ತಮ್ಮನ್ನು ಪ್ರೀತಿಸಿದವರನ್ನೂ ಪ್ರೀತಿಸುವುದಿಲ್ಲ ; ಪ್ರೀತಿಸದೇ ಇದ್ದವರನ್ನೂ ಪ್ರೀತಿಸುವು ದಿಲ್ಲ. ಇದರ ರಹಸ್ಯವೇನೆಂಬುದನ್ನು ನಮಗೆ ದಯಮಾಡಿ ಹೇಳು."

ಭಗವಂತನು ಹೇಳುತ್ತಾನೆ :

**ಮಿಥೋ ಭಜನ್ತಿ ಯೇ ಸಖ್ಯಃ ಸ್ವಾರ್ಥೈಕಾನ್ತೋದ್ಯಮಾ ಹಿ ತೇ ।**
**ನ ತತ್ರ ಸೌಹೃದಂ ಧರ್ಮಃ ಸ್ವಾರ್ಥಾರ್ಥಂ ತದ್ಧಿ ನಾನ್ಯಥಾ ॥೧೭॥**

“ನನ್ನ ಪ್ರಿಯಗೆಳತಿಯರೇ! ಯಾರು, ತಮ್ಮನ್ನು ಪ್ರೀತಿಸಿದವರನ್ನು ಪ್ರೀತಿಸುವರೋ ಅವರ ಪ್ರೀತಿಯೆಂಬ ಉದ್ಯೋಗವು ಕೇವಲ ಸ್ವಾರ್ಥಸಾಧಕ ವಾದುದು. ಕೊಟ್ಟು ತೆಗೆದುಕೊಳ್ಳುವ ವ್ಯವಹಾರ ಅದು. ಅಂತಹ ವ್ಯವಹಾರಗಳಲ್ಲಿ ಧರ್ಮವೂ ಇರುವುದಿಲ್ಲ ; ಸೌಹಾರ್ದವೂ ಇರುವುದಿಲ್ಲ. ಸ್ವಾರ್ಥಸಾಧನೆಗಾಗಿಯೇ ಪ್ರೇಮದ ವಿನಿಮಯವಾಗುತ್ತದೆ.

**ಭಜನ್ತ್ಯಭಜತೋ ಯೇ ವೈ ಕರುಣಾಃ ಪಿತರೋ ಯಥಾ ।**
**ಧರ್ಮೋ ನಿರಪವಾದೋತ್ರ ಸೌಹೃದಂ ಚ ಸುಮಧ್ಯಮಾಃ ॥೧೮॥**

ಸುಂದರವಾದ ' ನಡುವುಳ್ಳ ಗೋಪಿಯರೇ! ಪ್ರೀತಿಸದೇ ಇರುವವ ರನ್ನೂ ಯಾರು ಪ್ರೀತಿಸುವರೋ ಅವರು ಕರುಣಾಳುಗಳು. ತಂದೆ-ತಾಯಿ ಗಳಂತಿರುವವರು. ಅವರ ಪ್ರೇಮವು ನಿರ್ದುಷ್ಟವಾದದ್ದು. ಅಂತಹ ನಿಷ್ಕಳಂಕ ಪ್ರೇಮದಲ್ಲಿ ಪುಣ್ಯವೂ ಇರುತ್ತದೆ. ಸೌಹಾರ್ದವೂ ಇರುತ್ತದೆ.

**ಭಜತೋಽಪಿ ನ ವೈ ಕೇಚಿದ್ಭಜನ್ತ್ಯಭಜತಃ ಕುತಃ ।**
**ಆತ್ಮಾರಾಮಾ ಹ್ಯಾಪ್ತಕಾಮಾ ಅಕೃತಜ್ಞಾ ಗುರುದ್ರುಹಃ ॥೧೯॥**

ಪ್ರೀತಿಸಿದವರನ್ನೇ ಪ್ರೀತಿಸುವುದಿಲ್ಲವೆಂದಮೇಲೆ ಪ್ರೀತಿಸದವರ ವಿಷಯವಾಗಿ ಹೇಳಬೇಕಾಗಿಯೇ ಇಲ್ಲ. ಪ್ರೀತಿಸಿದವರನ್ನೂ ಪ್ರೀತಿಸದವರು ನಾಲ್ಕು ಬಗೆಯಾಗಿದ್ದಾರೆ : 1) ಆತ್ಮಾರಾಮರು : ಬ್ರಹ್ಮಜ್ಞಾನಕ್ಕಾಗಿ ಧ್ಯಾನಾಸಕ್ತ ರಾದ ಯೋಗಿಗಳು ಅಥವಾ ಬ್ರಹ್ಮಭಾವದಿಂದ ಆನಂದಪಡುತ್ತಿರುವವರು. 2) ಆಪ್ತಕಾಮರು : ಪ್ರಾಪಂಚಿಕಸೌಖ್ಯವನ್ನು ತ್ಯಜಿಸಿದ, ಪ್ರಪಂಚದ ಸಂಬಂಧವನ್ನು ಬಿಟ್ಟಿರುವ, ಇಷ್ಟಾರ್ಥವನ್ನು ಪಡೆದಿರುವ ಜೀವನ್ಮುಕ್ತರು. 3) ಅಕೃತಜ್ಞಾಃ : ಮಾಡಿದ ಉಪಕಾರವನ್ನು ಸ್ಮರಿಸದ ಕೃತಘ್ನರು. 4) ಗುರುದ್ರುಹಃ : ಗುರುಜನರಿಗೂ ದ್ರೋಹಮಾಡುವವರು. ಈ ನಾಲ್ಕು ಬಗೆಯ ಮನುಷ್ಯರೂ ಪ್ರೀತಿಸಿದವರನ್ನೂ ಪ್ರೀತಿಸುವುದಿಲ್ಲ.

**ನಾಹಂ ತು ಸಖ್ಯೋ ಭಜತೋಽಪಿ ಜನ್ತೂನ್ ।**
**ಭಜಾಮ್ಯಮೀಷಾಮನುವೃತ್ತಿವೃತ್ತಯೇ ।**
**ಯಥಾಧನೋ ಲಬ್ಧಧನೇ ವಿನಷ್ಟೇ**
**ತಚ್ಚಿನ್ತಯಾನ್ಯನ್ನಿಭೃತೋ ನ ವೇದ ॥೨೦॥**

ನಾನು ಈ ನಾಲ್ವರಲ್ಲಿ ಒಬ್ಬನಾಗಿರದಿದ್ದರೂ ನನ್ನನ್ನು ಪ್ರೀತಿಸಿದವ

ರನ್ನು ನಾನೂ ಪ್ರೀತಿಸಹೋಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಅವರ ಚಿತ್ತವೃತ್ತಿಯು ನಿರಂತರವಾಗಿ ನನ್ನನ್ನೇ ಅನುಸರಿಸಿ ಇರಬೇಕೆಂಬುದೇ ನನ್ನ ಇಷ್ಟವಾಗಿದೆ. ಒಬ್ಬ ದರಿದ್ರನಿರುತ್ತಾನೆ. ಒಮ್ಮೆ ಅವನಿಗೆ ಅಪಾರವಾದ ಹಣವು ಸಿಕ್ಕಿಬಿಡುತ್ತದೆ. ಆನಂದಸಾಗರದಲ್ಲಿ ಮುಳುಗಿರುತ್ತಾನೆ. ಮತ್ತೊಂದು ಸಂದರ್ಭದಲ್ಲಿ ಅವನ ಸಂಪತ್ತೆಲ್ಲವೂ ನಷ್ಟವಾಗಿಹೋಗುತ್ತದೆ. ಅವನು ಯಾವಾಗಲೂ ನಷ್ಟವಾಗಿ ಹೋದ ಹಣದ ವಿಷಯವಾಗಿಯೇ ಚಿಂತಿಸುತ್ತಿರುತ್ತಾನೆ. ಆದುದರಿಂದ ಯಾವಾಗಲೂ ನಾನು ನನ್ನನ್ನು ಪ್ರೀತಿಸುವವರಿಗೆ ಸಿಕ್ಕಿಯೂ ಸಿಕ್ಕದವನಂತಿರುತ್ತೇನೆ. ಅವರ ಅಮರ ಪ್ರೇಮವು ದೃಢವಾಗಬೇಕೆಂಬುದೇ ನನ್ನ ಆಶಯವಾಗಿದೆ.

**ಏವಂ ಮದರ್ಥೋಜ್ಝಿತಲೋಕವೇದ-**
**ಸ್ವಾನಾಂ ಹಿ ವೋ ಮಯ್ಯನುವೃತ್ತಯೇಽಬಲಾಃ ।**
**ಮಯಾ ಪರೋಕ್ಷಂ ಭಜತಾ ತಿರೋಹಿತಂ**
**ಮಾಸೂಯಿತುಂ ಮಾರ್ಹಥ ತತ್ಪ್ರಿಯಂ ಪ್ರಿಯಾಃ ॥೨೧॥**

ಅಬಲೆಯರೇ! ನೀವೆಲ್ಲರೂ ನನ್ನ ಸಲುವಾಗಿಯೇ ಲೋಕ ಮರ್ಯಾದೆಯನ್ನೂ, ಶಾಸ್ತ್ರಮರ್ಯಾದೆಯನ್ನೂ, ಸ್ವಜನರನ್ನೂ ಪರಿತ್ಯಜಿಸಿ ನನ್ನಲ್ಲಿಯೇ ಅನುರಕ್ತರಾಗಿ ನನ್ನ ಬಳಿಗೆ ಬಂದಿರಿ. ನಿಮಗೆ ನನ್ನಲ್ಲಿ ಇನ್ನೂ ಹೆಚ್ಚಿನ ಪ್ರೇಮವು ಉಂಟಾಗಲು ಮತ್ತು ನನ್ನನ್ನೇ ಅನುವರ್ತಿಸುವಂತೆ ಮಾಡಲು ನಿಮಗೆ ಕಾಣದಂತೆ ಮರೆಯಾಗಿದ್ದುಕೊಂಡು ನಿಮ್ಮನ್ನೇ ಪರೋಕ್ಷದಲ್ಲಿ ಧ್ಯಾನಿಸುತ್ತಿದ್ದೆನು. ಆದುದರಿಂದ ಪ್ರಿಯತಮೆಯರಾದ ನೀವು ನನ್ನಲ್ಲಿ ದೋಷವೆಣಿಸಬೇಡಿರಿ. ನೀವೆಲ್ಲರೂ ನನಗೆ ಪ್ರಿಯರಾಗಿರುವಿರಿ. ಅಂತೆಯೇ ನಿಮ್ಮೆಲ್ಲರಿಗೂ ನಾನು ಪ್ರಿಯನಾಗಿದ್ದೇನೆ.

**ನ ಪಾರಯೇಽಹಂ ನಿರವದ್ಯಸಂಯುಜಾಂ**
**ಸ್ವಸಾಧುಕೃತ್ಯಂ ವಿಬುಧಾಯುಷಾಪಿ ವಃ ।**
**ಯಾ ಮಾಭಜನ್ ದುರ್ಜರಗೇಹಶೃಙ್ಖಲಾಃ**
**ಸಂವೃಶ್ಚ್ಯ ತದ್ವಃ ಪ್ರತಿಯಾತು ಸಾಧುನಾ ॥೨೨॥**

ಪ್ರೇಯಸಿಯರೇ! ಋಷಿ-ಮುನಿಗಳಿಂದಲೂ ಪರಿತ್ಯಜಿಸಲು ಸಾಧ್ಯವಾಗದ–'ನನ್ನ ಮನೆ, ನನ್ನ ಪತಿ, ನನ್ನ ಪುತ್ರ'–ಇವೇ ಮುಂತಾದ ಸಂಸಾರದ ಸಂಕೋಲೆಗಳನ್ನು ಕತ್ತರಿಸಿ ನನ್ನ ಬಳಿಗೆ ಬಂದಿರುವಿರಿ. ನನ್ನೊಡನೆ ನಿರ್ದುಷ್ಟವಾದ ಭಕ್ತಿಯ ಸಂಬಂಧವನ್ನು ಹೊಂದಿರುವ ನಿಮಗೆ ಸರಿಯಾದ ಪ್ರತ್ಯುಪಕಾರವನ್ನು, ದೇವತೆಗಳ ಆಯುರ್ಮಾನವನ್ನು ಹೊಂದಿದರೂ ಮಾಡಲು ನನಗೆ ಸಾಧ್ಯವಾಗುವುದಿಲ್ಲ. ಆದುದರಿಂದ ನೀವು ಮಾಡುವ ಸತ್ಕಾರದ ಸ್ವೀಕಾರವನ್ನೇ ನಿಮಗೆ ನಾನು ಮಾಡುವ ಪ್ರತ್ಯುಪಕಾರವೆಂದು ಪರಿಗಣಿಸಿರಿ. ಇದರಿಂದ ನಿಮ್ಮ ಮನೋರಥವು ಈಡೇರಲಿ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೨ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂದ ೩೩ನೆಯ ಅಧ್ಯಾಯ

## ಮಹಾರಾಸಕ್ರೀಡೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಇತ್ಥಂ ಭಗವತೋ ಗೋಪ್ಯಃ ಶ್ರುತ್ವಾ ವಾಚಃ ಸುಪೇಶಲಾಃ ।**
**ಜಹುರ್ವಿರಹಜಂ ತಾಪಂ ತದಙ್ಗೋಪಚಿತಾಶಿಷಃ ॥೧॥**

ಪರೀಕ್ಷಿತಮಹಾರಾಜ! ಗೋಪಿಕಾಸ್ತ್ರೀಯರು ಭಗವಂತನ ಪ್ರೇಮಪೂರ್ಣವಾದ ಮತ್ತು ಸುಮಧುರವಾದ ಈ ಮಾತನ್ನು ಕೇಳಿ ವಿರಹತಾಪದಿಂದ ಮುಕ್ತರಾದರು. ಸೌಂದರ್ಯನಿಧಿಯಾದ, ಪ್ರಾಣಪ್ರಿಯನಾದ ಶ್ರೀಕೃಷ್ಣನ ಅಂಗಸಂಗದಿಂದ ಸಫಲಮನೋರಥರೂ ಆದರು.

ಬಳಿಕ ಆ ವೃಂದಾವನದಲ್ಲಿ ಶ್ರೀಕೃಷ್ಣನು, ಆನಂದತುಂದಿಲರಾಗಿ ಪರಸ್ಪರವಾಗಿ ತೋಳುಗಳನ್ನು ಹಿಡಿದುಕೊಂಡು ತನ್ನನ್ನು ಅನುಸರಿಸಿ ನಿಂತಿರುವ ಸ್ತ್ರೀರತ್ನಗಳೊಡನೆ ಯಮುನಾನದಿಯ ಮಳಲುಗುಡ್ಡೆಯಲ್ಲಿ ರಾಸಕ್ರೀಡೆಯಾಡಲು ಪ್ರಾರಂಭಿಸಿದನು.

ಯೋಗೇಶ್ವರನಾದ ಶ್ರೀಕೃಷ್ಣನು ಇಬ್ಬಿಬ್ಬರು ಗೋಪಿಯರ ಮಧ್ಯದಲ್ಲಿ ಒಬ್ಬೊಬ್ಬ ಶ್ರೀಕೃಷ್ಣನಿರುವಂತೆ ಪ್ರಕಟವಾಗಿ ಆ ಇಬ್ಬರು ಗೋಪಿಯರ

ಹೆಗಲುಗಳ ಮೇಲೂ ತನ್ನ ತೋಳುಗಳನ್ನು ಹಾಕಿಕೊಂಡಿದ್ದನು. ಇದರಿಂದಾಗಿ ಪ್ರತಿಯೊಬ್ಬ ಗೋಪಿಯೂ ಶ್ರೀಕೃಷ್ಣನು ತನ್ನ ಹತ್ತಿರವೇ ಇರುವನೆಂದು ಭಾವಿಸಿಕೊಂಡರು.

ಹೀಗೆ ಸಾವಿರ-ಸಾವಿರ ಗೋಪಿಯರಿಂದ ಶೋಭಾಯಮಾನವಾಗಿ ಕಾಣುತ್ತಿದ್ದ ರಾಸೋತ್ಸವವು ಪ್ರಾರಂಭವಾಯಿತು. ಆ ಸಮಯದಲ್ಲಿ ಆಕಾಶದಲ್ಲಿ ನೂರಾರು ವಿಮಾನಗಳು ನೆರೆದುವು. ರಾಸಕ್ರೀಡೆಯನ್ನು ನೋಡ ಬೇಕೆಂಬ ತವಕದಿಂದ ಕೂಡಿದ ಮನಸ್ಸುಳ್ಳವರಾಗಿದ್ದ ಸಕಲದೇವತೆಗಳೂ ತಮ್ಮ-ತಮ್ಮ ಪತ್ನಿಯರೊಡನೆ ವಿಮಾನಗಳಲ್ಲಿ ಆಗಮಿಸಿದರು.* ದೇವ ದುಂದುಭಿಗಳು ಮೊಳಗಿದುವು. ರಾಸಮಂಡಲದ ಮೇಲೆ ಪುಷ್ಪವೃಷ್ಟಿಗಳಾ ದುವು. ಗಂಧರ್ವಶ್ರೇಷ್ಠರು ತಮ್ಮ-ತಮ್ಮ ಪತ್ನಿಯರೊಡನೆ ಕೃಷ್ಣಭಗವಂತನ ನಿರ್ಮಲವಾದ ಯಶಸ್ಸನ್ನು ಗಾನಮಾಡಿದರು. ರಾಸಮಂಡಲದಲ್ಲಿದ್ದ ಸಮಸ್ತಗೋಪಿಯರೂ ತಮ್ಮ ಪ್ರಿಯತಮನಾದ ಶ್ರೀಕೃಷ್ಣನೊಡನೆ ರಾಸಕ್ರೀಡೆ ಯಾಡಲು ಪ್ರಾರಂಭಿಸಿದರು. ನೃತ್ಯವಾಡುತ್ತಿದ್ದಾಗ ಗೋಪಿಕಾಸ್ತ್ರೀಯರ ಕೈಕಡಗಗಳ, ಕಾಲಂದುಗೆಗಳ ಮತ್ತು ಅವುಗಳೊಡನಿದ್ದ ಕಿರುಗೆಜ್ಜೆಗಳ ಸಮ್ಮಿಶ್ರವಾದ ಕಲಕಲಶಬ್ದವು ಸರ್ವತ್ರ ಕೇಳಿಬರುತ್ತಿದ್ದಿತು. ಸುವರ್ಣಮಯ ವಾದ ಮಣಿಗಳ ಮಧ್ಯದಲ್ಲಿ ಮಹಾಮರಕತಮಣಿಯು ವಿರಾಜಮಾನವಾಗಿ ಕಾಣುವಂತೆ ಕಡುಚೆಲುವೆಯರಾದ ಗೋಪಿಕಾಸ್ತ್ರೀಯರ ಮಧ್ಯದಲ್ಲಿ ನೀಲಮೇಘಶ್ಯಾಮನಾದ, ದೇವಕಿಯ ಮಗನಾದ ಶ್ರೀಕೃಷ್ಣನು ಬಹಳವಾಗಿ ರಾರಾಜಿಸಿದನು.

ರಾಸನೃತ್ಯವನ್ನಾಡುವಾಗ ಗೋಪಿಕಾಸ್ತ್ರೀಯರು ತಾಳಕ್ಕೆ ಅನುಸಾರವಾಗಿ ಪಾದಗಳನ್ನಿಡುತ್ತಿದ್ದರು. ಪಾದವಿನ್ಯಾಸಕ್ಕೆ ಅನುಗುಣವಾಗಿ ಕೈಗಳಲ್ಲಿ ಮುದ್ರೆಗಳನ್ನು ತೋರಿಸುತ್ತಾ ಎಡ-ಬಲತೋಳುಗಳನ್ನು ಮುಂದಕ್ಕೂ ಪಕ್ಕಗಳಿಗೂ ಆಡಿಸುತ್ತಿದ್ದರು. ತಾಳಕ್ಕೆ ಅನುಸಾರವಾಗಿ ಕೆಲವು ವೇಳೆ ನಿಧಾನ

---

* ನರ್ತಕೀಭಿರನೇಕಾಭಿರ್ಮಣ್ಡಲೀಭೂಯ ನರ್ತನಮ್ ।
ಯತ್ರೈಕೋ ನೃತ್ಯತಿ ನಟಸ್ತದ್ವೈ ಹಲ್ಲೀಶಕಂ ವಿದುಃ ॥

ಮಂಡಲಾಕಾರವಾಗಿ ಹಲವು ಮಂದಿ ನರ್ತಕಿಯರೊಡನೆ ಒಬ್ಬ ಗಂಡಸು ಕುಣಿಯುವ ಆಟಕ್ಕೆ ರಾಸಕ್ರೀಡೆ ಅಥವಾ ಹಲ್ಲೀಶಕವೆಂದು ಹೆಸರು. (ಭಾವಾರ್ಥದೀಪಿಕಾ)

ವಾಗಿಯೂ ಕೆಲವು ವೇಳೆ ವೇಗವಾಗಿಯೂ ಹೆಜ್ಜೆಗಳನ್ನಿಡುವರು. ಕೈಗಳ ವಿನ್ಯಾಸಕ್ಕೆ ಅನುಗುಣವಾಗಿ ತಲೆಗಳನ್ನೂ ಕಣ್ಣುಗಳನ್ನೂ ಆಡಿಸುವರು. ಕೆಲವು ವೇಳೆ ಭಾವಪೂರ್ಣವಾಗಿ ನಗುವರು. ಹುಬ್ಬುಹಾರಿಸುವರು. ಕಡೆಗಣ್ಣಿನಿಂದ ನೋಡುವರು. ಕೆಲವೊಮ್ಮೆ ನೃತ್ಯವಾಡುತ್ತಿದ್ದಂತೆಯೇ ಕಿಲಕಿಲನೆ ನಗುವರು. ಸೊಂಟವನ್ನು ಬಳುಕಿಸುವರು. ನರ್ತನಮಾಡುತ್ತಾ ಕುಳಿತಾಗ, ಎದ್ದಾಗ, ಬಗ್ಗಿದಾಗ ಅವರ ಕುಪ್ಪಸಗಳು ಕುಲುಕಾಡುತ್ತಿದ್ದುವು. ಕುಂಡಲಗಳು ಕಪೋಲಗಳಲ್ಲಿ ಕುಣಿದಾಡುತ್ತಿದ್ದುವು. ಮುಖವು ಬೆವರುತ್ತಿದ್ದಿತು. ತುರುಬು ಗಳು ಬಿಚ್ಚಿಹೋಗುತ್ತಿದ್ದುವು. ಒಡ್ಯಾಣಗಳು ಸಡಿಲವಾಗುತ್ತಿದ್ದುವು. ಹೀಗೆ ಶ್ರೀಕೃಷ್ಣನ ಪ್ರಿಯೆಯರಾದ ಗೋಪಿಕಾಸ್ತ್ರೀಯರು ನಾನಾಭಂಗಿಗಳಲ್ಲಿ ಶ್ರೀಕೃಷ್ಣನಿಗೆ ಉಲ್ಲಾಸವಾಗುವಂತೆ ನೃತ್ಯವಾಡುತ್ತಾ ಅವನ ಲೀಲಾಪ್ರಸಂಗ ಗಳನ್ನು ಕರ್ಣಾನಂದಕರವಾಗಿ ಹಾಡುತ್ತಾ ಮೇಘಗಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮಿಂಚುಗಳಂತೆಯೇ ಪ್ರಕಾಶಿಸಿದರು. ರಾಸಪ್ರಿಯರಾಗಿ, ಇಂಪಾದ ಕಂಠಮಾಧುರ್ಯವುಳ್ಳ ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ಆನಂದಸಾಗರದಲ್ಲಿ ಮುಳುಗಿ ಆತನೊಡನೆ ರಾಸನೃತ್ಯವನ್ನಾಡುತ್ತಿದ್ದ ಆ ಗೋಪಿಯರು ವಿಶ್ವವನ್ನೇ ವ್ಯಾಪಿಸುವಷ್ಟು ಗಟ್ಟಿಯಾಗಿ ಹಾಡತೊಡಗಿದರು. ಒಬ್ಬಳು ಗೋಪಿಯು ಶ್ರೀಕೃಷ್ಣನೊಡನೆ ಧ್ವನಿಗೂಡಿಸಿ ಹಾಡಲು ಪ್ರಯತ್ನಿಸಿದಳು. ಆದರೆ ಶ್ರೀಕೃಷ್ಣನ ಧ್ವನಿಯೊಡನೆ ಅವಳ ಧ್ವನಿಯು ಸೇರಲಿಲ್ಲ. ಶ್ರೀಕೃಷ್ಣನ ಧ್ವನಿಗಿಂತ ಉಚ್ಚಸ್ವರದಲ್ಲಿ ಗೋಪಿಯ ಗಾನವು ಕೇಳಿಬರುತ್ತಿತ್ತು. ಅದನ್ನೇ ಶ್ರೀಕೃಷ್ಣನು–'ಭಲೇ! ಭಲೇ! ಕರ್ಣಾನಂದಕರವಾಗಿದೆ'–ಎಂದು ಹೇಳುತ್ತಾ ಅವಳ ಹಾಡಿಗೆ ಅನುಗುಣವಾಗಿ ಧ್ರುವವೆಂಬ ತಾಳವನ್ನು ಹಾಕುತ್ತಾ ಅವಳನ್ನು ಬಹುಮಾನಿಸಿದನು.

ಒಬ್ಬಳು ಗೋಪಿಯು ರಾಸನೃತ್ಯದಿಂದ ಬಹಳವಾಗಿ ಬಳಲಿದಳು. ಬಳೆಗಳ ರೂಪದಲ್ಲಿ ಮುಂಗೈಗಳಿಗೂ ತೋಳುಗಳಿಗೂ ಕಟ್ಟಿಕೊಂಡಿದ್ದ ಮಲ್ಲಿಗೆಯ ದಂಡೆಗಳು ಕಳಚಿಬೀಳುತ್ತಿದ್ದುವು. ತತ್ತರಿಸಿಬೀಳುವುದರಲ್ಲಿದ್ದವಳು ಪಕ್ಕದಲ್ಲಿದ್ದ ಶ್ರೀಕೃಷ್ಣನ ಭುಜಗಳನ್ನು ಹಿಡಿದು ಹಾಗೆಯೇ ನಿಂತುಕೊಂಡಳು.

ಶ್ರೀಕೃಷ್ಣನು ತನ್ನ ಒಂದು ತೋಳನ್ನು ಒಬ್ಬ ಗೋಪಿಯ ಹೆಗಲ ಮೇಲಿಟ್ಟಿದ್ದನು. ಸ್ವಾಭಾವಿಕವಾಗಿಯೇ ಶ್ರೀಕೃಷ್ಣನ ತೋಳು ಕಮಲದ

ವಾಸನೆಯುಳ್ಳದ್ದಾಗಿತ್ತು. ಅದು ಚಂದನದಿಂದಲೂ ಲೇಪಿತವಾಗಿದ್ದು ಅದನ್ನು ಮೂಸಿ ನೋಡಿದ ಆ ಗೋಪಿಯು ರೋಮಾಂಚಿತಳಾಗಿ ಆ ತೋಳಿಗೆ ಮುತ್ತಿಟ್ಟಳು. ಮತ್ತೊಬ್ಬ ಗೋಪಿಯು ನಾಟ್ಯದಿಂದ ಕುಣಿದಾಡುತ್ತಿದ್ದ ಕುಂಡಲದಿಂದ ಸಮಲಂಕೃತವಾಗಿದ್ದ ತನ್ನ ಕಪೋಲವನ್ನು ಶ್ರೀಕೃಷ್ಣನ ಕಪೋಲದ ಮೇಲಿಡಲು ಆಕೆಯ ಆಶಯವನ್ನು ತಿಳಿದ ಶ್ರೀಕೃಷ್ಣನು ಜಗಿದ ತಾಂಬೂಲವನ್ನು ಅವಳ ಬಾಯಲ್ಲಿಟ್ಟು ಆಕೆಯ ಕೆನ್ನೆಯನ್ನು ಚುಂಬಿಸಿದನು. ಶ್ರೀಕೃಷ್ಣನ ಪಕ್ಕದಲ್ಲಿದ್ದ ಮತ್ತೊಬ್ಬ ಗೋಪಿಯು ಕಾಲಂದಿಗೆ-ಡಾಬುಗಳ ಶಬ್ದದೊಡನೆ ನಾಟ್ಯವಾಡುತ್ತಾ, ಹಾಡುತ್ತಾ ಬಹಳವಾಗಿ ಬಳಲಿ ಬೆಂಡಾಗಿ ಪಕ್ಕದಲ್ಲಿದ್ದ ಶ್ರೀಕೃಷ್ಣನ ಮಂಗಳಕರವಾದ ಕರಕಮಲಗಳನ್ನು ತನ್ನ ಸ್ತನಗಳ ಮೇಲೆ ಇಟ್ಟುಕೊಂಡಳು.

ಪರೀಕ್ಷಿತನೇ! ಗೋಪಿಯರ ಸೌಭಾಗ್ಯವು ಲಕ್ಷ್ಮೀದೇವಿಯ ಸೌಭಾಗ್ಯಕ್ಕಿಂತಲೂ ಮಿಗಿಲಾದುದು. ಲಕ್ಷ್ಮೀದೇವಿಯ ಪರಮಪ್ರಿಯನಾದ, ಏಕಾಂತ ಭಕ್ತಪ್ರಿಯನಾದ ಶ್ರೀಕೃಷ್ಣನನ್ನು ತಮ್ಮ ಪ್ರಿಯತಮನನ್ನಾಗಿ ಮಾಡಿಕೊಂಡು ಅವನಿಂದ ಆಲಿಂಗಿಸಲ್ಪಟ್ಟವರಾಗಿ, ಆತನ ಲೀಲಾಪ್ರಸಂಗಗಳನ್ನು ಸುಮಧುರವಾಗಿ ಗಾನಮಾಡುತ್ತಾ ಗೋಪಿಯರು ರಾರಾಜಿಸಿದರು. ಗೋಪಿಯರ ಕಿವಿಗಳು ಕಮಲದ ಕುಂಡಲಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದುವು. ಅವರ ಕಪೋಲಗಳಲ್ಲಿ ಗುಂಗುರುಕೂದಲುಗಳು ಕಂಗೊಳಿಸುತ್ತಿದ್ದುವು. ಮುತ್ತಿನಂತಹ ಬೆವರಿನ ಹನಿಗಳಿಂದ ಅವರ ಮುಖವು ಸಮಲಂಕೃತವಾಗಿದ್ದಿತು. ರಾಸಸಭೆಯಲ್ಲಿ ಶ್ರೀಕೃಷ್ಣನೊಡನೆ ಗೋಪಿಯರು ನರ್ತನ ಮಾಡುವಾಗ ಅವರ ತಲೆಯಲ್ಲಿದ್ದ ಹೂವಿನ ದಂಡೆಯು ಜಾರಿ ಬೀಳುತ್ತಿದ್ದಿತು. ಗಾಯಕರಂತೆ ದುಂಬಿಗಳು ಝೇಂಕರಿಸುತ್ತಿದ್ದುವು. ಕೈ-ಕಾಲುಗಳ ಕಡಗಗಳ ಮತ್ತು ಒಡ್ಯಾಣಗಳ ಶಬ್ದಗಳೇ ರಾಸನಾಟ್ಯಕ್ಕೆ ಪಕ್ಕವಾದ್ಯಗಳಾಗಿದ್ದುವು. ಬಾಲಕನು ಕನ್ನಡಿಯಲ್ಲಿ ಕಾಣುವ ತನ್ನ ಬಿಂಬದೊಡನೆ ನಿರ್ವಿಕಾರಭಾವದಿಂದ ಕ್ರೀಡಿಸುವಂತೆ ಶ್ರೀಕೃಷ್ಣನು ತನ್ನ ಪ್ರತಿಬಿಂಬರೂಪರಾದ ವ್ರಜಗೋಪಿಯರೊಡನೆ ನಿರ್ವಿಕಾರಭಾವದಿಂದ ಆಲಿಂಗನ, ಹಸ್ತಸ್ಪರ್ಶ, ಪ್ರೇಮಾವಲೋಕನ, ಕಿರುನಗೆ, ಕುಡಿನೋಟ ಇತ್ಯಾದಿಗಳಿಂದ ಕ್ರೀಡಿಸುತ್ತಿದ್ದನು.

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣನ ಅಂಗಸಂಗದಿಂದ

ಗೋಪಿಕಾಸ್ತ್ರೀಯರ ಇಂದ್ರಿಯಗಳು ಪ್ರೇಮದಿಂದಲೂ, ಆನಂದದಿಂದಲೂ ತಬ್ಬಿಬ್ಬಾದುವು. ಜಾರುತ್ತಿದ್ದ ಪುಷ್ಪಮಾಲಿಕೆಗಳನ್ನಾಗಲೀ, ಒಡವೆಗಳನ್ನಾಗಲೀ, ಕೆದರಿದ ತಲೆಗೂದಲುಗಳನ್ನಾಗಲೀ, ಜಾರಿಬೀಳುವುದರಲ್ಲಿದ್ದ ಸೀರೆಗಳನ್ನಾಗಲೀ, ಕುಪ್ಪಸಗಳನ್ನಾಗಲೀ ಒಡನೆಯೇ ಸರಿಪಡಿಸಿಕೊಳ್ಳುವುದಕ್ಕೆ ಅವರಿಂದ ಸಾಧ್ಯವಾಗಲೇ ಇಲ್ಲ. ಶ್ರೀಕೃಷ್ಣನ ರಾಸನೃತ್ಯವನ್ನು ನೋಡಲು ಬಂದಿದ್ದ ದೇವತಾಸ್ತ್ರೀಯರೂ ಅದರ ಸೊಬಗನ್ನು ಕಂಡು ಕಾಮಪೀಡಿತರಾಗಿ ವಿಮೋಹಗೊಂಡರು. ಅಂತೆಯೇ ಗ್ರಹ-ನಕ್ಷತ್ರ-ತಾರೆಗಳಿಂದ ಕೂಡಿದ ಚಂದ್ರನೂ ಅಚ್ಚರಿಗೊಂಡನು. ಭಗವಂತನಾದ ಶ್ರೀಕೃಷ್ಣನು ಆತ್ಮಾರಾಮನಾಗಿದ್ದರೂ ಅಲ್ಲಿ ಎಷ್ಟು ಮಂದಿ ಗೋಪಿಕಾಸ್ತ್ರೀಯರಿದ್ದರೋ ಅಷ್ಟೇ ಸಂಖ್ಯೆಯಲ್ಲಿ ತನ್ನ ಪ್ರತಿರೂಪಗಳನ್ನು ಸೃಷ್ಟಿಸಿ ಪ್ರತಿಯೊಬ್ಬ ಗೋಪಿಯೊಡನೆಯೂ ಲೀಲಾವಿನೋದದಿಂದ ಕ್ರೀಡಿಸಿದನು. ಮಹಾರಾಜ! ಪರಮದಯಾಳುವಾದ ಶ್ರೀಕೃಷ್ಣನು ರತಿಕ್ರೀಡೆಯಿಂದ ಬಳಲಿದ್ದ ತನ್ನ ಪ್ರೇಯಸಿಯರ ಮುಖಕಮಲಗಳನ್ನು ತನ್ನ ಸುಕೋಮಲವಾದ ಮತ್ತು ಸುಖಕರವಾದ ಕೈಗಳಿಂದ ನೇವರಿಸಿದನು. ಭಾಗ್ಯಶಾಲಿಗಳಾದ ಗೋಪಿಯರಿಗೆ ಭಗವಂತನ ಕರಸ್ಪರ್ಶದಿಂದಲೂ ನಖಕ್ಷತದಿಂದಲೂ ಪರಮಾನಂದವಾಯಿತು. ಇದಕ್ಕೆ ಪ್ರತಿಯಾಗಿ ಅವರೂ ಕೂಡ ಸುವರ್ಣಮಯವಾದ ಕುಂಡಲಗಳಿಂದ ಪ್ರಕಾಶಮಾನವಾಗಿ ಕಾಣುತ್ತಿದ್ದ ಕೆನ್ನೆಗಳಿಂದಲೂ, ಗುಂಗುರುಕೂದಲುಗಳಿಂದ ಸಮಲಂಕೃತವಾದ ಮುಖಾರವಿಂದದಿಂದಲೂ, ಪ್ರೇಮಪೂರ್ಣವಾದ ಕಡೆಗಣ್ಣಿನ ನೋಟದಿಂದಲೂ, ಅಮೃತಪ್ರಾಯವಾದ ಮಂದಹಾಸದಿಂದಲೂ ಭಗವಂತನಾದ ಶ್ರೀಕೃಷ್ಣನಿಗೆ ಸೇವೆಯನ್ನು ಸಲ್ಲಿಸಿ ಪರಮಪವಿತ್ರವಾದ ಅವನ ಲೀಲಾಪ್ರಸಂಗಗಳನ್ನು ಕರ್ಣಾನಂದಕರವಾಗಿ ಹಾಡತೊಡಗಿದರು. ಅನಂತರ–ಆಯಾಸಗೊಂಡಿರುವ ಸಲಗವು ಹೆಣ್ಣಾನೆಗಳೊಡನೆ ಅಣೆಕಟ್ಟನ್ನು ಭೇದಿಸಿಕೊಂಡು ನೀರಿನೊಳಗೆ ನುಗ್ಗಿಹೋಗುವಂತೆ ಶ್ರೀಕೃಷ್ಣನು ರಾಸಕ್ರೀಡೆಯ ಆಯಾಸವನ್ನು ಪರಿಹರಿಸಿಕೊಳ್ಳುವ ಸಲುವಾಗಿ ಗೋಪಿಯರೊಡನೆ ಜಲಕ್ರೀಡೆಯಾಡುವ ಆಶಯದಿಂದ ಯಮುನಾನದಿಯ ಶುಭಜಲವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣನು ಧರಿಸಿದ್ದ ವನಮಾಲೆಯು ಗೋಪಿಕಾಸ್ತ್ರೀಯರ ಅಂಗಸಂಗದ

ಸಮ್ಮರ್ದನದಿಂದ ಬಾಡಿಹೋಗಿದ್ದರೂ ಅವರ ಕುಚಗಳಲ್ಲಿ ಲೇಪಿತವಾಗಿದ್ದ ಕುಂಕುಮಕೇಸರಿಯಿಂದ ರಂಜಿತವಾಗಿದ್ದಿತು. ವನಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳು ಝೇಂಕರಿಸುತ್ತಾ ಶ್ರೀಕೃಷ್ಣನನ್ನು ಅನುಸರಿಸಿ ಹೋಗುತ್ತಿದ್ದುದನ್ನು ನೋಡಿದರೆ ಗಂಧರ್ವರಾಜನೇನಾದರೂ ಶ್ರೀಕೃಷ್ಣನ ಗುಣಗಾನಮಾಡುತ್ತಾ ಅವನ ಹಿಂದೆ ಹೋಗುತ್ತಿರುವನೋ ಎಂಬಂತೆ ಕಾಣುತ್ತಿದ್ದಿತು.

ಮಹಾರಾಜ! ಯಮುನಾನದಿಯ ಶುಭಜಲದಲ್ಲಿ ಶ್ರೀಕೃಷ್ಣ-ಗೋಪಿಯರ ಜಲಕ್ರೀಡೆಯು ಪ್ರಾರಂಭವಾಯಿತು. ಶ್ರೀಕೃಷ್ಣನನ್ನು ಮಧ್ಯದಲ್ಲಿ ಸೇರಿಸಿಕೊಂಡು ಗೋಪಿಕಾಸ್ತ್ರೀಯರು ಅವನನ್ನು ಪ್ರೇಮಪೂರ್ಣವಾದ ದೃಷ್ಟಿಯಿಂದ ನೋಡುತ್ತಾ ಕಿಲ-ಕಿಲನೆ ನಗುತ್ತಾ ಅವನ ಮೇಲೆ ನೀರೆರಚುತ್ತಿದ್ದರು. ಅದಕ್ಕೆ ಪ್ರತಿಯಾಗಿ ಕೃಷ್ಣನೂ ಒಬ್ಬೊಬ್ಬ ಗೋಪಿಯ ಮುಂದೆ ನಿಂತು ನೀರೆರಚುತ್ತಾ ಅವರನ್ನು ಮುಳುಗಿಸಿಬಿಡುತ್ತಿದ್ದನು. ರಾಸಕ್ರೀಡೆಯಂತೆಯೇ ಜಲಕ್ರೀಡೆಯೂ ಗೋಪಿಕಾಸ್ತ್ರೀಯರಿಗೆ ಮಹಾನಂದದಾಯಕವಾಗಿದ್ದಿತು. ವಿಮಾನಗಳಲ್ಲಿದ್ದ ದೇವತೆಗಳು ಶ್ರೀಕೃಷ್ಣ-ಗೋಪಿಯರ ಜಲಕ್ರೀಡೆಯನ್ನು ನೋಡಿ ಆನಂದಭರಿತರಾಗಿ ಅವರ ಮೇಲೆ ಹೂಮಳೆಯನ್ನು ಸುರಿಸಿ ಶ್ರೀಕೃಷ್ಣನನ್ನು ಪರಿಪರಿಯಾಗಿ ಸ್ತುತಿಸಿದರು. ಹೀಗೆ ಆತ್ಮಾರಾಮನಾದ ಶ್ರೀಕೃಷ್ಣನು ಹೆಣ್ಣಾನೆಗಳಿಂದ ಕೂಡಿದ ಗಜರಾಜನಂತೆ ಗೋಪಿಕಾಸ್ತ್ರೀಯರೊಡನೆ ನೀರಾಟವನ್ನಾಡಿದನು. ಜಲಕ್ರೀಡೆಯಾಡಿದನಂತರ ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಯಮುನಾನದಿಯ ಉಪವನಕ್ಕೆ ಹೋದನು. ಆ ಉಪವನವು *ಕಮಲ-ಕನ್ನೈದಿಲೆಗಳೇ ಮುಂತಾದ ಜಲಪುಷ್ಪಗಳ ವಾಸನೆಯಿಂದಲೂ ಮಲ್ಲಿಗೆ-ಜಾಜಿ-ಸೇವಂತಿಗೆಯೇ ಮೊದಲಾದ ನೆಲಪುಷ್ಪಗಳ ವಾಸನೆಯಿಂದಲೂ ಸುವಾಸಿತವಾಗಿದ್ದಿತು. ಮದೋದಕವನ್ನು ಸುರಿಸುತ್ತಾ ಸಲಗವು ಹೆಣ್ಣಾನೆಗಳೊಡನೆ ವಿಹರಿಸುವಂತೆ– ಶ್ರೀಕೃಷ್ಣನು ದುಂಬಿಗಳಿಂದಲೂ, ಪ್ರಮದೆಯರಿಂದಲೂ ಸಮಾವೃತನಾಗಿ ಉದ್ಯಾನವನದಲ್ಲಿ ವಿಹರಿಸುತ್ತಿದ್ದನು. ಪರೀಕ್ಷಿತಮಹಾರಾಜ! ಅನೇಕ

---

* ರಾತ್ರಿಯಲ್ಲಿ ಕಮಲಪುಷ್ಪಗಳು ಅರಳುವುದಿಲ್ಲ. ಆದರೂ ಯೋಗಮಾಯೆಯಿಂದ ಆಗ ಕಮಲಗಳೂ ಅರಳಿದ್ದುವು.

ಶರದ್ರಾತ್ರಿಗಳು ಕೂಡಿಕೊಂಡಿವೆಯೋ ಎಂಬಂತೆ ಶ್ರೀಕೃಷ್ಣನು ವಿಹರಿಸುತ್ತಿದ್ದ ಆ ರಾತ್ರಿಯು ಅತ್ಯಂತಶೋಭಾಯಮಾನವಾಗಿದ್ದಿತು. ನಾಲ್ಕು ದಿಕ್ಕುಗಳಲ್ಲಿಯೂ ಚಂದ್ರನ ಬೆಳದಿಂಗಳು ಹಾಲು ಚೆಲ್ಲಿದಂತೆ ಚೆಲ್ಲಿದ್ದು ಅತ್ಯಂತ ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಹಲವಾರು ಕಾವ್ಯಗಳಲ್ಲಿ ಕವಿಗಳು ಶರತ್ಕಾಲವನ್ನು ಎಷ್ಟು ಬಗೆಯಾಗಿ ವರ್ಣಿಸಿರುವರೋ ಆ ಲಕ್ಷಣಗಳೆಲ್ಲವೂ ಶ್ರೀಕೃಷ್ಣನು ವಿಹರಿಸಿದ ಆ ಶರದ್ರಾತ್ರಿಯಲ್ಲಿ ಅಡಕವಾಗಿದ್ದುವು. ಅಂತಹ ಮಂಗಳಮಯವಾದ ರಾತ್ರಿಯಲ್ಲಿ ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಯಮುನಾನದಿಯ ಮಳಲುದಿಣ್ಣೆಗಳಲ್ಲಿಯೂ, ಉಪವನಗಳಲ್ಲಿಯೂ, ಯಥೇಚ್ಛವಾಗಿ ವಿಹರಿಸಿದನು. ಆದರೂ ಸತ್ಯಕಾಮನಾದ ಶ್ರೀಕೃಷ್ಣನು ಊರ್ಧ್ವರೇತಸ್ಕನಾಗಿಯೇ ಇದ್ದನು.”

ರಾಜನು ಪ್ರಶ್ನಿಸುತ್ತಾನೆ :

**ಸಂಸ್ಥಾಪನಾಯ ಧರ್ಮಸ್ಯ ಪ್ರಶಮಾಯೇತರಸ್ಯ ಚ ।**
**ಅವತೀರ್ಣೋ ಹಿ ಭಗವಾನಂಶೇನ ಜಗದೀಶ್ವರಃ ॥೨೭॥**

**ಸ ಕಥಂ ಧರ್ಮಸೇತೂನಾಂ ವಕ್ತಾ ಕರ್ತಾಭಿರಕ್ಷಿತಾ ।**
**ಪ್ರತೀಪಮಾಚರದ್ಬ್ರಹ್ಮನ್ಪರದಾರಾಭಿಮರ್ಶನಮ್ ॥೨೮॥**

**ಆಪ್ತಕಾಮೋ ಯದುಪತಿಃ ಕೃತವಾನ್ ವೈ ಜುಗುಪ್ಸಿತಮ್ ।**
**ಕಿಮಭಿಪ್ರಾಯ ಏತಂ ನಃ ಸಂಶಯಂ ಛಿಂಧಿ ಸುವ್ರತ ॥೨೯॥**

“ಪೂಜ್ಯರೇ! ಶ್ರೀಕೃಷ್ಣಭಗವಂತನು ಸಮಸ್ತಜಗತ್ತಿಗೂ ಏಕಮಾತ್ರ ಸ್ವಾಮಿಯು. ಪರಮಾತ್ಮನ ಅಂಶದಿಂದ ಅವತರಿಸಿದ್ದವನು. ಧರ್ಮದ ರಕ್ಷಣೆ ಮತ್ತು ಅಧರ್ಮದ ನಾಶವೇ ಅವನ ಅವತಾರದ ಉದ್ದೇಶವಾಗಿದ್ದಿತು. ಅವನು ಧರ್ಮದ ಮರ್ಯಾದೆಯನ್ನು ಉಪದೇಶಿಸುವವನೂ, ರಕ್ಷಿಸುವವನೂ, ಪಾಲಿಸುವವನೂ ಆಗಿದ್ದನು. ಅಂತಹವನೇ ಧರ್ಮಕ್ಕೆ ವಿರೋಧವೆನಿಸಿದ ಪರಪತ್ನೀಪರಿಗ್ರಹವನ್ನು ಹೇಗೆ ಮಾಡಿದನು? ಶ್ರೀಕೃಷ್ಣನಾದರೋ ಪೂರ್ಣಕಾಮನು. ಅವನಿಗೆ ಯಾವುದರ ಆಸೆಯೂ ಇರಲಿಲ್ಲ. ಆದರೂ ಅವನು ಯಾವ ಕಾರಣದಿಂದಾಗಿ ನಿಂದ್ಯವೆನಿಸಿದ ಜುಗುಪ್ಸಿತವಾದ ಈ ಕಾರ್ಯವನ್ನು ಮಾಡಿದನು? ಸುವ್ರತರೇ! ಈ ನಮ್ಮ ಸಂಶಯವನ್ನು ದಯಮಾಡಿ ಪರಿಹರಿಸಿರಿ.”

ಶ್ರೀಶುಕಮುನಿಗಳು ಹೇಳುತ್ತಾರೆ :

**ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಮ್ ।**
**ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ॥**

"ಇಂದ್ರ, ಸೂರ್ಯ, ಚಂದ್ರ–ಇವರೇ ಮೊದಲಾದ ಮಹಾಪ್ರಭಾವವುಳ್ಳವರು ಸಾಹಸಕಾರ್ಯಗಳನ್ನು ಮಾಡಿ ಧರ್ಮದ ಉಲ್ಲಂಘನೆಯನ್ನು ಮಾಡಿರುವುದು ಕಂಡುಬರುತ್ತದೆ. ಆದರೆ ಇಂತಹ ವಿಧಿನಿರ್ದಿಷ್ಟವಾದ ಧರ್ಮೋಲ್ಲಂಘನೆಗಳಿಂದ ಆ ತೇಜಸ್ವಿಗಳಾದ ಪುರುಷರಿಗೆ ಯಾವ ವಿಧವಾದ ದೋಷವೂ ಉಂಟಾಗುವುದಿಲ್ಲ. ಅಗ್ನಿಯು ಸರ್ವಭಕ್ಷಕನಾದರೂ, ಪವಿತ್ರವಾದದ್ದು-ಅಪವಿತ್ರವಾದದ್ದು–ಎಂಬ ವಿವೇಚನೆಯೇ ಇಲ್ಲದೇ ಸಮಸ್ತವನ್ನೂ ಭಕ್ಷಿಸುತ್ತಿದ್ದರೂ, ಅವನಿಗೆ ವಸ್ತುಗಳಲ್ಲಿನ ದೋಷವು ಅಂಟದಲ್ಲವೇ?

**ನೈತತ್ಸಮಾಚರೇಜ್ಜಾತು ಮನಸಾಪಿ ಹ್ಯನೀಶ್ವರಃ ।**
**ವಿನಶ್ಯತ್ಯಾಚರನ್ಮೌಢ್ಯಾದ್ಯಥಾರುದ್ರೋಽಬ್ಧಿಜಂ ವಿಷಮ್ ॥೩೧॥**

ಇಂದ್ರಿಯಗಳ ಮೇಲೆ ಹತೋಟಿಯಿಲ್ಲದ ಸಾಮಾನ್ಯ ಜನರು, ಇಂತಹ ಧರ್ಮಕ್ಕೆ ವಿರುದ್ಧವೆನಿಸಿದ ಕಾರ್ಯಗಳನ್ನು ಮನಸ್ಸಿನಿಂದ ಕೂಡ ಮಾಡಬಾರದು. ಮೂರ್ಖತನದಿಂದ ಹಾಗೇನಾದರೂ ಮಾಡಲು ಹೋದರೆ ಅವರ ವಿನಾಶವು ನಿಶ್ಚಯ. ಸರ್ವಸಮರ್ಥನಾದ ಭಗವಾನ್ ಶಂಕರನು ಹಾಲಾಹಲವಿಷವನ್ನು ಕುಡಿದನು. ಅವನಂತೆಯೇ ಬೇರೆಯವರು ಅದನ್ನು ಕುಡಿದರೆ ನಾಶವಾಗಿಹೋಗುತ್ತಾರೆ. ಅಲ್ಲವೇ?

**ಈಶ್ವರಾಣಾಂ ವಚಃ ಸತ್ಯಂ ತಥೈವಾಚರಿತಂ ಕ್ವಚಿತ್ ।**
**ತೇಷಾಂ ಯತ್ಸ್ವವಚೋಯುಕ್ತಂ ಬುದ್ಧಿಮಾಂಸ್ತತ್ಸಮಾಚರೇತ್ ॥**

ಮಹಾತೇಜಸ್ವಿಗಳಾದ ದೇವತೆಗಳ ಉಪದೇಶಗಳು ಯಾವಾಗಲೂ ಧರ್ಮಯುಕ್ತವಾಗಿಯೇ ಇರುತ್ತವೆ. ಅವರ ಆಚರಣೆಗಳೂ ಧರ್ಮಾನುಸಾರವಾಗಿಯೇ ಇರುತ್ತವೆ. ಅವು ಕೆಲವು ಸಂದರ್ಭಗಳಲ್ಲಿ ವಿಧಿನಿರ್ದಿಷ್ಟವಾದ ಕಾರಣಗಳಿಂದ ಹೇಳುವ ಧರ್ಮಕ್ಕೂ ಮತ್ತು ಆಚರಣೆಗೂ ಸ್ವಲ್ಪ ವ್ಯತ್ಯಾಸವಾಗಬಹುದು. ಆದುದರಿಂದ ವಿದ್ವಾಂಸರಾದವರು ಅವರ ಉಪದೇಶದಂತೆ

ನಡೆದುಕೊಳ್ಳಬೇಕೇ ಹೊರತು ಅವರ ಆಚರಣೆಯ ಕಡೆಗೆ ಲಕ್ಷ್ಯವಿಡ ಬಾರದು.* ಅವರ ಉಪದೇಶ ಮತ್ತು ಆಚರಣೆಗಳು ಒಂದೇ ಆಗಿದ್ದರೆ ಅದನ್ನು ಅನುಕರಿಸಬಹುದು.

**ಕುಶಲಾಚರಿತೇನೈಷಾಮಿಹ ಸ್ವಾರ್ಥೋ ನ ವಿದ್ಯತೇ ।**
**ವಿಪರ್ಯಯೇಣ ವಾನರ್ಥೋ ನಿರಹಂಕಾರಿಣಾಂ ಪ್ರಭೋ ॥೩೩॥**

ಪ್ರಭುವೇ! 'ನಾನು-ನನ್ನದು'–ಎಂಬ ಅಹಂಭಾವವಿಲ್ಲದ ಮಹಾ ಪುರುಷರಲ್ಲಿ ಕಾಮ-ಕ್ರೋಧಾದಿಗಳೂ ಇರುವುದಿಲ್ಲ. ಸರ್ವರನ್ನೂ ಸಮಭಾವದಿಂದ ಕಾಣುವವರಾಗಿರುತ್ತಾರೆ. ಆದುದರಿಂದ ಅಂತಹವರು ಮಾಡುವ ಶುಭಾಚರಣೆಗಳಿಂದ ಪುಣ್ಯವಾಗಲೀ ಪಾಪಾಚರಣೆಯಿಂದ ಪಾಪ ವಾಗಲೀ ಅವರಿಗೆ ಉಂಟಾಗುವುದಿಲ್ಲ. ಅವರು ಪಾಪ-ಪುಣ್ಯಗಳೆರಡನ್ನೂ ಮೀರಿದವರಾಗಿ ಬ್ರಹ್ಮಾನಂದದಲ್ಲಿ ಮಗ್ನರಾಗಿರುತ್ತಾರೆ.

**ಕಿಮುತಾಖಿಲಸತ್ತ್ವಾನಾಂ ತಿರ್ಯಙ್ಮರ್ತ್ಯದಿವೌಕಸಾಮ್ ।**
**ಈಶಿತುಶ್ಚೇಶಿತವ್ಯಾನಾಂ ಕುಶಲಾಕುಶಲಾನ್ವಯಃ ॥೩೪॥**

ಹೀಗಿರುವಾಗ ಸಮಸ್ತ ಪಶು-ಪಕ್ಷಿಗಳಿಗೂ, ಸಮಸ್ತದೇವತೆಗಳಿಗೂ, ಮನುಷ್ಯರಿಗೂ, ಚರಾಚರಪ್ರಾಣಿಗಳಿಗೂ ಏಕಮಾತ್ರಪ್ರಭುವಾಗಿರುವ ಶ್ರೀಕೃಷ್ಣನಿಗೆ ಶುಭಾಶುಭಕರ್ಮಗಳ ಪಾಪ-ಪುಣ್ಯಗಳ ಸಂಬಂಧವಾದರೂ ಹೇಗೆ ತಾನೇ ಇದ್ದೀತು?

**ಯತ್ಪಾದಪಙ್ಕಜಪರಾಗನಿಷೇವತೃಪ್ತಾ**
**ಯೋಗಪ್ರಭಾವವಿಧುತಾಖಿಲಕರ್ಮಬನ್ಧಾಃ ।**
**ಸ್ವೈರಂ ಚರನ್ತಿ ಮುನಯೋಽಪಿ ನ ನಹ್ಯಮಾನಾ-**
**ಸ್ತಸ್ಯೇಚ್ಛಯಾತ್ತವಪುಷಃ ಕುತ ಏವ ಬನ್ಧಃ ॥೩೫॥**

ಭಕ್ತಜನರು ಪರಮಾತ್ಮನ ಪಾದಪಂಕಜಗಳ ಧೂಳಿನ ಸೇವನೆಯಿಂದ

---

* ಯಾನ್ಯನವದ್ಯಾನಿ ಕರ್ಮಾಣಿ । ತಾನಿ ಸೇವಿತವ್ಯಾನಿ । ನೋ ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವಯೋಪಾಸ್ಯಾನಿ ನೋ । ಇತರಾಣಿ–ಅನಿಂದ್ಯವಾದ ಕರ್ಮಗಳನ್ನೇ ಮಾಡಬೇಕು. ನಿಂದ್ಯವಾದ ಕರ್ಮಗಳನ್ನು ಮಾಡಬಾರದು. ನಾವು (ಉಪಾಧ್ಯಾಯರು) ಆಚರಿಸಿದ ಒಳ್ಳೆಯ ಕಾರ್ಯಗಳನ್ನೇ ಮಾಡಬೇಕು. ಬೇರೆಯದನ್ನು ಮಾಡಬಾರದು. ( ತೈ. ಉಪನಿಷತ್ತು )

ತೃಪ್ತರಾಗುತ್ತಾರೆ. ಯೋಗಿಗಳು ಅವನನ್ನೇ ಧ್ಯಾನಿಸುತ್ತಾ ಯೋಗದ ಪ್ರಭಾವದಿಂದ ಸಮಸ್ತವಾದ ಕರ್ಮಬಂಧನಗಳಿಂದಲೂ ಮುಕ್ತರಾಗುತ್ತಾರೆ. ಜ್ಞಾನಿಗಳಾದ ಮುನಿಗಳು ಕೂಡ ಪರಬ್ರಹ್ಮತತ್ತ್ವವನ್ನೇ ವಿಚಾರಮಾಡುತ್ತಾ ತಾದಾತ್ಮ್ಯವನ್ನು ಹೊಂದಿ ಸಮಸ್ತಕರ್ಮಬಂಧನಗಳಿಂದಲೂ ಮುಕ್ತರಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಿರುತ್ತಾರೆ. ಹೀಗೆ ಭಕ್ತಜನರಿಗೂ, ಯೋಗಿಗಳಿಗೂ, ಜ್ಞಾನಿಗಳಿಗೂ ಏಕೈಕಲಕ್ಷ್ಯನಾದ ಪರಮಾತ್ಮನು ಶಿಷ್ಟರಕ್ಷಣ–ದುಷ್ಟಶಿಕ್ಷಣಕ್ಕಾಗಿ ಸ್ವೇಚ್ಛೆಯಿಂದ ಮಾನವನಾಗಿ ಅವತರಿಸಿದ್ದಾನೆ. ಅಂತಹ ಪರಬ್ರಹ್ಮಪರಮಾತ್ಮನಿಗೆ ಕರ್ಮಬಂಧನದ ಕಲ್ಪನೆಯಾದರೂ ಹೇಗಿದ್ದೀತು?

**ಗೋಪೀನಾಂ ತತ್ಪತೀನಾಂ ಚ ಸರ್ವೇಷಾಮೇವ ದೇಹಿನಾಮ್ ।**
**ಯೋಽನ್ತಶ್ಚರತಿ ಸೋಽಧ್ಯಕ್ಷಃ ಕ್ರೀಡನೇನೇಹ ದೇಹಭಾಕ್ ॥೩೬॥**

ಗೋಪಿಯರ, ಅವರ ಗಂಡಂದಿರ ಮತ್ತು ಸಮಸ್ತಪ್ರಾಣಿಗಳ ದೇಹದಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನೇ ಸರ್ವಸಾಕ್ಷಿಯೂ ಸಮಸ್ತರಿಗೂ ಒಡೆಯನೂ ಆಗಿದ್ದಾನೆ. ಅವನೇ ಶ್ರೀಕೃಷ್ಣನ ರೂಪದಲ್ಲಿ ದಿವ್ಯಮಂಗಳರೂಪವನ್ನು ಧರಿಸಿ ತನ್ನ ದಿವ್ಯವಾದ ಲೀಲೆಗಳನ್ನು ತೋರಿಸುತ್ತಿದ್ದಾನೆ.

**ಅನುಗ್ರಹಾಯ ಭೂತಾನಾಂ ಮಾನುಷಂ ದೇಹಮಾಸ್ಥಿತಃ ।**
**ಭಜತೇ ತಾದೃಶೀಃ ಕ್ರೀಡಾ ಯಾಃ ಶ್ರುತ್ವಾ ತತ್ಪರೋ ಭವೇತ್ ॥**

ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಅನುಗ್ರಹಿಸುವ ಸಲುವಾಗಿಯೇ ಪರಬ್ರಹ್ಮಪರಮಾತ್ಮನು ಮನುಷ್ಯದೇಹವನ್ನು ಹೊಂದಿ ಅವತರಿಸಿದ್ದಾನೆ ಮತ್ತು ಇಂತಹ ಪರಮಾದ್ಭುತವಾದ ಲೀಲಾಪ್ರಸಂಗಗಳನ್ನು ಆಡಿ ತೋರಿಸಿದ್ದಾನೆ. ಪುಣ್ಯಪ್ರಾಪಕವಾದ ಇಂತಹ ಲೀಲಾಪ್ರಸಂಗಗಳನ್ನು ಕೇಳಿ ಮಾನವನು ತತ್ಪರನಾಗಿ ಮನಸ್ಸನ್ನು ಅವನಲ್ಲಿಯೇ ನೆಲೆಗೊಳಿಸಬೇಕು. ಇದಕ್ಕಾಗಿಯೇ ಶ್ರೀಕೃಷ್ಣನು ಭವ್ಯವಾದ ಲೀಲೆಗಳನ್ನು ತೋರಿಸಿದ್ದಾನೆ.

**ನಾಸೂಯನ್ಖಲು ಕೃಷ್ಣಾಯ ಮೋಹಿತಾಸ್ತಸ್ಯ ಮಾಯಯಾ ।**
**ಮನ್ಯಮಾನಾಃ ಸ್ವಪಾರ್ಶ್ವಸ್ಥಾನ್ ಸ್ವಾನ್ ಸ್ವಾನ್ದಾರಾನ್ ವ್ರಜೌಕಸಃ ॥೩೮॥**

ಪರೀಕ್ಷಿತ! ಭಗವಂತನಾದ ಶ್ರೀಕೃಷ್ಣನ ಯೋಗಮಾಯಾಪ್ರಭಾವ

ವನ್ನು ಮತ್ತೂ ಹೇಳುವೆನು ಕೇಳು : ಅವನ ಯೋಗಮಾಯೆಯಿಂದ ವಿಮೋಹಿತರಾದ ಗೋಪಾಲರು ಶ್ರೀಕೃಷ್ಣನಲ್ಲಿ ಯಾವ ವಿಧವಾದ ದೋಷ ವನ್ನೂ ಕಾಣಲೇ ಇಲ್ಲ. ಏಕೆಂದರೆ ತಮ್ಮ-ತಮ್ಮ ಪತ್ನಿಯರು ತಮ್ಮ ಜೊತೆ ಯಲ್ಲೇ ಮಲಗಿರುವರೆಂದೇ ಅವರೆಲ್ಲರೂ ಭಾವಿಸಿಕೊಂಡರು.

ಹೀಗೆ ರಾಸಕ್ರೀಡೆ-ಜಲಕ್ರೀಡೆಗಳಿಂದ ರಾತ್ರಿಯೆಲ್ಲವೂ ಕಳೆದು ಬ್ರಾಹ್ಮಮುಹೂರ್ತವು ಉದಯಿಸಿತು. ಭಗವಂತನಿಗೆ ಅತ್ಯಂತಪ್ರಿಯರಾದ ಆ ಗೋಪಿಯರು ಅವನನ್ನು ಬಿಟ್ಟುಹೋಗಲು ಇಷ್ಟವಿಲ್ಲದಿದ್ದರೂ ಶ್ರೀಕೃಷ್ಣನ ಒತ್ತಾಯದಿಂದ ಅವನ ಅನುಮತಿಯನ್ನು ಪಡೆದು ತಮ್ಮ-ತಮ್ಮ ಮನೆಗಳಿಗೆ ತೆರಳಿದರು.

**ವಿಕ್ರೀಡಿತಂ ವ್ರಜವಧೂಭಿರಿದಂ ಚ ವಿಷ್ಣೋಃ**
**ಶ್ರದ್ಧಾನ್ವಿತೋಽನುಶೃಣುಯಾದಥ ವರ್ಣಯೇದ್ಯಃ ।**
**ಭಕ್ತಿಂ ಪರಾಂ ಭಗವತಿ ಪ್ರತಿಲಭ್ಯ ಕಾಮಂ**
**ಹೃದ್ರೋಗಮಾಶ್ವಪಹಿನೋತ್ಯಚಿರೇಣ ಧೀರಃ ॥೪೦॥**

ಪರೀಕ್ಷಿತಮಹಾರಾಜ! ಯಾವ ಧೀರಪುರುಷನು, ಶ್ರೀಕೃಷ್ಣನು ತನಗೆ ಅತ್ಯಂತಪ್ರಿಯರಾದ ಗೋಪಿಕಾಸ್ತ್ರೀಯರೊಡನೆ ಆಡಿದ ರಾಸಕ್ರೀಡೆ-ಜಲ ಕ್ರೀಡೆಗಳನ್ನು ಶ್ರದ್ಧಾಭಕ್ತಿಯಿಂದ ಕೇಳುವನೋ ಮತ್ತು ಇತರರಿಗೆ ವರ್ಣನೆ ಮಾಡಿ ಹೇಳುವನೋ ಅಂತಹವನು ಭಗವಂತನಲ್ಲಿ ಶ್ರೇಷ್ಠವಾದ ಭಕ್ತಿಭಾವ ವನ್ನು ಹೊಂದಿ ಕಾಮವಿಕಾರದಿಂದ ಕೂಡಿದ ಹೃದ್ರೋಗದಿಂದ ಬಹಳ ಬೇಗ ಮುಕ್ತನಾಗುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೩ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩೪ನೆಯ ಅಧ್ಯಾಯ

## ಸುದರ್ಶನನ ಉದ್ಧಾರ : ಶಂಖಚೂಡನ ಸಂಹಾರ

ಶ್ರೀಶುಕಮುನಿಗಳು ಹೇಳುತ್ತಾರೆ :

**ಏಕದಾ ದೇವಯಾತ್ರಾಯಾಂ ಗೋಪಾಲಾ ಜಾತಕೌತುಕಾಃ ।**
**ಅನೋಭಿರನಡುದ್ಯುಕ್ತೈಃ ಪ್ರಯಯುಸ್ತೇಽಮ್ಬಿಕಾವನಮ್ ॥೧॥**

ಪರೀಕ್ಷಿತಮಹಾರಾಜ! ಒಮ್ಮೆ ನಂದಗೋಪನೇ ಮೊದಲಾದ ಗೋಪಾಲಕರು ಶಿವರಾತ್ರಿಮಹೋತ್ಸವದ ಸಮಯದಲ್ಲಿ ಅತ್ಯುತ್ಸಾಹಭರಿತ ರಾಗಿ ಮತ್ತು ಆನಂದಭರಿತರಾಗಿ ಎತ್ತಿನ ಗಾಡಿಗಳಲ್ಲಿ ಕುಳಿತು ಅಂಬಿಕಾವನಕ್ಕೆ ಯಾತ್ರೆಹೋದರು.

ಅಂಬಿಕಾವನವನ್ನು ತಲುಪಿದನಂತರ ನಂದಪ್ರಮುಖರಾದ ಗೋಪಾಲಕರು ಸರಸ್ವತೀನದಿಯಲ್ಲಿ ಸ್ನಾನಮಾಡಿ, ಪಶುಪತಿಯಾದ ಪರಮೇಶ್ವರನನ್ನೂ ಭಗವತೀ ಅಂಬಿಕಾದೇವಿಯನ್ನೂ ಹೂವು-ಹಣ್ಣು-ಗಂಧ–ಇವೇ ಮುಂತಾದ ಪೂಜಾಸಾಮಗ್ರಿಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದರು. ತಾವು ಮಾಡಿದ ಪೂಜೆಯಿಂದ ಲೋಕಾಧಿದೇವನಾದ ಭಗವಾನ್ ಶಂಕರನೂ ಮತ್ತು ಭವಾನಿಯೂ ಸುಪ್ರೀತರಾಗಲೆಂದು ನಂದ ಗೋಪನೇ ಮೊದಲಾದ ಗೋಪಾಲಕರು ಬ್ರಾಹ್ಮಣರಿಗೆ ಗೋವುಗಳನ್ನೂ, ವಸ್ತ್ರಗಳನ್ನೂ, ಸುವರ್ಣವನ್ನೂ, ಜೇನುತುಪ್ಪವನ್ನೂ ದಾನವಾಗಿ ಕೊಟ್ಟು ಮೃಷ್ಟಾನ್ನವನ್ನು ಭೋಜನಮಾಡಿಸಿದರು.

ಅಂದು ಮಹಾಭಾಗ್ಯಶಾಲಿಗಳಾದ ನಂದ-ಸುನಂದರೇ ಮೊದಲಾದ ಗೋಪರು ವ್ರತವನ್ನು ಕೈಗೊಂಡು ಕೇವಲ ಜಲವನ್ನು ಮಾತ್ರವೇ ಕುಡಿದು ಆ ರಾತ್ರಿ ಸರಸ್ವತೀನದಿಯ ತೀರದಲ್ಲಿಯೇ ಮಲಗಿದರು. ಅಂಬಿಕಾವನದಲ್ಲಿ ದೊಡ್ಡದಾದೊಂದು ಹೆಬ್ಬಾವಿದ್ದಿತು. ಆ ಸಮಯದಲ್ಲಿ ಅದು ಬಹಳವಾಗಿ ಹಸಿದಿದ್ದಿತು. ಸ್ವೇಚ್ಛೆಯಿಂದ ಅಂಬಿಕಾವನದಲ್ಲಿ ಸಂಚರಿಸುತ್ತಿದ್ದ ಆ ಸರ್ಪವು ಮಲಗಿದ್ದ ನಂದಗೋಪನನ್ನು ನುಂಗಿಹಾಕಿತು. ಹಾಗೆ ಹಾವಿನಿಂದ ನುಂಗ ಲ್ಪಟ್ಟ ನಂದಗೋಪನು : 'ಕೃಷ್ಣ! ಕೃಷ್ಣ! ದೊಡ್ಡದಾಗಿರುವ ಈ ಸರ್ಪವು ನನ್ನನ್ನು ನುಂಗಿಹಾಕುತ್ತಿದೆ. ಶರಣಾಗತನಾಗಿರುವ ನನ್ನನ್ನು ಈ ಸರ್ಪದಿಂದ ಬಿಡಿಸಪ್ಪಾ!'–ಎಂದು ಗಟ್ಟಿಯಾಗಿ ಕೂಗಿಕೊಂಡನು. ನಂದಗೋಪನ ಆ ಕೂಗನ್ನು ಕೇಳಿದೊಡನೆಯೇ ಮೇಲೆದ್ದು ಕುಳಿತ ಗೋಪಾಲರು ನಂದಗೋಪನು ಸರ್ಪದಿಂದ ನುಂಗಲ್ಪಡುತ್ತಿರುವುದನ್ನು ನೋಡಿ ಭ್ರಾಂತ ರಾಗಿ ಆ ಸರ್ಪವನ್ನು ಕೊಳ್ಳಿಗಳಿಂದ ಪ್ರಹರಿಸತೊಡಗಿದರು. ಗೋಪಾಲರು ಸುತ್ತಲೂ ನಿಂತು ಕೊಳ್ಳಿಗಳಿಂದ ಸರ್ಪವನ್ನು ಸುಡುತ್ತಿದ್ದರೂ ಆ ಅಜಗರ ಸರ್ಪವು ನಂದಗೋಪನನ್ನು ಬಿಡಲೇ ಇಲ್ಲ. ಆ ಸಮಯದಲ್ಲಿ ಭಕ್ತವತ್ಸಲ

ನಾದ, ಸಾತ್ವತರಿಗೆ ಒಡೆಯನಾದ ಶ್ರೀಕೃಷ್ಣನು ಮುಂದೆ ಬಂದು ಸರ್ಪವನ್ನು ಕಾಲಿನಿಂದ ಸ್ಪರ್ಶಿಸಿದನು. ಭಗವಂತನ ದಿವ್ಯಪಾದದ ಸ್ಪರ್ಶವಾದೊಡನೆಯೇ ಸರ್ಪದ ಸಮಸ್ತಪಾಪವೂ ಭಸ್ಮವಾಗಿಹೋಯಿತು. ಆ ಕ್ಷಣದಲ್ಲಿಯೇ ಅದಕ್ಕೆ ಸರ್ಪದ ರೂಪವು ಹೋಗಿ ವಿದ್ಯಾಧರರಿಂದ ಅರ್ಚಿಸಲ್ಪಡುವ ಸರ್ವಾಂಗಸುಂದರವಾದ ರೂಪವುಂಟಾಯಿತು. ಸುಂದರವಾದ ಶರೀರದಿಂದ ದೇದೀಪ್ಯಮಾನನಾಗಿ ಕಾಣುತ್ತಿದ್ದ, ಸುವರ್ಣಮಯವಾದ ಹಾರವನ್ನು ಧರಿಸಿದ್ದ ಆತನು ಶ್ರೀಕೃಷ್ಣನಿಗೆ ದೀರ್ಘದಂಡನಮಸ್ಕಾರಮಾಡಿ ಕೈಜೋಡಿಸಿ ಕೊಂಡು ನಿಂತನು. ಆ ದಿವ್ಯಪುರುಷನನ್ನು ಹೃಷೀಕೇಶನು ಪ್ರಶ್ನಿಸಿದನು :

**ಕೋ ಭವಾನ್ ಪರಯಾ ಲಕ್ಷ್ಮ್ಯಾ ರೋಚತೇಽದ್ಭುತದರ್ಶನಃ ।**
**ಕಥಂ ಜುಗುಪ್ಸಿತಾಮೇತಾಂ ಗತಿಂ ವಾ ಪ್ರಾಪಿತೋಽವಶಃ ॥೧೧॥**

"ದಿವ್ಯಪುರುಷನೇ! ನೀನಾರು? ಶ್ರೇಷ್ಠವಾದ ಕಾಂತಿಯಿಂದ ಅದ್ಭುತರೂಪನಾಗಿ ಕಾಣುತ್ತಿರುವೆ. ಅತ್ಯಂತ ಜುಗುಪ್ಸಿತವಾದ ಈ ಸರ್ಪದ ಯೋನಿಯಲ್ಲಾದರೂ ನೀನೇಕೆ ಹುಟ್ಟಿದೆ? ಅನಿವಾರ್ಯವಾಗಿ ನೀನು ಈ ಜನ್ಮವನ್ನು ಹೊಂದಿರಬಹುದು."

ಸರ್ಪದ ಶರೀರದಿಂದ ಹೊರಬಂದ ದಿವ್ಯಪುರುಷನು ಹೇಳುತ್ತಾನೆ :

"ದೇವದೇವ! ಹಿಂದೆ ನಾನು ಸುದರ್ಶನನೆಂಬ ಹೆಸರಿನಿಂದ ಪ್ರಸಿದ್ಧ ನಾಗಿದ್ದ ವಿದ್ಯಾಧರನಾಗಿದ್ದೆನು. ನನ್ನಲ್ಲಿ ರೂಪಸಂಪತ್ತಿಯೂ ಇದ್ದಿತು ; ಅಪಾರವಾದ ಸಂಪತ್ತೂ ಇದ್ದಿತು. ವಿಮಾನದಲ್ಲಿ ಕುಳಿತು ನಾನು ಎಲ್ಲ ದಿಕ್ಕು ಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದೆನು. ಹೀಗೆ ನಾನು ಸಂಚರಿಸು ತ್ತಿದ್ದಾಗ ಒಮ್ಮೆ ಅತ್ಯಂತಕುರೂಪಿಗಳಾಗಿದ್ದ ಅಂಗಿರಸಗೋತ್ರದ ಋಷಿ ಗಳನ್ನು ನೋಡಿದೆನು. ಸೌಂದರ್ಯದ ಮತ್ತು ಸಂಪತ್ತಿನ ಮದದಿಂದಾಗಿ ನಾನು ಆ ಮಹರ್ಷಿಗಳನ್ನು ನೋಡಿ ಗಟ್ಟಿಯಾಗಿ ನಕ್ಕುಬಿಟ್ಟೆನು. ನನ್ನ ಈ ಅಪರಾಧದಿಂದ ಕುಪಿತರಾದ ಮಹರ್ಷಿಗಳು ಅಜಗರಸರ್ಪದ ಯೋನಿಯಲ್ಲಿ ಹುಟ್ಟುವಂತೆ ನನಗೆ ಶಾಪವಿತ್ತರು. ಅದು ನನ್ನ ಪಾಪದ ಫಲವೇ ಆಗಿದ್ದಿತು. ನಿಜವಾಗಿ ಹೇಳುವುದಾದರೆ ದಯಾಳುಗಳಾದ ಆ ಋಷಿಗಳು ನನ್ನನ್ನು ಅನು ಗ್ರಹಿಸಲೆಂದೇ ಆ ಶಾಪವನ್ನಿತ್ತರು. ಲೋಕಗುರುವಾದ ನಿನ್ನ ದಿವ್ಯಪಾದದ ಸ್ಪರ್ಶವನ್ನು ಪಡೆದು ಸಮಸ್ತಪಾಪಗಳಿಂದಲೂ ನಾನು ಮುಕ್ತನಾದೆನಲ್ಲವೇ!

ಸಮಸ್ತಪಾಪಗಳನ್ನೂ ನಾಶಗೊಳಿಸುವ ಪ್ರಭುವೇ! ಯಾವ ಮನುಷ್ಯರು ಹುಟ್ಟು-ಸಾವುಗಳ ರೂಪವಾದ ಸಂಸಾರಕ್ಕೆ ಭಯಗೊಂಡು ನಿನ್ನಲ್ಲಿ ಶರಣಾಗತರಾಗುವರೋ ಅಂತಹವರನ್ನು ನೀನು ಸಮಸ್ತಭಯಗಳಿಂದಲೂ ಬಿಡುಗಡೆಮಾಡುವೆ. ಈಗ ನಾನು ನಿನ್ನ ಚರಣಕಮಲದ ಸ್ಪರ್ಶದಿಂದಲೇ




ಸಮಸ್ತಪಾಪಗಳಿಂದಲೂ ಮುಕ್ತನಾಗಿದ್ದೇನೆ. ಭಕ್ತವತ್ಸಲನೇ! ಮಹಾಯೋಗೇಶ್ವರ ಪುರುಷೋತ್ತಮನೇ! ನಾನು ನಿನಗೆ ಶರಣಾಗತನಾಗಿದ್ದೇನೆ. ಇಂದ್ರನೇ ಮೊದಲಾದ ಸಮಸ್ತಲೋಕೇಶ್ವರರಿಗೂ ಈಶ್ವರನಾಗಿರತಕ್ಕವನೇ! ಸ್ವಯಂಪ್ರಕಾಶನಾದ ಪರಮಾತ್ಮನೇ! ನನಗೆ ನನ್ನ ಲೋಕಕ್ಕೆ ಪ್ರಯಾಣ ಮಾಡಲು ಅನುಮತಿಸು. ಅಚ್ಯುತನೇ! ನಿನ್ನ ಪಾದಸ್ಪರ್ಶದ ಮಾತ್ರದಿಂದಲೇ, ದರ್ಶನಮಾತ್ರದಿಂದಲೇ ನಾನು ಮಹಾಘೋರವಾದ ಬ್ರಾಹ್ಮಣಶಾಪದಿಂದ ಮುಕ್ತನಾದೆನು. ಆದರೆ ಇದೇನೂ ಅಂತಹ ಆಶ್ಚರ್ಯದ ವಿಷಯವೇನಲ್ಲ. ಏಕೆಂದರೆ : ಮನುಷ್ಯನು ಕೇವಲ ನಿನ್ನ ನಾಮೋಚ್ಚಾರಣೆಯಿಂದಲೇ ಪವಿತ್ರನಾಗಿಬಿಡುತ್ತಾನೆ. ನಿನ್ನ ಲೀಲಾಪ್ರಸಂಗಗಳನ್ನು ಕೇಳುವವರು ಕೂಡ ಸಮಸ್ತಪಾಪಗಳನ್ನೂ ಕಳೆದುಕೊಂಡು ಪವಿತ್ರರಾಗಿಬಿಡುತ್ತಾರೆ. ಹೀಗಿರುವಾಗ ಪಾದಸ್ಪರ್ಶವನ್ನು ಹೊಂದಿ ಪಾಪದಿಂದ ಮುಕ್ತನಾದುದರಲ್ಲಿ ಆಶ್ಚರ್ಯವೇನಿದೆ?"

ಪರೀಕ್ಷಿತಮಹಾರಾಜ! ಶ್ರೀಕೃಷ್ಣನಿಗೆ ಸುದರ್ಶನನು ಹೀಗೆ ವಿಜ್ಞಾಪಿಸಿ

ಕೊಂಡು ಅವನಿಗೆ ಪ್ರದಕ್ಷಿಣೆ-ನಮಸ್ಕಾರಗಳನ್ನು ಮಾಡಿ ಆತನ ಅನುಜ್ಞೆಯನ್ನು ಪಡೆದು ತನ್ನ ಲೋಕಕ್ಕೆ ತೆರಳಿದನು. ಇತ್ತ ನಂದಗೋಪನೂ ದೊಡ್ಡದಾದ ಆಪತ್ತಿನಿಂದ ಪಾರಾದನು.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ಅದ್ಭುತವಾದ ಈ ಪ್ರಭಾವವನ್ನು ನೋಡಿ ವ್ರಜವಾಸಿಗಳಿಗೆ ವಿಸ್ಮಯವುಂಟಾಯಿತು. ನಂದಪ್ರಮುಖರಾದ ಗೋಪಾಲರು ಅಂಬಿಕಾವನದಲ್ಲಿ ಯಾವ ವ್ರತವನ್ನು ತೊಟ್ಟಿದ್ದರೋ ಅದನ್ನು ಸಾಂಗೋಪಾಂಗವಾಗಿ ಪೂರ್ಣಗೊಳಿಸಿ ಅತ್ಯಾದರದಿಂದಲೂ ಪ್ರೇಮದಿಂದಲೂ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಾ ಗೋಕುಲಕ್ಕೆ ಹಿಂದಿರುಗಿದರು.*

ಪರೀಕ್ಷಿತಮಹಾರಾಜ! ಹೀಗೆಯೇ ಇರುತ್ತಿರಲಾಗಿ ಒಂದು ದಿನ ಅದ್ಭುತವಿಕ್ರಮನಾದ ಶ್ರೀಕೃಷ್ಣನೂ ಬಲರಾಮನೂ ರಾತ್ರಿಯ ವೇಳೆಯಲ್ಲಿ ಗೋಪಿಕಾಸ್ತ್ರೀಯರೊಡನೆ ಅರಣ್ಯದಲ್ಲಿ ಸಂಚರಿಸುತ್ತಿದ್ದರು. ಭಗವಂತನಾದ ಶ್ರೀಕೃಷ್ಣನು ನಿರ್ಮಲವಾದ ಪೀತಾಂಬರವನ್ನೂ ಬಲರಾಮನು ನೀಲಾಂಬರವನ್ನೂ ಉಟ್ಟಿದ್ದರು. ಇಬ್ಬರೂ ವನಮಾಲೆಗಳಿಂದ ಸಮಲಂಕೃತರಾಗಿದ್ದರು. ಅಂಗರಾಗವನ್ನೂ ಸುಗಂಧಯುಕ್ತವಾದ ಚಂದನವನ್ನೂ ಅಂಗಾಂಗಗಳಿಗೂ ಲೇಪಿಸಿಕೊಂಡಿದ್ದರು. ಸುಂದರವಾದ ಆಭರಣಗಳನ್ನು ತೊಟ್ಟಿದ್ದರು. ಗೋಪಿಕಾಸ್ತ್ರೀಯರು ಸ್ಥಿರವಾದ ಪ್ರೇಮದಿಂದಲೂ ಸ್ನೇಹದಿಂದಲೂ ಸುಮಧುರವಾದ ಕಂಠಶ್ರೀಯಿಂದ ಬಲರಾಮ-ಕೃಷ್ಣರ ಗುಣಗಾನಮಾಡುತ್ತಿದ್ದರು. ಆಗತಾನೇ ಸಾಯಂಕಾಲವಾಗುತ್ತಿದ್ದಿತು. ಆಕಾಶದಲ್ಲಿ ಚಂದ್ರ-ಗ್ರಹ-ತಾರೆಗಳು ಪ್ರಕಾಶಿಸತೊಡಗಿದುವು. ಮಲ್ಲಿಗೇಹೂವಿನ ಸುಗಂಧದಿಂದ ಮದಿಸಿದ ದುಂಬಿಗಳು ಝೇಂಕರಿಸುತ್ತಿದ್ದುವು. ಜಲಾಶಯಗಳಲ್ಲಿದ್ದ ಕುಮುದಪುಷ್ಪಗಳ ಸುಗಂಧವನ್ನು ಹೊತ್ತು ಗಾಳಿಯು ಮಂದ-ಮಂದವಾಗಿ ಬೀಸುತ್ತಿದ್ದಿತು. ಅಂತಹ ವಾತಾವರಣವನ್ನು ಶ್ಲಾಘಿಸುತ್ತಾ ಶ್ರೀಕೃಷ್ಣ-ಬಲರಾಮರು ಜೊತೆಗೂಡಿ ಆರೋಹಣಾವರೋಹಣಕ್ರಮದಲ್ಲಿ ರಾಗಾಲಾಪನೆ

* ಶಿವರಾತ್ರಿ ಪ್ರಯುಕ್ತವಾದ ತೀರ್ಥವಾಸವ್ರತವನ್ನು–ಎಂದು ಭಾವವು. ಇದರಿಂದ ಶಿವರಾತ್ರಿಯ ದಿನದಲ್ಲಿ ಸುದರ್ಶನ ಗಂಧರ್ವನ ಶಾಪಮೋಕ್ಷವೆಂದರಿಯಬೇಕು.

(ವೈಜಯಂತಿ)

ಮಾಡತೊಡಗಿದರು. ಅವರ ದಿವ್ಯಗಾನವು ಜಗತ್ತಿನ ಸಮಸ್ತಪ್ರಾಣಿಗಳಿಗೂ ಮಂಗಳದಾಯಕವೂ ಆನಂದದಾಯಕವೂ ಆಗಿದ್ದಿತು. ಅಂತಹ ದಿವ್ಯಗಾನವನ್ನು ಕೇಳಿ ಗೋಪಿಕಾಸ್ತ್ರೀಯರು ಮೈಮರೆತುಹೋದರು. ಅವರಿಗೆ ಉಟ್ಟ ಸೀರೆಯು ಜಾರಿಹೋಗುತ್ತಿರುವುದೆಂಬ, ಮುಡಿಯು ಬಿಚ್ಚಿಹೋಗುತ್ತಿರುವುದೆಂಬ ಮತ್ತು ಪುಷ್ಪಮಾಲೆಯು ಹರಿದುಬೀಳುತ್ತಿರುವುದೆಂಬ ಪರಿವೆಯೇ ಇರಲಿಲ್ಲ. ಹೀಗೆ ರಾಮ-ಶ್ಯಾಮರು ಸ್ವೇಚ್ಛೆಯಿಂದ ಉನ್ಮತ್ತರಂತೆ ಕರ್ಣಾನಂದಕರವಾಗಿ ಹಾಡುತ್ತಿದ್ದಾಗ ಶಂಖಚೂಡನೆಂಬ ಹೆಸರಿನಿಂದ ವಿಖ್ಯಾತನಾಗಿದ್ದ, ಕುಬೇರನ ಅನುಚರನಾದ ಯಕ್ಷನೊಬ್ಬನು ಅಲ್ಲಿಗೆ ಬಂದನು. ರಾಮ-ಕೃಷ್ಣರಿಬ್ಬರೂ ನೋಡುತ್ತಿದ್ದಂತೆಯೇ ಆ ಶಂಖಚೂಡಯಕ್ಷನು–ಶ್ರೀಕೃಷ್ಣನನ್ನೇ ಏಕಮಾತ್ರಸ್ವಾಮಿಯೆಂದು ಭಾವಿಸಿದ್ದ, ಭಯದಿಂದ ಕೂಗಿಕೊಳ್ಳುತ್ತಿದ್ದ, ಗೋಪಿಕಾಸ್ತ್ರೀಯರನ್ನು ಎತ್ತಿಕೊಂಡು ಯಾವ ವಿಧವಾದ ಶಂಕೆಯೂ ಇಲ್ಲದೆ ಉತ್ತರದಿಕ್ಕಿಗೆ ಓಡಿಹೋದನು. ಗೋವುಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗುವಂತೆ–'ಕೃಷ್ಣ! ಬಲರಾಮ! ರಕ್ಷಿಸಿರಿ'–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದ ಪ್ರೇಯಸಿಯರಾದ ಗೋಪಿಕಾಸ್ತ್ರೀಯರನ್ನು ಎತ್ತಿಕೊಂಡು ಹೋಗುತ್ತಿದ್ದ ಯಕ್ಷನನ್ನು ರಾಮ-ಕೃಷ್ಣರು ಹಿಂಬಾಲಿಸಿದರು. 'ಮಾಭೈಷ್ಟ' 'ಹೆದರಬೇಡಿರಿ'–ಎಂದು ಆಶ್ವಾಸನೆಯನ್ನು ನೀಡುತ್ತಾ ವೇಗವಂತರಾದ ರಾಮ-ಕೃಷ್ಣರು ಸಾಲವೃಕ್ಷಗಳನ್ನೆತ್ತಿಕೊಂಡು ಅತ್ಯಂತಶೀಘ್ರವಾಗಿ ಗುಹ್ಯಕಾಧಮನಾದ ಶಂಖಚೂಡನ ಬಳಿಗೆ ಹೋದರು. ತನ್ನ ಸಮೀಪಕ್ಕೆ ಬಂದ ಬಲರಾಮ-ಕೃಷ್ಣರನ್ನು ನೋಡಿ ಶಂಖಚೂಡನು ಕಲಿ-ಮೃತ್ಯುಗಳೇ ತನ್ನ ಸಂಹಾರಕ್ಕಾಗಿ ಬಂದುಬಿಟ್ಟಿರುವರೆಂದು ಭಯಗೊಂಡನು. ಮೂರ್ಖನಾದ ಆ ಯಕ್ಷನು ಒಡನೆಯೇ ಗೋಪಿಯರನ್ನು ಬಿಟ್ಟು ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಪಲಾಯನಮಾಡಿದನು. ಗೋಪಿಕಾಸ್ತ್ರೀಯರನ್ನು ರಕ್ಷಿಸುವ ಸಲುವಾಗಿ ಬಲರಾಮನು ಅಲ್ಲಿಯೇ ನಿಂತನು. ಶಂಖಚೂಡನ ತಲೆಯಲ್ಲಿದ್ದ ರತ್ನವನ್ನು ಅಪಹರಿಸುವ ಸಲುವಾಗಿ ಶ್ರೀಕೃಷ್ಣನು ಯಕ್ಷನನ್ನು ಹಿಂಬಾಲಿಸಿ ಆತನು ಹೋದಕಡೆಗೆಲ್ಲಾ ಹೋಗುತ್ತಿದ್ದನು. ಸ್ವಲ್ಪದೂರ ಹೋಗುವುದರೊಳಗಾಗಿಯೇ ಶ್ರೀಕೃಷ್ಣನು ದುರಾತ್ಮನಾದ ಯಕ್ಷನನ್ನು




ಹಿಡಿದು ನಿಲ್ಲಿಸಿ ಮುಷ್ಟಿಯಿಂದ ಅವನ ತಲೆಯನ್ನು ಪ್ರಹರಿಸಿ ತಲೆಯಲ್ಲಿದ್ದ ರತ್ನವನ್ನು ಅಪಹರಿಸಿದನು.

ಹೀಗೆ ಶ್ರೀಕೃಷ್ಣನು ಶಂಖಚೂಡನನ್ನು ಸಂಹರಿಸಿ ಅವನ ತಲೆಯಲ್ಲಿದ್ದ ಪ್ರಕಾಶಮಾನವಾಗಿದ್ದ ಮಣಿಯನ್ನು ತೆಗೆದುಕೊಂಡು ಹಿಂದಿರುಗಿ ಬಂದು ಗೋಪಿಕಾಸ್ತ್ರೀಯರೆಲ್ಲರೂ ನೋಡುತ್ತಿದ್ದಂತೆಯೇ ದಿವ್ಯವಾದ ಆ ಮಣಿಯನ್ನು ಬಲರಾಮನಿಗೆ ಒಪ್ಪಿಸಿದನು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೪ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩೫ನೆಯ ಅಧ್ಯಾಯ

## ಯುಗಳಗೀತೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಗೋಪ್ಯಃ ಕೃಷ್ಣೇ ವನಂ ಯಾತೇ ತಮನುದ್ರುತಚೇತಸಃ ।**
**ಕೃಷ್ಣಲೀಲಾಃ ಪ್ರಗಾಯನ್ತ್ಯೋ ನಿನ್ಯುರ್ದುಃಖೇನ ವಾಸರಾನ್ ॥೧॥**

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಅನುದಿನವೂ ಹಸುಗಳನ್ನು

* **ಕದಾಚಿತ್** = ಶಿವರಾತ್ರಿಯಾದ ಬಳಿಕ ಹೋಳಿಯ ಹುಣ್ಣಿಮೆಯಲ್ಲಿ ಶಂಖಚೂಡನ ವಧೆಯಾಯಿತು–ಎಂದರ್ಥವು.

ಮೇಯಿಸಲು ಬೆಳಗಾದೊಡನೆಯೇ ಅರಣ್ಯಕ್ಕೆ ಹೋಗುತ್ತಿದ್ದನು. ಗೋಪಿಕಾ ಸ್ತ್ರೀಯರ ಮನಸ್ಸೂ ಅವನ ಜೊತೆಯಲ್ಲೇ ಹೋಗಿಬಿಡುತ್ತಿದ್ದಿತು. ಅವರು ಯಾವಾಗಲೂ ಶ್ರೀಕೃಷ್ಣನನ್ನೇ ಚಿಂತಿಸುತ್ತಿದ್ದರು. ಶ್ರೀಕೃಷ್ಣನ ಲೀಲಾ ಪ್ರಸಂಗಗಳನ್ನೇ ಯಾವಾಗಲೂ ಹಾಡುತ್ತಿದ್ದರು. ಹೀಗೆ ಅವರು ಹಗಲನ್ನು ಬಹಳ ಕಷ್ಟದಿಂದ ಕಳೆಯುತ್ತಿದ್ದರು.*

ಹಾಗೆ ವಿರಹತಪ್ತರಾದ ಗೋಪಿಯರು ಒಂದೆಡೆಯಲ್ಲಿ ಸೇರಿ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು.

ಒಬ್ಬ ಗೋಪಿಯು ಹೇಳುತ್ತಾಳೆ :

"ಸಖಿಯರೇ! ನಮ್ಮ ಮುಕುಂದನು ಕೊಳಲು ಹಿಡಿದು, ಎಡ ತೋಳನ್ನು ಎಡಕೆನ್ನೆಗೆ ತಾಕಿಸಿ, ಕೊಳಲನ್ನು ತುಟಿಗೆ ತಗುಲಿಸಿ, ಆರೋಹಣಾವ ರೋಹಣಮಾರ್ಗವನ್ನು ಅನುಸರಿಸಿ, ಹುಬ್ಬನ್ನು ಹಾರಿಸುತ್ತಾ ಮೃದುವಾದ ಬೆರಳುಗಳ ಚಾಲನೆಯಿಂದ ಕೊಳಲನ್ನು ನುಡಿಸುವನು. ವಿಮಾನಸಂಚಾರಿ ಗಳಾದ ಸಿದ್ಧಸ್ತ್ರೀಯರು ತಮ್ಮ ಪತಿಗಳೊಡನೆ ಕರ್ಣಾನಂದಕರವಾದ ಆ ವೇಣುನಾದವನ್ನು ಕೇಳಿ ಅಚ್ಚರಿಗೊಳ್ಳುವರು. ಅಷ್ಟುಮಾತ್ರವಲ್ಲ. ವೇಣು ಗಾನವನ್ನು ಕೇಳಿ ಮನ್ಮಥನ ಬಾಣಗಳ ಲಕ್ಷ್ಯಕ್ಕೆ ಮನಸ್ಸನ್ನೊಡ್ಡಿದ ಅವರು ಲಜ್ಜೆಗೊಳ್ಳುವರು. ವೇಣುಗಾನಶ್ರವಣದಿಂದ ಮೈಮರೆತ ಅವರಿಗೆ ಸೀರೆಯ ಉಡಿಗಂಟು ಬಿಚ್ಚಿಹೋಗಿರುವುದೂ ತಿಳಿಯುವುದಿಲ್ಲ. ಹೀಗೆ ನಮ್ಮ ಇನಿಯನ ವೇಣುಗಾನವು ನಮ್ಮನ್ನು ಮಾತ್ರವೇ ಅಲ್ಲದೇ ಆಕಾಶಸಂಚಾರಿಗಳಾದ ದೇವತೆಗಳನ್ನೂ ವಿಮೋಹಗೊಳಿಸುವುದಾಗಿದೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಸಖಿಯರೇ! ನಾನು ಮತ್ತೊಂದು ಆಶ್ಚರ್ಯಕರವಾದ ವಿಚಾರವನ್ನು

---

* ಇರುಳೆಲ್ಲಾ ರಾಸಕ್ರೀಡೆಯಿಂದ ಶ್ರೀಕೃಷ್ಣನೊಡನೆ ವಿಧವಿಧವಾಗಿ ವಿಹರಿಸುತ್ತಿದ್ದ ಗೋಪಿಯರಿಗೆ ಹಗಲಿನಲ್ಲಿ ಆತನ ವಿಯೋಗದಿಂದ ಮಹಾದುಃಖವೆಂಬುದು ನ್ಯಾಯವೇ ಸರಿ.
(ವೈಜಯಂತೀ)

ಹಲವು ಕಡೆಗಳಲ್ಲಿ ಗುಂಪು-ಗುಂಪಾಗಿ ಸೇರಿ ಮಾತನಾಡಿಕೊಂಡ ಗೋಪಿಯರ ವೃತ್ತಾಂತಸಂಗ್ರಹವೇ ಈ ಅಧ್ಯಾಯದಲ್ಲಿ ವಿವರಿಸಲ್ಪಡುವ ಮುಖ್ಯಾರ್ಥವು.
(ಕ್ರಮಸಂದರ್ಭ)

ಹೇಳುವೆನು ಕೇಳಿರಿ : ಮುತ್ತಿನಹಾರದಂತೆ ಶುಭ್ರವಾದ ನಗೆಯುಳ್ಳ, ವಕ್ಷಃ ಸ್ಥಳದಲ್ಲಿ ಮಿಂಚಿನಂತೆ ಹೊಳೆಯುವ ಲಕ್ಷ್ಮೀದೇವಿಯನ್ನು ಹೊಂದಿರುವ, ಆರ್ತರಾದ ಭಕ್ತಜನರಿಗೆ ಸುಖವನ್ನುಂಟುಮಾಡುವ, ನಂದಗೋಪನ ಮಗ ನಾದ, ನಮ್ಮ ಪ್ರಿಯಕರನಾದ ಶ್ರೀಕೃಷ್ಣನು ಕೊಳಲುನುಡಿಸಲು ಪ್ರಾರಂಭಿಸಿ ದೊಡನೆಯೇ ಗುಂಪು-ಗುಂಪಾಗಿ ಹುಲ್ಲುಮೇಯುತ್ತಿರುವ ಗೋಕುಲದ ಎತ್ತುಗಳೂ, ಮೃಗಗಳೂ, ಹಸುಗಳೂ ಆ ಗಾನಶ್ರವಣದಿಂದ ಮೈಮರೆತು ಮೇಯುವುದನ್ನು ಹಾಗೆಯೇ ನಿಲ್ಲಿಸಿಬಿಡುತ್ತವೆ. ಹಲ್ಲುಗಳಲ್ಲಿ ಕಚ್ಚಿಕೊಂಡಿರುವ ಹುಲ್ಲನ್ನು ಉಗಿಯುವುದೂ ಇಲ್ಲ ; ನುಂಗುವುದೂ ಇಲ್ಲ. ಕಿವಿಗಳನ್ನು ಮೇಲಕ್ಕೆ ಮಾಡಿಕೊಂಡು ಕಿವಿಗಳ ಮೂಲಕವಾಗಿ ಗಾನಸುಧಾರಸವನ್ನು ಪಾನಮಾಡುತ್ತಿವೆಯೋ ಎಂಬಂತೆ ನಿಂತಿರುತ್ತವೆ. ನಿದ್ರೆಮಾಡುತ್ತಿರು ವಂತೆಯೂ ಚಿತ್ರಪಟದಂತೆಯೂ ನಿಶ್ಚಲವಾಗಿ ನಿಂತಿರುತ್ತವೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಗೆಳತಿಯರೇ! ಕೇಳಿರಿ. ಕೆಲವೊಮ್ಮೆ ನಮ್ಮ ಇನಿಯನು ನವಿಲುಗರಿ ಗಳಿಂದಲೂ, ಹೂವಿನ ಗೊಂಚಲುಗಳಿಂದಲೂ, ಹರಿದಳವೇ ಮುಂತಾದ ಬಣ್ಣಗಳಿಂದಲೂ, ಚಿಗುರೆಲೆಗಳಿಂದಲೂ ಶರೀರವನ್ನು ಸಿಂಗರಿಸಿಕೊಂಡು ಜಟ್ಟಿಯಂತೆ ಕಾಣುತ್ತಾ, ಬಲರಾಮನ ಜೊತೆಯಲ್ಲಿ ಕೊಳಲನ್ನೂದುತ್ತಾ ಗೋಪಾಲಕರೊಡನೆ ಆಕಳುಗಳನ್ನು ಅವುಗಳ ಹೆಸರುಗಳನ್ನು ಹಿಡಿದು ಕೂಗುತ್ತಾನೆ. ಆ ಸಮಯದಲ್ಲಿ ವೇಣುಗಾನದ ಮಾಧುರ್ಯವನ್ನು ಕೇಳಿದ ನದಿಗಳು ಸ್ತಂಭಿಸಿಬಿಡುತ್ತವೆ. ಮುಂದಕ್ಕೆ ಹರಿಯುವುದೇ ಇಲ್ಲ. ವಾಯುವು ನಮ್ಮ ಇನಿಯನ ಪಾದಧೂಳಿಯನ್ನು ತಂದು ತಮ್ಮ ಮೇಲೆ ಹಾಕುವನೆಂದು ಭಾವಿಸಿ ಅವು ಸ್ತಬ್ಧವಾಗಿ ನಿಂತಿರುತ್ತವೆ. ಆದರೆ ಆ ನದಿಗಳೂ ನಮ್ಮಂತೆಯೇ ಭಾಗ್ಯಹೀನವಾದುವುಗಳು. ತೆರೆಗಳೆಂಬ ತೋಳುಗಳನ್ನು ನಾಲ್ಕಾರು ಬಾರಿ ಬಾಚಿದರೂ ಅವುಗಳಿಗೆ ಭಗವಂತನ ಪಾದಧೂಳಿಯು ಸಿಕ್ಕದೆ ಕಟ್ಟಕಡೆಗೆ ಪ್ರೇಮಾವೇಶದಿಂದ ತಟಸ್ಥವಾಗಿ ನಿಂತುಬಿಡುತ್ತವೆ."

ಮತ್ತೊಬ್ಬಳು ಹೇಳುತ್ತಾಳೆ :

"ಸಖಿಯರೇ! ಕೇಳಿರಿ. ಯಾವ ರೀತಿಯಲ್ಲಿ ದೇವತೆಗಳು ಅನಂತವಾದ ಮತ್ತು ಅಚಿಂತ್ಯವಾದ ಐಶ್ವರ್ಯಕ್ಕೆ ಸ್ವಾಮಿಯಾದ ಶ್ರೀಮನ್ನಾರಾಯಣನ

ಅಪಾರವಾದ ಶಕ್ತಿಸಾಮರ್ಥ್ಯಗಳನ್ನು ನಾನಾವಿಧವಾದ ರೀತಿಯಲ್ಲಿ ಗಾನ ಮಾಡುತ್ತಾರೆಯೋ ಹಾಗೆಯೇ ಗೋಪಾಲರು ಕಡುಚೆಲುವನಾದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಿರುತ್ತಾರೆ. ಅಚಿಂತ್ಯೈಶ್ವರ್ಯಸಂಪನ್ನ ನಾದ ಶ್ರೀಕೃಷ್ಣನು ವೃಂದಾವನದಲ್ಲಿ ಸಂಚರಿಸುವಾಗ ಕೊಳಲನ್ನೂದುತ್ತಾ ಗೋವರ್ಧನಪರ್ವತದ ತಪ್ಪಲಿನಲ್ಲಿ ಹುಲ್ಲುಮೇಯುತ್ತಿರುವ ಹಸುಗಳ ಹೆಸರು ಹಿಡಿದು ಆಹ್ವಾನಿಸುತ್ತಾನೆ. ಆ ಸಮಯದಲ್ಲಿ ವೃಂದಾವನದಲ್ಲಿರುವ ಮರ-ಗಿಡ-ಬಳ್ಳಿಗಳು ಪುಷ್ಪಗಳಿಂದಲೂ, ಫಲಗಳಿಂದಲೂ ಸಮೃದ್ಧ ವಾಗಿದ್ದು, ಅವುಗಳ ಕೊಂಬೆಗಳು ಫಲ-ಪುಷ್ಪಗಳ ಭಾರದಿಂದ ನೆಲದ ವರೆಗೂ ಬಗ್ಗಿದ್ದು, ತಮ್ಮ ಹೃದಯಕಮಲದಲ್ಲಿಯೂ ವ್ಯಾಪಕನಾದ ಶ್ರೀಕೃಷ್ಣನು ಇರುವನೆಂಬುದನ್ನು ಸೂಚಿಸುತ್ತಿರುವುವೋ ಎಂಬಂತೆ ಕಾಣುತ್ತವೆ. ತಮ್ಮಲ್ಲಿಯೂ ಶ್ರೀಕೃಷ್ಣನಿರುವನೆಂಬ ಭಾವನೆಯಿಂದ ಆ ವೃಕ್ಷಗಳು ಪ್ರಹೃಷ್ಟವಾದ ಶರೀರವನ್ನು ಹೊಂದಿ ರೋಮಾಂಚನವಾದಂತೆ ಮಕರಂದದ ಧಾರೆಯನ್ನು ಸುರಿಸುತ್ತವೆ.”

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

“ಸಖಿಯರೇ! ನಮ್ಮ ಇನಿಯನ ಹಣೆಯಲ್ಲಿ ನೋಡಲು ಬಲುಸೊಗ ಸಾದ ಕಸ್ತೂರೀತಿಲಕವಿದೆ. ಕಂಠದಲ್ಲಿ ತುಳಸೀದಳಗಳಿಂದ ಕೂಡಿದ ವನ ಮಾಲೆಯಿದೆ. ಆತನು ಅಂಗಾಂಗಗಳಿಗೂ ಗಂಧವನ್ನು ಲೇಪಿಸಿಕೊಂಡಿದ್ದಾನೆ. ಇವುಗಳ ಸುಗಂಧವನ್ನು ಆಘ್ರಾಣಿಸಿ ಮದಿಸಿದ ದುಂಬಿಗಳು ಹಾಡುತ್ತವೆ. ಕಿವಿಗಳಿಗಿಂಪಾದ ದುಂಬಿಗಳ ಗಾನವನ್ನು ಆಲಿಸುತ್ತಾ ಶ್ರೀಕೃಷ್ಣನು ದುಂಬಿಗಳ ಝೇಂಕಾರದ ಹಿನ್ನೆಲೆಯಲ್ಲಿಯೇ ಕೊಳಲನ್ನು ನುಡಿಸುತ್ತಾನೆ. ಚೇತೋಹಾರಿ ಯಾದ ಶ್ರೀಕೃಷ್ಣಸ್ವಾಮಿಯ ವೇಣುಗಾನವನ್ನು ಕೇಳುತ್ತಲೇ ಸರೋವರ ದಲ್ಲಿರುವ ಕೊಕ್ಕರೆ, ಹಂಸ, ತಾವರೇಹಕ್ಕಿ, ಕಾರಂಡವ–ಇವೇ ಮುಂತಾದ ಜಲಚರಪಕ್ಷಿಗಳು ಮನಸ್ಸನ್ನೇ ಕಳೆದುಕೊಂಡುಬಿಡುತ್ತವೆ. ಶ್ರೀಕೃಷ್ಣನೇ ಅವುಗಳ ಮನಸ್ಸನ್ನು ವೇಣುಗಾನದ ಮೂಲಕವಾಗಿ ಅಪಹರಿಸಿ ಬಿಡುತ್ತಾನೆ. ಹೀಗೆ ಮನಸ್ಸನ್ನು ನಮ್ಮ ಇನಿಯನ ವಶಕ್ಕೊಪ್ಪಿಸಿದ ಆ ಪಕ್ಷಿಗಳು ಕಣ್ಣುಗಳನ್ನು ಮುಚ್ಚಿಕೊಂಡು ಮೌನವನ್ನು ಧರಿಸಿ ಶ್ರೀಕೃಷ್ಣನನ್ನು ನಿರಾತಂಕವಾಗಿ ಧ್ಯಾನಮಾಡುತ್ತಿರುತ್ತವೆ. ಎಂತಹ ಅಚ್ಚರಿಯದು!”

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

“ಗೆಳತಿಯರೇ! ನಮ್ಮ ಇನಿಯನ ವೇಣುಗಾನವನ್ನು ಕೇಳಿ ಮೋಡ ಗಳಲ್ಲುಂಟಾಗುವ ಪ್ರತಿಕ್ರಿಯೆಯನ್ನು ಹೇಳುವೆನು, ಕೇಳಿರಿ : ನಮ್ಮ ಶ್ಯಾಮ ಸುಂದರನು ಹೂವುಗಳಿಂದಲೇ ಕರ್ಣಕುಂಡಲಗಳನ್ನು ಮಾಡಿಕೊಂಡು ಕಿವಿಯನ್ನು ಅಲಂಕರಿಸಿಕೊಂಡು ಬಲರಾಮನ ಜೊತೆಯಲ್ಲಿ ಗೋವರ್ಧನ ಪರ್ವತದ ತಪ್ಪಲಿನಲ್ಲಿ ನಿಂತು ಸಮಸ್ತಜಗತ್ತನ್ನೂ ಹರ್ಷಗೊಳಿಸುತ್ತಾ ಕೊಳಲನ್ನು ನುಡಿಸುತ್ತಿರುತ್ತಾನೆ. ಕೇವಲ ನುಡಿಸುವುದು ಮಾತ್ರವಲ್ಲ ; ಆನಂದತುಂದಿಲನಾಗಿ ವೇಣುಗಾನದ ಮೂಲಕವಾಗಿ ವಿಶ್ವವನ್ನೇ ಆಲಿಂಗಿಸಿ ಕೊಳ್ಳುತ್ತಾನೆ. ಆ ಸಮಯದಲ್ಲಿ ಮೇಘವು ಕೊಳಲಿನ ಧ್ವನಿಯ ಜೊತೆ ಯಲ್ಲಿ ಮೆಲ್ಲ-ಮೆಲ್ಲನೆ ಗರ್ಜಿಸುತ್ತಿರುತ್ತದೆ. ಶ್ರೀಕೃಷ್ಣನ ಕೊಳಲಿನ ಶಬ್ದವು ಕೇಳದಂತೆ ಜೋರಾಗಿ ಗುಡುಗಿಬಿಟ್ಟರೆ ಶ್ರೀಕೃಷ್ಣನಿಗೆ ಅಪರಾಧವೆಸಗಿ ದಂತಾಗಬಹುದೆಂದು ಶಂಕಿಸಿ ಅದು ಮೆಲ್ಲ-ಮೆಲ್ಲನೆ ಗುಡುಗುತ್ತಿರುತ್ತದೆ. ಕೆಲವು ವೇಳೆ ನಮ್ಮ ಪ್ರಿಯಕರನ ಮೇಲೆ ಹೂಮಳೆಗರೆಯುತ್ತದೆ. ಕೆಲವು ವೇಳೆ ಬಿಸಿಲಿನ ಬೇಗೆಯಿಂದ ಸುಡುತ್ತಿರುವಾಗ ಛತ್ರಿಯಂತೆ ಅವನ ಮೇಲೆ ಹರಡಿಕೊಂಡು ಬೇಗೆಯನ್ನು ಹೋಗಲಾಡಿಸುತ್ತದೆ.”

ಮತ್ತೊಬ್ಬ ಗೋಪಿಯು ಶ್ರೀಕೃಷ್ಣನ ಕೊಳಲಿನ ಮಹಿಮೆಯನ್ನು ಮತ್ತೂ ವರ್ಣಿಸುತ್ತಾಳೆ : “ಯಶೋದಾಮಾತೆಯೇ! ನಿನ್ನ ಮನೋ ಮೋಹಕನಾದ ಮಗನು ಗೋಪಬಾಲಕರೊಡನೆ ಆಟವಾಡುವುದರಲ್ಲಿ ಬಹಳ ನಿಪುಣನು. ಅವನು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದಾನೆ ; ಅತ್ಯಂತ ಚತುರನೂ ಆಗಿದ್ದಾನೆ. ಆತನು ಕೊಳಲು ನುಡಿಸುವುದನ್ನು ಯಾರಿಂದಲೂ ಕಲಿಯಲಿಲ್ಲ. ಯಾವಾಗ ಅವನು ತೊಂಡೇಹಣ್ಣಿಗೆ ಸಮಾನವಾದ ಸುಂದರವಾದ ತನ್ನ ತುಟಿಯ ಮೇಲೆ ಕೊಳಲನ್ನಿಡುವನೋ ಆಗ ಹಲವಾರು ಜಾತಿಯ ರಾಗಗಳು ತಾವೇ ತಾವಾಗಿ ಕೊಳಲಿನಿಂದ ಹೊರಬರುತ್ತಿರುತ್ತವೆ. ಕರ್ಣಾನಂದಕರವಾದ ಆ ವೇಣುಗಾನವನ್ನು ಕೇಳಿ ಇಂದ್ರ-ರುದ್ರ-ಬ್ರಹ್ಮರೇ ಮೊದಲಾದ ದೇವತೆಗಳ ಮತ್ತು ವಿದ್ವಾಂಸರ ಕತ್ತೂ ಮತ್ತು ಮನಸ್ಸೂ ಶ್ರೀಕೃಷ್ಣನ ಕಡೆಗೆ ತಿರುಗುತ್ತವೆ. ಅವರೆಷ್ಟೇ ಕೇಳಿದರೂ ಆನಂದಪಡುವು ದೊಂದರ ಹೊರತಾಗಿ ಶ್ರೀಕೃಷ್ಣನು ನುಡಿಸುತ್ತಿರುವ ರಾಗವಾಗಲೀ ರಾಗದ

ಭೇದವಾಗಲೀ ಯಾವುದೂ ಅವರಿಗೆ ತಿಳಿಯುವುದಿಲ್ಲ. ವೇಣುಗಾನದ ರಹಸ್ಯವನ್ನು ತಿಳಿಯಲಾಗದೆ ಅವರು ವಿಮೋಹಿತರಾಗುತ್ತಾರೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಸಖಿಯರೇ! ನಮ್ಮ ಪ್ರಾಣಸಖನಾದ ಶ್ರೀಕೃಷ್ಣನ ಪಾದಾರವಿಂದ ಗಳಲ್ಲಿ ಧ್ವಜ-ವಜ್ರ-ಕಮಲ-ಅಂಕುಶ–ಇವೇ ಮೊದಲಾದ ವಿಚಿತ್ರವಾದ ಮತ್ತು ಸುಂದರವಾದ ಚಿಹ್ನೆಗಳಿವೆ. ವ್ರಜಭೂಮಿಯು ಗೋವುಗಳ ಗೊರ ಸಿನ ತುಳಿತದಿಂದ ಪೀಡಿಸಲ್ಪಟ್ಟಾಗ ಶ್ರೀಕೃಷ್ಣನು ಅದರ ನೋವನ್ನು ಕಡಿಮೆ ಮಾಡುವ ಸಲುವಾಗಿ ಮದಗಜದಂತೆ ನಿಧಾನವಾಗಿ ಕೊಳಲನ್ನು ನುಡಿಸುತ್ತಾ ಹೋಗುತ್ತಿರುತ್ತಾನೆ. ಅವನ ಚೇತೋಹಾರಿಯಾದ ವೇಣುಗಾನ, ಅವನ ನಡಿಗೆ ಮತ್ತು ಮಂದಹಾಸಗಳು ಅವನ ಮೇಲಿನ ಪ್ರೇಮವನ್ನೂ ಮತ್ತು ಅವನನ್ನು ಸೇರಲೇಬೇಕೆಂಬ ಆಕಾಂಕ್ಷೆಯನ್ನೂ ಹೆಚ್ಚಿಸುತ್ತವೆ. ವಿಲಾಸದಿಂದ ಕೂಡಿದ ಶ್ರೀಕೃಷ್ಣನ ಕುಡಿನೋಟದಿಂದ ಕಾಮತಾಪವನ್ನು ಹೊಂದುವ ನಾವು ವೃಕ್ಷಗಳಂತೆ ಜಡರಾಗಿಬಿಡುತ್ತೇವೆ. ಕಾಮಜ್ವರದಿಂದ ವಿಮೋಹಿತರಾಗುವ ನಾವು ಬಿಚ್ಚಿಹೋಗುತ್ತಿರುವ ತುರುಬನ್ನಾಗಲೀ ಜಾರಿಹೋಗುತ್ತಿರುವ ಸೀರೆಯನ್ನಾಗಲೀ ತಿಳಿಯುವುದೇ ಇಲ್ಲ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಗೆಳತಿಯರೇ! ಮಣಿಗಳ ಸರವು ನಮ್ಮ ಶ್ಯಾಮಸುಂದರನ ಕುತ್ತಿಗೆಯಲ್ಲಿ ಯಾವಾಗಲೂ ರಾರಾಜಿಸುತ್ತಿರುತ್ತದೆ. ತುಳಸಿಯ ವಾಸನೆಯು ಅವನಿಗೆ ಅತಿಪ್ರಿಯವಾಗಿದೆ. ಆದುದರಿಂದ ಶ್ರೀಕೃಷ್ಣನು ತುಳಸೀಮಾಲೆ ಯನ್ನು ನಿರಂತರವಾಗಿ ಧರಿಸಿಯೇ ಇರುತ್ತಾನೆ. ಅವನು ಮಣಿಗಳ ಮಾಲೆ ಯಿಂದ ಹಸುಗಳನ್ನು ಎಣಿಸುತ್ತಾ ಮತ್ತೊಂದು ತೋಳನ್ನು ತನ್ನ ಪ್ರಿಯ ಸಖನ ಹೆಗಲಿನ ಮೇಲಿಟ್ಟು ಹಾಡುತ್ತಿರುತ್ತಾನೆ. ಕೆಲವು ವೇಳೆ ಕೊಳಲನ್ನೂ ಊದುತ್ತಿರುತ್ತಾನೆ. ಕೊಳಲಿನ ಕರ್ಣಾನಂದಕರವಾದ ಧ್ವನಿಯಿಂದ ಆಕರ್ಷಿ ಸಲ್ಪಟ್ಟ ಹೆಣ್ಣುಜಿಂಕೆಗಳು–ನಾವು (ಗೋಪಿಕಾಸ್ತ್ರೀಯರು) ಮನೆ-ಮಠಗಳನ್ನೂ, ಪತಿ-ಸುತರನ್ನೂ, ಬಂಧು-ಬಳಗದವರನ್ನೂ ಪರಿತ್ಯಜಿಸಿ ಶ್ರೀಕೃಷ್ಣನನ್ನು ಹಿಂಬಾಲಿಸಿದಂತೆ–ಸಕಲವನ್ನೂ ಪರಿತ್ಯಜಿಸಿ ಮೇಯುವುದನ್ನೂ ಬಿಟ್ಟು ಗುಣಗಳಿಗೆ ಸಮುದ್ರಪ್ರಾಯನಾದ ಶ್ರೀಕೃಷ್ಣನನ್ನು ಹಿಂಬಾಲಿಸಿ ಹೋಗುತ್ತವೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಯಶೋದಾರಾಣಿ! ಅಂತಹ ಜಗದಾನಂದಕಂದನನ್ನು ಮಗನನ್ನಾಗಿ ಪಡೆದಿರುವ ನೀನೇ ಪುಣ್ಯವತಿಯು. ಅವನ ಮನಸ್ಸು ಬಹಳ ಕೋಮಲ ವಾದುದು. ಆತನು ಬಗೆ-ಬಗೆಯ ಹಾಸ-ಪರಿಹಾಸಗಳ ಮೂಲಕವಾಗಿ ತನ್ನ ಗೆಳೆಯರಿಗೆ ಆನಂದವನ್ನುಂಟುಮಾಡುತ್ತಿರುತ್ತಾನೆ. ನಿನ್ನ ಮಗನು ವಿಚಿತ್ರ ವಾದ, ಗೋಪ-ಗೋಪಿಯರಿಗೆ ಕೌತುಕವನ್ನುಂಟುಮಾಡುವ ವೇಷವನ್ನು ಧರಿಸಿ ಮಲ್ಲಿಗೇಹೂವಿನ ಹಾರವನ್ನು ಹಾಕಿಕೊಂಡು ಗೋ-ಗೋಪಾಲ ರೊಡನೆ ಯಮುನಾನದಿಯ ತೀರದಲ್ಲಿ ಆಟವಾಡುವಾಗ, ಮಂದ ಮಾರುತವು ಗಂಧದ ಮರದ ಮೇಲೆ ಬೀಸಿ ಸುಗಂಧಯುಕ್ತವಾಗಿ ಮತ್ತು ಶೀತಲವಾಗಿ ಯಮುನಾನದಿಯ ದಡವನ್ನನುಸರಿಸಿ ಬೀಸುತ್ತಾ ನಿನ್ನ ಮಗ ನನ್ನೂ ಗೋ-ಗೋಪಾಲರನ್ನೂ ಸಂತೋಷಗೊಳಿಸುತ್ತದೆ. ಗಂಧರ್ವಾಪ್ಸರೆ ಯರೇ ಮೊದಲಾದ ಉಪದೇವತೆಗಳು ವಂದಿ-ಮಾಗಧರಂತೆ ನಿನ್ನ ಮಗನ ಗುಣಗಾನಮಾಡುತ್ತಾ ಆತನನ್ನು ಸುತ್ತುವರಿದು ನಿಂತು ವಾದ್ಯ-ಗೀತಾದಿ ಗಳಿಂದ ಅವನಿಗೆ ಸೇವೆಯನ್ನು ಸಲ್ಲಿಸುತ್ತಿರುತ್ತಾರೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ಸಖಿಯರೇ! ಕೇಳಿರಿ. ನಮ್ಮ ಪ್ರಿಯಕರನು ಗೋಕುಲದ ಗೋವು ಗಳನ್ನು ಬಹಳವಾಗಿ ಪ್ರೀತಿಸುತ್ತಾನೆ. ಹಸುಗಳನ್ನು ರಕ್ಷಿಸುವ ಸಲುವಾಗಿಯೇ ಆತನು ಗೋವರ್ಧನಪರ್ವತವನ್ನೆತ್ತಿದುದು. ಗೆಳತಿಯರೇ! ಈ ವೇಳೆಗಾಗಲೇ ನಮ್ಮ ಪ್ರೇಮದ ಮೂರ್ತಿಯು ಗೋವುಗಳನ್ನು ಹಿಂದಿರುಗಿಸಿಕೊಂಡು ಗೋಕುಲದ ಕಡೆಗೆ ಬರುತ್ತಿರಬಹುದು. ಆದರೂ ಏತಕ್ಕಿಷ್ಟು ತಡವಾಗು ತ್ತಿದೆ? ವಯೋವೃದ್ಧರು, ಜ್ಞಾನವೃದ್ಧರು, ತಪೋವೃದ್ಧರು–ಇವರೆಲ್ಲರೂ ನಮ್ಮ ಯಶೋದಾನಂದನನ ಚರಣಾರವಿಂದಗಳಿಗೆ ನಮಸ್ಕರಿಸುತ್ತಿರ ಬಹುದು. ಅನಂತರ ಅವನು ಕೊಳಲು ನುಡಿಸುತ್ತಾ ಗೋವುಗಳ ಹಿಂಬದಿ ಯಲ್ಲಿ ಬರುತ್ತಿದ್ದಾನೆ. ಅವನ ಹಿಂಬದಿಯಲ್ಲಿ ಗೋವಳರು ನಮ್ಮ ಪ್ರಿಯಕರನ ಗುಣಗಾನಮಾಡುತ್ತಾ ಬರುತ್ತಿದ್ದಾರೆ. ಹಸುಗಳ ಗೊರಸುಗಳ ಸಂಘಟ್ಟನೆ ಯಿಂದಾಗಿ ಭೂಮಿಯಿಂದ ಎದ್ದ ಧೂಳಿಯು ಕೃಷ್ಣನ ವನಮಾಲೆಯನ್ನು

ಮುಚ್ಚಿಕೊಂಡುಬಿಟ್ಟಿದೆ. ನಮ್ಮ ಪ್ರಾಣಕಾಂತನು ದಿನವೆಲ್ಲಾ ತಿರುಗಿ-ತಿರುಗಿ ಬಹಳವಾಗಿ ಬಳಲಿದ್ದಾನೆ. ಅವನ ಬಳಲಿಕೆಯಲ್ಲೇ ಸೌಂದರ್ಯವೂ ಅಡಗಿದೆ. ಅವನು ಅಂತಹ ಒಂದು ಅಲೌಕಿಕವಾದ ಶೋಭೆಯಿಂದಲೇ ನಮ್ಮ ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಾನೆ. ಯಶೋದಾದೇವಿಯ ಗರ್ಭಾಂಬುಧಿಯಲ್ಲಿ ಹುಟ್ಟಿ ಸಮಸ್ತರಿಗೂ ಆಹ್ಲಾದವನ್ನುಂಟುಮಾಡುತ್ತಿರುವ ಈ ನಮ್ಮ ಕೃಷ್ಣಚಂದ್ರನು ಭಕ್ತಜನರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿಯೂ ವಿರಹತಾಪದಿಂದ ಬಳಲುತ್ತಿರುವ ನಮ್ಮ ಆಸೆ-ಆಕಾಂಕ್ಷೆಗಳನ್ನು ಪೂರ್ಣಗೊಳಿಸಿಕೊಡುವುದಕ್ಕಾಗಿಯೂ ನಮ್ಮ ಬಳಿಗೇ ಈಗ ಬರುತ್ತಿದ್ದಾನೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

"ನಮ್ಮ ಇನಿಯನ ಸೌಂದರ್ಯವೆಷ್ಟೆಂಬುದನ್ನು ನೋಡು, ಸಖಿ! ಕೃಷ್ಣನ ಕಣ್ಣುಗಳು ಮದದಿಂದ ಸೊಕ್ಕಿರುವಂತೆ ಕಾಣುತ್ತಿವೆ. ಆತನು ಕುತ್ತಿಗೆಯಲ್ಲಿ ಸುಂದರವಾದ ವನಮಾಲೆಯನ್ನು ಧರಿಸಿದ್ದಾನೆ. ಚಿನ್ನದ ಕರ್ಣಾಭರಣಗಳಿಂದ ಅವನ ಕೆನ್ನೆಗಳು ಅಲಂಕೃತವಾಗಿವೆ. ಸ್ವಲ್ಪ ಪಕ್ವವಾದ ಎಲಚಿಹಣ್ಣಿನಂತೆ ಕಿರುಬಿಳುಪಾದ ಮುಖಾರವಿಂದದಿಂದ ರಾರಾಜಿಸುತ್ತಿದ್ದಾನೆ. ಆತನು ಗೆಳೆಯರನ್ನೂ ತನ್ನ ಹಿರಿಯರನ್ನೂ ಗೌರವದಿಂದ ಕಾಣುತ್ತಾನೆ. ಯದುಪತಿಯಾದ ಶ್ರೀಕೃಷ್ಣನು ಮದಿಸಿದ ಆನೆಯಂತೆ ಮೆಲ್ಲ-ಮೆಲ್ಲನೆ ನಡೆಯುತ್ತಾ ನಮ್ಮ ಕಡೆಗೆ ಬರುತ್ತಿದ್ದಾನೆ. ಸಾಯಂಕಾಲದಲ್ಲಿ ಯಾಮಿನೀಪತಿಯಾದ ಚಂದ್ರನಂತೆ ಪ್ರಮುದಿತವಾದ ಮುಖಕಮಲದಿಂದ ಕೂಡಿದವನಾಗಿ ವ್ರಜದಲ್ಲಿರುವ ನಮ್ಮ ವಿರಹತಾಪವನ್ನೂ ಗೋವುಗಳ ಹಗಲಿನ ತಾಪವನ್ನೂ ಪರಿಹರಿಸುತ್ತಾ ನಮ್ಮ ಸಮೀಪಕ್ಕೆ ಬರುತ್ತಿದ್ದಾನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೇಷ್ಠರಾದ ಗೋಪಿಕಾಸ್ತ್ರೀಯರು ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಹೀಗೆ ಕರ್ಣಾನಂದಕರವಾಗಿ ಮನೋಮೋಹಕ ವಾಗಿ ಗಾನಮಾಡುತ್ತಾ ಶ್ರೀಕೃಷ್ಣನಲ್ಲಿಯೇ ಮನಸ್ಸನ್ನು ಲೀನಗೊಳಿಸಿ

ಶ್ರೀಕೃಷ್ಣಮಯರೇ ಆಗಿ ಅವನಲ್ಲಿಯೇ ರಮಿಸುತ್ತಾ ಹಗಲನ್ನು ಕಳೆಯುತ್ತಿದ್ದರು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೫ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೩೬ನೆಯ ಅಧ್ಯಾಯ

## ಅರಿಷ್ಟಾಸುರನ ಸಂಹಾರ : ಕಂಸನು ಅಕ್ರೂರನನ್ನು ವ್ರಜಕ್ಕೆ ಕಳುಹಿಸಿಕೊಟ್ಟುದು

ಶ್ರೀಶುಕಮುನಿಗಳು ಹೇಳುತ್ತಾರೆ :

**ಅಥ ತರ್ಹ್ಯಾಗತೋ ಗೋಷ್ಠಮರಿಷ್ಟೋ ವೃಷಭಾಸುರಃ ।**
**ಮಹೀಂ ಮಹಾಕಕುತ್ಕಾಯಃ ಕಮ್ಪಯನ್ ಖುರವಿಕ್ಷತಾಮ್ ॥೧॥**

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಗೋ-ಗೋಪಾಲಕರೊಡನೆ ವ್ರಜಕ್ಕೆ ಹಿಂದಿರುಗುತ್ತಿರುವಾಗ ಮಹಾಕಾಯನಾದ ಅರಿಷ್ಟಾಸುರನೆಂಬ ಹೆಸರಿನ ದೈತ್ಯನು ಎತ್ತರವಾದ ಹಿಳಲುಗಳುಳ್ಳ ಗೂಳಿಯ ರೂಪವನ್ನು ಧರಿಸಿ ತನ್ನ ಗೊರಸುಗಳ ಸಂಘಟ್ಟನದಿಂದ ಭೂಮಿಯನ್ನೇ ನಡುಗಿಸುತ್ತಾ ಗೋಕುಲದೊಳಕ್ಕೆ ನುಗ್ಗಿದನು.

ಆ ಮಹಾಸುರನು ಕಾಲಿನ ಗೊರಸುಗಳಿಂದ ಭೂಮಿಯನ್ನು ಕೆರೆದು ಪರ್ವತೋಪಮವಾಗಿ ಧೂಳನ್ನೆಬ್ಬಿಸುತ್ತಾ ಬಾಲವನ್ನು ಸೆಟೆದು ನಿಲ್ಲಿಸಿ ಕೋಡುಗಳಿಂದ ಗದ್ದೆಯ ಬದುಗಳನ್ನೂ ಸರೋವರದ ದಡಗಳನ್ನೂ ತಿವಿದು ಒಡೆದುಹಾಕುತ್ತಾ ಗಟ್ಟಿಯಾಗಿ ಗರ್ಜಿಸುತ್ತಿದ್ದನು. ಆ ಗೂಳಿಯ ರೂಪದ ರಾಕ್ಷಸನು ಬಾರಿ-ಬಾರಿಗೂ ಸ್ವಲ್ಪ-ಸ್ವಲ್ಪ ಪುರೀಷ-ಮೂತ್ರೋತ್ಸರ್ಜನೆಗಳನ್ನು ಮಾಡುತ್ತಿದ್ದನು. ಎವೆಯಿಕ್ಕದ ಕಣ್ಣುಗಳಿಂದ ದುರುಗುಟ್ಟಿಕೊಂಡು ನೋಡುತ್ತಿದ್ದನು. ಅವನ ನಿಷ್ಠುರವಾದ ಗುಟರಿನಿಂದ ಮನುಷ್ಯಸ್ತ್ರೀಯರ ಮತ್ತು ಹಸುಗಳ ಗರ್ಭಗಳು ಅಕಾಲದಲ್ಲಿ ಕಳಚಿಬೀಳುತ್ತಿದ್ದುವು. ಕೆಲವರಿಗೆ

---

* ಯುಗಳಗೀತೆ : ಎರಡೆರಡು ಶ್ಲೋಕಗಳನ್ನು ಸೇರಿಸಿ ಒಂದು ಅನ್ವಯವಿರುವುದರಿಂದ ಇದಕ್ಕೆ ಯುಗಳಗೀತೆಯೆಂದು ಹೆಸರು.

ಭಯದಿಂದಲೇ ಗರ್ಭಸ್ರಾವವಾಗುತ್ತಿದ್ದಿತು.* ಅರಿಷ್ಟಾಸುರನ ಹಿಳಲಿನ ಮೇಲೆ ಅದು ಪರ್ವತವಾಗಿರಬಹುದೆಂಬ ಭ್ರಾಂತಿಯಿಂದ ಮೋಡಗಳು ಕುಳಿತುಕೊಳ್ಳುತ್ತಿದ್ದುವು. ತೀಕ್ಷ್ಣವಾದ ಕೊಂಬುಗಳನ್ನು ಹೊಂದಿದ್ದ ಗೂಳಿಯ ರೂಪದ ರಾಕ್ಷಸನನ್ನು ನೋಡಿ ಸಮಸ್ತಗೋಪ-ಗೋಪಿಯರೂ ಭಯಗೊಂಡರು. ಪಶುಗಳಾದರೋ ಅತ್ಯಂತಭಯದಿಂದ ಗೊಂತುಗಳನ್ನೇ ಕಿತ್ತುಕೊಂಡು ಗೋಕುಲವನ್ನೇ ತೊರೆದು ಓಡಿಹೋದುವು.

ಆ ಸಮಯದಲ್ಲಿ ಸಮಸ್ತವ್ರಜವಾಸಿಗಳೂ–'ಕೃಷ್ಣ! ಕೃಷ್ಣ! ನಮ್ಮನ್ನು ಕಾಪಾಡು'–ಎಂದು ಹೇಳುತ್ತಾ ಶ್ರೀಕೃಷ್ಣನನ್ನು ಶರಣುಹೊಂದಿದರು. ಗೋಕುಲವು ಅತ್ಯಂತ ಭಯಾರ್ತವಾಗಿರುವುದನ್ನು ಶ್ರೀಕೃಷ್ಣನು ನೋಡಿದನು. 'ಮಾಭೈಷ್ಟ' 'ಭಯಪಡಬೇಡಿರಿ'–ಎಂದು ವ್ರಜವಾಸಿಗಳಿಗೆ ಆಶ್ವಾಸನೆಯನ್ನು ನೀಡುತ್ತಾ ಆತನು ವೃಷಾಸುರನಿಗೆ ಕೂಗಿ ಹೇಳಿದನು :

**ಗೋಪಾಲೈಃ ಪಶುಭಿರ್ಮನ್ದ ತ್ರಾಸಿತೈಃ ಕಿಮಸತ್ತಮ ।**
**ಬಲದರ್ಪಹಾಹಂ ದುಷ್ಟಾನಾಂ ತ್ವದ್ವಿಧಾನಾಂ ದುರಾತ್ಮನಾಮ್ ॥೭॥**

"ಮೂರ್ಖನೇ! ಗೋಪಾಲರನ್ನೂ ಗೋವುಗಳನ್ನೂ ಏಕೆ ಹೆದರಿಸುತ್ತಿರುವೆ? ದುರಾತ್ಮರಾದ ನಿನ್ನಂತಹ ದುಷ್ಟರ ಬಲ-ದರ್ಪಗಳನ್ನು ವಿನಾಶಗೊಳಿಸಲು ನಾನಿದ್ದೇನೆ"–ಎಂದು ಹೇಳುತ್ತಾ ಭುಜವನ್ನು ತಟ್ಟಿಕೊಂಡು ಚಪ್ಪಾಳೆಯ ಶಬ್ದದಿಂದ ಅರಿಷ್ಟಾಸುರನ ಕೋಪವನ್ನು ಕೆರಳಿಸುತ್ತಾ ಪಕ್ಕದಲ್ಲಿದ್ದ ಗೆಳೆಯನ ಹೆಗಲಮೇಲೆ ನೀಳವಾದ ತೋಳನ್ನಿಟ್ಟುಕೊಂಡು ನಿಂತನು. ವೃಷಭಾಸುರನು ಕೂಡ ಕೋಪಗೊಂಡವನಾಗಿ ಗೊರಸುಗಳಿಂದ ಭೂಮಿಯನ್ನು ಕೆರೆಯುತ್ತಾ, ಎತ್ತಿದ ಬಾಲದಿಂದ ಆಕಾಶದಲ್ಲಿದ್ದ ಮೇಘಗಳನ್ನೇ ತಿರುಗಿಸುತ್ತಾ ಶ್ರೀಕೃಷ್ಣನ ಬಳಿಗೆ ಧಾವಿಸಿಬಂದನು. ಆ ದೈತ್ಯನು ತನ್ನ ಕೊಂಬುಗಳನ್ನು ಮುಂದಕ್ಕೆ ಚಾಚಿದನು. ಸ್ತಬ್ಧವಾಗಿದ್ದು, ಕೆಂಡದಂತೆ

---

* ಆಚತುರ್ಥಾದ್ಭವೇತ್ಸ್ರಾವಃ ಪಾತಃ ಪಞ್ಚಮಷಷ್ಠಯೋಃ ।
ಅತ ಊರ್ಧ್ವಂ ತು ನಾರೀಣಾಂ ಪ್ರಸವಃ ಪರಿಕೀರ್ತಿತಃ ॥

ಸ್ತ್ರೀಗರ್ಭವಳಿದಲ್ಲಿ ನಾಲ್ಕು ತಿಂಗಳವರೆಗೂ ಸ್ರಾವವೆಂದೂ ಐದಾರು ತಿಂಗಳಲ್ಲಿ ಪಾತವೆಂದೂ ತರುವಾಯ ಪ್ರಸವವೆಂದೂ ಹೆಸರು.

ಕೆಂಪಾಗಿದ್ದ ಕಣ್ಣುಗಳಿಂದ ಶ್ರೀಕೃಷ್ಣನನ್ನು ದುರುಗುಟ್ಟಿಕೊಂಡು ನೋಡುತ್ತಾ ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದಂತೆ ಅತ್ಯಂತವೇಗವಾಗಿ ಶ್ರೀಕೃಷ್ಣನನ್ನು ಆಕ್ರಮಿಸಿದನು. ಶ್ರೀಕೃಷ್ಣನು ವಜ್ರಾಯುಧದೋಪಾದಿಯಲ್ಲಿ ಧಾವಿಸಿ




ಬಂದ ಅರಿಷ್ಟಾಸುರನನ್ನು ಅವನ ಕೊಂಬುಗಳಲ್ಲಿ ಹಿಡಿದು–ಆನೆಯು ಎದುರಾನೆಯನ್ನು ಹಿಂದಕ್ಕೆ ತಳ್ಳುವಂತೆ-ಹದಿನೆಂಟು ಹೆಜ್ಜೆಗಳಷ್ಟು ಹಿಂದಕ್ಕೆ ತಳ್ಳಿಬಿಟ್ಟನು. ಹೀಗೆ ಶ್ರೀಕೃಷ್ಣನಿಂದ ತಳ್ಳಲ್ಪಟ್ಟು ಕೆಳಕ್ಕೆ ಬಿದ್ದರೂ ಆ ರಾಕ್ಷಸನು ಶೀಘ್ರವಾಗಿಯೇ ಮೇಲೆದ್ದು ನಿಂತನು. ಅವನ ಶರೀರವು ಬೆವರುತ್ತಿದ್ದಿತು. ಆತನು  ಬಿರುಸಾಗಿ ನಿಟ್ಟುಸಿರುಬಿಡುತ್ತಿದ್ದನು. ಅತ್ಯಂತಕ್ರುದ್ಧನಾಗಿದ್ದ ಅವನು ಪುನಃ ಶ್ರೀಕೃಷ್ಣನ ಮೇಲೆ ಬಿದ್ದನು. ಪುನಃ ತನ್ನ ಮೇಲೆ ಬೀಳುತ್ತಿರುವ ವೃಷಭಾಸುರನನ್ನು ಶ್ರೀಕೃಷ್ಣನು ನೋಡಿ ಹಿಂದಿನಂತೆಯೇ ಅವನನ್ನು ಕೊಂಬುಗಳಲ್ಲಿ ಹಿಡಿದು ನೆಲದಲ್ಲಿ ಕೆಡಹಿ, ಕಾಲಿನಿಂದ ತುಳಿದು ಬಟ್ಟೆಯನ್ನು ಹಿಂಡುವಂತೆ  ಅದರ ಎರಡು ಕೊಂಬುಗಳನ್ನು ಹಿಗ್ಗಾ-ಮುಗ್ಗಾ ತಿರುಗಿಸಿ ಎರಡು ಕೊಂಬುಗಳನ್ನೂ ಕಿತ್ತು ಆ ಕೊಂಬುಗಳಿಂದಲೇ ಅರಿಷ್ಟಾಸುರನನ್ನು ಚೆನ್ನಾಗಿ ಪ್ರಹರಿಸಿದನು. ಹೀಗೆ ಶ್ರೀಕೃಷ್ಣನಿಂದ ಪ್ರಹರಿಸಲ್ಪಟ್ಟ ವೃಷಭಾಸುರನು ರಕ್ತವನ್ನು ಕಾರುತ್ತಾ, ಮೂತ್ರ-ಪುರೀಷಗಳನ್ನು ಉತ್ಸರ್ಜಿಸುತ್ತಾ, ಕಾಲುಗಳನ್ನು ಬಡಿಯುತ್ತಾ, ಕಣ್ಣುಗಳನ್ನು ತಿರುಗಿಸುತ್ತಾ ಬಹಳ ಕಷ್ಟದಿಂದ ಮೃತ್ಯುವಿನ ಮನೆಯನ್ನು ಸೇರಿದನು. ಅರಿಷ್ಟಾಸುರನ ಸಂಹಾರವಾದೊಡನೆಯೇ ದೇವತೆಗಳು ಪುಷ್ಪವೃಷ್ಟಿಗೈದು ಶ್ರೀಕೃಷ್ಣನನ್ನು ಸ್ತುತಿಸಿದರು.

ಮಹಾರಾಜ! ಹೀಗೆ ವೃಷಭಾಸುರನನ್ನು ಗೋಪಿಯರಿಗೆ ನೇತ್ರಾನಂದಕರನಾದ ಶ್ರೀಕೃಷ್ಣನು ಸಂಹರಿಸಿ ಗೋಪ-ಗೋಪಿಯರಿಂದ ಸ್ತುತಿಸಲ್ಪಡುತ್ತಾ ಬಲರಾಮನೊಡನೆ ಗೋಕುಲವನ್ನು ಪ್ರವೇಶಿಸಿದನು.

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣನ ಲೀಲೆಯು ಪರಮಾದ್ಭುತವಾದುದು. ಅದ್ಭುತಕರ್ಮನಾದ ಶ್ರೀಕೃಷ್ಣನು ಅರಿಷ್ಟಾಸುರನನ್ನು ಸಂಹರಿಸಿದನಂತರ ದೇವರ್ಷಿಗಳಾದ ನಾರದರು ಕಂಸನ ಬಳಿಗೆ ಹೋಗಿ ಹೇಳಿದರು :

"ಕಂಸಸಾರ್ವಭೌಮನೇ! ನಿನಗೆ ಮಂಗಳವಾಗಲಿ. ನಾನು ಕೆಲವು ರಹಸ್ಯವಿಷಯಗಳನ್ನು ನಿನಗೆ ತಿಳಿಸುವ ಸಲುವಾಗಿ ಬಂದಿರುವೆನು. ಬಂಡೆಯ ಮೇಲೆ ಅಪ್ಪಳಿಸಲು ಹೋದಾಗ ನಿನ್ನ ಕೈಯಿಂದ ತಪ್ಪಿಸಿಕೊಂಡ ಹೆಣ್ಣು ಶಿಶುವು ಯಶೋದಾದೇವಿಯ ಪುತ್ರಿಯು. ಗೋಕುಲದಲ್ಲಿ ಕೃಷ್ಣನೆಂಬ ಹೆಸರಿನಿಂದ ಯಾವ ಬಾಲಕನಿರುವನೋ ಅವನು ದೇವಕೀದೇವಿಯ ಪುತ್ರನು. ಬಲರಾಮನೆಂಬ ಹೆಸರಿನಿಂದ ಇರುವ ಬಾಲಕನು ರೋಹಿಣೀ ದೇವಿಯ ಪುತ್ರನು. ವಸುದೇವನು ನಿನಗೆ ಭಯಗೊಂಡು ತನ್ನ ಇಬ್ಬರು ಮಕ್ಕಳನ್ನೂ ತನ್ನ ಮಿತ್ರನಾದ ನಂದಗೋಪನ ಮನೆಯಲ್ಲಿ ಬಿಟ್ಟಿದ್ದಾನೆ. ದೇವಕೀದೇವಿಯ ಪುತ್ರನಾದ ಆ ಕೃಷ್ಣನೆಂಬ ಬಾಲಕನೇ ನಿನ್ನ ಅನುಚರ ರಾದ ರಾಕ್ಷಸರೆಲ್ಲರನ್ನೂ ಸಂಹರಿಸಿರತಕ್ಕವನು. ಆದುದರಿಂದ ನೀನು ಕೃಷ್ಣನ ವಿಷಯದಲ್ಲಿ ಎಚ್ಚರಿಕೆಯಿಂದಿರುವುದು ಸೂಕ್ತವಾಗಿದೆ."

ಪರೀಕ್ಷಿತಮಹಾರಾಜ! ಮಹರ್ಷಿಗಳಾದ ನಾರದರ ಈ ಮಾತುಗಳನ್ನು ಕೇಳುತ್ತಲೇ ಕಂಸನು ಕೋಪದಿಂದ ಕಿಡಿ-ಕಿಡಿಯಾದನು. ಅವನ ಇಂದ್ರಿಯಗಳು ಕಂಪಿಸತೊಡಗಿದುವು. ವಸುದೇವನನ್ನು ಒಡನೆಯೇ ಸಂಹರಿಸಿಬಿಡಲು ತೀಕ್ಷ್ಣವಾದ ಕತ್ತಿಯನ್ನು ಒರೆಯಿಂದ ಸೆಳೆದನು. ನಾರದರು ಒಡನೆಯೇ ಅವನನ್ನು ತಡೆದು ನಿಲ್ಲಿಸುತ್ತಾ ಅವನ ಮಕ್ಕಳು ಮಾತ್ರವೇ ಕಂಸನಿಗೆ ಮೃತ್ಯುರೂಪರಾಗಿರುವರೆಂಬುದನ್ನು ಆತನಿಗೆ ತಿಳಿಹೇಳುತ್ತಾ ವಸುದೇವನನ್ನು ಸಂಹರಿಸುವುದು ಅನುಚಿತವೆಂಬುದನ್ನೂ ಆತನಿಗೆ ಮನದಟ್ಟುಮಾಡಿಕೊಟ್ಟರು. ವಸುದೇವನ ಮಕ್ಕಳೇ ತನಗೆ ಮೃತ್ಯುಗಳೆಂದು ಭಾವಿಸಿದರೂ ಕಂಸನು ವಸುದೇವನಿಗೂ ದೇವಕಿಗೂ ಕೋಳಗಳನ್ನು ತೊಡಿಸಿ ಅವರನ್ನು

ಸೆರೆಮನೆಯಲ್ಲಿರಿಸಿದನು. ನಾರದಮಹರ್ಷಿಗಳು ಹೊರಟುಹೋದನಂತರ ಕಂಸನು ಕೇಶಿಯೆಂಬ ರಾಕ್ಷಸನನ್ನು ಕರೆದು ಹೇಳಿದನು :

"ಕೇಶಿರಾಕ್ಷಸನೇ! ನೀನೀಗಲೇ ಗೋಕುಲಕ್ಕೆ ಹೋಗಿ ಅಲ್ಲಿರುವ ನನ್ನ ಶತ್ರುಗಳಾದ ಕೃಷ್ಣ-ಬಲರಾಮರನ್ನು ಸಂಹರಿಸು."

ಕೇಶಿಯು ಹಾಗೆಯೇ ಆಗಲೆಂದು ಹೇಳಿ ಹೊರಟುಹೋದನು. ಕೇಶಿಯು ಹೊರಟುಹೋದನಂತರ ಕಂಸನು ಮುಷ್ಟಿಕ, ಚಾಣೂರ, ಶಲಕ, ತೋಶಲ–ಇವರೇ ಮೊದಲಾದ ಜಟ್ಟಿಗಳನ್ನೂ, ಮಂತ್ರಿಗಳನ್ನೂ, ಮಾವಟಿಗರನ್ನೂ ಕರೆಯಿಸಿ ಹೇಳಿದನು :

"ವೀರರಾದ ಚಾಣೂರ-ಮುಷ್ಟಿಕರೇ! ನಾನು ಹೇಳಲಿರುವ ಈ ಮಾತುಗಳನ್ನು ತದೇಕಚಿತ್ತರಾಗಿ ಕೇಳಿರಿ. ವಸುದೇವನ ಮಕ್ಕಳಾದ ಬಲರಾಮ-ಕೃಷ್ಣರೆಂಬ ಇಬ್ಬರು ಮಕ್ಕಳು ನಂದಗೋಕುಲದಲ್ಲಿದ್ದಾರೆ. ನನ್ನ ಮರಣಕ್ಕೆ ಅವರೇ ಕಾರಣರಾಗುವರೆಂದು ಹೇಳಲ್ಪಟ್ಟಿದ್ದಾರೆ. ಅವರೇನಾದರೂ ಇಲ್ಲಿಗೆ ಬಂದರೆ ನೀವು ಅವರನ್ನು ಮಲ್ಲಯುದ್ಧದ ಮೂಲಕವಾಗಿ ನಾನಾಪ್ರಕಾರವಾದ ವರಸೆಗಳನ್ನು ತೋರಿಸುತ್ತಾ ಸಂಹರಿಸಿರಿ. ಮಲ್ಲಯುದ್ಧಕ್ಕಾಗಿ ರಂಗವನ್ನು ಕಲ್ಪಿಸಿರಿ. ರಂಗದ ಸುತ್ತಲೂ ಬಗೆ-ಬಗೆಯಾದ ಎತ್ತರವಾದ ಆಸನಗಳನ್ನು ಕಲ್ಪಿಸಿರಿ. ಪಟ್ಟಣಿಗರೂ ದೇಶೀಯ ಜನರೂ ಸ್ವೇಚ್ಛೆಯಿಂದ ಮಲ್ಲಯುದ್ಧವನ್ನು ನೋಡಲಿ."

ಚಾಣೂರ-ಮುಷ್ಟಿಕರಿಗೆ ಮಲ್ಲಯುದ್ಧದ ವಿಷಯವಾಗಿ ಹೇಳಿದ ನಂತರ ಕಂಸನು ಮಾವಟಿಗನನ್ನು ಕುರಿತು ಹೇಳುತ್ತಾನೆ :

"ಮಾವಟಿಗನೇ! ನೀನು ಆನೆಗಳ ನಿಯಂತ್ರಣದಲ್ಲಿ ಅತ್ಯಂತ ಚತುರನಾಗಿರುವೆ. ನಮ್ಮಲ್ಲಿರುವ ಅಜೇಯವಾದ ಕುವಲಯಾಪೀಡಸಲಗವನ್ನು ನೀನು ರಂಗಸ್ಥಳದ ಮಹಾದ್ವಾರದಲ್ಲಿ ನಿಲ್ಲಿಸಿಕೊಂಡಿರಬೇಕು. ನನ್ನ ಶತ್ರುಗಳಾದ ರಾಮ-ಕೃಷ್ಣರು ಮಹಾದ್ವಾರಕ್ಕೆ ಬಂದೊಡನೆಯೇ ಕುವಲಯಾಪೀಡಸಲಗವನ್ನು ಅವರ ಮೇಲೆ ನುಗ್ಗಿಸಿ ಅವರನ್ನು ಸಂಹರಿಸಬೇಕು." ಮಾವಟಿಗನಿಗೆ ಹಾಗೆ ಹೇಳಿದ ಬಳಿಕ ಕಂಸನು ಮಹಾಮಾತ್ಯರನ್ನು ಕುರಿತು ಹೇಳುತ್ತಾನೆ :

"ಮಹಾಮಾತ್ಯರೇ! ಚತುರ್ದಶೀತಿಥಿಯಲ್ಲಿ ಧನುರ್ಯಾಗವು ಯಥಾ

ವಿಧಿಯಾಗಿ ಆರಂಭವಾಗಲಿ. ವರದನಾದ ಭೂತಪತಿಯಾದ ರುದ್ರನ ಪ್ರೀತ್ಯರ್ಥವಾಗಿ ಪರಿಶುದ್ಧವಾದ ಪಶುಗಳನ್ನು ಬಲಿಕೊಡಿರಿ.”

ಪರೀಕ್ಷಿತಮಹಾರಾಜ! ಹೀಗೆ ಮಂತ್ರಿಗಳಿಗೆ ಆಜ್ಞಾಪಿಸಿದನಂತರ ತಂತ್ರಜ್ಞನಾದ ಆ ಕಂಸನು ಯದುಶ್ರೇಷ್ಠನಾದ ಅಕ್ರೂರನನ್ನು ಕರೆಯಿಸಿ ಅವನ ಕೈಗಳನ್ನು ಹಿಡಿದುಕೊಂಡು ಅವನಿಗೆ ಹೇಳಿದನು :

“ಅಕ್ರೂರನೇ! ನೀನು ಉದಾರನಾದ ಮಹಾದಾನಿಯಾಗಿರುವೆ. ಎಲ್ಲ ಪ್ರಕಾರಗಳಿಂದಲೂ ನೀನು ನನಗೆ ಅತ್ಯಂತ ಆದರಣೀಯನಾಗಿರುವೆ. ಇಂದು ನೀನು ನನಗೆ ಮಿತ್ರೋಚಿತವಾದ ಒಂದು ಕಾರ್ಯವನ್ನು ಮಾಡಿಕೊಡಬೇಕಾಗಿದೆ. ಭೋಜ-ವೃಷ್ಣಿವಂಶೀಯರಲ್ಲಿ ನಿನಗಿಂತಲೂ ಪ್ರಿಯನಾದವನಾಗಲೀ, ಹಿತವಾದವನಾಗಲೀ ಬೇರೆ ಯಾರೂ ನನಗೆ ಇರುವುದಿಲ್ಲ. ನಾನು ಹೇಳಲಿರುವ ಈ ಕಾರ್ಯವು ಅತ್ಯಂತ ಮಹತ್ತ್ವಪೂರ್ಣದ್ದಾಗಿದೆ. ಯದ್ಯಪಿ ಇಂದ್ರನು ಸ್ವತಃ ಸಮರ್ಥನಾಗಿದ್ದರೂ ಮಹಾವಿಷ್ಣುವನ್ನು ಆಶ್ರಯಿಸಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವಂತೆ ಈ ಮಹಾಕಾರ್ಯದ ಸಾಧನೆಗಾಗಿ ನಾನು ನಿನ್ನನ್ನು ಆಶ್ರಯಿಸುತ್ತಿದ್ದೇನೆ. ಅಕ್ರೂರ! ನೀನೀಗಲೇ ಗೋಕುಲಕ್ಕೆ ಹೋಗಬೇಕು. ವಸುದೇವನ ಇಬ್ಬರು ಮಕ್ಕಳೂ ಅಲ್ಲಿಯೇ ಇದ್ದಾರೆ. ಅವರನ್ನು ಇದೇ ರಥದಲ್ಲಿ ಕುಳ್ಳಿರಿಸಿಕೊಂಡು ಶೀಘ್ರಾತಿಶೀಘ್ರವಾಗಿ ಇಲ್ಲಿಗೆ ನೀನು ಕರೆತರಬೇಕು. ವಿಷ್ಣುವಿನ ಮೇಲೆ ವಿಶ್ವಾಸವನ್ನಿಟ್ಟಿರುವ ದೇವತೆಗಳು ಆ ಇಬ್ಬರು ಬಾಲಕರೇ ನನ್ನ ಮರಣಕ್ಕೆ ಕಾರಣರಾಗುವರೆಂದು ನಿಶ್ಚಯಿಸಿಬಿಟ್ಟಿದ್ದಾರೆ. ಆದುದರಿಂದ ನೀನು ಆ ಇಬ್ಬರನ್ನೂ ಇಲ್ಲಿಗೆ ಅವಶ್ಯವಾಗಿ ಕರೆತರಬೇಕು. ಇದೂ ಅಲ್ಲದೆ ನಂದಗೋಪನೇ ಮೊದಲಾದ ಗೋಪಾಲರೂ ಅಪಾರವಾದ ಕಾಣಿಕೆಗಳೊಡನೆ ಇಲ್ಲಿಗೆ ಬರುವಂತೆ ಮಾಡು. ಅಕ್ರೂರ! ಅವರು ಇಲ್ಲಿಗೆ ಬಂದನಂತರ ಮೃತ್ಯುವಿಗೆ ಸಮಾನವಾಗಿರುವ ನನ್ನ ಕುವಲಯಾಪೀಡಸಲಗದಿಂದ ಆ ಬಾಲಕರನ್ನು ತುಳಿಸಿ ಸಾಯುವಂತೆ ಮಾಡುತ್ತೇನೆ. ಒಂದು ವೇಳೆ ಅವರು ಕುವಲಯಾಪೀಡಸಲಗದಿಂದ ತಪ್ಪಿಸಿಕೊಂಡುಬಿಟ್ಟರೆ ಸಿಡಿಲಿಗೆ ಸಮಾನರಾದ ಅಥವಾ ವಜ್ರಾಯುಧಸದೃಶರಾದ ಚಾಣೂರ, ಮುಷ್ಟಿಕರೇ ಮೊದಲಾದ ಜಟ್ಟಿಗಳೊಡನೆ ಮಲ್ಲಯುದ್ಧವನ್ನು ಮಾಡಿಸಿ ಬಲರಾಮ-ಕೃಷ್ಣರನ್ನು ಧ್ವಂಸಮಾಡುತ್ತೇನೆ. ಹೀಗೆ ಬಲರಾಮ-

ಕೃಷ್ಣರ ಅವಸಾನವಾದನಂತರ ವಸುದೇವನೇ ಮೊದಲಾದ ವೃಷ್ಣಿಗಳೂ ಭೋಜವಂಶೀಯರೂ, ದಾಶಾರ್ಹವಂಶೀಯರೂ ತಮ್ಮ ಬಂಧು-ಬಾಂಧವರ ಸಹಿತವಾಗಿ ದುಃಖಿತಪ್ತರಾಗುತ್ತಾರೆ. ಬಳಿಕ ಗರ್ವಿಷ್ಠರಾದ ಅವರೆಲ್ಲರನ್ನೂ ನಾನೇ ಸಂಹರಿಸುತ್ತೇನೆ.

ನನ್ನ ತಂದೆಯಾದ ಉಗ್ರಸೇನನು ಈಗಾಗಲೇ ಮುದುಕನಾಗಿ ಬಿಟ್ಟಿದ್ದಾನೆ. ಆದರೂ ಅವನಿಗೆ ರಾಜ್ಯಲೋಭವಿದೆ. ವಸುದೇವಾದಿಗಳನ್ನು ಸಂಹರಿಸಿದನಂತರ ರಾಜ್ಯಲೋಭಿಯಾದ ಈ ನನ್ನ ತಂದೆಯನ್ನೂ ಅವನ ತಮ್ಮ ದೇವಕನನ್ನೂ ಮತ್ತು ನನ್ನನ್ನು ದ್ವೇಷಿಸುವವರೆಲ್ಲರನ್ನೂ ಒಂದೇ ಬಾರಿಗೆ ಕತ್ತಿಯಿಂದ ತರಿದುಹಾಕುತ್ತೇನೆ. ಪ್ರಾಣಸಖನೇ! ಅನಂತರವೇ ಈ ಭೂಮಂಡಲವು ನನಗೆ ಕಂಟಕರಹಿತವಾಗುತ್ತದೆ. ಯಾವ ಕಂಟಕಗಳೂ ಇಲ್ಲದೆ ಸ್ವೇಚ್ಛೆಯಿಂದ ಆಳಬಹುದು. ಜರಾಸಂಧನೇ ನನಗೆ ಪರಮಗುರು. ದ್ವಿವಿದನೇ ನನ್ನ ಪ್ರಿಯಸಖನು. ಶಂಬರಾಸುರ, ನರಕಾಸುರ, ಬಾಣಾಸುರರು ನನ್ನೊಡನೆ ಮೈತ್ರಿಯನ್ನು ಬೆಳೆಸಿದ್ದಾರೆ. ಅವರೊಡನೆ ಸೇರಿಕೊಂಡು ಅಥವಾ ಅವರೆಲ್ಲರ ಸಹಾಯವನ್ನೂ ಪಡೆದು ದೇವತೆಗಳ ಪಕ್ಷದಲ್ಲಿರುವವರೆಲ್ಲರನ್ನೂ ಸಂಹರಿಸಿ ನಿಷ್ಕಂಟಕವಾದ ಈ ಭೂಮಿಯನ್ನು ಸ್ವೇಚ್ಛೆಯಿಂದ ಅನುಭವಿಸುತ್ತೇನೆ. ಅಕ್ರೂರ! ಅತ್ಯಂತ ರಹಸ್ಯವಾದ ಈ ಎಲ್ಲ ವಿಷಯಗಳನ್ನೂ ನಾನು ನಿನಗೆ ಪ್ರಿಯಸಖನೆಂಬ ಭಾವನೆಯಿಂದ ಹೇಳಿಬಿಟ್ಟಿದ್ದೇನೆ. ನೀನೀಗಲೇ ಹೋಗಿ ಬಲರಾಮ-ಕೃಷ್ಣರನ್ನು ಸಾಧ್ಯವಾದಷ್ಟು ಬೇಗ ಇಲ್ಲಿಗೆ ಕರೆದುಕೊಂಡು ಬಾ. ಅವರಿನ್ನೂ ಮಕ್ಕಳಾಗಿರುವುದರಿಂದ ಸುಲಭವಾಗಿ ಅವರನ್ನು ಮುಗಿಸಿಬಿಡಬಹುದು. ಧನುರ್ಯಜ್ಞವನ್ನು ಸಂದರ್ಶಿಸಲು ಮತ್ತು ರಾಜಧಾನಿಯಾದ ಮಥುರಾಪಟ್ಟಣದ ಸೊಬಗನ್ನು ವೀಕ್ಷಿಸಲು ಬರಬೇಕೆಂಬುದಾಗಿ ನೀನು ಅವರಿಗೆ ತಿಳಿಸಬೇಕು."

ಕಂಸನು ತನ್ನ ಮನಸ್ಸಿನಲ್ಲಿದ್ದುದೆಲ್ಲವನ್ನೂ ಮರೆಮಾಚದೆ ಅಕ್ರೂರನಿಗೆ ಹೇಳಿದನಂತರ ಮಹಾಮೇಧಾವಿಯಾದ ಅಕ್ರೂರನು ಉತ್ತರಿಸುತ್ತಾನೆ :

**ರಾಜನ್ಮನೀಷಿತಂ ಸಧ್ರ್ಯಕ್ತವ ಸ್ವಾವದ್ಯಮಾರ್ಜನಮ್ ।**
**ಸಿದ್ಧ್ಯಸಿದ್ಧ್ಯೋಃ ಸಮಂ ಕುರ್ಯಾದ್ದೈವಂ ಹಿ ಫಲಸಾಧನಮ್ ॥**

"ಮಹಾರಾಜ! ನೀನು ನಿನ್ನ ಮೃತ್ಯುವಿನ ನಿವಾರಣೆಗಾಗಿಯೂ ಅರಿಷ್ಟವನ್ನು ತೊಡೆದುಹಾಕುವುದಕ್ಕಾಗಿಯೂ ಹೀಗೆ ಯೋಚಿಸಿರುವುದು ಸಾಧುವಾಗಿಯೇ ಇದೆ. ಕಾರ್ಯವು ಸಿದ್ಧಿಸಲಿ ; ಸಿದ್ಧಿಸದೇ ಇರಲಿ–ಎರಡನ್ನೂ ಸಮಭಾವದಲ್ಲಿಟ್ಟುಕೊಂಡು ಕಾರ್ಯಮಾಡುವುದು ಯುಕ್ತವಾಗಿ ಕಾಣುತ್ತದೆ. ಕಾರ್ಯದ ಸಿದ್ಧಿಯಾದರೆ ಹೆಚ್ಚು ಸಂತೋಷಿಸಬಾರದು. ಕಾರ್ಯದ ಸಿದ್ಧಿಯಾಗದಿದ್ದರೆ ದುಃಖಿಸಲೂಬಾರದು. ಇದು ಸಮತ್ವವೆನಿಸುತ್ತದೆ. ಮೇಲಾಗಿ ಮನುಷ್ಯನು ಪ್ರಯತ್ನಿಸಬಹುದೇ ಹೊರತು ಕಾರ್ಯದ ಸಾಧನೆಯು ದೈವವನ್ನೇ ಅವಲಂಬಿಸಿದೆ. ದೈವಂ ಹಿ ಫಲಸಾಧನಮ್ ।

**ಮನೋರಥಾನ್ಕರೋತ್ಯುಚ್ಚೈರ್ಜನೋ ದೈವಹತಾನಪಿ ।**
**ಯುಜ್ಯತೇ ಹರ್ಷಶೋಕಾಭ್ಯಾಂ ತಥಾಪ್ಯಾಜ್ಞಾಂ ಕರೋಮಿ ತೇ ॥**

ಕೆಲವು ಜನರು ದೈವಸಂಕಲ್ಪಕ್ಕೆ ವಿರುದ್ಧವಾದಂತಹ ಮನೋರಥಗಳನ್ನು ಹೊಂದಿ ಉದ್ದೇಶದ ಸಾಫಲ್ಯಕ್ಕಾಗಿ ಹೆಚ್ಚು ಹೆಚ್ಚು ಪ್ರಯತ್ನಿಸುತ್ತಲೇ ಇರುತ್ತಾರೆ. ಈ ಕಾರಣದಿಂದಲೇ ಅಂತಹವರಿಗೆ ಹರ್ಷ-ಶೋಕಗಳೆರಡೂ ಉಂಟಾಗುತ್ತವೆ. ದೈವಕ್ಕೆ ವಿರುದ್ಧವಾಗಿ ವರ್ತಿಸುವಾಗ ಕಾರ್ಯವು ಹಾಳಾಗಿಬಿಟ್ಟರೆ, ಉದ್ದೇಶಿಸಿದ ಫಲಕ್ಕೆ ವಿಪರೀತವಾದ ಫಲವನ್ನು ನೀಡಿದರೆ ಅತ್ಯಂತದುಃಖವಾಗುತ್ತದೆ. ಹೇಗಾದರೂ ಆಗಲೀ, ನಿನ್ನ ಆಜ್ಞೆಯಂತೆ ಬಲರಾಮ-ಶ್ರೀಕೃಷ್ಣರನ್ನು ಇಲ್ಲಿಗೆ ಕರೆತರುವೆನು."

ಶ್ರೀಶುಕಮಹಾಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕಂಸನು ಅಕ್ರೂರನಿಗೆ ರಾಮ-ಕೃಷ್ಣರನ್ನು ಮಥುರಾಪಟ್ಟಣಕ್ಕೆ ಕರೆತರಲು ಆಜ್ಞಾಪಿಸಿ ತನ್ನ ಮಂತ್ರಿಮಹೋದಯರನ್ನು ಕಳುಹಿಸಿಕೊಟ್ಟು ತನ್ನ ಅರಮನೆಯನ್ನು ಪ್ರವೇಶಿಸಿದನು. ಅಂತೆಯೇ ಅಕ್ರೂರನೂ ತನ್ನ ಮನೆಗೆ ಹೋದನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೬ನೆಯ ಅಧ್ಯಾಯವು ಮುಗಿಯಿತು.

---


## ಕೇಶಿ-ವ್ಯೋಮಾಸುರರ ಸಂಹಾರ : ನಾರದರಿಂದ ಭಗವಂತನ ಸ್ತುತಿ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ :

ಕೇಶೀ ತು ಕಂಸಪ್ರಹಿತಃ ಖುರೈರ್ಮಹೀಂ
ಮಹಾಹಯೋ ನಿರ್ಜರಯನ್ಮನೋಜವಃ ।
ಸಟಾವಧೂತಾಭ್ರವಿಮಾನಸಂಕುಲಂ
ಕುರ್ವನ್ನಭೋ ಹೇಷಿತಭೀಷಿತಾಖಿಲಃ ॥೧॥

ಪರೀಕ್ಷಿತಮಹಾರಾಜ! ಕಂಸನಿಂದ ಕಳುಹಿಸಲ್ಪಟ್ಟಿದ್ದ ಕೇಶೀ ಎಂಬ ಮತ್ತೊಬ್ಬ ರಾಕ್ಷಸನು ಕುದುರೆಯ ವೇಷವನ್ನು ಧರಿಸಿ ದೊಡ್ಡದಾದ ಶರೀರವನ್ನು ಹೊಂದಿ, ಗೊರಸುಗಳಿಂದ ಭೂಮಿಯನ್ನು ಶಿಥಿಲಗೊಳಿಸುತ್ತಾ, ಹೆಗಲ ಮೇಲಿನ ಕೂದಲಿನಿಂದ ಆಕಾಶದಲ್ಲಿದ್ದ ಮೇಘಗಳನ್ನೂ ವಿಮಾನಗಳನ್ನೂ ಕದಲಿಸುತ್ತಾ, ಕೆನೆತದ ಧ್ವನಿಯಿಂದ ಸಮಸ್ತರನ್ನೂ ಭಯಗೊಳಿಸುತ್ತಾ ಮನೋವೇಗದಿಂದ ಗೋಕುಲಕ್ಕೆ ಆಗಮಿಸಿದನು. ಕೇಶಿಯು ವಿಶಾಲವಾದ ಕಣ್ಣುಗಳನ್ನು ಹೊಂದಿದ್ದನು. ಅವನಿಗೆ ವಿಸ್ತಾರವಾದ ಪೊಟರೆಯಂತಹ ಮುಖವಿದ್ದಿತು. ದಪ್ಪನಾದ ಕುತ್ತಿಗೆಯಿದ್ದಿತು. ಕಪ್ಪುಬಣ್ಣದ ದೈತ್ಯಶರೀರದಿಂದ ಅವನು ನೀಲಾಚಲಸದೃಶನಾಗಿದ್ದನು. ಕೃಷ್ಣನನ್ನು ಸಂಹರಿಸಿ ಕಂಸನಿಗೆ ಹಿತವನ್ನುಂಟುಮಾಡುವುದು ಅವನ ಅಪೇಕ್ಷೆಯಾಗಿದ್ದಿತು. ಅವನು ಎದುರಿಸಲು ಅಸಾಧ್ಯನಾಗಿದ್ದನು. ಆರ್ಭಟದಿಂದ ಗೋಕುಲವನ್ನೇ ನಡುಗಿಸುತ್ತಾ ಅದನ್ನು ಆಕ್ರಮಿಸಿದನು. ಕೆನೆತಗಳಿಂದ ತನ್ನ ಗೋಕುಲವನ್ನೇ ಭಯಪಡಿಸುತ್ತಿದ್ದ, ಬಾಲದ ಕೂದಲುಗಳಿಂದ ಮೇಘಗಳನ್ನೇ ಚದುರಿಸುತ್ತಿದ್ದ, ಯುದ್ಧಮಾಡುವುದಕ್ಕಾಗಿ ತನ್ನನ್ನು ಗೋಕುಲದಲ್ಲಿ ಹುಡುಕುತ್ತಿದ್ದ ಕೇಶಿಯನ್ನು ನೋಡಿ ವೀರಾಗ್ರಣಿಯಾದ ಶ್ರೀಕೃಷ್ಣನು ಸಿಂಹದಂತೆ ಗರ್ಜಿಸುತ್ತಾ ರಾಕ್ಷಸನನ್ನು ಯುದ್ಧಕ್ಕೆ ಆಹ್ವಾನಿಸಿದನು. ಬಳಿಕ ಕೇಶಿರಾಕ್ಷಸನು ತನಗೆದುರಾಗಿ ಬಂದ ಶ್ರೀಕೃಷ್ಣನನ್ನು ನೋಡಿ ಮುಖದಿಂದಲೇ ಕುಡಿದುಬಿಡುವನೋ ಎಂಬಂತೆ ಮುನ್ನುಗ್ಗಿಹೋದನು. ಅತ್ಯಂತಕ್ರುದ್ಧನಾಗಿದ್ದ, ದುರಾಸದನಾದ, ಭಯಂಕರವಾಗಿ ಶಬ್ದಮಾಡುತ್ತಿದ್ದ, ಎದುರಿಸಲು

ಅಸಾಧ್ಯನಾಗಿದ್ದ ಆ ರಾಕ್ಷಸನು ತನ್ನೆರಡು ಹಿಂಬದಿಯ ಕಾಲುಗಳಿಂದಲೂ ಅರವಿಂದಾಕ್ಷನಾದ ಶ್ರೀಕೃಷ್ಣನನ್ನು ಪ್ರಹರಿಸಿದನು. ಆದರೆ ಭಗವಂತನು ಉಪಾಯದಿಂದ ಕೇಶಿಯ ಕಾಲುಗಳ ಪ್ರಹಾರವನ್ನು ತಪ್ಪಿಸಿಕೊಂಡು ಅತ್ಯಂತಕ್ರುದ್ಧನಾಗಿ–ಗರುಡನು ಸರ್ಪವನ್ನು ಹಿಡಿಯುವಂತೆ–ಅದೇ ಕಾಲುಗಳನ್ನೇ ಹಿಡಿದು ಗರಗರನೆ ತಿರುಗಿಸುತ್ತಾ ತಿರಸ್ಕಾರಭಾವದಿಂದ ನೂರು ಮಾರುಗಳ ದೂರಕ್ಕೆ ಬಿಸಾಡಿ ಸ್ವಸ್ಥನಾಗಿ ನಿಂತನು. ಕೇಶಿಯು ಸ್ವಲ್ಪ ಹೊತ್ತಿನಲ್ಲಿಯೇ ಚೇತರಿಸಿಕೊಂಡು ಮೇಲೆದ್ದು ಬಾಯನ್ನು ಅಗಲವಾಗಿ ಬಿಟ್ಟುಕೊಂಡು ರಭಸದಿಂದ ಶ್ರೀಹರಿಯ ಮೇಲೆ ಬೀಳಲು ಬಂದನು. ಶ್ರೀಕೃಷ್ಣನು ನಸುನಗುತ್ತಾ–ಬಿಲದೊಳಗೆ ಸರ್ಪವು ನುಸುಳಿಹೋಗುವಂತೆ ಸರ್ಪದಷ್ಟು ಸುದೀರ್ಘವಾದ ತನ್ನ ಎಡತೋಳನ್ನು ಕೇಶಿಯ ಅಗಲವಾಗಿದ್ದ ಬಾಯೊಳಗೆ ರಭಸದಿಂದ ತೂರಿಸಿದನು. ಭಗವಂತನ ಅತ್ಯಂತ ಕೋಮಲವಾದ ಬಾಹುಲತೆಯೂ ಆ ಸಮಯದಲ್ಲಿ ಕಾದ ಕಬ್ಬಿಣದಂತಾಗಿ ಅದರ ಸ್ಪರ್ಶಮಾತ್ರದಿಂದ ಕೇಶಿಯ ಬಾಯೊಳಗಿದ್ದ ಹಲ್ಲುಗಳೆಲ್ಲವೂ ಉದುರಿಹೋದುವು. ಇಷ್ಟು ಮಾತ್ರವಲ್ಲ; ಚಿಕಿತ್ಸೆಯನ್ನು ಹೊಂದದ ಮಹೋದರ ರೋಗವು ಕ್ಷಣ-ಕ್ಷಣಕ್ಕೂ ಉಲ್ಬಣಿಸುವಂತೆ ಶ್ರೀಕೃಷ್ಣನ ತೋಳು ಕ್ಷಣ-ಕ್ಷಣಕ್ಕೂ ವರ್ಧಿಸುತ್ತಿದ್ದಿತು. ಹಾಗೆ ಕ್ಷಣ-ಕ್ಷಣಕ್ಕೂ ದಪ್ಪವಾಗುತ್ತಿದ್ದ ಶ್ರೀಕೃಷ್ಣನ ಎಡತೋಳು ಕೇಶಿಯ ಕುತ್ತಿಗೆಗೆ ಹಾಕಿದ ಬಿರಟೆ



केशी- बध

ಯಂತಾಗಿ ಆ ರಾಕ್ಷಸನ ಉಸಿರಾಟವು ನಿಂತುಹೋಯಿತು. ಕಾಲುಗಳು ಒದರತೊಡಗಿದುವು. ಶರೀರದ ಆದ್ಯಂತವಾಗಿ ಬೆವರಿಟ್ಟಿತು. ಕಣ್ಣುಗುಡ್ಡೆ

ಗಳು ಮೇಲೆದ್ದು ಬಂದುವು. ಕೇಶಿಯು ಮಲ-ಮೂತ್ರಗಳನ್ನು ಸುರಿಸುತ್ತಾ ನೆಲದ ಮೇಲೆ ಬಿದ್ದು ಸ್ವಲ್ಪಹೊತ್ತಿನಲ್ಲಿಯೇ ಪ್ರಾಣಗಳನ್ನು ತೊರೆದನು. ಪಕ್ವವಾದ ಕೆಕ್ಕರಿಕೆಹಣ್ಣು ಬಿರಿಯುವಂತೆ ಶ್ರೀಕೃಷ್ಣನ ದಪ್ಪವಾದ ತೋಳಿನಿಂದಾಗಿ ಬಿರಿದು ಹೋಗಿದ್ದ ರಾಕ್ಷಸನ ಬಾಯಿಂದ ಶ್ರೀಕೃಷ್ಣನು ತನ್ನ ಎಡದ ಕೈಯನ್ನು ಸೆಳೆದುಕೊಂಡನು. ಇದರಿಂದ ಶ್ರೀಕೃಷ್ಣನಿಗೆ ಆಶ್ಚರ್ಯವುಂಟಾಗಲಿಲ್ಲ. ಹೆಚ್ಚಿನ ಪ್ರಯತ್ನವಿಲ್ಲದೆಯೇ ಶತ್ರುವಿನ ನಾಶವಾಯಿತು. ದೇವತೆಗಳಿಗೆ ಇದನ್ನು ಕಂಡು ಅತ್ಯಾಶ್ಚರ್ಯವಾಯಿತು. ಅವರೆಲ್ಲರೂ ಅತ್ಯಂತಪ್ರಸನ್ನರಾಗಿ ಭಗವಂತನ ಮೇಲೆ ಹೂಮಳೆಗರೆದರು ಮತ್ತು ಶ್ರೀಕೃಷ್ಣನನ್ನು ನಾನಾಪ್ರಕಾರವಾಗಿ ಸ್ತೋತ್ರಮಾಡಿದರು.

ಪರೀಕ್ಷಿತನೇ! ಇತ್ತಲಾಗಿ ಭಾಗವತರಲ್ಲಿ ಶ್ರೇಷ್ಠರಾದ ನಾರದ ಮುನಿಗಳು ಕಂಸನಿಗೆ ಅವನ ಶತ್ರುಗಳು ಎಲ್ಲಿರುವರೆಂಬ ಸಮಾಚಾರವನ್ನು ತಿಳಿಸಿದನಂತರ ಶ್ರೀಕೃಷ್ಣನ ಬಳಿಗೆ ಹೋಗಿ ಅವನನ್ನು ಸಂಧಿಸಿ ಏಕಾಂತದಲ್ಲಿ ಈ ಮಾತುಗಳನ್ನು ಹೇಳಿದರು :

**ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಯೋಗೇಶ ಜಗದೀಶ್ವರ ।**
**ವಾಸುದೇವಾಖಿಲಾವಾಸ ಸಾತ್ವತಾಂ ಪ್ರವರ ಪ್ರಭೋ ॥೧೧॥**

"ಶ್ರೀಕೃಷ್ಣ! ಮಾತು ಮತ್ತು ಮನಸ್ಸುಗಳಿಂದ ಅಳೆಯಲು ಸಾಧ್ಯ ವಾಗದ ಆತ್ಮವುಳ್ಳವನೇ! ಯೋಗೇಶನೇ! ಜಗದೀಶ್ವರನೇ! ವಾಸು ದೇವನೇ! ಸಮಸ್ತಪ್ರಾಣಿಗಳ ಹೃದಯಗುಹೆಗಳಲ್ಲಿಯೂ ವಾಸಮಾಡು ತ್ತಿರುವವನೇ! ಸಾತ್ವತಶ್ರೇಷ್ಠನೇ! ಪ್ರಭುವೇ! ನಿನಗೆ ನಮಸ್ಕಾರವು.

**ತ್ವಮಾತ್ಮಾ ಸರ್ವಭೂತಾನಾಮೇಕೋ ಜ್ಯೋತಿರಿವೈಧಸಾಮ್ ।**
**ಗೂಢೋ ಗುಹಾಶಯಃ ಸಾಕ್ಷೀ ಮಹಾಪುರುಷ ಈಶ್ವರಃ ॥೧೨॥**

ದೇವದೇವನೇ! ಒಂದೇ ಅಗ್ನಿಯು ಎಲ್ಲ ಕಟ್ಟಿಗೆಗಳಲ್ಲಿಯೂ ವ್ಯಾಪಿ ಸಿರುವಂತೆ ನೀನೊಬ್ಬನೇ ಸಕಲಪ್ರಾಣಿಗಳ ಹೃದಯದಲ್ಲಿಯೂ ಆತ್ಮರೂಪ ನಾಗಿ ವ್ಯಾಪಿಸಿಕೊಂಡಿರುವೆ. ಆತ್ಮರೂಪದಲ್ಲಿದ್ದರೂ ನೀನು ನಿಗೂಢನಾಗಿ ರುವೆ. ಬುದ್ಧಿಗುಹೆಯಲ್ಲಿ ಅಡಗಿಕೊಂಡಿರುವೆ. ಈಶ್ವರನೂ, ಸರ್ವ ಸಾಕ್ಷಿಯೂ, ಪುರುಷೋತ್ತಮನೂ, ಸರ್ವನಿಯಾಮಕನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕಾರವು.

**ಆತ್ಮನಾತ್ಮಾಶ್ರಯಃ ಪೂರ್ವಂ ಮಾಯಯಾ ಸಸೃಜೇ ಗುಣಾನ್ ।**
**ತೈರಿದಂ ಸತ್ಯಸಂಕಲ್ಪಃ ಸೃಜಸ್ಯತ್ಸ್ಯವಸೀಶ್ವರಃ ॥೧೩॥**

ಪ್ರಭುವೇ! ಆತ್ಮಸ್ವರೂಪನಾದ ನೀನು ಸರ್ವಕ್ಕೂ ಆಶ್ರಯನಾಗಿರುವೆ. ನೀನು ಯಾರನ್ನೂ ಆಶ್ರಯಿಸತಕ್ಕವನಲ್ಲ. ಸೃಷ್ಟಿಯ ಪ್ರಾರಂಭದಲ್ಲಿ ಕೇವಲ ಆತ್ಮಸ್ವರೂಪನಾಗಿರುವ ನೀನು ನಿನ್ನ ಮಾಯೆಯಿಂದಲೇ (ಮೂಲಪ್ರಕೃತಿಯಿಂದಲೇ) ಸತ್ತ್ವ-ರಜಸ್ತಮೋಗುಣಗಳನ್ನು ಸೃಷ್ಟಿಸುವೆ. ಸತ್ಯಸಂಕಲ್ಪನಾದ ನೀನು ಸತ್ತ್ವಾದಿಗುಣಗಳಿಂದ ಜಗತ್ತನ್ನು ಸೃಷ್ಟಿಸಿ ಪಾಲಿಸಿ ಲಯಗೊಳಿಸುವೆ. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ.

**ಸ ತ್ವಂ ಭೂಧರಭೂತಾನಾಂ ದೈತ್ಯಪ್ರಮಥರಕ್ಷಸಾಮ್ ।**
**ಅವತೀರ್ಣೋ ವಿನಾಶಾಯ ಸೇತೂನಾಂ ರಕ್ಷಣಾಯ ಚ ॥೧೪॥**

ಅಂತಹ ಸಚ್ಚಿದಾನಂದಪರಬ್ರಹ್ಮಸ್ವರೂಪನಾದ ನೀನು ಈ ಸಮಯದಲ್ಲಿ ರಾಜರಾಗಿ ಹುಟ್ಟಿರುವ ದೈತ್ಯ-ಪ್ರಮಥ-ರಾಕ್ಷಸರ ವಿನಾಶಕ್ಕಾಗಿ ಮತ್ತು ಧರ್ಮದ ಮರ್ಯಾದೆಯನ್ನು ರಕ್ಷಿಸುವ ಸಲುವಾಗಿ ಯದುವಂಶದಲ್ಲಿ ಮಾನವನಾಗಿ ಅವತರಿಸಿರುವೆ.

ಮಹಾನುಭಾವನೇ! ನೀನು ಕುದುರೆಯ ರೂಪದಲ್ಲಿದ್ದ ಕೇಶಿರಾಕ್ಷಸನನ್ನು ಅದೃಷ್ಟವಶದಿಂದ ಸಂಹರಿಸಿದೆ. ಈ ರಾಕ್ಷಸನ ಕೆನೆಯುವಿಕೆಯನ್ನು ಕೇಳುತ್ತಲೇ ದೇವತೆಗಳು ಸ್ವರ್ಗದಿಂದಲೇ ಓಡಿಹೋಗುತ್ತಿದ್ದರು. ಪುರುಷೋತ್ತಮನೇ! ಮುಂದಿನ ಎರಡು ದಿವಸಗಳಲ್ಲಿಯೇ ಚಾಣೂರ-ಮುಷ್ಟಿಕರನ್ನೂ, ಕುವಲಯಾಪೀಡವೆಂಬ ಮದಗಜವನ್ನೂ, ಇತರ ಹಲವಾರು ಜಟ್ಟಿಗಳನ್ನೂ, ಕಂಸನನ್ನೂ ನೀನು ಲೀಲೆಯಿಂದ ಸಂಹರಿಸುವ ಅದ್ಭುತದೃಶ್ಯವನ್ನೂ ನಾನು ಕಾಣಲಿದ್ದೇನೆ. ಅನಂತರ ನಾನು ಶಂಖಾಸುರ, ಕಾಲಯವನ, ಮುರ ಮತ್ತು ನರಕಾಸುರರ ವಧೆಯನ್ನೂ ನೋಡುತ್ತೇನೆ. ಇಂದ್ರನ ಪರಾಜಯವನ್ನೂ ಮತ್ತು ಸ್ವರ್ಗದಿಂದ ಪಾರಿಜಾತಾಪಹರಣವನ್ನೂ ನಾನು ಕಾಣಲಿದ್ದೇನೆ. ವೀರ್ಯ-ಪರಾಕ್ರಮಗಳೇ ಕನ್ಯಾಶುಲ್ಕವಾಗಿ ಉಳ್ಳ ವೀರಕನ್ಯೆಯರೊಡನೆ ನಿನ್ನ ಶುಭವಿವಾಹಗಳಾಗುವುದನ್ನೂ ನಾನು ನೋಡುತ್ತೇನೆ. ಜಗತ್ಪತಿಯೇ! ನೀನು ದ್ವಾರಕೆಯಲ್ಲಿಯೇ ಇರುತ್ತಾ ನೃಗರಾಜನನ್ನು ಪಾಪದಿಂದ ಮುಕ್ತನನ್ನಾಗಿ ಮಾಡುವೆ. ನೀನು ಸ್ಯಮಂತಕ

ಮಣಿಯನ್ನೂ ಜಾಂಬವತಿಯನ್ನೂ ಜಾಂಬವಂತನಿಂದ ಪಡೆದುಕೊಳ್ಳುವೆ. ಬ್ರಾಹ್ಮಣನ ಮೃತಪುತ್ರನನ್ನು ಅವನು ಹೋಗಿದ್ದ ಸ್ಥಳದಿಂದ ಹಿಂದಕ್ಕೆ ಕರೆತರುವೆ. ಇದಾದನಂತರ ಪೌಂಡ್ರಕವಾಸುದೇವನನ್ನು ಸಂಹರಿಸುವೆ. ಕಾಶೀಪುರಿಯನ್ನು ಸುಟ್ಟುಹಾಕುವೆ. ಯುಧಿಷ್ಠಿರನ ರಾಜಸೂಯಯಾಗದಲ್ಲಿ ಚೇದಿರಾಜನಾದ ಶಿಶುಪಾಲನನ್ನು ಸಂಹರಿಸುವೆ. ಅಲ್ಲಿಂದ ಹಿಂದಿರುಗುವಾಗ ಅವನ ತಮ್ಮನಾದ ದಂತವಕ್ತ್ರನನ್ನೂ ಸಂಹರಿಸುವೆ. ಪ್ರಭುವೇ! ದ್ವಾರಕಾ ಪಟ್ಟಣದಲ್ಲಿ ವಾಸಮಾಡುವಾಗ ನೀನು ಪ್ರಕಟಿಸಲಿರುವ ಹಲವಾರು ಪರಾಕ್ರಮಪ್ರಸಂಗಗಳನ್ನು ಪ್ರತಿಭಾಶಾಲಿಗಳಾದ ಕವಿಗಳು ಹಾಡುತ್ತಾರೆ. ಆ ಎಲ್ಲ ಪ್ರಸಂಗಗಳನ್ನೂ ನಾನು ಪ್ರತ್ಯಕ್ಷವಾಗಿಯೇ ಕಾಣುತ್ತೇನೆ. ಬಳಿಕ ಭೂಭಾರಹರಣಕ್ಕಾಗಿ ಕಾಲಸ್ವರೂಪನಾದ ನೀನು ಅರ್ಜುನನ ಸಾರಥಿಯಾಗಿ ಹಲವಾರು ಅಕ್ಷೌಹಿಣೀಸೈನ್ಯಗಳನ್ನೂ ಸಂಹರಿಸುವೆ. ಇವೆಲ್ಲವನ್ನೂ ನಾನು ನನ್ನ ಈ ಕಣ್ಣುಗಳಿಂದಲೇ ಕಾಣಲಿದ್ದೇನೆ.

**ವಿಶುದ್ಧವಿಜ್ಞಾನಘನಂ ಸ್ವಸಂಸ್ಥಯಾ**<br>
**ಸಮಾಪ್ತಸರ್ವಾರ್ಥಮಮೋಘವಾಞ್ಛಿತಮ್ ।**<br>
**ಸ್ವತೇಜಸಾ ನಿತ್ಯನಿವೃತ್ತಮಾಯಾ**<br>
**ಗುಣಪ್ರವಾಹಂ ಭಗವನ್ತಮೀಮಹಿ ॥೨೩॥**

ಸ್ವಾಮಿಯೇ! ನೀನು ವಿಶುದ್ಧವಿಜ್ಞಾನಸ್ವರೂಪನು. ಕೇವಲಜ್ಞಾನ ಮೂರ್ತಿಯು. ಬ್ರಹ್ಮಾನಂದವೆಂಬ ನಿಜಸ್ವರೂಪಸ್ಥಿತಿಯಿಂದ ಸರ್ವಾರ್ಥ ಗಳನ್ನೂ ಪಡೆದುಕೊಂಡಿರುವವನು ; ಆಪ್ತಕಾಮನು ; ಸಫಲವಾದ ಇಷ್ಟಾರ್ಥವುಳ್ಳವನು. ಸತ್ಯಸಂಕಲ್ಪನು. ಚಿನ್ಮಯತೇಜಸ್ಸಿನಿಂದ ಸತ್ತ್ವಾದಿ ಮಾಯಾಗುಣಗಳ ಪ್ರವಾಹವನ್ನು ನಿತ್ಯನಿರಂತರವಾಗಿ ನಿರಾಕರಿಸಿರತಕ್ಕವನು. ಅಂತಹ ಸರ್ವಶಕ್ತನಾದ ಭಗವಂತನಿಗೆ ಶರಣುಹೊಂದುತ್ತೇನೆ.

**ತ್ವಾಮೀಶ್ವರಂ ಸ್ವಾಶ್ರಯಮಾತ್ಮಮಾಯಯಾ**<br>
**ವಿನಿರ್ಮಿತಾಶೇಷವಿಶೇಷಕಲ್ಪನಮ್ ।**<br>
**ಕ್ರೀಡಾರ್ಥಮದ್ಯಾತ್ತಮನುಷ್ಯವಿಗ್ರಹಂ**<br>
**ನತೋಽಸ್ಮಿ ಧುರ್ಯಂ ಯದುವೃಷ್ಣಿಸಾತ್ವತಾಮ್ ॥೨೪॥**

ಸರ್ವೇಶ್ವರನೇ! ನೀನು ಸಮಸ್ತರ ಅಂತರ್ಯಾಮಿಯಾಗಿದ್ದು ಎಲ್ಲರನ್ನೂ ನಿಯಂತ್ರಿಸುವೆ. ನೀನು ನಿನ್ನ ನಿಜಸ್ವರೂಪದಲ್ಲಿ ಸರ್ವತಂತ್ರ ಸ್ವತಂತ್ರನಾಗಿರುವೆ. ನಿನಗೆ ಪರಾಶ್ರಯವಿಲ್ಲ. ಸಂಕಲ್ಪಮಾತ್ರದಿಂದಲೇ ಮಹತ್ತತ್ತ್ವವೇ ಮೊದಲಾದ ಸಕಲಪ್ರಪಂಚವನ್ನೂ ಸೃಷ್ಟಿಸುವೆ. ಕೇವಲ ಆಟಕ್ಕಾಗಿ ಮನುಷ್ಯಶರೀರವನ್ನು ಧರಿಸಿರುವ, ಯದು-ವೃಷ್ಣಿ-ಸಾತ್ವತರಿಗೆ ಒಡೆಯನಾಗಿರುವ ನಿನಗೆ ನಮಸ್ಕರಿಸುತ್ತೇನೆ.''

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ದಿವ್ಯದರ್ಶನದಿಂದ ಉತ್ಸಾಹಗೊಂಡಿದ್ದ ಭಾಗವತಶ್ರೇಷ್ಠರಾದ ನಾರದಮಹರ್ಷಿಗಳು ಯದುಪತಿಯಾದ ಶ್ರೀಕೃಷ್ಣನನ್ನು ಹೀಗೆ ಸ್ತುತಿಸಿ ಅವನಿಗೆ ನಮಿಸಿ ಆತನ ಅನುಮತಿಯನ್ನು ಪಡೆದು ಎಲ್ಲಿಂದ ಬಂದಿದ್ದರೋ ಅಲ್ಲಿಗೇ ಹೊರಟುಹೋದರು.

ಭಗವಂತನಾದ ಶ್ರೀಕೃಷ್ಣನೂ ಕೇಶಿಯನ್ನು ಯುದ್ಧದಲ್ಲಿ ಸಂಹರಿಸಿ ತನ್ನ ಪ್ರಿಯರಾದ ಮತ್ತು ಪ್ರಸನ್ನಚಿತ್ತರಾದ ಗೋಪಾಲರೊಡನೆ ಹಿಂದಿನಂತೆಯೇ ಪಶುಪಾಲನೆಯಲ್ಲಿ ತೊಡಗಿ ಗೋಕುಲವಾಸಿಗಳಿಗೆ ಪರಮಾನಂದವನ್ನು ಉಂಟುಮಾಡುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಗೋಪಾಲರು ಪರ್ವತದ ತಪ್ಪಲಿನಲ್ಲಿ ಹಸುವೇ ಮೊದಲಾದ ಪ್ರಾಣಿಗಳನ್ನು ಮೇಯಿಸುತ್ತಾ ಯಾವುದಾದರೂ ಆಟವಾಡಲು ನಿಶ್ಚಯಿಸಿ ಕೆಲವರು ಕಳ್ಳರೂ ಕೆಲವರು ಕುರುಬರೂ ಕೆಲವರು ಕುರಿಗಳೂ ಆಗಿ ನಿರ್ಭಯದಿಂದ ಆಟವಾಡುತ್ತಿದ್ದರು. ಆ ಸಮಯದಲ್ಲಿ ವ್ಯೋಮಾಸುರನೆಂಬ ಕಂಸನ ಮತ್ತೊಬ್ಬ ಮಿತ್ರನು ಗೋಪಾಲನ ವೇಷವನ್ನು ಧರಿಸಿ ಅವರಲ್ಲಿ ಸೇರಿಕೊಂಡನು. ಅವನು ಮಾಯಾವಿದ್ಯೆಗೆ ಆಚಾರ್ಯನಾದ ಮಯಾಸುರನ ಪುತ್ರನಾಗಿದ್ದನು ಮತ್ತು ತಾನೂ ಮಹಾಮಾಯಾವಿಯೇ ಆಗಿದ್ದನು. ಗೋವಳರು ಆಡುತ್ತಿದ್ದ 'ಕಳ್ಳ-ಕುರಿಮರಿ'–ಆಟದಲ್ಲಿ ವ್ಯೋಮಾಸುರನು ಸಾಮಾನ್ಯವಾಗಿ ಯಾವಾಗಲೂ ಕಳ್ಳನ ಪಾತ್ರವನ್ನೇ ವಹಿಸುತ್ತಿದ್ದು ಕುರಿಮರಿಗಳ ವೇಷಧಾರಿಗಳಾಗಿದ್ದ ಹಲವಾರು ಗೋವಳರನ್ನು ಕದ್ದುಕೊಂಡುಹೋದನು. ಹಾಗೆ ಕದ್ದೊಯ್ದ ಗೋವಳರನ್ನು ವ್ಯೋಮಾಸುರನು ಪರ್ವತದ ಗುಹೆಯಲ್ಲಿರಿಸಿ ಬಂಡೆಯನ್ನು ಆ ಗುಹೆಯ ಬಾಯಿಗೆ ಮುಚ್ಚಿ ಬರುತ್ತಿದ್ದನು. ಕಡೆಗೆ ಗೋಪಾಲರಲ್ಲಿ

ಕೇವಲ ನಾಲ್ಕೈದು ಬಾಲಕರು ಮಾತ್ರವೇ ಉಳಿದುಕೊಂಡರು. ವ್ಯೋಮಾಸುರನ ಈ ದುಷ್ಟಕಾರ್ಯವನ್ನು ತಿಳಿದ, ಸತ್ಪುರುಷರಿಗೆ ಶರಣ್ಯನಾದ ಶ್ರೀಕೃಷ್ಣನು ಗೋಪಬಾಲಕರನ್ನು ಒಯ್ಯುತ್ತಿದ್ದ ಆ ಕಳ್ಳಗೋಪನನ್ನು–ತೋಳವನ್ನು ಸಿಂಹವು ಹಿಡಿಯುವಂತೆ–ಹಿಡಿದುಕೊಂಡನು. ವ್ಯೋಮಾಸುರನು ಮಹಾಬಲಿಷ್ಠನಾಗಿದ್ದನು. ಶ್ರೀಕೃಷ್ಣನು ತನ್ನನ್ನು ಹಿಡಿದುಕೊಂಡೊಡನೆಯೇ ಪರ್ವತೋಪಮವಾದ ನಿಜಸ್ವರೂಪವನ್ನು ತಾಳಿ ಶ್ರೀಕೃಷ್ಣನಿಂದ ಬಿಡಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸಿದನು. ಶ್ರೀಕೃಷ್ಣನು ಬಿಡಿಸಿಕೊಳ್ಳಲಾಗದಂತೆ ವ್ಯೋಮಾಸುರನನ್ನು ತನ್ನ ಬಾಹುಪಾಶಗಳಿಂದ ಬಂಧಿಸಿ ಕೆಳಕ್ಕೆ ಕೆಡವಿ ಯಜ್ಞಪಶುವನ್ನು ಕೊಲ್ಲುವಂತೆ ರಾಕ್ಷಸನನ್ನು ಕಾಲಿನಿಂದಲೇ ಹೊಸಕಿ ಸಂಹರಿಸಿದನು. ಅನಂತರ ಪರಮದಯಾಳುವಾದ




ಶ್ರೀಕೃಷ್ಣನು ಗುಹೆಯ ಬಾಗಿಲಿನಲ್ಲಿದ್ದ ಬಂಡೆಯನ್ನು ಜರುಗಿಸಿ ಒಳಗಿದ್ದ ಗೋಪಬಾಲಕರನ್ನು ಸಂಕಟದಿಂದ ಮುಕ್ತಿಗೊಳಿಸಿದನು. ಶ್ರೀಕೃಷ್ಣನ ಸಾಹಸವನ್ನು ನೋಡಿ ದೇವತೆಗಳೂ ಗೋಪಾಲರೂ ಆತನನ್ನು ಕೊಂಡಾಡಿದರು. ದೇವತೆಗಳಿಂದಲೂ, ಗೋಪಾಲರಿಂದಲೂ ಸ್ತುತಿಸಲ್ಪಡುತ್ತಾ ಶ್ರೀಕೃಷ್ಣನು ಗೋಪಾಲರೊಡನೆ ಗೋಕುಲವನ್ನು ಪ್ರವೇಶಿಸಿದನು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ
ದಶದಸ್ಕಂಧದ ಪೂರ್ವಾರ್ಧದಲ್ಲಿ ೩೭ನೆಯ ಅಧ್ಯಾಯವು ಮುಗಿಯಿತು.

---

* ನಾರದಮುನಿಯು ವ್ಯೋಮಾಸುರನ ವಧೆಯನ್ನು ಕಾಣಲಿಲ್ಲವಾದುದರಿಂದ ಈ

ದಶಮಸ್ಕಂಧ ೩೮ನೆಯ ಅಧ್ಯಾಯ

## ಅಕ್ರೂರನ ವ್ರಜಯಾತ್ರೆ

ಶ್ರೀಶುಕಮುನಿಗಳು ಹೇಳುತ್ತಾರೆ :

**ಅಕ್ರೂರೋಽಪಿ ಚ ತಾಂ ರಾತ್ರಿಂ ಮಧುಪುರ್ಯಾಂ ಮಹಾಮತಿಃ ।**
**ಉಷಿತ್ವಾ ರಥಮಾಸ್ಥಾಯ ಪ್ರಯಯೌ ನನ್ದಗೋಕುಲಮ್ ॥೧॥**

ಪರೀಕ್ಷಿತನೇ! ಮಹಾಮತಿಯಾದ ಅಕ್ರೂರನು ಆ ರಾತ್ರಿಯನ್ನು ಮಥುರಾಪಟ್ಟಣದಲ್ಲಿಯೇ ಕಳೆದು ಬೆಳಗಾಗುತ್ತಲೇ ಪ್ರಾತಃಕ್ರಿಯೆಗಳನ್ನು ಮುಗಿಸಿ ರಥಾರೂಢನಾಗಿ ಗೋಕುಲಕ್ಕೆ ಪ್ರಯಾಣಮಾಡಿದನು.*

ಹಾದಿಯಲ್ಲಿ ಪ್ರಯಾಣಮಾಡುತ್ತಿದ್ದಾಗ ಮಹಾಭಾಗ್ಯಶಾಲಿಯಾದ ಅಕ್ರೂರನು ಪದ್ಮನೇತ್ರನಾದ ಶ್ರೀಕೃಷ್ಣನಲ್ಲಿ ಶ್ರೇಷ್ಠವಾದ ಭಕ್ತಿಭಾವವನ್ನು ಹೊಂದಿದವನಾಗಿ ಹೀಗೆ ಚಿಂತಿಸತೊಡಗಿದನು :

**ಕಿಂ ಮಯಾಚರಿತಂ ಭದ್ರಂ ಕಿಂ ತಪ್ತಂ ಪರಮಂ ತಪಃ ।**
**ಕಿಂ ವಾಥಾಪ್ಯರ್ಹತೇ ದತ್ತಂ ಯದ್ದ್ರಕ್ಷ್ಯಾಮ್ಯದ್ಯ ಕೇಶವಮ್ ॥**

"ಭಗವಂತ! ಪರಮಾತ್ಮ! ನಾನು ಎಂತಹ ಶುಭಕಾರ್ಯವನ್ನು ಮಾಡಿದ್ದೆನು! ಎಂತಹ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದ್ದೆನು! ಸತ್ಪಾತ್ರನಿಗೆ ಎಂತಹ ಮಹತ್ತ್ವಪೂರ್ಣವಾದ ದಾನಮಾಡಿದ್ದೆನು! ನಾನು ಮಾಡಿರ

---

ಪ್ರಸಂಗವು ಹೇಗೆ ಬಂದಿತು? ಎಂದರೆ : ಪ್ರಾತಃಕಾಲದಲ್ಲಿಯೇ ಕೇಶಿಯ ವಧಾನಂತರ ನಾರದರ ನುಡಿಯನ್ನು ಕೇಳಿ ಮರಳಿ ಅಂತೆಯೇ ಗೋವುಗಳನ್ನು ಕಾಯುತ್ತಿದ್ದು ವ್ಯೋಮಾಸುರನನ್ನು ಕೊಂದನೆಂಬ ಭಾವವು. ಅಥವಾ ವ್ಯೋಮವಧೆಯು ಮೊದಲೇ ನಡೆದಿದ್ದರೂ ವೇಷಧಾರಿ ವಧಪ್ರಸಂಗದಿಂದ ಇಲ್ಲಿ ಹೇಳಲ್ಪಟ್ಟಿತೆಂದೂ ಇದು ಶಂಖಚೂಡನ ವಧೆಗಿಂತ ಮೊದಲೇ ನಡೆದುದೆಂದೂ ಭಾವವು. (ಭಾವಾರ್ಥದೀಪಿಕಾ)

* **ಪ್ರಾತಃ ಕೇಶಿವಧೇ ವೃತ್ತೇ ದ್ವಾದಶ್ಯಾಂ ನಿರ್ಗತೇ ಮುನೌ ।**
**ತತೋ ವ್ಯೋಮೋ ಹತೇಽಕ್ರೂರಃ ಸಾಯಂ ಗೋಕುಲಮಭ್ಯಗಾತ್ ॥**

ದ್ವಾದಶಿಯ ಪ್ರಾತಃಕಾಲದಲ್ಲಿ ಕೇಶಿವಧೆಯು ನಡೆದ ತರುವಾಯ ನಾರದ ಮುನಿಯು ಬಂದು ಹೊರಟುಹೋದನಂತರ ವ್ಯೋಮವಧೆಯು ನಡೆಯಿತು. ಆ ದಿವಸ ಸಾಯಂಕಾಲವೇ ಅಕ್ರೂರನು ಗೋಕುಲಕ್ಕೆ ಬಂದನು. (ಭಾವಾರ್ಥದೀಪಿಕಾ)

ಬಹುದಾದ ಶುಭಕಾರ್ಯಗಳ ಫಲವಾಗಿ, ಮಹಾತಪಸ್ಸಿನ ಫಲವಾಗಿ ಸತ್ಪಾತ್ರರಲ್ಲಿ ಮಹಾದಾನಮಾಡಿರುವುದರ ಫಲವಾಗಿ ನಾನಿಂದು ಮಂಗಳ ಮೂರ್ತಿಯಾದ ಶ್ರೀಕೃಷ್ಣಸ್ವಾಮಿಯ ದರ್ಶನವನ್ನು ಮಾಡಲಿರುವೆನಲ್ಲ!

**ಮಮ್ಯೈತದ್ದುರ್ಲಭಂ ಮನ್ಯ ಉತ್ತಮಶ್ಲೋಕದರ್ಶನಮ್ ।**
**ವಿಷಯಾತ್ಮನೋ ಯಥಾ ಬ್ರಹ್ಮಕೀರ್ತನಂ ಶೂದ್ರಜನ್ಮನಃ ॥೪॥**

ಶೂದ್ರಜನ್ಮವನ್ನು ಪಡೆದವನಿಗೆ ವೇದಾಧ್ಯಯನದ ಅಧಿಕಾರವಿರದಂತೆ ವಿಷಯಾಸಕ್ತನಾದ ನನಗೆ ಉತ್ತಮಕೀರ್ತಿಯಾದ ಶ್ರೀಕೃಷ್ಣನ ದರ್ಶನವು ದುರ್ಲಭವೆಂದೇ ಭಾವಿಸುತ್ತೇನೆ.

**ಮೈವಂ ಮಮಾಧಮಸ್ಯಾಪಿ ಸ್ಯಾದೇವಾಚ್ಯುತದರ್ಶನಮ್ ।**
**ಹ್ರಿಯಮಾಣಃ ಕಾಲನದ್ಯಾ ಕ್ವಚಿತ್ತರತಿ ಕಶ್ಚನ ॥೫॥**

ಹಾಗೆ ಹರಿಯ ದರ್ಶನವು ದುರ್ಲಭವೇನಲ್ಲ. ಕೆಲವು ಸಮಯಗಳಲ್ಲಿ ಕಾಲಕರ್ಮಸಂಯೋಗದಿಂದ ನನ್ನಂತಹ ಅಧಮನಿಗೂ ಶ್ರೀಹರಿಯ ದರ್ಶನವು ಆಗಿಯೇ ತೀರುತ್ತದೆ. ಹೇಗೆಂದರೆ : ಅಪಾರವಾದ ನದಿಯಲ್ಲಿ ಸೆಳೆಯಲ್ಪಡುತ್ತಿರುವವನು ಕೆಲವು ವೇಳೆ ದೈವೇಚ್ಛೆಯಿಂದ ತೀರವನ್ನು ಸೇರಬಹುದಲ್ಲವೇ? ಹಾಗೆಯೇ ಕಾಲವೆಂಬ ನದಿಯಿಂದ ಸೆಳೆಯಲ್ಪಡು ತ್ತಿರುವವನು ಕೆಲವು ವೇಳೆ ಕಾಲಾತೀತನ ಅನುಗ್ರಹದಿಂದ ಸಂಸಾರಸಾಗರದ ತೀರವನ್ನು ಸೇರಬಹುದು.

**ಮಮಾದ್ಯಾಮಙ್ಗಲಂ ನಷ್ಟಂ ಫಲವಾಂಶ್ಚೈವ ಮೇ ಭವಃ ।**
**ಯನ್ನಮಸ್ಯೇ ಭಗವತೋ ಯೋಗಿಧ್ಯೇಯಾಙ್ಘ್ರಿಪಙ್ಕಜಮ್ ॥೬॥**

ನಿಶ್ಚಯವಾಗಿಯೂ ಇಂದು ನನ್ನ ಸಮಸ್ತವಾದ ಪಾಪಗಳೂ ಪರಿಹಾರವಾಗಿ ಹೋಗುತ್ತವೆ. ನಾನು ಹುಟ್ಟಿದ್ದು ಇಂದಿಗೆ ಸಾರ್ಥಕ ವಾಗುತ್ತದೆ. ಏಕೆಂದರೆ : ಮಹಾಮಹಾಯೋಗಿಗಳಿಗೂ ಧ್ಯಾನಕ್ಕೆ ಮಾತ್ರವೇ ಸಿಕ್ಕಬಹುದಾದ ಸಚ್ಚಿದಾನಂದಪರಮಾತ್ಮನ ದಿವ್ಯಪಾದಾರವಿಂದಗಳನ್ನು ನಾನು ಪ್ರತ್ಯಕ್ಷವಾಗಿಯೇ ಕಂಡು ನಮಸ್ಕರಿಸುವೆನಲ್ಲವೇ!

**ಕಂಸೋ ಬತಾದ್ಯಾಕೃತ ಮೇಽತ್ಯನುಗ್ರಹಂ**
**ದ್ರಕ್ಷ್ಯೇಽಙ್ಘ್ರಿಪದ್ಮಂ ಪ್ರಹಿತೋಽಮುನಾ ಹರೇಃ ।**

**ಕೃತಾವತಾರಸ್ಯ ದುರತ್ಯಯಂ ತಮಃ**
**ಪೂರ್ವೇಽತರನ್ಯನ್ನಖಮಣ್ಡಲತ್ವಿಷಾ ॥೭॥**

ನಿಶ್ಚಯವಾಗಿಯೂ ಇಂದು ಕಂಸನು ನನ್ನ ಮೇಲೆ ಅಪಾರವಾದ ಕರುಣೆಯನ್ನು ತೋರಿದ್ದಾನೆ. ಇವನು ಕಳುಹಿಸಿಕೊಟ್ಟುದಕ್ಕೆ ತಾನೇ ನಾನು ಶ್ರೀಹರಿಯ ಪಾದಕಮಲಗಳನ್ನು ನೋಡುವ ಸೌಭಾಗ್ಯವನ್ನು ಪಡೆದುದು! ಯಾವನ ಪಾದಗಳಲ್ಲಿರುವ ಉಗುರುಗಳ ಕಾಂತಿಯ ನಿರಂತರಧ್ಯಾನದಿಂದ ಋಷಿ-ಮುನಿಗಳು ಅಜ್ಞಾನರೂಪವಾದ, ಅಪಾರವಾದ ತಮಸ್ಸನ್ನು ದಾಟಿದರೋ ಅಂತಹ ಪರಮಾತ್ಮನೇ ಈಗ ಮನುಷ್ಯನಾಗಿ ಅವತರಿಸಿದ್ದಾನೆ.

**ಯದರ್ಚಿತಂ ಬ್ರಹ್ಮಭವಾದಿಭಿಃ ಸುರೈಃ**
**ಶ್ರಿಯಾ ಚ ದೇವ್ಯಾ ಮುನಿಭಿಃ ಸಸಾತ್ವತೈಃ ।**
**ಗೋಚಾರಣಾಯಾನುಚರೈಶ್ಚರದ್ವನೇ**
**ಯದ್ಗೋಪಿಕಾನಾಂ ಕುಚಕುಙ್ಕುಮಾಙ್ಕಿತಮ್ ॥೮॥**

ಯಾವನ ಪಾದಾರವಿಂದಗಳನ್ನು ಬ್ರಹ್ಮ-ರುದ್ರ-ಇಂದ್ರ ಇವರೇ ಮೊದಲಾದ ದೇವತೆಗಳೂ, ಮಹಾಲಕ್ಷ್ಮಿಯೂ, ಮುನಿಗಳೂ, ಯಾದವರೂ ನಿತ್ಯನಿರಂತರವಾಗಿ ಪೂಜಿಸುವರೋ, ಯಾವ ಚರಣಕಮಲಗಳು ಗೋವುಗಳನ್ನು ಮೇಯಿಸುವುದಕ್ಕಾಗಿ ಗೋಪಾಲರೊಡನೆ ವೃಂದಾವನದಲ್ಲಿ ಸಂಚರಿಸುವುವೋ ಮತ್ತು ಗೋಪಿಕಾಸ್ತ್ರೀಯರ ಕುಚಗಳಲ್ಲಿರುವ ಕುಂಕುಮ ಕೇಸರಿಯಿಂದ ಲೇಪಿಸಲ್ಪಟ್ಟಿರುವುವೋ ಅಂತಹ ದಿವ್ಯವಾದ, ಪವಿತ್ರವಾದ, ಪಾವನವಾದ ಸ್ವಾಮಿಯ ಚರಣಕಮಲಗಳನ್ನು ನಾನೀಗಲೇ ಕಾಣಲಿರುವೆನು.

**ದ್ರಕ್ಷ್ಯಾಮಿ ನೂನಂ ಸುಕಪೋಲನಾಸಿಕಂ**
**ಸ್ಮಿತಾವಲೋಕಾರುಣಕಞ್ಜಲೋಚನಮ್ ।**
**ಮುಖಂ ಮುಕುನ್ದಸ್ಯ ಗುಡಾಲಕಾವೃತಂ**
**ಪ್ರದಕ್ಷಿಣಂ ಮೇ ಪ್ರಚರನ್ತಿ ವೈ ಮೃಗಾಃ ॥೯॥**

ಇದೋ ಈ ಮೃಗಗಳು ನನ್ನನ್ನು ಬಲಗಡೆಗೆ ಬಿಟ್ಟುಕೊಂಡು ಪ್ರದಕ್ಷಿಣಾಕಾರವಾಗಿ ಹೋಗುತ್ತಾ ನನಗೆ ಶುಭವಾಗುವುದೆಂಬುದನ್ನು ಸೂಚಿಸುತ್ತಿವೆ. ಆದುದರಿಂದ ನಾನಿಂದು ಮನೋಹರವಾದ ಕಪೋಲ ಗಳಿಂದಲೂ, ಸುಂದರವಾದ ಮೂಗಿನಿಂದಲೂ, ಕಿರುನಗೆಯಿಂದ ಕೂಡಿದ

ನೋಟದಿಂದಲೂ, ಕೆಂದಾವರೆಯಂತಿರುವ ಕಣ್ಣುಗಳಿಂದಲೂ, ಗುಂಗುರು ಕೂದಲುಗಳಿಂದ ಸಮಲಂಕೃತವಾದ ಮುಖದಿಂದಲೂ ಶೋಭಾಯಮಾನ ನಾಗಿರುವ ಮುಕುಂದನನ್ನು ನೋಡಿಯೇ ನೋಡುತ್ತೇನೆ.

**ಅಪ್ಯದ್ಯ ವಿಷ್ಣೋರ್ಮನುಜತ್ವಮೀಯುಷೋ**
**ಭಾರಾವತಾರಾಯ ಭುವೋ ನಿಜೇಚ್ಛಯಾ ।**
**ಲಾವಣ್ಯಧಾಮ್ನೋ ಭವಿತೋಪಲಮ್ಭನಂ**
**ಮಹ್ಯಂ ನ ನ ಸ್ಯಾತ್ಫಲಮಞ್ಜಸಾ ದೃಶಃ ॥೧೦॥**

ಮಹಾವಿಷ್ಣುವು ಸರ್ವವ್ಯಾಪಕನಾಗಿದ್ದರೂ ಭೂಭಾರಹರಣಕ್ಕಾಗಿ ಸ್ವೇಚ್ಛೆಯಿಂದ ಮನುಷ್ಯನಾಗಿ ಅವತರಿಸಿದ್ದಾನೆ. ಅವನು ಚೆಂದಕ್ಕೆ ನೆಲೆ ಯಾಗಿದ್ದಾನೆ. ಸೌಂದರ್ಯವೇ ಮೂರ್ತಿವೆತ್ತಿ ಬಂದಿರುವುದೋ ಎಂಬಂತಿ ದ್ದಾನೆ. ಅವನ ದರ್ಶನವಿಂದು ನನಗೆ ಆಗಿಯೇ ತೀರುತ್ತದೆ. ನಾನು ಕಣ್ಣು ಗಳನ್ನು ಹೊಂದಿರುವುದಕ್ಕೆ ಇಂದು ಪ್ರಯೋಜನವಾಗದೇ ಇರಲಾರದು.

**ಯ ಈಕ್ಷಿತಾಹಂರಹಿತೋಽಪ್ಯಸತ್ಸತೋಃ**
**ಸ್ವತೇಜಸಾಪಾಸ್ತತಮೋಭಿದಾಭ್ರಮಃ ।**
**ಸ್ವಮಾಯಯಾತ್ಮನ್ರಚಿತೈಸ್ತದೀಕ್ಷಯಾ**
**ಪ್ರಾಣಾಕ್ಷಧೀಭಿಃ ಸದನೇಷ್ವಭೀಯತೇ ॥೧೧॥**

ಯಾವ ಪರಮಾತ್ಮನು ಸತ್ ಮತ್ತು ಅಸತ್ (ವ್ಯಕ್ತ ಮತ್ತು ಅವ್ಯಕ್ತ ಅಥವಾ ಜೀವ-ಪ್ರಕೃತಿ) ಗಳೆರಡಕ್ಕೂ ಸಾಕ್ಷಿಯಾಗಿದ್ದರೂ ಅಹಂಕಾರ ರಹಿತನಾಗಿ ತನ್ನ ತೇಜಸ್ಸಿನಿಂದ ಅಜ್ಞಾನದಿಂದುಂಟಾದ ಭೇದಭ್ರಾಂತಿಯನ್ನು ವಿನಾಶಗೊಳಿಸುವನೋ, ತನ್ನದೇ ಆದ ಯೋಗಮಾಯೆಯನ್ನು ಆಶ್ರಯಿಸಿ ಕೇವಲ ವೀಕ್ಷಣಮಾತ್ರದಿಂದ ಸ್ವಪ್ರಕೃತಿಯಿಂದಲೇ ನಿರ್ಮಿತಗಳಾದ ಪ್ರಾಣೇಂದ್ರಿಯಬುದ್ಧಿಗಳಲ್ಲಿ ಪ್ರವೇಶಿಸಿ ಗೋಪಿಯರ ಮನೆಗಳಲ್ಲಿಯೂ ವೃಂದಾವನಗಳಲ್ಲಿಯೂ ವ್ಯವಹರಿಸುವನೋ ಅಂತಹ ಪರಬ್ರಹ್ಮ-ಪರಮಾತ್ಮಸ್ವರೂಪನಾದ ಶ್ರೀಕೃಷ್ಣನನ್ನು ನಾನಿಂದು ಸಂದರ್ಶಿಸುವೆನು.*

---

* ಯಾವ ಪರಮಾತ್ಮನು ಪ್ರಕೃತಿ ಪುರುಷರಿಬ್ಬರೂ ತನಗೆ ಶರೀರಭೂತರೆಂದು ತಿಳಿದಿದ್ದರೂ ಜೀವರಂತೆ ದೇಹವೇ ತಾನೆಂಬ ಅಹಂಕಾರಕ್ಕೊಳಗಾಗಿಲ್ಲವೋ ಮತ್ತು ತನ್ನ

**ಯಸ್ಯಾಖಿಲಾಮೀವಹಭಿಃ ಸುಮಙ್ಗಲೈ-**
**ರ್ವಾಚೋ ವಿಮಿಶ್ರಾ ಗುಣಕರ್ಮಜನ್ಮಭಿಃ ।**
**ಪ್ರಾಣನ್ತಿ ಶುಮ್ಭನ್ತಿ ಪುನನ್ತಿ ವೈ ಜಗ-**
**ದ್ಯಾಸ್ತದ್ವಿರಕ್ತಾಃ ಶವಶೋಭನಾ ಮತಾಃ ॥೧೨॥**

ಸಮಸ್ತಪಾಪಗಳನ್ನೂ ಹೋಗಲಾಡಿಸಿ ಮಂಗಳವನ್ನುಂಟುಮಾಡುವ ಶ್ರೀಕೃಷ್ಣನ ಭಕ್ತವಾತ್ಸಲ್ಯಾದಿ ಕಲ್ಯಾಣಗುಣಗಳಿಂದಲೂ, ದುಷ್ಟನಿಗ್ರಹ ಶಿಷ್ಟಪರಿಪಾಲನವೇ ಮೊದಲಾದ ಕರ್ಮಗಳಿಂದಲೂ, ರಾಮ-ಕೃಷ್ಣಾದ್ಯವತಾರಗಳಿಂದಲೂ ಕೂಡಿದ ಮಾತುಗಳು ಪ್ರಪಂಚವನ್ನು ಉದ್ಧರಿಸುತ್ತವೆ ; ಬೆಳಗುತ್ತವೆ ಮತ್ತು ಪಾವನಗೊಳಿಸುತ್ತವೆ. ಆದರೆ ಶ್ರೀಕೃಷ್ಣನ ಲೀಲಾ ಪ್ರಸಂಗಗಳಿಂದ ವಿಹೀನವಾದ ಮಾತುಗಳು ಹೆಣಕ್ಕೆ ಅಲಂಕಾರಮಾಡಿದಂತೆ ಶೋಭಿಸಲಾರವು.

**ಸ ಚಾವತೀರ್ಣಃ ಕಿಲ ಸಾತ್ವತಾನ್ವಯೇ**
**ಸ್ವಸೇತುಪಾಲಾಮರವರ್ಯಶರ್ಮಕೃತ್ ।**
**ಯಶೋ ವಿತನ್ವನ್ ವ್ರಜ ಆಸ್ತ ಈಶ್ವರೋ**
**ಗಾಯನ್ತಿ ದೇವಾ ಯದಶೇಷಮಙ್ಗಲಮ್ ॥೧೩॥**

ಯಾವನ ಗುಣಸಂಕೀರ್ತನಕ್ಕೇ ಇಂತಹ ಮಹಿಮೆಯಿರುವುದೋ ಅಂತಹ ಭಗವಂತನು ಸಾಕ್ಷಾತ್ತಾಗಿ ಯದುವಂಶದಲ್ಲಿ ಅವತರಿಸಿದ್ದಾನೆ. ತನ್ನಿಂದಲೇ ಕಲ್ಪಿತವಾದ ಲೋಕಮರ್ಯಾದೆ-ಧರ್ಮಮರ್ಯಾದೆಗಳನ್ನು ಪಾಲಿಸುತ್ತಿರುವ ಶ್ರೇಷ್ಠರಾದ ದೇವತೆಗಳ ಕಲ್ಯಾಣಕ್ಕೋಸ್ಕರವೇ ಅವನ ಅವತಾರವಾಗಿದೆ. ಐಶ್ವರ್ಯಶಾಲಿಯಾದ ಆ ಭಗವಂತನು ತನ್ನ ಮಂಗಳಮಯವಾದ ಯಶಸ್ಸನ್ನು ವಿಸ್ತಾರಗೊಳಿಸುತ್ತಾ ಗೋಕುಲದಲ್ಲಿ ವಾಸ

---

ಅಸಂಕುಚಿತವಾದ ನಿತ್ಯಜ್ಞಾನದಿಂದ ಅಜ್ಞಾನಮೂಲಗಳಾದ ದೇಹಭ್ರಾಂತಿ-ಸ್ವತಂತ್ರಾತ್ಮ ಭ್ರಾಂತಿಗಳನ್ನು ಕಳೆದುಕೊಂಡಿರುವನೋ, ಯಾವನು ಸಂಕಲ್ಪಮಾತ್ರದಿಂದಲೇ ತನ್ನ ಶರೀರಭೂತವಾದ ಪ್ರಕೃತಿಯಲ್ಲಿ ನಿರ್ಮಿತಗಳಾದ ಬುದ್ಧೀಂದ್ರಿಯಾದಿಗಳಿಂದ ದೇಹದಲ್ಲಿ ನೆಲಸಿರುವನೋ ಅವನನ್ನು ಕಾಣುವೆನು. (ವೀರರಾಘವೀಯ)

ಯಾವ ಭಗವಂತನು ತಮಸ್ಸು ಭೇದಗಳೆಂಬ ಅಜ್ಞಾನ-ಅನ್ಯಥಾಜ್ಞಾನಗಳಿಂದುಂಟಾಗುವ ವಿಪರೀತಪ್ರವೃತ್ತಿಗಳಿಗೊಳಗಾಗುವುದಿಲ್ಲವೋ ಅವನನ್ನು ಕಾಣುವೆನು. (ವಿಜಯಧ್ವಜೀಯ)

ಮಾಡುತ್ತಿದ್ದಾನೆ. ದೇವತೆಗಳು ಕೂಡ ಅವನ ಮಂಗಳಮಯವಾದ ಯಶಸ್ಸನ್ನು ಯಾವಾಗಲೂ ಗಾನಮಾಡುತ್ತಿರುತ್ತಾರೆ. ಅಂತಹ ಪರಬ್ರಹ್ಮ ಪರಮಾತ್ಮನ ದಿವ್ಯದರ್ಶನವನ್ನು ನಾನಿಂದು ಮಾಡಲಿದ್ದೇನೆ.

**ತಂ ತ್ವದ್ಯ ನೂನಂ ಮಹತಾಂ ಗತಿಂ ಗುರುಂ**
**ತ್ರೈಲೋಕ್ಯಕಾನ್ತಂ ದೃಶಿಮನ್ಮಹೋತ್ಸವಮ್ ।**
**ರೂಪಂ ದಧಾನಂ ಶ್ರಿಯ ಈಪ್ಸಿತಾಸ್ಪದಂ**
**ದ್ರಕ್ಷ್ಯೇ ಮಮಾಸನ್ನುಷಸಃ ಸುದರ್ಶನಾಃ ॥೧೪॥**

ದೊಡ್ಡ ದೊಡ್ಡ ಸಂತರಿಗೂ, ಲೋಕಪಾಲಕರಿಗೂ ಏಕಮಾತ್ರ ಆಶ್ರಯನಾಗಿರುವ ಶ್ರೀಕೃಷ್ಣನನ್ನು ನಾನಿಂದು ನೋಡಿಯೇ ತೀರುವೆನು. ಇದರಲ್ಲಿ ಸಂದೇಹವೇ ಇಲ್ಲ. ಅವನು ಸಮಸ್ತರಿಗೂ ಶ್ರೇಷ್ಠಗುರುವಾಗಿದ್ದಾನೆ. ಅವನ ರೂಪಸೌಂದರ್ಯವು ಮೂರು ಲೋಕಗಳನ್ನೂ ವಿಮೋಹಗೊಳಿಸುವುದಾಗಿದೆ. ಕಣ್ಣುಳ್ಳವರಿಗೆ ಅವನನ್ನು ನೋಡುವುದೇ ಒಂದು ಹಬ್ಬವಾಗಿದೆ. ಸೌಂದರ್ಯಕ್ಕೆ ಅಧೀಶ್ವರಿಯಾದ ಮಹಾಲಕ್ಷ್ಮಿಗೆ ಕೂಡ ಅಭೀಷ್ಟವಾದ ಸುಂದರರೂಪವನ್ನು ಅವನು ಧರಿಸಿದ್ದಾನೆ. ಅಂತಹ ಸುಂದರಮೂರ್ತಿಯನ್ನು ನಾನಿಂದು ನೋಡಿಯೇ ನೋಡುತ್ತೇನೆ. ಬೆಳಗಿನಿಂದಲೂ ನನಗೆ ಶುಭಶಕುನಗಳೇ ಕಾಣಿಸಿಕೊಳ್ಳುತ್ತಿವೆ.

ಸರ್ವಶ್ರೇಷ್ಠರಾದ ಬಲರಾಮ-ಶ್ರೀಕೃಷ್ಣರನ್ನು ನಾನು ಯಾವಾಗ ಕಾಣುವೆನೋ ಆ ಕ್ಷಣದಲ್ಲಿಯೇ ನಾನು ಅವರ ಚರಣಾರವಿಂದಗಳಲ್ಲಿ ನಮಸ್ಕರಿಸುವ ಸಲುವಾಗಿ ರಥದಿಂದಿಳಿಯುತ್ತೇನೆ. ಅವರ ಪಾದಪದ್ಮಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತೇನೆ. ಅವರ ಚರಣಾರವಿಂದಗಳು ಬಹು ದುರ್ಲಭವಾದುವುಗಳು. ಮಹಾಮಹಾಯೋಗಿಗಳು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಧ್ಯಾನದ ಮೂಲಕವಾಗಿ ಭಗವಂತನ ಚರಣಕಮಲಗಳನ್ನು ಹೃದಯದಲ್ಲಿರಿಸಿಕೊಳ್ಳುತ್ತಾರೆ. ನಾನಾದರೋ ಅಂತಹ ಪರಮಪವಿತ್ರವಾದ ಚರಣಕಮಲಗಳನ್ನು ಪ್ರತ್ಯಕ್ಷವಾಗಿ ನೋಡಿ ನಮಸ್ಕರಿಸುತ್ತೇನೆ. ರಾಮ-ಕೃಷ್ಣರ ಪಾದಗಳಿಗೆ ನಮಸ್ಕರಿಸಿದನಂತರ ಅವರ ಗೆಳೆಯರಾದ ಗೋಪಾಲರೆಲ್ಲರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಅವರ ಚರಣಕಮಲಗಳನ್ನು ಮುಟ್ಟಿ ನಮಸ್ಕರಿಸುತ್ತೇನೆ.

ಹಾಗೆ ಚರಣಾರವಿಂದಗಳಿಗೆ ನಮಸ್ಕರಿಸಿದ ನನ್ನ ತಲೆಯ ಮೇಲೆ ತನ್ನ ಕರಕಮಲಗಳನ್ನು ಭಗವಂತನು ಇಡುವನಲ್ಲವೇ! ನಿಶ್ಚಯವಾಗಿಯೂ ಅದು ನನ್ನ ಸೌಭಾಗ್ಯವೇ ಸರಿ. ಯಾರು ಕಾಲರೂಪವಾದ ಸರ್ಪಕ್ಕೆ ಭಯಗೊಂಡು ಆ ಭಗವಂತನ ಚರಣಾರವಿಂದಗಳನ್ನು ಆಶ್ರಯಿಸುವರೋ ಮತ್ತು ಶರಣಾಗತರಾಗುವರೋ ಅಂತಹವರಿಗೆ ಅವನ ಕರಕಮಲವು ಸದಾ ಅಭಯದಾನಮಾಡುತ್ತದೆ. ಶ್ರೀಕೃಷ್ಣನ ಕರಕಮಲಗಳಲ್ಲಿ ಪೂಜಾಂಗವಾದ ಅರ್ಘ್ಯಪ್ರದಾನಮಾಡಿದ ಮಾತ್ರದಿಂದಲೇ ಇಂದ್ರ ಮತ್ತು ಬಲಿಗಳು ತ್ರೈಲೋಕ್ಯಾಧಿಪತ್ಯವನ್ನು ಪಡೆದುಕೊಂಡರು. ಕಮಲದ ವಾಸನೆಯನ್ನು ಹೊಂದಿದ್ದ ಆ ದಿವ್ಯವಾದ ಕರಕಮಲಗಳ ಸ್ಪರ್ಶಮಾತ್ರದಿಂದಲೇ ರಾಸಲೀಲೆ ಯಲ್ಲಿ ತೊಡಗಿದ್ದ ಸಮಸ್ತ ಗೋಪಿಕಾಸ್ತ್ರೀಯರ ಆಯಾಸವೂ ಪರಿಹಾರ ವಾಯಿತು. ನಾನೇನೋ ಈಗ ಕಂಸನ ದೂತನಾಗಿ ಹೋಗುತ್ತಿದ್ದೇನೆ. ಅವನು ಕಳುಹಿಸಿದ್ದರಿಂದಲೇ ಶ್ರೀಕೃಷ್ಣನ ಬಳಿಗೆ ಹೋಗುತ್ತಿದ್ದೇನೆ. ಇದರಿಂದೇನಾದರೂ ಶ್ರೀಕೃಷ್ಣನು ನನ್ನನ್ನು ಶತ್ರುವೆಂದು ಭಾವಿಸಿ ಯಾನೇ? ಇಲ್ಲ ; ಅವನೆಂದಿಗೂ ಹಾಗೆ ನನ್ನನ್ನು ಶತ್ರುವೆಂದು ಭಾವಿಸನು. ಏಕೆಂದರೆ : ಅವನು ನಿರ್ವಿಕಾರನು; ಸರ್ವಸಮನು ; ಅಚ್ಯುತನು ; ಸ್ವರೂಪದಿಂದ ಚ್ಯುತನಾಗತಕ್ಕವನಲ್ಲ. ಸಮಸ್ತವಿಶ್ವಕ್ಕೂ ಸಾಕ್ಷೀಭೂತನು, ಸರ್ವಜ್ಞನು, ಚಿತ್ತದ ಒಳಗೂ ಮತ್ತು ಹೊರಗೂ ಇರತಕ್ಕವನು. ಸಮಸ್ತ ಪ್ರಾಣಿಗಳಲ್ಲಿಯೂ ಕ್ಷೇತ್ರಜ್ಞನಾಗಿದ್ದು ಪ್ರಾಣಿಗಳ ಸಮಸ್ತಕಾರ್ಯಗಳನ್ನೂ, ಆಲೋಚನೆಗಳನ್ನೂ ಪರಿಶುದ್ಧವಾದ ದೃಷ್ಟಿಯಿಂದ ನೋಡುತ್ತಲೇ ಇರು ತ್ತಾನೆ. ಆದುದರಿಂದ ಭಗವಂತನು ನನ್ನನ್ನು ಶತ್ರುವೆಂದು ಭಾವಿಸಿಯಾನೆಂಬ ಸಂಶಯಕ್ಕೆ ಅವಕಾಶವೇ ಇಲ್ಲ. ನಾನಂತೂ ಅವನನ್ನು ನೋಡಿದೊಡನೆಯೇ ರಥದಿಂದಿಳಿದು ಅಡ್ಡಬಿದ್ದು ನಮಸ್ಕರಿಸಿ ಕೈಗಳನ್ನು ಜೋಡಿಸಿಕೊಂಡು ಅತ್ಯಂತವಿನೀತನಾಗಿ ಅವನ ಮುಂದೆ ನಿಲ್ಲುತ್ತೇನೆ. ಆಗ ಅವನು ನಸುನಗುತ್ತಾ ದಯಾಪೂರ್ಣವಾದ ಸ್ನೇಹದೃಷ್ಟಿಯಿಂದ ನನ್ನ ಕಡೆಗೆ ನೋಡುತ್ತಾನೆ. ಆ ಸಮಯದಲ್ಲಿ ಜನ್ಮಜನ್ಮಾಂತರಗಳಲ್ಲಿಯೂ ನಾನು ಮಾಡಿರಬಹುದಾದ ಪಾಪರಾಶಿಗಳೆಲ್ಲವೂ ಕ್ಷಣಮಾತ್ರದಲ್ಲಿ ಭಸ್ಮವಾಗಿ ಹೋಗುತ್ತವೆ. ಆಗ ನಾನು ಯಾವ ಸಂದೇಹವೂ ಇಲ್ಲದೆ ನಿತ್ಯನಿರಂತರವಾಗಿ

ಆನಂದಸಾಗರದಲ್ಲಿ ಮುಳುಗಿಬಿಡುತ್ತೇನೆ. ನಾನು ಅವನಿಗೆ ಸುಹೃತ್ತಮನಾಗಿದ್ದೇನೆ. ಯಾವಾಗಲೂ ಅವನ ಹಿತವನ್ನೇ ಬಯಸುತ್ತೇನೆ. ಅವನು ನನ್ನ ಜ್ಞಾತಿಯು. ನಮ್ಮ ಕುಟುಂಬಕ್ಕೇ ಸೇರಿದವನು. ಅವನನ್ನು ಬಿಟ್ಟು ನನಗೆ ಬೇರೆಯ ಆರಾಧ್ಯದೈವವೇ ಇಲ್ಲ. ಇಂತಹ ನನ್ನನ್ನು ದಯಾಮಯನಾದ ಭಗವಂತನು ತನ್ನ ಬಾಹುಪಾಶಗಳಿಂದ ಬಿಗಿಯದೇ ಇರಲಾರನು. ಅವನ ಪವಿತ್ರವಾದ ಆಲಿಂಗನದಿಂದ ನನ್ನ ದೇಹವು ಪವಿತ್ರವಾಗಿ ಹೋಗುತ್ತದೆ. ಇತರರನ್ನೂ ಪವಿತ್ರಗೊಳಿಸುವಷ್ಟು ಪವಿತ್ರತಮವಾಗುತ್ತದೆ. ಪುಣ್ಯ-ಪಾಪರೂಪವಾದ ನನ್ನ ಸಂಸಾರಬಂಧನವೂ ಕೂಡ ಕಳಚಿಹೋಗುತ್ತದೆ. ಭಗವಂತನು ಆಲಿಂಗನಮಾಡಿಕೊಂಡನಂತರ ನಾನು ಕೈಗಳನ್ನು ಜೋಡಿಸಿ ಕೊಂಡು ತಲೆಯನ್ನು ತಗ್ಗಿಸಿ ಭಗವಂತನ ಮುಂದೆ ನಿಲ್ಲುತ್ತೇನೆ. ಆಗ ಮುಕುಂದನು ನನ್ನನ್ನು ಕುರಿತು–'ತಾತ! ಅಕ್ರೂರನೇ!'–ಎಂದು ಸಂಬೋಧಿಸುತ್ತಾನೆ. ಆಗ ನಿಶ್ಚಯವಾಗಿಯೂ ನಾನು ದೇಹವನ್ನು ಧರಿಸಿದ್ದು ಸಾರ್ಥಕವೆನಿಸುತ್ತದೆ. ಶ್ರೀಕೃಷ್ಣನಿಂದ ಆದರಿಸಲ್ಪಡದವರ ಜನ್ಮವು ನಿಶ್ಚಯವಾಗಿಯೂ ವ್ಯರ್ಥವೇ ಸರಿ. ಅಂತಹ ಜನ್ಮಕ್ಕೆ ಧಿಕ್ಕಾರವಿರಲಿ. ಆದರೆ ಭಗವಂತನಿಗೆ ಪ್ರಿಯರಾದವರೂ ಇಲ್ಲ; ಅಪ್ರಿಯರಾದವರೂ ಇಲ್ಲ. ಆತ್ಮೀಯನಾದ ಮಿತ್ರನೂ ಇಲ್ಲ; ಅನಾತ್ಮೀಯನಾದ ಶತ್ರುವೂ ಇಲ್ಲ. ಅವನು ಯಾರನ್ನೂ ಉಪೇಕ್ಷಿಸುವುದೂ ಇಲ್ಲ. ಕಲ್ಪವೃಕ್ಷವು ತನ್ನನ್ನು ಆಶ್ರಯಿಸಿ ಬೇಡಿದವರಿಗೆ ಬೇಕಾದ ವಸ್ತುವನ್ನು ನೀಡುವಂತೆ ಭಗವಂತನು ತನ್ನನ್ನು ಯಾರು-ಯಾರು ಹೇಗೆ ಪ್ರೀತಿಸುವರೋ ಅದಕ್ಕನುಗುಣವಾಗಿ ಅವರಿಗೆ ಫಲವನ್ನು ನೀಡುತ್ತಾನೆ.*

ನಾನು ಶ್ರೀಕೃಷ್ಣನ ಮುಂದೆ ಕೈಜೋಡಿಸಿಕೊಂಡು ವಿನೀತಭಾವದಿಂದ ನಿಂತಿರುವಾಗ ಬಲರಾಮನು ನಸುನಗುತ್ತಾ ನನ್ನನ್ನು ಆಲಿಂಗಿಸಿಕೊಳ್ಳು ತ್ತಾನೆ. ಅವನ ಅನುಗ್ರಹರೂಪವಾದ ಆಲಿಂಗನದಿಂದ ಪುಲಕಿತನಾಗುವ ನಾನು ಪುನಃ ಹಿಂದಿನಂತೆಯೇ ಕೈಜೋಡಿಸಿಕೊಂಡು ವಿನಯಭಾವದಿಂದ

---

* ಯೇ ಯಥಾ ಮಾಂ ಪ್ರಪದ್ಯನ್ತೇ ತಾಂ ಸ್ತಥೈವ ಭಜಾಮ್ಯಹಮ್ ॥ (ಗೀತಾ)

ಯಾರು ಆತನಲ್ಲಿ ಎಷ್ಟು ಭಕ್ತಿಯನ್ನು ಮಾಡುವರೋ ಭಗವಂತನು ಅವರನ್ನು ಅಷ್ಟು ಅನುಗ್ರಹಿಸುವನು. (ಭಾವಾರ್ಥದೀಪಿಕಾ)

ನಿಲ್ಲುತ್ತೇನೆ. ಆಗ ರಾಮ-ಕೃಷ್ಣರಿಬ್ಬರೂ ನನ್ನ ಎರಡು ಕೈಗಳನ್ನೂ ಹಿಡಿದು ಮನೆಯೊಳಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ನನ್ನನ್ನು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸುತ್ತಾರೆ. ಬಳಿಕ ಅವರು ನನ್ನನ್ನು ಕುರಿತು ಪ್ರಶ್ನಿಸುತ್ತಾರೆ: 'ಅಕ್ರೂರ! ಕಂಸನು ನಮ್ಮ ಬಂಧುಗಳ ವಿಷಯದಲ್ಲಿ ಹೇಗೆ ವ್ಯವಹರಿಸುತ್ತಿದ್ದಾನೆ?''

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ರಥದಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದ ಶ್ವಫಲ್ಕನ ಮಗನಾದ ಅಕ್ರೂರನು ಮಾರ್ಗದಲ್ಲಿ ಹೀಗೆ ಮುಂದಿನ ಆಗು-ಹೋಗುಗಳನ್ನೇ ಚಿಂತಿಸುತ್ತಾ ನಂದಗೋಕುಲವನ್ನು ಸೇರಿದನು. ಆ ವೇಳೆಗೆ ಸೂರ್ಯನು ಅಸ್ತಂಗತನಾದನು. ಯಾವನ ಚರಣಕಮಲಗಳ ಧೂಳಿಯನ್ನು ಸಮಸ್ತಲೋಕಪಾಲರೂ ತಮ್ಮ ಕಿರೀಟಗಳ ಮೂಲಕ ಸೇವಿಸುವರೋ (ನಮಸ್ಕಾರಮಾಡಿ ಕಿರೀಟದ ಮೂಲಕವಾಗಿ ಶಿರಸ್ಸಿನಲ್ಲಿ ಧಾರಣೆ ಮಾಡುವರೋ) ಅಂತಹ ದಿವ್ಯವಾದ ಚರಣಕಮಲಗಳನ್ನು ಅಕ್ರೂರನು ಗೋಕುಲದಲ್ಲಿ ನೋಡಿದನು. ಕಮಲ, ಯವ, ಅಂಕುಶ, ವಜ್ರ–ಇವೇ ಮೊದಲಾದ ಚಿಹ್ನೆಗಳ ಮೂಲಕವಾಗಿ ಅವು ಭಗವಂತನ ಪಾದಾರವಿಂದಗಳೇ ಎಂಬುದು ತಿಳಿದುಬರುತ್ತಿತ್ತು. ಮೇಲಾಗಿ ಅವು ಪೃಥ್ವಿಯ ಶೋಭೆಯನ್ನು ಹೆಚ್ಚಿಸುತ್ತಿದ್ದುವು. ನೆಲದಲ್ಲಿ ಬಿದ್ದಿದ್ದ ಶ್ರೀಕೃಷ್ಣನ ಚರಣಾರವಿಂದಗಳ ಗುರುತನ್ನು ನೋಡುತ್ತಲೇ ಅಕ್ರೂರನಿಗೆ ಮಹಾನಂದವಾಯಿತು. ಅಂತೆಯೇ ಶ್ರೀಕೃಷ್ಣಸ್ವಾಮಿಯನ್ನು ನೋಡಬೇಕೆಂಬ ಸಂಭ್ರಮವೂ ಹೆಚ್ಚಿತು. ಪ್ರೇಮಾಧಿಕ್ಯದಿಂದಾಗಿ ಅವನ ರೋಮಕೋಟಿಗಳು ನಿಮಿರಿನಿಂತುವು. ಆನಂದಬಾಷ್ಪಗಳು ಸುರಿಯತೊಡಗಿದುವು. ರಥದಿಂದಿಳಿದು ಭಗವಂತನ ಹೆಜ್ಜೆಗಳ ಗುರುತುಗಳ ಮೇಲೆ ಬಿದ್ದು ಹೊರಳಾಡಿದನು. 'ನನ್ನ ಪ್ರಭುವಿನ ಚರಣಕಮಲಗಳ ಪವಿತ್ರವಾದ ಧೂಳಿಯು ಇದಾಗಿದೆ. ಇದರ ಸ್ಪರ್ಶದಿಂದಲೇ ನನ್ನ ಪಾಪಗಳೆಲ್ಲವೂ ಪರಿಹಾರವಾದುವು'–ಎಂದು ಕೂಗಿಕೊಂಡನು. ದುರಾತ್ಮನಾದ ಕಂಸನ ಸಂದೇಶವನ್ನು ಹೊತ್ತು ತಂದ ಅಕ್ರೂರನು ಶ್ರೀಹರಿಯ ಪಾದಗಳ ಗುರುತುಗಳ ದರ್ಶನದಿಂದಲೂ, ಅವನ

ಗುಣಗಳ ಶ್ರವಣದಿಂದಲೂ ದಂಭವನ್ನೂ, ಭಯವನ್ನೂ, ಶೋಕವನ್ನೂ ಪರಿತ್ಯಜಿಸಿ ಜನ್ಮವೆತ್ತಿದ ಜೀವರಿಗೆ ಉಂಟಾಗಬೇಕಾದ ಪರಮಪುರುಷಾರ್ಥ ವಿಷ್ಟೇ–ಎಂಬುದನ್ನು ನಿಶ್ಚಯಿಸಿಕೊಂಡನು. ಬಳಿಕ ಅಕ್ರೂರನು ಮೇಲೆದ್ದು




ಗೋಕುಲದೊಳಕ್ಕೆ ಹೋಗಿ ಶ್ರೀಕೃಷ್ಣ-ಬಲರಾಮರು ಹಾಲುಕರೆಯುವ ಕೊಟ್ಟಿಗೆಯಲ್ಲಿ ವಿರಾಜಮಾನರಾಗಿರುವುದನ್ನು ಕಂಡನು. ಶ್ಯಾಮಸುಂದರನು ಪೀತಾಂಬರವನ್ನೂ ಬಲರಾಮನು ನೀಲಾಂಬರವನ್ನೂ ಧರಿಸಿದ್ದರು. ಅವರ ಕಣ್ಣುಗಳು ಶರತ್ಕಾಲದ ಕಮಲದಂತೆ ವಿಕಸಿತವಾಗಿದ್ದುವು. ಆಗ ತಾನೇ ಅವರು ಕಿಶೋರಾವಸ್ಥೆಯನ್ನು ಪ್ರವೇಶಿಸಿದ್ದರು. ಗೌರ-ಶ್ಯಾಮಲವರ್ಣ ಗಳಿಂದ ಕಂಗೊಳಿಸುತ್ತಿದ್ದ ಅವರು ಸೌಂದರ್ಯದ ಖನಿಗಳಾಗಿದ್ದರು. ಆಜಾನುಬಾಹುಗಳಾಗಿದ್ದರು. ಸುಂದರವಾದ ಮುಖಾರವಿಂದಗಳಿಂದ ಶೋಭಿಸುತ್ತಿದ್ದರು. ಅತ್ಯಂತ ಮನೋಹರರಾಗಿದ್ದರು ಮತ್ತು ಮರಿಯಾನೆ ಗಳು ಹೆಜ್ಜೆಗಳನ್ನಿಡುವಂತೆ ಗಾಂಭೀರ್ಯದಿಂದ ಹೆಜ್ಜೆಗಳನ್ನಿಡುತ್ತಿದ್ದರು. ತಮ್ಮ ಅಂಗಾಲುಗಳಲ್ಲಿದ್ದ ಧ್ವಜ, ವಜ್ರ, ಅಂಕುಶ, ಕಮಲ–ಇವೇ ಮುಂತಾದ ಶುಭಚಿಹ್ನೆಗಳಿಂದ ಗೋಕುಲವನ್ನು ಶೋಭಾಯಮಾನವನ್ನಾಗಿ ಮಾಡಿದ್ದರು. ಮಹಾತ್ಮರಾದ ಅವರ ಮಂದಹಾಸವೂ ಮತ್ತು ಕುಡಿನೋಟವೂ ದಯಾರಸವನ್ನು ಹೊರಹೊಮ್ಮಿಸುತ್ತಿದ್ದುವು. ಅವರ ಒಂದೊಂದು ಲೀಲಾಪ್ರಸಂಗಗಳೂ ಉದಾರತೆಯಿಂದಲೂ ಸುಂದರವಾದ ಕಲೆಯಿಂದಲೂ ಸಂಪನ್ನವಾಗಿರುತ್ತಿದ್ದುವು. ಅವರು ಸುಂದರವಾದ ವನಮಾಲೆಗಳನ್ನೂ

ಮತ್ತು ಮಣಿಮಾಲೆಗಳನ್ನೂ ಧರಿಸಿದ್ದರು. ಅವರು ಆಗತಾನೇ ಸ್ನಾನ ಮಾಡಿದ್ದರು. ನಿರ್ಮಲವಾದ ವಸ್ತ್ರಗಳನ್ನುಟ್ಟು ಅಂಗಾಂಗಗಳನ್ನು ಪವಿತ್ರವಾದ ಚಂದನದಿಂದ ಲೇಪಿಸಿಕೊಂಡಿದ್ದರು. ಜಗತ್ತಿಗೆ ಆದಿಕಾರಣರೂ, ಜಗತ್ಪತಿಗಳೂ, ಪ್ರಧಾನಪುರುಷರೂ ಆದ ಪುರುಷಶ್ರೇಷ್ಠರು–ಪ್ರಪಂಚದ ರಕ್ಷಣೆಗಾಗಿ ತಮ್ಮ ಪೂರ್ಣಾಂಶದಿಂದ ಬಲರಾಮ-ಕೃಷ್ಣರಾಗಿ ಅವತರಿಸಿ ತಮ್ಮ ಶರೀರಗಳ ಕಾಂತಿಯಿಂದ ಹತ್ತು ದಿಕ್ಕುಗಳ ಅಂಧಕಾರವನ್ನೂ ತೊಡೆದುಹಾಕುತ್ತಿದ್ದರು. ಬಂಗಾರದ ಮೆರುಗುಗಳನ್ನು ಕೊಟ್ಟ ಬೆಳ್ಳಿಯ ಮತ್ತು ಮರಕತರತ್ನದ ಪರ್ವತಗಳಂತೆ ರಾಮ-ಕೃಷ್ಣರು ಕಂಗೊಳಿಸುತ್ತಿದ್ದರು. ಅಂತಹ ಮನ್ಮಥಮನ್ಮಥರಾದ ರಾಮ-ಕೃಷ್ಣರನ್ನು ನೋಡುತ್ತಲೇ ಅಕ್ರೂರನು ಸ್ನೇಹದಿಂದ ಪೀಡಿತನಾಗಿ ರಥದಿಂದ ಧುಮುಕಿ, ನಾಗಾಲೋಟದಿಂದ ಅವರ ಬಳಿಗೆ ಹೋಗಿ ದೀರ್ಘದಂಡನಮಸ್ಕಾರಮಾಡಿದನು.

ಪರೀಕ್ಷಿತನೇ! ಭಗವಂತನ ದರ್ಶನದಿಂದುಂಟಾದ ಸಂತೋಷಾಧಿಕ್ಯ ದಿಂದಾಗಿ ಅಕ್ರೂರನ ಕಣ್ಣುಗಳಲ್ಲಿ ಆನಂದಬಾಷ್ಪವು ಸುರಿಯತೊಡಗಿತು. ರೋಮಾಂಚನವಾಗಿ ರೋಮಕೋಟಿಗಳು ನಿಮಿರಿನಿಂತುವು. ಅತ್ಯುತ್ಸಾಹ ದಿಂದಾಗಿ ಗಂಟಲು ಹಿಡಿದು ಬಂದು ಅಕ್ರೂರನಿಗೆ ತನ್ನ ನಾಮಧೇಯವನ್ನು ಕೂಡ ಭಗವಂತನ ಮುಂದೆ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ. ಶರಣಾಗತ ವತ್ಸಲನಾದ ಶ್ರೀಕೃಷ್ಣನು ಭಕ್ತನ ಉತ್ಸಾಹವನ್ನು ನೋಡಿ ಅತ್ಯಂತ ಪ್ರಸನ್ನತೆಯಿಂದ ಚಕ್ರಾಂಕಿತವಾದ ಕೈಗಳಿಂದ ಅಕ್ರೂರನನ್ನು ಹಿಡಿದು ಮೇಲೆತ್ತಿ ಗಾಢವಾಗಿ ಆಲಿಂಗಿಸಿಕೊಂಡನು. ಬಳಿಕ ಅಕ್ರೂರನು ಬಲರಾಮ ನಿಗೂ ದೀರ್ಘದಂಡನಮಸ್ಕಾರಮಾಡಿದನು. ಬಲರಾಮನೂ, ಅಕ್ರೂರನನ್ನು ಹಿಡಿದೆತ್ತಿ ಗಾಢವಾಗಿ ಆಲಿಂಗಿಸಿಕೊಂಡನು. ಬಳಿಕ ಅಕ್ರೂರನ ಒಂದು ಕೈಯನ್ನು ಶ್ರೀಕೃಷ್ಣನೂ ಮತ್ತೊಂದು ಕೈಯನ್ನು ಬಲರಾಮನೂ ಹಿಡಿದು ಕೊಂಡು ಮನೆಗೆ ತೆರಳಿದರು. ಮನೆಗೆ ಕರೆದುಕೊಂಡು ಹೋದ ನಂತರ ಶ್ರೀಕೃಷ್ಣನು ಅಕ್ರೂರನನ್ನು ಯಥಾವಿಧಿಯಾಗಿ ಸ್ವಾಗತಿಸಿ ಸತ್ಕರಿಸಿದನು. ಕುಶಲಪ್ರಶ್ನೆಗಳಾದನಂತರ ಆತನನ್ನು ಶ್ರೇಷ್ಠವಾದ ಆಸನದಲ್ಲಿ ಕುಳ್ಳಿರಿಸಿ ಅಕ್ರೂರನ ಪಾದಗಳನ್ನು ಯಥಾವಿಧಿಯಾಗಿ ತೊಳೆದು, ಮಧು ಪರ್ಕೋಪಚಾರವನ್ನು ಮಾಡಿ ಗೋವನ್ನು ಅರ್ಪಿಸಿ, ಅವನ ಕೈ-ಕಾಲುಗಳ

ನ್ನೊತ್ತಿ ಅವನ ಮಾರ್ಗಾಯಾಸವನ್ನು ಪರಿಹರಿಸಿದನು. ಅತ್ಯಂತ ಆದರ ದಿಂದಲೂ, ಶ್ರದ್ಧೆಯಿಂದಲೂ, ಪವಿತ್ರವಾದ ಅನೇಕಗುಣಗಳಿಂದ ಯುಕ್ತ ವಾಗಿದ್ದ ಮತ್ತು ಷಡ್ರಸೋಪೇತವಾಗಿದ್ದ ಮೃಷ್ಟಾನ್ನವನ್ನು ಅತಿಥಿಯಾಗಿ ಬಂದಿದ್ದ ಅಕ್ರೂರನಿಗೆ ಭೋಜನಮಾಡಿಸಿದನು. ಶ್ರೇಷ್ಠವಾದ ಧರ್ಮಗಳನ್ನು ತಿಳಿದಿದ್ದ ಬಲರಾಮನು, ಅಕ್ರೂರನು ಭೋಜನಮಾಡಿದನಂತರ ಮುಖದಲ್ಲಿ ಸುವಾಸನೆಯನ್ನುಂಟುಮಾಡುವ ತಾಂಬೂಲವನ್ನೂ, ಸುಗಂಧ ಯುಕ್ತವಾದ ಪುಷ್ಪಹಾರಗಳನ್ನೂ ಪ್ರೀತಿಪೂರ್ವಕವಾಗಿ ಅರ್ಪಿಸಿ ಅಕ್ರೂರ ನನ್ನು ಆನಂದಗೊಳಿಸಿದನು. ಹೀಗೆ ಅಕ್ರೂರನು ರಾಮ-ಕೃಷ್ಣರಿಂದ ಯಥಾ ವಿಧಿಯಾಗಿ ಸತ್ಕೃತನಾದನಂತರ ಸುಖಾಸನದಲ್ಲಿ ಕುಳಿತಿದ್ದ ಅಕ್ರೂರನನ್ನು ನಂದಗೋಪನು ಪ್ರಶ್ನಿಸಿದನು :

"ಅಕ್ರೂರಮಹಾಶಯನೇ! ನಿರ್ದಯಿಯಾದ ಕಂಸನು ಬದುಕಿರು ವಾಗ–ಕಟುಕನ ಬಳಿಯಲ್ಲಿರುವ ಕುರಿಗಳಂತೆ ನೀವೆಲ್ಲರೂ ಹೇಗೆತಾನೇ ಜೀವಿಸಿರುವಿರಿ? ಪ್ರಾಣಘಾತಕನಾದ, ನೀಚನಾದ ಕಂಸನು ತನ್ನ ತಂಗಿಯು ಗೋಳಾಡುತ್ತಿದ್ದುದನ್ನೂ ಲಕ್ಷಿಸದೆ ಅವಳಲ್ಲಿ ಹುಟ್ಟಿದ ಎಲ್ಲ ಮಕ್ಕಳನ್ನೂ ಪಾಪದ ಶಂಕೆಯೇ ಇಲ್ಲದೆ ನಿರ್ದಯನಾಗಿ ಕೊಚ್ಚಿಹಾಕಿದನು. ಅಂತಹವನ ಆಡಳಿತಕ್ಕೆ ಒಳಪಟ್ಟಿರುವ ಪ್ರಜೆಗಳ ಕುಶಲವನ್ನು ವಿಚಾರಿಸುವುದರಲ್ಲಿ ಪ್ರಯೋಜನವೇನಿದೆ?"

ಪರೀಕ್ಷಿತಮಹಾರಾಜ! ಹೀಗೆ ಸತ್ಯವೂ, ಪ್ರಿಯವೂ ಆದ ಮಾತುಗಳ ಮೂಲಕವಾಗಿ ನಂದಗೋಪನು ಕೇಳಿದ ಪ್ರಶ್ನೆಗಳಿಂದ ಗೌರವಿಸಲ್ಪಟ್ಟ ಅಕ್ರೂರನು ಮಾರ್ಗಾಯಾಸವನ್ನು ಸಂಪೂರ್ಣವಾಗಿ ಕಳೆದುಕೊಂಡನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೮ನೆಯ ಅಧ್ಯಾಯವು ಮುಗಿಯಿತು.

**ಆರನೆಯ ಸಂಪುಟವು ಮುಗಿಯಿತು.**

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಶ್ರೀಗಣೇಶಾಯ ನಮಃ ಶ್ರೀಕೃಷ್ಣಪರಬ್ರಹ್ಮಣೇ ನಮಃ

# ಶ್ರೀಕೃಷ್ಣನ ಜಾತಕ

ಮೂಲ :

**ಡಾ॥ ಬಿ. ವಿ. ರಾಮನ್ ಅವರ ನೋಟಬಲ್ ಹಾರಸ್ಕೋಪ್ಸ್**

**ಆಂಗ್ಲ ಮೂಲದಿಂದ.**

ಕನ್ನಡ ಅನುವಾದ :

ಶ್ರೀ ಎಸ್. ಶಿವಕುಮಾರ್ ಮತ್ತು ಅವರ ಕುಟುಂಬವರ್ಗದವರಿಂದ

12, ಸೋಮೇಶ್ವರಗುಡಿ ಬೀದಿ, ಅಲಸೂರು, ಬೆಂಗಳೂರು-560 008.

ಜನನದ ವಿವರ : 19ನೇ ಜುಲೈ 3228 ಕ್ರಿ. ಪೂ. ಮಧ್ಯರಾತ್ರಿ. ಉತ್ತರ ಅಕ್ಷಾಂಶ 27$^{o}$25’ ರೇಖಾಂಶ ಪೂರ್ವ 77$^{o}$41'.

ಗ್ರಹಸ್ಥಿತಿ : ಸೂರ್ಯ 139$^{o}$-48’, ಚಂದ್ರ 47$^{o}$-42’, ಕುಜ 91$^{o}$-6’, ಬುಧ 152$^{o}$-48’, ಗುರು 148$^{o}$-54’ ಶುಕ್ರ 102$^{o}$-54’, ಶನಿ 224$^{o}$-42, ರಾಹು 106$^{o}$-24 ಮತ್ತು ಲಗ್ನ 50$^{o}$.

ಅಯನಾಂಶ + 50$^{o}$-40’.

| | | | | | | | | |
|---|---|---|---|---|---|---|---|---|
| | | ಲಗ್ನ ಚಂದ್ರ | | | | | ಕೇತು | ಚಂದ್ರ ಲಗ್ನ |
| | ರಾಶಿ | | ಕುಜ ಶುಕ್ರ ರಾಹು | | | ನವಾಂಶ | | ಕುಜ |
| ಕೇತು | | | ರವಿ ಗುರು | | ಬುಧ | | | |
| | ಶನಿ | | ಬುಧ | | ಗುರು | ರಾಹು ಶನಿ | ಶುಕ್ರ | ರವಿ |

ಗರ್ಭಗತ ಚಂದ್ರದೆಶೆ ಬಾಕಿ 4 ವರ್ಷ 2 ತಿಂಗಳು 22 ದಿನಗಳು. ಶ್ರೀಕೃಷ್ಣನು ಶುಕ್ರಕ್ಷೇತ್ರವಾದ ವೃಷಭಲಗ್ನದಲ್ಲಿ ಜನಿಸಿದನು. ಮತ್ತೆ ಈ ಲಗ್ನವು ಚಂದ್ರನಿಂದ ಕೂಡಿ ಶನಿಯಿಂದ ನೋಡಲ್ಪಡುತ್ತಿದೆ. ಈ ಗ್ರಹ

ಸಂಬಂಧವು ಶ್ರೀಕೃಷ್ಣನನ್ನು ತುಂಬಾ ಸೌಂದರ್ಯದಿಂದ ಕಂಗೊಳಿಸುವಂತೆ ಮಾಡಿದೆ. ಚಂದ್ರ-ಶುಕ್ರರ ಲಗ್ನತೃತೀಯಭಾವದ ಪರಿವರ್ತನೆ. ಕುಜನೊಂದಿಗೆ ಶುಕ್ರನ ಸಹಯೋಗ ಮತ್ತೆ ಶನಿಯಿಂದ ನೋಡಲ್ಪಡುವ ಚಂದ್ರ ಮತ್ತು ಲಗ್ನವು, ಶ್ರೀಕೃಷ್ಣನ ಪ್ರಭಾವಗಳು, ಅಧಿಕಾರಯುತವಾದ ಮತ್ತು ಪ್ರಭುತ್ವದಿಂದ ಕೂಡಿದ ಅದ್ಭುತ ಚಿತ್ತಾಕರ್ಷಕ ನೋಟವನ್ನಾಗಿ ಮಾಡಿದೆ.

ನಮಗೆ ಪ್ರಸಿದ್ಧ ಪೌರಾಣಿಕಗ್ರಂಥಗಳಿಂದ ತಿಳಿದುಬರುವುದೇನೆಂದರೆ ಶ್ರೀಕೃಷ್ಣನ ಲಕ್ಷಣಗಳು-ಆಕರ್ಷಕ ಸಂಮೋಹಗೊಳಿಸುವ ಮುಖಲಕ್ಷಣ, ಕಡುಕೆಂಪು ಕೆನ್ನೆಗಳು, ಹವಳದ ತುಟಿಗಳು, ಮೋಹಗೊಳಿಸುವ ಮುಖ, ಆಕಾಶನೀಲಿ ಮೈಬಣ್ಣದ ಈ ವೈಶಿಷ್ಟ್ಯಪೂರ್ಣಲಕ್ಷಣಗಳೆಲ್ಲವೂ ಹೆಚ್ಚಾಗಿರುವುದು ಶುಕ್ರ, ಚಂದ್ರ, ಕುಜರು ನೀಡಿದ ಕಾಣಿಕೆಯಿಂದ ಮೂಡಿಬಂದ ವಿಶೇಷಲಕ್ಷಣಗಳೇ ಆಗಿವೆ.

ಲಗ್ನಾಧಿಪತಿಯಾದ ಶುಕ್ರನು ನವಾಂಶಚಕ್ರದಲ್ಲಿ ತನ್ನ ಸ್ವಂತ ಕ್ಷೇತ್ರ ವಾದ ತುಲಾರಾಶಿಯಲ್ಲಿರುವುದರಿಂದ ಸಮಾಜದ ಕೆಳಮಟ್ಟದಲ್ಲಿ ಜನಿಸಿದ ಜನಗಳಿಗೂ ಅತ್ಯಂತ ದಯಾನ್ವಿತಪ್ರತೀಕದ ವ್ಯಕ್ತಿಯಾಗಿ ಕಂಗೊಳಿಸಿದ್ದಾನೆ. ಅವನ ಅದೃಶ್ಯಶಕ್ತಿಗಳು ಯುದ್ಧರಂಗದ ಕಲಿತನವನ್ನು ಹೊರತಂದಿರುವುದೇ ಆಗಿದೆ. ಧೈರ್ಯ ಮತ್ತು ವೀರ್ಯಸ್ಥಾನದಲ್ಲಿ ಯುದ್ಧಕ್ಕೆ ಕಾರಕಗ್ರಹವಾದ ಕುಜ ನೀಚಭಂಗಹೊಂದಿರುವ ಯೋಗದ ಕೊಡುಗೆಯೇ ಇದಾಗಿದೆ. ತೃತೀಯಭಾವವಾದ ವಿಕ್ರಮಸ್ಥಾನದಿಂದ ಗಮನಿಸಬೇಕಾದ ವಿಷಯವೆಂದರೆ ಶ್ರೀಕೃಷ್ಣನು ಬಲಾಢ್ಯನಾದ ಶಿಶುಪಾಲ ಮತ್ತು ಇತರ ಭಯಂಕರರಾಜರ ಶತ್ರುತ್ವವನ್ನು ಅತ್ಯಂತ ಸಾಹಸ ಮತ್ತು ಚಾಕಚಕ್ಯತೆಯಿಂದ ತನ್ನಲ್ಲಿ ಉಪಲಬ್ಧ ವಿದ್ದ ಸಾಧನ-ಸಂಪತ್ತುಗಳಿಂದಲೇ ಸೋಲಿಸಿರುವ ವಿಷಯವೇ ಅದಾಗುತ್ತದೆ. ಭಾವೋದ್ವೇಗಕ್ಕೆ ಕಾರಕಗ್ರಹವಾದ ಚಂದ್ರ ಲಗ್ನದಲ್ಲಿ ಉಚ್ಚನಾಗಿದ್ದಾನೆ. ಈ ಚಂದ್ರನು ರಾಹುವಿನಿಂದ ಯಾವ ಬಾಧೆಗೂ ಒಳಗಾಗದೇ ಇರುವುದರಿಂದ ಶ್ರೀಕೃಷ್ಣನ ಬುದ್ಧಿಯನ್ನು ಹೆಚ್ಚು ವೀರ್ಯಯುತವಾದುದನ್ನಾಗಿ ಮಾಡಿದ್ದಾನೆ.

ಜಾಣತನ ಮತ್ತು ಮೇಧಾವಿತನಕ್ಕೆ ಕಾರಕಗ್ರಹವಾದ ಬುಧನು ದ್ವಿತೀಯಾಧಿಪತ್ಯ ( ವಾಕ್ ) ವನ್ನು ಪಡೆದುಕೊಂಡು ಬುದ್ಧಿಸ್ಥಾನವಾದ

ಪಂಚಮದಲ್ಲಿ ಉಚ್ಚಸ್ಥಿತನಾಗಿದ್ದಾನೆ. ಬುಧನ ಈ ವಿಶೇಷವಾದ ಸ್ಥಾನ ಸ್ಥಿತಿಯ ಸಂಬಂಧ ವಿಶದಪಡಿಸುವ ಫಲವೇನೆಂದರೆ ಶ್ರೀಕೃಷ್ಣನ ವಾಕ್ ಮತ್ತು ಬುದ್ಧಿಚಾತುರ್ಯದಿಂದ ಕೂಡಿದ ಶಕ್ತಿಯುತವಾದ ಮೇಧಾವಿತನ, ಹೋಲಿಕೆಗೆ ನಿಲುಕದ ಅದ್ಭುತಜ್ಞಾನ, ವಿವೇಚನಾಜ್ಞಾನದಿಂದ ಕೂಡಿದ ಅದ್ಭುತಗ್ರಹಣಶಕ್ತಿಯ ಮೇಧಾವಿತನದ ಮೇರುಶಿಖರವೇ ಶ್ರೀಕೃಷ್ಣನಾಗಿದ್ದ. ಶ್ರೀಕೃಷ್ಣನು ಅಂದಿನ ಸಮಕಾಲೀನ ಅಭಿಪ್ರಾಯಗಳಿಗೆ ಸರಿಹೊಂದುವ ಶ್ರೇಷ್ಠ ಮತ್ತು ಮರುಳು-ವಂಚನೆಗಳಿಂದ ಕೂಡಿದ ಧಾರ್ಮಿಕಶಾಸ್ತ್ರ ಸಿದ್ಧಾಂತಗಳ ಮೂಲಕ್ಕೆ ಒಳಹೊಕ್ಕು ನೋಡಿ ಲೋಕಕಲ್ಯಾಣಕರವಾದ ನಿಶ್ಚಿತ ತೀರ್ಮಾನಗಳನ್ನು ತೆಗೆದುಕೊಂಡನು. ಗುರು ಚತುರ್ಥಭಾವದಲ್ಲಿದ್ದಾನೆ. ಈ ಗುರುವಿನ ಚತುರ್ಥಭಾವದ ಸ್ಥಿತಿ ಶ್ರೀಕೃಷ್ಣನನ್ನು ಮಾನವೀಯತೆ ಮತ್ತು ಸಹೃದಯೀ ಶ್ರೀಮಂತಿಕೆಯಿಂದ ಕೂಡಿದ ವ್ಯಕ್ತಿಯನ್ನಾಗಿ ಮಾಡಿದೆ. ಆದರೆ ಈ ಗುರುವು ಆ ರಾಶಿಗೆ ಅಧಿಪತಿಯಾದ ಸೂರ್ಯನ ಸಂಬಂಧವನ್ನು ಹೊಂದಿ ಆ ಭಾವದಲ್ಲೇ ಇರುವುದರಿಂದ ಈ ಗ್ರಹಸಂಬಂಧವು ಶ್ರೀಕೃಷ್ಣ ನನ್ನು ದ್ವೇಷಿಸುತ್ತಿದ್ದ ದುಷ್ಟ ಶತ್ರುಗಳಿಗೆ ಭಯಂಕರ ವ್ಯಕ್ತಿಯನ್ನಾಗಿಯೂ ಪ್ರೀತಿಸುವವರಿಗೆ ನಂಬಿಕೆಗೆ ಅರ್ಹನಾದ ಆಪದ್ಬಾಂಧವನನ್ನಾಗಿಯೂ ಮಾಡಿದೆ.

ದಶಮಾಧಿಪತಿಯಾದ ಶನಿ ಲಗ್ನವನ್ನು ನೋಡುತ್ತಿದ್ದಾನೆ. ಆತ್ಮ ಕಾರಕನಾದ ಸೂರ್ಯನೂ ಧರ್ಮಕ್ಕೆ ಅಧಿಪತಿಯಾದ ಗುರುವೂ ಕೂಡಿ ಕರ್ಮಸ್ಥಾನವಾದ ದಶಮಭಾವವನ್ನು ನೋಡುತ್ತಿದ್ದಾರೆ. ಈ ಗ್ರಹ ಸಂಯೋಗದ ಫಲವೆಂದರೆ ಧರ್ಮವನ್ನು ಕಾಪಾಡಬೇಕೆಂಬ ಕರ್ಮ ಪ್ರವರ್ತನೆಗಳಿಂದ ಕೂಡಿದ ಅತ್ಯಾಸಕ್ತದೃಢಚಿತ್ತವೇ ಅದಾಗುತ್ತದೆ.

ಕಾರಾಗೃಹದಲ್ಲಿ ಶ್ರೀಕೃಷ್ಣನ ಜನನವನ್ನು ನಿರೂಪಿಸುವ ಗ್ರಹ ಸಂಯೋಗವೆಂದರೆ ಲಗ್ನಾಧಿಪತಿಯಾದ ಶುಕ್ರ ದ್ವಾದಶಾಧಿಪತಿಯಾದ ಕುಜ ರಾಹುವಿನೊಂದಿಗೆ ಕೂಡಿರುವ ಫಲವೇ ಅದಾಗಿದೆ. ಲಾಭಾಧಿಪತಿಯಾದ ಗುರು ಜ್ಯೇಷ್ಠಭ್ರಾತೃ ಮತ್ತು ಭಗಿನಿಯರ ಭಾವಾಧಿಪತಿಯಾಗಿ ಎಂಟು ಅಂಶ ಗಳನ್ನು ದಾಟಿ 9ನೇ ಅಂಶದಲ್ಲಿದ್ದಾನೆ. ಅವನು ರಾಶಿಚಕ್ರದಲ್ಲಿ ಶನಿಯಿಂದ ನೋಡಲ್ಪಟ್ಟು ಅಂಶಚಕ್ರದಲ್ಲಿ ಶನಿ-ರಾಹುವಿನೊಂದಿಗೆ ಕೂಡಿ ಕುಜನ ಕ್ಷೇತ್ರ

ವಾದ ವೃಶ್ಚಿಕದಲ್ಲಿದ್ದಾನೆ. ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಶ್ರೀಕೃಷ್ಣನ ಜನನ ಅನೆಯದು. ಇವನ ಜ್ಯೇಷ್ಠರೆಲ್ಲರನ್ನೂ ಕಂಸನು ಕೊಂದುಹಾಕಿದ. ಮಾತೃಕಾರಕನಾದ ಚಂದ್ರನ ಉಚ್ಚಸ್ಥಿತಿ ಪಿತೃಕಾರಕನಾದ ಸೂರ್ಯನು ಗುರುವಿನೊಂದಿಗೆ ಕೂಡಿ ತನ್ನ ಸ್ವಕ್ಷೇತ್ರವಾದ ಸಿಂಹದಲ್ಲೇ ಇರುವ ಸ್ಥಿತಿ ಮಾತಾಪಿತೃಗಳನ್ನು ದೀರ್ಘಾಯುಷ್ಮಂತರನ್ನಾಗಿ ಮಾಡಿದೆ.

ಸಪ್ತಮಾಧಿಪತಿಯಾದ ಕುಜ ಕಳತ್ರಕಾರಕನಾದ ಶುಕ್ರ-ರಾಹುವಿನೊಂದಿಗೆ ಕೂಡಿ ವಿವರಿಸುವ ನಿಜಾಂಶವೇನೆಂದರೆ ಶ್ರೀಕೃಷ್ಣನು ಬಹುಪತ್ನಿಯರನ್ನು ಪಡೆದಿದ್ದ ವಿಷಯವೇ ಅದಾಗುತ್ತದೆ. ಆದರೆ ಶುಕ್ರನು ರಾಹುವಿಗೆ ಸಮೀಪದಲ್ಲಿದ್ದು ಸುಖಲೋಲುಪತೆಯ ಗ್ರಹವಾದ ಕುಜನಿಂದ ದೂರದಲ್ಲಿದ್ದಾನೆ. ಶ್ರೀಕೃಷ್ಣನು ತನ್ನ ಪತ್ನಿಯರೊಂದಿಗೆ ಇಟ್ಟುಕೊಂಡಿದ್ದ ಸಂಬಂಧ ಯಾವ ವಿಧವಾದ ವ್ಯಾಮೋಹದ ಬಾಂಧವ್ಯಕ್ಕೂ ಒಳಪಡದ, ಕಳಂಕವಿಲ್ಲದ, ನಿರ್ಲಿಪ್ತವಾದ ಪ್ರೇಮದ ಸಂಬಂಧವೇ ಆಗಿದ್ದಿತು–ಎಂಬುದನ್ನು ಸೂಚಿಸುತ್ತದೆ. ಶ್ರೀಕೃಷ್ಣನು ಪ್ರಪಂಚದೊಂದಿಗೆ ಬೆರೆತಿದ್ದರೂ ಅದರ ಸಹಜಗುಣಗಳ ಬಾಧೆಗೆ ಒಳಗಾಗಲಿಲ್ಲ. ಶ್ರೀಕೃಷ್ಣನು ಶುಕ್ರನ ರಾಶಿಯಾದ ವೃಷಭದಲ್ಲಿ ಹುಟ್ಟಿರುವುದು ಜ್ಯೋತಿಃಶಾಸ್ತ್ರ ರೀತಿಯಾಗಿ ಸಂದೇಹವಿಲ್ಲದೆ ಒಂದು ವೀರ್ಯಯುತವಾದ ಸ್ವಭಾವವನ್ನು ಕೊಟ್ಟಿದೆ. ಆದರೆ ಈ ವೀರ್ಯಯುತ ಸ್ವಭಾವಧರ್ಮ ಇವನ ಸಂಪೂರ್ಣ ಹತೋಟಿಗೆ ಒಳಪಟ್ಟುದಾಗಿದೆ. ಪುತ್ರಸ್ಥಾನಾಧಿಪತಿಯಾದ ಬುಧ ಪಂಚಮದಲ್ಲಿ ಉಚ್ಚನಾಗಿದ್ದು ಸೂರ್ಯನಕ್ಷತ್ರಚಾರದಲ್ಲಿ ಸಂಚರಿಸುತ್ತಿದ್ದಾನೆ. ಆ ನಕ್ಷತ್ರಾಧಿಪತಿಯಾದ ಸೂರ್ಯ, ಪುತ್ರಕಾರಕನಾದ ಗುರುವಿನೊಂದಿಗೆ ಸೇರಿರುವ ಫಲವೆಂದರೆ ಶ್ರೀಕೃಷ್ಣನು ಬಹುಪುತ್ರರನ್ನು ಪಡೆದ ಯೋಗವೇ ಅದಾಗಿದೆ. ವಿದ್ಯಾಸ್ಥಾನವಾದ ಚತುರ್ಥಭಾವದಲ್ಲಿ ಸೂರ್ಯನು ಗುರುವಿನಿಂದ ಕೂಡಿ ಶುಕ್ರ ನಕ್ಷತ್ರಚಾರದಲ್ಲಿರುವುದು ವಿದ್ಯಾಭಾವವನ್ನು ವೀರ್ಯವತ್ತಾಗಿ ಮಾಡಿದೆ. ಶ್ರೀಕೃಷ್ಣನು 64 ಕಲೆಗಳನ್ನೂ ಮತ್ತು ವೇದಾಂಗಾದಿ ವಿದ್ಯಾಸ್ಥಾನಗಳೆಲ್ಲವನ್ನೂ ಅಹೋ-ರಾತ್ರಿಗಳಿಂದ ಕೂಡಿದ 64 ದಿನಗಳಲ್ಲಿ ಕಲಿತುಕೊಂಡು ಪ್ರಾವೀಣ್ಯತೆಯನ್ನು ಪಡೆದು ಪ್ರಭುವಾದನೆಂದು ಹೇಳಲಾಗಿದೆ.

ಮುಖ್ಯಘಟನೆಗಳು : ಚಂದ್ರನು ಅತ್ಯುತ್ತಮಸ್ಥಾನಸ್ಥಿತಿಪಡೆದಿದ್ದರೂ ಅವನು ತೃತೀಯಾಧಿಪತ್ಯವನ್ನು ಪಡೆದವನಾಗಿದ್ದಾನೆ ಮತ್ತು ಕುಜನು

7ನೇ ಮನೆಗೆ ಅಧಿಪತಿಯಾಗಿರುವುದರಿಂದ ಇವನೊಬ್ಬ ಮಾರಕತ್ವ ಬಲವನ್ನು ಪಡೆದ ಗ್ರಹವಾಗಿದ್ದಾನೆ. ಈ ಮಾರಕತ್ವಗಳ ಪರಿಣಾಮದಿಂದ ಕಾರ್ಯತಃ ಚಂದ್ರ ಮತ್ತು ಕುಜದಶೆಗಳು ಜಾತಕನ 11 ವರ್ಷದವರೆಗೂ ಈ ದಶೆಗಳ ಕಾರ್ಯವ್ಯಾಪ್ತಿಯನ್ನು ಪಡೆದಿದ್ದುದರಿಂದ ಶ್ರೀಕೃಷ್ಣನ ಬಾಲ್ಯದ ವರ್ಷಗಳು ಬಲವಾದ ಬಾಲಾರಿಷ್ಟದೋಷಕ್ಕೆ ಒಳಗಾಗಿ ಬಾಲಕನಾಗಿದ್ದಾಗಲೇ ಅನೇಕ ಭಯಂಕರ ತೊಂದರೆಗಳಿಗೆ ಸಿಕ್ಕಿ ಸಾಯುವ ಪರಿಸ್ಥಿತಿ ಕಂಸನಿಂದ ನಿಯೋಜಿಸಲ್ಪಟ್ಟ ಜನರಿಂದ ಏರ್ಪಟ್ಟಿತ್ತು. ಕುಜದಶೆಯ ಅಂತ್ಯದಲ್ಲಿ ಶ್ರೀಕೃಷ್ಣನು ಅವನ ದೊಡ್ಡ ಶತ್ರುವೂ ಮತ್ತು ಸೋದರಮಾವನೂ ಆಗಿದ್ದ ಕಂಸನನ್ನು ಸಂಹರಿಸಿರಬೇಕು. ನಾವು ಹಿಂದೆ ಹೇಳಿದಂತೆ ಕುಜನು ಸಪ್ತಮಾಧಿಪತಿಯಾಗಿ ಷಷ್ಠಾಧಿಪತ್ಯವನ್ನು ಪಡೆದ ( ಶತ್ರು ಮತ್ತು ಸೋದರ ಮಾವ ) ಶುಕ್ರನೊಂದಿಗೆ ತೃತೀಯಭಾವವಾದ ಉಪಚಯಸ್ಥಾನಸ್ಥಿತಿ ಯನ್ನು ಪಡೆದುದ್ದರಿಂದ ಅವನ ಭಯಂಕರ ಶತ್ರುವಿನ ಮೇಲೆ ವಿಜಯವನ್ನು ಸಾಧಿಸಿ ತನಗೆ ಬಂದಿದ್ದ ಮಾರಕತ್ವದೋಷವನ್ನು ತಪ್ಪಿಸಿಕೊಳ್ಳುವಂತೆ ಶ್ರೀಕೃಷ್ಣನಿಗೆ ಈ ಗ್ರಹಸಂಬಂಧಗಳು ಸಹಾಯಮಾಡಿದುವು. ಶ್ರೀಕೃಷ್ಣನ ಆಮೇಲಿನ ಯಶಃಕಾರ್ಯಗಳು ಅನೇಕ ದುಷ್ಟದೊರೆಗಳನ್ನು ಹದ್ದುಬಸ್ತಿ ನಲ್ಲಿಡುವಂತೆ ಮಾಡಿ ಸಾಧು ಶಿಷ್ಟ ಮತ್ತು ದೈವಭಕ್ತರ ಸಾವುಗಳನ್ನು ತಪ್ಪಿಸು ವಂತೆ ಮಾಡಿತು. ಮತ್ತೆ ಕೌರವ-ಪಾಂಡವರ ಮಧ್ಯೆ ಏರ್ಪಡಲಿದ್ದ ಸರ್ವನಾಶದ ಯುದ್ಧವನ್ನು ತಡೆಯಲು ಪಟ್ಟ ಪ್ರಯತ್ನದ ವಿಷಯವನ್ನು ಜ್ಯೋತಿಃಶಾಸ್ತ್ರವನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳು ಶ್ರೀಕೃಷ್ಣನ ಜಾತಕ ವನ್ನು ವಿಮರ್ಶಿಸುವುದರ ಮೂಲಕ ಮನದಟ್ಟುಮಾಡಿಕೊಳ್ಳಬಹುದು. ಶ್ರೀಕೃಷ್ಣನ ಜೀವನದಲ್ಲೇ ನಡೆದ ಅತಿಮುಖ್ಯವಾದ ಘಟನೆಯೆಂದರೆ ಕ್ರಿ. ಪೂ. 3138ರಲ್ಲಿ ನಡೆದ ಮಹಾಭಾರತದ ಯುದ್ಧದಲ್ಲಿನ ಪಾತ್ರ. ಈ ಘಟನೆ ನಡೆದದ್ದು ಶ್ರೀಕೃಷ್ಣನ ಜಾತಕದಲ್ಲಿ ಕೇತುದಶೆ ನಡೆಯುತ್ತಿದ್ದಾಗ. ಕೇತು ಲಗ್ನಾತ್ ನವಮದಲ್ಲಿ ಶನಿಕ್ಷೇತ್ರದಲ್ಲಿದ್ದಾನೆ. ಕೇತು ಶನಿಕ್ಷೇತ್ರದಲ್ಲಿರು ವುದರಿಂದ ಶನಿಯ ಫಲವನ್ನು ಕೊಡಬೇಕಾಗುತ್ತದೆ. ಲಗ್ನಕ್ಕೆ ಯೋಗ ಕಾರಕನಾದ ಶನಿ 7ನೇ ಮನೆಯಲ್ಲಿ ದಿಗ್‌ಬಲವನ್ನು ಪಡೆದಿರುವುದರಿಂದ ಮಹಾಭಾರತಯುದ್ಧದಲ್ಲಿ ಶ್ರೀಕೃಷ್ಣನ ಪಾತ್ರ ಚೆನ್ನಾಗಿ ತಿಳಿದ ವಿಷಯವೇ

ಆಗಿದೆ. ಅರ್ಜುನನಿಗೆ ಸಾರಥಿಯಾಗಿ ಕೆಲಸಮಾಡಿದರೂ ಯುದ್ಧದ ತಿರುವು ಗಳನ್ನು ತೀವ್ರದೃಷ್ಟಿಯಿಂದ ಗಮನಿಸುವವನಾಗಿದ್ದ. ಆದರೆ ಯುದ್ಧದಲ್ಲಿ ಭಾಗಿಯಾಗದೆ ತನ್ನ ಅಂತಿಮಉದ್ದೇಶವಾಗಿದ್ದ ದುಷ್ಟರ ನಾಶ ಶಿಷ್ಟರ ಸಂರಕ್ಷಣೆಯ ಕಾರ್ಯ ಕೈಗೂಡುವಂತೆ ಮಾಡುವುದರಲ್ಲಿ ಯಶಸ್ವಿಯಾದ. ಕೇತು ಮೋಕ್ಷಕಾರಕ. ಮತ್ತೆ ಅವನು 9ನೇ ಮನೆಯಲ್ಲಿ ಚಂದ್ರನ ನಕ್ಷತ್ರದಲ್ಲಿದ್ದು ಯುದ್ಧಕಾರಕಗ್ರಹವಾದ ಕುಜನಿಂದ ನೋಡಲ್ಪಡುತ್ತಿದ್ದಾನೆ. ನಾವು ಹಿಂದೆ ಜಾತಕವನ್ನು ವಿಮರ್ಶಿಸಿ ತಿಳಿಸಿರುವಂತೆ ಶನಿಯು ಅತ್ಯಂತ ಬಲಾಢ್ಯನಾಗಿದ್ದಾನೆ. ಇದರಿಂದ ಕೇತುದಶೆಯ ಅಂತ್ಯದಲ್ಲಿ ಅಮರವಾಣಿ ಯಾದ ಭಗವದ್ಗೀತೆಯನ್ನು ಲೋಕಗುರುವಾದ ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ. ಕ್ಷತ್ರಿಯನಾಗಿದ್ದರೂ ಅರ್ಜುನನು ಭಾವೋದ್ವೇಗಗಳ ಒತ್ತಡಕ್ಕೆ ಒಳಗಾಗಿ ತನ್ನ ಕರ್ತವ್ಯವಾಗಿದ್ದ ಧರ್ಮಯುದ್ಧವನ್ನು ಮಾಡುವುದರಲ್ಲಿ ನಿರಾಸಕ್ತನಾಗಿ ಶಸ್ತ್ರಸಂನ್ಯಾಸವನ್ನು ತೆಗೆದುಕೊಂಡು ಯುದ್ಧಮಾಡಲು ನಿರಾಕರಿಸಿ ನಿಂತಾಗ ಏರ್ಪಟ್ಟ ಧರ್ಮಸೂಕ್ಷ್ಮದ ದೌರ್ಬಲ್ಯದ ಮನೋಧರ್ಮವನ್ನು ದೂರವಾಗುವಂತೆ ಮಾಡಿದ. ಕಳೆದುಳಿದ ದಶೆ ಗಳಾದ ಶುಕ್ರ, ರವಿ, ಚಂದ್ರದಶೆಗಳನ್ನು ಶಾಂತಿ, ನೆಮ್ಮದಿ ಮತ್ತು ಸಂತೋಷಗಳಿಂದ ಕಳೆಯುವವನಾದ, ಮತ್ತೊಮ್ಮೆ ಪುನರಾವರ್ತನೆಯಾದ ಕುಜದಶೆಯಲ್ಲಿ (ವಿಂಶೋತ್ತರ ಶತ (120) ವರ್ಷಗಳಾದ ಮೇಲೆ ದಶೆ ಪುನರಾವರ್ತನೆಯಾಗುತ್ತದೆ.) ಅವನ ಬಂಧುಜನಗಳೇ ಆದ ಯಾದವರಲ್ಲಿ ಭಿನ್ನಾಭಿಪ್ರಾಯಗಳು ಸಿಡಿದೆದ್ದುವು. ಶ್ರೀಕೃಷ್ಣನು ಇದೇ ದಶೆಯಲ್ಲಿ ತನ್ನ ಪ್ರಾಕೃತಿಕಶರೀರವನ್ನು ಪರಿವರ್ತಿಸಿಕೊಂಡನು. ನಾವು ನೋಡುವಂತೆ ಸಪ್ತಮಾಧಿಪತಿಯಾದ ಕುಜನು ಖಂಡಿತವಾಗಿಯೂ ಮಾರಕನು. ಮೂರನೆ ಮನೆಯಾದ ಆಯುಷ್ಯಸ್ಥಾನದಲ್ಲಿ ರಾಹುವಿನೊಂದಿಗೆ ಕೂಡಿದ್ದಾನೆ. ನವಾಂಶಚಕ್ರದಲ್ಲಿ ಕುಜನು ಮತ್ತೆ ಇನ್ನೊಂದು ಮಾರಕಸ್ಥಾನವಾದ ದ್ವಿತೀಯದಲ್ಲಿದ್ದಾನೆ. ಆದುದರಿಂದ ಶ್ರೀಕೃಷ್ಣನ ದೇಹತ್ಯಾಗ ಕುಜನ ಈ ಮಾರಕತ್ವದ ಗುಣಕ್ಕೆ ಹೊಂದಿಕೆಯಾಗುವಂತಿರಬೇಕು. ಅದು ಹೇಗೆಂದರೆ : ಶ್ರೀಕೃಷ್ಣನು ಒಂದು ಬಾಣದ ಹೊಡೆತಕ್ಕೆ ಸಿಕ್ಕಿ ಶರೀರವನ್ನು ತ್ಯಜಿಸುವವ ನಾದ. ಶ್ರೀಕೃಷ್ಣನು ಕಾಡಿನಲ್ಲಿ ಒಂದು ಅಶ್ವತ್ಥಮರದ ಕೆಳಗೆ ಕುಳಿತಿದ್ದಾಗ

'ಜರ' ಎನ್ನುವ ಬೇಡನು ಕೃಷ್ಣನ ಕಾಲುಗಳನ್ನು ಜಿಂಕೆಯ ಮುಖವೆಂದು ತಪ್ಪಾಗಿ ಭಾವಿಸಿಕೊಂಡು ಅವನಿಗೆ ಬಾಣವನ್ನು ಬಿಟ್ಟು ಹೊಡೆದದ್ದರಿಂದ ಆ ಹೊಡೆತದಿಂದ ಶ್ರೀಕೃಷ್ಣನು ತನಗೆ ತಾನೇ ತನ್ನ ಪ್ರಾಕೃತಿಕಶರೀರವನ್ನು ಬಿಟ್ಟು ಸ್ವಂತಲೋಕವಾದ ವೈಕುಂಠವನ್ನು ಸೇರಿದನೆಂದು ಭಾಗವತದಲ್ಲಿ ಹೇಳಿದೆ. ಗಮನಾರ್ಹ ಅಂಶಗಳು : ದೈವದ ಅವತಾರವಾಗಿ, ರಾಜನೀತಿಪಟುವಾಗಿ, ಸಲಹೆಗಾರನಾಗಿ, ವ್ಯವಹಾರಕುಶಲನಾಗಿ, ನುರಿತ ರಾಜಕಾರಣಿಯಾಗಿ, ಜೀವಾತ್ಮರ ಜೀವನಯಾತ್ರೆಯ ಉದ್ದೇಶ್ಯವನ್ನು ನಿರ್ದಿಷ್ಟವಾಗಿ ತಿಳಿದಿದ್ದ ತತ್ತ್ವಜ್ಞಾನಿಯಾಗಿ, ಆ ರಹಸ್ಯವನ್ನು ಎಲ್ಲರಿಗೂ ತಿಳಿಯಪಡಿಸಿದ ಲೋಕಗುರುವಾಗಿ, ಯೋಗೇಶ್ವರನಾಗಿ, ಜ್ಞಾನಾಮೃತವಾದ ಭಗವದ್ಗೀತೆ ಯನ್ನು ಪ್ರಪಂಚಕ್ಕೆ ಕೊಟ್ಟವನಾಗಿ, ದುಷ್ಟಶಿಕ್ಷಕನಾಗಿ ಮತ್ತೆ ಶಿಷ್ಟರಕ್ಷಕನಾಗಿದ್ದ ಲೋಕಸ್ವಾಮಿಯಾದ ಶ್ರೀಕೃಷ್ಣನ ಅದ್ಭುತಸ್ವರೂಪದ ಜನನದ ಉದ್ದೇಶಗಳನ್ನು ಮನುಷ್ಯನು ತನ್ನದೇ ಆದ ಶಾಸ್ತ್ರಗಳ ಮೌಲ್ಯಮಾಪನಗಳಿಗೆ ಒಳಪಡಿಸಿ ನಿರ್ದಿಷ್ಟವಾಗಿ ಅವನ ಜೀವನಸ್ವರೂಪವನ್ನು ವಿಶ್ಲೇಷಿಸಿ ತಿಳಿಸುವುದು ಮನುಷ್ಯ ಸಾಮಾನ್ಯನಿಗೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ಈ ಜಾತಕದ ಮೂರು ಮುಖ್ಯವಾದ ವಿಶೇಷಗಳೇನೆಂದರೆ ಲಗ್ನ, ಸೂರ್ಯ ಮತ್ತು ಚಂದ್ರರು ವಿಶೇಷವಾದ ಬಲವನ್ನು ಜಾತಕಕ್ಕೆ ತುಂಬಿರು ವುದು. ಆತ್ಮಕಾರಕನಾದ ಸೂರ್ಯ ಜ್ಞಾನಕಾರಕನಾದ ಗುರುವಿನೊಂದಿಗೆ ಚತುರ್ಥಸ್ಥಾನದಲ್ಲಿದ್ದು ( ಮನಸ್ಸಿನ ಸ್ಥಾನ ) ಕರ್ಮಸ್ಥಾನವಾದ ದಶಮವನ್ನು ನೋಡುವುದು ಶ್ರೀಕೃಷ್ಣನ ಸಮತೋಲನಭಾವದ ವ್ಯಕ್ತಿತ್ವವನ್ನು ವಿವರಿಸುವ ಅಂಶವಾಗಿದೆ. ವೃಷಭಲಗ್ನಕ್ಕೆ ಯೋಗಕಾರಕನಾದ ಶನಿ ವರ್ಗೋತ್ತಮಾಂಶ ದಲ್ಲಿದ್ದು ದಿಗ್ಬಲವನ್ನು ಪಡೆದುಕೊಂಡು ತನ್ನ ನಕ್ಷತ್ರಚಾರದಲ್ಲೇ ಇದ್ದು ಸೂರ್ಯ ಮತ್ತು ಗುರುವನ್ನು ನೋಡುತ್ತಿರುವುದು ಶ್ರೀಕೃಷ್ಣನ ಪುಷ್ಟಿಯುತ ವಾದ ದೃಢಕಾಯತ್ವವನ್ನು ಸ್ಥಿರಪಡಿಸಿ ತಿಳಿಸುತ್ತದೆ. ಆಯುಷ್ಯಕಾರಕನಾದ ಶನಿಯು ಜಾತಕದಲ್ಲಿ ಉತ್ತಮಸ್ಥಾನಸ್ಥಿತಿಯಲ್ಲಿರುವುದರಿಂದ ಅವನಿಗೆ 125 ವರ್ಷಗಳ ದೃಢಕಾಯದಿಂದ ಕೂಡಿದ ಆಯುಷ್ಯವನ್ನು ಕೊಡುವುದಕ್ಕೆ ನೆರವಾಗಿದೆ.

ಬುಧನ ಉಚ್ಚಬಲದಿಂದ ಕೂಡಿದ ತ್ರಿಕೋಣಸ್ಥಿತಿ ವಿಶದಪಡಿಸುವುದೇನೆಂದರೆ–ದ್ವಿತೀಯ ಭಾವಾಧಿಪತಿ (ವಾಕ್) ಯಾಗಿ ಪಂಚಮ (ಬುದ್ಧಿ) ಸ್ಥಾನಸ್ಥಿತನಾಗಿರುವುದು ಅತ್ಯದ್ಭುತವಾದ ಪ್ರಜ್ಞೆಯಿಂದ ಕೂಡಿದ ಕರ್ಮ ವಿಜ್ಞಾನದ ಬುದ್ಧಿಯನ್ನು ಸೂಚಿಸುತ್ತದೆ. ಈ ಮೇಲೆ ಹೇಳಿದ ಯೋಗದ ಜೊತೆಗೆ ಗುರು ಮತ್ತು ರವಿ ಕೇಂದ್ರಸ್ಥಾನದಲ್ಲಿರುವುದು, ಶ್ರೀಕೃಷ್ಣನ ಜೀವನದ ಎಲ್ಲ ಪ್ರಾಕಾರಗಳ ಪರಿಪೂರ್ಣತೆಯನ್ನು ಎತ್ತಿ ತೋರಿಸುತ್ತದೆ. ಇವನೊಬ್ಬ ಆದರ್ಶ ತಂದೆ, ಆದರ್ಶ ರಾಜ, ಆದರ್ಶ ಮಗ, ಆದರ್ಶ ಪತಿ, ಆದರ್ಶ ರಾಜನೀತಿಜ್ಞ, ಆದರ್ಶ ಗುರು. ಕರ್ಮಸಾಫಲ್ಯಕ್ಕೆ ದೊಡ್ಡ ದಾರಿಸೂಚಿ. ಜೀವಿಗಳು ತಮ್ಮ ಕರ್ತವ್ಯಗಳ ನಿರ್ವಹಣೆಗೆ ಕರ್ಮಗಳಲ್ಲಿ ನಿರತರಾಗಿದ್ದರೂ ಆ ಕರ್ಮದ ಸುಳಿವಿನ ಲೇಪಕ್ಕೆ ಒಳಗಾಗದೆ ಹೇಗೆ ನಿರ್ಲಿಪ್ತರಾಗಿ ಕರ್ಮಬಂಧನದಿಂದ ತಪ್ಪಿಸಿಕೊಳ್ಳಬಹುದೆನ್ನುವುದನ್ನು ತನ್ನ ಜೀವನದುದ್ದಕ್ಕೂ ನಡೆದು ತೋರಿಸಿದ ಆದರ್ಶಜೀವಿ.

ಆಧುನಿಕ ಪಂಡಿತರ ಮತ್ತು ವಿಚಾರವಾದಿಗಳ ಅಭಿಪ್ರಾಯಗಳು ಏನೇ ಆಗಿರಲಿ. ಶ್ರೀಕೃಷ್ಣನ ಅಸ್ತಿತ್ವ ಒಂದು ಚಾರಿತ್ರಿಕ ಸತ್ಯ. ಕಲ್ಪನಾಲಹರಿಯಿಂದ ಒಂದು ವಿಶಿಷ್ಟ ಅತಿಮಾನವವ್ಯಕ್ತಿತ್ವವನ್ನು ರೂಪಿಸಿ ಲಕ್ಷಾಂತರ ಜನರಿಗೆ ಶಾಂತಿ ಮತ್ತು ಸಮಾಧಾನವನ್ನು ಭಾವನಾತ್ಮಕವಾಗಿ ಉಂಟುಮಾಡು ವುದಕ್ಕಲ್ಲ. ಆತನ ಬೃಹತ್ತಾದ ವ್ಯಕ್ತಿತ್ವದ ಬಗೆಗೆ ಆಕರ್ಷಕ ಗುಟ್ಟಿನ ಸುಳಿವನ್ನು ಜಾತಕದಲ್ಲಿ ಶುಭ ಮತ್ತು ಪಾಪಗ್ರಹಗಳ ಸ್ಥಾನಸ್ಥಿತಿಯಿಂದಲೂ ಮತ್ತು ಅವನ ಕಾರ್ಯಪ್ರಭಾವಕ್ಕೆ ಒಳಪಟ್ಟ ಸಾಧನೆಗಳಿಂದಲೂ ತಿಳಿದುಕೊಳ್ಳ ಬಹುದು.

ಶ್ರೀಕೃಷ್ಣನು ತನ್ನ ಕಾರ್ಯಸಾಧನೆಗಳಿಗೆ ಏಕೆ ಇಂತಹ ತಂತ್ರಗಳನ್ನು ಉಪಯೋಗಿಸಿದನೆಂಬುದನ್ನು ತಿಳಿದುಕೊಳ್ಳಲು ಇಷ್ಟಪಡುವ ಅವನ ಅನುಯಾಯಿಗಳಿಗೆ ಕಾಲ ಮುಂದುವರಿದಂತೆ ತಾನಾಗಿಯೇ ಅದರ ಕಾರಣ ಗಳು ಅಂತಃಪ್ರೇರಣೆಯಿಂದ ಪ್ರಕಾಶವಾಗುತ್ತವೆ. ಅರ್ಜುನನು ತನ್ನ ಕರ್ತವ್ಯದ ಬಗ್ಗೆ ದೃಢನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದಿದ್ದಾಗ ಅವನಿಗೆ ಕರ್ತವ್ಯ ಪ್ರಜ್ಞೆಯನ್ನು ಬೋಧಿಸುವುದಕ್ಕಾಗಿ ಅಮರವಾದ ಭಗವದ್ಗೀತೆ ಶ್ರೀಕೃಷ್ಣ ನಿಂದ ಬೋಧಿಸಲ್ಪಟ್ಟಿತು. ಈ ಬೋಧನೆಗಳು ಉತ್ತೇಜನಕರವಾದ ಪ್ರತಿ

ಕ್ರಿಯೆಗಳಿಂದ ಕೂಡಿ ಅತ್ಯುತ್ತಮವಾದ ಪ್ರಭಾವವನ್ನು ಬೀರಿ ಅಸಂಖ್ಯಾತ ಜನರಿಗೆ ನೈತಿಕ ಮತ್ತು ಪಾರಮಾರ್ಥಿಕ ಜ್ಞಾನತೃಷೆಗೆ ಪರಿಹಾರ ಕಂಡು ಕೊಳ್ಳುವುದಕ್ಕೆ ಸಹಾಯಮಾಡಿದೆ. ಅದರೊಂದಿಗೆ ಅವರದೇ ಆದ ಸಮಸ್ಯೆ ಗಳಿಗೆ ಸೃಷ್ಟಿಯ ಅಭಿವೃದ್ಧಿಯ ಹಂತದಲ್ಲಿ ಅವರವರ ವಿಕಾಸದ ಹಂತವನ್ನು ಅನುಸರಿಸಿ ಅವುಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗುವಂತೆ ಸಹಾಯ ಹಸ್ತವನ್ನು ನೀಡುತ್ತದೆ.

ಶ್ರೀಕೃಷ್ಣಾರ್ಪಣಮಸ್ತು

---

ಶ್ರಿಯೈ ನಮಃ ಶ್ರೀಗುರುಭ್ಯೋ ನಮಃ

## ಗೋಪೀವಸ್ತ್ರಾಪಹರಣ ಪ್ರಸಂಗ

ವಸ್ತ್ರಾಪಹರಣದ ಪ್ರಸಂಗದ ಬಗೆಗೆ ಕೆಲವು ಶ್ರದ್ಧಾಳುಗಳಿಂದ ಎತ್ತಲಾಗುವ ಶಂಕೆಗಳಿಗೆ ಉತ್ತರಿಸುವ ಪ್ರಯತ್ನವಿದು :

ಶ್ರೀಮದ್ಭಾಗವತದ ದಶಮಸ್ಕಂಧದ ಇಪ್ಪತ್ತೊಂದನೆಯ ಅಧ್ಯಾಯ ದಲ್ಲಿ ಭಗವಂತನ ರೂಪಮಾಧುರ್ಯ, ಕೊಳಲಗಾನ, ಪ್ರೇಮಮಯಲೀಲೆ ಗಳನ್ನು ಕಂಡು-ಕೇಳಿ ಗೋಪಿಯರು ಮುಗ್ಧರಾದುದನ್ನು ಹೇಳಿದೆ. ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಆ ಭಗವತ್ ಪ್ರೇಮದ ಪೂರ್ಣತಾಪ್ರಾಪ್ತಿ ಗಾಗಿ ಸಾಧನೆಯಲ್ಲಿ ತೊಡಗುತ್ತಾರೆ. ಈ ಅಧ್ಯಾಯದಲ್ಲಿಯೇ ಭಗವಂತನು ಬಂದು ಅವರ ಸಾಧನೆಯನ್ನು ಪೂರ್ಣಗೊಳಿಸಿದ ಪ್ರಸಂಗ ಬರುತ್ತದೆ. ಇದೇ ವಸ್ತ್ರಾಪಹರಣದ ಪ್ರಸಂಗ.

ಗೋಪಿಕೆಯರ ಸಾಧನೆಯ ಉದ್ದೇಶ ಸ್ಪಷ್ಟವೇ ಇದೆ. ಶ್ರೀಕೃಷ್ಣನಿಗೆ ತಮ್ಮ ಸಂಪೂರ್ಣ ಆತ್ಮಸಮರ್ಪಣೆ ; ತಮ್ಮ ಶರೀರದ ಕಣ-ಕಣಗಳೂ, ಮನಃ-ಪ್ರಾಣಗಳೂ, ಆತ್ಮಗಳೂ ಕೃಷ್ಣಮಯವಾಗುವುದು. ಶರದೃತುವಿನಲ್ಲಿ ಅವರು ಶ್ರೀಕೃಷ್ಣನ ಕೊಳಲಧ್ವನಿಯ ಪ್ರಭಾವವನ್ನು ಪರಸ್ಪರವಾಗಿ ಚರ್ಚಿಸಿದರು. ಹೇಮಂತರ್ತುವಿನ ಶ್ರೀಭಗವಂತನ ವಿಭೂತಿರೂಪವಾದ ಮಾರ್ಗಶೀರ್ಷಮಾಸದಲ್ಲಿ ವ್ರತವನ್ನೂ ಪ್ರಾರಂಭಿಸಿದರು. ಚಳಿಗಾಲದಲ್ಲಿ ಮುಂಜಾನೆಯಲ್ಲೆದ್ದು ಯಮುನೆಯ ಶೀತಜಲದಲ್ಲಿ ಸ್ನಾನಮಾಡುತ್ತಿದ್ದರು. ದೇಹಕಷ್ಟಕ್ಕೆ ಹೆದರದೇ ಮಾಡಿದ ಈ ಶಾರೀರಿಕತಪಸ್ಸು ಶರೀರಾಭಿಮಾನ ವನ್ನು ತೊಡೆದುಹಾಕಿತು. ಎಲ್ಲ ಗೋಪಿಯರೂ ಕೂಡಿ ಹೋಗುತ್ತಿದ್ದರು.

ಅವರಲ್ಲಿ ಈರ್ಷ್ಯಾ-ದ್ವೇಷಗಳಿರಲಿಲ್ಲ. ಗಟ್ಟಿಯಾಗಿ ಭಗವನ್ನಾಮಗಳನ್ನು ಹಾಡುತ್ತಾ ಹೋಗುತ್ತಿದ್ದರು. ಯಾವುದೇ ಭಯ-ಸಂಕೋಚಗಳಿರಲಿಲ್ಲ. ಮನೆಗಳಲ್ಲಿ ಶುದ್ಧ ಹವಿಷ್ಯಾನ್ನವನ್ನು ಭುಂಜಿಸುತ್ತಿದ್ದರು. ವಿಧ್ಯುಕ್ತವಾಗಿ ಯಮುನೆಯ ಮರಳಿನಲ್ಲಿ ಶ್ರೀದೇವಿಯಮೂರ್ತಿಯನ್ನು ಮಾಡಿ ಪೂಜಿಸಿ ಮಂತ್ರಜಪಮಾಡುತ್ತಿದ್ದರು. ತಾವು ಆಚರಿಸುತ್ತಿದ್ದ ವ್ರತ ಮತ್ತು ತಮ್ಮ ರೀತಿ-ನೀತಿಗಳ ಮೇಲೆ ಅವರಿಗೆ ಅಮಿತವಿಶ್ವಾಸವಿತ್ತು. ಅವರು ತಮ್ಮ ಕುಲ-ಪರಿವಾರ-ಧರ್ಮ ಇವುಗಳ ಅಭಿಮಾನ, ಸಂಕೋಚ ಇತ್ಯಾದಿಗಳನ್ನೂ ತಮ್ಮ ವ್ಯಕ್ತಿತ್ವವನ್ನೂ ಭಗವಂತನ ಚರಣಕಮಲಗಳಲ್ಲಿ ಸರ್ವಥಾ ಸಮರ್ಪಿಸಿಕೊಂಡು ಬಿಟ್ಟಿದ್ದರು. ಅವರ ಸಾಧನೆಯ ಸಿದ್ಧಿಗೆ ಅಡ್ಡಿಯಾಗಿ ಲಜ್ಜೆಯೆಂಬ ಆವರಣವೊಂದು ಉಳಿದುಕೊಂಡಿತ್ತು. ಉಳಿದೆಡೆಗಳಲ್ಲಿ ಲಜ್ಜೆಯು ಭೂಷಣವೇ. ಆದರೆ ಭಗವದಭಿಮುಖವಾದ ಪಥದಲ್ಲಿ ಸಾಗುತ್ತಿರುವವರಿಗೆ ಲಜ್ಜೆಯೇ ಅಡ್ಡಿಯಾಗುತ್ತದೆ. ಅಷ್ಟಪಾಶಗಳಲ್ಲಿ ಇದೂ ಒಂದು. ನಿರ್ದಯತೆ, ಭಯ, ಲಜ್ಜೆ, ಜುಗುಪ್ಸೆ, ಕುಲ-ಶೀಲ ಮತ್ತು ಜಾತಿ–ಇವುಗಳ ದುರಭಿಮಾನ–ಇವು ಅಷ್ಟಪಾಶಗಳು.

ಸಾಧಕನು ಕೇವಲ ತನ್ನ ಶಕ್ತಿ-ಸಾಮರ್ಥ್ಯಗಳಿಂದಲೇ ಗುರಿಮುಟ್ಟಲಾರ. ಸಮರ್ಪಣವೂ ಒಂದು ಮುಖ್ಯಸಾಧನ. ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಳ್ಳಲು ಭಕ್ತನು ಪ್ರಯತ್ನಿಸುತ್ತಿರಬೇಕು. ಇಂತಹ ಸಮಯದಲ್ಲಿ ಸ್ವಯಂ ಭಗವಂತನೇ ಬಂದು ಸಮರ್ಪಣದ ಸಂಕಲ್ಪವನ್ನೂ, ಸಾಧಕನನ್ನೂ ಸ್ವೀಕರಿಸಿದಾಗಲೇ ಸಾಧಕನ ಅಂತರಾತ್ಮದ ಸಮರ್ಪಣವು ಪೂರ್ಣವಾಗಿ ಪ್ರಪತ್ತಿಯು ಸಿದ್ಧಿಸುತ್ತದೆ. ಪೂರ್ಣಸಮರ್ಪಣೆಗೆ ಸರ್ವಾತ್ಮನಾ ಪ್ರಯತ್ನಿಸುವುದು ಸಾಧಕನ ಕರ್ತವ್ಯ. ಭಗವಂತನು ಅದನ್ನು ಪೂರ್ಣಗೊಳಿಸುತ್ತಾನೆ. ಅದು ಅವನ ಕರ್ತವ್ಯ.

ಶ್ರೀಕೃಷ್ಣನು ಲೀಲಾಪುರುಷೋತ್ತಮ ; ಅಂತೆಯೇ ಮರ್ಯಾದಾ ಪುರುಷೋತ್ತಮನೂ ಹೌದು.

**ಶ್ರುತೀ ಸ್ಮೃತೀ ಮಮೈವಾಜ್ಞಾ ಯಸ್ತಾನುಲ್ಲಂಘ್ಯ ವರ್ತತೇ ।**
**ಆಜ್ಞಾಚ್ಛೇದೀ ಮಮ ದ್ರೋಹಿ ವೈಷ್ಣವೋऽಪಿ ನ ಮೇ ಪ್ರಿಯಃ ॥**

ಶ್ರುತಿ-ಸ್ಮೃತಿಗಳು ನನ್ನ ಆಜ್ಞೆಗಳೇ. ಅವುಗಳನ್ನು ಮೀರಿ

ನಡೆಯುವವರು ನನಗೆ ದ್ರೋಹಮಾಡುವರು. ವೈಷ್ಣವರೆಂದು ಹೇಳಿ ಕೊಂಡರೂ ನನಗೆ ಪ್ರಿಯರಾಗುವುದಿಲ್ಲ.

ಶ್ರೀ ಗೀತೆಯಲ್ಲೂ ಭಗವಂತನು– **ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ**–ಯಾವುದನ್ನು ಮಾಡಬೇಕು? ಯಾವುದನ್ನು ಮಾಡಬಾರದು? ಎನ್ನುವುದಕ್ಕೆ ಶಾಸ್ತ್ರಗಳೇ ಪ್ರಮಾಣ ಎನ್ನುತ್ತಾನೆ. ಗೋಪಿಕೆಯರು ಅತ್ಯಂತ ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ತೀವ್ರವಾದ ಸಾಧನೆಯಲ್ಲಿ ತೊಡಗಿದ್ದರು. ಆದರೆ ಅದರಲ್ಲಿ ಒಂದು ಕೊರತೆಯುಂಟಾಗಿತ್ತು. ಅದು ಮಾನವಸಹಜವಾದುದು. ಪರಂಪರಾಗತವಾದ ಸನಾತನ ಶಾಸ್ತ್ರಮರ್ಯಾದೆಯನ್ನು ಮೀರಿ ಬೆತ್ತಲೆಯಾಗಿ ಯಮುನಾನದಿಯಲ್ಲಿ ಸ್ನಾನಕ್ಕಿಳಿದಿದ್ದರು. ಇದು ದೇವಿಯಾದ ಯಮುನೆಗೂ ಜಲಾಭಿಮಾನಿ ದೇವತೆಯಾದ ವರುಣದೇವನಿಗೂ ಅಪರಾಧಮಾಡಿದಂತಾಯಿತು. ದೇವ ಯೋನಿಯು ಮನುಷ್ಯಯೋನಿಗಿಂತ ಶ್ರೇಷ್ಠವು. ದೇವತೆಗಳಿಗೆ ಅನುಕೂಲವಾಗಿ ವರ್ತಿಸುವುದೇ ಮಾನವರಿಗೆ ಶ್ರೇಯಸ್ಸಾಧಕವಾದುದು. ಗೋಪಿಕೆಯರು ಶ್ರೀಕೃಷ್ಣನ ಆಜ್ಞೆಯಂತೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ಆತನ ಮುಂದೆ ನಿರಾವರಣರಾಗಿ ನಿಂತು ಅಂಜಲಿಬದ್ಧರಾಗಿ ನಮಸ್ಕರಿಸಿ ತಮ್ಮ ಸಾಧನೆಯಲ್ಲಿ ಒದಗಿದ್ದ ಅಡ್ಡಿಯನ್ನು ನಿವಾರಿಸಿಕೊಂಡು ಸಿದ್ಧ ಸಂಕಲ್ಪರಾದರು.

ಶ್ರೀಕೃಷ್ಣನು ಗೋಪಿಯರ ವಸ್ತ್ರಗಳನ್ನು ತನ್ನ ಭುಜದ ಮೇಲೆ ಹಾಕಿಕೊಂಡು ಅನಂತರ ಅವುಗಳನ್ನು ಅವರಿಗೆ ಹಿಂದಿರುಗಿಸಿಕೊಟ್ಟನು. ಭಗವತ್ ಸ್ಪರ್ಶದಿಂದ ಪವಿತ್ರವಾದ ವಸ್ತ್ರಗಳು ಅವರನ್ನು ಪವಿತ್ರತಮರನ್ನಾಗಿ ಮಾಡಿದುವು. ಆ ಆವರಣಗಳು ಹಿಂದಿನ ಆವರಣಗಳಾಗಿ ಉಳಿಯಲಿಲ್ಲ. ದಶಮಸ್ಕಂಧದ ಹದಿನಾಲ್ಕನೆಯ ಅಧ್ಯಾಯದಲ್ಲಿ ಬರುವ ಬ್ರಹ್ಮಸ್ತುತಿಯಲ್ಲಿ ಹೇಳಿರುವಂತೆ :

**ತಾವದ್ರಾಗಾದಯಃ ಸ್ತೇನಾಸ್ತಾವತ್ ಕಾರಾಗೃಹಂ ಗೃಹಮ್ ।**
**ತಾವನ್ಮೋಹೋಽಙ್ಘ್ರಿನಿಗಡೋ ಯಾವತ್ ಕೃಷ್ಣ ನ ತೇ ಜನಾಃ ॥**


ಭಗವಂತನಿಗೆ ನಮ್ಮನ್ನು ನಾವು ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವ ವರೆವಿಗೂ–ಈ ಸಂಸಾರವು ಘೋರ, ರಾಗ-ದ್ವೇಷಾದಿಗಳು ಶತ್ರುಗಳು,

ಗೃಹವು ಕಾರಾಗೃಹ. ಒಮ್ಮೆ ಅವನವರಾಗುವ ಸಂಕಲ್ಪಮಾಡಿ ಭಕ್ತಿ–ಪ್ರಪತ್ತಿಮಾರ್ಗಕ್ಕೆ ಪ್ರವೇಶಿಸಿದುದಾದರೆ ಆ ಪ್ರೇಮಮಯನ ಸಾನ್ನಿಧ್ಯದಿಂದ ಸಂಸಾರವು ಅವನ ಲೀಲಾಭೂಮಿಯಾಗಿ, ಇಲ್ಲಿ ನಡೆಯುವುದೆಲ್ಲವೂ ಅವನ ಲೀಲೆಯಾಗಿ, ನಾವೂ ಅವನ ಲೀಲೆಯಲ್ಲಿ ಗೋಪ-ಗೋಪಿಯರಂತೆ ಭಾಗಿಗಳಾಗಿ ಜನ್ಮಸಾರ್ಥಕ್ಯವನ್ನು ಪಡೆದುಕೊಳ್ಳುತ್ತೇವೆ. ಅನಾದಿಕಾಲದಿಂದ ಭಾಗವತೋತ್ತಮರು ಭಗವಂತನ ಲೀಲೆಗಳನ್ನು ಭಾವನಾಜಗತ್ತಿನಲ್ಲಿ ಅನುಭವಿಸಿ ಹಾಡಿ ಹೊಗಳಿ ಸಾರ್ಥಕ್ಯವನ್ನು ಪಡೆದು ಜಗತ್ತನ್ನೂ ಪವಿತ್ರಗೊಳಿಸಿದ್ದಾರೆ. ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ಧಾರ್ಷ್ಟ್ಯ ನಮಗೆ ಇಲ್ಲದಿರಲಿ. ಭಗವಂತನ ವ್ರಜಲೀಲೆಗಳನ್ನು ಅವರ ದೃಷ್ಟಿಯಿಂದಲೇ ನೋಡಬೇಕು. ಭಕ್ತಿಮಾರ್ಗಾವಲಂಬಿಗಳು ಕುತರ್ಕಗಳಿಗೆ ಬುದ್ಧಿಯಲ್ಲಿ ಎಡೆಕೊಟ್ಟು ಸಮಯ ಮತ್ತು ಶಕ್ತಿಗಳನ್ನು ವ್ಯರ್ಥಮಾಡುವುದು ಸಲ್ಲ. ಭಾಗವತೋತ್ತಮರಲ್ಲಿ ಗೋಪಿಕೆಯರು ಅತ್ಯುತ್ತಮರು. ಅವರ ಆಚರಣೆಗಳು ಅಲೌಕಿಕವಾದುವುಗಳು. ತೋರಿಕೆಗೆ ಒಮ್ಮೊಮ್ಮೆ ಶಾಸ್ತ್ರವಿರುದ್ಧವಾಗಿ ಕಂಡು ಬರುವುವು. ಆದರೆ ನಮ್ಮ ಸ್ಥೂಲಬುದ್ಧಿಯಿಂದ ಅವರ ಆಚರಣೆಗಳನ್ನು ಅಳೆಯಲಾಗದು. ನಾರದ ಭಕ್ತಿಸೂತ್ರದಲ್ಲಿ–**ವೇದಾನಪಿ ಸಂನ್ಯಸ್ಯತಿ। ಕೇವಲಮವಿಚ್ಛಿನ್ನಾನುರಾಗಂ ಲಭತೇ ॥**– ಶಾಸ್ತ್ರೋಕ್ತಗಳಾದ ಎಲ್ಲ ವಿಧವಾದ ವಿಧಿನಿಯಮಗಳೂ ತಾವಾಗಿಯೇ ಬಿಟ್ಟುಹೋಗುತ್ತವೆ. ಅಡೆತಡೆಯೇ ಇಲ್ಲದೆ ತೈಲಧಾರೆಯಂತೆ ಭಗವಂತನೆಡೆಗೆ ಚಿತ್ತವೃತ್ತಿಗಳು ಹರಿಯುತ್ತಾ ತನ್ಮಯವಾಗುತ್ತವೆ–ಎಂದು ಹೇಳಿದೆ. ಇಂತಹ ಪರಮಪವಿತ್ರವಾದ ಮನೋಸ್ಥಿತಿ ಎಲ್ಲೋ ಕೆಲವು ಚೇತನರಿಗೆ ಮಾತ್ರ ಉಂಟಾಗುತ್ತದೆ. ಅತ್ಯುನ್ನತಪ್ರೇಮಮಾರ್ಗದಲ್ಲಿ ಅತ್ಯುನ್ನತಸ್ಥಿತಿಯನ್ನು ಹೊಂದಿದವರ ಉದಾಹರಣೆಯಾಗಿ ಗೋಪಿಕೆಯರನ್ನೇ ಭಕ್ತಿಸೂತ್ರ ಉದಹರಿಸುತ್ತದೆ– **ಯಥಾ ವ್ರಜಗೋಪಿಕಾನಾಂ।** ಜಿಜ್ಞಾಸುಗಳ ಎಲ್ಲ ಸಂಶಯಗಳಿಗೂ ಪರಿಹಾರ ಮೂಲಗ್ರಂಥದಲ್ಲಿಯೇ ಇದೆ. ಪ್ರಾಮಾಣಿಕವಾಗಿ ನಮ್ಮ ಅನುಷ್ಠಾನಾದಿಗಳನ್ನು ಮಾಡುತ್ತಾ ಸದಾ ಸತ್ಸಂಗದಲ್ಲಿದ್ದು ಹೃತ್ಪೂರ್ವಕವಾಗಿ ಭಗವಂತನನ್ನು ಪ್ರಾರ್ಥಿಸಿದರೆ ಪ್ರಶ್ನೆಗಳಿಗೆ ಉತ್ತರವು ತಾನೇ ದೊರಕುತ್ತದೆ.

**–ಶ್ರೀಹರಿ**

ನಮೋ ಭಗವತೇ ವಾಸುದೇವಾಯ

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.